START

START

START

START

START

MICRO FILMED
BY

KARNATAKA STATE
ARCHIVES

1991

MICRO FILMED
BY
KARNATAKA STATE
ARCHIVES
1991

ARS 15 APP 90

ಪ್ರೌಢಶಾಲೆಯ ಶಿಕ್ಷಣ - ಕನ್ನಡ ಪ್ರಾಥಮಿಕ
- ಕ ಶಿಕ್ಷಣ 1948-49ರ ಸಂಚಿಕೆ
ಮುಂದುವರಿಸಲಾಗಿದೆ. (ಪ್ರಕಟಣೆ)

HRS 15 HPP 90

ಪ್ರೇಮವನ ಶಿಕ್ಷಣ - ಕನ್ನಡ ಪ್ರಾಥಮಿಕ ಶಿಕ್ಷಣ 1948-49ರ ಸಂಚಿಕೆ

ಮುಂದುವರಿಸಲಾಗಿದೆ. (ಪ್ರಕಟಣೆ)

ಯುಗಪುರುಷ ಬಾಪೂಜಿ

(ಅಗಸೇ ಪುಟದಿಂದ ಮುಂದುವರಿದದ್ದು)

ಸಿರಿಪತಿಯೇ ನೀನಿನ್ನ ಯ ।
ಉರುತರ ದೇಹವನು ಬಿಟ್ಟು ಮನುಜಾಕೃತಿಯಿಂ ॥
ಮೆರೆದೆಮ್ಮೆಲ್ಲರ ಪೊರೆದೈ ।
ಪರಿಪರಿಯಿಂ ನಿಮ್ಮ ನುತಿಯಗೈವೆವು ಸತತಂ ॥ ೮ ॥

ಸಂಧ್ಯಾಕಾಲದ ಸಮಯದಿ ।
ಪೊಂದುವೆ ಅವತಾರ, ಪೊಂದಿ ನಿನ್ನ ಯೆ ಯುಗಮಂ ॥
ಸಂದಿಸಿ ಬೇಗನೆ ಪೋದೈ ।
ಬಂದೇ ಬಹೆ ತಿರುಗ ಎಂದು ಬರುತಿಹೆ ಪೇಳ್ಕೈ ? ॥ ೯ ॥

ಸಂ. ಸ. ಸೋಮಾಪುರ.
ಸರಕಾರಿ ಕ. ಗಂ. ಮಕ್ಕಳ ಟ್ರೇನಿಂಗ ಕಾಲೇಜ
ಧಾರವಾಡ.

ಪ್ರಕಟನೆ

೧೯೪೯ನೆಯ ಇಸವಿಯಲ್ಲಿಯ ಗಂಡು ಮತ್ತು ಹೆಣ್ಣು ಮಕ್ಕಳ

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ.

ಈ ಮೂಲಕ ಕೆಳಗಿನಂತೆ ಜಾಹೀರ ಮಾಡಲಾಗಿದೆ:—

ಗಂಡು ಮತ್ತು ಹೆಣ್ಣು ಮಕ್ಕಳ **ಸಲುವಾಗಿ ಸಾಮಾನ್ಯ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು** ಸದರಿ ಪರೀಕ್ಷೆಗಳನ್ನು ಕೆಳಗೆ ಕಾಣಿಸಿರುವ ಕೇಂದ್ರಗಳಲ್ಲಿ -ಪ್ರತಿಯೊಂದರಲ್ಲಿ- ಸೋಮವಾರ ದಿನಾಂಕ ೧೯ನೆಯ ಇಸವಿ ಮಾರ್ಚ ೭ನೆಯ ತಾರೀಖಿಗೆ ಪ್ರಾರಂಭವಾಗಿ ಮುಂದೆ ಮೂರು ದಿನ ನಡೆಯುವದು.

ಜಿಲ್ಲೆ	ಕೇಂದ್ರಗಳು
೧) ಧಾರವಾಡ	೧) ಧಾರವಾಡ ೨) ಗದಗ ೩) ಹುಬ್ಬಳ್ಳಿ ೪) ಹಾವೇರಿ
೨) ಬೆಳಗಾವ	೧) ಬೆಳಗಾವ ೧ (ಅ) ಬೈಲಹೊಂಗಲ (ಉಪಕೇಂದ್ರ) ೨) ಚಿಕ್ಕೋಡಿ ೩) ಅಥಣಿ ೩ (ಅ) ಜಮಖಂಡಿ (ಉಪಕೇಂದ್ರ)
೩) ಬಿಜಾಪುರ	೧) ಬಿಜಾಪುರ ೨) ಬಾಗಲಕೋಟ ೨ (ಅ) ಮುದ್ದೇಬಿಹಾಳ (ಉಪಕೇಂದ್ರ)
೪) ಕಾರವಾರ	೧) ಕಾರವಾರ ೨) ಕುಮಟಾ ೨ (ಅ) ಶಿರಶಿ (ಉಪಕೇಂದ್ರ)
೫) ಕೊಲ್ಹಾಪುರ (ಸಂಸ್ಥಾನ)	೧) ಕೊಲ್ಹಾಪುರ ೧ (ಅ) ಗಡಹಿಂಗ್ಲಜ (ಉಪಕೇಂದ್ರ)

೨. ಮೇಲ್ಕಾಣಿಸಿದ ಪ್ರತಿಯೊಂದು ಕೇಂದ್ರದಲ್ಲಿ ಪರೀಕ್ಷಾ ಮಂಡಲವೊಂದರಿಂದ ಪರೀಕ್ಷೆಯನ್ನು ಹೆಡೆಸಲಾಗುವದು. ಮುಖ್ಯ ಮತ್ತು ಉಪಕೇಂದ್ರಗಳ ಪರೀಕ್ಷಾ ಮಂಡಲಗಳ ಅಧ್ಯಕ್ಷರು ಕೆಳಗೆ ಕಾಣಿಸಿದಂತೆ ಇರುವರು:—

ಪ್ರಾಥಮಿಕ ಶಿಕ್ಷಣ

ಕೇಂದ್ರ	ಅಧ್ಯಕ್ಷ
೧) ಧಾರವಾಡ	ಪ್ರಿನ್ಸಿಪಾಲ, ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
೨) ಹುಬ್ಬಳ್ಳಿ	ಪ್ರಿನ್ಸಿಪಾಲ, ಬೇಸಿಕ ಟ್ರೇನಿಂಗ ಕೇಂದ್ರ, ಧಾರವಾಡ.
೩) ಗದಗ	ಮೊದಲನೆಯ ಅಸಿಸ್ಟಂಟ ಎಜುಕೇಶನಲ್ ಇನ್ಸಪೆಕ್ಟರ ದಕ್ಷಿಣ ಭಾಗ, ಧಾರವಾಡ.
೪) ಹಾವೇರಿ	ಡೆಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರ, ಧಾರವಾಡ.
೫) ಬೆಳಗಾವ	ಸರ್ದಾರ್ಸ ಹಾಯಸ್ಕೂಲ ಹೆಡ್‌ಮಾಸ್ತರರು, ಬೆಳಗಾವ.
೬) ಬೈಲಹೊಂಗಲ (ಉಪಕೇಂದ್ರ)	,, ,,
೭) ಚಿಕ್ಕೋಡಿ	ಡೆಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರ, ಬೆಳಗಾವ.
೮) ಅಥಣಿ	ಶ್ರೀ. ಬಿ. ಜೆ. ಹುಲಕವಿ, ಸೀನಿಯರ ಅಸಿಸ್ಟಂಟ ಮಾಸ್ತರರು ಸರ್ದಾರ್ಸ ಹಾಯಸ್ಕೂಲ, ಬೆಳಗಾವ.
೯) ಜಮಖಂಡಿ (ಉಪಕೇಂದ್ರ)	,, ,,
೧೦) ಬಿಜಾಪುರ	ಹೆಡ್‌ಮಾಸ್ತರರು, ಅಗ್ರಿಕಲ್ಚರಲ್ ಹಾಯಸ್ಕೂಲ, ಬಿಜಾಪುರ
೧೧) ಬಾಗಲಕೋಟ	ಡೆಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರ, ಬಿಜಾಪುರ
೧೨) ಮುದ್ದೇಬಿಹಾಳ (ಉಪಕೇಂದ್ರ)	,, ,,
೧೩) ಕಾರವಾರ	ಹೆಡ್‌ಮಾಸ್ತರರು, ಗವರ್ನಮೆಂಟ ಹಾಯಸ್ಕೂಲ, ಕಾರವಾರ.
೧೪) ಕುಮಟಾ	ಡೆಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರ, ಕಾರವಾರ.
೧೫) ಶಿರಶಿ (ಉಪಕೇಂದ್ರ)	,, ,,
೧೬) ಕೊಲ್ಹಾಪುರ	ಶಿಕ್ಷಣಾಧಿಕಾರಿ, ಕೊಲ್ಹಾಪುರ ಸಂಸ್ಥಾನ.
೧೭) ಗಡಹಿಂಗ್ಲಜ (ಉಪಕೇಂದ್ರ)	,, ,,
೧೮) ಉರ್ದು ಶಾಲೆಗಳ ಡೆಪ್ಯುಟಿ ಎಜುಕೇಶನಲ್ ಇನ್ಸಪೆಕ್ಟರರು ದಕ್ಷಿಣ ಭಾಗದಲ್ಲಿ ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷಾ ಮಂಡಲದ ಅಧ್ಯಕ್ಷರಿರುವರು.	

೩. ಉಪಕೇಂದ್ರಗಳಲ್ಲಿ ಪರೀಕ್ಷೆಯು ಮುಖ್ಯ ಕೇಂದ್ರಗಳ ಅಧ್ಯಕ್ಷರಿಂದ ನಡೆಸಲ್ಪಡುವದು. ಆದ್ದರಿಂದ ಬೇರೆ ಬೇರೆ ಉಪಕೇಂದ್ರಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಯಸುವ ಉಮೇದವಾರರು ತಮ್ಮ ಅರ್ಜಿಗಳಲ್ಲಿ ಉಪಕೇಂದ್ರಗಳ ಹೆಸರುಗಳನ್ನು ನಮೂದಿಸಬೇಕು. ಮತ್ತು ಅರ್ಜಿಗಳನ್ನು ಅಯಾ ಮುಖ್ಯ ಕೇಂದ್ರಗಳ ಅಧ್ಯಕ್ಷರ ಕಡೆಗೆ ಕಳುಹಬೇಕು.

ಉರ್ದು ಉಮೇದವಾರರು ತಾವು ಪರೀಕ್ಷೆಗೆ ಕುಳಿತುಕೊಳ್ಳಲಿರುವ ಕೇಂದ್ರಗಳ ಅಧ್ಯಕ್ಷರ ಕಡೆಗೆ ತಮ್ಮ ಅರ್ಜಿಗಳನ್ನು ಮತ್ತು ಫೀಯನ್ನು ಕಳುಹಬೇಕು.

೪. ಮುಧೋಳ ಸಂಸ್ಥಾನದ ಉಮೇದವಾರರು ಜಮಖಂಡಿ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವರು.

ಕಾರವಾರ ಜಿಲ್ಲೆಯ ಹಳ್ಯಾಳ ತಾಲೂಕದ ಮತ್ತು ಸಾಂಗ್ಲಿ ಸಂಸ್ಥಾನದ ಕುಚಿ ತಾಲೂಕದ ಉಮೇದವಾರರು ಅನುಕ್ರಮವಾಗಿ ಧಾರವಾಡ ಮತ್ತು ಸಾತಾರಾ ಕೇಂದ್ರಗಳಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಔಂಧ ಸಂಸ್ಥಾನದ ಗುಂಡಾಲ ತಾಲೂಕದ ಉಮೇದವಾರರು ವಿಜಾಪುರ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಹುಬ್ಬಳ್ಳಿ ತಾಲೂಕಿನೊಳಗಿರುವ ಕಳಸ ಹಳ್ಳಿಯ ಉಮೇದವಾರರು ಹಿಂದಿನಂತೆ ಹಾವೇರಿ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಈ ವರ್ಷದಿಂದ ಹುಬ್ಬಳ್ಳಿ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವರು.

೫. ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕಾಗಿ ಪರವಾನಿಗೆ ದೊರಕಿಸಿಕೊಳ್ಳಲು ಪರೀಕ್ಷೆಗೆ ಕುಳಿತುಕೊಳ್ಳ ಬಯಸುವ ಮೇದವಾರರು ನಿರ್ದಿಷ್ಟ, ಅಚ್ಚಾದ ಅರ್ಜಿಯ ಫಾರ್ಮುಗಳನ್ನು ತುಂಬಿ ತಾವು ಕುಳಿತುಕೊಳ್ಳ ಬಯಸುವ ಮುಖ್ಯ ಂಪ್ರಗಳ ಅಧ್ಯಕ್ಷರ ಕಡೆಗೆ ಕಳುಹತಕ್ಕದ್ದು ಮತ್ತು ಇಂಥ ಅರ್ಜಿಗಳು ೧೯೪೪ ಫೆಬ್ರುವರಿ ೧ನೆಯ ತಾರೀಖಿನ ದಿನ ವಾ ಅದಕ್ಕೂ ಮೊದಲು ಅಧ್ಯಕ್ಷರಿಗೆ ತಲ್ಪಬೇಕು. ಆ ತಾರೀಖಿನ ನಂತರ ಬಂದ ಅರ್ಜಿಗಳಿಗೆ ಮಾನ್ಯತೆಯನ್ನು ಡಲಾಗುವದಿಲ್ಲ.

೬. ಪ್ರತಿಯೊಂದು ಅರ್ಜಿಯಲ್ಲಿ ಉಮೇದವಾರನ ಹೆಸರು (ಪೂರ್ಣ) ಮತ್ತು ಮುದ್ರಿತ ಅರ್ಜಿಯ ಫಾರ್ಮಿನ ಇತರ ಎಲ್ಲ ಆವಶ್ಯಕ ಸಂಗತಿಗಳನ್ನು ತುಂಬಿ ಮೂರು ರೂಪಾಯಿ ಫೀ ಸಮೇತವಾಗಿ ಅದನ್ನು ಕಳಿಸಬೇಕು. ುಳಿದ ವರ್ಗದ ಉಮೇದವಾರರಿಗೆ ಪರೀಕ್ಷಾ ಫೀ ಒಂದೇ ರೂಪಾಯಿ ಇರುವದು.

ಫೀ ಸಮೇತವಿಲ್ಲದ ಅರ್ಜಿ ಅಥವಾ ಅರ್ಜಿರಹಿತ ಫೀ ಇವುಗಳು ಅರ್ಜಿಗಳ ಅಮಾನ್ಯತೆಗೆ ಗುರಿಯಾಗುವವು.

೭. ಅರ್ಜಿಯ ಫಾರ್ಮುಗಳನ್ನು ಪರೀಕ್ಷಾ ಕೇಂದ್ರಗಳ ಅಧ್ಯಕ್ಷರಿಂದ ವುಕ್ತಿಯಾಗಿ ಪಡೆಯಬಹುದು.

೮. ಪ್ರತಿಯೊಬ್ಬ ಉಮೇದವಾರನು ೧೯೪೪ ಮಾರ್ಚ ೧ನೆಯ ತಾರೀಖಿಗೆ ೨೫ ವರ್ಷಕ್ಕೆ ಮಿಕ್ಕಿದವನು ಇರ ವದು. ಮತ್ತು ಪರೀಕ್ಷೆಯ ದಿನಕ್ಕಿಂತ ಮುಂಚಿತವಾಗಿ ಆರು ತಿಂಗಳಾದರೂ ತಾನು ಕುಳಿತುಕೊಳ್ಳುವ ಪರೀಕ್ಷೆಯ ೃಯಲ್ಲಿ ವಾಸಿಸಿದವನಾಗಿರಲೇಬೇಕು. ಹೆಣ್ಣು ಮಕ್ಕಳ ಸಂಬಂಧವಾಗಿ ವಾಸ ಮತ್ತು ವಯಸ್ಸಿನ ನಿರ್ಬಂಧವು ಇರುವ ಲ್ಲ.

ಉಮೇದವಾರರಿಗೆ ಅರ್ಜಿಯ ಫಾರ್ಮುಗಳನ್ನು ಬಹಳ ಲಕ್ಷ್ಯಕೊಟ್ಟು ತುಂಬಬೇಕೆಂದು ಹೇಳಬೇಕು. ಮತ್ತು ಮೇದವಾರರು ೫, ೬, ಮತ್ತು ೭ನೆಯ ಸದರುಗಳ ವಿಷಯಗಳನ್ನು ಅರಿಸುವಾಗ ಯಾವ ತಪ್ಪು-ತಡೆ ಆಗದಂತೆ ಹೆಡ್ ಧ್ಯಕ್ಷರು ನೋಡಿಕೊಳ್ಳತಕ್ಕದ್ದು. ಈ ಸಂಬಂಧವಾಗಿ ಮುದ್ರಿತ ಅರ್ಜಿಯ ಫಾರ್ಮುಗಳಲ್ಲಿ ಕೆಳಗೆ ಮುದ್ರಿಸಿದ ಸೂಚನೆ ನ್ನು ಲಕ್ಷ್ಯಪೂರ್ವಕವಾಗಿ ಓದಬೇಕು.

೯. ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು ದಿನಾಂಕ ೮-೫-೧೯೪೨ರ ಜಿ ಆರ್. ಇ. ಮತ್ತು ಆರ್.ಡಿ, ಬರ ೬೯೨೮ರ ಪ್ರಕಾರ ಗೊತ್ತುಪಡಿಸಿದ ಅಭ್ಯಾಸ ಪತ್ರಿಕೆಯಂತೆ ಮತ್ತು ಈ ಬಗ್ಗೆ ಆಗಾಗ್ಗೆ ವಿದ್ಯಾಖಾತೆಯ ಡೈರೆಕ್ಟ. ದ ಹೊರಡಿಸಿದ ಸೂಚನೆಗಳ ಮೇರೆಗೆ ನಡೆಯುವದು. ಹೊಸ ಅಭ್ಯಾಸಪತ್ರಿಕೆಯು ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲ ದರ್ಶಿಯ ಜನವರಿಯಲ್ಲಿ ಕನ್ನಡ ಪ್ರಾಥಮಿಕ ಶಿಕ್ಷಣದ ಪ್ರತ್ಯೇಕ ಸಂಚಿಕೆಯ ರೂಪದಲ್ಲಿ ಪ್ರಸಿದ್ಧಿಸಲ್ಪಟ್ಟಿದೆ.

೧೦. ಅಗ್ರಿಕಲ್ಚರ ಬಾಯಸ್ ಅಭ್ಯಾಸಕ್ರಮವನ್ನು ತೆಗೆದುಕೊಂಡ ಉಮೇದವಾರರ ಪರೀಕ್ಷೆಯ ೫-೭-೧೯೩೫ರ ಜಿ. ಆರ್. ಇ. ಡಿ. ನಂಬರ ೧೧೯೯ರ ಪ್ರಕಾರ ಆಗಾಗ್ಗೆ ತಿದ್ದುಪಡೆ ಹೊಂದಿದ ಮೇರೆಗೆ ಧಾರವಾಡರ ಗಾವಿ, ವಿಜಾಪುರ, ಮತ್ತು ಕಾರವಾರ ಈ ನಾಲ್ಕು ಜಿಲ್ಲಾ ಸ್ಥಳಗಳಲ್ಲಿ ನಡೆಯುವದು.ಮತ್ತು ಅಗ್ರಿಕಲ್ಚರ ಬಾಯಸ್ ್ಯಾಸ ಕ್ರಮ ತೆಗೆದುಕೊಂಡು ಉಮೇದವಾರರು ತಾವು ಮೂರು ವರ್ಷಗಳ ಅಗ್ರಿಕಲ್ಚರ ಬಾಯಸ್ ಅಭ್ಯಾಸ ಕ್ರಮ ೆಯ ಅಭ್ಯಾಸವನ್ನು ಮಾಡಿ ಮುಗಿಸಿರುವರೆಂಬ ಬಗ್ಗೆ ಸರ್ಟಿಫಿಕೆಟನ್ನು ಅರ್ಜಿಯೊಂದಿಗೆ ಹಾಜರು ಪಡಿಸಬೇಕಾಗುವದು. ಮರಾಠಿ ಮತ್ತು ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರು ಯಾ ಕೇಂದ್ರಗಳಲ್ಲಿ ಕನ್ನಡ ಉಮೇದವಾರರ ಜೊತೆಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬೇಕು.

ಅಗ್ರಿಕಲ್ಚರಲ್ ಬಾಯಸ್ ಮತ್ತು ಬೇಸಿಕ್ ಉಮೇದವಾರರ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ಯು ಕನ್ನಡ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಜೊತೆಯಲ್ಲಿ ಏಕಕಾಲಕ್ಕೆ ಮೇಲ್ಕಾಣಿಸಿದ ಮೊದಲನೆಯ ೃರಾದಲ್ಲಿ ಪೇಳಿದ ದಿನಾಂಕಗಳಲ್ಲಿ ನಡೆಯುವವು.

೧೧. ಪರೀಕ್ಷೆಯ ಕಾರ್ಯಕ್ರಮವನ್ನು ಬೇಗನೆ ತಿಳಿಸಲಾಗುವುದು.

ಧಾರವಾಡ
೨೭—೧೨—೧೯೪೪

(ಸಹಿ) ಎ. ಎನ್. ಸಾನೆ,
ಎಜುಕೇಶನಲ್ ಇನ್ಸಪೆಕ್ಟರ, ದ. ಭಾ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

ಹೊಸ ಅಭ್ಯಾಸ ಕ್ರಮದಂತೆ ೧೯೪೮ ಎಪ್ರಿಲ್ ತಿಂಗಳಲ್ಲಿ ಮೊದಲನೆಯದಾಗಿ ಜರುಗಿದ ಪ್ರಾಥಮಿಕ ಶಾ
ಪ್ರಮಾಣಪತ್ರ ಪರೀಕ್ಷೆಯ ನಿಜವಾದ ಅಭ್ಯಾಸಪತ್ರಿಕೆಯನ್ನು ೧೯೪೯ ಜನೆವರಿ ತಿಂಗಳಲ್ಲಿ ಪ್ರಾಥಮಿಕ ಶಿಕ್ಷಣದ ಪ್ರ
ಸಂಚಿಕೆಯ ರೂಪದಲ್ಲಿ ಪ್ರಸಿದ್ಧಿಸಲಾಗಿದೆ. ಅದರಲ್ಲಿ ಕಂಡುಬಂದ ಕೆಲವು ಚಿಕ್ಕಪುಟ್ಟ ತಪ್ಪುಗಳನ್ನು ತಿದ್ದಿಕೊಳ್ಳುವಂ
ಗಿಯೂ ಮತ್ತು ೧೯೪೯ ಮಾರ್ಚ್ ತಿಂಗಳ ತಾರೀಖಿನ ಜಿ. ಆರ್. ಇ. ಮತ್ತು ಆಯ್. ಡಿ. ಯ ನಂಬರ ಪತ್ರ
(ಸಂಶೋಧಿತ ಹೊಸ ಅಭ್ಯಾಸ ಪತ್ರಿಕೆಯಲ್ಲಿ) ಸೇರಿಸಲಾಗಿರುವ ಕೆಲವು ಹೆಚ್ಚಿನ ಮಾಹಿತಿಯನ್ನು ಅರಿತುಕೊಳ್ಳುವಂ
ಗಿಯೂ ಕೆಳಗೆ ಕಾಣಿಸಿದ ಸಂಗತಿಗಳ ಕಡೆಗೆ ಪರೀಕ್ಷೆಗೆ ಸಂಬಂಧಿಸಿದವರೆಲ್ಲರ ಲಕ್ಷ್ಯವನ್ನು ವಿಶೇಷವಾಗಿ ಎಳೆಯಲಾಗಿದೆ

ತಿದ್ದುಪಡೆ

ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯ ವಿವರವಾದ ಅಭ್ಯಾಸ ಪತ್ರಿಕೆಯಲ್ಲಿ ಆದ ತಪ್ಪು ಒಪ್ಪು ಕೆಳಗೆ ಕೊಡಲಾ
ಆದನ್ನು ಗಮನಿಸಿಕೊಳ್ಳಬೇಕೆಂದು ಮತ್ತು ಎಷ್ಟೆಂಬುದು ತಿಳಿಯುವದು.

ಪುಟ	ತಪ್ಪು	ಒಪ್ಪು
೨೬	೧. (ಸಾಮಾನ್ಯ ಶಾಲೆಗಳ ಹೆಣ್ಣುಮಕ್ಕಳಿಗಾಗಿ)	೨. (ಸಾಮಾನ್ಯ ಶಾಲೆಗಳ ಹೆಣ್ಣುಮಕ್ಕಳಿಗಾಗಿ)
೨೯	ನೂಲುವ ಹಾಗು ನೇಯುವ ಉದ್ಯೋಗ ಗಳಿಗೆ ಸಂ-ಬಂಧ ಪಟ್ಟ ಯಂತ್ರಜ್ಞಾನವನ್ನೊಳಗೊಂಡ ಸಾಮಾನ್ಯ ವಿಜ್ಞಾನ ಮತ್ತು ಆರೋಗ್ಯಶಾಸ್ತ್ರ.	ನೂಲುವ ಹಾಗು ನೇಯುವ ಉದ್ಯೋಗಗಳಿಗೆ ಸಂ ಧಪಟ್ಟ ಯಂತ್ರಜ್ಞಾನವನ್ನೊಳಗೊಂಡ ಸಾಮ ವಿಜ್ಞಾನ ಮತ್ತು ಶರೀರಶಾಸ್ತ್ರ ಹಾಗೂ ಆರೋಗ್ಯ ಶ
೨೯	೩೦ (ಕ)—ಅ	೪೦ (ಕ)—ಅ.
೩೧	(ಕ) ಪ್ರಾಯೋಗಿಕ:	(ಕ) ಪ್ರಾಯೋಗಿಕ:—ಕೃಷಿ
೩೨	(೨) ನಕ್ಷೆಗಳಿಲ್ಲದ ಹಾಗೂ.....ಮುಂತಾದವುಗಳನ್ನು ಅವಶ್ಯವಿದ್ದಲ್ಲಿ ಹುರಿಹಾಕದ ಜೋಡೆಳೆಗಳಿಂದ ಇಲ್ಲವೆ ನಾಲ್ಕು ಪಾವಡಿಯ ಕ್ರಮದಿಂದ ನೇಯುವದು.	(೨) ನಕ್ಷೆಗಳಿಲ್ಲದ ಹಾಗೂ.....ಮುಂತಾದವುಗಳ ಜೋಡೆಳೆದಾರ ಅಥವಾ ಗಿಂಟದಿಂದ, ಅವಶ್ಯ ಇದ್ ನಾಲ್ಕು ಪಾವಡಿಯ ಕ್ರಮದಿಂದ ನೇಯುವದು.
೩೩	(೩) ನೆಯ್ದ ಬೇರೆ ಬೇರೆ ಪ್ರಕಾರದ ವಸ್ತ್ರಗಳಿಗಾಗಿ ತಕ್ಕ.....ಹೆಣೆಯುವದರಲ್ಲಿ.....	(೩) ನೆಯ್ದ ಬೇರೆ ಬೇರೆ ಪ್ರಕಾರದ ವಸ್ತ್ರಗಳ ಹಾಸು ಗಾಗಿ ತಕ್ಕ.....ನೇಯಲು ಬೇಕಾದ.....
೩೪	(ಕ) (೧) ಕಾಗದ ಮತ್ತು ರಟ್ಟಿನಿಂದ ವಸ್ತುಗಳ ನಮೂನೆಗಳನ್ನು ಮಾಡುವುದು:	(ಕ) ಕಾಗದ ಮತ್ತು ರಟ್ಟಿನಿಂದ ವಸ್ತುಗಳ ನಮೂ ನೆಗಳನ್ನು ಮಾಡುವದು:
೩೪	(೨) ಬಿತ್ತದ ಕೆಲಸ:	(ಡ) ಬಿತ್ತದ ಕೆಲಸ:
೩೫	(ಡ) ಹೊಲಿಗೆ:	(ಇ) ಹೊಲಿಗೆ;
೩೫	(ಇ) ಚರ್ಮದ ಕೆಲಸ:	(ಫ) ಚರ್ಮದ ಕೆಲಸ:

ಹೊಸ ಅಭ್ಯಾಸಪತ್ರಿಕೆಯ ಬಗ್ಗೆ ಹೆಚ್ಚಿನ ಮಾಹಿತಿ

ಐದನೆಯ ಸದರು:

ಈ ಸದರಿನ ಐದು ವಿಷಯಗಳಲ್ಲಿ ಮೊದಲಿನ ಎರಡರಲ್ಲಿ ಮಾತ್ರ (ಅಂದರೆ, ಸೂಜಿಗೆಲಸ ಮತ್ತು ಡ್ರಾಯಿ ಇವುಗಳಲ್ಲಿ ಮಾತ್ರ) ಪ್ರಶ್ನೆ-ಕಾಗದಗಳನ್ನು ಕೊಡಲಾಗುವದು. ಉಳಿದ ಮೂರು ವಿಷಯಗಳಲ್ಲಿ (ಅಂದರೆ, ಪ್ರಾಯೋ ಗಿಕ ಕೃಷಿ, ಕಟ್ಟಿಗೆಯ ಕೆಲಸ, ಮತ್ತು ನೂಲುವದು ಹಾಗು ನೇಯುವದು ಇವುಗಳಲ್ಲಿ) ೧೦೦ ಗುಣಗಳುಳ್ಳ ಪ್ರಾಯೋ ಗಿಕ ಪರೀಕ್ಷೆಯನ್ನು ಮಾತ್ರ ತೆಗೆದುಕೊಳ್ಳಲಾಗುವದು.

ಶರಸೆಯ ಸದರು :

ಈ ಸದರಿನ (ಬ) ಸುಗೀತ, (ಕ) ಕಾಗದ ಮತ್ತು ರಟ್ಟಿನಿಂದ ವಸ್ತುಗಳ ನಮೂನೆಗಳನ್ನು ಮಾಡುವುದು ಷ) ಬೆತ್ತದ ಕೆಲಸ (ಇ) ಹೊಲಿಗೆ, (ಫ) ಚರ್ಮದ ಕೆಲಸ ಈ ವಿಷಯಗಳಲ್ಲಿ, ೧೦೦ ಗುಣಗಳುಳ್ಳ ಪ್ರಾಯೋಗಿಕ ಪರೀಕ್ಷೆ ಮಾಕ್ರ ನಡೆಯುವದು

ಉಪೇದವಾರರ ತಾತ್ವಿಕ ಜ್ಞಾನವು, ತುಸು ಮಟ್ಟಿಗೆ ಆಯಾ ವಿಷಯಗಳಿಗೆ ಸಂಬಂಧಿಸಿದ ವಿಜ್ಞಾನ ಪ್ರಶ್ನೆ ಗದಗಳಲ್ಲಿಯೂ ಪತ್ರ ತುಸು ನ ಟ್ಟಿಗೆ ಪ್ರಾಯೋಗಿಕ ಪರೀಕ್ಷೆಯ ಅವಧಿಯಲ್ಲಿಯೂ ಪರೀಕ್ಷಿಸಲ್ಪಡುವದು.

ವಿಮರ್ಶೆ

ಮಕ್ಕಳ ಸಚಿತ್ರ ಅಂಕಗಣಿತ:

ಲೇಖಕರು : ಶ್ರೀ ಎಲ್. ಆಕಳವಾಡಿ, ಬಿ. ಎ., ಬಿ. ಕಾಮ್.

ಪ್ರಕಾಶಕರು : ರಾಮಾಶ್ರಯ ಬುಕ್ ಡಿಪೊ, ಧಾರವಾಡ.

ಪ್ರಕಾಶನ ವರ್ಷ : ೧೯೪೮.

ಬೆಲೆ, ಐದು ಆಣೆ.

ಈ ಪೊತ್ತಗೆಯನ್ನು ಸಾಮಾನ್ಯವಾಗಿ ಪ್ರಾಥಮಿಕ ಶಾಲೆಗಳ ಒಂದನೆಯ ಇಯತ್ತೆಯ ಹೊಸ ಅಭ್ಯಾಸ ಕ್ರಮ ಕ್ಕನುಸರಿಸಿ ಬರೆಯಲಾಗಿದೆ. ಮಕ್ಕಳಿಗೆ ಪ್ರತ್ಯಕ್ಷ ವಸ್ತುಗಳ ಸಹಾಯದಿಂದ ಒಂದನೆಯ ಇಯತ್ತೆಯ ಗಣಿತ ಅಭ್ಯಾಸ ಕ್ರಮವನ್ನು ತಿಳಿಸಿ, ಮನವಟ್ಟು ಮಾಡುವ ಪ್ರಯತ್ನ ಮಾಡಲಾಗಿದೆ. ವಿಷಯದಲ್ಲಿ ಸಾಕಷ್ಟು ಸೈವಿಧ್ಯತೆ ಇದೆ ವಿಧಾನದಲ್ಲಿ ಸಾಕಷ್ಟು ಕ್ರಮಬದ್ಧತೆ ಇದೆ. ಪೊತ್ತಗೆಯಲ್ಲಿಯೇ ಲೆಕ್ಕಗಳನ್ನು ಬಿಡಿಸಲು ಅವಕಾಶವಿದೆ ಲೇಖಕರು ಪಟ್ಟ ಪ್ರಯತ್ನದಿಂದ ಮಕ್ಕಳಿಗೆ ವಿಷಯದಲ್ಲಿ ಅಭಿರುಚಿ ಉಂಟಾಗುವದೆಂದು ಧಾರಾಳವಾಗಿ ಹೇಳಬಹುದು.

ಕನ್ನಡ ಪ್ರಾಥಮಿಕ ಶಿಕ್ಷಣ ಕಚೇರಿ,
ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜ,
ಧಾರವಾಡ. ತಾ. ೫—೧—೧೯೪೯.

ರ. ಶ್ರೀ. ಲಕ್ಕುಂಡಿ.
ಪ್ರಧಾನ ಸಂಪಾದಕರು.

ಶೈಕ್ಷಣಿಕ ಸುದ್ದಿ ಸಂಗ್ರಹ

ಕಮತಗಿಯಲ್ಲಿ ಶಾರೀರಕ ಶಿಕ್ಷಣ ಸಪ್ತಾಹವು ಜರುಗಿತು.

ಚಿಕ್ಕೇರಿ ಶಾಲೆಯ ಶಿಕ್ಷಕರೂ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಶ್ರೀ. ರೇವಣ ಸಿದ್ದೇಶ್ವರ ಪರ್ವತ ಕ್ಷೇತ್ರದ ಶೈಕ್ಷಣಿಕ ಪ್ರವಾಸ ಕೈಕೊಂಡಿದ್ದರು.

ನಾಲತವಾಡದ ಹೆಣ್ಣುಮಕ್ಕಳ ಶಾಲೆಯವರು ನಾಡ ಹಬ್ಬ, ಗಾಂಧೀ ಸಪ್ತಾಹಗಳನ್ನು ಆಯಾ ಸಪ್ತಾಹಕ್ಕೆ ಯೋಗ್ಯವಾದ ಚಟುವಟಿಕೆಗಳಿಂದ ಆಚರಿಸಿದರು.

ಮೊರಬ ಗ್ರೂಪ್ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಈ ತಿಂಗಳಲ್ಲಿ ಧಾರವಾಡದ ಶ್ರೀ. ಎ. ಎಸ್. ಪಾಟೀಲ ವಕೀಲರ ಅಧ್ಯಕ್ಷತೆಯಲ್ಲಿ ನೆರವೇರಿತು. ಧಾರವಾಡ ಜಿಲ್ಲೆಯ ಏ. ಓ. ಅವರಾದ ಶ್ರೀ. ಕಳಸೂರ ಮತ್ತು ಇತರ ಸರಕಾರಿ ವಿದ್ಯಾಧಿಕಾರಿಗಳು, ಶಿಕ್ಷಣಾಭಿಮಾನಿಗಳು ಸಮ್ಮೇಲನಕ್ಕೆ ಹೋಗಿ ಸಮ್ಮೇಲನಕ್ಕೆ ಯಶಸ್ಸು ಬರುವಂತೆ ಭಾಗವಹಿಸಿದರು.

ಯಮಕನಮರಡಿಯಲ್ಲಿ ಸ್ಥಾಥಮಿಕ ಶಿಕ್ಷಕರ ಸಮ್ಮೇಲನವು ಶ್ರೀ. ಉನುದಿ, ಏ. ಓ. ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಅಮದಳ್ಳಿಯಲ್ಲಿ ಶ್ರೀ. ವಿ. ವಿ. ದಿವೇಕರರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಸಮ್ಮೇಲನವು ಸಾಂಗವಾಯಿತು ಮಾನಪಾಠ, ವಿವಿಧ ವಿನೋದಾವಳಿ ಮುಂತಾದ ಶೈಕ್ಷಣಿಕ ಚಟುವಟಿಕೆಗಳು ಜರುಗಿದವು. ಈ ಸಮ್ಮೇಲನಕ್ಕೆ ಕಾರವಾರ ಸ್ಕೂಲ್ ಬೋರ್ಡಿನ ಏ ಓ. ಅವರಾದ ಶ್ರೀ. ಗುಂಜೀಕರರೂ ಇತರ ಶಿಕ್ಷಣಾಧಿಕಾರಿಗಳೂ ಆಗಮಿಸಿದ್ದರು.

ಕರಡಿಯಲ್ಲಿ ಶ್ರೀ. ಸೋಮಶೇಖರರಾವ ಸರನಾಡಗೌಡರ ಅವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯು ಆಚರಿಸಲ್ಪಟ್ಟಿತು.

ಯಲವಿಗಿಯ ಕನ್ನಡ ಗಂಡುಮಕ್ಕಳ ಶಾಲೆಗೆ ಶಾಲೆಯ ಪಂಚರು ಭೆಟ್ಟಿಕೊಟ್ಟು ಬಡಪುಡುಗರಿಗೆ ಖಾದಿ ಟೊಪ್ಪಿಗಳನ್ನು ಹಂಚಿದರು

ಕಾರವಾರ ಟ್ರೇನಿಂಗ ಕಾಲೇಜಿನಲ್ಲಿ ರಂಗವಲ್ಲಿಯ ಪ್ರದರ್ಶನ



ಗಾಂಧಿ ಜಯಂತಿಯ ಸಪ್ತಾಹದಲ್ಲಿ ಕಾರವಾರ ಟ್ರೇನಿಂಗ ಕಾಲೇಜದವರು ರಂಗವಲ್ಲಿಯ ಪ್ರದರ್ಶನವನ್ನು ಏರ್ಪಡಿಸಿದ್ದರು. ಆ ಪ್ರದರ್ಶನದಲ್ಲಿ ಟ್ರೇನಿಂಗ ಕಾಲೇಜದ ಅಧ್ಯಾಪಕ ವರ್ಗದಲ್ಲಿದ್ದ ಶ್ರೀ. ಪಿ. ಎಸ್. ಕೇಡಬಾಳಕರರು ಹಾಕಿದ ಮಹಾತ್ಮಾ ಗಾಂಧಿಯವರ ರಂಗವಲ್ಲಿ ಭಾವಚಿತ್ರವು ಕಾರವಾರದ ಜನತೆಯ ಮನವನ್ನು ವಿಶೇಷವಾಗಿ ಆಕರ್ಷಿತು. ಕಾರವಾರದ ವಿದ್ಯಾರ್ಥಿ ವಿದ್ಯಾರ್ಥಿನಿಯರೂ, ಮಹಿಳೆಯರೂ ಮಹನೀಯರೂ ಇದನ್ನು ಗುಂಪು-ಗುಂಪಾಗಿ ಬಂದು ನೋಡಿದರಲ್ಲದೆ, ಭಾನುವಾರ ಸಂತೆಯ ದಿನ ಹೊರಗೂ ಬಂದು ನೋಡಿ ಸಂತೋಷಪಟ್ಟರು. ಮಹಾತ್ಮಾ ಗಾಂಧಿಯವರ ಈ ರಂಗವಲ್ಲಿ ಭಾವಚಿತ್ರದ ಕಲಾ ಪ್ರತಿಭೆಯ ಕೀರ್ತಿಯು ಹಬ್ಬಿ ಅಂಕೋಲೆಯಿಂದಲೂ ಇದನ್ನು ನೋಡಲು ಜನರು ಬಂದಿದ್ದರು. ತಾಲೂಕಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರು ಈ ಒಗೆಯ ಮಹಾತ್ಯಾಜಿಯವರ ಭಾವಚಿತ್ರದ ರಂಗವಲ್ಲಿಯು ಕಾರವಾರ ಜಿಲ್ಲೆಯಲ್ಲಿ ಹೊಸ ತರಹೆಯದು ಎಂದು ಅಭಿಪ್ರಾಯ ಪಟ್ಟರು. ಶ್ರೀ. ಕೇಡಬಾಳಕರರು ಚಿತ್ರಕಲೆಯಲ್ಲಿ ವಿಶೇಷ ಪ್ರತಿಭಾವಂತರು. ಈ ಬಗೆಯ ಚಿತ್ರರಂಗವಲ್ಲಿಗಾಗಿ ಬೆಳಗಾವಿಯ ಬಿ. ಟಿ. ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವಾಗ ಪ್ರಿನ್ಸಿಪಾಲ್ ಮಿಸ್. ಪಾಣಂಡಿಕರ ಅವರಿಂದ ಹತ್ತು ರೂಪಾಯಿಗಳ ಪಾಂತೋಷಕವನ್ನು ಪಡೆದಿರುವರು.

ಶೈಕ್ಷಣಿಕ ಸುದ್ದಿ ಸಂಗ್ರಹ

ಕಮತಗಿಯಲ್ಲಿ ಶಾರೀರಕ ಶಿಕ್ಷಣ ಸಪ್ತಾಹವು ಜರುಗಿತು.

ಚಿಕ್ಕೇರಿ ಶಾಲೆಯ ಶಿಕ್ಷಕರೂ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಶ್ರೀ. ರೇವಣ ಸಿದ್ದೇಶ್ವರ ಪರ್ವತ ಕ್ಷೇತ್ರದ ಶೈಕ್ಷಣಿಕ ಪ್ರವಾಸ ಕೈಕೊಂಡಿದ್ದರು.

ನಾಲತವಾಡದ ಹೆಣ್ಣುಮಕ್ಕಳ ಶಾಲೆಯವರು ನಾಡ ಹಬ್ಬ, ಗಾಂಧೀ ಸಪ್ತಾಹಗಳನ್ನು ಆಯಾ ಸಪ್ತಾಹಕ್ಕೆ ಯೋಗ್ಯವಾದ ಚಟುವಟಿಕೆಗಳಿಂದ ಆಚರಿಸಿದರು.

ನೊರಬ ಗ್ರೂಪ್ ಶಿಕ್ಷಕ-ಶಿಕ್ಷಕಿಯರ ಸಮ್ಮೇಲನವು ಈ ತಿಂಗಳಲ್ಲಿ ಧಾರವಾಡದ ಶ್ರೀ. ಎ. ಎಸ್. ಪಾಟೀಲ ವಕೀಲರ ಅಧ್ಯಕ್ಷತೆಯಲ್ಲಿ ನೆರವೇರಿತು. ಧಾರವಾಡ ಜಿಲ್ಲೆಯ ಏ. ಓ ಅವರಾದ ಶ್ರೀ. ಕಳಸೂರ ಮತ್ತು ಇತರ ಸರಕಾರಿ ವಿದ್ಯಾಧಿಕಾರಿಗಳು, ಶಿಕ್ಷಣಾಭಿಮಾನಿಗಳು ಸಮ್ಮೇಲನಕ್ಕೆ ಹೋಗಿ ಸಮ್ಮೇಲನಕ್ಕೆ ಯಶಸ್ಸು ಬರುವಂತೆ ಭಾಗವಹಿಸಿದರು.

ಯಮುಕನಮರಡಿಯಲ್ಲಿ ಪ್ರಾಥಮಿಕ ಶಿಕ್ಷಕರ ಸಮ್ಮೇಲನವು ಶ್ರೀ. ಉಮದಿ, ಏ. ಓ. ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಅಮದಳ್ಳಿಯಲ್ಲಿ ಶ್ರೀ. ವಿ. ವಿ. ದಿನೇಕರರ ಅಧ್ಯಕ್ಷತೆಯಲ್ಲಿ ಶಿಕ್ಷಕರ ಸಮ್ಮೇಲನವು ಸಾಂಗವಾಯಿತು. ಮಾದಪಾಠ, ವಿವಿಧ ವಿನೋದಾವಳಿ ಮುಂತಾದ ಶೈಕ್ಷಣಿಕ ಚಟುವಟಿಕೆಗಳು ಜರುಗಿದವು. ಈ ಸಮ್ಮೇಲನಕ್ಕೆ ಕಾರಣರಾದ ಸ್ಕೂಲ್ ಬೋರ್ಡಿನ ಏ ಓ. ಅವರಾದ ಶ್ರೀ. ಗುಂಜೀಕರರೂ ಇತರ ಶಿಕ್ಷಣಾಧಿಕಾರಿಗಳೂ ಆಗಮಿಸಿದ್ದರು.

ಕರಡಿಯಲ್ಲಿ ಶ್ರೀ. ಸೋಮಶೇಖರರಾವ ಸರನಾಡಗೌಡರ ಅವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯು ಆಚರಿಸಲ್ಪಟ್ಟಿತು.

ಯಲವಿಗಿಯ ಕನ್ನಡ ಗಂಡುಮಕ್ಕಳ ಶಾಲೆಗೆ ಶಾಲೆಯ ಸಂಚರು ಭೆಟ್ಟಿಕೊಟ್ಟು ಬಡಹುಡುಗರಿಗೆ ಖಾದಿ ಟೊಪ್ಪಿಗಳನ್ನು ಹಂಚಿದರು

ಕಾರವಾರ ಟ್ರೇನಿಂಗ ಕಾಲೇಜಿನಲ್ಲಿ ರಂಗವಲ್ಲಿಯ ಪ್ರದರ್ಶನ

ಗಾಂಧಿ ಜಯಂತಿಯ ಸಪ್ತಾಹದಲ್ಲಿ ಕಾರವಾರ ಟ್ರೇನಿಂಗ ಕಾಲೇಜಿನವರು ರಂಗವಲ್ಲಿಯ ಪ್ರದರ್ಶನವನ್ನು ಏರ್ಪಡಿಸಿದ್ದರು. ಆ ಪ್ರದರ್ಶನದಲ್ಲಿ ಟ್ರೇನಿಂಗ ಕಾಲೇಜಿನ ಅಧ್ಯಾಪಕವರ್ಗದಲ್ಲಿದ್ದ ಶ್ರೀ. ಪಿ. ಎನ್, ಕೇಡಬಾಳಕರರು ಹಾಕಿದ ಮಹಾತ್ಮಾ ಗಾಂಧಿಯವರ ರಂಗವಲ್ಲಿ ಭಾವಚಿತ್ರವು ಕಾರವಾರದ ಜನತೆಯ ಮನವನ್ನು ವಿಶೇಷವಾಗಿ ಆಕರ್ಷಿಸಿತು. ಕಾರವಾರದ ವಿದ್ಯಾರ್ಥಿ-ವಿದ್ಯಾರ್ಥಿನಿಯರೂ, ಮಹಿಳೆಯರೂ ಮಹನೀಯರೂ ಇದನ್ನು ಗುಂಪು-ಗುಂಪಾಗಿ ಬಂದು ನೋಡಿದರಲ್ಲದೆ, ಭಾನುವಾರ ಸಂತೆಯ ದಿನ ಪಳ್ಳಿಗರೂ ಬಂದು ನೋಡಿ ಸಂತೋಷಪಟ್ಟರು. ಮಹಾತ್ಮಾ ಗಾಂಧಿಯವರ ಈ



ರಂಗವಲ್ಲಿ ಭಾವಚಿತ್ರದ ಕಲಾ ಪ್ರತಿಭೆಯ ಕೀರ್ತಿಯು ಹಬ್ಬಿ ಅಂಕೋಲೆಯಿಂದಲೂ ಇದನ್ನು ನೋಡಲು ಜನರು ಬಂದಿದ್ದರು. ತಾಲೂಕಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರು ಈ ಒಗೆಯ ಮಹಾತ್ಮಾಜಿಯವರ ಭಾವಚಿತ್ರದ ರಂಗವಲ್ಲಿಯು ಕಾರವಾರ ಜಿಲ್ಲೆಯಲ್ಲಿ ಹೊಸ ತರಹೆಯದು ಎಂದು ಅಭಿಪ್ರಾಯ ಪಟ್ಟರು. ಶ್ರೀ ಕೇಡಬಾಳಕರರು ಚಿತ್ರಕಲೆಯಲ್ಲಿ ವಿಶೇಷ ಪ್ರತಿಭಾವಂತರು. ಈ ಬಗೆಯ ಚಿತ್ರರಂಗವಲ್ಲಿಗಾಗಿ ಬೆಳಗಾವಿಯ ಬಿ. ಟಿ. ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವಾಗ ಸ್ರಿ ಸ್ಸಿ ಪಾಲ್ ಮಿಸ್. ಪಾಣಂದಿಕರ ಅವರಿಂದ ಹತ್ತು ರೂಪಾಯಿಗಳ ಪಾರಿತೋಷಕವನ್ನು ಪಡೆದಿರುವರು.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳ
ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ

ಸಾಮಾನ್ಯ ವಿಜ್ಞಾನ :—ಒಳ್ಳೇ ಅನುಭವದಿಂದ

೧ ರಿಂದ ೫ನೇ ಇಯತ್ತೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ
ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ
ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ ನೇ ಇಯತ್ತೆಯಿಂದ ೬ನೇ ಇಯತ್ತೆಯವರೆಗೆ ಭೂಗೋಲದ ಹೊಸ ಜ್ಞಾನ
ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು. **ಮುಲ್ಕೀ ಪರೀಕ್ಷೆಗಾಗಿ**

ಕುಮಾರ ಕಿಟ್ಟಣ್ಣ	೦—೩—೦	ಗಣಿತಸಂಗ್ರಹ	೧—೪—೦
ಮಹಾತ್ಮರ ಪರಿಚಯ	೦—೪—೦	ವಾಕ್ಯರಚನೆ ಹಾಗೂ ನಿಬಂಧಬರೆಹ	೧—೦—೦
ರಾಮಕೃಷ್ಣನೀತಿಯಕಥೆ	೦—೬—೦	ಗುಣವಿವೇಚನೆ	೦—೮—೦

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿ
ಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು
ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟು

ಪಥ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಪಾಠಾವಳಿಯ ೬ ಪುಸ್ತಕಗಳು : (೧ನೆಯ ಇಯತ್ತ್ಯೆಯಿಂದ ೬ನೆಯ ಇಂಗುತ್ತ್ಯೆಯವರೆಗೆ)

ಸಚಿತ್ರ ಪೌರನೀತಿ ಪಾಠಾವಳಿಯ ೭ ಪುಸ್ತಕಗಳು : (೧ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಪಾಠಾವಳಿಯ ೬ ಪುಸ್ತಕಗಳು: (೨ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯವರೆಗೆ)

ಭೂಮಂಡಲ ಪರಿಚಯ : (ಭಾಗ ೧, ೬ನೆಯ ಇಯತ್ತ್ಯೆಗೆ, ಭಾಗ ೪, ೭ನೆಯ ಇಯತ್ತ್ಯೆಗೆ)

ಆಧುನಿಕ ರೈತ : ೧ನೆಯ ಭಾಗ ೪ನೆಯ ಇಯತ್ತ್ಯೆಗೆ, ೨ನೆಯ ಭಾಗ, ೫ನೆಯ ಇಯತ್ತ್ಯೆಗೆ.) ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮವಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ, ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ
ಅಭ್ಯಾಸಪತ್ರಿಕೆಯನ ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೀಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತ್ಯೆಗಾಗಿ)	.....	**ಬೆಲೆ ೮ ಆಣೆ**
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತ್ಯೆಗಾಗಿ)	.....	,, ೧೪ **ಆಣೆ**
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತ್ಯೆಗಾಗಿ)	.....	,, ೧ ರೂ. ೬ **ಆಃ**
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತ್ಯೆಗಾಗಿ)	.....	,, ೧ ರೂ. ೮ **ಆ**

ಎಲ್ಲ ಪುಸ್ತಕಗಳೂ ಪಥ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳು ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ.

ಸಾಮಾನ್ಯ ವಿಜ್ಞಾನ :—ಒಳ್ಳೇ ಅನುಭವದಿಂದ

೧ ರಿಂದ ೫ನೇ ಇಯತ್ತೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ ನೇ ಇಯತ್ತೆಯಿಂದ ೬ನೇ ಇಯತ್ತೆಯವರೆಗೆ ಭೂಗೋಲದ ಹೊಸ ಜ್ಞಾನ ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು. **ಮುಲ್ಕೀ ಪರೀಕ್ಷೆಗಾಗಿ**

ಕುಮಾರ ಕಿಟ್ಟಣ್ಣ ೦—೩—೦		ಗಣಿತಸಂಗ್ರಹ ೧—೪—೦	
ಮಹಾತ್ಮರ ಪರಿಚಯ ೦—೪—೦		ವಾಕ್ಯರಚನೆ ಹಾಗೂ ನಿಬಂಧಬರೆಹ ೧—೦—೦	
ರಾಮಕೃಷ್ಣನೀತಿಯಕಥೆ ೦—೬—೦		ಗುಣವಿವೇಚನೆ ೦—೮—೦	

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟು

ಪಥ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯು ೬ ಪುಸ್ತಕಗಳು : (೧ನೆಯ ಇಯತ್ತ್ಯೆಯಿಂದ ೬ನೆಯ ಇಂಗುತ್ತ್ಯೆಯವರೆಗೆ)

ಸಚಿತ್ರ ಪೌರನೀತಿ ಮಾಲೆಯು ೭ ಪುಸ್ತಕಗಳು : (೧ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯು ೬ ಪುಸ್ತಕಗಳು: (೨ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯ ವರೆಗೆ)

ಭೂಮುಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತ್ಯೆಗೆ, ಭಾಗ ೪, ೭ನೆಯ ಇಯತ್ತ್ಯೆಗೆ)

ಆಧುನಿಕ ರೈತ : ೧ನೆಯ ಭಾಗ ೪ನೆಯ ಇಯತ್ತ್ಯೆಗೆ, ೨ನೆಯ ಭಾಗ, ೫ನೆಯ ಇಯತ್ತ್ಯೆಗೆ.) ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ, ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ
ಅಭ್ಯಾಸಪತ್ರಿಕೆಯನ ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತ್ಯೆಗಾಗಿ)	.... **ಬೆಲೆ ೮ ಆಣೆ**
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತ್ಯೆಗಾಗಿ)	.... ,, ೧೪ **ಆಣೆ**
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತ್ಯೆಗಾಗಿ)	.... ,, ೧ ರೂ. ೬ ಆಣೆ
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತ್ಯೆಗಾಗಿ)	..... ,, ೧ ರೂ. ೮ ಆ

ಎಲ್ಲ ಪುಸ್ತಕಗಳೂ ಪಥ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ಸೂ ಚ ನೆ

ಸರಕಾರದ ಪಠ್ಯಪುಸ್ತಕ ಕಮೀಟಿಗ ಳಿಂದ ಮುಂಜೂರಾದ ಪುಸ್ತಕಗಳ ಜಾಹೀ ರಾತುಗಳನ್ನಷ್ಟೇ ಸ್ವೀಕರಿಸಲಾಗುವದು.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ !!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯ ಗಳಿಗೆ ಶ್ರೇಷ್ಠ ಸಾಹಿತ್ಯ ಬೇಕಲ್ಲವೇ ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿ ಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥ ಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಕಿಗೆ ಮೇಲಿನ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯಬೇಕಾಗಿ ವಿನ್ನಹ.

ಸರಕಾರದಿಂದ ಮುಂಜೂರಾ ಪುಸ್ತಕಗಳು

ಶ್ರೀ. ಸಾಲಿ ರಾಮಚಂದ್ರರಾಯರಿಂದ ರಚಿತವಾದವು.

ಬಾಲಕಾಂಡ ೧—೦
ಅಯೋಧ್ಯಾಕಾಂಡ ೧—೪

ನೂತನ ಗಣಿತ: ಶ್ರೀ. ಕೆ. ಕೆ. ಗಲಗಲಿ.

ಪ್ರಾಥಮಿಕ ಜನೆಯ ಇಯತ್ತೆಗೆ ಬೆಲೆ ೧—೦-

ಕೆಳಗಿನ ಪತ್ತಿಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ
ವಿಜಯರೋಡ, ಧಾರವಾಡ

ಶ್ರೀ. ಪಾವಟೆ ಚೆನ್ನಪ್ಪನವರು ಅಡಲ್ಟ ಎಜ್ ಕೇಶನ ಆಫೀಸರ, ಗೋಕಾಕ ಅವರಿಂದ ರಚಿತವಾ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ ೦—೫-
೨) ಶಾಂತಿಸಮರ ೦—೪-
೩) ವಿವೇಕ (ಏಕಾಂಕ ನಾಟಕ) ೦—೪-
೪) ಅಶಿಕ್ಷಿತರ ಗೋಳು (ಏಕಾಂಕ ನಾಟಕ ೦—೩-

ಸರಕಾರದಿಂದ ಲಾಯಬ್ರರಿ ಪುಸ್ತಕವೆಂದು ಮುಂಜೂರಾದ್ದು

ಇವಲ್ಲದೆ ಕೆಳಗಿನ ಪುಸ್ತಕಗಳೂ ದೊರೆಯುವವು

೫) ವಯಸ್ಕರ ಪದ್ಯಾವಲಿ ೦—೮-

ಆಚ್ಚಾಗಲಿರುವ ಪುಸ್ತಕಗಳು

೬) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ

ನವಿನ ಚೆನ್ನಪ್ಪ ಪಾವಟೆ
ಜಯನಿಲಯ ಪ್ರಕಾಶನ ಸಮಿತಿ, ಗೋಕಾಕ

Printed by: D. T. Kayasth, at Ravindra Press, U. B. Hill (House No. 1256) Dharw
Edited and Published by R. K. Lakkundi Principal T.C.M., R. V. Desai Principal B. T.
Y. D. Nadakarni, Lady Superintendent T.C.W. Dharwar Jointly at the Kannda Prathar
Shikshan Office Govt Training College for Men Dharwar. 7403-46-1375.

ಕನ್ನಡ

ಪ್ರಾಥಮಿಕ ಶಿಕ್ಷಣ



ವಾರ್ಷಿಕ ಚಂದಾ
೪ ರೂಪಾಯಿ

ಜನೇವರಿ ೧೯೪೯

ಬಿಡಿ ಸಂಚಿಕೆ
೨ ಆಣೆ

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳ

ಸಂಚಾಲಕರು: ಶ್ರೀ. ಎ. ಎನ್. ಸಾನೆ. ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಬಾ. ಧಾರವಾಡ.
ಸಂಪಾದಕರು: ಶ್ರೀ. ಆರ್. ಕೆ. ಲಕ್ಕುಂಡಿ. ಶ್ರೀ. ಆರ್. ವ್ಹಿ. ದೇಸಾಯಿ. ಮಿಸ್. ವಾಯ್. ಡಿ. ನಾಡಕರ್ಣಿ.

ಸಂಪಾದಕೀಯ	....	೩
ಅಖಂಡ ಶಿಕ್ಷಣ	.... ಶ್ರೀ. ಗಜೇಂದ್ರಗಡ ಶಾಮರಾಯರು ಬಿ. ಎ., ಬಿ.ಟಿ.	೫
ಯೋಜನಾ ಪದ್ಧತಿ	ಶ್ರೀ. ಆರ್. ಎಲ್. ಪಾಟೀಲ, ಬಿ. ಎಸ್ಸಿ., ಬಿ.ಟಿ.	೮
ಶಿಕ್ಷಣ ಕ್ಷೇತ್ರದಲ್ಲಿ ಪ್ರೌಢ ಶಿಕ್ಷಣದ ಸ್ಥಾನ	ಶ್ರೀ. ಪಿ. ಎ. ಗುಡಿಸಾಗರ, ಬಿ. ಎ., ಬಿ. ಟಿ. ಎ. ಓ., ಡಿ. ಎಸ್. ಬಿ. ವಿಜಾಪೂರ.	೧೨
ಶಿಕ್ಷಣದಲ್ಲಿ ಅನುಬಂಧ	ಶ್ರೀ. ವಿ. ಬ. ಚವಣ್ಣವರ ಬಿ. ಎಸ್ಸಿ., ಬಿ. ಟಿ.	೧೪
ಗ್ರಾಮನಾಸಿಗೆ ಶಿಕ್ಷಣ	ಶ್ರೀ. ಕೆ. ಜಿ. ಸೈಯದೈನ, ಮುಂಬಯಿಸರಕಾರದ ಶಿಕ್ಷಣ ಸಲಹೆಗಾರರು.	೧೭
ಮೂಲ ರಾಷ್ಟ್ರೀಯ ಶಿಕ್ಷಣದಲ್ಲಿ ತಾಯ್ನುಡಿಯ ಸ್ಥಾನ.	ಶ್ರೀ. ರಾ. ವೆಂ. ಗಿರಿರಡ್ಡಿ.	೨೧
ಭಾರತದ ಜ್ಯೋತಿಗಳು	ಶ್ರೀ. ರಂಗನಾಥ ಓಕ.	೨೪
ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ.		೨೭
ಕನ್ನಡ ಟೆಕ್ಸ್ಟ ಬುಕ್ ಕಮೀಟಿಯಿಂದ ಮಂಜೂರಾದ ಪುಸ್ತಕಗಳು.		೩೦

ಶ್ರೀಮಾನ್ ಎಲ್. ಆಯ್. ಅಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟಿವೆ

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯು ೬ ಪುಸ್ತಕಗಳು : (೧ನೆಯ ಇಯತ್ತ್ಯೆಯಿಂದ ೬ನೆಯ ಇಯತ್ತ್ಯೆಯವರೆಗೆ)

ಸಚಿತ್ರ ಪೌರನೀತಿ ಮಾಲೆಯು ೭ ಪುಸ್ತಕಗಳು : (೨ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯು ೬ ಪುಸ್ತಕಗಳು: (೨ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯವರೆಗೆ)

ಭೂಮಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತ್ಯೆಗೆ, ಭಾಗ ೪, ೭ನೆಯ ಇಯತ್ತ್ಯೆಗೆ)

ಆಧುನಿಕ ರೈತ : ೧ನೆಯ ಭಾಗ ೪ನೆಯ ಇಯತ್ತ್ಯೆಗೆ, ೨ನೆಯ ಭಾಗ, ೫ನೆಯ ಇಯತ್ತ್ಯೆಗೆ.) ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ ಅಭ್ಯಾಸಪತ್ರಿಕೆಯನ ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ಚಾ. ಶೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತ್ಯೆಗಾಗಿ)	.....	ಬೆಲೆ ೪ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತ್ಯೆಗಾಗಿ)	.....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತ್ಯೆಗಾಗಿ)	.....	,, ೧ ರೂ. ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತ್ಯೆಗಾಗಿ)	.....	,, ೧ ರೂ. ೪ ಆ.

ಎಲ್ಲ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪುಸ್ತಕಗಳು ಕರ್ನಾಟಕದ ಎಲ್ಲ ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುವವು.

ಕನ್ನಡ ಪ್ರಾಥಮಿಕ ಶಿಕ್ಷಣ



ಪ್ರಧಾನ ಸಂಪಾದಕರು: ರ. ಕೃ. ಲಕ್ಕುಂಡಿ.

ಸಂಪುಟ ೮೮ ಜನೇವರಿ ೧೯೪೯ ಸಂಚಿಕೆ ೮

ಸಂಪಾದಕೀಯ

ಸ್ವಚ್ಛತೆ ಮತ್ತು ನಮ್ಮ ಆರೋಗ್ಯ :

ಸ್ವಚ್ಛತೆಯು ಜೀವನದಲ್ಲಿ ಮುಖ್ಯವಾದದ್ದು. ಅದರಿಂದ ಜೀವನವು ನಿರೋಗಿಯಾಗಿದ್ದು ಆನಂದಮಯವಾಗಿರುತ್ತದೆ. ನಿರೋಗಿಯಾಗಿರದ ಮಾನವನು ಎಷ್ಟೋ ಶ್ರೀಮಂತನಿದ್ದರೂ ಬಡವನಿದ್ದರೂ ಅವನ ಜೀವನ ಆನಂದರಹಿತವಾಗಿರುತ್ತದೆ. ಆದುದರಿಂದ ಮಾನವನು ಮುಖ್ಯವಾಗಿ ತನ್ನ ಜೀವನದಲ್ಲಿ ಸ್ವಚ್ಛತೆಯ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕಾಗುವುದು. ಆಹಾರ, ಆಚ್ಛಾದನ, ಆಶ್ರಯ ಈ ಮೂರರಲ್ಲಿಯೂ ಸ್ವಚ್ಛತೆಯು ಅವಶ್ಯ. ಶುದ್ಧ ವಾಯು, ಶುದ್ಧ ಜಲ, ಶುದ್ಧ ಸ್ಥಳ ಜೀವನದಲ್ಲಿ ಆನಂದದಾಯಿಯಾಗಿರುತ್ತವೆಂಬ ಮಾತು ಎಲ್ಲರಿಗೂ ತಿಳಿದುದೇ ಆಗಿದೆ. ಹೀಗಿದ್ದರೂ ಕೂಡ ಭಾರತೀಯರು ಇಂದು ಈ ಮಾತನ್ನು ಅರಿತೂ ಅರಿತೂ ಸ್ವಚ್ಛತೆಯ ಕಡೆಗೆ ಗಮನ ಕೊಡದವರಾಗಿದ್ದಾರೆ. ಇದಕ್ಕೆ ಅವರಿಗೆ ಇತ್ತೀಚೆಯವರೆಗೆ ಸರಿಯುತ್ತಿದ್ದ ಶಿಕ್ಷಣವೇ ಕಾರಣವೆಂದು ಹೇಳಬಹುದಾಗಿದೆ. ಭಾರತೀಯರಿಗೆ ದೊರೆಯುತ್ತಿದ್ದ ಶಿಕ್ಷಣವು ಮನುಷ್ಯನಿಗೆ ವಿಶೇಷವಾಗಿ ಹೆಮ್ಮೆ-ದುರಭಿಮಾನವನ್ನು ನೀಡುತ್ತಿತ್ತು. ಈ ರೀತಿಯಿಂದ ಕಲಿತವರು ತಮ್ಮ ಸ್ವಚ್ಛತೆಗಾಗಿ, ತಮ್ಮ ಬಟ್ಟೆಯ ಸ್ವಚ್ಛತೆಗಾಗಿ ಅನ್ಯರನ್ನು ಅವಲಂಬಿಸಬೇಕಾಗುತ್ತಿತ್ತು. ಈ ಪರಾವಲಂಬತನವು ಸೋಮಾರಿಗಳನ್ನಾಗಿ ಮಾಡುತ್ತಿತ್ತು. ಇತರರು ಅವರ ಕೆಲಸಗಳನ್ನು ಮಾಡಿಕೊಡದಿದ್ದಾಗ ಅವರು ಒಣ ಮರ್ಯಾದೆ, ಹೆಮ್ಮೆಗೆ ಕಟ್ಟುಬಿದ್ದು ಅಸ್ವಚ್ಛತೆಯ ಮಡಿಲಿನಲ್ಲಿರಬೇಕಾಗುತ್ತಿತ್ತು. ಈ ಒಣ ಹೆಮ್ಮೆ, ದುರಭಿಮಾನವನ್ನು ಹೋಗಲಾಡಿಸುವುದಕ್ಕಾಗಿ ಮತ್ತು ಮಾನವನ ಜೀವನವನ್ನು ಸುಖಿಯನ್ನಾಗಿ ಮಾಡುವುದಕ್ಕಾಗಿ ವರ್ಧಾ ಶಿಕ್ಷಣ ಯೋಜನೆಯಲ್ಲಿ ಅಥವಾ ಜೀವನ ಶಿಕ್ಷಣದಲ್ಲಿ ಸ್ವಚ್ಛತೆಗೆ ಸ್ಥಾನವು ದೊರೆಯಿತು. ವಿದ್ಯಾರ್ಥಿಗಳು ಸ್ವಚ್ಛತೆಯಲ್ಲಿ ಅಲಕ್ಷಿಸದಿರುವುದರಲ್ಲಿ ಆರೋಗ್ಯ ಲಾಭವಾಗುವುದೆಂದು ನಸುಕಿನಲಿ ಎದ್ದು ಶುಚಿಯಾಗಿ ಶಾಲೆಗೆ ಬರಬೇಕೆಂದೂ ಬಿಸಿಲು ಬೆಳವಣಿಗೆಗೆ ಯೋಗ್ಯವೆಂದರಿದೂ ಸಂಜೆಯ ಜೀವನವು ಶುದ್ಧ

ಹವೆಯು ದೊರೆಯಬೇಕೆಂದೂ ಮುಂಜಾವು—ಮಧ್ಯಾಹ್ನ ಗಳಲ್ಲಿ ಶಿಕ್ಷಣ ಸಂಸ್ಥೆಗಳ ಕಾರ್ಯಾವಧಿಯನ್ನು ಗೊತ್ತು ಪಡಿಸಲಾಯಿತು. ತೋಟ ಪಟ್ಟಿಯನ್ನು ಮಾಡಿಸುವುದ ರಲ್ಲಿ ಸಹ ಸ್ವಚ್ಛತೆ ಮತ್ತು ಆರೋಗ್ಯದ ನಿಯಮಗಳು ಅಡ ಕವಾಗಿವೆ. ಇಂದು ಈ ಆರೋಗ್ಯದಾಯಿನಿ ಸ್ವಚ್ಛತೆಯ ಶಿಕ್ಷಣವನ್ನೊಳಗೊಂಡ ಜೀವನ ಶಿಕ್ಷಣದಲ್ಲಿ ಮತ್ತು ಈ ಜೀವನ ಶಿಕ್ಷಣವೀಯುವ ಶಾಲೆಗಳಲ್ಲಿ ನುಕ್ಕಳ ಬಟ್ಟೆಯ ಸ್ವಚ್ಛತೆಯ ಕಡೆಗೆ ಅಷ್ಟೊಂದು ಗಮನ ಕೊಡುತ್ತಿರುವುದು ಕಂಡು ಬರುವುದಿಲ್ಲ. ತಮ್ಮ ಬಟ್ಟೆಗಳನ್ನು ತಾವೇ ಒಗೆದು ಕೊಳ್ಳಬಲ್ಲ ವಯಸ್ಸಿನ ಹುಡುಗರನ್ನು ವಾರಕ್ಕೊಮ್ಮೆ ಯಾದರೂ ಶಿಕ್ಷಕರು ಸಮೀಪದ ಜಲಾಶಯ(ಕೆರೆ, ಬಾವಿ, ಹಳ್ಳ, ಕೊಳ) ಗಳಿಗೆ ಕರೆದುಕೊಂಡು ಹೋಗಿ, ಬಟ್ಟೆ ಒಗೆಯುವ ಮತ್ತು ಸ್ನಾನದ ರೀತಿ ನೀತಿಗಳನ್ನು ಕಲಿಸು ವುದು ವೈಯಕ್ತಿಕ ಸ್ವಚ್ಛತೆ ಹಾಗೂ ಆರೋಗ್ಯದ ದೃಷ್ಟಿ ಯಿಂದ ಮಹತ್ವದ ಕಾರ್ಯಕ್ರಮವಾಗಿದೆ. ಇತ್ತ ಪ್ರಾಥ ಮಿಕ ಶಿಕ್ಷಕರು ಗಮನಕೊಡಬೇಕೆಂದು ಸೂಚಿಸುತ್ತೇವೆ.

ಭಾರತದ ಜ್ಯೋತಿಗಳು :

ಇದೇ ಸಂಚಿಕೆಯಲ್ಲಿ ಕವಿ ರಂಗನಾಥ ಓಕ ಅವರಿಂದ ಭಾರತದ ಕೆಲ ಜ್ಯೋತಿಗಳ ಕುರಿತು ರಚಿತವಾದ ಕೆಲವು ಕವನಗಳನ್ನು ಕೊಡಲಾಗಿದೆ. ಅವು ಚಿಕ್ಕಮಕ್ಕಳಿಗೆ ಮಹಾ ಪುರುಷರ ಜೀವನದ ತತ್ವಗಳ ಪರಿಚಯ ಮಾಡಿಕೊಡಲ್ಲ ತುಂಬಾ ನೆರವಾಗುವವು ಮತ್ತು ಇತಿಹಾಸದ ದೃಷ್ಟಿಯಿಂದ ಬಾಲಕರಿಗೆ ನೆನಪಿನಲ್ಲಿಡಲು ಯೋಗ್ಯವಾಗಿರುವವು. ಕವಿ ರಂಗನಾಥ ಓಕ ಅವರು ಮಾಡಿದ ಈ ಪ್ರಯತ್ನವು ಸ್ವಾಗ ತಾರ್ಹವೂ ಪ್ರೋತ್ಸಾಹನೀಯವೂ ಆಗಿದೆ.

ಸಂಪಾದಕ ಮಂಡಳದ ಅರಿಕೆ :

ನಮ್ಮ ಕಡೆಗೆ ನಾನಾ ತರದ ಲೇಖಗಳೂ ಕವನಗಳೂ ಬರುತ್ತಿವೆ. ಆದರೆ ಅವುಗಳಲ್ಲಿ ಕವನಗಳೇ ಹೆಚ್ಚು. ನಮ್ಮ ಕಡೆಗೆ ಬಂದ ಕವನಗಳಲ್ಲಿ ಉತ್ತಮವಾದವು ತೀರ ಕಡಿಮೆ. ನಾವು ಇದು ವರೆಗೆ ಪ್ರೋತ್ಸಾಹನೆಗೆಂದು ಕೆಲವು ಕವನಗ ಳನ್ನು ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸಿದೆವು. ಕವನಗ ಳನ್ನು ಕಳಿಸುವವರು ಉತ್ತಮವಾದವುಗಳಿಗೇ ನಮ್ಮ ಪತ್ರಿಕೆಯಲ್ಲಿ ಇಂಬುದೊರೆಯುವುದಂಬುದಂ ಕಡಿಗ ಗಮನ ಕೊಡಬೇಕು. ಈ ಮಾತುಗಳನ್ನು ಗಮನದಲ್ಲಿಟ್ಟು ನಮ್ಮ ವ್ಯವಸಾಯ ಬಂಧುಗಳು ಕವನ ಕಟ್ಟ ಕಳಿಸಬೇಕೆಂದು ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇವೆ. ಆಗ್ರಾಹ್ಯವಾದವು ಗಳು ಇನ್ನುಮೇಲೆ ಪ್ರಕಟಿಸಲ್ಪಡದೆ ಉಳಿಯುವವು.

ಎರಡನೆಯದಾಗಿ, ಶೈಕ್ಷಣಿಕ ಲೇಖನಗಳನ್ನು ಸರಿಯಾಗಿ ವಿಚಾರಗಳ ತೂಕ ಸುಸಂಬದ್ಧತೆ ತಪ್ಪದ ಹಾಗೆ ಬರೆದು ಕಳುಹಬೇಕಾಗಿಯೂ ಅರಿಕೆ ಮಾಡಿಕೊಳ್ಳುತ್ತೇವೆ. ಲೇಖ ಗಳು ಬಹಳ ದೊಡ್ಡವಿರಕೂಡದು, ಅವು ನಾಲ್ಕು ಪುಟಕ್ಕೆ ಮಿಕ್ಕಿರಬಾರದು. ಅಭ್ಯಾಸ ಪತ್ರಿಕೆ, ಭೌಗೋಲಿಕ ಮುಂ ತಾದ ವಿಷಯಗಳಿಗೆ ಸಂಬಂಧ ಪಟ್ಟ ಲೇಖಗಳು ಬೇಕಾ ಗಿವೆ. ವಿದ್ಯಾರ್ಥಿಗಳಿಂದ ಪತ್ರ ರೂಪದಲ್ಲಿ ನಮ್ಮ ನಾಡಿನ ಆಯಾ ಭಾಗದ ಭೌಗೋಲಿಕ ಪರಿಸ್ಥಿತಿಯೆನ್ನು ಕುರಿತ ಬರೆದ ಲೇಖಗಳು ಸಹ ಸ್ವಾಗತಾರ್ಹವಾಗಿವೆ. ಇತ್ತ ಶಿಕ್ಷ ಕರು ಗಮನವೀಯಬೇಕೆಂದು ಅರಿಕೆ.

ಮೂರನೆಯದಾಗಿ, ಬೆರಳಮೇಲೆ ಎಣಿಸುವಷ್ಟು ಚಂದಾ ದಾರರಿಂದ ತಮಗೆ ಪ್ರಾಥಮಿಕ ಶಿಕ್ಷಣದ ಪ್ರತಿಗಳು ಮುಟ್ಟು ವದಿಲ್ಲವೆಂದು ದೂರುಗಳು ಬಂದಿವೆ. ಪತ್ರಿಕೆಯನ್ನು ಕಳು ಹಲಾಗಿದೆಯೆಂದು ನಮ್ಮ ಆಫೀಸಿನಿಂದ ಬರೆದ ಕಾರ್ಡು ಅವರಿಗೆ ತಲ್ಪುವುದು, ಆದರೆ ಪತ್ರಿಕೆಯು ತಲ್ಪುವುದಿಲ್ಲ ವಂತೆ. ಇದು ನಮಗೂ ಆಶ್ಚರ್ಯ ಸಂಗತಿಯಾಗಿದೆ ಪತ್ರಿಕೆ ತಲ್ಪುವುದಿಲ್ಲವೆಂದು ಹೇಳುವವರು ಅಂಚೆ ಖಾತೆಯ ವರೊಡನೆ ಯೋಗ್ಯ ವ್ಯವಸ್ಥೆ ಮಾಡಿಸಿಕೊಳ್ಳಬೇಕಾಗಿ ವಿನ್ನಹ.

ಶಾಲೆಗಳಲ್ಲಿ ನಡೆಯುವ ಚಟುವಟಿಕೆಗಳ ವರದಿಗಳನ್ನು ಕಳುಹುವವರು ಅತ್ಯಂತ ಸಂಕ್ಷೇಪದಲ್ಲಿ ಕಳುಹಬೇಕಾಗಿ ವಿನ್ನಹ. ಆದರೆ ಅವು ಶೈಕ್ಷಣಿಕ ದೃಷ್ಟಿಯಿಂದ ಮಹತ್ವವು ಳ್ಳವುಗಳಾಗಿರಬೇಕು. ವರ್ಗಾವರ್ಗಿಯಾದೊಡನೆ ಸಂತೋ ಷಕೂಟ (ಪಾನಸುಪಾರಿ) ಮುಂತಾದವುಗಳ ವರದಿಗಳು ಗ್ರಾಹ್ಯವಾಗಲಾರವು ಎಂದು ನಮ್ರವಾಗಿ ಸೂಚಿಸಬಯ ಸುತ್ತೇವೆ.

ಅಖಂಡ ಶಿಕ್ಷಣ

ಬರೆದವರು:— **ಶ್ರೀ. ಗಜೇಂದ್ರಗಡ ಶಾಮರಾಯರು**, ಬಿ. ಎ., ಬಿ. ಟಿ.
ವಿಜಯಪುರ ಜಿಲ್ಲಾ ಶಿಕ್ಷಣ ಸಮಿತಿಯ ಕನ್ನಡ ಟ್ರೇನಿಂಗ ಕಾಲೇಜದ ಮುಖ್ಯಾಧ್ಯಾಪಕರು.

★

ಶಿಕ್ಷಣವು ಅಖಂಡವಾಗಬೇಕು. ಸಮಗ್ರವಾಗಬೇಕು. ಅಖಂಡ ಶಿಕ್ಷಣವೇ ಆಧುನಿಕ ಶಿಕ್ಷಣದ ಜೀವಾಳವಾಗಿದೆ. ರೂಸೋನ ಕಾಲದಿಂದ ಇಂದಿನ ವರೆಗೆ ಆಧುನಿಕ ಶಿಕ್ಷಣದ ಪುರಸ್ಕರ್ತರು ಇದೇ ಮಾತನ್ನೇ ಎತ್ತಿ ತೋರಿಸುವರು. ಸಾರಿ ಹೇಳಿರುವರು. ಇಂದಿನ ಶಿಕ್ಷಣಕ್ಕೆ ತಳಹದಿಯಾದ ಮಾನಸಶಾಸ್ತ್ರವು ಇದೇ ಮಾತನ್ನೇ ಮನಗಾಣಿಸಲು ಹವಣಿಸುವದು.

ಅಖಂಡವಾಗಿರುವದೆಂದರೆ ಇಡಿಯಾಗಿರುವದು. ಏಕ ರೂಪವಾಗಿರುವದು. ನಿತ್ಯ ಜೀವನೋಪಯೋಗಿಯಾದ ಪಾತ್ರೆಗಳನ್ನು ಕೊಂಡುಕೊಳ್ಳುವಾಗ್ಗೆ ಕೂಡ ನಾವು "ಅಖಂಡ" — ಪಾತ್ರೆಗಳನ್ನೇ ಹೆಜ್ಜಾಗಿ ಆರಿಸುವೆವು. ಎರಕ ಹೊಯ್ದ ಇಲ್ಲವೆ ಒಂದೇ ತಗಡನ್ನು ಬಡಿದು ಮಾಡಿದ ಪಾತ್ರೆಗಳವು. ಅವುಗಳಲ್ಲಿ ತುಣುಕುಗಳ ಜೋಡಣೆಯಿರುವದಿಲ್ಲ. ಬೆಸುಗೆ ಇರುವದಿಲ್ಲ. ಇಂಥ ಪಾತ್ರೆಗಳ ತಾಳಿಕೆ ಬಾಳಿಕೆಗಳು ಹೆಚ್ಚು. ಅಂತೆಯೇ ಇವುಗಳ ಬೆಲೆಯೂ ಹೆಚ್ಚು.

ಬೆಸುಗೆಯ ಪಾತ್ರೆಗಳ ನ್ಯೂನತೆಗಳಿಸೇ ಇರಲಿ, ಹೆಚ್ಚು ಕಡಿಮೆ ಬೆಲೆಯುಳ್ಳ, ಹೆಚ್ಚು ಕಡಿಮೆ ತಾಳಿಕೆಯುಳ್ಳ ಬೇರೆ ಬೇರೆ ಲೋಹದ ತಗಡಿನ ತುಣುಕುಗಳನ್ನು ಬೆಸುಗೆಯಿಂದ ಹೇಗಾದರೂ ಜೋಡಿಸಿ ನಾವು ಒಂದು ಪೂರ್ಣ ಪಾತ್ರೆಯನ್ನು ಮಾಡಬಹುದು. ಬೇರೆ ಬೇರೆ ಉದ್ದೇಶಗಳಿಗಾಗಿ ಉಪಯೋಗಿಸಬಹುದು. ಆದರೆ ಶಿಕ್ಷಣದ ಅಧಿಷ್ಠಾತೃವಾದ ಮಗುವು ಬಿಡಿಯಾದ ಭಾಗಗಳ ಜೋಡಣೆಯಿಂದ ರಚಿಸಿದ ಜಡ ಮೂರ್ತಿಯಲ್ಲ. ಮಗುವು ಚಿದ್ರೂಪಿಯು. ಚೈತನ್ಯ ಸ್ವರೂಪನು. ಆತನ ಚೈತನ್ಯವು, ವ್ಯಕ್ತಿತ್ವವು ಅಖಂಡವಾಗಿದೆ. "ಇಡಿ"ಯಾಗಿದೆ. ಅಖಂಡ ಶಿಕ್ಷಣದ ಮೂಲವೂ ಅವಶ್ಯಕತೆಯೂ ಮಗುವಿನ ಚೈತನ್ಯದ ಅಖಂಡತೆಯಲ್ಲಿಯೇ ನೆಲಿಸಿವೆ.

ಕ್ರಿಯಾಶಕ್ತಿ –ಚಟುವಟಿಕೆ– ಚೈತನ್ಯದ ಹಿರಿದಾದ ಕುರುಹು. ಅಣುರೂಪವಾದ ಏಕೇಂದ್ರೀಯದ ಕ್ಷುದ್ರ ಜಂತುವಿನಲ್ಲಿಯೂ ಈ ಕ್ರಿಯಾಶಕ್ತಿಯು ತಲೆದೋರುವದು. ದೇವ ದೇವನ ಹೆಮ್ಮೆಯ ಕಲಾಕೃತಿಯಾದ ಮಾನವನಲ್ಲಿಯೂ ಇದೇ ಕ್ರಿಯಾಶಕ್ತಿಯ ಉನ್ನತ ಸ್ವರೂಪವು ಕಾಣಬರುವದು. ಇವರೀರ್ವರ ನಡುವಿನ ವಿವಿಧ ಜೀವರಾಶಿಗಳಲ್ಲಿ ಇದೇ ಕ್ರಿಯಾಶಕ್ತಿಯ ತರ, ತಮ, ಭಾವವನ್ನು ನಾವು ನೋಡಬಹುದು. ಇವರೆಲ್ಲರುಗಳ ಕ್ರಿಯೆಯು ಅನೇಕ ರೂಪವಾಗಿದ್ದರೂ ತಾತ್ವಿಕವಾಗಿ ಕ್ರಿಯಾಶಕ್ತಿಯ ಮೂಲ ಸ್ವರೂಪವು ಒಂದೇ ವಿಧವಾಗಿರುವದು. ಕ್ಷುದ್ರ ಜಂತುವಿನ ಕ್ರಿಯಾಶಕ್ತಿಯು ಮೂರು ಕಲ್ಲುಗಳಿಂದ ಮಕ್ಕಳು ಕಟ್ಟಿದ ಗುಡಿಯಂತಿದ್ದರೆ, ಮಾನವನ ಕ್ರಿಯಾಶಕ್ತಿಯು ಶಿಲ್ಪ ಕಲೆಯ ಕಳಸದಂತಿರುವ ಬೇಲೂರಿನ ದೇವಾಲಯಗಳಂತೆ ಇರುವದು. ಶಿಕ್ಷಣದ ಅಖಂಡತೆಯನ್ನು ತಿಳಿದುಕೊಳ್ಳಲು ಕ್ರಿಯಾಶಕ್ತಿಯ ಈ ಏಕರೂಪತೆಯನ್ನು ನಾವು ಚನ್ನಾಗಿ ನೆನಪಿನಲ್ಲಿಡಬೇಕಾಗುವದು.

ಮಗುವು ಜನಿಸಿದಂದಿನಿಂದ, ತಾಯಿಯ ಗರ್ಭದಿಂದ ಹೊರಗೆ ಬಂದು ಭೂಸ್ಪರ್ಶವಾದ ಕ್ಷಣದಿಂದ ಮಗುವಿನ ಜೀವನವು ಇದೇ ಕ್ರಿಯಾಶಕ್ತಿಯನ್ನೇ ಅವಲಂಬಿಸಿರುವದು. ಜೀವನ ಸಂಗ್ರಾಮದಲ್ಲಿ ಮಗುವಿಗೆ ಇದೊಂದೇ ಸಾಧನವಾಗಿದೆ. ಅಂತೆಯೇ ಇದಕ್ಕೆ "ಜೀವನ ಶಕ್ತಿ, ಆತ್ಮಶಕ್ತಿ" ಯೆಂದು ಹೇಳುವದುಂಟು. ಮಗುವಿನ ಜೀವನವು ಮುಂದರಿದಂತೆ ಈ ಆತ್ಮಶಕ್ತಿಯು ಅರಳುವದು. ಇಂದು ನಮಗೆ ಬೇರೆ ಬೇರೆಯಾಗಿ ತೋರುವ, ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ಮಗುವಿನ ಮಾನಸಿಕ ಶಕ್ತಿಗಳೆಲ್ಲ ಅರಳಿ

ಆತ್ಮಶಕ್ತಿಯ ಪಕಳಿಗಳು ಮಾತ್ರ. ಒಂದೇ ಶಕ್ತಿಯ ವಿವಿಧ ಮುಖಗಳು.

ಒಂದೆರಡು ಉದಾಹರಣೆಗಳಿಂದ ಈ ಮಾತಿನ ಮನವರಿಕೆಯಾಗದಿರದು. ಸ್ಮರಣ ಶಕ್ತಿಯನ್ನೇ ತಗೆದುಕೊಳ್ಳೋಣ. ಬಾಳು, ಬದುಕುಗಳ ಹೋರಾಟದಲ್ಲಿ ಬೆಳೆಯುವ ಮಗು ಐಚ್ಛಿಕವಾಗಿ, ಅನಿವಾರ್ಯವಾಗಿ ಮಾಡಬೇಕಾದ ಕ್ರಿಯೆಗಳಿಂದ ಅನೇಕ ಅನುಭವಗಳನ್ನು ಪಡೆಯುವದು. ಮನಸ್ಸಿನಲ್ಲಿ ಉಳಿಯುವ ಪ್ರತಿಯೊಂದು ಅನುಭವದ ಸಾರವೇ "ಸ್ಮೃತಿ". ತಾನೇ ನಿರ್ಮಿಸಿದ ಈ ಸ್ಮೃತಿ ಸಂಕೋಲೆಗಳಿಂದ ಕೂಡಿಕೊಂಡೇ ಕ್ರಿಯಾಶಕ್ತಿಯು ಕೆಲಸ ಮಾಡಬೇಕಾಗುವದು. ಹಿಂದು, ಇಂದು, ಮುಂದುಗಳ ಸಂಬಂಧವು ಈ ರೀತಿಯಾಗಿ ತಾನಾಗಿಯೇ ಸಾಧಿಸುವದು. ಈ ಬಗೆಯ ಸಂಬಂಧವನ್ನು ಕಲ್ಪಿಸುವದೇ ಸ್ಮರಣ ಶಕ್ತಿಯ ಕಾರ್ಯ. ಇಂದಿನ ಕೃತಿಗೆ ಹಿಂದಿನ ಸ್ಮೃತಿಯೇ ಕೇಂದ್ರ. ಹಿಂದಿನ ಸ್ಮೃತಿಯೇ ಇಂದಿನ ಕೃತಿಯ ರೂಪ ರೀತಿಗಳನ್ನು ಗೊತ್ತುಪಡಿಸುವದು. ಸ್ಮರಣಶಕ್ತಿಗೆ ಕ್ರಿಯಾಶಕ್ತಿಯೇ ಕಾರಣವು. ಅದೊಂದು ಸ್ವತಂತ್ರವಾದ ಶಕ್ತಿಯೂ ಅಲ್ಲ ಪ್ರತ್ಯೇಕವಾಗಿ ನಡೆಯುವ ಕಾರ್ಯವು ಆಗಿರುವದಿಲ್ಲ. ಈ ಸ್ಮರಣಶಕ್ತಿಯು ವ್ಯಕ್ತಿವಿಶಿಷ್ಟವಾಗಿರುವಂತೆ ಸ್ವಜಾತಿ ವಿಶಿಷ್ಟವೂ ಆಗಿರುವದು. ಸ್ವಕೀಯವಾಗಿರುವಂತೆ ಸಜಾತೀಯವೂ ಆಗಿರುವದು. ಸಜಾತೀಯವಾದ ಪಕ್ಷಿಗಳು ಒಂದೇ ವಿಧವಾದ ಗೂಡು ಕಟ್ಟುವವು. ಸಜಾತೀಯವಾದ ಪ್ರಾಣಿಗಳಲ್ಲಿ ಸಮಾನವಾದ ಕೂಗು-ಕೃತಿಗಳು ಕಂಡುಬರುವವು. ಅನಾದಿ ಕಾಲಗಿಂದ ಮಾನವನ ಕುಟುಂಬವು ಬೆಳೆಸಿಕೊಂಡು ಬಂದ ಸಂಸ್ಕೃತಿ ಸಂಪ್ರದಾಯಗಳ ರಕ್ಷಣೆಗೆ ಆತನ ಕ್ರಿಯಾಶಕ್ತಿಯ ಒಂದು ಸ್ವರೂಪವಾದ ಸ್ಮರಣ ಶಕ್ತಿಯೇ ಭದ್ರವಾದ ತಳಪದಿಯಾಗಿದೆ.

ಮಗುವಿನ ಚೈತನ್ಯದ ಅಖಂಡತೆಗೆ ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳಬಹುದು: ಬೆಳೆಯುವ ಮಗುವಿನಲ್ಲಿ ಸಮಾನವಾಗಿ ಕಂಡುಬರುವ ಕೆಲವು ಸ್ವಾಭಾವಿಕ ಒಲವುಗಳಿಗೆ ಸಹಜ ಪ್ರವೃತ್ತಿಗಳೆಂದು ಹೇಳುವೆವು. ಈ ಸಹಜ ಪ್ರವೃತ್ತಿಗಳೇ ಶಿಕ್ಷಣದ ಮೂಲಕೆಗಳು. ಸಜೀವತನವಾದ ಮಗುವಿನಲ್ಲಿ ಕೆಂಡುಬರುವ ಕ್ರಿಯಾಶಕ್ತಿಯು ವಿವಿಧ ಸ್ವರೂಪಗಳೇ ಈ ಸ್ವಾಭಾವಿಕ ಒಲವುಗಳು. ವಿಶಿಷ್ಟವಾದ ಸಂದರ್ಭ ಸನ್ನಿವೇಶಗಳಲ್ಲಿ ಪ್ರಾಣಿಗಳೆಲ್ಲವೂ ಸಜಾತೀಯವಾದ ಒಂದು ವಿಶಿಷ್ಟ ರೀತಿಯಿಂದ ನಡೆದುಕೊಳ್ಳುವವು. ಮಗುವು ಮಾಡುವ ವಿವಿಧ ಕಾರ್ಯಗಳ ಅನುಭವದ ಸಾರವೇ ಸ್ಮೃತಿಯೆಂದು ಹಿಂದೆ ಹೇಳಿದೆ. ಪರಂಪರಾಗತವಾಗಿ ಬಂದ ಈ ಸ್ಮೃತಿಗಳು ಹೆಪ್ಪುಗಟ್ಟಿ ಕೂಡಿಕೊಂಡಾಗ 'ಸ್ಮೃತಿ-ಗ್ರಂಥಿ'ಗಳಾಗುವವು. ಸಾಮಾನ್ಯ ಸ್ಮೃತಿಗಿಂತಲೂ ಇವುಗಳಲ್ಲಿ ಪ್ರೇರಕ ಶಕ್ತಿಯು ಹೆಚ್ಚು ಪ್ರಬಲವಾಗಿರುವದು. ಚೈತನ್ಯದ ಕ್ರಿಯಾಶಕ್ತಿಗೆ ಇವು ಸಂಕೋಲೆಗಳಂತೆ. ವಿಶಿಷ್ಟ ಸನ್ನಿವೇಶಗಳಲ್ಲಿ ಸಜೀವತನವಾದ ಪ್ರಾಣಿಗಳಿಗೆ 'ಹೀಗೆಯೇ ಮಾಡು' ಎಂದು ಇವು ನಿರೂಪಿಸುವವು. ಹಿಂದೆ ಹೇಳಿದಂತೆ ಕ್ರಿಯೆಯ ರೂಪ ರೀತಿಗಳನ್ನು ನಿರ್ದಿಷ್ಟಗೊಳಿಸುವವು. ಮಗುವಿನ ಶಿಕ್ಷಣದಲ್ಲಿ ಅತ್ಯಂತ ಮಹತಿಯ ಸ್ಥಾನವನ್ನು ಪಡೆಯಲೇಬೇಕಾದ ಈ ಸಹಜ ಪ್ರವೃತ್ತಿಗಳು ಕೂಡ ಚೈತನ್ಯದ ಉಸಿರಾದ ಕ್ರಿಯಾಶಕ್ತಿಯಿಂದ ಭಿನ್ನವಾದವುಗಳೂ ನಿರಪೇಕ್ಷವಾದವುಗಳೂ ಅಲ್ಲ.

ಮಗುವಿನ ಚೈತನ್ಯದ ಅಖಂಡತೆಯ ನಿದರ್ಶನಕ್ಕಾಗಿ ಒಂದೆರಡು ಉದಾಹರಣೆಗಳನ್ನು ಮಾತ್ರ ಮೇಲೆ ಹೇಳಿದೆ. ಚೈತನ್ಯದ ಜೀವಾಳವಾದ ಕ್ರಿಯಾಶಕ್ತಿಯು ವಿವಿಧ ಸ್ವರೂಪಗಳನ್ನೇ ಪ್ರಾಚೀನರು ಪ್ರತ್ಯೇಕವಾದ ಮಾನಸಿಕ ಶಕ್ತಿಗಳೆಂದು ಭಾವಿಸಿದರು. ದೇಹದ ಅಂಗೋಪಾಂಗಗಳಾದ ತೋಳುಗಳಿಗೆ ವಿಶಿಷ್ಟವಾದ ಕಸರತ್ತುಗಳನ್ನು ಕಲ್ಪಿಸಿ ಆ ತೋಳುಗಳ ಕಸುವನ್ನು ಹೆಚ್ಚಿಸಲು ಯತ್ನಿಸುವಂತೆ ಈ ಮಾನಸಿಕ ಶಕ್ತಿಗಳನ್ನು ಬಿಡಿ ಬಿಡಿಯಾಗಿ ಬಲಿಸಬಹುದೆಂದು ಹೇಳಿದರು. ಸ್ಮರಣಶಕ್ತಿಯ ಬೆಳವಣಿಗೆಗಾಗಿ ಬಾರದ ಭಾಷೆಯ ಗದ್ಯ ಪದ್ಯಗಳ ದೀರ್ಘವಾದ ಅವತರಣಿಕೆಗಳನ್ನು ಮಕ್ಕಳಿಗೆ ಪಾಠ ಮಾಡಲು ಹೇಳುವದೂ, ತಾರ್ಕ್ಕಿ, ತರ್ಕ ಸೂತ್ರಗಳನ್ನು ತಂದು ಕೊಡುವದಕ್ಕಾಗಿ ಮುಗಿಯಲಾರದ ಗಣಿತದ ಗುಣಾಕಾರಗಳನ್ನು ಮಾಡ ಹಚ್ಚುವದೂ, ಕಾವ್ಯರಸಾಸ್ವಾದನೆಯನ್ನು ಬಿಟ್ಟುಕೊಟ್ಟು ಕಲ್ಪನಾ ಶಕ್ತಿಯನ್ನು ಬೆಳಿಸುವದೇ ಕಾವ್ಯಾಭ್ಯಾಸದ ಉದ್ದೇಶವೆಂದು ಹೇಳುವದೂ— ಈ ಬಗೆಯ ವಿಚಾರ ಸರಣಿಯು ಪ್ರಾಚೀನ ಮಾನಸಶಾಸ್ತ್ರದಲ್ಲಿ ಪ್ರಚಾರದಲ್ಲಿತ್ತು. ಅಂದಿನ ಶಿಕ್ಷಣವೂ ಈ ಹಾದಿಯನ್ನೇ ಹಿಡಿಯುತ್ತಿತ್ತು. ಇಂದಿನ ಮಾನಸಶಾಸ್ತ್ರವು ಈ ವಿಚಾರಸರಣಿಯನ್ನು ಬಿಟ್ಟುಕೊಟ್ಟಿದೆ. ಆಧುನಿಕ ಶಿಕ್ಷಣ ಶಾಸ್ತ್ರವು ವಿವಿಧ ವಿಷಯಗಳನ್ನು ಬಿಡಿ ಬಿಡಿಯಾಗಿ ಭಾವಿಸದೆ ಅವೆಲ್ಲವುಗಳನ್ನು ಪರಸ್ಪರವಾಗಿ ಹೊಂ

ಸಲು ಹವಣಿಸುತ್ತದೆ. ಗಾಂಧೀಜಿಯವರ ಉಜ್ವಲ ಕಾಣಿ
ಕೆಯಾದ ಮೂಲ ಶಿಕ್ಷಣದಲ್ಲಿ ಜೀವನೋಪಯೋಗಿಯಾದ
ಕೇಂದ್ರ ಕಲೆಯೊಡನೆ ಜೀವನದ ಪರಿಸರಣಗಳಾದ ನಿಸರ್ಗ-
ಸಮಾಜಗಳೊಡನೆ ವಿಷಯಾನುಬಂಧವನ್ನು ಸಾಧಿಸುವದೇ
ಮುಖ್ಯೋದ್ದೇಶವಾಗಿದೆ. ವಿಷಯಗಳನ್ನು ಹೀಗೆ ತಳಕ್ಕು
ಹಾಕಲೆತ್ನಿಸುವ ವಿಷಯಾನುಬಂಧದ ಈ ರೀತಿಗೆ ಜ್ಞಾನದ
ಅಖಂಡತೆಯೇ ಆಧಾರವಾಗಿದೆ. ವಿಷಯಾನುಬಂಧವು
—ಅಖಂಡ ಶಿಕ್ಷಣವು—ಕೃತ್ರಿಮವಾದುದಲ್ಲ. ಮಗುವಿನ
ಮನೋಧರ್ಮಕ್ಕೆ ಇದು ಪರಿಪೂರ್ಣವಾಗಿ ಹೊಂದಿಕೊಳ್ಳು
ವದು. ಅದರ ಮಾನಸಿಕ ಕ್ರಿಯೆಯಾದರೂ ಈ ರೀತಿ
ಯನ್ನೇ ಅನುಸರಿಸುವದು.

ಇಂದಿನ ಮಾನಸಶಾಸ್ತ್ರದಲ್ಲಿ ಮಗುವು ಚೈತನ್ಯ ಸ್ವರೂ
ಪನು. ಪ್ರಾಣ-ಶಕ್ತಿಯುತನು. ಈ ಪ್ರಾಣ ಶಕ್ತಿಯೇ
ಕ್ರಿಯಾಶಕ್ತಿ. ಸಹಜವಾದ ಈ ಕ್ರಿಯಾಶಕ್ತಿಯು ಸಹಾಯ
ವಿಂದ ಮಗುವು ಜೀವನದ ಹೋರಾಟವನ್ನು ಹೂಡುವದು.
ಹೋರಾಡುತ್ತಿರುವಾಗಲೇ ಮಗುವಿನ ನೈ-ಮನ-ಆತ್ಮ
ಶಕ್ತಿಗಳೆಲ್ಲ ಬೆಳಕಿಗೆ ಬರುವವು. ಸರಾಗವಾಗಿ, ಹೊಂದಿಕೆ
ಯಾಗಿ ಬೆಳೆಯುವವು. ಶೈಕ್ಷಣಿಕ ಮಾನಸಶಾಸ್ತ್ರದಲ್ಲಿ
ಪ್ರಾಣಶಕ್ತಿಯ ಪುರಸ್ಕರ್ತರೆಲ್ಲ ಈ ಮಾತನ್ನೇ ಸಾಧಾರವಾಗಿ
ಸಾರಿ ಹೇಳಿರುವರು.

ಎಲೆ-ಹೂ-ಹೀಚು-ಕಾಯಿಗಳೆಲ್ಲ ಒಂದಕ್ಕೊಂದು ಭಿನ್ನ
ವಾಗಿ ತೋರಿದರೂ ಅವುಗಳಲ್ಲಿ ಹರಿದಾಡುವ ಜೀವ ರಸವು
ಒಂದೇಯಾಗಿರುವಂತೆ, ವಿವಿಧ ಪಾತ್ರಗಳನ್ನು ವಹಿಸಿ
ರಂಗಭೂಮಿಯ ಮೇಲೆ ಬೇರೆ ಬೇರೆಯಾಗಿ ತೋರುವ
ನಟನು ಮೂಲತಃ ಒಬ್ಬನೇಯಾಗಿರುವಂತೆ, ಚೈತನ್ಯವು
ತನ್ನ ವಿಕಾಸದಲ್ಲಿ ವಿವಿಧ ರೂಪಗಳನ್ನೂ ವಿವಿಧ ಶಕ್ತಿ
ಗಳನ್ನೂ ಮೈ ಮನಗಳಲ್ಲಿ ಪ್ರಕಟಿಸಿದರೂ ಸ್ವರೂಪದಲ್ಲಿ
ಅದು ಅಖಂಡವಾಗಿದೆ. ಆಧುನಿಕ ಶಿಕ್ಷಣವು ಚೈತನ್ಯದ
ಅಖಂಡತೆಯನ್ನು ಕಂಡುಹಿಡಿದಿದೆ. ಅನೈಕ್ಯದಲ್ಲಿ ಐಕ್ಯತೆ
ಯನ್ನೂ, ವಿವಿಧತೆಯಲ್ಲಿ ಏಕರೂಪತೆಯನ್ನೂ ಸಾಧಿಸುವದು
ಸನಾತನ ಧರ್ಮದ ತಿರುಳಾದಂತೆ ಮಗುವಿನ ಚೈತನ್ಯದ
ಸ್ವರೂಪವೂ ಇದೇ ರೀತಿಯಾಗಿರುವದು.

ಇದೇ ರೀತಿಯಾಗಿ ತನ್ನ ಕಾರ್ಯ ನಡೆಯಿಸುವದು ಈ
ಅಖಂಡತೆಗೆ ಹೊಂದಿಕೊಂಡು ಮಗುವಿನ ವಿವಿಧ ಶಕ್ತಿಗಳ
ಸರ್ವತೋಮುಖವಾದ, ಪರಿಪೂರ್ಣವಾದ ವಿಕಾಸವನ್ನು
ಸಾಧಿಸುವದೇ ಅಖಂಡ ಶಿಕ್ಷಣದ ಗುರಿಯಾಗಿದೆ.

ಯೋಜನಾ ಪದ್ಧತಿ

ಲೇ: ಶ್ರೀ. ಆರ್. ಎಲ್. ಪಾಟೀಲ, ಬಿ. ಎಸ್‌ಸಿ., ಬಿ. ಎ., ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ವ್ಯಕ್ತಿಗೆ ನಮ್ಮ ಶಾಲೆಗಳಲ್ಲಿ ಕಲಿಸುವ ಪದ್ಧತಿಯೆಂ ೀ ಕಳೆದ ಶತಮಾನದಿಂದ ನಡೆದು ಬಂದ ವರ್ಗಪದ್ಧ ಯು. ತುಸು ಹೆಚ್ಚು ಕಡಿಮೆ ಒಂದೇ ವಯಸ್ಸಿನ ಹುಡು ರನ್ನು ಒಂದು ಕಡೆಗೆ ಕೂಡಿಸಿ ನೇಕಾಪತ್ರಿಕೆಯ ಪ್ರಕಾರ ಂದೊಂದು ತಾಸು ಹರ್ಬರ್ಟನ ಐದು ಮೆಟ್ಟಿಲ ಗಳಿಗನುಸ ಿ ಸಾಗಿಸುತ್ತ ಹೋಗುವದು. ಈ ಪದ್ಧತಿಯಲ್ಲಿ ಅನೇಕ ೂೀಷಗಳಿವೆ. ವರ್ಗ ಪದ್ಧತಿಯಿಂದ ಕಲಿಸುವಾಗ ನಾವು ಲ್ಲ ಬಾಲಕರನ್ನು ಒಂದೇ ಮಾಪಿನಿಂದ ಅಳೆಯುತ್ತೇವೆ ೃಕ್ತಿ ವ್ಯಕ್ತಿಗಳಲ್ಲಿರುವ ಭೇದಗಳನ್ನು ನಾವು ಅಷ್ಟು ಲಕ್ಷಕ್ಕೆ ರುವದಿಲ್ಲ. ಮಾನಸಶಾಸ್ತ್ರದ ಬೆಳವಣಿಗೆಯಾದಹಾಗೆ ವರ್ಗ ಪದ್ಧತಿಯಲ್ಲಿಯ ದೋಷಗಳು ಹೆಚ್ಚು ಬೆಳಕಿಗೆ ರಹತ್ತಿವೆ. ಆದ್ದರಿಂದ ಶಿಕ್ಷಣ ತಜ್ಞರು ಅನೇಕ ಹೊಸ ದ್ಧತಿಗಳನ್ನು ತೋರಿಸಿಕೊಟ್ಟಿದ್ದಾರೆ. ಮೊಂಟೇಸರಿ, ಕೆಂಡ ಗಾರ್ಟನ್, ಡಾಲ್ಟನ್ ಮತ್ತು ಯೋಜನಾ ಪದ್ಧತಿ ುಂತಾದ ನೂತನ ಪದ್ಧತಿಗಳಲ್ಲಿ ವರ್ಗಶಿಕ್ಷಣಕ್ಕೆ ಮತ್ತು ೀಳಾಪತ್ರಿಕೆಗೆ ಅಷ್ಟು ಪ್ರಾಧಾನ್ಯವಿಲ್ಲ.

ವರ್ಗಪದ್ಧತಿಯಲ್ಲಿ ಬಾಲಕರ ಅವಧಾನವನ್ನು ವಿಷಯದ ಕಡೆಗೆ ಎಳೆದುಕೊಳ್ಳುವದು ಶಿಕ್ಷಕನಿಗೆ ಒಂದು ಸಮಸ್ಯೆಯಾ ುದೆ. ಶಿಕ್ಷಣ ಕಾರ್ಯದಲ್ಲಿ ಮಗುವು ಶಿಕ್ಷಕನ ಕೂಡ ಸಹಕ ರಿಸದೆ ಇದ್ದರೆ ಯಾವ ಶಿಕ್ಷಣವೂ ಯಶಸ್ವಿಯಾಗಲಾರದು; ಶಿಕ್ಷಕನ ಶ್ರಮವೆಲ್ಲಾ ವ್ಯರ್ಥವಾಗುವದು. ಮಗುವಿನಲ್ಲಿ ಕಾನು ಕಲಿಯಬೇಕೆಂಬ ಪ್ರಬಲವಾದ ಇಚ್ಛೆಯನ್ನು ಹುಟ್ಟಿ ಸಬೇಕು. ಈ ಇಚ್ಛೆಯಿಂದ ಅವನಿಗೆ ಕಲಿಯುವ ಪಾಠವಲ್ಲ ಿ ಸಕ್ತಿ ಹುಟ್ಟಿಬರುತ್ತದೆ. ಆಸಕ್ತಿ ಇದ್ದಲ್ಲಿ ಅವಧಾನ ಇರು ತ್ತದೆ. ಮಗುವಿನ ಎಲ್ಲ ವರ್ತನೆಗಳ ಉದ್ದೇಶಪೂರಿತ ುತ್ತು ಪ್ರವೃತ್ತಿಪರವಾಗಿರುತ್ತವೆ. ಆದ್ದರಿಂದ ಶಿಕ್ಷಕನು ಮಗುವಿನ ಮುಂದೆ ಕಲಿಯನ ಉದ್ದೇಶವನ್ನು ಇಡಬೇಕು. ಮತ್ತು ಈ ಕಲಿಯುವಿಕೆಯು ಪ್ರವೃತ್ತಿಪರವಾಗಿರಬೇಕು. ಚಿಕ್ಕ ಮಕ್ಕಳಲ್ಲಿ ಪ್ರಬಲವಾದ ವೃತ್ತಿ-ಪ್ರವೃತ್ತಿಗಳೆಂದರೆ ಕ್ರೀಡಾವೃತ್ತಿ ಮತ್ತು ಉತ್ಪಾದನ ಪ್ರವೃತ್ತಿ. ಮಗುವು ಸುಮ್ಮನೇ ಕೂಡ್ರುವದಿಲ್ಲ. ಆದರೆ ಯಾವಾಗಲೂ ಯಾವ ದಾದರೊಂದು ಚಟುವಟಿಕೆಯಲ್ಲಿ ತೊಡಗಿರುತ್ತದೆ. ಮಗು ವನ್ನು ಯೋಗ್ಯ ಚಟುವಟಿಕೆಯಲ್ಲಿ ತೊಡಗುವಂತೆ ಮಾಡು ವದು ಶಿಕ್ಷಕನ ಕರ್ತವ್ಯವಾಗಿವೆ. ಪಾಠವೆಂದರೆ ಮಕ್ಕಳಿಗೆ ಆಟವಾಗಿರಬೇಕು. ಸ್ವಯಂಪ್ರೇರಣೆಯಿಂದ ತೊಡಗಿದ ಯಾವ ಚಟುವಟಿಕೆಯಾದರೂ ಮಕ್ಕಳಿಗೆ ಆಟವಾಗುವದು. ಕೃತಿ ಪ್ರಾಧಾನ್ಯವಾದ ಯೋಜನೆ ಪದ್ಧತಿಯಲ್ಲಿ ಈ ಉದ್ದೆ ಶವು ಕೈಗೂಡಿದೆ. ನಾವು ತಯಾರಿಸಿದ ಅಭ್ಯಾಸ ಕ್ರಮಕ್ಕೆ ಮಗುವು ಹೊಂದಿಕೊಳ್ಳುವಂತೆ ಮಾಡುವದರ ಬದಲಾಗಿ ಮಗುವಿಗೆ ಹೊಂದುವಂಥ ಶಿಕ್ಷಣ ಕ್ರಮವನ್ನು ರಚಿಸಲಾ ಗಿವೆ.

ನ್ಯೂಯಾರ್ಕದ ಕೋಲಂಬಿಯ ವಿಶ್ವವಿದ್ಯಾಲಯದ ಡಾ.॥ ಕಿಲ್‌ಪಾಟ್ರಿಕ್ ಇವರು ಈ ಪದ್ಧತಿಯ ಜನಕರು. ಅನೇಕ ವಿಷಯಗಳನ್ನೊಳಗೊಂಡ ಒಂದು ಅಭ್ಯಾಸ ಪತ್ರಿಕೆ ಯ ನ್ನು ತಯಾರಿಸಿ ಅದನ್ನು ಮಗುವಿಗೆ ಕಲಿಸಹೋದರೆ ಮಗುವು ಅದರಲ್ಲಿ ಆಸ್ಥೆ ವಹಿಸುವ ಸಂಭವವು ಕಡಿಮೆ. ಮಗುವಿಗೆ ಆ ವಿಷಯವನ್ನು ಯಾಕೆ ಅಭ್ಯಾಸಮಾಡಬೇ ಕೆಂಬುದು ತಿಳಿಯುವದಿಲ್ಲ. ಕಲಿಯದಿದ್ದರೆ ಮುಂದೆ ಹೀಗ್ಯಾ ಗುತ್ತದೆ ಕಲಿತರೆ ಹೀಗಾಗುತ್ತದೆ ಎಂಬ ದೂರದರ್ಶಿತ್ವವನ್ನ ಮಗುವಿನಲ್ಲಿರುವದಿಲ್ಲ. ಮಗುವು ತೀಕ್ಷ್ಣ ತೃಪ್ತಿ ಹೊಂದಲೇ ಚ್ಛಿಸುತ್ತದೆ. ಮಗುವು ಕಲಿಯುವ ನಿಯಮಗಳನ್ನು ಥಾರ್ನ ಡಾಯಕನು ಕಂಡುಹಿಡಿದಂತೆ ಕೆಳಗೆ ಕಾಣಿಸಿವೆ.

೧) ಸನ್ನಾಹ ನಿಯಮ:— ವ್ಯಕ್ತಿಯು ಕಲಿಯಲಿಕೆ ತಯಾರ ಆದಾಗ ಮತ್ತು ಒಂದು ಉದ್ದೇಶವನ್ನು ನಿರವೇರಿ

ಇಚ್ಛಿಸುವಾಗ ಕಲಿಯುವಿಕೆಯು ನಡೆಯುತ್ತದೆ. ಸಮಯದಲ್ಲಿ ವರ್ತನೆಯಿಂದ ವ್ಯಕ್ತಿಗೆ ಸಮಾಧಾನ ತ್ತದೆ; ವರ್ತಿಸದಿದ್ದರೆ ಖೇದವಾಗುತ್ತದೆ.

ಪರಿಣಾಮ ನಿಯಮ:— ವರ್ತನೆಯ ಪರಿಣಾ ಕಲಿಯುವಿಕೆಯಮೇಲೆ ಆಗುತ್ತದೆ. ವರ್ತನೆಯಿಂದ ಾದರೆ ಕಲಿಯುವಿಕೆಯು ಬಲಗೊಳ್ಳುತ್ತದೆ. ದುಃಖ ಿ ಅದು ಮಂದವಾಗುತ್ತದೆ.

ಅಭ್ಯಾಸ ನಿಯಮ:— ಮಾಡುತ್ತ ಕಲಿಯುವದು. ನಿಯಮಗಳಿಗ ನುಸರಿಸಿ ಶಿಕ್ಷಣವು ಸಾಗಬೇಕು.

ವು ತಯಾರಿಸಿದ ಅಭ್ಯಾಸ ಪತ್ರಿಕೆಯು ಮಗುವಿನ ಕ್ಕೆ ಮತ್ತು ಅವನ ಆಸಕ್ತಿ ಅವಶ್ಯಕತೆಗಳಿಗೆ ಸರಿ ುವದಿಲ್ಲ. ಈ ಕಾರಣದಿಂದ ಈ ನಿಯಮಗಳ ಪ್ರಕಾರ ಲ್ಲಿ ಮಗುವಿನ ಆಸಕ್ತಿಯನ್ನು ಹುಟ್ಟಿಸುವದು ಕಠಿಣ ತ್ತದೆ. ನಾವು ಯಾವ ಉದ್ದೇಶವನ್ನು ಈಡೇರಿಸಬೇ ಯೇ ಆದರಲ್ಲಿ ಸ್ವಾಭಾವಿಕವಾಗಿ ನಮ್ಮ ಆಸ್ಥೆ ಹುಟ್ಟು ನಾವು ಒಂದು ಮನೆಯನ್ನು ಕಟ್ಟಬೇಕಾದರೆ ಪ್ರಕಾರ ಕಟ್ಟಗೆ, ಕಲ್ಲು, ಇಟ್ಟಂಗಿ, ಅವುಗಳ ಬೆಲೆ, ರ, ಮನೆಯ ಸುತ್ತಲಿನ ವಾತಾವರಣ, ಮನೆಯಲ್ಲಿ ಾಡುವಿಕೆ ಮುಂತಾದ ಸಂಗತಿಗಳಲ್ಲಿ ಸ್ವಾಭಾವಿಕ ನಮ್ಮ ಆಸ್ಥೆ ಯುಂಟಾಗುತ್ತದೆ. ಇದೇ ತತ್ವವನ್ನು ಮಗುವಿಗೂ ಹಚ್ಚಬಹುದು. ಯಾವದಾದರೊಂದು ಶವನ್ನು ಈಡೇರಿಸುವದಕ್ಕಾಗಿ ಕೆಲವು ವಿಷಯಗಳ ಮಾಡಿಕೊಳ್ಳುವದು ಅವಶ್ಯವಿದೆಯೆಂದು ಮಗುವಿಗೆ , ಆ ವಿಷಯಗಳ ಬಗ್ಗೆ ಮಗುವಿನಲ್ಲಿ ತಂತಾನಾಗಿಯೆ ಉಂಟಾಗುತ್ತದೆ. ಮಗುವಿಗೆ ತೋಟದಲ್ಲಿ ಕಾಯಿ ಿಳೆಯಬೇಕೆಂಬ ಇಚ್ಛೆ ಉಂಟಾದರೆ, ನೆಲವನ್ನು ಅಗಿ ದು ಮಗುವಿಗೆ ಒಂದು ಆಟವಾಗುವದು. ಇದೇ ು ಶಿಕ್ಷಕನಿಂದ ಒತ್ತಾಯವಾಗಿ ಮಾಡಲು ಹಚ್ಚಲ್ಪ ಆದು ಒಂದು ಕಠಿಣ ಕೆಲಸವಾಗುವದು.

ಗುವಿಗೆ ಒಂದು ಕಾಗದದ ಪಾಕೀಟು ಮಾಡಬೇಕಾ ಂದು ತಿಳಿಯುವಾ. ಅವನು ಪಾಕೀಟು ಮಾಡಲಾ ದ ಕೂಡಲೆ ಕೆಲವು ಭೂಮಿತಿ ಆಕೃತಿಗಳು ಮತ್ತು ಗಳು ಇವುಗಳ ಬಗ್ಗೆ ಜ್ಞಾನ ಅವಶ್ಯವಿದೆಯೆಂದು ಅವುಗಳನ್ನು ಕಲಿಯಬೇಕೆಂಬ ಇಚ್ಛೆ ಅವನಿಗೆ ಉಂಟಾಗುತ್ತದೆ. ಪಾಕೀಟಿಗೆ ಕಾಗದ ಮತ್ತು ಹಚ್ಚಲಿಕ್ಕೆ ಅಂಟು ಬೇಕಾಗುತ್ತವೆಯಾದ್ದರಿಂದ ಅವುಗಳನ್ನು ಜೇಗೆ ದೊರಕಿಸಬೇಕೆಂಬ ಬಗ್ಗೆಯೂ ಅವನು ವಿಚಾರಿಸಬೇಕಾಗು ತ್ತದೆ. ಹೀಗೆ ಅವನ ಉದ್ದೇಶವು ಅವನ ಕೃತಿಗಳಿಗೆ ಚಾಲ ನೆಯನ್ನು ಕೊಡುತ್ತದೆ. ಕೆಲಸವು ಸ್ವಯಂ ಪ್ರೇರಿತವಾದ್ದ ರಿಂದ ಮತ್ತು ಉದ್ದೇಶಪೂರಿತವಾದ್ದರಿಂದ ಅಂತರ್ ಆಸಕ್ತಿ ಉಂಟಾಗಿ ಮಗುವು ಸುಲಭವಾಗಿ ಕಲಿಯುತ್ತದೆ. ಈ ಕೆಲ ಸವು ಅವನ ಜೀವನಕ್ಕೆ ಸಂಬಂಧಿಸಿರುವದರಿಂದ ಅದರ ಉಪಯೋಗವು ಅವನಿಗೆ ತಿಳಿಯುತ್ತದೆ. ಶಿಕ್ಷಕನು ಹೇಳಿದ ಕೆಲಸವನ್ನು ಮಗುವು ಯಾಂತ್ರಿಕವಾಗಿ ಮಾಡುವದರ ಬದ ಲು ಮಗುವಿನ ಉದ್ದೇಶ ಮತ್ತು ಆವಶ್ಯಕತೆಗಳಿಗನುಸರಿಸಿ ಶಿಕ್ಷಣ ಸಾಗಿದರೆ ಅದು ಸುಗಮವಾಗಿಯೂ, ಸುಲಭವಾ ಗಿಯೂ ಸಾಗುವದು. ಈ ರೀತಿಯಿಂದ ಮಗುವಿನ ಉತ್ಪಾ ದನ ಅಂತರಿಚ್ಛೆಯನ್ನು ಉಪ ಯೋ ಗ ಮಾ ಡಿ ಕೊಂ ಡು ಆದನ್ನು ಶಿಕ್ಷಣವೆಂಬ ಬಂಡಿಗೆ ಹೂಡುವದೇ ಯೋಜನಾ ಪದ್ಧತಿಯ ಮೂಲ ತತ್ವವಾಗಿದೆ.

ಯೊಜನಾ ಪದ್ಧತಿಯು ಬರೇ ಒಂದು ವಿಷಯವನ್ನು ಕಲಿಸುವ ಪದ್ಧತಿಯಲ್ಲಿ. ಅದು ಮಗುವಿನ ಕಡೆಗೆ ನೋಡುವ ಹೊಸ ದೃಷ್ಟಿ ಮತ್ತು ಮಗುವಿಗೆ ಹೇಗೆ ಜೀವನಸೌಕೆಯ ನ್ನು ಸಾಗಿಸಬೇಕೆಂದು ತೋರಿಸಿಕೊಡುವ ಒಂದು ಹಾದಿ. ಮಗುವಿನ ಭಾವೀ ಜಿವನದ ಪೂರ್ವ ತಯಾರಿ ಅಷ್ಟೇ ಅಲ್ಲದೆ, ಶಾಲೆಯ ಶಿಕ್ಷಣವೇ ಒಂದು ಜೀವನವಾಗುವದು. ಇದರಿಂದ ಮಗುವು ತನ್ನ ಶಿಕ್ಷಣವನ್ನು ತಾನೇ ಸಾಗಿಸಿ ದಂತಾಗುತ್ತದೆ. ಮಗುವಿಗೆ ತನ್ನ ಇಚ್ಛೆಯನ್ನು ವ್ಯಕ್ತಪಡಿ ಸಲಿಕ್ಕೂ, ಸಮಾಜದ ಸಂಗಡ ವರ್ತಿಸಲಿಕ್ಕೂ ಅವಕಾಶ ಸಿಗುತ್ತದೆ. ಇದಲ್ಲದೆ, ಕೈಕೆಲಸದಲ್ಲಿ ಕುಶಲತೆಯನ್ನೂ ಪಡೆ ಯುತ್ತದೆ.

ಯೋಜನಾ ಪದ್ಧತಿಯ ವ್ಯಾಖ್ಯೆಯನ್ನು ಡಾ|| ಕಿಲ್‌ಪಾ ಟ್ರಿಕ್ ಇವರು ಹೀಗೆ ಹೇಳಿದ್ದಾರೆ—"ಸಾಮಾಜಿಕ ಸನ್ನಿವೇ ಶಗಳಲ್ಲಿ ನಡೆಯುವ, ಪೂರ್ಣ ಮನಸ್ಸಿನಿಂದ ತೊಡಗಿದ, ಉದ್ದೇಶ ಪೂರಿತ ಚಟುವಟಿಕೆ." ಸ್ಟ್ರೀಹ್ಲಸ್ಸನ್‌ನ ವ್ಯಾಖ್ಯೆ ಯಂತೆ "ಸ್ವಾಭಾವಿಕ ಸನ್ನಿವೇಶಗಳಲ್ಲಿ ಪೂರ್ಣತೆಗೆ ಒಯ್ಯು ವ ಒಂದು ಸಮಸ್ಯೆಯುತ ಚಟುವಟಿಕೆ." ಚಟುವಟಿಕೆಯು ಮಾನಸಿಕ, ಯಾಂತ್ರಿಕ ಅಥವಾ ರಚನಾತ್ಮಕವಾಗಿರಬಹುದು ಇಲ್ಲವೆ ಇವುಗಳ ಸಮ್ಮಿಶ್ರಣವಾಗಿರಬಹುದು. ಆದರೆ ಅದು ಮಗುವಿನ ಜೀವನಕ್ಕೆ ಸಂಬಂಧಪಟ್ಟುದು ಇರಬೇಕು.

ಮತ್ತು ಸ್ವಾಭಾವಿಕ ಸನ್ನಿವೇಶಗಳಲ್ಲಿ ಪೂರ್ಣತೆಗೆ ಒಯ್ಯಬೇಕು. ಯೋಜನಾ ಪದ್ಧತಿಯೆಂದರೆ ಕಲಿತ ಜ್ಞಾನವನ್ನು ಅಥವಾ ತತ್ವವನ್ನು ಉಪಯೋಗವಾಗುವವಲ್ಲ- ಆದರೆ ಮಗುವು ಮಾಡುತ್ತಲೇ ಹೊಸ ಜ್ಞಾನವನ್ನು ಪಡೆಯುವದು. ಸ್ವಾಭಾವಿಕ ಸನ್ನಿವೇಶಗಳಲ್ಲಿ ಚಟುವಟಿಕೆ ಸಾಗಿಸಬೇಕೆಂದರೆ ಯೋಜನೆಯು ಕೆಲವೊಂದು ಭಾಗವನ್ನು ಶಾಲೆಯ ಕೋಣೆಗಳ ಹೊರಗೆ ಸಾಗಿಸಬೇಕಾಗುತ್ತದೆ. ಈ ಪದ್ಧತಿಯು ನಮ್ಮ ವರ್ಗ ಪದ್ಧತಿಯಲ್ಲಿಯ ವೇಳಾಪತ್ರಿಕೆಯನ್ನು ಬದಿಗಿರಿಸುತ್ತದೆ. ಒಂದು ಯೋಜನೆಯನ್ನು ಮಗುವು ಪೂರ್ತಿಗೊಳಿಸುವಾಗ ಅನೇಕ ವಿಷಯಗಳ ಜ್ಞಾನವನ್ನು ಮಾಡಿಕೊಳ್ಳಬೇಕಾಗುವದರಿಂದ ವಿಷಯಾನುಬಂಧ ತತ್ವವು ಸ್ವಾಭಾವಿಕವಾಗಿ ಬರುತ್ತದೆ.

ಯೋಜನಾ ಪದ್ಧತಿಯಂತೆ ಕೊಡುವ ಪಾಠಗಳಲ್ಲಿ ನಾಲ್ಕು ಮೆಟ್ಟಿಲುಗಳಿರುತ್ತವೆ. (೧) ಉದ್ದೇಶ ಪೂರೈಕೆ (೨) ಚಟುವಟಿಕೆಯ ಪೂರ್ವಯೋಜನೆ (೩) ಯೋಜನೆಯಂತೆ ಕಾರ್ಯ ಸಾಗಿಸುವದು (೪) ಮಾಡಿದ ಕಾರ್ಯದ ಪರಿಶೀಲನೆ ಅಥವಾ ಪರಿಣಾಮದ ಅವಲೋಕನ.

ಶಾಲೆಯಲ್ಲಿ ತೆಗೆದುಕೊಳ್ಳಬಹುದಾದ ಕೆಲವು ಯೋಜನೆಗಳನ್ನು ಇಲ್ಲಿ ಕೊಟ್ಟಿದೆ.

ಸಂಭಾಷಣೆ ಅಥವಾ ನಾಟಕ, ಪ್ರವಾಸ ಮತ್ತು ಸಂದರ್ಶನ, ಮಾಸ ಪತ್ರಿಕೆ ಹೊರಡಿಸುವದು, ಶಾಲೆಯ ತೋಟ ಮತ್ತು ದವಾಖಾನೆ ನಡೆಯಿಸುವದು, ಬೇರೆ ಬೇರೆ ಆಟಗಳಿಗಾಗಿ ಶಾಲೆಯ ಕ್ರೀಡಾಂಗಣವನ್ನು ತಯಾರಿಸುವದು, ಶಾಲೆಯ ಕೋಣೆಗಳಿಗೆ ಸುಣ್ಣ ಹಚ್ಚುವದು, ಆಯಾತ ನಿರ್ಯಾತ, ಉಷ್ಣತಾಮಾನ, ಪರ್ಜನ್ಯಮಾನ ಇವುಗಳ ಗ್ರಾಫ ತೆಗೆಯುವದು, ಭೂಗೋಲದ ಮಾಡೆಲ್ ಮಾಡಿಸುವದು, ಚಿತ್ರಗಳ ಸಂಗ್ರಹ, ವಸ್ತು ಸಂಗ್ರಹಾಲಯ, ವಾಚನಾಲಯ, ಸಹಕಾರಿ ಸಂಘ ನಡೆಯಿಸುವದು, ಹಳ್ಳಿಯ ಜನರಿಗಾಗಿ ಮನರಂಜನೆಯ ಕಾರ್ಯಕ್ರಮಗಳು, ಹಳ್ಳಿಯಲ್ಲಿ ಸಾಂಸರ್ಗಿಕ ರೋಗಗಳ ಪ್ರತಿಬಂಧಕ ಉಪಾಯಗಳನ್ನು ಕೈಕೊಳ್ಳುವದು, ಹಳೇ ಕಾಲದ ನಾಣ್ಯ ಮತ್ತು ಕುರುಹುಗಳನ್ನು ಸಂಗ್ರಹಿಸುವದು, ಹಳ್ಳಿಯ ಖಾನೆಸುಮಾರಿ ಮತ್ತು ಹಳ್ಳಿಗೆ ಸಂಬಂಧಿಸಿದ ಇತರ ಸಂಗತಿಗಳನ್ನು ಸಂಗ್ರಹಿಸುವದು, ಶಾಲೆಯ ಕೋಣೆಗಳನ್ನು ಶೃಂಗರಿಸುವದು, ಕೋಳಿ ಸೆಂಗೋಪನ, ಶಾಲೆಯಲ್ಲಿ ವಿದ್ಯುತ್ತಿನ ಗಂಟೆಯನ್ನು ಕೂಡ್ರಿಸುವದು ಮುಂತಾದವು.

ಮೊದಲು ಶಿಕ್ಷಕನು ಮಕ್ಕಳ ಕೂಡ ಸಂಭಾಷಣೆ ಮಾಡತ್ತಿರುವಾಗ ಮಕ್ಕಳು ಇಂಥ ಕಾರ್ಯವನ್ನು ಮಾಡಬೇಕೆಂಬ ಸೂಚನೆಯನ್ನು ತರುತ್ತಾರೆ. ಉದಾ: ಶನೇ ವರ್ಗದವರು ನೋಡುತ್ತಿರುವಾಗ ಕೆಲವು ಹುಡುಗರ ಪುಸ್ತಕಗಳು ಹರಿದದ್ದು ಕಂಡುಬರುತ್ತದೆ. ಇದರಿಂದ ಅವುಗಳನ್ನು ಬಾಯಿಡಿಗ್ ಮಾಡಬೇಕೆಂಬ ಸೂಚನೆ ಬರುತ್ತದೆ. ಇದರ ನಂತರವಾಗಿ ಅವಶ್ಯಕ ಸಾಧನಗಳನ್ನು ಪೇಟೆಯಿಂದ ತರಬೇಕಾಗುತ್ತದೆ. ಸಾಧನಗಳನ್ನು ಅಳತೆ ಮಾಡುವದು ಮತ್ತು ತಕ್ಕ ವಿಭಾಗಗಳನ್ನಾಗಿ ಮಾಡುವದು ಅವಶ್ಯವಿರುತ್ತವೆ. ಇವುಗಳಲ್ಲಿ ಗಣಿತ, ಬರಹ ಸ್ವಾಭಾವಿಕವಾಗಿ ಬರುತ್ತವೆ. ಒಂದೊಂದು ಯೋಜನೆಯಲ್ಲಿ ಒಂದೊಂದು ವಿಷಯ ಹೆಚ್ಚಾಗಿ ಬರುತ್ತದೆ.

ಯೋಜನಾ ಪದ್ಧತಿಯು ಯಾವದೊಂದು ವಿಷಯವನ್ನು ಕಲಿಸುವ ಪದ್ಧತಿಯನ್ನು ಸೂಚಿಸುವದಿಲ್ಲ. ಆದರೆ ವಿಷಯಗಳನ್ನು ಕಲಿಯಲಿಕ್ಕೆ ಇಚ್ಛೆಯನ್ನು ಹುಟ್ಟಿಸುತ್ತ ವಿಷಯಗಳನ್ನು ಯಾವದೇ ಪದ್ಧತಿಯಿಂದ ಕಲಿಸಬಹುದು.

ಯೋಜನಾ ಪದ್ಧತಿಯ ಲೋಪ-ದೋಷಗಳು

ಮಕ್ಕಳ ಇಚ್ಛೆಯಂತೆ ನಾವು ಚಟುವಟಿಕೆಗಳನ್ನು ಸಾಗಿಸುತ್ತ ಹೋದರೆ ಅವರಿಗೆ ದೊರೆಯುವ ಜ್ಞಾನದಲ್ಲಿ ಅನೇಕ ಛಿದ್ರಗಳು ಬೀಳುವವು. ಅಂದರೆ ಅವರ ಭಾವೀ ಜೀವನದಲ್ಲಿ ಉಪಯೋಗ ಬೀಳಬಹುದಾದ ಅನೇಕ ಸಂಗತಿಗಳನ್ನು ಅವರು ಕಲಿಯದೆ ಹೋಗಬಹುದು. ಹಳೇ ಅಭ್ಯಾಸ ಪತ್ರಿಕೆಯಂತೆ ಅವರ ಪ್ರಗತಿಯನ್ನು ಪರೀಕ್ಷಿಸಿದರೆ, ಕೆಲವು ವಿಷಯಗಳಲ್ಲಿ ಹಿಂದೆ ಮತ್ತು ಕೆಲವು ವಿಷಯಗಳಲ್ಲಿ ಮುಂದೆ ಇದ್ದದ್ದು ಕಂಡುಬರುತ್ತದೆ. ಪ್ರಗತಿಯು ಸಮನಾಗಿರುವದಿಲ್ಲ. ಆದರೆ ಹೀಗಾಗಗೊಡುವದು ಸರಿಯಲ್ಲ. ಮಗುವಿನ ಭಾವೀ ಜೀವನದಲ್ಲಿ ಅವಶ್ಯವಾಗಿ ಬೇಕಾದ ಜ್ಞಾನವನ್ನು ಕೊಡದೆ ಹೋದರೆ ಅವರು ಇತರರಿಗಿಂತ ಹಿಂದೆ ಬೀಳುವದು ಸಹಜ. ಈ ಆವಶ್ಯಕ ಜ್ಞಾನ ಶಾಲೆಯ ಹೊರತು ಮನೆಯಲ್ಲಿ ಅಥವಾ ಸಮಾಜದೊರೆಯಲಿಕ್ಕಿಲ್ಲ. ಆದ್ದರಿಂದ ಶಿಕ್ಷಕನೂ ಶಾಲೆಯ ಸಮಾಜದ ಒಬ್ಬ ಮೆಂಬರನಾಗಿರುವದರಿಂದ ತನ್ನ ಭವಗಳನ್ನು ಈ ಸಮಾಜಕ್ಕೆ ಒದಗಿಸುವದು ಅವಶ್ಯವತ್ತದೆ ಮತ್ತು ಮಕ್ಕಳು ಶಿಕ್ಷಕನ ಸೂಚನೆಯನ್ನು ಸಾರೆ ಅನುಸರಿಸಬೇಕಾಗುತ್ತದೆ. ಶಿಕ್ಷಕನ ಸಹಾಯ ಮಕ್ಕಳು ಹೆಚ್ಚು ವಿಷಯಗಳನ್ನು ಕಲಿಯಲಿಕ್ಕೆ ಯೆ

ಾದ ಯೋಜನೆಗಳನ್ನು ಆರಿಸಿಕೊಳ್ಳಬಹುದು. ಆದರೆ ಎಲ್ಲ ವಿಷಯಗಳನ್ನು ಯೋಜನೆಗಳ ಮುಖಾಂತರ ಸಾಗಿಸುವದು ಸಾಧ್ಯವಾಗುವದಿಲ್ಲ. ಇಂಥ ಪ್ರಸಂಗಗಳಲ್ಲಿ ಸಾದಾ ಪದ್ಧತಿಯಿಂದ ಅಥವಾ ಇಡೀ ವರ್ಷದಲ್ಲಿ ಬೇರೆ ಬೇರೆ ಯೋಜನೆಗಳಿಂದ ಈ ಛಿದ್ರಗಳನ್ನು ತುಂಬಿಕೊಳ್ಳಬಹುದು. ಒಂದು ಯೋಜನೆಯಲ್ಲಿ ಅಥವಾ ಒಂದು ವಾರದಲ್ಲಿ ಎಲ್ಲ ವಿಷಯಗಳು ಸಮನಾಗಿ ಸಾಗಲಿಕ್ಕಿಲ್ಲ. ಆದರೆ ಇಡೀ ವರ್ಷದಲ್ಲಿ ಅಷ್ಟು ವಿಷಯವನ್ನು ಕಲಿಸಲು ಸಾಧ್ಯವಾಗಬಹುದು.

ಯೋಜನಾ ಪದ್ಧತಿಯಂತೆ ಶಿಕ್ಷಣ ಸಾಗಿಸಬೇಕಾದರೆ ಒಂದು ವರ್ಗಕ್ಕೆ ಒಬ್ಬನೇ ಶಿಕ್ಷಕನು ಕಲಿಸಬೇಕಾಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಇದೇ ಪದ್ಧತಿ ಇರುವದರಿಂದ ಈ ಪದ್ಧತಿಯಂತೆ ಶಿಕ್ಷಣ ಸಾಗಿಸಲಿಕ್ಕೆ ಏನೂ ಕಠಿಣವೆನಿಸುವದಿಲ್ಲ. ಆದರೆ ಒಬ್ಬ ಶಿಕ್ಷಕನಿಗೆ ಒಂದು ಕಾಲಕ್ಕೆ ೫೫ ಹುಡುಗರಿಗಿಂತ ಹೆಚ್ಚಿಗಿರಬಾರದು; ಯಾಕಂದರೆ ಒಂದು ಯೋಜನೆಯಲ್ಲಿ ಎಲ್ಲ ಮಕ್ಕಳೂ ಭಾಗವಹಿಸುವಂತೆ ಶಿಕ್ಷಕನು ನೋಡಿಕೊಳ್ಳಬೇಕಾಗುತ್ತದೆ. ಮತ್ತು ವೈಯಕ್ತಿಕ ಸಹಾಯ ಸಲ್ಲಿಸಬೇಕಾಗುತ್ತದೆ.

ಒಂದು ಯೋಜನೆಯಲ್ಲಿ ಬಹಳ ವಿಷಯಗಳನ್ನು ತರಬೇಕೆಂದು ತಿಳಿದು ಶಿಕ್ಷಕನು ಮೂಲ ಯೋಜನೆಗೆ ಸಂಬಂಧವಿರದ ಅನೇಕ ವಿಷಯಗಳನ್ನು ಅಸ್ವಾಭಾವಿಕವಾಗಿ ಎಳೆದು ತಂದು ಹಚ್ಚಲು ಪ್ರಯತ್ನಿಸುವ ಸಂಭವವಿದೆ. ಶಿಕ್ಷಕನು ಹೀಗಾಗದಂತೆ ನೋಡಿಕೊಳ್ಳುವದವಶ್ಯವಿದೆ. ಅನುಬಂಧಿಸಲು ಬಾರದ ವಿಷಯಗಳನ್ನು ಸಾದಾ ಪದ್ಧತಿಯಿಂದ ಕಲಿಸಬೇಕು. ಉದಾ:— ಸ್ವಾತಂತ್ರ್ಯೋತ್ಸವಕ್ಕಾಗಿ ಕಾಗದದ ರಾಷ್ಟ್ರಧ್ವಜವನ್ನು ತಯಾರಿಸುವ ಯೋಜನೆಯಲ್ಲಿ ಕಾಗದವನ್ನು ಭಾಗ ಮಾಡುವಾಗ ಅಪೂರ್ಣಾಂಕಗಳ ಕಲ್ಪನೆ ಮಾಡಿಕೊಡುವದು ಸ್ವಾಭಾವಿಕ. ಆದರೆ ರಟ್ಟಿನ ಕೆಲಸವೆಂದು ರಟ್ಟಿನ ತಕ್ಕಡಿಯನ್ನು ಮಾಡಿಸಿ ನಂತರ ಮಂಗವು ಜೊಕ್ಕಗಳಿಗೆ ಬೆಣ್ಣೆಯನ್ನು ಹಂಚಿಕೊಟ್ಟ ಕಥೆಯನ್ನು ಹೇಳುವದು ಅಸ್ವಾಭಾವಿಕವಾದುದು.

ಯೋಜನಾ ಪದ್ಧತಿಯಲ್ಲಿ ರೂಢಿ ಕೆಲಸಕ್ಕೆ ಮತ್ತು ಆವರ್ತನೆಗೆ ಅಷ್ಟು ಅವಕಾಶವಿಲ್ಲ. ಈ ಕೊರತೆಯನ್ನು ಸಾದಾ ಪದ್ಧತಿಯಿಂದ ತುಂಬಿಕೊಳ್ಳಬಹುದು.

ಎಲ್ಲ ಹೊಸ ಪದ್ಧತಿಗಳಂತೆ ಯೋಜನಾ ಪದ್ಧತಿಗಾದರೂ ಯೋಗ್ಯ ಶಿಕ್ಷಕರು ಬೇಕಾಗುತ್ತಾರೆ. ಶಿಕ್ಷಕನಲ್ಲಿ ಕುಶಲತೆ, ಕಲಿಯಬೇಕೆಂಬ ಹಂಬಲ, ವಿಚಾರಶಕ್ತಿ ಇವು ಅವಶ್ಯವಾಗಿ ಬೇಕು. ಶಾಲೆಯಲ್ಲಿ ತೆಗೆದುಕೊಳ್ಳಬಹುದಾದ ಎಲ್ಲ ಯೋಜನೆಗಳನ್ನು ತಯಾರಿಸಿ ಅವುಗಳ ಸಂಗಡ ವಿಷಯಗಳನ್ನು ಹೇಗೆ ಅನುಬಂಧಿಸಬೇಕೆಂದು ತೋರಿಸಿಕೊಡುವದು ಸಾಧ್ಯವಿಲ್ಲ. ಒಂದು ವರ್ಷ ತೆಗೆದುಕೊಂಡ ಯೋಜನೆಯನ್ನು ಮುಂದಿನ ವರ್ಷ ಶಿಕ್ಷಕನು ತನ್ನ ಅನುಭವದಿಂದ ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಯೋಜನೆಗಳು ಪರಿಸ್ಥಿತಿಯ ಮೇಲೆ ಬದಲಾಗುತ್ತವೆ.

ಶಾಲೆಗಳಲ್ಲಿ ಯೋಜನಾ ಪದ್ಧತಿಯಂತೆ ಕಲಿಸಬೇಕಾದರೆ ಈಗಿನ ಶಾಲೆಗಳಿಗೆ ತಮ್ಮ ಅಭ್ಯಾಸಕ್ರಮವನ್ನು ರಚಿಸಲಿಕ್ಕೆ ಹೆಚ್ಚು ಸ್ವಾತಂತ್ರ್ಯ ಕೊಡಬೇಕಾಗುತ್ತದೆ. ಎಲ್ಲ ಶಾಲೆಗಳಲ್ಲಿಯೂ ಒಂದೇ ರೀತಿಯಿಂದ ವಿಷಯ ಸಾಗಿಸಬೇಕೆಂಬ ಸರಕಾರದ ಬಿಗಿಯಾದ ನಿಯಂತ್ರಣವು ಶಿಕ್ಷಕನ ಮತ್ತು ಶಾಲೆಯ ಸಂಚಾಲಕರ ಉತ್ಸಾಹಕ್ಕೆ ಅವಕಾಶ ಕೊಡುವದಿಲ್ಲ. ಇವಲ್ಲದೆ ಈಗಿನ ಪರೀಕ್ಷಾ ಪದ್ಧತಿಗಳಲ್ಲಿಯೂ ಬದಲಾವಣೆಯನ್ನು ಮಾಡಬೇಕಾಗುತ್ತದೆ. ಸದ್ಯದ ಪರೀಕ್ಷೆಗಳೆಂದರೆ ಬರೀ ಪಾಠ ಮಾಡಿದ ವಿಷಯಗಳನ್ನು ಒಂದು ದಿವಸ ೨-೩ ತಾಸುಗಳಲ್ಲಿ ವಾಂತಿ ಮಾಡಿಕೊಳ್ಳುವದಿರುತ್ತದೆ. ಅಂದರೆ ಬರೀ ಪಾಠ ಮಾಡಲಿಕ್ಕೆ ಅವಕಾಶ ಕೊಡುತ್ತವೆ. ಮಗುವಿನಲ್ಲಿ ಕೇವಲ ಅನುಕರಣ ಶಕ್ತಿ ಬೆಳೆಯುತ್ತದೆ— ಆದರೆ ಅವನಲ್ಲಿರುವ ಉತ್ಪಾದನ ಶಕ್ತಿಯ ಬೆಳವಣಿಗೆಗೆ ಮತ್ತು ಶೀಲ ಸಂವರ್ಧನೆಗೆ ಅವಕಾಶ ಸಿಗುವದಿಲ್ಲ.

ಶಾಲೆಯಲ್ಲಿ ಅನೇಕ ಯೋಜನೆಗಳನ್ನು ತೆಗೆದುಕೊಳ್ಳಬೇಕಾದರೆ ಕೆಲವು ಉಪಕರಣಗಳು ಅವಶ್ಯವಾಗಿ ಬೇಕಾಗುತ್ತವೆ. ಇದಕ್ಕೆ ತಗಲುವ ವೆಚ್ಚವು ಬಹಳವಾಗಬಹುದು. ಆದರೆ ಮಕ್ಕಳಿಂದ ಉತ್ಪಾದಿತ ವಸ್ತುಗಳನ್ನು ಮಾರುವದರಿಂದ ಅಷ್ಟು ಉತ್ಪನ್ನವು ಹೊರಡಬಹುದು.

ಈ ಹೊಸ ಯೋಜನೆಯನ್ನು ಒಮ್ಮೆಲೆ ಎಲ್ಲ ಶಾಲೆಗಳಲ್ಲಿ ತರಲಿಕ್ಕೆ ಪ್ರಯತ್ನಿಸಬಾರದು. ಮೊದಲು ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಈ ಶೈಕ್ಷಣಿಕ ಪ್ರಯೋಗಗಳು ನಡೆಯಬೇಕು. ಪ್ರಾಕ್ಟೀಸಿಂಗ ಸ್ಕೂಲುಗಳೆಂದರೆ ಪ್ರಯೋಗ ಶಾಲೆಗಳಾಗಿರಬೇಕು. ಈ ಪ್ರಯೋಗಗಳನ್ನು ಮಾಡುವದಕ್ಕಾಗಿ ಯೋಗ್ಯ ಶಿಕ್ಷಕರನ್ನು ಆದೇ ಕೆಲಸಕ್ಕಾಗಿ ಅನೇಕ ವರ್ಷಗಳವರೆಗೆ ನಿಯಮಿಸುವದು ಅವಶ್ಯವಿರುತ್ತದೆ. ಹಿಂದುಸ್ಥಾನದಲ್ಲಿ ಶೈಕ್ಷಣಿಕ ಬದಲಾವಣೆಗಳೇನೋ ನಡೆದಿವೆ. ಆದರೆ ಅವುಗಳ ಬಗ್ಗೆ ಪ್ರಯೋಗಾತ್ಮಕ ಶೋಧಗಳು ಹೆಚ್ಚು ನಡೆದಿಲ್ಲ. ಈ ದಿಶೆಯಲ್ಲಿ ಪ್ರಗತಿಯನ್ನು ಸಾಧಿಸುವದು ಅತ್ಯವಶ್ಯಕವಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ ಪ್ರೌಢ ಶಿಕ್ಷಣದ ಸ್ಥಾನ

ಲೇಖಕರು: ಶ್ರೀ. ಪಿ. ಎ. ಗುಡಿಸಾಗರ, ಬಿ ಎ ಬಿ. ಟಿ. ಅಸಿಸ್ಟೆಂಟ್ ಆಫೀಸರ, ಡಿ. ಎಸ್. ಬಿ. ವಿಜಾಪ

[೫—೧೧—೪೮ನೆಯ ದಿನ ವಿಜಾಪುರ ಅಗ್ರಿಕಲ್ಚರ ಹೈಸ್ಕೂಲದಲ್ಲಿ ಜರುಗಿದ ಪ್ರೌಢ ಶಿಕ್ಷಣ ತರಬೇತಿ ವರ್ಗದಲ್ಲಿ ಮಾಡಿದ ಭಾಷಣ.]

ನಮ್ಮ ದೇಶದಲ್ಲಿ ನೂರಕ್ಕೆ ೮೫ ರಷ್ಟು ಜನರು ನಿರಕ್ಷರಿಗಳಾಗಿದ್ದಾರೆ. ಅಂದಮೇಲೆ ಪ್ರೌಢಶಿಕ್ಷಣದ ಮಹತ್ವವನ್ನು ಒತ್ತಿ ಹೇಳುವುದೆಂದರೆ, ಅನವಶ್ಯಕವಾದ ಮಾತೇಸರಿ. ಪ್ರೌಢಶಿಕ್ಷಣದ ಬಗೆಗೆ ಎಷ್ಟೋಜನರು ತಪ್ಪು ಕಲ್ಪನೆಯಲ್ಲಿದ್ದಾರೆ. ಪ್ರೌಢಶಿಕ್ಷಣವೆಂದರೆ ಒತ್ತಾಯ ಶಿಕ್ಷಣದ ಪೂರಕ ಶಿಕ್ಷಣವೆಂದೂ, ಅಕ್ಷರಜ್ಞಾನವನ್ನು ಮಾಡಿಸುವದರಿಂದ ಈ ಶಿಕ್ಷಣದ ಕೆಲಸವು ಮುಗಿಯಿತೆಂದೂ ಕೆಲವರ ಗ್ರಹಿಕೆ ಇದೆ.

ಪ್ರೌಢಶಿಕ್ಷಣದ ಧ್ಯೇಯವು ನಾಗರಿಕತೆಯು. ಪ್ರೌಢ ವಯಸ್ಕನು ಸಮಾಜದಲ್ಲಿ ತನ್ನ ಸ್ಥಾನವು ಎಲ್ಲಿ ಇದೆ? ತಾನು ಮಾಡತಕ್ಕ ಪ್ರಯತ್ನಗಳಾವವು? ತನಗೆ ಮತಕೊಡುವ ಅಧಿಕಾರವಿರುವುದರಿಂದ ತಾನು ಯಾರಿಗೆ ಮತಕೊಡತಕ್ಕದ್ದು? ಉತ್ತಮ ನಾಗರಿಕನ ಲಕ್ಷಣಗಳಾವವು? ಎಂಬುದನ್ನು ಅರಿತಿರಬೇಕು. ಒಟ್ಟಿನಮೇಲೆ, ಅಕ್ಷರ ಜ್ಞಾನ ಪಡೆಯುವದೇ ಧ್ಯೇಯವಾಗಿರದೆ ತಾನು ಪಡೆದ ಅಕ್ಷರ ಜ್ಞಾನವನ್ನು ಅರ್ಥಾತ್ ಓದುಬರೆಹವನ್ನು, ತನ್ನ ಹಕ್ಕು ಬಾಧ್ಯತೆಗಳನ್ನು, ತಿಳಿಯಲು ಮತ್ತು ತಾನು ಸಮಾಜದಲ್ಲಿ ಮಾಡತಕ್ಕ ಕರ್ತವ್ಯದಲ್ಲಿ ಚ್ಯುತಿಹೊಂದದಿರುವುದೇ ಪ್ರೌಢವಯಸ್ಕರ ಲಕ್ಷಣಗಳು.

ಹಿಂದುಸ್ಥಾನದಲ್ಲಿ ಸದ್ಯಕ್ಕೆ ಪ್ರೌಢನಿಗೆ ಓದುಬರೆಹ ಕಲಿಸುವುದೆಂದೇ, ವಾಡಿಕೆಯಾಗಿದೆ. ಈ ಗ್ರಹಿಕೆಯು ತಪ್ಪಾಗಿರಬಹುದು. ಆದರೆ ನಮ್ಮದೇಶದ ನಿರಕ್ಷರತೆಯ ಮಾನದಿಂದ ನಾವು ಹೀಗೆ ತಿಳಿಯುವುದು ತಪ್ಪಾಗಲಿಕ್ಕಿಲ್ಲ. ಕೂಸು ಓಡಲಿಕ್ಕೆ ಕಲಿಯುವ ಮೊದಲೇ ಅಡ್ಡಾಡಲು ಕಲಿಯಬೇಕಲ್ಲವೇ? ಪ್ರೌಢಶಿಕ್ಷಣವು ಪ್ರಾಥಮಿಕ ಶಿಕ್ಷಣಕ್ಕೆ ಪೂರಕವಾಗಿರಬೇಕೆನ್ನುವ ಮಾತು ನಿಜ. ಏಕೆಂದರೆ ಕ್ಷರಿ ಪಾಲಕರು ಒತ್ತಾಯದ ಪ್ರಾಥಮಿಕ ಶಿಕ್ಷಣದ ಯೊನೆಗೆ ಅನೇಕ ತೊಂದರೆಗಳನ್ನೊಡ್ಡುವರು. ಪ್ರೌಢಶಿಕ್ಷಣ ಓದು, ಬರೆಹ, ಗಣಿತ ವಿಷಯಗಳನ್ನೊಳಗೊಂಡಿರುಲ್ಲದೆ, ಸಾಂಸ್ಕೃತಿಕ ಮತ್ತು ಔದ್ಯೋಗಿಕ ಶಿಕ್ಷಣವನ್ನೊಂಡಿರಬೇಕು. ನಾವು ಪ್ರೌಢರಿಗೆ ಕೊಡತಕ್ಕ ಶಿಕ್ಷಣ ನಿರಂತರವಾಗಿ ಉಳಿಯುವ ಯೋಜನೆಯನ್ನು ಕೈಕೆಬೇಕು.

ನಾವು ಈ ಶಿಕ್ಷಣದಲ್ಲಿ ಪ್ರೌಢರ ಉದ್ಯೋಗದ ಮಾಕೆಲವು ಸಾಮಾನ್ಯ ಮಾಹಿತಿ, ನಾಗರಿಕಶಾಸ್ತ್ರ, ಇತಿಆರಂಭದ ಅರ್ಥ ಶಾಸ್ತ್ರ, ಭೂಗೋಲ, ಆರೋಗ್ಯಶಾನೊದಲಾದ ವಿಷಯಗಳು ಅಡಕವಾಗಿರುವಂತೆ ನೊಕೊಳ್ಳತಕ್ಕದ್ದು.

ಮೊಟ್ಟಮೊದಲು ನಮ್ಮ ದೇಶದಲ್ಲಿ ೧೯೩೮ನೆಯ ಇಯಲ್ಲಿ ಪ್ರೌಢ ಶಿಕ್ಷಣದ ಸ್ಥಾಂತಿಕ ಕಮೀಟಿಗಳು ನಿಯಲ್ಪಟ್ಟವು. ಬೇರೆ ಬೇರೆ ಪ್ರಾಂತಗಳು ಬೇರೆ ಬೇರೆ ಸ್ಸನ್ನು ನಿರ್ದಿಷ್ಟಪಡಿಸಿರುತ್ತಿವೆ.

ಪ್ರಾಂತಗಳು.	ವಯೋಮಾನ
ಬಂಗಾಲ	೧೦—೪೦
ಬಿಹಾರ	೧೫—೪೦
ಮುಂಬಯಿ	೧೪—೫೦
ಚೀನ ದೇಶದಲ್ಲಿ	೧೬—೫೦

ವಯಸ್ಸಿನ ಪ್ರೌಢರಿಗೆ ಶಿಕ್ಷಣ ಕೊಡಬೇಕೆಂದು ಗೆಮಾಡಿರುತ್ತದೆ. ಹೀಗೆ ಭಿನ್ನತೆಯು ತೋರುತ್ತಿದ್ದೆಳಂ ವಯಸ್ಸು ಮಿಕ್ಕಿದ ಪ್ರೌಢನಿಗೆಶಿಕ್ಷಣ ಕೊಡುವುದ

ಶಿಕ್ಷಣ ಕ್ಷೇತ್ರದಲ್ಲಿ ಪ್ರೌಢ ಶಿಕ್ಷಣದ ಸ್ಥಾನ

ಹಳ ಪ್ರಯೋಜನವಾಗುವುದಿಲ್ಲವೆಂದು ನಮ್ಮ ಸಾಮಾನ್ಯ ತ. ಹೆಣ್ಣು ಪ್ರೌಢರಿಗೂ, ಗಂಡು ಪ್ರೌಢರಿಗೂ, ಬೇರೆ ೀರೆ ಕ್ಲಾಸುಗಳಿರತಕ್ಕದ್ದು.

೧೯೩೦ ನೆಯ ಇಸವಿಯಿಂದ ೧೯೪೦ ನೆಯ ಇಸವಿಯ ರೆಗೆ ಪ್ರೌಢಶಿಕ್ಷಣದ ಪ್ರಗತಿಯು ಸಮಾಧಾನಕಾರಕವಾ ದೆಯೆಂದು, ಎಲ್ಲರು ಒಪ್ಪುತ್ತಾರೆ. ೧೯೩೦ ರಲ್ಲಿ ೮. ೩ ದ್ದ ಸಾಕ್ಷರತೆಯು ೧೯೪೦ರಲ್ಲಿ ೧೪.೬ ಆಯಿತು. ಈ ಕ್ಷರತೆಯ ಪರಿಣಾಮವನ್ನು ನಾವು ಇಟ್ಟುಕೊಂಡರೂ, ೀ ದೇಶದ ಪ್ರೌಢರನ್ನೇ ನಾವು ಸಾಕ್ಷರಿಗಳನ್ನಾಗಿ ಮಾಡ ೇಕಾದರೆ, ೧೪೦ ವರುಷಗಳು ಬೇಕಾಗುತ್ತವೆ. ಇದಲ್ಲದೆ ೀಗೆ ಪ್ರಗತಿಯಾಗಬೇಕಾದರೆ, ಒತ್ತಾಯ ಶಿಕ್ಷಣವನ್ನಂತೂ ವು ಚಿಕ್ಕ ಮಕ್ಕಳಿಗೆ ಇಡಲೇಬೇಕು. ಅಂದಮೇಲೆ ು ವರುಷದ ಮೇಲೆ ವಯಸ್ಕರಾದ ಪ್ರೌಢರು ಯಾವ ರೂ ನಮ್ಮ ದೇಶದಲ್ಲಿ ಇಲ್ಲದಂತಾಗಬೇಕೋ ಹೇಗೆ?

ನಮ್ಮ ದೇಶದಲ್ಲಿ ಪ್ರೌಢ ಶಿಕ್ಷಣವನ್ನು ಕಡ್ಡಾಯವಾಗಿ ವುದು ಅತಿ ಕಠಿಣ ಕೆಲಸವೇ ಸರಿ. ನಮ್ಮದು ಬಡ ಪು, ಶಿಕ್ಷಕರಿಲ್ಲ, ಸರಕಾರದ ಬೊಕ್ಕಸದಲ್ಲಿ ಠೊಕ್ಕವಿಲ್ಲ. ತಹ ಪರಿಸ್ಥಿತಿಯಲ್ಲಿ ಸಹ ಇದ್ದ ಶಿಕ್ಷಕರನ್ನು ಪ್ರೌಢ ಶಿಕ್ಷ ನ ತರಬೇತಿಯಲ್ಲಿ ತಯಾರಿಸಬೇಕಾಗಿದೆ. ಇದು ಆಸಾ ವೋ? ಸುಸಾಧ್ಯವೋ?

ಚಿಕ್ಕ ಮಕ್ಕಳನ್ನು ತರಬೇತಿ ಮಾಡುವುದು ಸುಲಭವಾದ ರ್ಯ. ಪ್ರೌಢರನ್ನು ನಮ್ಮ ಕ್ಲಾಸುಗಳಲ್ಲಿ ಕೆಲಹೊತ್ತು ಳವಂತೆ ಮಾಡುವುದು ದುಸ್ತರ. ಶಿಕ್ಷಕರು ಕಲಿಯುವ ಶ ಸ್ವಲ್ಪ ನಿರಸವೆಂದು, ಅಥವಾ ತಮಗೆ ಅಯೋಗ್ಯ ದು ಕಂಡರೆ ನಾಕು, ಕ್ಲಾಸಿನಲ್ಲಿ ಅವರು ನಿಲ್ಲುವುದೇ ಣ. ಶಿಕ್ಷಕನು ಮಾಹಿತಿಯನ್ನು ಸಂಗ್ರಹಿಸಬೇಕಾಗು ಮೆ. ಕಲಿಸುವ ರೀತಿಯು ಮನೋರಂಜನೆಯನ್ನುಂಟು ಡುವಂತಹದಿರಬೇಕು. ಆತನು ಪ್ರೌಢರ ಮನಒಲಿಸಿ, ಹುರುಪು ಕೊಟ್ಟು ಅವರ ಚಿತ್ತವನ್ನು ತನ್ನ ವಶದಲ್ಲಿಟ್ಟು ಕೊಳ್ಳುವ ಶಕ್ತಿಯುಳ್ಳವನಾಗಿರಬೇಕಾಗುವುದು. ಆತನಿಗೆ ಅವರೆಲ್ಲರ ಮುಂದಾಳು ಎನ್ನಿಸಿಕೊಳ್ಳುವ ಸಾಮರ್ಥ್ಯವಿರ ಬೇಕಾಗುತ್ತದೆ. ಚಿಕ್ಕ ಮಕ್ಕಳ ಮನಸ್ಸು ತಿಳಿಯಾಗಿ, ನಾವು ಹೇಳಿದ ಸಂಗತಿಯನ್ನು ಗ್ರಹಣ ಮಾಡುವ ಶಕ್ತಿ ಯುಳ್ಳದ್ದಾಗಿರುತ್ತದೆ. ಅದೇ ಪ್ರೌಢರ ಮನಸ್ಸು ಇದ ಕ್ಕಿಂತ ತೀರ ಭಿನ್ನವಾದದ್ದಿರುತ್ತದೆ. ಅದಕ್ಕಾಗಿಯೇ ಶಿಕ್ಷಕನು ಆದರ್ಶಭೂತನಾಗಿಯೂ, ಪ್ರೌಢರ ಸಹಾಯ, ಸಹಾನುಭೂತಿಗಳನ್ನು ಪಡೆದವನಾಗಿಯೂ, ಇರಬೇಕಾಗು ತ್ತದೆ.

ಪ್ರೌಢರು ಪಡೆದ ಶಿಕ್ಷಣವು ಹಾರಿ ಹೋಗಿ ಅವರು ಮತ್ತೆ ಅಜ್ಞಾನಾಂಧಕಾರದಲ್ಲಿ ಮುಳುಗದಂತೆ, ನಾವು ಎಚ್ಚರ ಪಡತಕ್ಕದ್ದು. ಅದಕ್ಕಾಗಿ ನಾವು ಹಳ್ಳಿ ಹಳ್ಳಿಗಳಲ್ಲಿ ವಾಚನಾಲಯದ ಸರಪಳಿಯನ್ನೇ ಜೋಡಿಸಬೇಕಾಗುತ್ತದೆ. ಅವರಿಗೆ ಯೋಗ್ಯವಾದ, ರುಚಿಸುವ, ಪುಸ್ತಕಗಳನ್ನು ಅಲ್ಲಿ ರಿಸಬೇಕು. ಗ್ರಾಮಫೋನ, ವಾಯರಲೆಸ್, ಮ್ಯಾಜಿಕ್ ಲ್ಯಾಂಟರ್ನ ಮುಂತಾದ ಯಾಂತ್ರಿಕ ಶಿಕ್ಷಣ ಸೌಕರ ಗಳನ್ನೂ ನಾವು ಒದಗಿಸಿಕೊಳ್ಳಬೇಕು. ನಮಗೆ ಇದು ಸಾಧ್ಯವಿಲ್ಲದಲ್ಲಿ ಈ ಎಲ್ಲ ವ್ಯವಸ್ಥೆಯು ಸರಕಾರದಿಂದಲಾ ದರೂ ಆಗಬೇಕು. ಮೇಲೆ ಕಾಣಿಸಿರುವ ಕೆಲವು ಸಂಗತಿ ಗಳಿಂದ, ಪ್ರೌಢ ಶಿಕ್ಷಣದ ಮಹತ್ವವು ಎಷ್ಟಿದೆ ಎಂಬು ದನ್ನು ನಾವು ಒತ್ತಿ ಹೇಳಬೇಕಿಲ್ಲ. ಈ ಶಿಕ್ಷಣವು ಗ್ರಾಮ ಸುಧಾರಣೆಯ ಮುಖ್ಯ ಸಾಧನವೂ, ಹಳ್ಳಿಯ ಸಂಸ್ಕೃತಿಯ ಜೀವಾಳವೂ ಆಗಿದೆ. ಈಗಿನ ಕ್ರಾಂತಿ ಕಾಲದಲ್ಲಿ ನಮ್ಮ ಇಪ್ಪತ್ತು ಜನ ಪ್ರೌಢರು ದೇಶಕ್ಕೆ ಭಾರವಾಗಿ, ಇನ್ನೂ ಅಜ್ಞಾನದಲ್ಲಿರುವರೆಂಬುದು ಚಿಂತಾಜನಕವು. ಅಂದಮೇಲೆ ಪ್ರೌಢ ಶಿಕ್ಷಣವು ನಮ್ಮ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಸ್ಥಾನವನ್ನಾವರಿಸಿ ಅದರ ಮುಖ್ಯಾಂಗವಾಗಿರುವುದೆಂಬುದು ನಿರ್ವಿವಾದ ಮಾತು

ಶಿಕ್ಷಣದಲ್ಲಿ ಅನುಬಂಧ

ಲೇಖಕರು:— ಶ್ರೀ. ವಿ. ಬ. ಚವಣ್ಣವರ, ಬಿ. ಎಸ್‌ಸಿ., ಬಿ. ಟಿ.

ಮಗುವು ಶಿಕ್ಷಣಕ್ರಮದಲ್ಲಿ ಅನೇಕ ಅನುಭವಗಳನ್ನು ಪಡೆದು ಅವುಗಳಿಂದ ಜ್ಞಾನವನ್ನು ಸಂಪಾದಿಸುವದು. ಆ ಜ್ಞಾನದ ಸಹಾಯದಿಂದ ತನ್ನಲ್ಲಿಯ ಎಲ್ಲ ಶಕ್ತಿಯನ್ನು ಉಪಯೋಗಿಸಿಕೊಂಡು ಆತ್ಮ ವಿಕಾಸವನ್ನು ಮಾಡಿಕೊಳ್ಳುವದು. ಈ ಕಾರ್ಯವನ್ನು ಸುಲಭ ಸಾಧ್ಯವಾಗುವಂತೆ ಮಾಡಲು ಅನೇಕ ಶಿಕ್ಷಣ ಕ್ರಮಗಳು ಬೆಳೆದು ಬಂದಿವೆ ಈ ಎಲ್ಲ ಶಿಕ್ಷಣಕ್ರಮಗಳು ಒಂದೊಂದು ರೀತಿಯಿಂದ ಭಿನ್ನಭಿನ್ನವಾಗಿದ್ದರೂ ಅವುಗಳಲ್ಲೆಲ್ಲ ಸಾಮಾನ್ಯವಾದ ಹಲಕೆಲವು ಲಕ್ಷಣಗಳುಂಟು. ಉದಾ: ಎಲ್ಲ ಶಿಕ್ಷಣ ಕ್ರಮಗಳಲ್ಲಿ ಮಗುವಿಗೆ ಆಗತಕ್ಕ ಎಲ್ಲ ಅನುಭವಗಳನ್ನು ಜ್ಞಾನವನ್ನು ಒಂದು ಸುವ್ಯವಸ್ಥಿತ ರೀತಿಯಲ್ಲಿ ವಿಂಗಡಿಸಿ ಅವುಗಳನ್ನು ಭಾಷಾ, ಗಣಿತ, ಇತಿಹಾಸ, ಭೂಗೋಲ ಮುಂತಾದ ವಿಷಯಗಳೆಂದು ಕರೆಯುವದು. ಈ ರೀತಿಯ ವಿಷಯಾಟು ಶಿಕ್ಷಣಕ್ರಮವನ್ನು ಸುಗಮಗೊಳಿಸಲಿಕ್ಕೆ ಇರುವದೇ ಹೊರತು ಇದರಿಂದ ಆ ಶಿಕ್ಷಣಕ್ಕೆ ಅಡ್ಡಿಯನ್ನು ತಂದೊಡ್ಡಬಾರದು. ಅದು ಶಿಕ್ಷಣಕ್ಕೆ ಸಾಧಕವಾಗಿರಬೇಕೇ ಹೊರತು ಬಾಧಕವಾಗಿರಕೂಡದು. ನಾವು ಈ ರೀತಿ ಅನುಭವಗಳನ್ನೂ, ಜ್ಞಾನವನ್ನೂ, ವಿಚಾರಗಳನ್ನೂ ವಿಂಗಡಿಸಿದರೂ ಅವು ಮಕ್ಕಳ ಅನುಭವಕ್ಕೆ ಬರುವದು, ಮತ್ತು ಅವುಗಳಿಂದ ಮಕ್ಕಳ ಸಂಸ್ಕರಣವಾಗುವದು, ನಾವು ಅನುಸರಿಸಿದ ತಾತ್ವಿಕ ಕ್ರಮದಲ್ಲಿ ಅಲ್ಲ. ಆದರೆ ಅವುಗಳನ್ನು ಪಡೆಯುವದು ಸ್ವಾಭಾವಿಕ ನೈಸರ್ಗಿಕ ಕ್ರಮದಲ್ಲಿ, ಒಕ್ಕು ಇಲಿಯನ್ನು ಹಿಡಿಯುವ ಕಾರ್ಯದೇ ಮಗುವು ಬೆಕ್ಕಿನ ಬೇಟೆಯಾಡುವ ರೀತಿಯನ್ನೂ, ಇಲಿಯ ಸ್ವಭಾವವನ್ನೂ ಮತ್ತು ಅದು ತಪ್ಪಿಸಿಕೊಳ್ಳುವ ರೀತಿಯನ್ನೂ ಸಾಂಡಿಯೇ ಕಾಣುವದು. ಅವುಗಳ ಜ್ಞಾನವಾದರೂ ಕೂಡಿಯೇ ಆಗುವದು. ಆದರೆ ಬೆಕ್ಕಿನ ಅಭ್ಯಾಸ ಒಬ್ಬಿ ಬೆರೆ. ಇಲಿಯ ಅಭ್ಯಾಸ ಒಬ್ಬಿ ಬೆರೆ ಹೀಗಾಗದಿಲ್ಲ. ಇದರಂತೆಯೇ ಎಲ್ಲ ಅನುಭವವೂ ಜ್ಞಾನವೂ ಸಂವಿಶ್ರ ರೀತಿಯಲ್ಲಿ ಆವದು. ಆದ್ದರಿಂದ ನಮ್ಮ ಶಿಕ್ಷಣಕ್ರಮವನ್ನು ಹೆಚ್ಚು ನೈಸರ್ಗಿಕ, ಹೆಚ್ಚು ಸ್ವಾಭಾವಿಕವಾದದ್ದನ್ನು ಮಾಡಬೇಕಾದರೆ ಮಕ್ಕಳಿಗೆ ಆಗುವ ಅನುಭವಗಳೂ, ಜ್ಞಾನವೂ ಅವರ ಜೀವನದಲ್ಲಿ ಅವು ಸಹಜವಾಗಿ ಬರುವ ಸಂವಿಶ್ರಣ ರೀತಿಯಲ್ಲಿಯೇ ಆಗಬೇಕು. ಮಕ್ಕಳು ಅರಿತುಕೊಳ್ಳಬೇಕಾದುದು, ಮಾಡಬೇಕಾದುದು ಅವರು ತಮ್ಮ ಜೀವನದಲ್ಲಿಂದ ಸ್ವಾಭಾವಿಕವಾಗಿ ಅರಿತುಕೊಳ್ಳಲಿ, ಮಾಡಲಿ ಮತ್ತು ಕಲಿಯಲಿ ಈ ರೀತಿಯ ಶಿಕ್ಷಣದಲ್ಲಿಯ ಚಟುವಟಿಕೆಯೇ ಅನುಬಂಧವು. ಮತ್ತು ಸ್ವಾಭಾವಿಕವಾಗಿ ಕೆಂಡುಬರುವ ಹೊಂದಿಕೆಯನ್ನೂ, ಅಖಂಡತ್ವವನ್ನು ಕಾಯ್ದುಕೊಳ್ಳುವದೇ ಮಹತ್ವದ್ದಾಗಿರುವದು.

ಈಗ ನಾವು ವ್ಯಕ್ತಿಯ ಶಿಕ್ಷಣವು ಸಾಗುವ ಬಗೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಆ ಶಿಕ್ಷಣಕ್ರಮವು ಯೋಗ್ಯವಾಗಿ ಸಾಗಬೇಕಾದ ಮಾರ್ಗದ ಮೇಲೆ ಸಾಕಷ್ಟು ಬೆಳಕು ಬೀಳುವಂತಿದೆ. ಅದರಲ್ಲಿಯೇ ನಮ್ಮ ಶಿಕ್ಷಣ ಮಾರ್ಗದರ್ಶಿಗಳು ಒಡೆದು ಕಾಣುತ್ತವೆ. ಅದು ಹೇಗೆಂದರೆ ಒಂದು ವ್ಯಕ್ತಿಯ ಶಿಕ್ಷಣವೆಂದರೆ, ಆ ವ್ಯಕ್ತಿ ಹಾಗೂ ಆ ಸುತ್ತಲಿರುವ ಸನ್ನಿವೇಶ ಅಥವಾ ಪರಿಸ್ಥಿತಿ (environment) ಇವುಗಳ ನಡುವೆ ಜರಗುವ ಕ್ರಿಯೆ, ಹಾಗೂ ಪ್ರತಿಕ್ರಿಯೆಗಳ ಮೂಲಕ ಆಗುವ ಆ ವ್ಯಕ್ತಿಯ ಸಂಸ್ಕರಣವು. ಆ ಮೇಲೆ ಆ ಪರಿಸ್ಥಿತಿಯೇ, ಆ ಸನ್ನಿವೇಶವೇ ಆ ವ್ಯಕ್ತಿಯ ಸಂಸ್ಕರಣದ ಸ್ವರೂಪವನ್ನು ನಿಶ್ಚಯಿಸುತ್ತದೆ ಆದ್ದರಿಂದ ವ್ಯಕ್ತಿಯು, ತನಗೆ ಮತ್ತು ತನ್ನ ಸಮಾಜಕ್ಕೆ ಹಿತಕರವಾದ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗುವ ಶಕ್ತಿಯನ್ನು ಪಡೆಯಬೇಕಾದರೆ, ಆ ವ್ಯಕ್ತಿಯು ಪಡೆಯುವ ಅನುಭವ ಹಾಗೂ ಜ್ಞಾನ ಅತನ ಸನ್ನಿವೇಶದಲ್ಲಿಯೇ ಅತನ ಜೀವನದಲ್ಲಿಯೇ ಬರುವಂಥವು, ಸತ್ಯವಾದವು ಮತ್ತು ವಾಸ್ತವ

ಾದವು ಇರಬೇಕಾಗುವದು; ಅಷ್ಟೇ ಅಲ್ಲ; ಅವು ತಮ್ಮ ವಾಸ್ತವಿಕವಾದ ಕ್ರಮದಲ್ಲಿಯೇ ಆಗಬೇಕು. ಅನೇಕ ಅನುಭವಗಳ ಜಾಲವೇ ಅಖಂಡವಾಗಿ ಪರಿಣಮಿಸಬೇಕು. ಹಿಲ್ಲದೆ ಅವನ್ನು ವಿಂಗಡಿಸಿ ಅಳವಡಿಸಿದರೆ, ಅವುಗಳ ಪರಿಣಾಮ ನಿಜವಾದ ಜೀವನದ ಸಮಸ್ಯೆಗಳನ್ನು ಬಿಡಿಸಲು ಶಕ್ತವನ್ನಾಗಿ ಮಾಡಲಾರದು. ಕಾರಣ ಶಿಕ್ಷಣವು ಸ್ವಾಭಾವಿಕ, ಅನುಬಂಧಿತ ಕ್ರಮದಲ್ಲಿರಬೇಕೆಂದು ವಾದಿಸುವದು ಸ್ಪಷ್ಟವಾಗಿದೆ.

ಶಿಕ್ಷಣದಲ್ಲಿಯ ಈ ರೀತಿಯ ನೈಸರ್ಗಿಕ ಅನುಬಂಧ (ಒಂದಿಕೆ)ಯನ್ನು ಕುರಿತು ಸಾಮಾನ್ಯವಾಗಿ ವಿವರಿಸಿದ್ದಾಯಿತು. ಆದರೆ ಈ ಅನುಬಂಧನವು ಪ್ರಾಥಮಿಕ ಶಿಕ್ಷಣದ ಪ್ರಂತೂ ಜೀವಾಳವಾಗಿರಬೇಕು. ಉಚ್ಚ ಶಿಕ್ಷಣದಲ್ಲಿ. ಸಾಮಾನ್ಯಜ್ಞಾನಕ್ಕಿಂತ ಯಾವದೊಂದು ಕಲೆ, ಸಾಹಿತ್ಯ ವಿಜ್ಞಾನ ಅಥವಾ ಉದ್ಯೋಗದ ಪರಿಪೂರ್ಣವಾದ ಅಳವಾದ ಜ್ಞಾನಕ್ಕೆ ಮಹತ್ವವಿರುವದು. ಅದರಲ್ಲಿ ವಿದ್ಯಾರ್ಥಿಗಳನ್ನು ಜ್ಞಾನಿಯನ್ನಾಗಿ ಮಾಡಲುದ್ಯುಕ್ತರಾಗಿರುತ್ತೇವೆ. ಆದರೆ ಜನ ಸಾಮಾನ್ಯಕ್ಕೆ ಬೇಕಾಗುವ ಲೌಕಿಕ, ಜೀವನದ ಅತ್ಯವಶ್ಯ ಜ್ಞಾನವನ್ನು ಪ್ರಾಥಮಿಕ ಮಟ್ಟಿಲಿನಲ್ಲಿಯೇ ಸಂಪಾದಿಸಿರುತ್ತಾನೆಂದು ಗ್ರಹಿಸುತ್ತೇವೆ. ಆದ್ದರಿಂದ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಎಲ್ಲ ಅನುಭವ, ಎಲ್ಲ ಜ್ಞಾನ ನಿಜಸ್ವರೂಪವನ್ನು ಪ್ರಾಥಮಿಕ ಶಿಕ್ಷಣದ ಮಟ್ಟದಲ್ಲಿಯೇ ಆಗಬೇಕಾಗಿರುವದು. ಮಕ್ಕಳಿಗೆ ದೊರಕಬೇಕಾದ ನೈತಿಕ ಶಿಕ್ಷಣ ಧಾರ್ಮಿಕ ಶಿಕ್ಷಣ, ರಸಿಕತೆ, ಒಳ್ಳೆಯ ಜಟಿಗಳು ಇವೆಲ್ಲವು ಮಗು ಅಡಿಗಲ್ಲನ್ನು ಪ್ರಾಥಮಿಕ ಶಿಕ್ಷಣದಲ್ಲಿಯೇ ಇಡಬೇಕಾಗಿರುವದು. ಇವಲ್ಲವುಗಳಿಗೆ ಪ್ರಾಥಮಿಕ ಶಿಕ್ಷಣದಲ್ಲಿಯೇ ಪ್ರಾಧಾನ್ಯವಿರುವದು. ಆದರ ಮೇಲಿನ ಶಿಕ್ಷಣದ ಮೆಟ್ಟಿಲು ಗಳಲ್ಲಿ ಇವಕ್ಕೆ ಸ್ಥಾನವಿಲ್ಲವೆಂತಲ್ಲ. ಅವುಗಳಿಗೆ ಅಷ್ಟೊಂದು ಶಿಕ್ಷ ಪೂರೈಸಲು ಸಾಧ್ಯವಿರುವದಿಲ್ಲ. ಕಾರಣ ಇಂಥ ಲೌಕಿಕ ವಾಗೂ ಜೀವನಕ್ಕೆ ಸಂಬಂಧಿಸಿದ ಎಲ್ಲ ಅನುಭವಗಳನ್ನು ಸ್ಥೂಲವಾದ ದೃಷ್ಟಿಯಿಂದ ಪಡೆಯಬೇಕಾದರೆ ಜ್ಞಾನದ ಅಖಂಡತ್ವವನ್ನೂ ಶಿಕ್ಷಣಕ್ರಮದಲ್ಲಿರಬೇಕಾದ ವಾಸ್ತವಿಕತೆಯನ್ನೂ ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚು ಗಮನಿಸಬೇಕಾಗುವದು.

ಈಗಿನ ಶಿಕ್ಷಣದಲ್ಲಿಯ ಪರಿಸ್ಥಿತಿಯನ್ನು ಗಮನಿಸಿದರೆ, ಶಿಕ್ಷಣ ಅಂಗಗಳನ್ನು ವಿಭಜಿಸುತ್ತ ವಿಭಜಿಸುತ್ತ ನಾವು ಅನಿಷ್ಟಕರವಾದ ಅತಿರೇಕಕ್ಕೆ ಹೋಗಿವೆವೆನ್ನಬಹುದು. ಶಿಕ್ಷಣವು ಯಾಂತ್ರಿಕತೆಯಿಂದ ತುಂಬಿ ತುಳುಕುತ್ತಿದೆ. ಅದರಲ್ಲಿ ಸ್ವಾಭಾವಿಕತೆ ಮತ್ತು ವಾಸ್ತವಿಕತೆಗಳಂತೂ ಎಳ್ಳಷ್ಟೂ ಕಂಡುಬರುವದಿಲ್ಲ. ಹೀಗಾಗಿ ಶಿಕ್ಷಣದ ಮೂಲ ಧ್ಯೇಯಕ್ಕೆ ಧಕ್ಕೆ ತರುವಷ್ಟು ಜ್ಞಾನವನ್ನು ವಿಭಜಿಸಿ, ವಿಂಗಡಿಸಿ ಕೊಡುತ್ತಲಿದ್ದೇವೆ. ಅದನ್ನು ಛಿದ್ರಿಸಿ, ಛಿದ್ರಿಸಿ, ಅದರ ಅಂಗಗಳನ್ನು ಪ್ರತ್ಯೇಕವಾಗಿ ಕೊಡುವದು ಶಿಕ್ಷಣದ ಎಲ್ಲ ಮೆಟ್ಟಿಲುಗಳಲ್ಲಿ ಹೆಚ್ಚುತ್ತಲಿದೆ. -ಆ ರೀತಿಯ ಶಿಕ್ಷಣವು ಹೆಚ್ಚಿಗೆ ಜ್ಞಾನ ಸಂಪಾದಿಸಿದ, ವಿಕಾಸಗೊಂದಿದ ಉಚ್ಚ ಶಿಕ್ಷಣ ಪಡೆಯುವ ವ್ಯಕ್ತಿಗೆ ಕೆಲಮಟ್ಟಿಗೆ ಯೋಗ್ಯವಾಗಬಹುದು. ಆಜ್ಞೊಂದು ಮಟ್ಟಿಗೆ ಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಣಗಳ ಮಟ್ಟಗಳಲ್ಲಿ ಯೋಗ್ಯ ಕಂಡುಬರಲಾರದು. ಎಲ್ಲ ವಿಷಯಗಳು ಶಿಕ್ಷಣದಲ್ಲಿ ಸ್ಥಾನವನ್ನು ಪಡೆದದ್ದು ಯೋಗ್ಯವೆಂದು ವಾದಿಸಬಹುದು. ಆದರೆ ಅವುಗಳನ್ನು ತಕ್ಕಮಟ್ಟಿಗೆ ಹಾಗು ಮನಃಕ್ಕೆ ಅವುಗಳ ಉಪಯೋಗ ಚನ್ನಾಗಿ ಆಗುವಂತೆ ಶಿಕ್ಷಣವು ನಾಗಬೇಕು. ಈಗ ವಿಶೇಷವಾಗಿ ಮಾಧ್ಯಮಿಕ ಶಾಲೆಗಳಲ್ಲಿ ಪಡೆಯುವ ಜೀವಜಗಣಿತ, ಭೂಮಿತಿ, ಭೂಗೋಲ, ಚರಿತ್ರೆಯೊಂದು ಭಾಷಾ ವಿಷಯಗಳ ಜ್ಞಾನವು ನಿರುಪಯೋಗವಾದದ್ದು, ನೀರಸವಾದದ್ದು ಆಪೆ. ಮತ್ತು ಆ ಪಡೆಯುವ ಬೇರೆ ಬೇರೆ ಜ್ಞಾನದ ಅಂಗಗಳ ಸಂಬಂಧವನ್ನು ತಿಳಿದುಕೊಳ್ಳಲು ರದಷ್ಟು ಯಾಂತ್ರಿಕವಾಗಿ ಶಿಕ್ಷಣವು ನಾಗಿದೆ. ಅವುಗಳನ್ನು ಜೀವನಕ್ಕೆ ಅಂಟಿಸಿಕೊಂಡು ಉಪಯೋಗಿಸುವ ಮಾತಂತೂ ದೂರೇ ಉಳಿಯಿತು.

ನಮ್ಮ ಶಿಕ್ಷಣದಲ್ಲಿ ಈ ವಿಸ್ಥಿತಿಯುಂಟಾಗಲು ಕಾರಣಗಳಾವವೆಂಬುದನ್ನು ನೋಡೋಣ. ಎಲ್ಲಕ್ಕೂ ಮೊದಲು ಶಿಕ್ಷಣ ಕ್ಷೇತ್ರದಲ್ಲಿಯ ಪರೀಕ್ಷೆಗಳ ದುಷ್ಪರಿಣಾಮವು ಇದಕ್ಕೆ ಕಾರಣ; ಶಿಕ್ಷಣದಲ್ಲಿ ಪ್ರಗತಿಯ ಮಟ್ಟವನ್ನು ಅಳತೆಮಾಡಿಕೊಳ್ಳಲಿಕ್ಕೆ ಕಲ್ಪಿಸಿಕೊಂಡ ಸಾಧನಗಳೇ ಅವರ ಧ್ಯೇಯಕ್ಕೆ ಅಡ್ಡಿಯನ್ನು ಮಾಡುತ್ತಲಿವೆ. ಶಿಕ್ಷಣವೆಂದರೆ ಪರೀಕ್ಷೆಗಳನ್ನು ಪಾಸಾಗುವದು ಎಂಬ ಮಟ್ಟಿಗೆ ಬಂದು ಮುಟ್ಟಿದ್ದೇವೆ. ಪರೀಕ್ಷೆಗಳು—ಅವು ಆದರ್ಶವಿದ್ದಾಗ್ಯೂ ಕೂಡ— ಎಲ್ಲ ಪ್ರಗತಿಯನ್ನೂ ಎಲ್ಲ ವಿಕಾಸವನ್ನೂ ಅಳೆಯಲಾರವು. ಆದ್ದರಿಂದ ಪರೀಕ್ಷೆಯ ಪ್ರಾಧಾನ್ಯವು ನಮ್ಮನ್ನು ಮೋಸಗೊಳಿಸುತ್ತಲಿದೆ. ಅಷ್ಟೇ ಅಲ್ಲ. ಅದು ಅಳೆಯಬಹುದಾದ ಜ್ಞಾನವನ್ನೂ ಕೂಡ ಯಶಸ್ವಿಯಾಗಿ ಅಳೆಯಲಿಕ್ಕೆ ಎಷ್ಟು

ಸಲ ಅಸಾಧ್ಯವಾಗುತ್ತಲಿದೆ. ಅದರಿಂದ ಪರೀಕ್ಷೆಯ ಪ್ರಾಧಾ
ಖ್ಯವಾಗಿ ತಪ್ಪು ಗುರಿಯನ್ನು ಮುಂದಿಟ್ಟುಕೊಂಡು ಶಿಕ್ಷಣವು
ಅನೈಸರ್ಗಿಕ ಕ್ರಮದಲ್ಲಿ ಸಾಗಿದೆ. ಎರಡನೆಯದಾಗಿ ಈಗಿ
ನದು ಯಾಂತ್ರಿಕ ಯುಗವು, ಮುಂದುವರಿದ ಔದ್ಯೋಗಿಕ
ಕಾಲವು, ಮಿಂಚಿನವೇಗದಿಂದ ದಿನದಿನ ಬೆಳೆಯುತ್ತ
ನಡೆದ ವಿಜ್ಞಾನವು ಇವೆಲ್ಲವು ಈ ರೀತಿಯ ದೋಷ ಯುಕ್ತ
ವಾದ ಶಿಕ್ಷಣವನ್ನು ಮತ್ತಿಷ್ಟು ಪುರಸ್ಕರಿಸುತ್ತಲಿವೆ. ಶಿಕ್ಷ
ಣವು ಕೇವಲ ಜೀವನದ ಸಾಧನವಷ್ಟವೆಂಬ ಮಾತನ್ನು
ಲಕ್ಷಕ್ಕೆ ತಂದರೆ ಈ ವಿಷಮ ಪರಿಸ್ಥಿತಿಯ ಪ್ರಭಾವವು
ಅಷ್ಟೊಂದು ಕೆಡಕನ್ನು ಮಾಡಲಾರದು. ಕೊನೆಯದಾಗಿ
ನಾವು ಮಧ್ಯಮಿಕ ಶಿಕ್ಷಣದಲ್ಲಿ ಕಾಲಿಟ್ಟ ಕೂಡಲೆ,ವಿಷಯಕ್ಕೆ
ಒಬ್ಬ ಶಿಕ್ಷಕ, ವಿಷಯದ ಅಂಗ ಹಾಗು ಉಪಾಂಗಗಳಿಗೊ
ಬ್ಬಬ್ಬ ಶಿಕ್ಷಕ, ತಾಸುತಾಸಿಗೆ ಬದಲಾಗುವ ಶಿಕ್ಷಕ, ಈ
ರೀತಿಯ ಗತಿಯನ್ನು ಅನುಭವಿಸಬೇಕಾಗಿದೆ. ಯಾವ
ಶಿಕ್ಷಕನೂ, ಯಾರಿಗೂ ಯಾವ ವಿದ್ಯಾರ್ಥಿಗೂ, ಸಂ
ಪೂರ್ಣವಾಗಿಯಾಗಲಿ ಅಥವಾ ಕೆಲವಷ್ಟಿಗೆ ಆಗಲಿ ಹೊಣೆ
ಗಾರನಾಗಿಲ್ಲ. ಈ ಪದ್ಧತಿಯಲ್ಲಿ ಬೇರೆ ಕೆಲವು ಗುಣಗಳ
ಿದ್ದರೂ, ಜ್ಞಾನದ ಅಖಂಡತ್ವವನ್ನು ನಾಶಮಾಡುವ
ದೋಷವು ಅತಿ ಲಕ್ಷ್ಯ ಪೂರೈಸಲ್ಪಡುವಂಥದು.

ಈ ಎಲ್ಲ ವಿಷಮತೆಗಳನ್ನು ದೂರಮಾಡುವ ಉದ್ದೇ
ಶವು ವರ್ಧಾಶಿಕ್ಷಣ ಯೋಜನೆಯಲ್ಲಿ ಮುಖ್ಯವಾಗಿದೆ. ಅದು
ಶಿಕ್ಷಣವನ್ನು ಅತಿ ನೈಜವಾದ ವಾತಾವರಣದಲ್ಲಿ ಜೀವನದ
ಮುಖಾಂತರವೇ ಕೊಡಬೇಕೆಂದು ಪ್ರತಿಪಾದಿಸುತ್ತದೆ. ಅದ್ಯ
ಜ್ಞಾನದ ಅಖಂಡತ್ವವನ್ನು ಮನ್ನಿಸುತ್ತದೆ. ಆದರೆ ವರ್ಧಾ
ಶಿಕ್ಷಣ ಯೋಜನೆಯಲ್ಲಿಯ ಜ್ಞಾನದ ಅನುಬಂಧಕ್ಕೂ ಇಲ್ಲಿ
ಯವರೆಗೆ ಪ್ರಚಲಿತವಿದ್ದ ಜ್ಞಾನದ ಸಂಬಂಧೀಕರಣಕ್ಕೂ
ಮಹತ್ವದ ವ್ಯತ್ಯಾಸವಿದೆ. ಅದು ಯಾವದೆಂದರೆ ಮೊದಲು
ರೂಢಿಯಲ್ಲಿದ್ದ ಸಂಬಂಧೀಕರಣವೆಂದರೆ ಯಾವ ಯಾವ
ಜ್ಞಾನವು ನೈಸರ್ಗಿಕ ಕ್ರಮದಲ್ಲಿ ಬರವದೋ ಅದನ್ನು ಆ
ಕ್ರಮದಲ್ಲಿ ಅದನ್ನು ಒಂದಕ್ಕೊಂದು ಜೋಡಿಸುತ್ತ ಹೋಗ
ಬೇಕೆಂಬುದು. ಆದರೆ ವರ್ಧಾಶಿಕ್ಷಣ ಕ್ರಮದಲ್ಲಿ ಎಲ್ಲ ಅನು
ಭವಗಳು, ಎಲ್ಲ ಜ್ಞಾನವೂ ಇವೆಲ್ಲವೂ ಕೇಂದ್ರದಲ್ಲಿದ್ದ
ಒಂದು ಚಟುವಟಿಕೆಗೆ ಸಂಬಂಧಿಸಲ್ಪಟ್ಟಿರಬೇಕೆಂಬುದು.
ಮೊದಲಿನ ಶಿಕ್ಷಣದಲ್ಲಿ ಚಟುವಟಿಕೆಗೆ ಸ್ಥಾನವಿದ್ದಿಲ್ಲವೆಂದಲ್ಲ.
ಆದರೆ ಅಲ್ಲ ಎಲ್ಲ ಜ್ಞಾನವೂ ಚಟುವಟಿಕೆಯ ಮುಖಾಂತ
ರವೇ ಆಗಬೇಕೆಂದು ಕಟ್ಟಾಜ್ಞೆಯಿರಲಿಲ್ಲ. ಈಗ ವರ್ಧಾ
ಶಿಕ್ಷಣ ಯೋಜನೆಯಲ್ಲಿ ಕೆಲವೊಂದು ನಾಲ್ಕಾರು ಚಟುವಟಿ
ಕೆಗಳನ್ನು ಕೇಂದ್ರದಲ್ಲಿರಿಸಿಕೊಂಡು ಅಧುನಿಕ ನಾಗರಿಕನಾಗ
ಬೇಕಾಗುವ ಎಲ್ಲ ಅನುಭವಗಳನ್ನೂ ಎಲ್ಲ ಜ್ಞಾನವನ್ನೂ
ಒದಗಿಸಿಕೊಡುವದಕ್ಕಾಗಿ ಹೆಣಗುವದೂ ನಮ್ಮ ಕಲ್ಪಿತ
ಆದರ್ಶ ಸಂಬಂಧೀಕರಣದ ವಿಷಯಾಸವೇ. ಶಿಕ್ಷಣವನ್ನು
ಹೆಚ್ಚು ನೈಸರ್ಗಿಕವನ್ನಾಗಿ ಮಾಡುವೆವೆಂಬ ಹುಮ್ಮಸ್ಸಿನ
ಲ್ಲಿಯೇ ಅನೈಸರ್ಗಿಕ ಸಂಬಂಧೀಕರಣವು ಆಗುವ ಸಂಭವ
ಬಹಳವಿದೆ. ತತ್ವದಲ್ಲಿ, ಜೀವನದಲ್ಲಿ ಬರುವ ಎಲ್ಲ ಚಟು
ವಟಿಕೆಗಳ ಮುಖಾಂತರವೇ ಶಿಕ್ಷಣ ಸಾಗಬೇಕೆಂದು ವಾದಿಸು
ತ್ತಿದ್ದರೂ ಈಗ ಕೃತಿಯಲ್ಲಿರುವ ಕ್ಷೇತ್ರ ಬಹು ಸಂಕುಚಿತ
ವಾಗುವ ಸಂಭವವಿದೆ. ಇಂಥ ಸಂಕುಚಿತ, ಮತ್ತು
ಮರ್ಯಾದಿತ ಚಟುವಟಿಕೆಗಳ ಮುಖಾಂತರ ತಕ್ಕ ಶಿಕ್ಷಣ
ವನ್ನು ಪಡೆಯಲು ಪ್ರಯತ್ನಿಸುವದು ನಿಷ್ಫಲವಾಗಬಹುದು

ಕಡೆಯದಾಗಿ ಈಗ ಹೊಸದಾಗಿ ಬರುತ್ತಿರುವ ಶೈಕ್ಷಣಿಕ
ವಿಚಾರಗಳಲ್ಲಿ ಯೋಗ್ಯ ಸಂಬಂಧೀಕರಣವು ಅತಿಮಹತ್ವದ
ಸ್ಥಾನವನ್ನು ಪಡೆಯುತ್ತಲಿದೆ ಎಂಬುದು ನವ್ಯ ಹೊಸ
ಅಭ್ಯಾಸ ಪತ್ರಿಕೆಯನ್ನು ನೋಡಿದರೆ ಕಂಡುಬರುವದು,
ಅದರಲ್ಲಿ ಚಿಕ್ಕ ಬಾಲಕರಿಗೆ ಅಂದರೆ ೧ ರಿಂದ ೪ ನೆಯ ಇ
ಯತ್ತೆಯವರೆಗೆ ಕೊಡಬೇಕಾದ ಶಿಕ್ಷಣದಲ್ಲಿ ಇನ್ನೊದಲಿನಂತೆ
ಬಹಳ ವಿಷಯಗಳಿರದೆ, ಇದ್ದರೂ ಅವುಗಳನ್ನು ಅನೈಸರ್ಗಿ
ಕವಾಗಿ ವಿಂಗಡಿಸದೆ, ಅವುಗಳಲ್ಲಿಯ ನಿಕಟ ಸಂಬಂಧವನ್ನು
ಕಾಯ್ದುಕೊಳ್ಳುವಂತೆ. ಇತಿಹಾಸ, ಭೂಗೋಲ, ಸಾಮಾನ್ಯ
ವಿಜ್ಞಾನ ಇತ್ಯಾದಿ ವಿಷಯಗಳನ್ನು ಒಟ್ಟುಗೂಡಿಸಿ ಸಾಮಾ
ನ್ಯ ಜ್ಞಾನವೆಂದು ಕರೆದಿರುವರು. ಅಷ್ಟೇ ಅಲ್ಲ, ಪ್ರಾಥಮಿಕ
ಶಿಕ್ಷಣವು ಮುಂದಿನ ದೋಷಯುಕ್ತವಾದ ಮಾಧ್ಯಮಿಕ
ಹಾಗೂ ಉಚ್ಚ ಶಿಕ್ಷಣಗಳ ಬೇಕುಬೇಡಗಳನ್ನು ಲಕ್ಷಿಸದೆ
ಸ್ವಯಂಪರಿಪೂರ್ಣವಾಗುವಂತೆ ಅವರ ಅಭ್ಯಾಸ ಪತ್ರಿಕೆಯು
ರಚಿತವಾದುದು ಪ್ರಶಂಶನೀಯವಾಗಿದೆ. ಇಂಥ ಅಭ್ಯಾಸ
ಪತ್ರಿಕೆಯಲ್ಲಿಯ ಕಲ್ಪಿತ ಉದ್ದೇಶವನ್ನು ಅರಿತುಕೊಂಡು
ನವ್ಯ ಶಿಕ್ಷಕರು ಶಿಕ್ಷಣವು ಹೇಗೆ ಅಖಂಡವಾಗಿರಬೇಕೆಂಬು
ದನ್ನು ಮನಗಾಣಬೇಕು.

ಗ್ರಾಮವಾಸಿಗೆ ಶಿಕ್ಷಣ

ಬರೆದವರು:— ಶ್ರೀ. ಕೆ. ಜಿ. ಸೈಯದೈನ

ಅನುವಾದಕರು:— ವೆಂಕಟೇಶ ಪಾಗಾ, ಶಿಕ್ಷಕರು, ಪ್ರೌ. ಸ್ಕೂ. ಧಾರವಾಡ.

ಭಾರತದ ಗ್ರಾಮವಾಸಿಯ ಶಿಕ್ಷಣ ಕುರಿತು ಚರ್ಚಿಸುವುದು ಎಲ್ಲೆಮೀರಿದ ಕೆಲಸ. ಈಗ ನಾನು ಅಪನ್ನು ನಿರ್ವಹಿಸುವಂತಿಲ್ಲವಾದುದರಿಂದ ಈ ಕೆಲ ಪುಟಗಳಲ್ಲಿ ನಾನು ನಸ್ತುಸ್ಥಿತಿಯಲ್ಲಿಯ ಕೆಲ ಮುಖ್ಯ ಲಕ್ಷಣಗಳಿಗೆ ಮಾತ್ರ ಚಿಂಟಿಕೊಳ್ಳುವೆನು. ಏಕೆಂದರೆ ಅವುಗಳನ್ನು ಅರಿಯದೆ ಪಳ್ಳಿಗಳ ಪಾಲಿಗೆ ಶಿಕ್ಷಣವು ಕಳೆದ ಒಂದೂವರೆ ಶತಮಾನ ನಲ್ಲಿಯಂತೆ ಬತ್ತಿದ ಪ್ರವಾಹವಾಗಿಯೇ ಉಳಿಯುವುದು.

ಭಾರತದ ಗ್ರಾಮವಿಭಾಗವು ನಿರಕ್ಷರತೆಯಲ್ಲಿ ಅಗ್ರಗಣ್ಯ ನಾಗಿದೆ. ಹಾಗು ಈ ನಿರಕ್ಷರತೆಯನ್ನು ದೂರೀಕರಿಸುವುದು ಅನಿವಾರ್ಯವಾದ ಅವಶ್ಯಕತೆಯಾಗಿದೆ. ಆದರೆ ಪ್ರತಿಶತ ೩೦ ಬಾಲಕರಿಗೆ ತೀರ ಅಲ್ಪಾವಧಿಯ ವರೆಗೆ ಮಾತ್ರ ಕೊಡಲ್ಪಡುತ್ತಿರುವ ಅತ್ಯಲ್ಪವಾದ ಮತ್ತು ಅತೃಪ್ತಿಕರವಾದ ರೀತಿಯ ಸ್ವಸಂತೋಷದಿಂದ ನಡೆದ ಪ್ರಾಥಮಿಕ ಶಿಕ್ಷಣಪದ್ಧತಿಯಿಂದ ಈ ನಿರಕ್ಷರತೆಯು ದೂರವಾಗಲಾರದು. ಈ ಪದ್ಧತಿಯು ಅತ್ಯಲ್ಪನಾಗಿರುವುದರಿಂದ ಮತ್ತು ಅತೃಪ್ತಿಕರವಾಗಿರುವುದರಿಂದ ಜನತೆಯ ಅಭಿರುಚಿಯನ್ನಾಗಲಿ ಭಾವನೆಯನ್ನಾಗಲಿ ತಟ್ಟಲಾರದು; ಸ್ವಪ್ರೇರಿತವಾಗಿರುವುದರಿಂದ ಬಾಲಸಮೂಹದ ಬಹುಭಾಗಕ್ಕೆ ಇದು ತಲುಪುವುದಿಲ್ಲ ಕೂಡ; ಮತ್ತು ಅತ್ಯಲ್ಪಾವಧಿಯ ವರೆಗೆ ಮಾತ್ರ ದೊರೆಯುವುದರಿಂದ (ಪ್ರತಿಶತ ೫೦ ಬಾಲಕರಿಗೆ ಎರಡು ವರುಷಗಳ ವರೆಗೆ ಕೂಡ ದೊರೆಯುವದಿಲ್ಲ,) ಪರಿಣಾಮಕಾರಿಯಾದ, ತೃಪ್ತಿಕರವಾದ ಹಾಗು ಸ್ಥಿರವಾದ ಸಾಕ್ಷರತೆಯನ್ನು ಇದು ಈಯಲಾರದು. ಇನ್ನು ಯೋಗ್ಯವಾದ ಸಾಮಾಜಿಕ ನೈತಿಕ ಹಾಗು ಪೌರನೈತಿಕ ಶಿಕ್ಷಣವನ್ನೀಯುವದಂತೂ ದೂರದ ಮಾತಾಯಿತು. ವಸ್ತುಸ್ಥಿತಿಯ ಸಂಗತಿಗಳ ಸರಳ ಒಳಗೆಯ ಪರಿಚಯವಿಲ್ಲದ ಹಾಗು ದೃಷ್ಟಿಕೋನವಿಲ್ಲದ ಶಿಕ್ಷಣಕ್ರಮದಿಂದ ತೃಪ್ತಿಕರ ಕಾರ್ಯವಾಗಲಾರದೆಂಬುದು ಸಾಧಾರಣವಾಗಿ ನಿರ್ಣಯವಾದಂತೆಯೇ ಆಗಲಿಲ್ಲವೇ?

ಉಪಾಯ: ಉಪಾಯವೇನು ? ಉತ್ತರವು ಕೊಡ ಕ್ಕೇನೋ ಸ್ಪಷ್ಟವೂ ಸರಳವೂ ಆಗಿದೆ. ಆದರೆ ಆ ಕ್ರಮ ದಂತೆ ನಡೆವುದು ಆಡುವಷ್ಟು ಸುಲುಭವಾಗಿಲ್ಲ. ಹಿಂದಿ ಹಳ್ಳಿಗರನ್ನು —ಕೋಟಿಗಟ್ಟಲೆ ಹಳ್ಳಿಗರನ್ನು— ಸುಶಿಕ್ಷಿತ ನ್ನಾಗಿ ಮಾಡುವುದಕ್ಕೆ ರಾಷ್ಟ್ರದ ಉದ್ದಗಲಕ್ಕೂ ಪಸರಿಸಿ ಹುದಾದ, ತೃಪ್ತಿಕರವಾದ ಮತ್ತು ಶಕ್ಯವಿದ್ದಷ್ಟು ತೀವ್ರ ಆರಂಭಿಸಬೇಕಾದ ಒತ್ತಾಯ ಶಿಕ್ಷಣದ ವಿನಃ ಅನ್ಯ ಮಾರ್ ವಿಲ್ಲ. ಒತ್ತಾಯದಿಂದ ಪಾಲಕರಿಗೆ ತುಸು ಆರ್ಥಿಕ ದುಃ ಕೆಯುಂಟಾಗುವುದರಲ್ಲಿಯೂ ಹಾಗೂ ತತ್ಪರಿಣಾಮವಾಗಿ ಅವರಿಂದ ವಿರೋಧವುಂಟಾಗುವುದರಲ್ಲಿಯೂ ಸಂದೇಹವಿಲ್ಲ ಆದರೆ ಅದೇನು ಅಂಥ ಮಹತ್ವದ್ದಲ್ಲ. ಯಾವ ದೇಶದ ಲ್ಲಿಯೇಆಗಲಿ ಯಾವ ಹಿತಕಾರಿ ಯೋಜನೆಯೂ ಈಬಗೆಯ ಪ್ರಸವವೇದನೆಯಿಲ್ಲದೆ ಜನ್ಮವೆತ್ತಿಲ್ಲ; ಅಧಿಕಾರಲಾಲಸ ಸ್ವಾರ್ಥಿಗಳ ಹಾಗು ಅದೂರದರ್ಶಿಗಳ ಬುದ್ಧಿಗೇಡಿತನದಿಂದ ಉದ್ಭವಿತವಾದ ವಿರೋಧಗಳನ್ನು ಎದುರಿಸದೆ ಪಾರಾಗಿಲ್ಲ ಸುವ್ಯವಸ್ಥೆಯಿಂದ ಸುಶಿಕ್ಷಿತ ಸಾರ್ವಜನಿಕಾಭಿಪ್ರಾಯವೂ ಸರ್ ಕಾರೀ ಅಧಿಕಾರಿಗಳ ದೃಷ್ಟಿಕೋನವೂ, "ಈ ಕುರುಡುದಾರಿ ಯಿಂದ ಪಾರಾಗಬೇಕಾದರೆ ದೊಡ್ಡ ಪ್ರಮಾಣದ ಆ ಮೂಲಾ ಗ್ರವಾದ ಯೋಜನೆ ಕೈಕೊಳ್ಳದ ಹೊರತು ಗತ್ಯಂತರವಿಲ್ಲ" ಎಂಬ ಅಭಿಪ್ರಾಯಕ್ಕೆ ಬದಲಾಗಿನೆ. ಈ ದಿಶೆಯಲ್ಲಿ ರಾಷ್ಟ್ರೀಯ ಮೂಲ ಶಿಕ್ಷಣ ಹಾಗು ಸಾರ್ವಜಂಟ ಯೋಜನೆ

ಗಳು ಸ್ವಾಗತಾರ್ಹವಾದುವುಗಳಾಗಿವೆ. ಇಂಥ ಯೋಜನೆಗೆ ಬರಬಹುದಾದ ಮಾನುಷ ಹಾಗು ಆರ್ಥಿಕ ತೊಡಕುಗಳನ್ನು ಸಾರ್ವಜನಿಕ ಯೋಜನೆಯು ಸಾಕಷ್ಟು ಆಳವಾಗಿ ಬಿಡಿಸಿದೆ. ಅಷ್ಟು ಕಲ್ಪನಾ ಶೂನ್ಯರನ್ನು ಹಾಗು ಪುಕ್ಕ ಮನುಷ್ಯರನ್ನು ಬೆದರಿಸುವಷ್ಟು ದೊಡ್ಡವಾಗಿವೆ. ಆದರೆ ಉಪಾಯವಿಲ್ಲ, ಅನ್ಯ ಮಾರ್ಗವಿಲ್ಲ. ನಾವು ಶಿಕ್ಷಕರನ್ನು ತರಬೇತುಗೊಳಿಸಲೇ ಬೇಕು! ಶಾಲೆಗಳನ್ನು ಕಟ್ಟಿಸಲೇಬೇಕು. ಪುಸ್ತಕ, ಬೀಠೋಪಕರಣ ಹಾಗು ಆವಶ್ಯಕ ವಸ್ತುಗಳನ್ನು ಒದಗಿಸಲೇಬೇಕು. ಅವಶ್ಯಕ ಆಡಳಿತ ಯಂತ್ರವನ್ನು ಸ್ಥಾಪಿಸಲೇಬೇಕು. ಮತ್ತು ಇದಕ್ಕಾಗಿ ಹಣವನ್ನು ಹುಡುಕಬೇಕು. ಧನ ಸಂಗ್ರಹಕ್ಕಾಗಿ ನಾವು ನಮ್ಮ ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗತಿಗಳನ್ನು ಆಮೂಲಾಗ್ರವಾಗಿ ಪುನರ್ನಿವೇಶಿಸಲೂ ಬೇಕಾಗಬಹುದು. ಹಾಗು ದೊಡ್ಡ ಪ್ರಮಾಣದಿಂದ ಔದ್ಯೋಗಿಕ ಬೆಳವಣಿಗೆಗಳನ್ನೂ ಕೈಕೊಳ್ಳಬೇಕಾಗಬಹುದು.

ಇಕ್ಕೆಲದ ಅಂದೋಲನ

ಇದು ಚಿತ್ರದ ಒಮ್ಮೈತಿಯಾಯಿತು. ಪ್ರಾಥಮಿಕ ಶಿಕ್ಷಣವು ಕೇವಲ ಬಾಲಕರಿಗೆ ದೊರೆಯುತ್ತದೆ. ಆದರೆ ಹಳ್ಳಿಯ ಬಾಲಕನ ಪಾಲಿಗಿರುವಷ್ಟೇ ಅಜ್ಞಾನ ನಿರಕ್ಷರತೆಗಳು ಹಳ್ಳಿಯ ಪ್ರೌಢನ ಪಾಲಿಗೂ ಇವೆ. ನಾವು ನಮ್ಮ ಯತ್ನಗಳನ್ನು ಬಾಲಕರನ್ನು ಮಾತ್ರ ಸುಶಿಕ್ಷಿತರನ್ನಾಗಿ ಮಾಡಲು ಮೀಸಲಾಗಿಟ್ಟರೆ, ಹಳ್ಳಿಯಲ್ಲಿಯ ನಿರಕ್ಷರತಾ ಭೂತವನ್ನು ಹೊಡೆದೋಡಿಸುವಲ್ಲಿ ಎಳ್ಳಷ್ಟೂ ಯಶಸ್ವಿಗಳಾಗಲಾರೆವು. ಪ್ರೌಢ ಶಿಕ್ಷಣಕ್ಕಾಗಿ ನಾವು ಅಷ್ಟೇ ಪ್ರಮಾಣದಿಂದ, ತೀವ್ರ ಗತಿಯಿಂದ ಹಾಗು ಶಕ್ತಿಯುತವಾಗಿ ಯತ್ನಿಸಲೇಬೇಕು. ಭಾರತದಲ್ಲಿ ಪ್ರೌಢಶಿಕ್ಷಣ ಸಮಸ್ಯೆಯು ಪ್ರಾಥಮಿಕ ಶಿಕ್ಷಣ ಸಮಸ್ಯೆಗಿಂತಲೂ ದುರ್ಬೆಜೆಯಿಂದ ತಾತ್ಸಾರ ಮಾಡಲ್ಪಟ್ಟಿದೆ ಎಂದು ದುಃಖದಿಂದ ಹೇಳಬೇಕಾಗಿದೆ. ಹಾಗು ಯುದ್ಧೋತ್ತರ ಶೈಕ್ಷಣಿಕ ಬೆಳವಣಿಗೆಯ ಯೋಜನೆಯನ್ನು ಕುರಿತು ಇತ್ತೀಚಿನ ಪ್ರಕಟಣೆಯುವರೆಗೂ ಪ್ರೌಢ ಶಿಕ್ಷಣಕ್ಕೆ ಶಿಕ್ಷಣದ ಸಾಮಾನ್ಯ ರಚನೆಯಲ್ಲಿ ಒಂದು ಪ್ರಮುಖವಾದ ಪರಿಪೂರ್ಣವಾದ ಸ್ಥಾನವಿದೆ ಎಂಬ ನಿಜಾಂಶದ ಅರಿವೇ ಇರಲಿಲ್ಲ. ಕಾಲಕಾಲಕ್ಕೆ ಅಲ್ಲಲ್ಲಿ ವಿರಳಯತ್ನಗಳೇನೋ ಆದುವು. ಈ ಯತ್ನಗಳನ್ನು ಸಾರ್ವಜನಿಕ ಸೇವಾವೃತ್ತಿಯ ಒಂದು ವ್ಯಕ್ತಿಯೊ, ಒಂದು ಗುಂಪೋ ಅಥವಾ ವೈಯಕ್ತಿಕ ಅಭಿರುಚಿಯುಳ್ಳ ಒಬ್ಬ ಉಚ್ಚ ಅಧಿಕಾರಿಯೋ ತಾತ್ಪುರ್ತಿಕ ಹುಮ್ಮಸ್ಸಿನಿಂದ ಕೈಕೊಂಡದ್ದಾಯಿತು. ಆದರೆ ಏಕ ಪ್ರಕಾರವಾದ, ಕ್ರಮಬದ್ಧವಾದ ಹಾಗು ಪ್ರೌಢಶಿಕ್ಷಣವನ್ನು ಕುರಿತು ವಿಶಾಲ ದೃಷ್ಟಿಯಿಂದ ತುಂಬಿದ ದೊಡ್ಡ ಪ್ರಮಾಣದ ಆಂದೋಲನವು ಇನ್ನೂ ವರೆಗೂ ನಡೆಯಲಿಲ್ಲ. ಪ್ರಾಚೀನ, ಜನತೆಗೆ ಶಿಕ್ಷಣವು ತನ್ನ ವಿಸ್ತೃತಾರ್ಥದಲ್ಲಿ ಕಳೆದ ಅರ್ಧ ಶತಮಾನದಲ್ಲಿ ರಾಜಕೀಯ ಚಟುವಟಿಕೆ ಜಾಗೃತಗೊಳ್ಳುವ ಮುಖಾಂತರ, ಹಾಗು ನಮ್ರತೆಯಿಂದ ಹೇಳಬೇಕೆಂದರೆ, ನಮ್ಮ ಮೂರ್ಖತೆಯಿಂದ ಉದ್ಭವಿತವಾದ ಎರಡು ಮಹಾ ಯುದ್ಧಗಳು ಹಾಗು ಬಂಗಾಲದ ಬರಗಾಲಗಳು (ಇವುಗಳಿಗೆ ನಾವು ನೈಸರ್ಗಿಕ ವಿವಿತ್ತುಗಳೆನ್ನುತ್ತೇವೆ!) ಇವುಗಳ ಮುಖಾಂತರ ದೊರೆತಿದೆ ಎನ್ನಬಹುದು. ಆದರೆ ಈ ವಿಷಯ ತುರ್ತು ಶಿಕ್ಷಣವು ಒಂದು ಮಹಾವಿಪತ್ತಿನ ಹುಟ್ಟುವಳಿಯಾಗಿ ಇಂಥದು ಯಾವಾಗಲೂ ಬೋಧಪ್ರದವಾಗಿಯೂ ಇರುತ್ತದೆ ದುಃಖಪ್ರದವಾಗಿಯೂ ಇರುತ್ತದೆ. ಅಲ್ಲದೆ ಇದು ಪೂರ್ತಿ ಪ್ರಚಾರಜನ್ಯವಾದುದು. ಪ್ರಚಾರವು ಯಾವಾಗಲೂ ಶಿಕ್ಷಣಕ್ಕೆ ಹೊಂದಿಕೊಂಡಿರಲಾರದು. ಆದುದರಿಂದ ನಾವು ನಿರಕ್ಷರತಾ ಭೂತವನ್ನು ಹೊಡೆದೋಡಿಸುವುದಲ್ಲದೆ ಹಳ್ಳಿಗರ ಸಾಮಾಜಿಕ, ಸಾಂಸ್ಕೃತಿಕ ಹಾಗು ಬೌದ್ಧಿಕ ಮಟ್ಟವನ್ನು ಈಗಿರುವುದರಕಿಂತಲೂ ಬಹಳವಾಗಿ ಎತ್ತರಿಸಲು ಸರ್ವಮುಖವಾಗಿ ಯತ್ನಿಸಬೇಕು. ಅವರು ಓದಲಾರರು, ಬರೆಯಲಾರರಿಷ್ಟೇ ಅಲ್ಲ; ಬಹುದಿನಗಳಿಂದ ಅವರಿಗೆ ಜ್ಞಾನ ಹಾಗು ಬುದ್ಧಿಗಳು ನಿರಾಕರಿಸಲ್ಪಟ್ಟಿವೆ. ತಮ್ಮ ಹಕ್ಕು ಬಾಧ್ಯತೆ ಹಾಗು ಕರ್ತವ್ಯಗಳ ಅರಿವು ಅವರಿಗಿಲ್ಲ. ತಮ್ಮ ಯೋಗ್ಯತೆ ಬಲಗಳ ಪರಿಚಯ ಅವರಿಗಿಲ್ಲ. ಮನೋರಾಜ್ಯದಲ್ಲಿ ಅವರಿಗೆ ಪ್ರವೇಶ ದೊರೆತಿಲ್ಲ. ಅವರ ಜೀವನವೆಂದರೆ ತಮ್ಮ ಅತೃಪ್ತ ಜೀವನ ಸಾಗಿಸಲು ಹಾಗು ತಮ್ಮನ್ನವಲಂಬಿಸಿದವರಿಗೆ ಆಹಾರಾಕ್ರಯಗಳನ್ನೊದಗಿಸಲು ಕ್ರೂರ ದೈವದೊಡನೆ ಅಖಂಡವಾಗಿ ನಡೆಯಿಸಿದ ಬಿಡುಗಡೆಯಿಲ್ಲದ ಹೋರಾಟವೇ ಆಗಿದೆ. ಆದರೆ ಹಳ್ಳಿಯ ಜೀವನದ ತಳಹದಿಯಾದ, ಅವಶ್ಯಕವೂ ಅಪರಿಹಾರ್ಯವೂ ಆದ ವಿಧಾಯಕ ಕಾರ್ಯವು ಅವರದಾಗಿ ಉಳಿಯುತ್ತದೆ. ಸಾಂಸ್ಕೃತಿಕ ಸಾಮಾಜಿಕ ಹಾಗೂ ಇತರ ಸದ್ವ್ಯವಹಾರಗಳು ಹಳ್ಳಿಗಳನ್ನು ಕತ್ತಲೆಯಲ್ಲಿಯೇ ಬಿಟ್ಟು ಹೆಚ್ಚು ಹೆಚ್ಚಾಗಿ ಪುರ ಪಟ್ಟಣಗಳ ಕಡೆಗೆ ಆಕರ್ಷಿತವಾಗುತ್ತಿವೆ. ಅಸ್ತವ್ಯಸ್ತವಾದ ಈ ಸಮತೋಲವನ್ನು ಸರಿಪಡಿಸಬೇಕು. ಜೀವಿಸಲು

ೋಗ್ಯವಾದ ಜೀವನವನ್ನಾಗಿ ಮಾಡುವ ಶಿಕ್ಷಣ, ಪುಸ್ತಕ, ೋದಗಳು, ಸಂಸ್ಕೃತಿಜನ್ಯ ಸಾಮಾಜಿಕ ಚಟುವಟಿಕೆ ೀ ಮುಂತಾದವುಗಳಲ್ಲಿ ಹಳ್ಳಿಗಳಿಗೆ ಅವುಗಳ ಪೂರ್ತಿಭಾಗ ನ್ನು ಕೊಡಬೇಕು. ಪ್ರೌಢ ಶಿಕ್ಷಣ ಕಾರ್ಯವಾಹಕಗಳು ಳ್ಳಿಗರಿಗೆ ಶಿಕ್ಷಣ ಕೊಡುವುದಲ್ಲದೆ ಅವರ ಮನಸಂಜಿಸುವ ಗು ಅವರಿಗೆ ಸ್ಫೂರ್ತಿಯನ್ನೀಯುವ ಜೊಣಿಗಾರಿಕೆ ನ್ನೂ ಹೊರಬೇಕು. 'ಕೇಂದ್ರ' ಎನ್ನುವುದರ ಬದಲು ಕಾರ್ಯವಾಹಕ' ಈ ಶಬ್ದವನ್ನು ನಾನು ಬುದ್ಧಿ ಪೂರ್ವಕವಾಗಿ, ಪಯೋಗಿಸಿದ್ದೇನೆ. ಏಕೆಂದರೆ ಪ್ರೌಢ ಶಿಕ್ಷಣ ಕಾರ್ಯ ನ್ನು ನಾನಾ ಬಗೆಯ ಸಂಸ್ಥೆಗಳು ಕೈಕೊಳ್ಳುವುದನ್ನು ನು ಕಾಣುತ್ತೇನೆ. ಸಾಕ್ಷರತಾಪ್ರಸಾರ ಮಂಡಲಗಳು ಸ್ತ್ರೀ ಸದಸ್ಯರ ಹಿತಕ್ಕಾಗಿ ಜರ್ಟೆಗಳನ್ನೂ ಸಾಂಘಿಕ ಚಟು ಟಿಕೆಗಳನ್ನೂ ಏರ್ಪಡಿಸುವವು. ಡೆನ್ಮಾರ್ಕ್‌ನ 'ಫೋಕ್‌ಶೂಲ' ೀಡನ್‌ದ 'ಪೀಪಲ್ಸ್‌ಕಾಲೇಜ' ಅಥವಾ ಬ್ರಿಟನ್‌ದ ಯೋಜ ನೆಯಲ್ಲಿರುವ 'ಕೌಂಟಿ ಕಾಲೇಜ' ನಂತಹ ಸಂಸ್ಥೆಗಳ ಪ್ರಾಥಮಿಕ ಅಥವ ಮುಂದುವರಿದ ಶಿಕ್ಷಣಕ್ಕೆ ಸಂಬಂಧಿ ಸಿದೆ. ಇವು ಸಾಕ್ಷರಿಗಳಾದ ಪ್ರೌಢರಿಗೆ ಸಾಂಸ್ಕೃತಿಕ ಬೆಳವ ಣಿಗೆಯನ್ನು ಕಲ್ಪಿಸಿಕೊಡುತ್ತವೆ. ಹಳ್ಳಿಗರಿಗೂ ಸಾಂಸ್ಕೃತಿ ಕ ವರ್ಚಸ್ಸಿಗೂ ಸಂಬಂಧ ಕಲ್ಪಿಸಿಕೊಡುವುದಕ್ಕಾಗಿ ಕಲೆ ಗಾರಿಕೆಗಳ ವಸ್ತು ಸಂಗ್ರಹಾಲಯಗಳನ್ನೂ, ರಂಗಸ್ಥಳ ನ್ನೂ, ಚಲಚ್ಚಿತ್ರಗಳನ್ನೂ (ಅವು ಸಾಂಸ್ಕೃತಿಕವಿದ್ದರೆ !) ಗು ವಿಚಾರ ಪ್ರಚಾರಕ್ಕಾಗಿ ಆಕಾಶವಾಣಿ ಮುಂತಾದವು ನ್ನೂ ಏರ್ಪಡಿಸುವ ಸಂಸ್ಥೆಗಳು ಬೇಕು. ಇದರಿಂದ ತಿದು ಕಾಣುವುದೇನೆಂದರೆ, ಭಿನ್ನ ಭಿನ್ನ ಬಗೆಯ ಜನ ಅವರವರ ಆವಶ್ಯಕತೆಗಳಿಗನುಗುಣವಾಗಿ ಭಿನ್ನ ಭಿನ್ನ ಸ್ಥೆಗಳು ಜನ್ಮವೆತ್ತುವ ಒಂದೇ ಒಂದು ಧ್ಯೇಯ ಅಥವಾ ಸ್ತೋಕವೆಂದರೆ ಹಳ್ಳಿಗರ ಜೀವನವನ್ನು ಸಮೃದ್ಧವನ್ನಾ ನೂ ಸುಖಮಯವಾಗಿಯೂ ಮಾಡುವುದು. ಆಲ್ಲದೆ ವನವು ತಮಗೂ ತಮ್ಮ ಸಮಾಜಕ್ಕೂ ಉಪಯುಕ್ತವಾ ನಂತೆ ಮಾಡುವುದು. ಈ ಬಗೆಯ ಇಕ್ಕೆಲವ ಆಂದೋ ನವನ್ನು ಪ್ರಾಥಮಿಕ ಶಿಕ್ಷಣದ ಕಡೆಯಿಂದಲೂ ಪ್ರೌಢ ಣದ ಕಡೆಯಿಂದಲೂ ಕೂಡಿಯೇ ಸಾಗಿಸಿದರೆ ಈ ಂಡ ಸಮಸ್ಯೆಯನ್ನು ಸಮಂಜಸ ಅವಧಿಯಲ್ಲಿ ಬಿಡಿ ವ ಆಶೆ ಇದೆ.

ಶಿಕ್ಷಣದ ಲಕ್ಷಣ

ಹಳ್ಳಿಗರಿಗಾಗಿ ಸ್ಥಾಪಿಸಬೇಕಾದ ಶಾಲೆ ಪ್ರೌಢಶಿಕ್ಷಣ ಕೇಂದ್ರಗಳಲ್ಲಿ ಒದಗಿಸಬೇಕಾದ ಶಿಕ್ಷಣದ ಗುಣ ಲಕ್ಷಣಗ ಳನ್ನು ಕುರಿತು ನಾನು ಇದು ವರೆಗೂ ಏನೂ ಹೇಳಲಿಲ್ಲಿ. ಈ ಯೋಜನೆಯು ವಿಶಾಲವಿದ್ದಷ್ಟೇ ಆಕರ್ಷಕವಿದೆ. ಆದರೆ ಇಲ್ಲಿ ನಾನು ಅದರ ಶಾಖೋಪಶಾಖೆಗಳೆನ್ನು ಹೇಳಲಾರೆ. ಆದರೆ ಕೇಂದ್ರ ತತ್ವವನ್ನು ಮಾತ್ರ ಒತ್ತಿ ಹೇಳಲೇಬೇಕಾ ಗುವದು. ಹಳ್ಳಿಗಳಲ್ಲಿಯ ಯಾವುದೇ ಶಾಲೆಯು ಹಳ್ಳಿಗರ ವಾಸ್ತವಿಕ ಜೀವನದಿಂದ ಜಾಗು ಅವರ ಮುಖ್ಯ ಆಕಾ ಂಕ್ಷೆಗಳಿಂದ ದೂರವಾಗಿದ್ದರೆ, ಮುಂಜಾಗ್ರತೆ ಇಲ್ಲದು ದಾಗಿದ್ದರೆ, ಹಳ್ಳಿಗರ ನಿಷ್ಠೆಯನ್ನೂ ಭಾವನೆಯನ್ನೂ ಸೆಳೆಯ ಡಿಸಿಕೊಳ್ಳಲಾರದು. ಆದುದರಿಂದ, ಶಾಲೆಯೆಂದರೆ ಮನೆಗೆಲಸ ಹೊಲಗೆಲಸ ಜಾಗು ಕಾರ್ಯಾಲಯಗಳ ಸುಸಂ ಬದ್ಧ ಹಾಗು ವಿಸ್ತೃತ ರೂಪವು ಎಂಬ ಭಾವನೆ ಬಾಲಕ ಪಾಲಕರಲ್ಲಿ ಕೂಡಿಯೇ ಮೂಡಿ ಬೆಳೆಯುವಂತೆ ಏರ್ಪಡಿಸ ಬೇಕು. ನಿಜವಾಗಿಯೂ ಹೇಳಬೇಕೆಂದರೆ, ಇನ್ನೂ ಬೇಕಾ ದಷ್ಟಿದೆ. ಆದರೆ ಇದು ತಳಹದಿ. ಉಳಿದುದು ಇವರಿಂದಲೇ ಹುಟ್ಟಿ ಇದನ್ನೇ ಪ್ರಕಾಶಿಸುವುದು. ಇಂಥ ಶಾಲೆಗಳನ್ನಾ ರಂಭಿಸುವುದು ಕೇವಲ ಒಂದು ಕಾರ್ಯಜ್ಞತೆಯಲ್ಲದೆ ಉತ್ತಮ ತೈಕ್ಷಣಿಕ ಘೋರಣೆಯೂ ಆಹುದು.

ಶಿಕ್ಷಣದ ಬುಗ್ಗೆಗಳು

ಹಳ್ಳಿಗಳು ಶಿಕ್ಷಣದ ಬುಗ್ಗೆಗಳು ಎಂಬುದನ್ನು ಅನುಭ ವವು ತೋರಿಸಿದೆ. ಅಲ್ಲದೆ ಲಂಡನ ಮತ್ತಿತರ ಆಂಗ್ಲ ನಗ ರಗಳಿಂದ ಬಾಲಕರನ್ನು ತೈಕ್ಷಣಿಕ ಪ್ರಯೋಗಕ್ಕಾಗಿ ಹಳ್ಳಿ ಗಳಿಗೆ ಬಹು ದೊಡ್ಡ ಪ್ರಮಾಣದಲ್ಲಿ ಒಯ್ಯುತ್ತಿರುವುದೂ ಒಂದು ಇಷಕ್ಕೆ ದೊಡ್ಡ ನಿದರ್ಶನವಾಗಿದೆ. ಆ ಬುಗ್ಗೆಗಳನ್ನು ಜಾಣನಾದ, ತಿಳಿವಳಿಕೆಯುಳ್ಳ (ಕೇವಲ ಪುಸ್ತಕದ ಗುಲಾ ಮನಲ್ಲದ) ಶಿಕ್ಷಕನು ಬಹು ಚನ್ನಾಗಿ ಉಪಯೋಗ ಮಾಡಿ ಕೊಳ್ಳಬಲ್ಲನು. ಋತುಮಾನಗಳು, ವನಸ್ಪತಿಗಳ ಹಾಗು ಪ್ರಾಣಿಗಳ ಜೀವನ, ಹೂವು ಹಕ್ಕಿಗಳ ಸೌಂದರ್ಯ, ಬೆಳೆ ಬೆಳೆಯುವುದಕ್ಕಾಗಿ ಪಡುವ ಪರಿಶ್ರಮದಿಂದಾಗುವ ಆನಂದ, ಪರಸ್ಪರ ಸಹಕಾರಯುಕ್ತ ಯತ್ನದ ಸಂತಸ. ಶಿಕ್ಷಣವನ್ನು ಹೀಗೆ ಜೀವನಕ್ಕೆ, ಸಾಮಾನ್ಯವಾಗಿ ಜೀವನಕ್ಕೆ, ಹಾಗೂ

ವಿಶಿಷ್ಟ ಸಮಾಜದ ಜೀವನಕ್ಕೆ ಹೊಂದಿಸುವುದೇ ಎಲ್ಲ ಶೈಕ್ಷಣಿಕ ಸುಧಾರಣೆಗಳ ತಳಹದಿ. ವಿಶೇಷವಾಗಿ ಹಳ್ಳಿಗರ ಶಿಕ್ಷಣಕ್ಕೆ ಇದು ಅಮೌಲ್ಯವಾದುದು. ಗ್ರಾಮೀಣ ಮಿತ ವ್ಯಯದಲ್ಲಿ ಆ ಹಳ್ಳಿಗನಿಗೆ ಕಾಲ್ತೊಡಕಾಗಿರುವ ಕೆಲ ನಿರ್ಬಂಧನೆಗಳಿಂದ ಅವನನ್ನು ಬಿಡುಗಡೆ ಮಾಡುವುದೂ ಉತ್ತಮ ಶಿಕ್ಷಣದ ಗುರಿಗಳಲ್ಲಿ ಒಂದಾಗಿದೆ. ಗ್ರಾಮದ ಜೀವನದ ವಸ್ತುಸ್ಥಿತಿಯನ್ನು — ಅದು ಒಳ್ಳೆಯದೆ ಇರಲಿ, ಕೆಟ್ಟದೆ ಇರಲಿ— ನಿರ್ಲಕ್ಷಿಸುವುದರಿಂದ ಈ ಬಿಡುಗಡೆಯಾಗಲಾರದು. ಆದರೆ ಅವುಗಳನ್ನು ನೇರವಾಗಿ ನಿಭಾಯಿಸಿದ ಎದುರಿಸುವುದರಿಂದ ಮಾತ್ರ ಸಾಧ್ಯ; ಹಾಗು ಅವುಗಳನ್ನು ಕ್ಯವಿದ್ದಷ್ಟು ಶೈಕ್ಷಣಿಕ ಲಾಭಕ್ಕಾಗಿ ಉಪಯೋಗಿಸಿಕೊಳ್ಳುವುದರಿಂದ ಮಾತ್ರ ಸಾಧ್ಯ. ಭಯಾನಕ ಹಾಗು ಮರ್ಮಾದಿತ ಲಕ್ಷಣಗಳು ಕೂಡ ಶಿಕ್ಷಕನಿಗೆ ಉಪಯುಕ್ತವಾದವುಗಳೇ. ಏಕೆಂದರೆ ಶಿಕ್ಷಕನು ಅವುಗಳ ವಿಮರ್ಶಾತ್ಮಕ ಅಭ್ಯಾಸದಿಂದ ತನ್ನ ಕಾರ್ಯಕ್ಕೊಂದು ಸತ್ಯ ಸಾಕ್ಷ್ಯಾತ್ಪಾರವನ್ನು ಕೊಡಬಲ್ಲನು. ಅದರಂತೆ ಪ್ರೌಢ ಶಿಕ್ಷಣವ ಕಡೆಗೆ ಸಾಗಬೇಕಾದರೆ ಅವರ ಮಾನಸಶಾಸ್ತ್ರ ಹಾಗೂ ಅವಶ್ಯಕತೆಯ ದೃಷ್ಟಿಯಿಂದ ಸಾಗಬೇಕು. ಅವರ ಅಗತ್ಯಗಳ, ತೊಂದರೆಗಳ, ಆಶೆ-ಆಕಾಂಕ್ಷೆಗಳ ಹಾಗೂ ಅವರ ಅಡೆತಡೆಗಳ ಅಭ್ಯಾಸವೇ ಅವರ ಅಭ್ಯಾಸಪತ್ರಿಕೆಯ ಹಾಗೂ ಶಿಕ್ಷಣಕ್ರಮದ ತಳಹದಿ. ಪ್ರೌಢ ಶಿಕ್ಷಣ ಕೇಂದ್ರದ ಅಥವಾ ಪೀಪಲ್ಸ ಕಾಲೇಜಿನ ಶಿಕ್ಷಕನು ತೊಂದರೆ ಎಲ್ಲಿದೆ ಎಂಬುದನ್ನು ಅರಿತುಕೊಳ್ಳಬೇಕು. ಮತ್ತು ಅವನ ಈ ತಿಳಿವಳಿಕೆಯ ನೆಲೆಯೇ ಪ್ರೌಢರಿಗೆ ಅಂಥ ಸಂದರ್ಭದಲ್ಲಿ ಹೇಗೆ ವರ್ತಿಸಬೇಕೆಂಬುದರ ಅರಿವು ಉಂಟಾಗುವುದು. ಈ ಉದ್ದೇಶವಿಲ್ಲದ ಶಿಕ್ಷಣವು ನಿರ್ಜೀವ ಶಿಕ್ಷಣವು ಈ ಅನುಭವವಿಲ್ಲದ ಶಿಕ್ಷಣವು ಜೀವನದಾಯೀ ಗುಣರಹಿತ ಶಿಕ್ಷಣವಾಗುವುದು. ನಮ್ಮ ಶಾಲೆಗಳು ಹಾಗೂ ಪ್ರೌಢ ಶಿಕ್ಷಣ ಕೇಂದ್ರಗಳು ಬಾಲಕರಿಗೂ ಪಾಲಕರಿಗೂ (ಪ್ರೌಢರಿಗೂ) ಜೀವನವನ್ನು ಧಾರಾಳವಾಗಿ ಕೊಡುವ ಅಂಶದಲ್ಲಿ ತಮ್ಮ ಕಾರ್ಯವನ್ನು ಕೊನೆಗಾಣಿಸುವಂತಾಗಬೇಕು. ಇಷ್ಟಾದರೆ ಅದಕ್ಕಾಗಿ ವ್ಯಯಿಸಿದ ವೇಳೆ, ಹಣ, ಶ್ರಮ ಇವುಗಳ ಅಪವ್ಯಯವಾದಂತಾಗುವುದು.

ಮೂಲ ರಾಷ್ಟ್ರೀಯ ಶಿಕ್ಷಣದಲ್ಲಿ ತಾಯ್ನುಡಿಯ ಸ್ಥಾನ

ಲೇಖಕರು:— ಶ್ರೀ. ರಾ. ವೆಂ. ಗಿರಿರಡ್ಡಿ, ಶಿ. ವಿದ್ಯಾರ್ಥಿ. ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶಿಕ್ಷಣವು ಸುಗಮವಾಗಿ ಸಾಗಿ ಯಶಸ್ಸನ್ನು ಹೊಂದ ೇಕಾದರೆ ದೇಶದ ನೈಸರ್ಗಿಕ ಅನುಕೂಲತೆ, ಸಾಮಾಜಿಕ ನ್ನಿವೇಶ, ರಾಜಕೀಯ ಪರಿಸ್ಥಿತಿ, ಮತ್ತು ವ್ಯಕ್ತಿಗಳ ಪರಂ ರೆ–ರೂಢಿ ಇವುಗಳನ್ನು ಅನುಸರಿಸಿಕೊಂಡು ಹೋಗಬೇ ೞದುದು ಅಗತ್ಯ. ಬೇರೆ ಭಾಷೆಯನ್ನು ಮುಖ್ಯವಾಗಿ ಟ್ಟುಕೊಂಡರೆ ಮುಂದೋಡಬೇಕೆನ್ನುವ ನವ್ಮ ಶಿಕ್ಷಣ ್ರಗತಿಗೆ ಅಡ್ಡ ಗೋಡೆಯನ್ನು ಕಟ್ಟಿದಂತೆ. ಆದರೆ ಬೇರೆ ುವರ ಶೈಕ್ಷಣಿಕ ಕ್ರಮವು ಬೇಡವೆಂತಲ್ಲ, ನಮಗೂ ನಮ್ಮ ಾಷ್ಟ್ರಕ್ಕೂ ಒಳಿತಾದುದನ್ನು ಆಯ್ದುಕೊಂಡು ಹುಳಿತಾದು ನನ್ನು ದೂಡಿಬಿಡಬೇಕೆಂದು ನನ್ನ ಅಭಿಪ್ರಾಯ. ಇದು ತ್ಯವಶ್ಯವಾಗಿ ನೆನಪಿಡತಕ್ಕ ಮಾತು. ಒಂದು ಶತಮಾನ ಕಾಲ ನಮ್ಮ ಭಾಷಾ ಸಾಹಿತ್ಯವು ಹರಕು ಮುರುಕು ಆಗಿ ಹೋಗಲಿಕ್ಕೆ ಕಾರಣ ಇಂಗ್ಲಿಷ ಭಾಷೆಯನ್ನು ಇಡಿಯಾಗಿ ಎತ್ತಿಕೊಂಡು ಮಾಧ್ಯಮವನ್ನಾಗಿ ಮಾಡಿಕೊಂಡದ್ದು. ನಮ್ಮ ತಾಯ್ನುಡಿಯೇ ನಮಗೆ ಹಸನಾಗಿ ತಿಳಿಯದಿರು ವಾಗ ಪರ ಭಾಷೆಯನ್ನು ಪಾಠ ಮಾಡುವ ಸೌಭಾಗ್ಯವು ನಮ್ಮ ಪಾಲಿಗೆ ಬಂದೊದಗಿತು! ಹೀಗಾಗಲು ಕಾರಣಗಳೆಲ್ಲ ದಿಲ್ಲ:—

(೧) ಕ್ರಿ. ಶ. ೧೮೩೫ ರಲ್ಲಿ ಹೊರಬಿದ್ದ ಮೇಕಾಲೆಯ-ಪರ ಶಿಕ್ಷಣ ವರದಿಯು.

(೨) ನಮ್ಮ ದೇಶದ ಶಿಕ್ಷಣಾಲಯಗಳು ಸುಸಂಘಟಿತ ವಾಗಿ, ಶಿಕ್ಷಕರು ಶಿಕ್ಷಣ ಕ್ರಮವನ್ನು ಕಾಲಮಾನವರಿಸ್ಥಿ ತಿಗೆ ತಕ್ಕಂತೆ ಅರಿತವರಾಗಿ ಇಲ್ಲದಪು.

(೩) ಇಂಗ್ಲಿಷ ಭಾಷೆಯು ಬರುವ ಮೊದಲು ಪ್ರಚಲಿತ ವಾಗಿದ್ದ ದೇಶೀಯ ಭಾಷೆಗಳ ವ್ಯಾವಹಾರಿಕತೆಯನ್ನು ಸಂಕು ಚಿತ– ಗೊಳಿಸಿದ್ದು.

(೪) ಸರಕಾರಿ ನವಕರಿಗಳಲ್ಲಿ ಪ್ರವೇಶ ಪಡೆಯಬೇಕೆನ್ನು ವವರಿಗೆ, ಇಂಗ್ಲಿಷ ಕಲಿತವರಿಗೆ ಪ್ರಥಮ ಸ್ಥಾನ ಸಿಗುವ ದೆಂದು ಆಗಿನ ಸರಕಾರದ ಘೋಷಣೆ.

(೫) ಇಂಗ್ಲಿಷ ಶಿಕ್ಷಣವನ್ನು ಮೇಲಿನ ತರಗತಿಯ ವರು—ಪಟ್ಟಣಿಗರು—ಕಲಿತರೆ ಅದು ಕ್ರಮಕ್ರಮವಾಗಿ ಸಾಮಾನ್ಯರಿಗೂ—ಹಳ್ಳಿಗರಿಗೂ—ಸಹಜವಾಗಿ ಸಾಗುತ್ತ ಬರುವದೆಂಬ ನಂಬುಗೆ. ಆದರೆ ಇದೆಲ್ಲ ಗಾಳಿಗೋಪುರವಾ ಯಿತು. ಕಲಿತವರು ಕಲಿಯದವರು ಎಂಬ ಭಿನ್ನ ಭಾವವು ತಲೆದೋರಿತು. ಅಪ್ಪಿತಪ್ಪಿ ಹಳ್ಳಿಗರಲ್ಲಿ ಕಲಿತ ಒಬ್ಬಿಬ್ಬರು ಹೋಗಿ ಪಟ್ಟಣವನ್ನು ಸೇರಿ ಅದನ್ನು ಸಿಂಗಾರಗೊಳಿಸಿ ದರು. ಇತ್ತ ದೇಶದಲ್ಲೆಲ್ಲ ನಿರಕ್ಷರರ ಸಂಖ್ಯೆ ಬೆಳೆದು ಪಳ್ಳಿಗಳನ್ನೂ, ಹಳ್ಳಿಯ ಉದ್ಯೋಗಗಳನ್ನೂ ಹಾಳುಗೆಡ ವಿದರು.

ತನ್ನವರ ಕೂಡ, ನೆರೆಹೊರೆಯವರ ಕೂಡ ವ್ಯವಹಾರ ಮಾಡುವದಕ್ಕೆ ಮನುಷ್ಯನಿಗೆ ಭಾಷೆಯು ಅವಶ್ಯ ಬೇಕು ಶಬ್ದ, ಬರೆಹ ಎಂದು ಭಾಷೆಗೆ ಎರಡು ಮೈಗಳು. ಮನಸ್ಸಿ ನಲ್ಲಿ ಮಾಡಿದ ಭಾವನೆಗಳನ್ನು ಇತರರಿಗೆ ತಿಳಿಸಲಿಕ್ಕೂ, ಅವರ ಅಭಿಪ್ರಾಯಗಳನ್ನು ಅರಿತುಕೊಳ್ಳಲಿಕ್ಕೂ ಜನರ ಮೊದಲು ಬಾಯಿ ಮಾತುಗಳನ್ನು ಉಪಯೋಗಿಸಹತ್ತಿ ದರು. ಬಾಯಿ ಮಾತಿನ ಶಬ್ದಗಳು ನೈಸರ್ಗಿಕವಾಗಿ ಬಂದಿ ರುತ್ತವೆ. ಕಾಲದೇಶಗಳ ವಿಶಾಲತೆಯು ಹೆಚ್ಚಾದಂ ತಾ ಶಾಬ್ದಿಕ ಭಾಷೆಯಿಂದ ಮಾತನಾಡಲು ಬಾರದು. ಅದಕ್ಕಾಗಿ ಬರೆಹವು ಹೊತ್ತು ಮಾಡಲ್ಪಟ್ಟಿದೆ. ಬರೆವಣಿಗೆಯು ಬಾಯಿ ಮಾತಿನ ಸ್ವರೂಪವನ್ನು ತಿಳಿಸಲಿಕ್ಕೆ ಒಂದು ಸಾಧನ ನಾವು ಜ್ಞಾನದ ಬೆಳವಣಿಗೆಗಾಗಿ ಬಾಯಿಮಾತುಗಳನ್ನಷ್ಟೆ ಅಲ್ಲ. ಬರೆವಣಿಗೆಯನ್ನೂ ಸಾಧನವನ್ನಾಗಿಟ್ಟುಕೊಂ

ಪ್ಪೇವೆ. ಶಾಬ್ದಿಕವಾಗಿ ಮತ್ತು ಬರೆವಣಿಗೆಯಾಗಿ ರೂಪು ಗೊಂಡ ಜಾನಪದ, ಲಾವಣಿ, ಬಯಲಾಟ, ಒಡಪು, ಕವನ, ಕೀರ್ತನೆ, ಪುರಾಣ ಮುಂತಾದವುಗಳು ಜ್ಞಾನ ಸಂಪಾದನೆಗೆ ಸಹಾಯಗಳು. ಮಾತೃ ಭಾಷೆಯಲ್ಲಿಯೇ ಇವೆಲ್ಲವುಗಳ ರಚನೆ. ಈ ಲಲಿತ ಕಲೆಯ ಪ್ರಭಾವವು ಕಡಿಮೆಯಾಗುತ್ತ ನಡೆಯಿತೆಂದಾಗ ಮಾತೃಭಾಷೆಗೆ ಉಚ್ಚ ಸ್ಥಾನ ಸಿಗುವದೆಂತು? ಜನಸಾಮಾನ್ಯರಿಗೆ ಜ್ಞಾನದ ಪ್ರವಾಹವು ಹರಿದು ಬಾರದಿರುವದಕ್ಕೆ ಹಳ್ಳಿಯ ತಾಯ್ನುಡಿಯ ಈ ಸಾಹಿತ್ಯವನ್ನು ಅಲ್ಲಗಳೆದದ್ದು.

ನಮ್ಮ ನಾಗರಿಕತೆಯು ಗ್ರಾಮ ಮೂಲವಾದುದು. ಹೊದಲಿನ ಕಾಲದ ಜನರು ಕಾಡಿನಲ್ಲಿಯೇ ಇದ್ದು ಪುರ, ಕೊಂಪೆ, ಹುಲುಮನೆಗಳನ್ನು ಮಾಡಿಕೊಂಡು ಅಲ್ಲಿಯೇ ಗುರುಕುಲಗಳನ್ನು ಸ್ಥಾಪಿಸಿಕೊಂಡಿದ್ದರು ನಾಡಿನ ಸಂಸ್ಕೃತಿಯು, ನಾಗರಿಕತೆಯ ವಾಹಿನಿಯು ಆ ಪುರ, ಆ ಕೊಂಪೆಗಳಿಂದಲೇ ಹುಟ್ಟಿ ಹರಿದು ಪಟ್ಟಣಗಳಿಂದ ಬಂದಿದೆ. ನಮ್ಮ ಶಿಕ್ಷಣವು ನಿಜವಾಗಿ ರಾಷ್ಟ್ರೀಯ ಶಿಕ್ಷಣವಾಗಬೇಕೆಂದು ಬಯಸುವವರಾದರೂ ತಿರುಗಿ ಹಳ್ಳಿಗಳಿಗ ಶರಣು ಹೋಗದೆ ಗತಿಯಿಲ್ಲ. ಗ್ರಾಮಭಾಷೆ ಅಥವಾ ತಾಯ್ನುಡಿಯನ್ನು ತಿಳಿದು ಅದನ್ನು ಅರಗಿಸಿಕೊಳ್ಳದ ಹೊರತು ನಮ್ಮ ರಾಷ್ಟ್ರದ ಉದ್ಧಾರವಾಗುವಂತಿಲ್ಲ. ಈಗ ನಾವು ಪಡೆಯುತ್ತಿರುವ ಹಸಿಬಿಸಿ ಶಿಕ್ಷಣದಿಂದ ನಮ್ಮ ದೇಶಕ್ಕೆ ಹೀನಾವಸ್ಥೆಯು ಕಟ್ಟಿಟ್ಟದ್ದು. ಈ ಮಾತನು ನಮ್ಮ ರಾಷ್ಟ್ರೀಯ ಶಿಕ್ಷಣ ತಜ್ಞರು ಲಕ್ಷಕ್ಕೆ ತಂದುಕೊಂಡು ಹಳ್ಳಿಗಳನ್ನು ಪುನರ್ಜೀವಿಸಬೇಕು ರಾಷ್ಟ್ರೀಯ ಶಿಕ್ಷಣದಲ್ಲಿ ಮಾತೃಭಾಷೆಗೆ ಉಚ್ಚಸ್ಥಾನವನ್ನು ಕೊಡಬೇಕು ಎಂದು ಮೊದಲಾಗಿ ಸೊತ್ತು ಮಾಡಿದ್ದಾರೆ.

ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಹೋಗುವ ಮೊದಲು ಮಾತುಗಳನ್ನು ಕಲಿಯುವದು ಮನೆಯಲ್ಲಿ ತಾಯಿಯಿಂದ. ಮನೆಮಾತುಗಳಿಗೆ ಬಳಕೆಗೆಬಾರದ ಅನವಶ್ಯಕ ಶಬ್ದಗಳನ್ನು ಕಲಿಯುವದು ಶಾಲೆಯಲ್ಲಿ ಗರುಗಳಿಂದ. ಜೀವನದಲ್ಲಿ ಅಡಿಗಡಿಗೆ ಬಳಕೆಯಲ್ಲಿ ಬರುವ ಕೆಲವು ಶಬ್ದಗಳಿಂದ ಸ್ಪಷ್ಟವಾಗುವದು ಇಲ್ಲಿ ಆವಶ್ಯವಾದುದು—ಮೆರಗು ಗೋಲು ಸೆಳ್ಳು, ಹಗ್ಗ, ಬಳಗ ಮುಂತಾದವುಗಳನ್ನು ಒಕ್ಕಲುತನದಲ್ಲಿ., ಹೂಣಿಗೆ, ಜಿಲ್ಲು, ಉಂಕೆ, ಅಣೆ ಮುಂತಾದವುಗಳನ್ನು ನೂಲು ನೆಯ್ಗೆಯಲ್ಲಿ. ಹತೋಟಿ, ಕಳಾಸಕದ್ದಿ, ತಟ್ಟುಪಳಿ, ಆಗರ ಮುಂತಾದವುಗಳನ್ನು ಬಡಿಗತನದಲ್ಲಿ ಹಲಗೆ, ಹೊತ್ತಿಗೆ, ಅಯ್ಯನವರು ಇನ್ನೂ ಎಷ್ಟೋ ಅಚ್ಚ ಕನ್ನಡ ಶಬ್ದಗಳನ್ನು ಮನೆಮಾತುಗಳಲ್ಲಿ ಉಪಯೋಗಿಸುತ್ತೇವೆ. ಆದರೆ ನಮ್ಮ ಬಾಲಕರು ಓದುವ ಪುಸ್ತಕಗಳಲ್ಲಿ ಎಲ್ಲ ಪುಟಗಳನ್ನು ಮೊದಲಿನಿಂದ ಕೊನೆಯವರೆಗೆ ತಿರುಹಾಕಿದರೆ ಇಂತಹ ಶಬ್ದಗಳು ಸಿಗುವುದೇ ದುರ್ಲಭ. ಅಪ ಸಿಕ್ಕರೆ ಒಂದೊ ಎರಡೊ ಶಬ್ದಗಳು—ವ್ಯವಹಾರದಲ್ಲಿ ಸಹಜವಾಗಿ ಉಪಯೋಗಿಸುತ್ತಿರುವ ಶಬ್ದಗಳನ್ನು ಗ್ರಾಂಥಿಕ ಭಾಷೆಯಲ್ಲಿ ತೊಡಕಿಸಿ ಅವರ ತಲೆಯಲ್ಲಿ ತುಂಬುತ್ತೇವೆ ಆ ಶಬ್ದಗಳ ಜ್ಞಾನವು ಆಗಬೇಕಾದರೆ ಕಲಿಯುವವರಿಗೂ, ಕಲಿಸುವವರಿಗೂ ಸಾಕುಬೇಕಾಗಿಹೋಗುತ್ತದೆ. ಕಠಿಣ ಸಮಸ್ಯೆಗಳನ್ನು ಬಾಲಕರಿಗೆ ತಿಳಿಸಿ ಕೊಡಬೇಕಾದ ಗ್ರಾಮ ಭಾಷೆಯಲ್ಲಿ ಬೋಧೆ ಸಾಗಬೇಕೆಂಬುದು ಶಿಕ್ಷಣ ಶಾಸ್ತ್ರದ ನಿಯಮ ಅಥವಾ ಬಳಿಕೆಯ ಶಬ್ದಗಳು ಪ್ರತ್ಯಕ್ಷ ವಸ್ತುಗಳಂತೆ ಪ್ರತ್ಯಕ್ಷ ನಿದರ್ಶನಗಳು. ಈ ಶಿಕ್ಷಣ ತತ್ವವನ್ನು ಮಿಕ್ಕಿ ಬಾಲಕರಲ್ಲಿ ಮಸಮಸಕಾಗಿರುವ ಸಾಹಿತ್ಯ—ಕಲೆ—ವಿಜ್ಞಾನ—ಸಾಮಾಜಿಕವಿಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಯಾವದೊಂದು ಹೊಸವಿಚಾರವನ್ನು ಸಹಜವಾಗಿ ತಿಳಿಯಲಿಕ್ಕೆ ಸಾಮರ್ಥ್ಯಹೀನವಾದ ಶಬ್ದಗಳನ್ನು ತುಂಬಿ ತಾಯಿನುಡಿಗಳನ್ನು ಬಿಸುಟಿಬಿಟ್ಟದ್ದು ನಮ್ಮ ಬುದ್ಧಿವಂತಿಕೆಯ ದಿವಾಳಿತನವನ್ನು ತೋರಿಸುತ್ತದೆ.

ಇಂತಹ ಶಿಕ್ಷಣದಲ್ಲಿಯ ಕುಂದುಕೊರತೆಗಳನ್ನು ತೆಗೆದು ಹಾಕುವದಕ್ಕಾಗಿಯೇ ಮಹಾತ್ಮಾ ಗಾಂಧೀಜಿಯವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದರು. ಅವರು ಹೇಳಿದ್ದು ಹೀಗೆ:—"ವರ್ಧಾ ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲಿ ಬಾಲಕರಿಗೆ ತಮ್ಮ ನಾಡನುಡಿಯ ಸರಿಯಾದ ತಿಳಿವಳಿಕೆ, ತಕ್ಕಮಟ್ಟಿಗಾದರೂ ಸಾಹಿತ್ಯದ ಅನುಭವ ಆಗಬೇಕು. ಪ್ರಾಂತಿಕ ಭಾಷೆಯನ್ನೆ ಆಯಾ ಪ್ರಾಂತದ ರಾಜಭಾಷೆಯನ್ನಾಗಿ ಮಾಡಿಕೊಳ್ಳಬಹುದು. ಮಾತೃಭಾಷೆಯು ಸಾಹಿತ್ಯ ಭಾಷೆಯಾಗಿರದಿದ್ದರೆ ಯಾವದೊಂದು ದೇಶೀ ಭಾಷೆಗೆ ಉಪಭಾಷೆಯಾಗಿದ್ದುಕೊಂಡಿರಬಹುದು. ಆಗ ಅದು ಯಾವ ಭಾಷೆಗೆ ಉಪಭಾಷೆಯಯಿಗಿ ಸಂಬಂಧಪಟ್ಟಿರುತ್ತದೆಯೋ ಆ ಭಾಷೆಯ ಮಾರ್ಗವಾಗಿ ಶಿಕ್ಷಣವು ನಡೆಯಬೇಕು" ಎಂದು. ಹೀಗೆ ಶಿಕ್ಷಣದಲ್ಲಿ ಭಾಷೆಯ

ರಿಯನ್ನು ಇಟ್ಟುಕೊಂಡು ಸಾಗಿದ್ದಾದರೆ ಆಯಾ ನಾಡಿನ ಹಿತ್ಯವು ಸರ್ವಾಂಗೀಣ ಉಜ್ವಲವಾಗುವದರಲ್ಲಿ ಸಂಶಯ ಲ್ಲ.

ಸಮಾಜದಲ್ಲಿ ಮಾತನಾಡಲಿಕ್ಕೆ ಪ್ರತಿಯೊಬ್ಬ ವ್ಯಕ್ತಿಗೂ ಸ್ವತಂತ್ರ್ಯವಿರಬೇಕೆಂಬುದನ್ನು ಎಲ್ಲರೂ ಒಪ್ಪತಕ್ಕ ನಾತು ಆಲ್ಲಿ "ಮಾತರಿಯದವ ಜಗಳತಂದ" ಎಂಬ ನಾತಿಗೆ ಎಡೆಗೊಡಬಾರದಾಗಿದೆ ಮಗುವಿನ ಹುನ್ನ ಮಾತಿ ಲ್ಲಿ ಪ್ರಕಟವಾಗುವ ಸುದ್ದಿ ಪತ್ರಗಳು, ಸಂಚಿಕೆಗಳು ುಂತಾದವುಗಳನ್ನು ಜಾಣತನದಿಂದ ಓದಿ ಸಮಾಜದ— ಷ್ಟದ ಏರಿಳಿತಗಳನ್ನು ತಿಳಿದುಕೊಳ್ಳಬೇಕಾಗಿದೆ ಅದು ಾಗೆ ಏಕೆ ? ಇದು ಹೀಗೆ ಏಕೆ ? ಎಂಬ ಸ್ಪಷ್ಟ ಕಲ್ಪನೆಯು ಗಬೇಕಾಗಿದೆ. ನೆರೆಹೊರೆಯವರೊಂದಿಗೆ ಸಹೋದರ ಾವವನ್ನು ಅಕ್ಕರತೆಯಿಂದ ಬೆಳಿಸಿಕೊಳ್ಳಬೇಕಾಗಿದೆ. ನೇಕರಿಂದ ಅನೇಕ ಸಂದರ್ಭಗಳಲ್ಲಿ ಅನೇಕ ವಿಷಯಗ ನ್ನು ತಿಳಿದುಕೊಂಡು ಅರಗಿಸಿಕೊಳ್ಳಬೇಕಾಗಿದೆ. ಅರಗಿ ಕೊಂಡದ್ದನ್ನು ಮರಳಿ ಸಮಾಜದೆದುರಿನಲ್ಲಿ ಇಡಬೇಕಾ ಿ. ಅದಕ್ಕಾಗಿ ಸೆಭೆ-ಸಮಾರಂಭಗಳಲ್ಲಿ ಎದೆಗಾರಿಕೆ ುಂದ ಮಾತನಾಡುವ ಮಾತುಗಾರಿಕೆಯನ್ನು ತನ್ನ ಶಾಲಾ ೀವನದಲ್ಲಿ ಅರಿವು ಮಾಡಿಕೊಳ್ಳವದೂ ಶಿಕ್ಷಕರು ಅರಿಕೆ ಾಡಿಕೊಡುವದೂ ಮನವನರಳಿಸಿ ಮಾತುಕತೆಯನ್ನಾ ುವ ತಾಯಿ-ಮಗುಗಳ ಶೈಲಿಯಂತೆ ನಡೆಯುಬೇಕೆಂಬು ನ್ನು ಯಾರು ಅಲ್ಲಗಳೆಯು ಬಹುದು ?

ನಮ್ಮ ಮಾತೃಭಾಷೆಯು ಸಾಹಿತ್ಯದಲ್ಲಿಯೇ ನಮ್ಮ ಸಾಮಾಜಿಕ ಸಂಸ್ಕೃತಿಯು ಸಂಪತ್ತು ಅಡಕವಾಗಿದೆ. ವ್ಯಾವ ಹಾರಿಕ ವಿಷಯಗಳನ್ನು ಕಲಿಯುವದರಿಂದ ಸಂಸ್ಕೃತಿಯ ಮಹತ್ವವು ಗೊತ್ತಾಗುವದು. ಅದನ್ನು ಅರಿತುಕೊಳ್ಳುವ ದಕ್ಕಾಗಿ ನಮ್ಮದೇ ಆದ ಸಾಹಿತ್ಯವನ್ನು ತಿಗುಗಿ ನಾವು ರಚಿಸಿಕೊಳ್ಳಬೇಕಾಗಿದೆ. ಇದು ಈಗ ಪ್ರಚಲಿತಗೊಳ್ಳುತ್ತಿ ರುವ ರಾಷ್ಟ್ರೀಯ ಶಿಕ್ಷಣದಿಂದ ಸಾಧ್ಯವೆಂಬುದನ್ನು ಬೇರ ಹೇಳಬೇಕಿಲ್ಲ, ಇದರಿಂದ ಒಂದು ಅಚ್ಚುಕಟ್ಟಾದ ಹೊಸ ಪದ್ಧತಿಯು ಶಿಸ್ತು—ಸಂಘಟನೆಗಳು ದೇಶದೊಳಗಿನ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ರೂಢಿಗೊಳ್ಳುವವು. ಕಲಿತು ಶಾಲೆ ಗಳಿಂದ ಹೊರೆಗೆ ಬರುವ ತರುಣರು ದೇಶದ ಜನಜೀವನದ ವಿಶಿಷ್ಟತರವಾದ ನಾಗರಿಕತೆಯನ್ನು ಕಾಪಾಡಿಕೊಂಡು ಹೋಗುವರು. ಅದಕ್ಕಾಗಿ ಮಾತೃಭಾಷೆಯಿಂದಲೇ ಪ್ರಾಥಮಿಕ ಶಿಕ್ಷಣವು ಸಾಗಬೇಕಾಗಿರುವದು ಅವಶ್ಯ. ಸಾಹಿತ್ಯವು ರಾಷ್ಟ್ರಕ್ಕೆ ಆತ್ಮನಿದ್ದಂತೆ. ರಾಷ್ಟ್ರವು ಆಂತರಿಕ ಆತ್ಮ ಶುದ್ಧಿ ಯನ್ನು ಹೊಂದಬೇಕಾದಲ್ಲಿ ಉಚ್ಚಮಟ್ಟದ ಸಂಸ್ಕೃತಿ ಯನ್ನು ನಿರ್ಮಿಸಿಕೊಳ್ಳಬೇಕಾಗುವದು. ಅದಕ್ಕಾಗಿ ರಾಷ್ಟ್ರೀಯ ಶಿಕ್ಷಣವು ಜನ್ಮವೆತ್ತಿದೆ. ಜನರಲ್ಲಿ ನೈತಿಕ ಬಲ ವನ್ನೂ, ಶಾಂತಿ,—ನವ್ಯವಸ್ಥೆಗಳನ್ನೂ, ಸುಖ- ಸಮಾ ಧಾನಗಳನ್ನೂ ಉಂಟಮಾಡಲಿಕ್ಕೆ ಬೋಧೆಯು ತಾಯ್ನುಡಿಯಿಂದಲೇ ಆಗಬೇಕು. ಸಮಾಜದ ಆಧಾರಸ್ತಂಭಗ ಳಾದ ವ್ಯಕ್ತಿಗಳು ಇನ್ನೂ ಚಿಕ್ಕವರಿರುವಾಗಲೇ ಅವರಿಗೆ ಸತ್ಯ---ಸ್ನೇಹ—ಶಾಂತಿ—ಅಹಿಂಸೆ-ಸಹಕಾರ ಮುಂತಾದ ಗುಣಗಳನ್ನು ಮನದಲ್ಲಿ ಎರಕ ಹೊಯ್ಯಬೇಕಾಗಿದೆ. ಇದು ಮಾತೃಭಾಷೆಯಿಂದ ಸಾಗುವ ಕೃತಿ ಪ್ರಧಾನವಾ ದೈಶ್ಲೇ ಣಿಕ ವಾತಾವರಣದಿಂದಲೇ, ಮತ್ತೊಂದರಿಂದಾಗಲಾರದು.

ದ್ದೇವೆ. ಶಾಬ್ದಿಕವಾಗಿ ಮತ್ತು ಬರೆವಣಿಗೆಯಾಗಿ ರೂಪು ಗೊಂಡ ಜಾನಪದ, ಲಾವಣಿ, ಬಯಲಾಟ, ಒಡಪು, ಕವನ, ಕೀರ್ತನೆ, ಪುರಾಣ ಮುಂತಾದವುಗಳು ಜ್ಞಾನ ಸಂಪಾದನೆಗೆ ಸಹಾಯಗಳು. ಮಾತೃ ಭಾಷೆಯಲ್ಲಿಯೇ ಇವೆಲ್ಲವುಗಳ ರಚನೆ. ಈ ಲಲಿತ ಕಲೆಯ ಪ್ರಭಾವವು ಕಡಿಮೆಯಾಗುತ್ತ ನಡೆಯಿತೆಂದಾಗ ಮಾತೃಭಾಷೆಗೆ ಉಚ್ಚ ಸ್ಥಾನ ಸಿಗುವದೆಂತು? ಜನಸಾಮಾನ್ಯರಿಗೆ ಜ್ಞಾನದ ಪ್ರವಾಹವು ಹರಿದು ಬಾರದಿರುವದಕ್ಕೆ ಹಳ್ಳಿಯ ತಾಯ್ನುಡಿಯ ಈ ಸಾಹಿತ್ಯವನ್ನು ಅಲ್ಲಗಳೆದದ್ದು.

ನಮ್ಮ ನಾಗರಿಕತೆಯು ಗ್ರಾಮ ಮೂಲವಾದುದು. ಹೊದಲಿನ ಕಾಲದ ಜನರು ಕಾಡಿನಲ್ಲಿಯೇ ಇದ್ದು ಪುರ, ಕೊಂಪೆ, ಹುಲುಮನೆಗಳನ್ನು ಮಾಡಿಕೊಂಡು ಅಲ್ಲಿಯೇ ಗುರುಕುಲಗಳನ್ನು ಸ್ಥಾಪಿಸಿಕೊಂಡಿದ್ದರು ನಾಡಿನ ಸಂಸ್ಕೃತಿಯು, ನಾಗರಿಕತೆಯ ವಾಹಿನಿಯು ಆ ಪುರ, ಆ ಕೊಂಪೆಗಳಿಂದಲೇ ಹುಟ್ಟಿ ಹರಿದು ಪಟ್ಟಣಗಳಿಂದ ಬಂದಿದೆ. ನಮ್ಮ ಶಿಕ್ಷಣವು ನಿಜವಾಗಿ ರಾಷ್ಟ್ರೀಯ ಶಿಕ್ಷಣವಾಗಬೇಕೆಂದು ಬಯಸುವವರಾದರೆ ನಾವು ತಿರುಗಿ ಹಳ್ಳಿಗಳಿಗೆ ಶರಣು ಹೋಗದೆ ಗತಿಯಿಲ್ಲ. ಗ್ರಾಮಭಾಷೆ ಅಥವಾ ತಾಯ್ನುಡಿಯನ್ನು ತಿಳಿದು ಅದನ್ನು ಆರಗಿಸಿಕೊಳ್ಳದ ಹೊರತು ನಮ್ಮ ರಾಷ್ಟ್ರದ ಉದ್ಧಾರವಾಗುವಂತಿಲ್ಲ. ಈಗ ನಾವು ಪಡೆಯುತ್ತಿರುವ ಹಸಿಬಿಸಿ ಶಿಕ್ಷಣದಿಂದ ನಮ್ಮ ದೇಶಕ್ಕೆ ಹೀನಾವಸ್ಥೆಯು ಕಟ್ಟಿಟ್ಟದ್ದು. ಈ ಮಾತನು ನಮ್ಮ ರಾಷ್ಟ್ರದ ಶಿಕ್ಷಣ ತಜ್ಞರು ಲಕ್ಷಕ್ಕೆ ತಂದುಕೊಂಡು ಹಳ್ಳಿಗಳನ್ನು ಪುನರ್ಘಟಿಸಬೇಕು ರಾಷ್ಟ್ರೀಯ ಶಿಕ್ಷಣದಲ್ಲಿ ಮಾತೃಭಾಷೆಗೆ ಉಚ್ಚಸ್ಥಾನವನ್ನು ಕೊಡಬೇಕು ಎಂದು ಮೊದಲಾಗಿ ಸೊತ್ತು ಮಾಡಿದ್ದಾರೆ.

ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಹೋಗುವ ಮೊದಲು ಮಾತುಗಳನ್ನು ಕಲಿಯುವದು ಮನೆಯಲ್ಲಿ ತಾಯಿಯಿಂದ. ಮನೆಮಾತುಗಳಿಗೆ ಬಳಕೆಗೆಬಾರದ ಅನವಶ್ಯಕ ಶಬ್ದಗಳನ್ನು ಕಲಿಯುವದು ಶಾಲೆಯಲ್ಲಿ ಗರುಗಳಿಂದ. ಜೀವನದಲ್ಲಿ ಅಡಿಗಡಿಗೆ ಬಳಕೆಯಲ್ಲಿ ಬರುವ ಕೆಲವು ಶಬ್ದಗಳಿಂದ ಸ್ಪಷ್ಟವಾಡುವದು ಇಲ್ಲಿ ಅವಶ್ಯವಾದುದು--ಮೆರಗು ಗೋಲೀ ಸೆಳ್ಳು, ಹಾಟಿ, ಬಳಗ ಮುಂತಾದವುಗಳನ್ನು ಒಕ್ಕಲುತನದಲ್ಲಿ., ಹೂಣಿಗೆ, ಚಿಲ್ಲು, ಉಂಕಿ, ಆಣಿ ಮುಂತಾದವುಗಳನ್ನು ನೂಲು ನೆಯ್ಗೆಯಲ್ಲಿ. ಹತೋಟಿ, ಕಳಾಸಕದ್ದಿ, ತಟ್ಟುವಳಿ, ಆಗರ ಮುಂತಾದವುಗಳನ್ನು ಬಡಿಗತನದಲ್ಲಿ ಹಲಗೆ, ಹೊತ್ತಿಗೆ, ಅಯ್ಯನವರು ಇನ್ನೂ ಎಷ್ಟೋ ಅಚ್ಚ ಕನ್ನಡ ಶಬ್ದಗಳನ್ನು ಮನೆಮಾತುಗಳಲ್ಲಿ ಉಪಯೋಗಿಸುತ್ತೇವೆ. ಆದರೆ ನಮ್ಮ ಬಾಲಕರು ಓದುವ ಪುಸ್ತಕಗಳಲ್ಲಿ ಎಲ್ಲ ಪುಟಗಳನ್ನು ಮೊದಲಿನಿಂದ ಕೊನೆಯವರೆಗೆ ತಿರುಹಾಕಿದರೆ ಇಂತಹ ಶಬ್ದಗಳು ಸಿಗುವುದೇ ದುರ್ಲಭ. ಅಪರೂಪಸಿಕ್ಕರೆ ಒಂದೊ ಎರಡೊ ಶಬ್ದಗಳು--ವ್ಯವಹಾರದಲ್ಲಿ ಸಹಜವಾಗಿ ಉಪಯೋಗಿಸುತ್ತಿರುವ ಶಬ್ದಗಳನ್ನು ಗ್ರಾಂಥಿಕ ಭಾಷೆಯಲ್ಲಿ ತೊಡಕಿಸಿ ಅವರ ತಲೆಯಲ್ಲಿ ತುಂಬುತ್ತೇವೆ. ಆ ಶಬ್ದಗಳ ಜ್ಞಾನವುಳಿಗಬೇಕಾದರೆ ಕಲಿಯುವವರಿಗೂ ಕಲಿಸುವವರಿಗೂ ಸಾಕುಬೇಕಾಗಿಹೋಗುತ್ತದೆ. ಕಲಿಕೆಯ ಸಮಸ್ಯೆಗಳನ್ನು ಬಾಲಕರಿಗೆ ತಿಳಿಸಿ ಕೊಡಬೇಕಾದ ಗ್ರಾಂಥಿಕ ಭಾಷೆಯಲ್ಲಿ ಬೋಧೆ ಸಾಗಬೇಕೆಂಬುದು ಶಿಕ್ಷಣ ಶಾಸ್ತ್ರದ ನಿಯಮ ಅಥವಾ ಬಳಕೆಯ ಶಬ್ದಗಳು ಪ್ರತ್ಯಕ್ಷ ವಸ್ತುಗಳಂತೆ ಪ್ರತ್ಯಕ್ಷ ನಿದರ್ಶನಗಳು. ಈ ಶಿಕ್ಷಣ ತತ್ವವನ್ನು ಮಿಕ್ಕಿ ಬಾಲಕರಲ್ಲಿ ಮಸಮಸಕಾಗಿರುವ ಸಾಹಿತ್ಯ--ಕಲೆ ವಿಜ್ಞಾನ--ಸಾಮಾಜಿಕವಿಜ್ಞಾನ ಮೊದಲಾದ ಕ್ಷೇತ್ರಗಳ ಯಾವದೊಂದು ಹೊಸವಿಚಾರವನ್ನು ಸಹಜವಾಗಿ ತಿಳಿಲಿಕ್ಕೆ ಸಾಮರ್ಥ್ಯಹೀನವಾದ ಶಬ್ದಗಳನ್ನು ತುಂಬಿ ತಾಂ ನುಡಿಗಳನ್ನು ಬಿಸುಟಿಬಿಟ್ಟದ್ದು ನಮ್ಮ ಬುದ್ಧಿವಂತಿಕೆಯ ದಿವಾಳಿತನವನ್ನು ತೋರಿಸುತ್ತದೆ.

ಇಂತಹ ಶಿಕ್ಷಣದಲ್ಲಿಯ ಕುಂದುಕೊರತೆಗಳನ್ನು ತೆಗೆದು ಹಾಕುವದಕ್ಕಾಗಿಯೇ ಮಹಾತ್ಮಾ ಗಾಂಧೀಜಿಯವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದರು ಅವರು ಹೇಳಿದ್ದು ಹೀಗೆ:--"ವರ್ಧಾ ರಾಷ್ಟ್ರೀಯ ಶಿಕ್ಷಣ ಕ್ಷೇತ್ರದಲ್ಲಿ ಬಾಲಕರಿಗೆ ತಮ್ಮ ನಾಡನುಡಿಯ ಸರಿಯಾಗಿ ತಿಳಿವಳಿಕೆ, ತಕ್ಕಮಟ್ಟಿಗಾದರೂ ಸಾಹಿತ್ಯದ ಅನುಭವ ಆಗಬೇಕು. ಪ್ರಾಂತಿಕ ಭಾಷೆಯನ್ನೆ ಆಯಾ ಪ್ರಾಂತದ ರಾಜಭಾಷೆಯೆನ್ನಾಗಿ ಮಾಡಿಕೊಳ್ಳಬಹುದು. ಮಾತೃಭಾಷೆಯು ಸಾಹಿತ್ಯ ಭಾಷೆಯಾಗಿರದಿದ್ದರೆ ಯಾವದೊಂದು ದೇಶೀ ಭಾಷೆಗೆ ಉಪಭಾಷೆಯಾಗಿದ್ದುಕೊಂಡಿರಬಹುದು. ಆಗ ಅದು ಯಾವ ಭಾಷೆಗೆ ಉಪಭಾಷೆಯಯಗಿ ಸಂಬಂಧಪಟ್ಟಿರುತ್ತದೆಯೋ ಆ ಭಾಷೆಯ ಮಾರ್ಗವಾಗಿ ಶಿಕ್ಷಣವು ನಡೆಯಬೇಕು" ಎಂದು. ಹೀಗೆ ಶಿಕ್ಷಣದಲ್ಲಿ ಭಾಷೆಯ

ಯನ್ನು ಇಟ್ಟುಕೊಂಡು ಸಾಗಿದ್ದಾದರೆ ಆಯಾ ನಾಡಿನ ಹಿತ್ಯವು ಸರ್ವಾಂಗೀಣ ಉಜ್ವಲವಾಗುವದರಲ್ಲಿ ಸಂಶಯ ;.

ಸಮಾಜದಲ್ಲಿ ಮಾತನಾಡಲಿಕ್ಕೆ ಪ್ರತಿಯೊಬ್ಬ ವ್ಯಕ್ತಿಗೂ ತಂತ್ರ್ಯವಿರಬೇಕೆಂಬುದನ್ನು ಎಲ್ಲರೂ ಒಪ್ಪತಕ್ಕ ತು. ಅಲ್ಲಿ "ಮಾತರಿಯದವ ಜಗಳತಂದ" ಎಂಬ ತಿಗೆ ಎಡೆಗೊಡಬಾರದಾಗಿದೆ ಮಗುವಿನ ಮಾತ ಪ್ರಕಟವಾಗುವ ಸುದ್ದಿ ಪತ್ರಗಳು, ಸಂಚಿಕೆಗಳು ಂತಾದವುಗಳನ್ನು ಜಾಣತನದಿಂದ ಓದಿ ಸಮಾಜದ— ಷ್ಟದ ಏರಿಳಿತಗಳನ್ನು ತಿಳಿದುಕೊಳ್ಳಬೇಕಾಗಿದೆ ಅದು ಗೆ ಏಕೆ ? ಇದು ಹೀಗೆ ಏಕೆ ? ಎಂಬ ಸ್ಪಷ್ಟ ಕಲ್ಪನೆಯು ಗಬೇಕಾಗಿದೆ. ನೆರೆಹೊರೆಯವರೊಂದಿಗೆ ಸಹೋದರ ವವನ್ನು ಅಕ್ಷರತೆಯಿಂದ ಬೆಳಿಸಿಕೊಳ್ಳಬೇಕಾಗಿದೆ. ೀಕರಿಂದ ಅನೇಕ ಸಂದರ್ಭಗಳಲ್ಲಿ ಅನೇಕ ವಿಷಯಗ ನ್ನು ತಿಳಿದುಕೊಂಡು ಆಲಗಿಸಿಕೊಳ್ಳಬೇಕಾಗಿದೆ. ಅರಗಿ ಂಡದ್ದನ್ನು ಮರಳಿ ಸಮಾಜದೆದುರಿನಲ್ಲಿ ಇಡಬೇಕಾ ದೆ. ಅದಕ್ಕಾಗಿ ಸಭೆ-ಸಮಾರಂಭಗಳಲ್ಲಿ ಎದೆಗಾರಿಕೆ ಂದ ಮಾತನಾಡುವ ಮಾತುಗಾರಿಕೆಯನ್ನು ತನ್ನ ಶಾಲಾ ವನದಲ್ಲಿ ಅರಿವು ಮಾಡಿಕೊಳ್ಳುವದೂ ಶಿಕ್ಷಕರು ಅರಿಕೆ ಾಡಿಕೊಡುವದೂ ಮನವನರಳಿಸಿ ಮಾತುಕತೆಯನ್ನಾ ವ ತಾಯಿ-ಮಗುಗಳ ಶೈಲಿಯಂತೆ ನಡೆಯುಬೇಕೆಂಬು ನ್ನು ಯಾರು ಅಲ್ಲಗಳೆಯು ಬಹುದು ?

ನಮ್ಮ ಮಾತೃಭಾಷೆಯು ಸಾಹಿತ್ಯದಲ್ಲಿಯೇ ನಮ್ಮ ಮಾಜಿಕ ಸಂಸ್ಕೃತಿಯು ಸಂಪತ್ತು ಅಡಕವಾಗಿದೆ. ವ್ಯಾವ ಹಾರಿಕ ವಿಷಯಗಳನ್ನು ಕಲಿಯುವದರಿಂದ ಸಂಸ್ಕೃತಿಯ ಮಹತ್ವವು ಗೊತ್ತಾಗುವದು. ಅದನ್ನು ಅರಿತುಕೊಳ್ಳುವ ದಕ್ಕಾಗಿ ನಮ್ಮದೇ ಆದ ಸಾಹಿತ್ಯವನ್ನು ತಿರುಗಿ ನಾವು ರಚಿಸಿಕೊಳ್ಳಬೇಕಾಗಿದೆ. ಇದು ಈಗ ಪ್ರಚಲಿತಗೊಳ್ಳುತ್ತಿ ರುವ ರಾಷ್ಟ್ರೀಯ ಶಿಕ್ಷಣದಿಂದ ಸಾಧ್ಯವೆಂಬುದನ್ನು ಬೇರೆ ಹೇಳಬೇಕಿಲ್ಲ, ಇದರಿಂದ ಒಂದು ಅಚ್ಚುಕಟ್ಟಾದ ಹೊಸ ಪದ್ಧತಿಯ ಶಿಸ್ತು—ಸಂಘಟನೆಗಳು ದೇಶದೊಳಗಿನ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ರೂಢಿಗೊಳ್ಳುವವು. ಕಲಿತು ಶಾಲೆ ಗಳಿಂದ ಹೊರಗೆ ಬರುವ ತರುಣರು ದೇಶದ ಜನಜೀವನದ ವಿಶಿಷ್ಟತರವಾದ ನಾಗರಿಕತೆಯನ್ನು ಕಾಪಾಡಿಕೊಂಡು ಹೋಗುವರು. ಅದಕ್ಕಾಗಿ ಮಾತೃಭಾಷೆಯಿಂದಲೇ ಪ್ರಾಥ ಮಿಕ ಶಿಕ್ಷಣವು ಸಾಗಬೇಕಾಗಿರುವದು ಅವಶ್ಯ. ಸಾಹಿತ್ಯವು ರಾಷ್ಟ್ರಕ್ಕೆ ಆತ್ಮನಿದ್ದಂತೆ. ರಾಷ್ಟ್ರವು ಅಂತರಿಕ ಆತ್ಮ ಶುದ್ಧಿ ಯನ್ನು ಹೊಂದಬೇಕಾದಲ್ಲಿ ಉಚ್ಚಮಟ್ಟದ ಸಂಸ್ಕೃತಿ ಯನ್ನು ನಿರ್ಮಿಸಿಕೊಳ್ಳಬೇಕಾಗುವದು. ಅದಕ್ಕಾಗಿ ರಾಷ್ಟ್ರೀಯ ಶಿಕ್ಷಣವು ಜನ್ಮವೆತ್ತಿದೆ. ಜನರಲ್ಲಿ ನೈತಿಕ ಬಲ ವನ್ನೂ, ಶಾಂತಿ,—ಸೌಮ್ಯವನ್ನೆಗಳನ್ನೂ, ಸುಖ—ಸಮಾ ಧಾನಗಳನ್ನೂ ಉಂಟಮಾಡಲಿಕ್ಕೆ ಬೋಧನೆಯು ತಾಯ್ನು ಡಿಯಿಂದಲೇ ಆಗಬೇಕು. ಸಮಾಜದ ಆಧಾರಸ್ತಂಭಗ ಳಾದ ವ್ಯಕ್ತಿಗಳು ಇನ್ನೂ ಚಿಕ್ಕವರಿರುವಾಗಲೇ ಅವರಿಗೆ ಸತ್ಯ—ಸ್ನೇಹ—ಶಾಂತಿ—ಅಹಿಂಸೆ-ಸಹಕಾರ ಮುಂತಾದ ಗುಣಗಳನ್ನು ಮನದಲ್ಲಿ ಎರಕ ಹೊಯ್ಯಬೇಕಾಗಿದೆ. ಇದು ಮಾತೃಭಾಷೆಯಿಂದ ಸಾಗುವ ಕೃತಿ ಪ್ರಧಾನವಾ ಶೈಕ್ಷ ಣಿಕ ವಾತಾವರಣದಿಂದಲೇ, ಮತ್ತೊಂದರಿಂಡಾಗಲಾರದು.

ಭಾರತದ ಜ್ಯೋತಿಗಳು

ಕವಿ:— ಶ್ರೀ. ರಂಗನಾಥ ಓಕ.

★

ಗಾಂಧೀಜಿ

ಹಿಂಸೆ ಬಿಟ್ಟ ನನ್ನ್ಯಜನಕೆ । ಜಿಂದವಾದ ತತ್ತ್ವವನರುಹಿ ।
ಬಂಧುಭಾವದಿಂದನಡೆವ ರೀತಿತಿಳಿಸುತಾ ॥
ಒಂದೆಸವನೆ ರಾಟೆತರುವಿ । ಬಂದಿವಾಸದೊಳಗೆ ಸಿಲುಕಿ ।
ಹಿಂದ ಜನರ ಸೆರೆಯ ಪರಿದ ಸತ್ಯ ಮೂರ್ತಿಯೂ ॥ ೧ ॥

ಬಸವೇಶ್ವರ

ಘೋರ ತರವಿ ಕಷ್ಟಬಟ್ಟು । ಸೇರಿಕೊಂಡ ಜಾತಿಭೇದ ।
ದೂರ ಮಾಡಿ ಶಾಂತಿ ಜಗದಿ ಸಾರುತಾ ॥
ದಾರಿ ತೋರಿ ಮೂಢ ಜನಕೆ । ಸಾರ ಮೋಕ್ಷ ಸುಖದ ನೀವ ।
ವೀರಶೈವ ಮತದ ತತ್ತ್ವ ಪೇಳ್ದ ಧರ್ಮಿಯೂ ॥ ೨ ॥

ವಿದ್ಯಾರಣ್ಯ

ಸರಿಯೆ ನಾಡ ಶೂರ ಜನರು । ಮೆರೆವ ರಾಜ್ಯ ಹೋಯಿತೆಂದು ।
ಕೊರಗುತಿರಲು ಹುಕ್ಕ ಬುಕ್ಕರೆಂಬ ಪೆಸರಿನಾ ।
ತರುಣರನ್ನು ಹುರುಪುಗೊಳಿಸಿ । ಸಿರಿಯಕೊಟ್ಟು ಹಂಪೆ ಬಳಿಗೆ ।
ಸಿರಿಯೆ ರಾಜ್ಯ ನೆಲಿಸಿಕೊಟ್ಟ ಸಾಧುವೀತನೂ ॥ ೩ ॥

ಬುದ್ಧ

ತರುಣಿ ಮಕ್ಕಳನ್ನು ಬಿಟ್ಟು । ಹಿರಿಯ ರಾಜ್ಯವನ್ನು ಬಿಟ್ಟು ।
ಪರಮಸುಖದ ಬೋಧಕಾಗಿ ಸೇರಿ ಕಾಡನೂ ॥
ತಿರುಗಿ ತಿರುಗಿ ಕಾಣದಾಗಿ । ಮರದ ಬುಡದಿ ಮಾರ್ಗತೋರಿ ।
ಸರಳ ಬೌದ್ಧ ಧರ್ಮ ರಚಿಸಿದಾತನೀತನೂ ॥ ೪ ॥

ಶಂಕರಾಚಾರ್ಯ

ಮುರಿದು ಬೌದ್ಧ ಧರ್ಮವನ್ನು । ಹರಡಿ ವೇದ ಧರ್ಮವನ್ನು ।
ಬರೆದು ಪಿರಿಯ ಗ್ರಂಥಗಳನು ನಾಲ್ಕು ನಿಟ್ಟಿಗೇ ।
ನಿರುತ ಧರ್ಮ ಕಾರ್ಯ ನಡೆಯೆ । ನಿರಿಸಿ ನಾಲ್ಕು ಮಠಗಳನ್ನು ।
ಕಿರಿಯತನದಿ ಪಿರಿಯನಾದ ಜಾಣನೀತನೂ ॥ ೫ ॥

ಕುಮಾರಿಲ ಭಟ್ಟ

ವೇದಗಳನು ನಂಬಿರೆನುತ । ಬೋಧಿಸುತ ಯಜ್ಞ ಯಾಗ ।
ಮೋದದಿಂದ ಮಾಡಿರೆಂದು ಸಾರಿ ಹೇಳುತ ।
ಕಾದಿ ಬೌದ್ಧ ಧರ್ಮ ಮುರಿದು । ವೇದ ಧರ್ಮ ಪ್ರಚುರಗೊಳಿಸಿ ।
ಮೇದಿನಿಯೊಳು ಪೆಸರುಗೊಂಡ ಸಾಧುವೀತನೂ ॥ ೬ ॥

ವಿವೇಕಾನಂದ

ಜಗದಿ ಮೆರೆವ ಧರ್ಮಗಳಲಿ । ಮಿಗಿಲು ಹಿಂದು ಧರ್ಮವೆಂದು ।
ಹಗಲು ಇರುಳು ಬಿಡುವು ಬಿಡದೆ ಸಾರಿ ಹೇಳುತಾ ॥
ಜಗದಿ ಬಲೆತ ರಾಷ್ಟ್ರಗಳಲಿ । ನೆಗವಿ ಹಿಂದು ಧರ್ಮ ಗುಡಿಯ ।
ಮಿಗಿಲ ಕಾರ್ಯ ಮಾಡಿದಂಥ ಸ್ವಾಮಿಯೀತನೂ ॥ ೭ ॥

ಟಿಳಕ

ಪಾರತಂತ್ರ್ಯ ಕಾಲದೊಳಗೆ । ಭಾರಿ ಭಾರಿ ಲೇಖ ಬರೆದು ।
ಮೇರು ತೆರದಿ ಶ್ರದ್ಧೆಯಿಟ್ಟು ಸುಖದ ರಾಜ್ಯಕೇ ॥
ಶೂರ ಸಿಂಹನನ್ನು ನುಡಿಸಿ । ವೀರ ಗೀತೆ ಭಾಷ್ಯ ಬರೆದು ।
ಚಾರುಚರಿತ ಲೋಕಮಾನ್ಯನಾದನೀತನೂ ॥ ೮ ॥

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

ಮಾರ್ಚ ೧೯೪೯.

ಕಾರ್ಯಕ್ರಮ

ದಿನ ಮತ್ತು ದಿನಾಂಕ	ವೇಳೆ ಇಂದ	ವರೆಗೆ	ವಿಷಯ	ಗುಣಗಳು
ೋಮವಾರ -೩-೧೯೪೯	೧೦-೩೦	೧೧-೧೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
	೧೧-೩೦	೨-೦	**೧ನೆಯ ಸದರು:** ಪ್ರಾದೇಶಿಕ ಭಾಷೆ. (೨ನೆಯ ಕಾಗದ: ಪ್ರಬಂಧ ಮತ್ತು ಕೈಬರಹ)	
	೩-೦	೬-೦	**೪ನೆಯ ಸದರು:** ವಿಜ್ಞಾನ (ಸಾಯನ್ಸ)	
			(೧) ಶರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ. ಸಸ್ಯ ಮತ್ತು ಪ್ರಾಣಿಗಳ ಅಭ್ಯಾಸ ಮತ್ತು ಸಾಮಾನ್ಯ ಪ್ರಾಥಮಿಕ ವಿಜ್ಞಾನ—ಗಂಡು ಮಕ್ಕಳಿಗಾಗಿ (ಸಾಮಾನ್ಯ ಶಾಲೆಗಳು.)	
			(೨) ಶರೀರ ಶಾಸ್ತ್ರ ಮತ್ತು ಆರೋಗ್ಯ ಶಾಸ್ತ್ರ ಮತ್ತು ಗೃಹ ವಿಜ್ಞಾನ—ಹೆಣ್ಣುಮಕ್ಕಳಿಗಾಗಿ (ಸಾಮಾನ್ಯ ಶಾಲೆಗಳು.)	
			(೩) ಶರೀರ ಶಾಸ್ತ್ರ ಮತ್ತು ಆರೋಗ್ಯವಿಜ್ಞಾನ ಮತ್ತು ಒಕ್ಕಲತನದ ವಿಜ್ಞಾನ (ಒಕ್ಕಲುತನದ ಶಾಲೆಗಳಿಗಾಗಿ).	
			(೪) ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಹಾಗು ಪ್ರಾಣಿಶಾಸ್ತ್ರ ಮತ್ತು ಸಾಮಾನ್ಯ ವಿಜ್ಞಾನ—ನೂಲುವ ಮತ್ತು ನೇಯುವ ಯಾಂತ್ರಿಕ ಜ್ಞಾನವನ್ನೊಳಗೊಂಡು (ಬೇಸಿಕ್ ಶಾಲೆಗಳು).	
ಗಳವಾರ -೧೯೪೯	೧೧-೦	೨-೦	**೨ನೆಯ ಸದರು:** ಗಣಿತ. (೧ನೆಯ ಕಾಗದ— ಅಂಕಗಣಿತ)	
	೩-೦	೬-೦	**೫ನೆಯ ಸದರು:** ಇತಿಹಾಸ ಮತ್ತು ಭೂಗೋಲ.	
ಧವಾರ ೩-೧೯೪೯	೧೧-೦	೨-೦	**೧ನೆಯ ಸದರು:** ಪ್ರಾದೇಶಿಕ ಭಾಷೆ· (೧ನೆಯ ಕಾಗದ— ಗದ್ಯ, ಪದ್ಯ ಮತ್ತು ವ್ಯಾಕರಣ.)	

	೩–೦	೬–೦	**೨ನೆಯ ಪದರು:** ಗಣಿತ. (೨ನೆಯ ಕಾಗದ—- ಭೂಮಿತಿ ಮತ್ತು ಸಾದಾ ಜಮಾ ಖರ್ಚು).
ಗುರುವಾರ ೧೦–೩–೧೯೪೯	೧೧–೩೦	೨–೦	**೬ನೆಯ ಪದರು** (ಐಚ್ಛಿಕ): ಹೆಚ್ಚಿನ ಸ್ಥಾನಿಕ ಭಾಷೆ. ಅಥವಾ ಹಿಂದುಸ್ತಾನಿ.
			೭ನೆಯ ಪದರು: ಅನಿವಾರ್ಯದ (ಕಡ್ಡಾಯದ) ಉರ್ದು (ಜಿಲ್ಲೆಯ ಪ್ರಾದೇಶಿಕ ಭಾಷೆಯೆಲ್ಲಿ ಎಲ್ಲ ಪ್ರಶ್ನೆ—ಕಾಗದ ಗಳಿಗೆ ಉತ್ತರ ಬರೆಯುವ ಉರ್ದು ಉಮೇದವಾರರಿಗಾಗಿ).
	೩–೦	೬–೦	**೫ನೆಯ ಪದರು:** ಸೂಜಿಗೆಲಸ, ರೇಖನ ಕಲೆ (ಡ್ರಾಯಿಂಗು) ಪ್ರಾಯೋಗಿಕ* ಕೃಷಿ ಮತ್ತು ನೂಲುವುದು ಹಾಗೂ ನೇಯುವದು.
ಶುಕ್ರವಾರ ೧೧–೩–೧೯೪೯	೧೧–೦ ೩–೦	೨–೦ ೬–೦	**೬ನೆಯ ಪದರು** (ಐಚ್ಛಿಕ): ಸಂಗೀತ. **೬ನೆಯ ಪದರು** (ಐಚ್ಛಿಕ): ಹೊಲಿಗೆ (ಟೇಲರಿಂಗ)

ಟೀಪು:— ಪರೀಕ್ಷೆಯ ಮೊದಲನೆ ದಿನ ಎಲ್ಲ ಉಮೇದವಾರರು ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ಒಂದ ಗಂಟೆ ಮೊದಲು ಪರೀಕ್ಷಾ-ಸ್ಥಳದಲ್ಲಿ ಹಾಜರ ಇರಷಕ್ಕದ್ದು.

ಧಾರವಾಡ
೧೫–೧–೧೯೪೯

ಎ. ಎನ್. ಸಾನೆ.
ಎಜುಕೇಶನಲ್ ಇನಸ್ಪೆಕ್ಟರ, ದ. ಭಾ.

*ಬೇಸಿಕ್ ಶಾಲೆಗಳ ಉಮೇದುವಾರರ ನೂಲುವ ಹಾಗೂ ನೇಯ್ಗುವ ಪ್ರಾಯೋಗಿಕ ಪರೀಕ್ಷೆಯನ್ನು ಬರಹ ಪರೀಕ್ಷೆಗಿ ಮೊದಲು ಒಂದು ಅನುಕೂಲ ದಿನದಲ್ಲಿ ಎರ್ಪಡಿಸಲಾಗುವದು.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳು. ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ.

ಸಾಮಾನ್ಯ ವಿಜ್ಞಾನ :—ಒಳ್ಳೇ ಅನುಭವದಿಂದ

೧ ರಿಂದ ೫ನೇ ಇಯತ್ತ್ತೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ ನೇ ಇಯತ್ತೆಯಿಂದ ೬ನೇ ಇಯತ್ತೆಯವರೆಗೆ ಭೂಗೋಲದ ಹೊಸ ಜ್ಞಾನ ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು. **ಮುಲ್ಕೀ ಪರೀಕ್ಷೆಗಾಗಿ**

ಕುಮಾರ ಕಿಟ್ಟಣ್ಣ ೦—೫—೦		ಗಣಿತಸಂಗ್ರಹ ೧—೪—೦	
ಮಹಾತ್ಮರ ಪರಿಚಯ ೦—೪—೦		ವಾಕ್ಯರಚನೆ ಹಾಗೂ ನಿಬಂಧಬರೆಹ ೧—೦—೦	
ರಾಮಕೃಷ್ಣನೀತಿಯಕಥೆ ೦—೬—೦		ಗುಣವಿವೇಚನೆ ೦—೮—೦	

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

	೩–೦	೬–೦	**೨ನೆಯ ಸದರು:** ಗಣಿತ. (೨ನೆಯ ಕಾಗದ— ಭೂಮಿತಿ ಮತ್ತು ಸಾದಾ ಜಮಾ ಖರ್ಚು).
ಗುರುವಾರ ೧೦–೩–೧೯೪೯	೧೧–೦	೨–೦	**೬ನೆಯ ಸದರು** (ಐಚ್ಛಿಕ): ಹೆಚ್ಚಿನ ಸ್ಥಾನಿಕ ಭಾಷೆ. ಅಥವಾ ಹಿಂದುಸ್ತಾನಿ.
			೭ನೆಯ ಸದರು: ಅನಿವಾರ್ಯದ (ಕಡ್ಡಾಯದ) ಉರ್ದು (ಜಿಲ್ಲೆಯ ಪ್ರಾದೇಶಿಕ ಭಾಷೆಯಲ್ಲಿ ಎಲ್ಲ ಪ್ರಶ್ನೆ —ಕಾಗದಗಳಿಗೆ ಉತ್ತರ ಬರೆಯುವ ಉರ್ದು ಉಮೇದವಾರರಿಗಾಗಿ).
	೩–೦	೬–೦	**೫ನೆಯ ಸದರು:** ಸೂಜಿಗೆಲಸ, ರೇಖನ ಕಲೆ (ಡ್ರಾಯಿಂಗು) ಪ್ರಾಯೋಗಿಕ* ಕೃಷಿ ಮತ್ತು ನೂಲುವುದು ಹಾಗೂ ನೇಯುವದು.
ಶುಕ್ರವಾರ ೧೧–೩–೧೯೪೯	೧೧–೦	೨–೦	**೬ನೆಯ ಸದರು** (ಐಚ್ಛಿಕ): ಸಂಗೀತ.
	೩–೦	೬–೦	**೬ನೆಯ ಸದರು** (ಐಚ್ಛಿಕ): ಹೊಲಿಗೆ (ಟೇಲರಿಂಗ)

ಟೀಪು:— ಪರೀಕ್ಷೆಯ ಮೊದಲನೆ ದಿನ ಎಲ್ಲ ಉಮೇದವಾರರು ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ಒಂದು ಗಂಟೆ ಮೊದಲು **ಪರೀಕ್ಷಾ**–ಸ್ಥಳದಲ್ಲಿ ಹಾಜರ ಇರತಕ್ಕದ್ದು.

ಧಾರವಾಡ
೧೫–೧–೧೯೪೯

ಎ. ಎನ್. ಸಾನೆ,
ಎಜುಕೇಶನಲ್ ಇನಸ್ಪೆಕ್ಟರ, **ದ.** ಭಾ.

*ಬೇಸಿಕ್ ಶಾಲೆಗಳ ಉಪಯೋಗುವಾರರ ನೂಲುವ ಹಾಗೂ ನೇಯುವ ಪ್ರಾಯೋಗಿಕ ಪರೀಕ್ಷೆಯನ್ನು ಬರೆಹ ಪರೀಕ್ಷೆಗಿಂತ ಮೊದಲು ಒಂದು ಅನುಕೂಲ ದಿನದಲ್ಲಿ ಏರ್ಪಡಿಸಲಾಗುವದು.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳು. ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ

ಸಾಮಾನ್ಯ ವಿಜ್ಞಾನ :—ಒಳ್ಳೇ ಅನುಭವದಿಂದ

೧ ರಿಂದ ೫ನೇ ಇಯತ್ತ್ರೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತ್ರೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ ನೇ ಇಯತ್ತ್ರೆಯಿಂದ ೬ನೇ ಇಯತ್ತ್ರೆಯವರೆಗೆ ಭೂಗೋಲದ ಹೊಸ ಜ್ಞಾನ ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು. **ಮುಲ್ಕೀ ಪರೀಕ್ಷೆಗಾಗಿ**

ಕುಮಾರ ಕಿಟ್ಟಣ್ಣ ೦—೩—೦		ಗಣಿತಸಂಗ್ರಹ ೧—೪—೦	
ಮಹಾತ್ಮರ ಪರಿಚಯ ೦—೪—೦		ವಾಕ್ಯರಚನೆ ಹಾಗೂ ನಿಬಂಧಬರೆಹ ೧—೦—೦	
ರಾಮಕೃಷ್ಣನೀತಿಯಕಥೆ ೦—೬—೦		ಗುಣವಿವೇಚನೆ ೦—೮—೦	

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಮುಂಬಯಿ ಸರಕಾರದ ಕನ್ನಡ ಪಠ್ಯ ಪುಸ್ತಕ ಕಮೀಟಿ,

ಅ. ನಂ.	ಪುಸ್ತಕದ ಹೆಸರು	ಲೇಖಕರು
೧.	ಸಚಿತ್ರ ಪೌರನೀತಿ ಮಾಲೆ—೭ನೆಯ ಇಯತ್ತೆಗೆ.	—
೨.	ಪೌರನೀತಿ ಮಾಲೆ—೬ನೆಯ ಇಯತ್ತೆಗೆ.	—
೩.	ಭೂಮಂಡಲ ಪರಿಚಯ	—
೪.	ಆಧುನಿಕ ಭೈತ	—
೫.	ಸಚಿತ್ರ ಪೌರನೀತಿ—೪ ಮತ್ತು ೫ನೆಯ ಇಯತ್ತೆಗಾಗಿ	—
೬.	ಸಚಿತ್ರ ಪೌರನೀತಿ ಮಾಲೆ—೬ನೆಯ ಇಯತ್ತೆಗಾಗಿ	—
೭.	ತೋರಣ (೩) - ಕಾವ್ಯಮಾಲೆ	—
೮.	ದಿ ಸ್ಟೂಡಗಲ್ ಆಫ್ ಮಾಡರ್ನ ಮ್ಯಾನ್ (ಕನ್ನಡ)	ಮಿ. ಎಫ್. ಜಿ. ಪಿಯರ್ಸ.
೯.	ಹಿಸ್ಟ್ರಿ ಆಫ್ ಇಂಗ್ಲಂಡ—ಪಾರ್ಟ ೧ ಮತ್ತು ೨	—
೧೦.	ಕಿರಣ	—
೧೧.	ಕನ್ನಡ ನುಡಿಗನ್ನಡಿ	—

ಪ್ರಕಾಶಕರು	ಯಾವುದಕ್ಕೆ ಮಂಜೂರಾಗಿವೆ	ಬೆಲೆ
ಶ್ರೀ. ಎಲ್. ಆಯ್. ಆಕಳವಾಡಿ, ಆಶ್ರಯ ಬುಕ್ ಡಿಪೊ, ಧಾರವಾಡ.	ಪ್ರಾಥಮಿಕ ಶಾಲೆಗಳಿಗೆ ಪಠ್ಯಪುಸ್ತಕ.	೦—೧೨—೦
ಸದರ	ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ವಾಚನಾಲಯ	೦—೧೨—೦
ಸದರ	ಪ್ರಾಥಮಿಕ ಶಾಲೆಗಳ ೭ನೆಯ ಇಯತ್ತೆಗೆ ಪಠ್ಯ ಪುಸ್ತಕ.	೨—(
ಸದರ	ಪ್ರಾಥಮಿಕ ಶಾಲೆಗಳ ೪ನೆಯ ಇಯತ್ತೆಗೆ ಪಠ್ಯ ಪುಸ್ತಕ.	೦—೧೨—೦
ಶ್ರೀ. ಸಿ. ಎಸ್. ಕುಲಕರ್ಣಿ, ಮಾಳಮಡ್ಡಿ ಧಾರವಾಡ.	ಪ್ರಾಥಮಿಕ ಶಾಲೆಗಳ ೪ನೆಯ ಮತ್ತು ೫ನೆಯ ಇಯತ್ತೆಗೆ ಪಠ್ಯ ಪುಸ್ತಕಗಳು (ದೋಷಗಳನ್ನು ತಿದ್ದಿದಲ್ಲಿ).	೦—೬—೦ ೦—೮—೦
ಸದರ	ಪ್ರಾಥಮಿಕ ಶಾಲೆಗಳ ೬ನೆಯ ಇಯತ್ತೆಗೆ ಪಠ್ಯ ಪುಸ್ತಕ (ದೋಷಗಳನ್ನು ತಿದ್ದಿದಲ್ಲಿ).	೦—೧೦—೦
ಮನೋಹರ ಗ್ರಂಥ ಭಾಂಡಾರ, ಧಾರವಾಡ.	ಮಾಧ್ಯಮಿಕ ಶಾಲೆಗಳ ೬ನೆಯ ಇಯತ್ತೆಗೆ ಮತ್ತು ಪ್ರಾಥಮಿಕ ಟ್ರೇನಿಂಗ ಕಾಲೇಜುಗಳ ೨ನೆಯ ವರ್ಷದ ವರ್ಗಗಳಿಗೆ ಪಠ್ಯ ಪುಸ್ತಕ.	೦—೧೨—೦
ಮನೇಜರ, ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್, ಆಕ್ಸಫರ್ಡ ಹೌಸ, ಅಪೊಲೊ ಬಂದರ ಬಾಂಬೆ, ನಂಬರ ೧.	ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವಾಚನಾಲಯ.	೧—೧೨—೦
ಎ. ಪಿ. ಎಚ್. ಬರ್ವೆ. ಮ್ಯಾಕ್ ಮನ್ ಕಂಪನಿ, ಲಿಮಿಟೆಡ್ ೨೭೬, ಹಾರ್ನ್‌ಬಿ ರೋಡ, ಬಾಂಬೆ.	ಮಾಧ್ಯಮಿಕ ಶಾಲೆಗಳ ೪ ಮತ್ತು ೫ನೆಯ ಇಯತ್ತೆಗಳಿಗೆ ೧ನೆಯ ಭಾಗ ಹಾಗೂ ೬ ಮತ್ತು ೭ನೆಯ ಇಯತ್ತೆಗಳಿಗೆ ೨ನೆಯ ಭಾಗ ಪಠ್ಯ ಪುಸ್ತಕಗಳು.	೧—೪—೦ ೩—೮—೦
ಶ್ರೀ. ಎಸ್. ಬಿ. ಪಾವಟಿ, ಹುಬ್ಬಳ್ಳಿ.	ಪ್ರಾಥಮಿಕ ಟ್ರೇನಿಂಗ ಕಾಲೇಜುಗಳ ೨ನೆಯ ವರುಷದ ವರ್ಗಕ್ಕೆ ಪಠ್ಯ ಪುಸ್ತಕ	೧—೮—೦
ಶ್ರೀ. ಹನುಮಂತಪ್ಪ, ರಿಟಾಯರ್ಡ ಮಿಡಲ ಕನ್ನಡ ಪಂಡಿತ, ಎಕ್ಸಟೆನ್ಶನ್ ಸ್ಕೂಲ ಪಟ್ಟಣ, ಜಿಲ್ಲಾ—ಬೆಂಗಳೂರು.	ಶಿಕ್ಷಕರ ಹಾಗೂ ಪ್ರಾಥಮಿಕ ಶಾಲೆಗಳ ಮೇಲಿನ ವರ್ಗಗಳ ವಿದ್ಯಾರ್ಥಿಗಳ ವಾಚನಾಲಯ.	೧—೮—೦

ಅ. ನಂ.	ಪುಸ್ತಕದ ಹೆಸರು	ಲೇಖಕರು
೧೨.	ಹರಿಶ್ಚಂದ್ರ ಮಹಾ ಕಾವ್ಯದ ೨ರುಳು	—
೧೩.	ಹೊಸ ಪದ್ಧತಿಯ ಆರಂಭದ ಜಮಾಖರ್ಚ, ಳನೆಯ ಇಯತ್ತೆಗಾಗಿ	—
೧೪.	ಪ್ರಗತಿ ಮಾರ್ಗ ಜೀವನ	—
೧೫.	ಸಾಹಿತ್ಯ ವಿಹಾರ—ಭಾಗ ೧ ಮತ್ತು ೩	—
೧೬.	ಮಿಥಯಿ	—
೧೭.	ಐದು ಜನ ವ್ಯಾಣಿಗಳು	—
೧೮.	ನಮ್ಮ ಜಗತ್ತು (ಅವರ್ ಯುನಿವ್ವರ್ಸ್) ೬ನೆಯ ಮತ್ತು ೭ನೆಯ ಇಯತ್ತೆಗಳಿಗೆ	
೧೯.	ನಮ್ಮ ಹಿಂದುಸ್ತಾನ	—

ಪ್ರಕಾಶಕರು	ಯಾವುದಕ್ಕೆ ಮಂಜೂರಾಗಿದೆ	ಬೆಲೆ
ಪಂಡಿತ ಶ್ರೀ. ಬಸವರಾಜ ಶಾಸ್ತ್ರಿ, ಕೋಡಿಕೊಪ್ಪಮಠ, ಬಸವರಾಜ ಭವನ, ವಿಜಾಪೂರ.	ಮಾಧ್ಯಮಿಕ ಶಾಲೆಗಳ ಮೇಲಿನ ವರ್ಗಗಳಿಗೆ ಮತ್ತು ಟ್ರೇನಿಂಗ ಸಂಸ್ಥೆಗಳಿಗೆ ಪಠ್ಯಪುಸ್ತಕ.	೧—೮—೦
ಶ್ರೀ. ಆರ್. ಎಸ್. ಸಜ್ಜನ, ಕನ್ನಡ ಶಾಲಾ ಮಾಸ್ತರ, ಜೋರಾಪುರಪೇಟೆ, ವಿಜಾಪೂರ.	ಪ್ರಾಥಮಿಕ ಶಾಲೆಯ ೪ನೆಯ ಇಯತ್ತೆಗೆ ಪಠ್ಯ ಪುಸ್ತಕ.	—
ಶ್ರೀ. ಎಸ್. ಎ. ಕೋಡಿಕೊಪ್ಪಮಠ, ಟೀಚರ ಕೆ. ಬಿ. ಎಸ್. ನಂ. ೫ ವಿಜಾಪೂರ	ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಮತ್ತು ಟ್ರೇನಿಂಗ ಸಂಸ್ಥೆಗಳ ವಾಚನಾಲಯ.	೦—೧೪—೦
ಶಿಕ್ಷಣ ಪ್ರಚಾರ ಸಾಹಿತ್ಯ ಸಮಿತಿ ವಿಜಾಪೂರ.	೧ನೆಯ ಭಾಗ--ಮಾಧ್ಯಮಿಕ ಶಾಲೆಗಳ ೪ನೆಯ ಇಯತ್ತೆಗೆ ಮತ್ತು ಪ್ರಾಥಮಿಕ ಶಾಲೆಗಳ ೬, ೭ ನೆಯ ಇಯತ್ತೆಗಳಿಗೆ ಪಠ್ಯಪುಸ್ತಕ.	೧—೪—೦
	೩ನೆಯ ಭಾಗ- ಮಾಧ್ಯಮಿಕ ಶಾಲೆಗಳ ೬ನೆಯ ಇಯತ್ತೆಗೆ ಮತ್ತು ಟ್ರೇನಿಂಗ ಸಂಸ್ಥೆಗಳಿಗೆ ಪಠ್ಯ ಪುಸ್ತಕ	೨—೦—೦
ಶಿಕ್ಷಣ ಸಾಹಿತ್ಯ ಪ್ರಕಟನ, ಧಾರವಾಡ.	ಪ್ರಾಥಮಿಕ ಶಾಲೆಗಳ ೭ನೆಯ ಇಯತ್ತೆಗೆ ಪುರವಣಿ ವಾಚನ.	೦—೨—೦
ಸದರ	ಪ್ರಾಥಮಿಕ ಶಾಲೆಗಳ ೪ ಮತ್ತು ೫ನೆಯ ಇಯತ್ತೆಗಳಿಗೆ ಪುರವಣಿ ವಾಚನ.	೦—೫—೦
ಮ್ಯಾನೇಜರ, ಮ್ಯಾಕ್ ಮಿಲನ್ ಆ್ಯಂಡ ಕಂಪನಿ, ಲಿಮಿಟೆಡ್, ಹಾರ್ನಬಿ ರೋಡ, ಮುಂಬಯಿ.	ಮಾಧ್ಯಮಿಕ ಶಾಲೆಗಳ ೬ನೆಯ ಮತ್ತು ೭ನೆಯ ಇಯತ್ತೆಗಳಿಗೆ ಪಠ್ಯಪುಸ್ತಕ.	೪—೦—೦
ಮ್ಯಾನೇಜರ, ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್, ಆಕ್ಸಫರ್ಡ ಹೌಸ, ಅಪೋಲೊ ಬಂದರ, ಮುಂಬಯಿ ೧.	ಮಾಧ್ಯಮಿಕ ಶಾಲೆಗಳಿಗೆ ಪಠ್ಯಪುಸ್ತಕ.	೧—೨—೦

ನಂ.	ಪುಸ್ತಕದ ಹೆಸರು	ಲೇಖಕರು
೨೦.	ಮಾನವ ಶರೀರವಿಜ್ಞಾನ ಮತ್ತು ಆರೋಗ್ಯ ವಿಜ್ಞಾನ	—
೨೧.	ವಿಜ್ಞಾನ ಮತ್ತು ಸಾಹಿತ್ಯ	ಕೆ. ಎಸ್. ಸವಣೂರ, ಅಸಿಸ್ಟಂಟ ಲೆಕ್ಚರರ ಇನ್ ಫಿಜ ಕರ್ನಾಟಕ ಕಾಲೇಜ, ಧಾರವಾ
೨೨.	(೧) ಚಿತ್ರ ಪದ್ಮಿನಿ, (೨) ನಾನಾಸಾಹೇಬ ಪೇಶ್ವೆ, (೩) ಮಸ್ತಾನಿ ಲಕ್ಷ್ಮೀಬಾಯಿ.	ಶ್ರೀ. ಎನ್. ಪಿ. ಕುರಡಿ
೨೩.	ವೆಜಿಟೇಬಲ್ ಆ್ಯಂಡ ಇಟ್ಸ ಕಲ್ಟಿವೇಶನ್ (ಕಾಯಿಪಲ್ಲೆ ಮತ್ತು ಅದರ ಬೆಳೆಯುವಿಕೆ)	—
೨೪.	ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ	ಶ್ರೀ. ಎಸ್. ಬಿ. ಜೋಶಿ.
೨೫.	ಮಗಳಿಗೆ ತಂದೆಯ ಓಲೆಗಳು	

ಧಾರವಾಡ
೧೪-೧೧-೧೯೪೯

ಪ್ರಕಾಶಕರು	ಯಾವುದಕ್ಕೆ ಮಂಜೂರಾಗಿದೆ	ಬೆಲೆ
ಶ್ರೀ. ಬಿ. ಜಿ. ನಾಯಿಕ, ಬಿ. ಎ., ಬಿ. ಟಿ. ಟಿ.ಟಿ., ತಳಕವಾಡಿ, ಬೆಳಗಾಂವಿ.	ಮಾಧ್ಯಮಿಕ ಶಾಲೆಗಳಿಗೆ ಮತ್ತು ಟ್ರೇನಿಂಗ ಸಂಸ್ಥೆಗಳಿಗೆ ಪಠ್ಯಪುಸ್ತಕ.	೪—೦—೦
ಸ್ಟೂಡೆಂಟ್ಸ ಓನ್ ಬುಕ್ ಡಿಪೊ, ಧಾರವಾಡ.	ಮಾಧ್ಯಮಿಕ ಶಾಲೆಗಳ ಮೇಲಿನ ತರಗತಿಗಳಿಗೆ ಮತ್ತು ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೆ ಪುರವಣಿ ವಾಚನ.	೦—೧೨—೦
ಕರ್ನಾಟಕ ಹಿತೈಷಿಣಿ ಗ್ರಂಥಮಾಲೆ, ಶ್ರೀ. ಸರಸ್ವತಿ ಮಂದಿರಪ್ರ, ಹುಬ್ಬಳ್ಳಿ ರೋಡ್, ಧಾರವಾಡ.	ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳಿಗೆ ಮತ್ತು	೦—೧೫—೦
	ಮಾಧ್ಯಮಿಕ ಶಾಲೆಗಳ ೪ ಮತ್ತು ೫ನೆಯ ಇಯತ್ತೆ	೧—೦—೦
	ಗಳಿಗೆ ರ್ಯಾಪಿಡ್ ರೀಡರ (ಪುರವಣಿ ವಾಚನ).	೧—೦—೦
ಶ್ರೀ. ಸಿ. ವ್ಹಿ. ರಾವ್, ಎಫ್. ಆರ್. ಎಚ್. ಎಸ್. ಸರಸ್ವತಿ ಬಿಲ್ಡಿಂಗ್ಸ, ೫ಳ, ಶ್ರೀ. ನರಸಿಂಹ ರಾಜಾ ರೋಡ, ಬೆಂಗಳೂರು ೨.	ಎಲ್ಲ (ಶಿಕ್ಷಣ) ಸಂಸ್ಥೆಗಳ ವಾಚನಾಲಯ.	೧—೪ ೦
ಶ್ರೀ. ಎಸ್. ಬಿ. ಜೋಶಿ ಸಾಧನಕೇರಿ, ಧಾರವಾಡ	ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೆ ಪುರವಣಿ ವಾಚನ ಮತ್ತು ಎಲ್ಲ ಸಂಸ್ಥೆಗಳ ವಾಚನಾಲಯ.	೩—೦—೦
ಶ್ರೀ. ಗೋವಿಂದರಾವ ಮುಂಗಳೂರು, ಸಾಹಿತ್ಯ ಭಾಂಡಾರ, ಹುಬ್ಬಳ್ಳಿ.	ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಮೇಲಿನ ತರಗತಿಗಳಿಗೆ ಮತ್ತು ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗೆ ಪುರವಣಿ ವಾಚನ.	೧—೬—೦

(ಸಹಿ) ಪಿ ಬಿ. ದೇಸಾಯಿ.
ಎಜುಕೇಶನಲ್ ಇನಸ್ಪೆಕ್ಟರ,ದ. ಭಾ ಅವರ ಪರವಾಗಿ.

ಸೂಚನೆ

ಸರಕಾರದ ಸತ್ಯಪುಸ್ತಕ ಕಮೀಟಿಗ
ಳಿಂದ ಮುಂಜೂರಾದ ಪುಸ್ತಕಗಳ ಜಾಹೀ
ರಾತುಗಳನ್ನಷ್ಟೇ ಸ್ವೀಕರಿಸಲಾಗುವದು.

ರ. ಕೃ. ಲಕ್ಕುಂಡಿ
ಪ್ರಧಾನ ಸಂಪಾದಕರು.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ !!

ನಿಮ್ಮ ಮನೆಯ ಹಾಗು ಶಾಲೆಯ ವಾಚನಾಲಯ
ಗಳಿಗೆ ಶ್ರೇಷ್ಠ ಸಾಹಿತ್ಯ ಬೇಕೆಲ್ಲವೇ ? ಹಾಗಾದರೆ
ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕಥೆ ಕಾದಂಬರಿ
ಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ,
ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥ
ಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ
ಪುಸ್ತಕಾಲಯ, ಧಾರವಾಡ.

ನಮ್ಮ ಸಂಪೂರ್ಣ ಕ್ಯಾಟಲಾಕಿಗೆ ಮೇಲಿನ ವಿಳಾಸಕ್ಕೆ
ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ
ಬರೆಯಬೇಕಾಗಿ ವಿನ್ನಹ.

ಸರಕಾರದಿಂದ ಮುಂಜೂರಾದ ಪುಸ್ತಕಗಳು

ಶ್ರೀ. ಸಾಲಿ ರಾಮಚಂದ್ರರಾಯರಿಂದ
ರಚಿತವಾದವು.

ಬಾಲಕಾಂಡ ೧—೦-
ಅಯೋಧ್ಯಾಕಾಂಡ ೧—೪—

ಮೂಕಪ ಗಣಿತ: ಶ್ರೀ. ಕೆ. ಕೆ. ಗಲಗಲಿ.
ಪ್ರಾಥಮಿಕ ಶಾಲೆಯ ಇಯತ್ತ್ರಿಗೆ ಬೆಲೆ ೧—೦—೦
ಕೆಳಗಿನ ಪತ್ತೆಗೆ ಬರೆಯಿರಿ:—

ಆಕಳವಾಡಿ ಬುಕ್‌ಡಿಪೊ
ವಿಜಯರೋಡ, ಧಾರವಾಡ

ಶ್ರೀ. ಸಾವಟಿ ಚಿನ್ನಪ್ಪನವರು ಅಡಲ್ಫ ಎಜ
ಕೇಶನ ಆಫೀಸರ, ಗೋಕಾಕ ಅವರಿಂದ ರಚಿತವಾ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಲಿ ೦-೫-
೨) ಶಾಂತಿಸಾಗರ ೦-೪-
೩) ವಿನೋದ (ಏಕಾಂಕ ನಾಟಕ) ೦-೪
೪) ಅಶಿಕ್ಷಿತರ ಗೋಳು (ಏಕಾಂಕ ನಾಟಕ
೦-೩
೫) ಕಿರಣ (ಟ್ರೇ. ಕಾ. ದ ತಿನೆಯ ವರ್ಷಕ್ಕೆ
ಪಠ್ಯವೆಂದು ಮುಂಜೂರಾಗಿದೆ) ೧—೦—
(ಸರಕಾರಿಂದ ಲಾಯಬ್ರರಿ ಪುಸ್ತಕವೆಂದು ಮುಂಜೂರಾದ
ಇವಲ್ಲದೆ ಕೆಳಗಿನ ಪುಸ್ತಕಗಳೂ ದೊರೆಯುವವ
೫) ವಯಸ್ಕರ ಪದ್ಯಾವಲಿ ೦—೮—

ಅಚ್ಚಾಗಲಿರುವ ಪುಸ್ತಕಗಳು

೬) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ
ನವಿನ ಚಿನ್ನಪ್ಪ ಸಾವಟಿ
ಜಯಫಲಯ ಪ್ರಕಾಶನ ಸಮಿತಿ, ಗೋಕಾ

Printed by: D. T. Kayasth, at Ravindra Press, U. B. Hill (House No. 12561) Dharw
Edited and Published by R. K. Lakkundi Principal T.C.M , R. V. Desai Principal B. T.
Y. D. Nadakarni, Lady Superintendent T.C.W. Dharwar Jointly at the Kannda Prathan
Shikshan Office Govt. Training College for Men Dharwar. 7403-46-1375.

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳ

ಸಂಚಾಲಕರು: ಶ್ರೀ. ಎ. ಎನ್. ಸಾನೆ. ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.

ಸಂಪಾದಕರು: ಶ್ರೀ. ಆರ್. ಕೆ. ಲಕ್ಕುಂಡಿ. ಶ್ರೀ. ಆರ್. ವ್ಹಿ. ದೇಸಾಯಿ. ಮಿಸ್. ವಾಯ್. ಡಿ. ನಾಡಕರ್ಣಿ.

ಫೆಬ್ರುವರಿ-ಮಾರ್ಚ್ ಪ ರಿ ವಿ ಡಿ ೧೯೪೯.

★

೧.	ಸಂಪಾದಕೀಯ		೩
೨.	ಅಮೇರಿಕೆಯಲ್ಲಿ ಶಿಕ್ಷಣ	ಶ್ರೀ. ವಿ. ಕೊ. ಜವಳಿ	೪
೩.	ಮಕ್ಕಳ ಪಟ್ಟಣ	ಶ್ರೀ. ಕೆ. ಜಿ. ಸೈಯದ್ದೀನ	೬
೪.	ಪ್ರಾಥಮಿಕ, ಮಾಧ್ಯಮಿಕ ಹಾಗು ಮೂಲ ಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ ಅಭ್ಯಾಸ ಪತ್ರಿಕೆಯು		೯
೫.	ಶಿಕ್ಷಣವೂ ಸೃಷ್ಟಿ ನಿರೀಕ್ಷಣೆಯೂ	ಶ್ರೀ. ವಿ. ಬ. ಚವಣ್ಣನವರ	೨೮
೬.	ಪ್ರಾಥಮಿಕ ಶಿಕ್ಷಕರ ಸ್ಥಾನಮಾನಗಳು	ಶ್ರೀ. ರತ್ನಾಕರ ಹಾವೇರಿ	೩೧
೭.	ಶಾರೀರಿಕ ಶಿಕ್ಷಣವೂ ಹಾಗೂ ಸರಕಾರದ ಕರ್ತವ್ಯಗಳು....	ಶ್ರೀ. ಬ. ವಿ. ಮೂಲಿಮನೆ	೩೪
೮.	ಭಾರತದಲ್ಲಿ ಜನತಾ ಶಿಕ್ಷಣ	ಶ್ರೀ. ಡಿ. ಜಿ. ಭಟಕಳ	೩೬
೯.	ನಮ್ಮ ವಿಜಾಪುರದ ಪ್ರವಾಸ	ಶ್ರೀ. ಪಾ. ನಾ. ಶಾನಭಾಗ	೩೧
೧೦.	ಭಾರತದ ಜ್ಯೋತಿಗಳು	ಶ್ರೀ. ರಂಗನಾಥ ಓಕ	೪೯
೧೧.	ಹಳ್ಳಿಯ ಶಿಕ್ಷಣದ ಕೆಲವು ಸಮಸ್ಯೆಗಳು...	ಶ್ರೀ. ನಾಯಕ ಜಯಂತರಾಯರು....	೪೩

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ. ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟವು

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯ ೬ ಪುಸ್ತಕಗಳು : (೧ನೆಯ ಇಯತ್ತ್ತೆಯಿಂದ ೬ನೆಯ ಇಯತ್ತ್ತೆಯವರೆಗೆ)

ಸಚಿತ್ರ ಪೌರನೀತಿ ಮಾಲೆಯ ೭ ಪುಸ್ತಕಗಳು : (೨ನೆಯ ಇಯತ್ತ್ತೆಯಿಂದ ೮ನೆಯ ಇಯತ್ತ್ತೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯ ೬ ಪುಸ್ತಕಗಳು: (೨ನೆಯ ಇಯತ್ತ್ತೆಯಿಂದ ೭ನೆಯ ಇಯತ್ತ್ತೆಯವರೆಗೆ)

ಭೂಮಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತ್ತೆಗೆ, ಭಾಗ ೪, ೭ನೆಯ ಇಯತ್ತ್ತೆಗೆ)

ಆಧುನಿಕ ರೈತ : ೧ನೆಯ ಭಾಗ ೪ನೆಯ ಇಯತ್ತ್ತೆಗೆ, ೨ನೆಯ ಭಾಗ, ೫ನೆಯ ಇಯತ್ತ್ತೆಗೆ.) ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ, ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ
ಅಭ್ಯಾಸಪತ್ರಿಕೆಯನ ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ರಂ. ರಾ. ಕೇಲಾರ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತ್ತೆಗಾಗಿ)	.....	ಬೆಲೆ ೪ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತ್ತೆಗಾಗಿ)	.....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತ್ತೆಗಾಗಿ)	.....	,, ೧ ರೂ. ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತ್ತೆಗಾಗಿ)	.....	,, ೧ ರೂ. ೪ ಆ.

ಎಲ್ಲ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ಪ್ರಾಯೋಗಿಕ ಭೂಮಿತಿಯನ್ನು ಕುರಿತು ಸಶಾಸ್ತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲಸ್ಥಳಿದ್ದ ಪುಸ್ತಕವ್ಯಾಪಾರಿಗಳಲ್ಲಿಯೂ ದೊರೆಯುವವು.

ಕನ್ನಡ ಪ್ರಾಥಮಿಕ ಶಿಕ್ಷಣ



ಪ್ರಧಾನ ಸಂಪಾದಕರು: ರ. ಕೃ ಲಕ್ಕುಂಡಿ.

ಪುಟ ೮೮ ಫೆಬ್ರುವರಿ—ಮಾರ್ಚ ೧೯೪೯ ಸಂಚಿಕೆ ೯-೧೦

ಸಂಪಾದಕೀಯ

ೃಯ ಶಾಲೆಯು ಸಾಂಘಿಕ ಜೀವನದ ಕೇಂದ್ರವು

ಕೇಂದ್ರ ಸರಕಾರದ ವಿದ್ಯಾಸಚಿವರಾದ ಮಾನ್ಯ ಮೌಲಾನಾ ಅಬುಲ್ ಕಲಮ್ ಆಝಾದರವರು ಹಳ್ಳಿಯ ಶಾಲೆಯನ್ನು ಸಾಂಘಿಕಜೀವನದ ಕೇಂದ್ರವನ್ನಾಗಿ ಮಾರ್ಪಡಿಸುವ ಆವಶ್ಯಕತೆಯನ್ನು ಕುರಿತು ಕೇಂದ್ರ ಸಲಹಾ ಸಮಿತಿಯಲ್ಲಿ ದಿನಾಂಕ ೭-೧೧-೧೯೪೮ ರಂದು ಒಂದು ಉಪನ್ಯಾಸವನ್ನಿತ್ತರು. ಆಗ ಅವರು ಮೂಲಶಿಕ್ಷಣ ಹಾಗು ಸಮಾಜ ಸೇವಾ ಕಾರ್ಯಕ್ರಮವು ಹಳ್ಳಿಗರಿಗೆ ಒಮ್ಮೆಲೆ ಆಕರ್ಷಕವೂ, ಪ್ರಯೋಜನಕಾರಿಯೂ ಆಗಬೇಕಾದರೆ, ಹಳ್ಳಿಯ ಶಾಲೆಯ ಮಕ್ಕಳಿಗೆ ಕೇವಲ ಜ್ಞಾನವನ್ನೀಯುವ ಸ್ಥಳಗಳಾಗಿರದೆ ಅವು ಹಳ್ಳಿಗಳ ಸಾಂಘಿಕ ಜೀವನದ ಕೇಂದ್ರಗಳೇಕೆಂದು ನಿರ್ಣಯಿಸಲಾಗಿದೆ. "ಎಂದು ಸಾರಿದರು. ಮುಂದು ಹೇಳಿದ್ದೇನೆಂದರೆ, "ಶಾಲೆಗಳು ಮಕ್ಕಳು ತರುಣರಿಗೆ ಹಾಗು ಪ್ರೌಢರಿಗೆ ಜ್ಞಾನದಾನ ಮಾಡುವು ಅವು ಅವರ ಕ್ರೀಡಾಂಗಣವೂ ಆಗಬೇಕು; ಮನಸ್ಥಳವೂ ಆಗಬೇಕು."

ಮೂಲ ಶಿಕ್ಷಣ ಹಾಗು ಸಮಾಜ ಶಿಕ್ಷಣದ ಈ ಯೋಜನೆಯನ್ನು ಪ್ರಗತಿಪರ ಮಾಡಲು ಮುಖ್ಯವಾಗಿ ಹನ್ನೆರಡು ಮುದ್ದೆಗಳನ್ನೊಳಗೊಂಡ ಕಾರ್ಯಕ್ರಮವೊಂದನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದ ಮುಖ್ಯ ರೂಪ-ರೇಷೆಗಳನ್ನು ಇದರಡಿ ಕೊಡಲಾಗಿದೆ. ಇವು ಪ್ರಾಥಮಿಕ ಶಿಕ್ಷಕರಿಗೆ ಮಾರ್ಗದರ್ಶಕವಾಗುವುವು. ಇವುಗಳಂತೆ ಕಾರ್ಯ ಮಾಡಿದಲ್ಲಿ ನಮ್ಮ ನಾಡಿನ ಶಿಕ್ಷಣವು ಮುಂದುವರಿದು ನಮ್ಮ ನಾಡು ಪ್ರಾಚೀನ ಗೌರವ ಪರಂಪರೆಗೆ ತಕ್ಕುದಾಗುವುದು.

ಹಳ್ಳಿಯ ಶಾಲೆಯು ಇಡಿ ಹಳ್ಳಿಯ ಶಿಕ್ಷಣ, ಹಿತಸಾಧನೆ, ಆಟ ಹಾಗು ಮನರಂಜನೆಗಳ ಕೇಂದ್ರವಾಗುವದು. ಹಳ್ಳಿಗರ ವಿವಿಧ ಗುಂಪುಗಳು—ಬಾಲಕರು, ತರುಣರು ಹಾಗು ಪ್ರೌಢರು—ಶಾಲೆಯ ಆವಾರವನ್ನು ತಮ್ಮ ತಮ್ಮ ಚಟುವಟಿಕೆಗಳಿಗಾಗಿ ಸರತಿಯಮೇಲೆ ಉಪಯೋಗಿಸಿಕೊಳ್ಳುವವು. ಪ್ರಕ್ಷೇಪಕ (projector), ಧ್ವನಿವರ್ಧಕ ಯಂತ್ರ, ಪಾಯಾದೀಪ, ಧ್ವನಿಸಂಗ್ರಹ ಯಂತ್ರ ಹಾಗು ಚಲಚ್ಚಿತ್ರಪ್ರದರ್ಶಕಗಳಿಂದ ಸುಸಜ್ಜಿತವಾದ ಮೋಟಾರುಗಳು ಮೇಲಿಂದ ಮೇಲೆ ಚಲಚ್ಚಿತ್ರ-ಪ್ರದರ್ಶನ ಹಾಗು ಸಂಗ್ರಹಿತ ಭಾಷಣಗಳಿಂದ ಜನತೆಗೆ ಮನೋರಂಜನೆಯೊಡನೆ ಜ್ಞಾನದಾನವನ್ನೂ ಮಾಡುವವು. ಈ ಮೋಟಾರುಗಳು ಪ್ರತಿಯೊಂದು ಶಾಲೆ-

ಯನ್ನು ವಾರಕ್ಕೊಮ್ಮೆಯಾದರೂ ಸಂದರ್ಶಿಸಬೇಕೆಂದು ಸೂಚಿಸಲಾಗಿದೆ. ಶಾಲೆಗಳಿಗೆ ಆಕಾಶವಾಣಿ ಯಂತ್ರಗಳನ್ನೂ ಪೂರೈಸಲಾಗುವದು. ಅಲ್ಲದೆ ಹಳ್ಳಿಯ ಸಮಾಜದ ಬೇರೆ ಬೇರೆ ವಯಸ್ಸಿನ ಜನವಿಭಾಗಕ್ಕೆ ಅನುಗುಣವಾದ ಕಾರ್ಯಕ್ರಮಗಳನ್ನು ಆಕಾಶವಾಣಿಯಿಂದ ಬಿತ್ತರಿಸುವ ವ್ಯವಸ್ಥೆಯನ್ನೂ ಏರ್ಪಡಿಸಲಾಗುವದು. ಮಂತ್ರಿ-ಮಂಡಲದ ಸುದ್ದಿ ಹಾಗು ಆಕಾಶವಾಣಿ ಶಾಲೆಯು ಈಗಾಗಲೇ ೧೪೦ ಆಕಾಶವಾಣಿ ಯಂತ್ರಗಳನ್ನು ಪೂರೈಸಿದೆ. ಈ ಸಂಖ್ಯೆಯನ್ನು ಆದಷ್ಟು ತೀವ್ರದಲ್ಲಿ ಇನ್ನೂ ಹೆಚ್ಚಿಸಲು ಸೂಚಿಸಲಾಗಿದೆ.

"ಸಮಾಜಕ್ಕೆ ಉಪಯುಕ್ತವಾದ ಮನರಂಜನ — ಕಾರ್ಯಕ್ರಮಗಳನ್ನು ಏರ್ಪಡಿಸಿಕೊಳ್ಳಲು ಹಳ್ಳಿಗರನ್ನು ಪ್ರೋತ್ಸಾಹಿಸಲಾಗುವದು. ಜನಸ್ರಿಯ ನಾಟಕಗಳನ್ನು ಶಾಲೆಗಳಲ್ಲಿ ಸಂಘಟಿಸಲಾಗುವದು. ಶ್ರೇಷ್ಠ ತರಗತಿಯ ನಾಟಕಗಳಿಗೆ ಮೆಚ್ಚುಕೊಡಲಾಗುವದು. ಇವಲ್ಲದೆ, ರಾಷ್ಟ್ರೀಯ ಹಾಗು ಸಾಮಾಜಿಕ ಗೀತೆಗಳನ್ನು ಕಲಿಸುವ ಏರ್ಪಾಟನ್ನೂ ಮಾಡಲಾಗುವದು. ಬೇರೆ ಬೇರೆ ಶಾಲೆ ಹಾಗು ಹಳ್ಳಿಗಳಲ್ಲಿ ಆಗಾಗ ಸಾಂಘಿಕ ಆಟ ಹಾಗು ಸ್ಪರ್ಧೆಗಳನ್ನು ಏರ್ಪಡಿಸಲಾಗುವದು. ನಿಯತಕಾಲಿಕ ಪ್ರದರ್ಶನಗಳ ಸಂಘಟನೆ, ಜಾತ್ರೆ ಹಾಗು ಕೂಡುಪಯಣ (ಪ್ರವಾಸ)ಗಳೇ ಸಾಂಘಿಕ ಜೀವನದ ನಿತ್ಯ ಲಕ್ಷಣಗಳಾಗುವವು.

ಹಳ್ಳಿಗರಿಗೆ ಸ್ಥಾನಿಕ ಉದ್ಯೋಗ ಅಥವಾ ಕಸಬೊಂದನ್ನು ಸ್ಥೂಲವಾನವಾಗಿ ಕಲಿಸುವುದೊಂದು ಈ ಕಾರ್ಯಕ್ರಮದ ಮುಖ್ಯ ಅಂಗವಾಗಿದೆ. ಮಹತ್ವದ ರಾಷ್ಟ್ರೀಯ ಘಟನೆ ಹಾಗು ಪ್ರಚಲಿತ ಸಮಸ್ಯೆಗಳ ಪರಿಚಯವನ್ನೂ ಹಳ್ಳಿಗರಿಗೆ ಮಾಡಿಕೊಡಲಾಗುವದು. ಇದಕ್ಕಾಗಿ ವಿವಿಧ ವಿಷಯಗಳ ಪೂರ್ಣ ಜ್ಞಾನವನ್ನು ವ್ಯಾಖ್ಯಾತರನ್ನು ಹಳ್ಳಿಗಳಿಗೆ ಆಗಾಗ ಆಮಂತ್ರಿಸಲಾಗುವದು.

"ಹಳ್ಳಿಯ ಶಾಲೆಯನ್ನು ಸಾಮಾಜಿಕ ಚಟುವಟಿಕೆಗಳ ಕೇಂದ್ರವನ್ನಾಗಿ ಮಾರ್ಪಡಿಸಲು ಸಹಾಯಕವಾಗಿರುವ ಹನ್ನೆರಡು ಮುದ್ದೆಗಳ ಈ ವ್ಯಾಪಕ ಕಾರ್ಯಕ್ರಮವನ್ನು ಪೂರ್ತಿಗೊಳಿಸಲು ಮಂತ್ರಿಮಂಡಲದ ಆರೋಗ್ಯ, ಕೃಷಿ ಕಾರ, ಸುದ್ದಿ ಹಾಗು ಆಕಾಶವಾಣಿ, ಒಕ್ಕಲುತನ ಮುಂತಾದ ಎಲ್ಲ ವಿಭಾಗಗಳು ತಮ್ಮ ಪೂರ್ಣವಾದ ಸಹಕಾರವನ್ನು ನೀಡುವವು."

ಪ್ರಾಥಮಿಕ ಶಾಲೆಗಳ ೫ ರಿಂದ ೭ ನೆಯ ಮತ್ತು ಮಾಧ್ಯಮಿಕ ಶಾಲೆ (ಹೈಸ್ಕೂಲು)ಗಳ ೧ ರಿಂದ ೩ ನೆಯ ಇಯತ್ತೆಯ ವರೆಗಿನ ಅಭ್ಯಾಸಪತ್ರಿಕೆ

ಪ್ರಾಥಮಿಕ, ಮಾಧ್ಯಮಿಕ ಮತ್ತು ಬೇಸಿಕ್ ಬೋಡುಗಳಿಂದ ಅಂಗೀಕೃತವಾದ ಪ್ರಾಥಮಿಕ ಶಾಲೆಗಳ ೫ರಿಂದ ೭ನೆಯ ಮತ್ತು ಮಾಧ್ಯಮಿಕ ಶಾಲೆ (ಹೈಸ್ಕೂಲು)ಗಳ ೧ ರಿಂದ ೩ನೆಯ ಇಯತ್ತೆಯ ವರೆಗಿನ ಹೊಸ ಅಭ್ಯಾಸಪತ್ರಿಕೆಯನ್ನು ಈ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸಲಾಗುವುದು. ಮುಂಬಯಿ ಇಲಾಖೆಯ ವಿದ್ಯಾಖಾತೆಯ ಮೈಸೂರ್ ಡೈರೆಕ್ಟರೇಟಿನಿಂದ ಅಪ್ಪಣೆ ಬಂದ ಮೇರೆಗೆ ಈ ಸಂಚಿಕೆಯಲ್ಲಿ ಪ್ರಾಥಮಿಕ ಶಾಲೆಗಳ ೫ನೆಯ ಮತ್ತು ಮಾಧ್ಯಮಿಕ ಶಾಲೆಗಳ ೧ನೆಯ ಇಯತ್ತೆಯ ಅಭ್ಯಾಸ ಪತ್ರಿಕೆಯನ್ನು ಮಾತ್ರ ಪ್ರಕಟಿಸಲಾಗಿದೆ. ಉಳಿದ ಇಯತ್ತೆಗಳ ಅಭ್ಯಾಸ ಪತ್ರಿಕೆಯನ್ನು ಮುಂದಿನ ಏಪ್ರಿಲ್ ಮತ್ತು ಮೇ ತಿಂಗಳುಗಳ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

———

ಅಮೇರಿಕೆಯಲ್ಲಿ ಶಿಕ್ಷಣ

ಲೇಖಕರು: ಶ್ರೀ. ವಿ. ಕೊ. ಜವಳಿ, ನ್ಯೂಯಾರ್ಕ್.

೧. ಅಮೇರಿಕೆಯು ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಾಡು. ಈ ತತ್ವದ ಪ್ರತಿಬಿಂಬವು ಶಿಕ್ಷಣ ಕ್ಷೇತ್ರದಲ್ಲಿಯೂ ಕಂಡು ಬರುತ್ತದೆ. ಮಗುವಿಗೂ ಒಂದು ವ್ಯಕ್ತಿತ್ವ (Personality) ಉಂಟು, ಅದನ್ನು ಗೌರವಿಸಬೇಕು ಮತ್ತು ಬೆಳೆಸಬೇಕು ಎಂಬುದು ಶಿಕ್ಷಣದ ಪ್ರತಿಯೊಂದು ಮೆಟ್ಟಿಲಲ್ಲಿಯೂ ಕಂಡುಬರುತ್ತದೆ. ಉದಾಹರಣೆಗಾಗಿ— ನಾನು ನೋಡಿದ ಅನೇಕ ಶಾಲೆಗಳಲ್ಲಿ ಮಕ್ಕಳೇ ಸಮಸ್ಯೆಗಳನ್ನು ಸೂಚಿಸುವದೂ ಚರ್ಚಿಸುವದೂ ಕಂಡುಬಂತು. (ಅ) ಈ ವಾರ ಯಾವ ದೃಶ್ಯವನ್ನು ನೋಡಲಿಕ್ಕೆ ಹೋಗುವಾ! ೩-ನೇ ವರ್ಗದ (Grade) ವಿದ್ಯಾರ್ಥಿಗಳು ವರ್ಗದಲ್ಲಿ ಚರ್ಚಿಸುವರು. ಯಾವ ಸ್ಥಳಕ್ಕೆ, (ಉದಾ: ವಸ್ತು ಸಂಗ್ರಹಾಲಯ, "ಸ್ವಾತಂತ್ರ್ಯ ಮೂರ್ತಿ" Statue of Liberty ಮುಂತಾದವು) ಯಾವ ಮಾರ್ಗವಾಗಿ, ಯಾವಾಗ್ಗೆ ಹೊರಡುವದು, ಎಷ್ಟು ಖರ್ಚು ಆಗುತ್ತವೆ ಮುಂತಾದವನ್ನು ಮಕ್ಕಳೇ ವಿಚಾರಿಸಿ ನಿಶ್ಚಯಿಸಿ, ಶಿಕ್ಷಕಿಯೊಡನೆ ಪ್ರವಾಸಕ್ಕೆ ಹೊರಡುವರು. ಒಮ್ಮೊಮ್ಮೆ ಪಾಲಕರು, ಮಕ್ಕಳು, ಶಿಕ್ಷಕರು ಕೂಡಿಯೇ ಪ್ರವಾಸಕ್ಕೆ ಹೊರಡುವರು. (ಆ) ಒಂದು ವಾರ ಮುಂಚೆಯೇ ನಿಶ್ಚಯಿಸಿಕೊಂಡು ಒಬ್ಬ ವ್ಯಕ್ತಿಯ ಜೀವನ ಚರಿತ್ರೆಯ ಬಗ್ಗೆ (ಉದಾ: ಲಿಂಕನ್ ಪಾಶಿಂಗಟನ್) ಮಕ್ಕಳು ಬೇರೆ ಬೇರೆ ಪುಸ್ತಕಗಳನ್ನು ಓದಿ ಕೊಂಡು ಬರುವರು. ಮಕ್ಕಳು ತಮಗೆ ಉತ್ತಮವೆನಿಸಿದ ಭಾಗವನ್ನು ಎಲ್ಲರಿಗೂ ಓದಿ ತೋರಿಸುವರು. ಆಮೇಲೆ ಅವರ ಮೇಲೆ ಚರ್ಚೆ ನಡೆಯುವದು. ವಿದ್ಯಾರ್ಥಿಯು ವರ್ಗದ ಎದುರು ನಿಂತು ಶಿಕ್ಷಕನ ಪಾತ್ರವನ್ನು ವಹಿಸುವನು. ಶಿಕ್ಷಕನು ವರ್ಗದ ಹಿಂದೆ ಕೂಡ್ರುವನು. ಅವಶ್ಯವೆನಿಸಿದಾಗ ಚರ್ಚೆಗೆ ಚಾಲನ ಕೊಡುವನು. (ಇ) ಓದುವ ಕತೆ ವರ್ಗದ ಮುಂದೆ ನಿಂತು ಒಬ್ಬ ವಿದ್ಯಾರ್ಥಿಯು ಒಂದು ಗದ್ಯ ಭಾಗವನ್ನಾಗಲಿ, ಪದ್ಯ ಭಾಗವನ್ನಾಗಲಿ ಓದುವನು. ಅವನು ಓದುವ ಶೈಲಿ, ಉಚ್ಚಾರ, ತಪ್ಪುಗಳನ್ನು ಕುರಿತು ಎಲ್ಲ ವಿದ್ಯಾರ್ಥಿಗಳೂ ಚರ್ಚಿಸುವರು. "ಹೀಗೆ ಓದಬೇಕು" ಎಂದು ಬೇರೆ ಬೇರೆ ವಿದ್ಯಾರ್ಥಿಗಳು ವರ್ಗದ ಮುಂದೆ ನಿಂತು ಓದಿ ತೋರಿಸುವರು. ಎಲ್ಲ ಮಕ್ಕಳೂ ಚರ್ಚೆಯಲ್ಲಿ ಭಾಗವಹಿಸುವಂತೆ ಶಿಕ್ಷಕನು ಎಲ್ಲರನ್ನೂ ಪ್ರೋತ್ಸಾಹಿಸುವನು.

೨. ಶಾಲೆಯು ಸಮಾಜದ ಒಂದು ಪ್ರತೀಕವೆಂದು ತಿಳಿಯುವದು ಮತ್ತು ಆಚರಿಸುವದು. ಅಮೇರಿಕೆಯ (ನ್ಯೂಯಾರ್ಕದ) ಶಾಲೆಗಳಲ್ಲಿ ಸಂದರ್ಭಗಳನ್ನು ಕಲ್ಪಿಸಿ, ಅನುಭವದ ಮೂಲಕ ನಾಗರಿಕ ಜೀವನದ ಪರ್ತನವನ್ನು ಕಲಿಸುವರು. ಶಾಲೆಯಲ್ಲಿಯ ಅಂಗಡಿಯನ್ನು ವಿದ್ಯಾರ್ಥಿಗಳೇ ನಡೆಸುವರು. ಅಲ್ಲಿ ಹುಡುಗರು ಹಾಳ, ಪುಸ್ತಕ, ಪೆನ್‌ಸಿಲ್, ಮಸಿ ಮೊದಲಾದ ಸಾಮಾನು ಕೊಳ್ಳುವರು. ಬಂದ ಲಾಭವನ್ನು ವಿದ್ಯಾರ್ಥಿಗಳಲ್ಲಿ ಹಂಚುವರು. ಶಾಲೆಯಲ್ಲಿ "ಬ್ಯಾಂಕ್"ನ್ನು ವಿದ್ಯಾರ್ಥಿಗಳೇ ನಡೆಸುವರು. ಬ್ಯಾಂಕಿನ ಲಿಕ್ವಿಪತ್ರ ಇಡುವ ಪದ್ಧತಿಯನ್ನೂ ಅನುಭವದ ಮೂಲಕ ಕಲಿಯುವರು. ಆದರೆ ನಮ್ಮ ಶಾಲೆಗಳಲ್ಲಿ ಜಮಾ ಖರ್ಚು, ಗಣಿತ ಕಲಿಸುವಾಗ ನಿರಸನ ಪದಾರ್ಥಗಳಾದ ಹಲಿಗೆ, ಖಡು, ಹುಣಸಿಪಕ್ಕ, ಪರಳು ಉಪಯೋಗಿಸುವರು! ಕಾಲ್ಪನಿಕ ಸಂದರ್ಭವನ್ನು ಹುಡುಕಿಕೊಂಡು, ಕಾಲ್ಪನಿಕ ವ್ಯವಹಾರವನ್ನು ಹುಡುಕಿ, ಕಾಲ್ಪನಿಕ ಲೆಕ್ಕಗಳನ್ನು ಕಲಿಸುವದು ನಮ್ಮ ಪದ್ಧತಿ. ನಮ್ಮ ಶಾಲೆಗಳಲ್ಲಿ ಅಂಗಡಿಗಳನ್ನು ಸ್ಥಾಪಿಸುವದು ಆಗದಿದ್ದರೂ ಶಿಕ್ಷಕನು ಆಗಾಗ್ಗೆ ವಿದ್ಯಾರ್ಥಿಗಳನ್ನು ಪೇಟೆಯಲ್ಲಿಯ ಅಂಗಡಿಗಳಿಗೆ ಕರಕೊಂಡು ಹೋಗಿ ಕೊಡುಕೊಳ್ಳುವ ಮತ್ತು ಲೆಕ್ಕದ ಅನುಭವವನ್ನು ಯೇಕೆ ಮಾಡಿ ಕೊಡಬಾರದು? ಇದರಂತೆ ಇತರ ವಿಷಯವಳನ್ನು ಪ್ರಾಪಂಚಕ್ಕೆ ಹೊಂದಿಸಿ ಕಲಿಸಬಹುದು. ವರ್ಕ್ ಯೋಜನೆಯಲ್ಲಿ ಈ ತರದ ವಿಚಾರಗಳು ಕಂಡುಬರುವವು. ಇಲ್ಲಿ ಕಂಡುಬರುವದು ಉದ್ಯೋಗದ ಮುಖಾಂತರ ಶಿಕ್ಷಣವಲ್ಲ. ಆದರೆ ಜೀವನದ ಮುಖಾಂತರ ಶಿಕ್ಷಣ. ಇಲ್ಲಿಯ ಶಾಲೆಗಳಲ್ಲಿ ಮಕ್ಕಳಲ್ಲಿ ಸಾಂಘಿಕ ಜೀವನ, ಮುಂದಾಳುತನ, ಚಿಕಿತ್ಸಕ ಬುದ್ಧಿಯನ್ನು ಬೆಳೆಸಲಿಕ್ಕೆ

ಅನೇಕ ಪ್ರಸಂಗಗಳನ್ನು ಒದಗಿಸಿ ಕೊಡುವರು. ಆದರೆ ಸೇವಾ ಭಾವನೆಯ ಕಲ್ಪನೆಯೇ ಈ ಜನರಲ್ಲಿ ಮತ್ತು ಅವರ ಶಿಕ್ಷಣ ಪದ್ಧತಿಯಲ್ಲಿ ಕಿಂಚಿತ್ತೂ ಇರುವದಿಲ್ಲ. ಗಾಂಧೀಜಿಯವರ ಶಿಕ್ಷಣ ಪದ್ಧತಿಯಲ್ಲಿ ಸಮಾಜ ಸೇವೆಗೆ ಒಂದು ಸ್ಥಾನವುಂಟು.

೩. ಪಾಲಕರ ಸಂಪರ್ಕ "ಪಾಲಕರ ವಾರ" (Parents' week)ವೆಂದು ಪ್ರತಿಯೊಂದು ಸಾಲೆಯವರೂ ಆಚರಿಸುವರು. ಕೆಳಗಿನ ವರ್ಗಗಳಲ್ಲಿಯಂತೂ ಈ ವಾರವನ್ನು ಮೇಲಿಂದ ಮೇಲೆ ಆಚರಿಸುವರು. ಆಗ್ಗೆ ಅನೇಕ ಪಾಲಕರು ಸಾಲೆಗೆ ಬಂದು ತಮ್ಮ ಮಕ್ಕಳನ್ನು ಕಾಣುವರು. ಶಿಕ್ಷಕಿಯೊಡನೆ ತಮ್ಮ ಮಗುವಿನ ಬಗ್ಗೆ ವಿಚಾರಿಸುವರು. ಆ ಹೊತ್ತು ಬೇಕಾದ ಪೇಕೆಯಿಲ್ಲಿ ಪಾಲಕರು ವರ್ಗದ ಕೋಣೆಯಲ್ಲಿ ಬರುವರು. ಹೀಗೆ ಸಾಲೆಯೊಡನೆ, ಶಿಕ್ಷಕರೊಡನೆ ಸಂಪರ್ಕ ಬೆಳೆಸುವರು.

೪. ಚಟುವಟಿಕೆ: ನಾನು ನೋಡಿದ ಪ್ರತಿಯೊಂದು ವರ್ಗದಲ್ಲಿ, ಮತ್ತು ಪ್ರತಿಯೊಂದು ಸಾಲೆಯಲ್ಲಿ ಮಕ್ಕಳು ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿದ್ದು ಕಂಡು ಬಂತು. ಚಟುವಟಿಕೆಯೆಂದರೆ ಕೇವಲ "ಹಸ್ತ ವ್ಯವಸಾಯ" —Manual Labour ವಲ್ಲ. ವಿದ್ಯಾರ್ಜನೆಯೆಂದರೆ ಪುಸ್ತಕವನ್ನು ಮುಂದಿಟ್ಟುಕೊಂಡು ಓದುವುದಾಗಲಿ, ಶಿಕ್ಷಕನು ಹೇಳಿದ್ದನ್ನು ಕೇಳುವುದಾಗಲಿ ಅಲ್ಲ, ಮಕ್ಕಳು ಒಂದಿಲ್ಲೊಂದು ಕೃತಿಯಲ್ಲಿ ತೊಡಗುವದು. ಉದಾ: ಬಣ್ಣ ಬರಿಯುವದು, ಚಿತ್ರ ತೆಗೆಯುವದು, ಕಾಗದ ಕತ್ತರಿಸುವದು, ವಿಮಾನ, ಪೆಟ್ಟಿಗೆ, ಗಾಡಿ ಮಾಡುವದು ಮೊದಲಾದ ನಾನಾ ವಿಧದ ಕೃತಿ ಅಥವಾ ಕೆಲಸವನ್ನು ವಿದ್ಯಾರ್ಥಿಗಳು ಮಾಡುವರು.

೫. ಸಾಲೆಯಲ್ಲಿ ಮಕ್ಕಳಿಗೆ ತಿನಿಸಿನ (eating) ವ್ಯವಸ್ಥೆ: ನ್ಯೂಯಾರ್ಕ ಪಟ್ಟಣದಲ್ಲಿ ತಿನಿಸಿನ ವ್ಯವಸ್ಥೆ ಇಲ್ಲದ ಸಾಲೆಗಳೇ ಇಲ್ಲ. ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ (Cafe taria) "ಉಪಹಾರಗೃಹ" ವಿರುವದು. ದೊಡ್ಡ ಬಿಡುವಿನಲ್ಲಿ ಮಕ್ಕಳು ಅಲ್ಲಿ ಹೋಗಿ ತಮಗೆ ಬೇಕಾದ ತಿಂಡಿ ತಿನುಸುಗಳನ್ನು ಸೇವಿಸುವರು. ಒಂದೊಂದು ಸಾಲೆಯಲ್ಲಿ ಮಕ್ಕಳ ತಿನಿಸಿನ ಅರ್ಧ ಭಾಗವನ್ನು "ಶಿಕ್ಷಣ ಸಂಸ್ಥೆಯವರೂ" (Board of Education) ಉಳಿದ ಅರ್ಧ ಭಾಗವನ್ನು ಪಾಲಕರೂ ಕೊಡುವರಂತೆ. ಬಾಲಕ ವರ್ಗದ ಚಿಕ್ಕ ಮಕ್ಕಳು ಮಾತ್ರ ತಮ್ಮ ವರ್ಗದ ಕೋಣೆಯಲ್ಲಿಯೇ ತಮ್ಮ ಫಲಾಹಾರಗಳನ್ನು ತಿನ್ನುವರು. ಒಂದು ಸಾಲೆಯಲ್ಲಿ ನಾನು ಹೋದಾಗ್ಗೆ ಬಾಲಕ ವರ್ಗದ ಮಕ್ಕಳು ತಮ್ಮ ಕೋಣೆಯಲ್ಲಿ ಹಾಲು ಕುಡಿಯುವದನ್ನು ಕಂಡೆ. ನಮ್ಮ ಸಾಲೆಗಳಲ್ಲಿ ಮಕ್ಕಳ ಆರೋಗ್ಯದ ಬಗ್ಗೆ ನಾವೆಷ್ಟು ಕಾಳಜಿ ತಕ್ಕೊಳ್ಳುವೆವು? ನಮ್ಮ ಸಾಲೆಗಳಲ್ಲಿ ಕುಡಿಯುವ ನೀರಿನ ಸರಿಯಾದ ವ್ಯವಸ್ಥೆಯಾದರೂ ಇರುವದು ವಿರಳ. ಈ ವಿಷಯದಲ್ಲಿ ನಾವು ಹೆಚ್ಚಾ ಲಕ್ಷ್ಯ ಕೊಡುವದು ಅವಶ್ಯವೆಂದು ನನಗೆ ಅನಿಸುತ್ತ ನ್ಯೂಯಾರ್ಕದಲ್ಲಿಯ ಸಾಲಿಗಳಲ್ಲಿ ಬಡ ಮಕ್ಕಳಿಗೆ ಹಾಲು ಮತ್ತು ಉಳಿದ ಆಹಾರ ಜೀನಸುಗಳನ್ನು ಪುಕ್ಕಟೆಯಾ ಕೊಡುವರು. ಸಾಲೆಯು ಒಂದು ಬಗೆಯ ಸೆರೆಮನೆಯೆಂದ ಮಕ್ಕಳಿಗೆ ಅನಿಸದೇ ಇರಬೇಕಾದರೆ ಕನಿಷ್ಟ ಸ್ವಲ್ಪಕ್ಕೆ ನಮ್ಮ ಲ್ಲಿಯ ಬಾಲಕ ವರ್ಗ ಅಥವಾ ಒಂದನೇ, ಎರಡನೇ ಮತ್ತ ಮೂರನೇ ಇಯತ್ತೆಯ ವಿದ್ಯಾರ್ಥಿಗಳಿಗಾದರೂ ತಿನಿಸಿ ವ್ಯವಸ್ಥೆಯನ್ನು ಮಾಡುವ ಹೊಣೆಯನ್ನು ಸರಕಾರವಾಗಲಿ ಸಮಾಜವಾಗಲಿ ಹೊತ್ತುಕೊಂಡರೆ ಒಳಿತೆಂದು ನನಗೆ ಅ ಸುತ್ತದೆ. ಮದ್ರಾಸ ಸರಕಾರದವರು ಈ ವಿಷಯ ಹೆಚ್ಚು ಗಮನ ಕೊಟ್ಟಂತೆ ತೋರುತ್ತದೆ.

ಕಡ್ಡಾಯದ ಉಚಿತ ಶಿಕ್ಷಣ: ಅಮೇರಿಕೆಯ ಇಷ್ಟೊಂದು ಪ್ರಗತಿ ಹೊಂದಬೇಕಾದರೆ ಅಲ್ಲಿಯವರು ಶಿಕ್ಷಣಕ್ಕೆ ಕೊಡುವ ಸ್ಥಾನವೂ ಮುಖ್ಯ ಕಾರಣಗಳಲ್ಲಿ ಒಂದಾಗಿದೆ. ಅಮೇರಿಕೆಯಲ್ಲಿ ಪ್ರತಿಯೊಬ್ಬ "ಯಾಂಕಿ" (yankee ಯು (ಅಂದರೆ ಅಮೇರಿಕೆಯ ನಿವಾಸಿ) ತನ್ನ ವಯಸ್ಸಿನ ೧೬ ವರುಷದ ವರೆಗೆ ಸಾಲೆಗೆ ಹೋಗಲೇಬೇಕು. ನಿರಕ್ಷರಿಗಳು ಅಮೇರಿಕೆಯಲ್ಲಿ ಇಲ್ಲವೇ ಇಲ್ಲ. ಮೇಲಾಗಿ ಮಕ್ಕಳನ್ನು ಸಾಲೆಗೆ ಕಳಿಸಲಿಕ್ಕೆ ಪಾಲಕರಿಗೆ ಯಾವ ಖರ್ಚೂ ಹತ್ತುವದಿಲ್ಲ. ಸಾಲೆಯಲ್ಲಿ ಫೀ ಕೊಡಬೇಕಾಗಿಲ್ಲ ಮತ್ತು ಪಾಟಿ, ಪುಸ್ತಕ ಕೊಡಬೇಕಾಗಿಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಪುಸ್ತಕ, ಪೆನ್ಸಿಲ್ಲು ಮೊದಲಾದ ಎಲ್ಲ ಸಾಮಾನುಗಳನ್ನೂ ಸಾಲೆಯವರೇ (Board of Education) ಒದಗಿಸಿ ಕೊಡುತ್ತಾರೆ. ಹಿಂದುಸ್ತಾನ ಸರಕಾರವೂ, ಮತ್ತು ಪ್ರಾಂತಿಕ ಸರಕಾರಗಳೂ ಈ ದಿಶೆಯಲ್ಲಿ ಕಾಲಿಟ್ಟಿರುವದು ಶುಭ ಚಿನ್ಹವೇ!

೬. ಔದ್ಯೋಗಿಕ ಸಾಲೆ: ಇಲ್ಲಿಯ ಸಾಲೆಗಳಲ್ಲಿ ನಾಲ್ಕು ಭಾಗಗಳನ್ನು ಮಾಡುತ್ತಾರೆ— (೧) ಪ್ರಾಥಮಿಕ ಸಾಲೆ (Elementary School) (೨) ಜ್ಯೂನಿಯರ ಹಾಯಸ್ಕೂಲ (೩) ಸೀನಿಯರ ಹಾಯಸ್ಕೂಲ (೪) ವೋಕೇಶನಲ್ ಸ್ಕೂಲ (Vocational School) ಮಕ್ಕಳು ತಮ್ಮ ೧೪ನೇ ವಯಸ್ಸಿಗೆ ೬ನೇ ವರ್ಗವನ್ನು ಮುಗಿಸಿಕೊಂಡು ಬೇಕಾದರೆ ಔದ್ಯೋಗಿಕ ಸಾಲೆಗಳಿಗೆ ಹೋಗಬಹುದು.

———

* ಮಕ್ಕಳ ಪಟ್ಟಣ *

ಲೇಖಕರು: ಶ್ರೀ. ಕೆ. ಜಿ. ಸೈಯದ್ಮೈನ, ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರು.

ನಗುತ್ತ ಕಲಿಯುವದೂ ವಾಸ್ತವ ಜೀವನಕ್ಕೆ ಯಶಸ್ವಿಯಾಗಿ ಹೊಂದಿಕೊಳ್ಳುವದೂ ಶಿಕ್ಷಣದಲ್ಲಿ ಪ್ರಮಾಣವೆನಿಸಿದರೆ, ಕ್ಯಾಲಿಫೋರ್ನಿಯಾದ 'ಬ್ಲಾಚ್ ಮನ್' ಪಟ್ಟಣವು ಅಧುನಿಕ ಶಿಕ್ಷಣ--ಪ್ರಪಂಚದಲ್ಲಿ ಉಜ್ವಲವಾದ ಮತ್ತು ಯಶಸ್ವಿಯಾದ ನಿದರ್ಶನವಾಗಿದೆ. ಅದರ ಸಂಸ್ಥಾಪಕರೂ ಶಿಕ್ಷಕರೂ ಆದ ಶ್ರೀಮತಿ ಬಿನಾ ಫುಲರರೆಂಬುವರು ತಮ್ಮ ಶಿಕ್ಷಣ ಕ್ರಮವು ನ್ಯಾಯ ಸಮ್ಮತವಾದುದೆಂಬುದಕ್ಕೆ ಸಂಯುಕ್ತ ಸಂಸ್ಥಾನಗಳ ಪ್ರಸಿದ್ಧ ಶಿಕ್ಷಣ-ತಜ್ಞ ಜಾನ್ ಡ್ಯೂಯಿಯವರ "ಶಾಲೆಯಂದರೆ ಜೀವನವೇ ಆಗಿರಬೇಕೆಂ'ಬ ಪ್ರಮಾಣ ವಾಕ್ಯವನ್ನು ಉದಾಹರಿಸುತ್ತಾರೆ. ಎಲ್ಲರೂ ಕಣ್ಣಾರೆ ಕಂಡು ಅನುಭವಿಸುವಂತೆ ಡ್ಯೂಯಿಯರ ತತ್ವಕ್ಕೆ ಮೂರ್ತಸ್ವರೂಪ ಕೊಟ್ಟಿದ್ದಷ್ಟೇ ನಾನು ಮಾಡಿದ ಕೆಲಸ' ನೆಂದು ಅವರು ಹೇಳುವರು.

೧೫ ವರ್ಷಗಳ ಹಿಂದೆ ಪ್ರಾರಂಭವಾದ ಪ್ರಯೋಗವು ಇಂದು 'ಮಕ್ಕಳ ಮಾಟವಾದ ಪಟ್ಟಣ'ದ ರೂಪದಲ್ಲಿ ಫಲಿಸಿದೆ. ಈ ಪಟ್ಟಣವು ಲಾಸ್ ಆಂ ಜಲ್ಸದ ಉತ್ತರಕ್ಕೆ ಎಮೂರು ನೂರು ಮೈಲುಗಳ ಮೇಲಿರುವ 'ಶಾಂತಾ ಬರಿಯಾ' ಎಂಬ ಪಟ್ಟಣದ ಹತ್ತಿರ ಅಡವಿಯ ಒಂದು ಕಿಂಚಿನಲ್ಲಿ ರೂಢಿಸಿದ ಬೀದಿಗಳಿಂದ ಬಹುದೂರದಲ್ಲಿ ಕಟ್ಟಲ್ಪಟ್ಟಿದೆ.

ಈ ಬ್ಲಾಚ್‌ಮನ್ ಪಟ್ಟಣದ ಕ್ಷೇತ್ರ-ವಿಸ್ತಾರವು ಸುಮಾರು ೨೦,೦೦೦ ಚೌ. ಫೂ. ಆದರೆ ಇಷ್ಟು ಮರ್ಯಾದಿತ ಪ್ರದೇಶದ ಕ್ಷೇತ್ರವಲ್ಲೂ ಎಲ್ಲೆಡೆಯಲ್ಲಿರುವಂತೆ ಸಣ್ಣ ಪುಟ್ಟ ಬೀದಿಗಳಿಂದಲೂ ಮನೆಗಳಿಂದಲೂ ಜೀವನದ ವಿವಿಧ ಕಾರ್ಯಕ್ಷೇತ್ರಗಳ ಕೇಂದ್ರಗಳಿಂದಲೂ ಜೀವನವು ಪರಿಪೂರ್ಣವಾಗಿದೆ. ಅಂಚೆಯ ಕಚೇರಿ, ಬ್ಯಾಂಕು, ವಾಚನಾಲಯ, ವಸ್ತುಸಂಗ್ರಹಾಲಯ, ವೃತ್ತಪತ್ರಗಳು, ವಾಣಿಜ್ಯಕೇಂದ್ರ, ಪಾಸದ ಸಮಾಚಾರ ಸಂಸ್ಥೆ, ಕಿರಾಣಿ ಅಗಂಡಿ, ಹೂವಿನ ಅಂಗಡಿ, ಉಪವನ, ಗಿಡಗಂಟಿ, ಹುಲ್ಲುಗಾವಲು ಮತ್ತು ಮನೆ ಚಿಕ್ಕ ಕೆರೆ; ಇವೆಲ್ಲವೂ ಇವೆ.

ಈ ಪಟ್ಟಣದ ನಾಗರಿಕರೆಲ್ಲ ಮಕ್ಕಳೇ. ಅವರೇ ಪಟ್ಟಣದ ಅಡಳಿತೆ ನಾಗಿಸುವರು. ನಗರ ಪ್ರಮುಖನನ್ನೂ, ನಗರ ಸಮಿತಿಯನ್ನೂ ತಾವೇ ಆರಿಸುವರು. ಬ್ಯಾಂಕು-ಅಗಂಡಿಗಳಲ್ಲಿಯ ಬಳಕೆಗಾಗಿಯೂ ನೌಕರರ ವೇತನಕ್ಕಾಗಿಯೂ ತಮ್ಮದೇ ಆದ ವಿಶಿಷ್ಟ ನಾಣ್ಯ ಚಲಾವಣೆಯನ್ನು ಬಳಕೆಯಲ್ಲಿ ತರಲಾಗಿದೆ. ಪ್ರಥಮ ಚಿಕಿತ್ಸೆಯನ್ನು ಕಲಿಯುವದಲ್ಲದೇ ತಮ್ಮದೇ ಆದ ಔಷಧಾಲಯದಲ್ಲಿ ಚಿಕ್ಕಪುಟ್ಟ ರೋಗಗಳಿಗೆ ಔಷಧ ಕೊಡುವರು. ಮನೆಗೆಲಸ, ವ್ಯಾಪಾರ, ಬಡಿಗತನಗಳ ಜನಾಖರ್ಚು ಇಡುವದು, ಒಕ್ಕಲತನ, ಹೀಗೆ ಹಲವಾರು ಜೀವನಾವಶ್ಯಕ ಕೆಲಸಗಳನ್ನು ತಮಗೆ ರುಚಿಸುವಂತೆ ಗೆಲುವಿನ ಗೇಲಿಯಲ್ಲಿಯೂ ಹಿತವಾದ ರೀತಿಯಲ್ಲಿಯೂ ಕಲಿತು ಆಚರಿಸುವರು.

ಬಹಳ ವರ್ಷಗಳವರೆಗೆ, ತಲೆ ಚಿಟ್ಟು ಹಿಡಿಯುವ ಶಾಲೆಯ ನಿರ್ಜೀವವಾದ ಶಿಕ್ಷಣ-ಕ್ರಮಕ್ಕೆ ಹೊಂದಿಕೊಳ್ಳಲು ಮಕ್ಕಳು ಪಡುತ್ತಿದ್ದ ಶ್ರಮವನ್ನು ವರಗುರುವಿನ ಸಹಾನುಭೂತಿಯಿಂದ ಶ್ರೀಮತಿ ಫುಲರರು ನಿರೀಕ್ಷಿಸಿದ್ದರು. ಅದರಂತೆ ಮಕ್ಕಳು, ಮನೆಕಟ್ಟುವ, ಉಗ್ರಾಣ, ಬ್ಯಾಂಕು, ಉಗಿಬಂಡಿ, ಶುಶ್ರೂಷಾಲಯಗಳನ್ನು ನಡಿಸುವ, ಕೈದೋಟವನ್ನು ಬೆಳೆಸುವ ಮುಂತಾದ ಚಟುವಟಿಕೆಗಳಲ್ಲಿ ತೋರುವ ಅತ್ಯಾನಂದ ತನ್ಮಯತೆಗಳನ್ನು ಕಣ್ಣಾರೆ ಕಂಡಿದ್ದರು. ಆದ್ದರಿಂದ ಈ ಪ್ರಶ್ನೆಗೆ ಸ್ವಾಭಾವಿಕವಾದ ಅಪರಿಹಾರ್ಯವಾದ ಕೆಳಗಿನ ಉತ್ತರವು ಅವರಿಗೆ ಹೊಳೆಯಿತು.

ಶಾಲೆಯು ಆಕರ್ಷಕವೂ ಯಶಸ್ವಿಯೂ ಆಗಬೇಕಿದ್ದರೆ ಮಕ್ಕಳಿಗೆ ಭಾವೀ ಹೊಣೆಯ ಮೊದಲು ಪಾಠಗಳನ್ನು ಮುಂಚಿತವಾಗಿ ಕೊಡುವದೇ ಉಪಾಯ.

ಕ್ಯಾಲಿಫೋರ್ನಿಯಾದ ಎಣ್ಣೆ ಕಂಪನಿ ಕೂಲಿಕಾರರ ಮಕ್ಕಳಿಗಾಗಿ ಎರಡೇ ಕೋಣೆಗಳುಳ್ಳ ಮಕ್ಕಳಿಂದ ಕಿಕ್ಕಿರಿದ ಬ್ಲಾಚ್‌ಮನ್ ಶಾಲಾ ವಿಭಾಗವು ಸ್ಥಾಪಿಸಲ್ಪಟ್ಟಾಗ ಇವರ ಈ ಪ್ರಯೋಗಕ್ಕೆ ಸಂಧಿ ದೊರೆಯಿತು. ಶಾಲೆಯ ಮೂಲೆಯಲ್ಲಿಯೇ ಒಂದು ಪುಟ್ಟ ಉಗ್ರಾಣ, ಕಟ್ಟಿಗೆಯ

ಪೊರಕೆಗಳಿಂದ ನಿರ್ಮಿತವಾದ ಒಂದು ಬ್ಯಾಂಕು ಇಂತಹ ಅಲ್ಪಾರಂಭಗಳಿಂದ ಮೊದಲು ಮಾಡಿ ಶ್ರೀಮತಿಯವರು ಪರಿಪೂರ್ಣವಾದ ಒಂದು ಜೊಕ್ಕಟವಾದೆ ಪಟ್ಟಣವನ್ನು ಕಟ್ಟುವ ತಮ್ಮ ಅಪೇಕ್ಷಿತ ಯೋಜನೆಯ ಕಡೆಗೆ ಆ ಉತ್ಸಾಹಿ ಮಕ್ಕಳನ್ನು ಕರೆದೊಯ್ದರು.

ಆ ಎಳೆಯರು ಮನಸುಟ್ಟು ದುಡಿದರು. ಹುಡುಗರು ರೂಪ-ರೇಷಾ ನಕ್ಷೆ (Blue print) ತೆಗೆದರು. ಹುಡಿಗೆಯರು ಆಂತರಿಕ ವಿವರಗಳನ್ನು ತುಂಬಿದರು. ಎಲ್ಲರೂ ಉದ್ದಿಮೆ-ವಾಣಿಜ್ಯ ಕೇಂದ್ರಗಳಿಗೆ ತಮಗೆ ಬೇಕಾಗುವ ಪದಾರ್ಥಗಳಿಗಾಗಿ ಬಿನ್ನಹ ಓಲೆಗಳನ್ನು ಬರೆದರು. ಹಾಗೂ ಇಂತಹ ಅಪೂರ್ವ ಬಿನ್ನಹಗಳು ಉದಾರ ಕಾಣಿಕೆಗಳಿಂದ ಪೂರೈಸಲ್ಪಟ್ಟವು. ಎಣ್ಣೆ-ಸಂಸ್ಥೆಯ ಅಧ್ಯಕ್ಷನು ಭೂಮಿಯನ್ನು ಕಾಣಿಕೆಯಾಗಿ ಕೊಟ್ಟನು. ಉಳಿದ ಮಹಾ ಉದ್ದಿಮೆ-ಸಂಸ್ಥೆಗಳು ಉಸುಕು, ಗರಸು, ಕಟ್ಟಿಗೆ, ಸಿಮೆಂಟು, ಬಣ್ಣ ಮುಂತಾದವುಗಳನ್ನು ದೇಣಿಗೆಯಾಗಿ ಕಳಿಸಿದವು. ಉಳಿದ ಎಷ್ಟೋ ಜನರು ಕಾರ್ಮಿಕ-ತಾಂತ್ರಿಕ ಸಹಾಯವನ್ನು ಪ್ರೀತಿಯಿಂದ ಸಲ್ಲಿಸಿದರು. ಕೆಲವರಂತೂ ಎಣ್ಣೆ ಕಂಪನಿಯ ಅಧ್ಯಕ್ಷನಂತೆ ಕರಗಸ-ಸುತ್ತಿಗೆ ಹಿಡಿದು ಕಟ್ಟುವ ಕೆಲಸದಲ್ಲಿಯೇ ಜೊತೆಗೂಡಿದರು.

ಶಿಕ್ಷಣವು ಒಂದು ಉತ್ತೇಜಕ ಸಾಹಸ. ಶಿಕ್ಷಕರೂ ವಿದ್ಯಾರ್ಥಿಗಳೂ ಶಿಕ್ಷಣದ ಉತ್ತೇಜಕ ಸಾಹಸ-ಕ್ಷೇತ್ರದ ಒಳಮಡಿಕೆಗಳು ತೆರೆಯುತ್ತ ಹೋಗುವದನ್ನು ಕಂಡರು. ಒಂದು ವೇಳೆ ಆ ಮಕ್ಕಳು ಹಿಂದೆಂದೂ, ವರ್ಗದಲ್ಲಿಪ್ಪೇ ಅಲ್ಲದೆ ಈ ರೀತಿ ತಮ್ಮದೇ ಆದ ಉಗ್ರಾಣಗಳನ್ನು ನಡೆಸಿಯಾಗಲೀ ಬ್ಯಾಂಕುಗಳಲ್ಲಿ ಆಸ್ತಿಯ ಮೇಲೆ ಸಾಲ ಕೊಬ್ಬಾಗಲೀ ಗಣಿತ ವಿಷಯವನ್ನು ಕಲಿತಿರಲಿಕ್ಕಿಲ್ಲ. ತಮ್ಮ ಅಂಚೆಯಕಟ್ಟೆಯಲ್ಲಿ ಭೂಗೋಲ ವಿಷಯವು ವರ್ಗಗಳಲ್ಲಿ ಉಚ್ಚರಿಸಲು ಬಾರದ ಹೆಸರುಗಳ ಕ್ರಮಪಟ್ಟಿಯಾಗಿರದೆ ತಮ್ಮ ಫ್ರೆಂಚ, ಬೆಲ್ಜಿಯಮ್, ಆಂಗ್ಲ ಅಥವಾ ಮೆಕ್ಸಿಕೋ ಜನರ ದೇಶಗಳ ಚಿತ್ತಮೋಹಕವಾದ ವರ್ಣನೆಯೆಂದು ಕಲಿತರು. ಅಲ್ಲದೇ ಸುದ್ದಿಗಾರರಿಂದ ಬರುವ ಸುದ್ದಿಗಳನ್ನೂ, ಆ ಜನರ ಸಮಸ್ಯೆಗಳೂ ಮತ್ತು ಅಭಿರುಚಿಗಳೂ ತಮ್ಮಂತಹವೇ ಇವೆಯಾದರೂ ಕೆಲಮಟ್ಟಿಗೆ ಮನಸ್ಸು ಹಿಡಿಯುವ ವೈವಿಧ್ಯವುಳ್ಳವುಗಳಾಗಿವೆ ಎಂಬುದನ್ನು ಈ ರೀತಿ ಕಲಿತರಲಿಕ್ಕಿಲ್ಲ.

ಬಹುದೂರದ ಎಸ್ಕಿಮೋ ವಸಹಾತುಗಳಿಂದಲೂ ದಕ್ಷಿಣ ಸಮುದ್ರದಲ್ಲಿಯ ನಡುಗಡ್ಡೆಯ ಹಳ್ಳಿಗಳಿಂದಲೂ ಉದ್ದುದ್ದ ಹರಟೆಯ ಓಲೆಗಳೂ ಕಾಣಿಕೆಗಳೂ ಈ ಚಿಕ್ಕ ಅಂಚೇ ಕಛೇರಿಗೆ ಬರುವವು. ಇದನ್ನೇ ಶ್ರೀಮತಿ ಫುಲರರು 'ಸಹಿಷ್ಣುತೆ, ಪ್ರೇಮ, ಗೆಳೆತನ, ಲೋಕದ ತಿಳುವುಗಳ ಕೇಂದ್ರ' ಎಂದು ಬಗೆಯುವರು.

ಕಳೆದ ದಶಕದಲ್ಲಿ ಬ್ಲಾಚ್‌ಮನ್ ಪಟ್ಟಣವು ಶಿಕ್ಷಕರಿಗೆ ಶಿಕ್ಷಣ-ವಿದ್ಯಾರ್ಥಿಗಳಿಗೂ 'ಒಂದು ಶೈಕ್ಷಣಿಕ ಮೆಕ್ಕಾ' ಆದೆ. ಈ ಎಲ್ಲ ಪ್ರೇಕ್ಷಕರೂ ಅಲ್ಲಿ ವಿಶೇಷವಾಗಿ ಕಾಣುವದೆಂದರೆ ಆ ಎಳೆಯ ನಾಗರಿಕರ ಪಾಂಡಿತ್ಯದಲ್ಲಿಯ ಚೈತನ್ಯಮೇಲ್ಮಟ್ಟ, ಶಿಶುಗಳಲ್ಲಿಯ ಕಿಡಿಗೇಡಿ ಪ್ರವೃತ್ತಿ ಕಣ್ಮರೆ ಹಾಗೂ ಶಿಕ್ಷಣ-ಕ್ಷೇತ್ರದಿಂದ ಉದ್ದಿಮೆ ವಾಣಿಜ್ಯ ಕೇಂದ್ರಗಳಿಗೆ ಕರ್ತೃತ್ವ ಶಕ್ತಿಯುತರಾಗಿಯೂ ಯಶಸ್ವಿಯಾಗಿಯೂ ಸಾಗುವದು. ಬ್ಲಾಚ್‌ಮನ್ ಪಟ್ಟಣದ ಮೊದಲ ಕಿರಾಣಿಕಾರನು ಈಗ ಕ್ಯಾಲಿಫೋರ್ನಿಯಾದಲ್ಲಿಯ ಶಾಂಮರಿಯಾದಲ್ಲಿ ಪೇಟೆಯನ್ನೇ ತೂಗಿಸುವ ಒಬ್ಬ ವ್ಯಾಪಾರಿಯಾಗಿದ್ದಾನೆ. ಆತನ ಇಬ್ಬರು ಆಗಿನ ಸಹಾಯಕರು ತಮ್ಮ ಪಟ್ಟಣಗಳಲ್ಲಿ ಅಂತಹ ವ್ಯಾಪಾರ ಸಂಸ್ಥೆಗಳಿದ್ದಾರೆ. ಆರೋಗ್ಯ ಧಾಮದ ಸಂಚಾಲಕರಲ್ಲಿಯ ಕೆಲ ಹುಡಿಗೆಯರು ದೊಡ್ಡ ಶುಶ್ರೂಷಾಲಯಗಳಲ್ಲಿ ಗಣ್ಯ-ದಾದಿಯರಾಗಿದ್ದಾರೆ. ಬ್ಯಾಂಕಿನ ಸರಾಫನಿದ್ದವನು ಅಲ್ಲಿಂದ ಹತ್ತಿರದ ಒಂದು ಪಟ್ಟಣದಲ್ಲಿ ಯಶಸ್ವಿಯಾದ ಬ್ಯಾಂಕೊಂದು ನಡೆಯಿಸುತ್ತಿದ್ದಾನೆ. ಈ ಪಟ್ಟಣದ ಮೊದಲ ನಗರ ಪ್ರಮುಖನು ಈಗ ಪುಸ್ತಕ ಸಂಗ್ರಹಾಲಯವನ್ನು ತೆರೆದಿದ್ದಾನೆ. ಮೊದಲಿನ ಅಲ್ಲಿಯ ಎಷ್ಟೋ ಸ್ತ್ರೀ ಪದವಿಧರರು ಈ ಪಟ್ಟಣದ ಮಾಡರಿಯ ಗೃಹಗಳಲ್ಲಿ ತಪಡೆದ ಶಿಕ್ಷಣವೇ ಈಗಲೂ ತಮ್ಮ ಮನೆ ನಡೆಸುವ ಕಾರದಲ್ಲಿ ಬಹಳೇ ಸಹಾಯಕವಾಗಿದೆಯೆಂದು ಹೇಳುತ್ತಿದ್ದಾ

ಪ್ರೇಕ್ಷಕರು ಇವೆಲ್ಲ ಚಟುವಟಿಕೆಯನ್ನು ಆನಂದ ದ್ರೇಕದಿಂದ ಕಾಣುವರು. ಸರಕಾರದ ದೊಡ್ಡ ಅಧಿಕಾರಿಗಳಿಂದಲೂ, ಗವ್ಹರ್ನರರಿಂದಲೂ ಅನೇಕ ಪತ್ರಗಳು ಇಲ್ಲಿಗೆ ಬರುವವು. ಪ್ರಸಿದ್ಧ ಲೇಖಕರೂ ಶಿಕ್ಷಣ ತಜ್ಞರೂ ಇದನ್ನು 'ಒಂದು ಮಹಾಯೋಜನೆ' ಎಂದು ಕರೆವರು. ಅನೇಕ ಜನರು ಇಲ್ಲಿಯ ಚಟುವಟಿಕೆಗಳ ವಿವರಗಳಿಗಾಗಿ ಬರೆದುಕೊಳ್ಳುವರು. ಆ ಎಳೆಯ ಮಕ್ಕಳೇ ಎಲ್ಲ ಪತ್ರಗಳಿಗೂ ಅಭ್ಯಾಸ ಪೂರ್ಣ ಪರಿಚಯಾತ್ಮಕ ಉತ್ತರಗಳನ್ನು ಬರೆದು ಕಳಿಸುವರು.

ಶ್ರೀಮತಿ ಫುಲರರು ತಾವಾಗಿಯೇ ಆರಿಸಿಕೊಂಡ ಕೆಲಸದಲ್ಲಿ ಅತ್ಯಂತ ಸುಖದಿಂದ ಬಾಳಿ ಶಾಂತಿ, ಸಹಿಷ್ಣು ನಿರಲಸಗಳ ತವರೂರಾದ ಆ ಸಮಾಜದ ಗರಿಗಟ್ಟುವ ನಾಗರಿಕರಲ್ಲಿ ಅಂತರರಾಷ್ಟ್ರೀಯ ಶಾಂತಿಯ ತ್ರೇಷ್ಮ ಬೀವನ್ನು ಕಾಣುವರು.

———

ಪ್ರಾಥಮಿಕ, ಮಾಧ್ಯಮಿಕ ಹಾಗು ಮೂಲಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ ಅಭ್ಯಾಸ—ಪತ್ರಿಕೆಯು

ಪೂರ್ವ ಪೀಠಿಕೆ

ಹೈಸ್ಕೂಲುಗಳಲ್ಲಿಯ ಮಾಧ್ಯಮಿಕ ವರ್ಗಗಳಿಂದ ಇಂಗ್ಲಿಷನ್ನು ತೆಗೆದು ಹಾಕಲಾಯಿತು. ಆ ದು ದ ರಿಂ ದ ಈ ಹೊಸ ಸನ್ನಿವೇಶದಲ್ಲಿ ಆ ಮಟ್ಟಕ್ಕೆ ಉಚಿತವಾದ ಅಭ್ಯಾಸ ಕ್ರಮವನ್ನು ಪುನಃ ಪರಿಶೀಲಿಸಬೇಕಾಯಿತು. ಮಾಧ್ಯಮಿಕ ವರ್ಗಗಳು ಪ್ರಾಥಮಿಕ ಶಾಲೆ ಹಾಗು ಹೈಸ್ಕೂಲುಗಳಲ್ಲಿ ಸಾಮಾನ್ಯವಾಗಿದ್ದುವು. ಹಾಗು ಈ ವರ್ಗಗಳು ತುಸು ಹೆಚ್ಚು ಕಡಿಮೆ ಹತ್ತಿರ ಹತ್ತಿರದ ಒಂದೇ ವಯೋಗುಂಪಿನ ಮಕ್ಕಳಿಗಾಗಿ ಇದ್ದುವು. ಆದರೆ ಹೈಸ್ಕೂಲುಗಳಲ್ಲಿಯ ಈ ವರ್ಗಗಳಲ್ಲಿ ಇಂಗ್ಲಿಷನ್ನು ಕಲಿಸುತ್ತಿದ್ದುದರಿಂದಲೂ ಇಂಗ್ಲಿಷಿಗೆ ಪ್ರಮಾಣ ಮೀರಿದ ಸಮಯವನ್ನು ಮೀಸಲಾಗಿ ಇಟ್ಟ ದ್ದರಿಂದಲೂ ಅವು ಅದೇ ಮಟ್ಟದ ಪ್ರಾಥಮಿಕ ಶಾಲೆಗಳ ವರ್ಗಗಳಿಂದ ತೀರ ಬೇರ್ಪಡಿಸಲ್ಪಟ್ಟವು. ಆದರೆ ಇಂಗ್ಲಿಷನ್ನು ಕಿತ್ತಿ ಹಾಕಿರುವುದರಿಂದ ಈ ಮುಖ್ಯ ತಡೆಯು ದೂರವಾಗಿರುವುದು. ಹಾಗು ಈಗ ಎರಡೂ ಬಗೆಯ ಶಾಲೆಗಳಲ್ಲಿಯ ಮಾಧ್ಯಮಿಕ ವರ್ಗಗಳು ಹೆಚ್ಚು ಸಮೀಪಕ್ಕೆ ಬಂದಿವೆ. ಈ ಎರಡೂ ಬಗೆಯ ಶಾಲೆಗಳಲ್ಲಿಯ ಈ ವರ್ಗಗಳ ವಿಶಿಷ್ಟ ಸ್ಥಿತಿ ಹಾಗು ಆವಶ್ಯಕತೆಗಳಿಗೆ ಒಪ್ಪುವ ಅಭ್ಯಾಸಕ್ರಮವನ್ನು ಯೋಜಿಸುವುದೊಂದು ಬಹು ಕಠಿಣ ಕಾರ್ಯವೇ ಆಗಿತ್ತು. ಈ ಅಭ್ಯಾಸಕ್ರಮಗಳನ್ನು ತಯಾರಿಸಲು ನಿಯಮಿಸಲ್ಪಟ್ಟ ಸಮಿತಿಗಳಿಗೆ ಕೆಳಗಿನಂತೆ ಬೋಧಿಸಲಾಗಿತ್ತು.

"ಎರಡೂ ಬಗೆಯ ಅಭ್ಯಾಸ ಪತ್ರಿಕೆಗಳು ರೂಪರೇಷೆ ಹಾಗು ಒಳ ತಿರುಳಿನಲ್ಲಿ ತದ್ರೂಪನಾಗಿರದಿದ್ದರೂ ಬಹು ಮಟ್ಟಿಗೆ ಅವು ಒಂದನ್ನೊಂದು. ಹೋಲುವಂತಿದ್ದು ಸಣ್ಣ–ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಲು ಅವ ಕಾಶವಿರುವಂತಿರಬೇಕು. ಹಾಗು ಬಾಲಕರನ್ನು ಪ್ರಾಥಮಿಕ ಶಾಲೆಯ ವರ್ಗಗಳಿಂದ ಹೈಸ್ಕೂಲಿನ ವರ್ಗಗಳಿಗೂ ಹೈಸ್ಕೂಲಿನ ವರ್ಗಗಳಿಂದ ಪ್ರಾಥಮಿಕ ಶಾಲೆಯ ವರ್ಗಗಳಿಗೂ ವರ್ಗಾಯಿಸಲು ಆಸ್ಪದವಿರುವಂತೆ ಆ ಅಭ್ಯಾಸಪತ್ರಿಕೆಗಳನ್ನು ಯೋಜಿಸಬೇಕು."

(೨) ಇದಕ್ಕೆ ಸಂಬಂಧಿಸಿದ ಬೇರೆ ಬೇರೆ ಉಪ ಸಮಿತಿಗಳು ಸಂಯುಕ್ತ ಅಧಿವೇಶನದಲ್ಲಿ ಸೇರಿ ಈ ಮುಖ್ಯ ಪ್ರಶ್ನೆಯನ್ನು ಕುರಿತು ಆಸಕ್ತಿಯಿಂದ ಆಲೋಚಿಸಿ ಕೆಳಗಿನಂತೆ ತೀರ್ಮಾನಿಸಿದುವು.

"ಎರಡೂ ಬಗೆಯ ವರ್ಗಗಳ ಎಲ್ಲ ಮುಖ್ಯಾಂಶಗಳಲ್ಲಿ ಸರಿ–ಸಮಾನವಾಗಿದ್ದ, ಬದಲಿಸಲು ಹಾಗೂ ಸರಿಪಡಿಸಲು ಅನುಕೂಲವುಳ್ಳ ಉಚಿತ ಅಭ್ಯಾಸಕ್ರಮಗಳನ್ನು ಯೋಜಿಸುವುದು ಅವಶ್ಯವೂ ಇಲ್ಲ; ವ್ಯವಹಾರ್ಯವೂ ಅಲ್ಲ. ಏಕೆಂದರೆ, ಬಹುಶಃ ಅವು ಇಂದಿಲ್ಲ ನಾಳೆ ತಮ್ಮ ಪ್ರತ್ಯೇಕ ರೂಪರೇಷೆಗಳನ್ನು ಕಳೆದುಕೊಂಡು ಒಂದರಲ್ಲೊಂದು ಲೀನವಾಗಿ ಬಿಡುವವು."

(೩) ಹಾಗಿದ್ದರೂ ಈಗ ಎರಡೂ ಬಗೆಯ ಶಾಲೆಗಳು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿವೆ. ಒಟ್ಟಿನಲ್ಲಿ ಹೈಸ್ಕೂಲುಗಳ ಕಟ್ಟಡ ಹಾಗು ಸಾಮಗ್ರಿ–ಸಲಕರಣೆಗಳು ಪ್ರಾಥಮಿಕ ಶಾಲೆಗಳವುಗಳಿಗಿಂತ ಮೇಲ್ತರಗತಿಯವು ಇವೆ. ಹೈಸ್ಕೂಲುಗಳಲ್ಲಿಯ ಶಿಕ್ಷಕರು ಹೆಚ್ಚು ಸುಶಿಕ್ಷಿತರಿದ್ದಾರೆ. ಅಪರಿಗೆ ಹೆಚ್ಚು ಸಂಬಳ ದೊರೆಯುತ್ತಿದೆ. ಹಾಗು ಸಾಮಾನ್ಯವಾಗಿ ಅವರು ಹೆಚ್ಚು ವಿಶಾಲವಾದ ಹಿನ್ನೆಲೆಯುಳ್ಳವರಾಗಿದ್ದಾರೆ ಪೂರ್ಣ ಪ್ರಾಥಮಿಕ ಶಾಲೆಯು ಹಳ್ಳಿಗಾಡಿನ ವೈಶಿಷ್ಟ್ಯದ ದ್ಯೋತಕವಾಗಿದ್ದರೆ, ಹೈಸ್ಕೂಲು—ಇತ್ತೀಚಿನ ವರುಷಗಳಲ್ಲಿ ಅರ್ಧಮರ್ಧ ಹಳ್ಳಿಗಳಲ್ಲಿ ತನ್ನ ಶಾಖೋಪಶಾಖೆಗಳನ್ನು ಕವಲೊಡೆಯಿಸಿದ್ದರೂ—ನಗರದ ವೈಶಿಷ್ಟ್ಯವನ್ನು ಕಾಯ್ದುಕೊಂಡಿದೆ. ಆಡಳಿತೆಯ ದೃಷ್ಟಿಯಿಂದ ನೋಡಿ

ಹರೆ, ಇಲಾಖೆಯ ತುಂಬೆಲ್ಲ ಪ್ರಾಥಮಿಕ ಶಾಲೆಗಳು ನೀರಾಗಿ ಒಂದೇ ಒಂದು ಬಗೆಯ — ಶಿಕ್ಷಣ ಪಾತೆಯ—ಆಡಳಿತೆಗೆ ಒಳಪಟ್ಟಿರುವುದರಿಂದ ಅವು ಸಾಕಷ್ಟು ಪ್ರಮಾಣದಿಂದ ಸಮಾನತೆಯ ಕಡೆಗೆ ಒಲೆಯುವ ಸಂಭವನೀಯತ್ತವೆ. ಆದರೆ ಹೈಸ್ಕೂಲುಗಳು ಹೆಚ್ಚಾಗಿ ಖಾಸಗಿ ಶಾಲೆಗಳೇ ಆಗಿರುವುದರಿಂದ, ಅವು ಅನೇಕ ಬಗೆಯ ಸಂಸ್ಥೆ, ಸಂಸ್ಥೆ, ವಿದ್ವಸ್ಥನುಂಡಲಗಳಿಂದ ನಡೆಯಿಸಲ್ಪಡುತ್ತಿವೆಯಾದ ಕಾರಣ ಅವುಗಳ ಧ್ಯೇಯ-ಧೋರಣೆ ಹಾಗು ಪದ್ಧತಿಗಳು ವೈವಿಧ್ಯತೆಯ ಕಡೆಗೆ ಒಲೆಯುವುದು ಸ್ವಾಭಾವಿಕವಾಗಿದೆ.

(೪) ಇದಕ್ಕೆ ಸಂಬಂಧಿಸಿದ ಅನೇಕ ಸಮಿತಿಗಳು ಈ ಮೂಲ ಸಂಗತಿಗಳ ಕಡೆಗೆ ಸಾಕಷ್ಟು ಗಮನವಿತ್ತು, ಕೆಳಗಿನಂತೆ ಅಭಿಪ್ರಾಯ ವ್ಯಕ್ತ ಮಾಡಿದುವು.

"ಅಭ್ಯಾಸ ಪತ್ರಿಕೆಯು ಹಿಗ್ಗಿಸಲೂ ಕೂಗ್ಗಿಸಲೂ ಬರುವಂತಿದ್ದು ಶಿಕ್ಷಕರ ಅರ್ಹತೆ ಹಾಗು ಅವರಿಗೆ ದೊರೆಯಬಹುದಾದ ತ್ರೈಮಾಸಿಕ ಸಲಕರಣೆಗಳ ಕಡೆಗೂ ಸಾಕಷ್ಟು ಲಕ್ಷ್ಯ ಪೂರೈಸಿದಲ್ಲಿ, ಈ ಎರಡೂ ಬಗೆಯ ಶಾಲೆಗಳ ವಿಶಿಷ್ಟ ಅವಶ್ಯಕತೆಗಳನ್ನು ಯೋಗ್ಯರೀತಿಯಿಂದ ಪೂರೈಸಬಹುದಾದ, ಏಕರೂಪವಾದ ಅಭ್ಯಾಸ ಪತ್ರಿಕೆಯು ತಯಾರಾಗಬಲ್ಲದು." ಕೆಲವೊಂದು ವಿಷಯಗಳಲ್ಲಿ ಪ್ರಾಥಮಿಕ ಶಾಲೆಗಳು ಹೈಸ್ಕೂಲುಗಳಿಂದ ಭಿನ್ನವಾಗಿವೆಯಷ್ಟೇ ಅಲ್ಲದೆ, ಹೈಸ್ಕೂಲುಗಳು ಸಹ ತಮ್ಮತಮ್ಮಲ್ಲಿ ಬಹುಮಟ್ಟಿಗೆ ಭಿನ್ನ ಭಿನ್ನವಾಗಿವೆ ಆದುದರಿಂದ ಪ್ರಾಥಮಿಕ ಶಾಲೆಗಳಿಗೆಯೇ ಆಗಲಿ ಹೈಸ್ಕೂಲುಗಳಿಗೆಯೇ ಆಗಲಿ ಒಂದೇ ಪಡಿಯಚ್ಚಿನ ಕಟ್ಟುನಿಟ್ಟಿನ ಅಭ್ಯಾಸಪತ್ರಿಕೆಯನ್ನು ಅಧಿಕಾರದಿಂದ ಹೇರಕೂಡದೆಂಬುದು ಈ ಸಮಿತಿಗಳ ಸದಸ್ಯರ ಸಾಮಾನ್ಯ ಅಭಿಪ್ರಾಯವಾಗಿತ್ತು. ಹಿಂದಕ್ಕೆ ಅಯಾ ಶಾಲೆಗಳ ಪರಿಸ್ಥಿತಿ, ಸಮಸ್ಯೆ ಹಾಗು ಸ್ಥಿತಿಗತಿಗಳನ್ನು ಅನುಲಕ್ಷಿಸದೆ ಒಂದೇ ಬಗೆಯ ಅಭ್ಯಾಸಕ್ರಮವನ್ನು ಕಟ್ಟುನಿಟ್ಟಾಗಿ ಎಲ್ಲ ಬಗೆಯ ಶಾಲೆಗಳಿಗೆ ವಿಧಿಸಿದ್ದರಿಂದ ಅತಿ ಮುದ್ದೆಯೀ ಪರಿಣಾಮಗಳನ್ನು ಕಾಣಬೇಕಾಯಿತು. ಶಿಕ್ಷಣದ ಎಲ್ಲ ಕ್ಷೇತ್ರಗಳಲ್ಲಿಯೂ ಸ್ವಯಂ ಸ್ಫೂರ್ತಿಯಿಂದ ಕಾರ್ಯಾರಂಭ ಮಾಡುವ ಮನೋಭಾವನೆಯ ಕೊರತೆಯು ಕಂಡುಬಂದಿದೆ. ಇದು ಶೋಚನೀಯವಾದ ಸಂಗತಿಯು. ಈ ಪರಿಸ್ಥಿತಿಗಳಲ್ಲಿ ಪ್ರಯೋಗ ಹಾಗೂ ಯೋಜನೆಗಳನ್ನು ಕಾರ್ಯರೂಪದಲ್ಲಿ ತರುವುದು ಅಸಾಧ್ಯವಾಗದಿದ್ದರೂ ದುಸ್ಸಾಧ್ಯವಾಗಿತ್ತು.

(೫) ಆದುದರಿಂದ, ಈ ಮುಂದಿನ ಪುಟಗಳಲ್ಲಿ ಕೊಟ್ಟ ಅಭ್ಯಾಸಕ್ರಮಗಳ ಸಾಮಾನ್ಯ ರೂಪರೇಷೆಯು ಪ್ರಾಥಮಿಕ ಶಾಲೆಗಳ ಹಾಗೂ ಹೈಸ್ಕೂಲುಗಳ ಕೆಳಗಿನ ವರ್ಗಗಳಿಗೆ ಅನ್ವಯಿಸಲಾಗುವುದೆಂದು ಒತ್ತಿ ಹೇಳಲಾಗಿದೆ. ಆದರೆ ಇದನ್ನೊಂದು ಸಾಮಾನ್ಯ ಮಾದರಿಯೆಂದು ಮಾತ್ರ ಉಪಯೋಗಿಸಬೇಕು. ವಿವಿಧ ವಿಷಯಗಳ ಕೆಳಗೆ ತೋರಿಸಿದ ಮುದ್ದೆಗಳು ಸೂಚಕವಾಗಿವೆ— ಎಂದು ತಿಳಿಯಬೇಕು. ಹಾಗು ಈ ಮುದ್ದೆಗಳಲ್ಲಿ ಎರಡೂ ಬಗೆಯ ಶಾಲೆಗಳು ತಮ್ಮ ತಮ್ಮ ಸ್ಥಿತಿಗತಿಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ವಿಶೇಷವಾಗಿ ತಮ್ಮ ಶಿಕ್ಷಕರ ಯೋಗ್ಯತೆ ಹಾಗೂ ತಮಗೆ ದೊರೆಯಬಹುದಾದ ಶಿಕ್ಷಣ ಸಲಕರಣೆಗಳನ್ನನುಲಕ್ಷಿಸಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಪ್ರಾಥಮಿಕ ಶಾಲೆಗಳು ಸಹ, ಸ್ಥಳ, ಸಲಕರಣೆ, ಶಿಕ್ಷಕರ ಸಂಖ್ಯೆ ಹಾಗೂ ತರಬೇತಿ ಹೊಂದಿದ ಶಿಕ್ಷಕರ ಪ್ರತಿಶತ ಪ್ರಮಾಣಗಳಲ್ಲಿ ತಮ್ಮ ತಮ್ಮಲ್ಲಿಯೇ ಬಹಳ ಭಿನ್ನವಾಗಿವೆ. ಎಷ್ಟೋ ಶಾಲೆಗಳಲ್ಲಿ ಒಬ್ಬನೇ ಶಿಕ್ಷಕನು ಬಹು ವರ್ಗಗಳನ್ನು ಕಲಿಸಬೇಕಾಗಿರುತ್ತವೆ. ಕೆಲವೇ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಪ್ರತಿಯೊಂದು ವರ್ಗಕ್ಕೆ ಒಬ್ಬ ಶಿಕ್ಷಕ ನಿರಬಹುದು. ಈ ಎಲ್ಲ ಬಗೆಯ ಶಾಲೆಗಳಲ್ಲಿ ಒಂದೇ ಮಟ್ಟದ ಕೆಲಸವನ್ನು ಅಪೇಕ್ಷಿಸುವುದು ಸರಿಯಲ್ಲ. ಆದುದರಿಂದ ಅಭ್ಯಾಸಪತ್ರಿಕೆಯ ಚೌಕಟ್ಟಿನ ಒಳಬದಿಯಲ್ಲಿ ಆವಶ್ಯಕ ಹೆಚ್ಚುಕಡಿಮೆ ಹಾಗೂ ತಿದ್ದುಪಡೆಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವು ಶಾಲೆಗಳ ಮುಖ್ಯಾಧ್ಯಾಪಕರಿಗೆ ಇರಬೇಕು. ಅಭ್ಯಾಸ-ಪತ್ರಿಕೆಯ ಸಾಮಾನ್ಯ ಗುರಿಗಳಲ್ಲಿ ಹಾಗು ಅದರ ಚೌಕಟ್ಟಿನ ಒಳಬದಿಯಲ್ಲಿ ತಾವು ಮಾಡಿಕೊಂಡ ಬದಲಾವಣೆಗಳು ಸೂಕ್ತವಾಗಿವೆ ಎಂಬುದನ್ನು ಅವರು ತಪಾಸಣೀಯ ಅಧಿಕಾರಿಗಳಿಗೆ ಮನಗಾಣಿಸಿ ಕೊಡಬೇಕು. ಇಂತಹ ಸಂದರ್ಭಗಳಲ್ಲಿ ಈ ಅಧಿಕಾರಿಗಳೂ ಸಹಾನುಭೂತಿಪರವಾದ ತಿಳಿವಳಿಕೆಯನ್ನು ಪರ್ಯಸುವರೆಂದೂ, ಅವರ ಮಾರ್ಗದರ್ಶನವು ಶಿಕ್ಷಕರಿಗೆ ಸಹಾಯಕಾರಿಯಾಗುವುದೆಂದೂ ಆಶಿಸಲಾಗಿದೆ.

(೬) ವಿವಿಧ ವಿಷಯಗಳ ಅಭ್ಯಾಸಕ್ರಮಗಳನ್ನು ಗೊತ್ತುಪಡಿಸುವಾಗ ಆ ಉಪಸಮಿತಿಗಳಿಗೆ ಈ ಪೀಠಿಕೆಯು ಕೊನೆ

ಯಲ್ಲಿ ಕೊಟ್ಟ ಮೇರೆಗೆ ಪ್ರತಿಯೊಂದು ವಿಷಯಕ್ಕೆ ನಿರ್ದಿಷ್ಟ ಪಡಿಸಿದ ಶಿಕ್ಷಣಾವಧಿಗಳನ್ನು ತಿಳಿಸಲಾಗಿತ್ತು. ಆದರೆ ವಿವಿಧ ವಿಷಯಗಳಲ್ಲಿಯ ಪ್ರಗತಿಯ ಮಟ್ಟವನ್ನು ಕಾಯ್ದು ಕೊಂಡಿರುವ ವರೆಗೆ ಈ ವೇಳಾಪತ್ರಿಕೆಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂಬ ಅಭಿಪ್ರಾಯವಿಲ್ಲ. ಕೊಟ್ಟ ಅಭ್ಯಾಸ ಕ್ರಮದಲ್ಲಿ ತಾವು ಮಾಡಿಕೊಂಡ ಬದಲಾವಣೆಗಳಿಗೆ ಹೊಂದಿಕೆಯಾಗುವಂತೆ ವಿವಿಧ ವಿಷಯಗಳಿಗೆ ತಾವು ಕೊಡಬೇಕೆಂದಿರುವ ವೇಳೆಯನ್ನು ಕುರಿತು ವೇಳಾಪತ್ರಿಕೆಗಳನ್ನು ರಚಿಸಿಕೊಳ್ಳಲು ಆಯಾ ಶಾಲೆಗಳನ್ನು ಪ್ರೋತ್ಸಾಹಿಸ ಬೇಕು.

(೭) ಇನ್ನು ವಿಶಿಷ್ಟ ವಿಷಯಗಳ ಕಡೆಗೆ ಹೊರಳೋಣ. ಮಾತೃಭಾಷೆಗೆ ಎಲ್ಲಕ್ಕೂ ಹೆಚ್ಚಾಗಿ ಲಕ್ಷ್ಯ ಹಾಗೂ ಜಾಗ ರೂಕತೆಗಳನ್ನು ಪೂರೈಸಬೇಕಾಗಿದೆ. ಇಂಗ್ಲಿಷಿನ ವಿಸರ್ಜನೆ ಯಾದನಂತರ ಮಾತೃಭಾಷೆಯು ತನ್ನದೇ ಆದ ಸ್ಥಾನ ವನ್ನು ಪಡೆಯಬೇಕು. ಇನ್ನು ಮುಂದೆ ಅವನ್ನು ತಿಳಿವಳಿ ಕೆಯಿಂದಲೂ ವಿಮರ್ಶಾತ್ಮಕವಾಗಿಯೂ ಅಭ್ಯಸಿಸಬೇಕು. ಮಾತೃಭಾಷೆಯ ಅಭ್ಯಾಸದ ಗುರಿಗಳನ್ನು ನಾವು ಈ ಮುಂದೆ ನಿರ್ದಿಷ್ಟಗೊಳಿಸಿದ್ದೇವೆ. ಅವೆಲ್ಲವುಗಳ ಬಗೆಗೆ ಸಾಕಷ್ಟು ಲಕ್ಷ್ಯ ಪೂರೈಸಬೇಕು. ಪದ್ಯ ಭಾಗದ ಕೆಲ ವೊಂದು ಪುಟ ಹಾಗೂ ಪಂಕ್ತಿಗಳ ಸಂಖ್ಯೆಗಳನ್ನು ಸೂಚಿ ಸಲಾಗಿದೆ ಆದರೆ ಸಾಧ್ಯವಿದ್ದವರು ಇದಕ್ಕೂ ಹೆಚ್ಚು ಅಭ್ಯಸಿಸಬೇಕು. ಇಲ್ಲಿಯ ವರೆಗೆ ಪೂರಕ ವಾಚನವನ್ನು ಸಾಮಾನ್ಯವಾಗಿ ಉಲ್ಲೇಖಿಸಲಾಗಿತ್ತು. ಆದರೆ ಇನ್ನು ಮುಂದೆ ಆ ಬಗೆಗೆ ಜಾಗರೂಕತೆಯಿಂದ ಯೋಜಿಸಿ ಮಾರ್ಗ ದರ್ಶನ ಮಾಡಬೇಕು. ಯೋಗ್ಯತೆಯುಳ್ಳ ನಿಯೋಗಿ ಮಂಡಳವೊಂದು ವಿವಿಧ ವಯೋಮಾನಗಳ ಹಾಗು ವರ್ಗ ಗಳ ಮಕ್ಕಳಿಗೆ ರುಚಿಕಟ್ಟಾದ ಹಾಗು ಉಪಯುಕ್ತವಾದ ಯೋಗ್ಯ ಪುಸ್ತಕಗಳನ್ನು ಆರಿಸಬೇಕು. ವ್ಯಾಕರಣ ಹಾಗು ನಿಬಂಧ ರಚನೆಗಳಿಗೆ ಈ ಮೊದಲಿನಕಿಂತಲೂ ಹೆಚ್ಚಾಗಿ ಗಮನ ಕೊಡಬೇಕು. ಸ್ವತಂತ್ರ (ನಿಬಂಧ, ಪ್ರಬಂಧ, ಕವಿತೆ) ರಚನೆಗಳಿಗೆ ಪ್ರೋತ್ಸಾಹನೆ ಕೊಡಬೇಕು. ವಯಸ್ಸು ಹಾಗೂ ಯೋಗ್ಯತೆಗಳಿಗೆ ಅನುಗುಣವಾಗಿ ಶಬ್ದ ಸಂಗ್ರಹವನ್ನು ಉಪಯೋಗಿಸುವಂತೆ ಮಕ್ಕಳನ್ನು ಪ್ರೇರಿಸ ಬೇಕು. ಅವರು ತಪ್ಪು ಬರಹಗಳಲ್ಲಿ ಪಡೆನುಡಿಗಳನ್ನೂ ವ್ಯಾಕರಣ ವಿಶೇಷಗಳನ್ನೂ ಬಳಸಲು ಕಲಿಯಬೇಕು. ಎಲ್ಲಕ್ಕಿಂತಲೂ ಹೆಚ್ಚಾಗಿ, ಅವರು ಸರಿಯಾಗಿಯೂ, ಸುವಾ ಚ್ಯವಾಗಿಯೂ, ಅಚ್ಚುಕಟ್ಟಾಗಿಯೂ ಹಾಗು ತುಸು ಅಂದ ವಾಗಿಯೂ ಬರೆಯುವಂತೆ ಅವರನ್ನು ಪಳಗಿಸಬೇಕು. ಸಾಧಾರಣವಾಗಿ ಪ್ರಾಥಮಿಕ ಶಾಲೆಗಳಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರುವ ಉಕ್ತಲೇಖನ, ಶುದ್ಧಬರೆಹ ಹಾಗು 'ಕಾಪಿ' ಬರೆಹ ಮೊದಲಾದವುಗಳನ್ನು ಮಾತೃ ಭಾಷಾಭ್ಯಾ ಸದ ಸಾಮಾನ್ಯ ಅಂಗಗಳೆಂದು ತಿಳಿಯಬೇಕು. ಈ ಪದ್ಧತಿಯು ಅನೇಕ ಹಾಯಸ್ಕೂಲುಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿಲ್ಲ.

(೮) 'ಮೂಲೋದ್ಯೋಗ' ಇದೊಂದು ಮಹತ್ವದ ವಿಷಯ. ಇದನ್ನು ಹೊಸದಾಗಿ ಸೇರಿಸಲಾಗಿದೆ. ಮೂಲೋದ್ಯೋಗಗಳ ಬಗೆಗೆ ನಿಯಮಿಸಲ್ಪಟ್ಟ ಉಪಸಮಿತಿಯು ಕೇವಲ ಕೆಲವೇ ಮೂಲೋದ್ಯೋಗಗಳ ಅಭ್ಯಾಸಕ್ರಮ ಗಳನ್ನು ತಯಾರಿಸಲು ಸಮರ್ಥವಾಗಿದೆ. ಆದರೆ ಶಿಕ್ಷಣ ಖಾತೆಯ ಮುನ್ನೋಟ್ಟಿಗೆಯನ್ನು ಪಡೆದುಕೊಂಡು ಶಾಲೆ ಗಳಲ್ಲಿ ಇಚ್ಛಿತ ಅನ್ಯ ಮೂಲೋದ್ಯೋಗಗಳ ಅಭ್ಯಾಸಕ್ರಮ ಗಳನ್ನೂ ಪ್ರಾರಂಭಿಸಬಹುದೆಂದು ಶಿಫಾರಸು ಮಾಡಲಾ ಗಿದೆ. ವಿಶಿಷ್ಟ ಸಂದರ್ಭಗಳಲ್ಲಿ ಶಾಲೆಗಳು ಒಂದಕ್ಕಿಂತ ಹೆಚ್ಚು ಮೂಲೋದ್ಯೋಗಗಳನ್ನೂ ಕಲಿಸಬಹುದು.

(೯) ಮೂಲೋದ್ಯೋಗಗಳು ಅನೇಕ ತೆರನಾಗಿವೆ ಅಲ್ಲದೆ ಹೊಡಕೆನವೂ ಆಗಿವೆ. ಕೆಲವು ತುಲನಾತ್ಮಕವಾ ಸರಳವಾಗಿವೆ. ಹಾಗು ಅವುಗಳಿಗೆ ಸುಲಭ; ಸುಲಭ ಹಾಗು ಅಗ್ಗವಾದ (ಕಚ್ಚಾ) ಮಾಲು ಸಾಕಾಗುವದು ಆದರೆ ಇನ್ನು ಕೆಲವುಗಳಿಗೆ ಹೆಚ್ಚು ವೆಚ್ಚದ (ಕಚ್ಚಾ) ಮಾಲು ಹಾಗು ಎಲ್ಲ ಬಗೆಯಿಂದಲೂ ಸುಸಜ್ಜಿತವಾದ ಕರ್ಮಶಾ ಲೆಗಳು (ವರ್ಕ-ಶಾಪುಗಳು) ಬೇಕಾಗುವುವು. ಬಡಿಗತನದ ತಹ ಮೂಲೋದ್ಯೋಗದ ಪ್ರಾಯೋಗಿಕ ಕಾರ್ಯವನ್ನು ಕರ್ಮಶಾಲೆಯಲ್ಲಿ ಮಾಡಬೇಕಾಗುವದು. ಆಗ ಇಡಿಯ ವರ್ಗವನ್ನು ಏಕಕಾಲಕ್ಕೆ ಕೆಲಸದಲ್ಲಿ ತೊಡಗಿಸುವುದು ವ್ಯವ ಹಾರ್ಯವಾಗಲಿಕ್ಕಿಲ್ಲ. ಹಾಗು ಆ ವರ್ಗದ ಪ್ರಾಯೋಗಿ ಕಾರ್ಯಾಭ್ಯಾಸಕ್ಕೆ ಮಕ್ಕಳ ಗುಂಪುಗಳನ್ನು ಮಾಡಿ ಅವುಗಳನ್ನು ಸರತಿಯ ಮೇಲೆ ಕೆಲಸದಲ್ಲಿ ತೊಡಗಿಸ ಗತ್ಯಂತರವಿಲ್ಲದಾಗುವದು.

(೧೦) ಅಭ್ಯಾಸಕ್ರಮದಲ್ಲಿ ಇತಿಹಾಸ ವಿಷಯಕ್ಕೆ ವಿಶೇಷ ವಾದ ಮಹತ್ವವಿದೆ. ಈ ಅಭ್ಯಾಸಕ್ರಮದ ಕರಡನ್ನು ತಯಾರಿಸುವಾಗ ಕೇವಲ ರಾಜಕೀಯ ಇತಿಹಾಸವನ್ನಲ್ಲ

ಸಾಮಾಜಿಕ ಹಾಗು ಸಾಂಸ್ಕೃತಿಕ ಇತಿಹಾಸಗಳನ್ನೂ ಸೇರಿಸಲು ಜಾಗರೂಕತೆಯನ್ನು ವಹಿಸಲಾಗಿದೆ. ಇವರಿಂದ ಮಕ್ಕಳು ತಮ್ಮ ರಾಷ್ಟ್ರೀಯ ಪರಂಪರೆಯನ್ನು ಚೆನ್ನಾಗಿ ತಿಳಿಯಬಲ್ಲರು; ಹಾಗು ಅದರ ಗುಣಗ್ರಹಣವನ್ನೂ ಮಾಡಬಲ್ಲರು. ಭಾರತೀಯ ಇತಿಹಾಸದ ಮೇಲೆ ಪರಿಣಾಮವನ್ನುಂಟು ಮಾಡಿದ ಜಾಗತಿಕ ಇತಿಹಾಸದ ಮಹತ್ವದ ಘಟನೆಗಳನ್ನು ಈ ಅಭ್ಯಾಸಕ್ರಮದಲ್ಲಿ ಶಕ್ಯವಿದ್ದಲ್ಲೆಲ್ಲ ಸೇರಿಸಲಾಗಿದೆ. ಎರಡು ಜಾಗತಿಕ ಯುದ್ಧಗಳು, ರಾಷ್ಟ್ರಸಂಘೆ, ಯುಕ್ತರಾಷ್ಟ್ರಸಂಘೆ ಇವುಗಳ ಬೆಳವಣಿಗೆಯ ಅಭ್ಯಾಸವು ಮೂರನೆಯ ಇಯತ್ತೆಯ ಅಭ್ಯಾಸಕ್ರಮದಲ್ಲಿ ಅತಿಕವಾಗಿದೆ. ಆದರೆ ಈ ವಿಷಯಗಳ ವಿವರವಾದ ಅಭ್ಯಾಸವು ಇದರ ಗುರಿಯಲ್ಲ. ಈ ಎರಡೂ ಯುದ್ಧಗಳು ಜಗತ್ತಿನಲ್ಲಿ ಹಾಗು ಹಿಂದುಸ್ತಾನದಲ್ಲಿ ಎಂಥ ದೀರ್ಘಕಾಲಿಕ ಬದಲಾವಣೆಗಳಿಗೆ ಕಾರಣವಾಗಿವೆ ಎಂಬುದರ ಹಾಗು ರಾಷ್ಟ್ರಸಂಘೆ ಹಾಗು ಯುಕ್ತರಾಷ್ಟ್ರ ಸಂಘೆಗಳ ಮುಖಾಂತರ ಜನತೆಯು ----ಎಷ್ಟೇ ನಿರಾಶೆ ಆಡೆತಡೆಗಳು ಬಂದೊದಗಿದರೂ — ಸಹಕಾರಯುಕ್ತ, ಶಾಂತಿಮಯ ಜಗತ್ತನ್ನು ನಿರ್ಮಿಸಲು ಹೇಗೆ ಹೆಣಗಾಡುತ್ತಿದೆ ಎಂಬುದರ ಸ್ಪಷ್ಟ ಕಲ್ಪನೆಯು ವಿದ್ಯಾರ್ಥಿಗಳಿಗೆ ಆಗಬೇಕೆಂಬುದೇ ಇದರ ಹೆಗ್ಗುರಿಯಾಗಿದೆ. ರಾಷ್ಟ್ರೀಯ ಭಾವನೆಯು ವಿಶ್ವಬಂಧುತ್ವ ಹಾಗು ಸಹಕಾರಗಳಿಗೆ ಪ್ರತಿಬಂಧಕವಾಗಿರಬೇಕಲ್ಲದೆ ಪೂರಕವಾಗಿರಕೂಡದೆಂಬುದೇ ನಮ್ಮ ಆಭಿಪ್ರಾಯ. ಶಿಕ್ಷಕರು ಭಾರತೀಯ ಇತಿಹಾಸವನ್ನು ಕಲಿಸುವಾಗ ಶಕ್ಯವಿದ್ದಲ್ಲಿ ಹಾಗು ಯೋಗ್ಯವಿದ್ದಲ್ಲಿ ಸ್ಥಾನಿಕ ಹಾಗು ಪ್ರಾದೇಶಿಕ ಇತಿಹಾಸಗಳನ್ನು ಸ್ವ-ವಿವೇಚನಪ್ರಯುಕ್ತವಾಗಿ ಕೂಡಿಸಿಕೊಳ್ಳುವೆಂದು ನಿರೀಕ್ಷಿಸಲಾಗಿದೆ.

(೧೧) ಭೂಗೋಲ ಹಾಗು ವಿಜ್ಞಾನ ಈ ವಿಷಯಗಳಲ್ಲಿಯ ಪ್ರಗತಿಯು ಶಿಕ್ಷಕರಿಗೆ ದೊರೆಯುವ ಶೈಕ್ಷಣಿಕ ಸಲಕರಣೆಗಳ ಮೇಲೆ ಬಹುಮಟ್ಟಿಗೆ ಅವಲಂಬಿಸಿದೆ. ಆದರೂ, ಈ ವಿಷಯಗಳಿಗೆ ಸಾಮಾನ್ಯವಾಗಿ ಉಪಯೋಗಿಸಬೇಕಾಗುವ ಶೈಕ್ಷಣಿಕ ಸಲಕರಣೆಗಳನ್ನು ಶಿಕ್ಷಕರು ತಾವೇ ಸಹಜವಾಗಿ ಮಾಡಿಕೊಳ್ಳಬಹುದು, ಅಥವಾ ದೊರಕಿಸಿಕೊಳ್ಳಬಹುದು. ವಿದ್ಯಾರ್ಥಿಗಳು ಈ ವಿಷಯಗಳ ಅಭ್ಯಾಸದ ಭಾಗವೆಂದು ವೈಜ್ಞಾನಿಕ ಹಾಗು ಭೌಗೋಲಿಕ ದೃಷ್ಟಿಯಿಂದ ರುಚಿಕರವಾದ ಪಠ್ಯೇತರ ಪುಸ್ತಕಗಳನ್ನು ಓದುವಂತೆ ಶಿಕ್ಷಕರು ಅವರನ್ನು ಪ್ರೋತ್ಸಾಹಿಸಬೇಕೆಂದು ಸೂಚಿಸಲಾಗಿದೆ. ಭೂಗೋಲ ಹಾಗು ವಿಜ್ಞಾನಗಳೆರಡರಲ್ಲಿಯೂ ವರ್ಗದ ಕೆಲಸವು ಪ್ರಾಮುಖ್ಯವಾಗಿ ನಿರೀಕ್ಷಣೆ ಹಾಗೂ ಪ್ರಾಯೋಗಿಕ ಕಾರ್ಯದ ತಳಹದಿಯ ಮೇಲೆಯೇ ನಿಲ್ಲಬೇಕು. ಎಲ್ಲ ಶಾಲೆಗಳೂ ತಮ್ಮ ವಸ್ತುಸಂಗ್ರಹಾಲಯಗಳಿಗಾಗಿ ಉಪಯುಕ್ತ ವಸ್ತುಗಳನ್ನು ಕಲಿಪಾಕಲು ಮಕ್ಕಳನ್ನು ಪ್ರೋತ್ಸಾಹಿಸಬೇಕು. ವಿಶೇಷವಾಗಿ ಸ್ಥಾನಿಕ ಉಪಯೋಗದ ಸುಲಭ್ಯವಾದ, ಸ್ಥಳೀಯ ವಸ್ತುಗಳನ್ನು ಕೂಡಿಹಾಕುವಂತೆ ಅವರನ್ನು ಪುರಿದುಂಬಿಸಬೇಕು.

(೧೨) ಶಿಕ್ಷಣದಲ್ಲಿ ದೃಷ್ಟಿಮೂಲ ಶಿಕ್ಷಣಕ್ಕೊಂದು ಅತಿ ಮಹತ್ವದ ಸ್ಥಾನವಿದೆ. ಆದರೆ ಸಾಮಾನ್ಯವಾಗಿ ನಮ್ಮ ಶಾಲೆಗಳಲ್ಲಿ ಈ ಸಾಧನದ ಅಭಾವವಿದೆ. ನಮ್ಮ ಅಭಿಸ್ಪಾಯದ ಮೇರೆಗೆ, ಈ ಹೊಸ ಶೈಕ್ಷಣಿಕ ವಿಚಾರಸರಣಿಯ ಕಡೆಗೆ ಶಿಕ್ಷಣ ಶಾಖೆಯು ವಿಶೇಷ ಗಮನ ಕೊಡಬೇಕು ಹಾಗು ಸಾಕಷ್ಟು ದೊಡ್ಡ ಆಕಾರದ, ಯೋಗ್ಯ ಬಣ್ಣದ ಚಿತ್ರಗಳನ್ನೂ ಮತ್ತಿತರ ವಸ್ತುಗಳನ್ನೂ (ತಯಾರಿಸಿ ಶಾಲೆಗಳಿಗೆ ಮಿತವಾದ ಬೆಲೆಗಳಿಗೆ ದೊರಕಿಸಿ ಕೊಡುವ ಏರ್ಪಾಡು ಮಾಡಬೇಕು.

ಸಾಮಾನ್ಯವಾಗಿ ಕೆಳಗೆ ಕಾಣಿಸಿದ ಪ್ರಕಾರ ವಿಷಯಗಳಿಗೆ ಕೊಡಬೇಕಾದ ಅವಧಿಗಳ ಸಂಖ್ಯೆಗಳನ್ನೇ ಆಧಾರವಾಗಿಟ್ಟುಕೊಂಡು ವಿವಿಧ ವಿಷಯಗಳ ಅಭ್ಯಾಸಕ್ರಮಗಳನ್ನು ತಯಾರಿಸಲಾಗಿದೆ. ಆದರೆ ಅವಧಿಗಳ ಈ ಪರಿಮಿತಿಯನ್ನು ಶಾಲೆಗಳಿಗೆ ವಿಧಿಸತಕ್ಕದ್ದಲ್ಲ.

೧) ಮಾತೃಭಾಷೆ ....
೨) ಗಣಿತ ....
೩) ಇತಿಹಾಸ, ಭೂಗೋಲ ಹಾಗೂ ಪೌರನೀತಿ
೪) ಸಾಮಾನ್ಯವಿಜ್ಞಾನ ....
೫) ಹಿಂದುಸ್ತಾನಿ ....
೬) ಶಾರೀರಿಕ ಶಿಕ್ಷಣ ....
೭) ಪಠ್ಯೇತರ ....
೮) ಕತೆ ಹಾಗು ಮೂಲೋದ್ಯೋಗ ...

(ಕಲೆಗೆ ೨ ಇಲ್ಲವೆ ೩. ಮೂಲೋದ್ಯೋಗಕ್ಕೆ ೧೦ ಇಲ್ಲವೆ

ಹೈಸ್ಕೂಲುಗಳ ೧ ರಿಂದ ೩ನೆಯ ಹಾಗು ಪ್ರಾಥಮಿಕ ಶಾಲೆಗಳ ೫ ರಿಂದ ೭ನೆಯ ಇಯತ್ತೆಗಳ ಅಭ್ಯಾಸ ಪತ್ರಿಕೆಯು

೧. ಪ್ರಾದೇಶಿಕ ಭಾಷೆಗಳು
(ಮಾತೃಭಾಷೆ)

ಮಾತೃಭಾಷೆಯನ್ನು ಕಲಿಸುವಲ್ಲಿ ಶಿಕ್ಷಕನು ಈ ಕೆಳಗಣ ಮುಖ್ಯ ಗೊತ್ತು ಗುರಿಗಳನ್ನು ತನ್ನ ಎದುರಿಗೆ ಇಟ್ಟುಕೊಳ್ಳಬೇಕು:—

೧. ಗ್ರಹಿಕೆ:— ಮಗುವು ಇತರರು ಅಂದುದನ್ನು ಅಥವಾ ಓದಿದುದನ್ನು ಇಲ್ಲವೆ ಬರೆದುದನ್ನು ಗ್ರಹಿಸುವಂತೆ ಕಲಿಸುವುದು.

೨. ಸರಿಯಾದ ವಿಚಾರಸರಣಿ:— ಸರಿಯಾದ ವಿಚಾರ ಸರಣಿಯ ರೂಢಿಗಳನ್ನು ಮೂಡಿಸಿ ಬೆಳೆಸುವದು.

೩. ಗುಣಗ್ರಹಣ:— ವಿಚಾರಗಳ ಹಾಗು ಭಾಷೆಯ ಸ್ಪಷ್ಟತೆ, ಶಕ್ತ ಹಾಗು ಸೌಂದರ್ಯಗಳನ್ನು ಬಾಲಕನು ಮೆಚ್ಚುವಂತೆ ಅವನಿಗೆ ಮಾರ್ಗದರ್ಶನ ಮಾಡುವುದು.

೪. ವಿಚಾರ ವಿಸ್ತರಣ (ವಿಚಾರ ವ್ಯಕ್ತತೆ) :— ಮಗುವು ತನ್ನ ವಿಚಾರಗಳನ್ನು ಸ್ಪಷ್ಟವಾಗಿಯೂ, ತರ್ಕ ಬದ್ಧವಾಗಿಯೂ ಮತ್ತು ಪರಿಣಾಮಕಾರಿಯಾಗಿಯೂ — ಬರೆಹದಲ್ಲಿ ಹಾಗೂ ಮೌಖಿಕವಾಗಿ — ವ್ಯಕ್ತಗೊಳಿಸುವಂತೆ ಕಲಿಸುವುದು ಹಾಗು ಸಭಿಕರ ಮುಂದೆ ಮಾತಾಡುವ ಯೋಗ್ಯತೆಯನ್ನು ಬೆಳೆಯಿಸುವುದು.

೫. ಪುಸ್ತಕಗಳ ಯೋಗ್ಯ ಉಪಯೋಗ:— ಪುಸ್ತಕಗಳನ್ನು ಆಯ್ದುಕೊಳ್ಳುವ ಹಾಗು ಅಭ್ಯಸಿಸುವ ಪದ್ಧತಿಯನ್ನು ಕಲಿಸುವದು ಮತ್ತು ಪುಸ್ತಕಗಳನ್ನು ಜ್ಞಾನ ಸಂಪಾದನೆ ಹಾಗು ಮನರಂಜನೆಗಳ ಸಾಧನವನ್ನಾಗಿ ಉಪಯೋಗಿಸುವುದನ್ನು ಕಲಿಸುವುದು.

(ಟಿಪ್ಪಣಿ:— ಮರಾಠಿ, ಗುಜರಾಥಿ, ಕನ್ನಡ ಅಥವಾ ಉರ್ದು ವ್ಯಾಕರಣಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.)

ವಿವರವಾದ ಅಭ್ಯಾಸ:—

ಗದ್ಯ:— ಸುಮಾರು ಕೆಳಗೆ ಕೊಟ್ಟ ಸಂಖ್ಯೆಗಳಷ್ಟು ಪುಟಗಳ ಅಭ್ಯಾಸ.

೧ನೆಯ ಇಯತ್ತೆ	....	ಸುಮಾರು ೧೫೦	ಪುಟಗಳು
೨ನೆಯ ,,	....	,, ೧೭೫	,,
೩ನೆಯ ,,	....	,, ೨೦೦	,,

ಪದ್ಯ:— ಗೊತ್ತುಪಡಿಸಲಾದ ಪಠ್ಯ ಪುಸ್ತಕಗಳಲ್ಲಿಯಷ್ಟು ಶಕ್ಯವಿದ್ದಷ್ಟು ಹೆಚ್ಚು ಪದ್ಯ ಭಾಗವನ್ನು ಅಭ್ಯಸಿಸುವುದು. ತೀರ ಕಡಿಮೆಯೆಂದರೆ, ಕೆಳಗೆ ಕೊಟ್ಟಷ್ಟು ಸಾಲುಗಳನ್ನು ಅಭ್ಯಸಿಸಬೇಕು ಹಾಗು ಕೆಳಗೆ ಸೂಚಿಸಲಾದ ಕನಿಷ್ಟ ಸಂಖ್ಯೆಯ ಒಂದು ಮೂರನೆಯ ಅಂಶವನ್ನಾದರೂ ಬಾಯಿಪಾಠ ಮಾಡಬೇಕು—

೧ನೆಯ ಇಯತ್ತೆ	....	ಸುಮಾರು ೪೦೦	ಸಾಲುಗಳು
೨ನೆಯ ,,	....	,, ೪೫೦	,,
೩ನೆಯ ,,	....	,, ೫೦೦	,,

ಸಾಮಾನ್ಯ ವಾಚನ:— (೧) ಶಿಕ್ಷಕನ ಮಾರ್ಗದರ್ಶನ ಹಾಗು ಮೇಲ್ವಿಚಾರಣೆಯಲ್ಲಿ ಪ್ರತಿವರುಷ ವರ್ಗದ ವಾಚನಾಲಯದ ಎರಡು ಇಲ್ಲವೆ ಮೂರು ಪುಸ್ತಕಗಳನ್ನು ವರ್ಗದಲ್ಲಿ ಓದುವುದು. (೨) ಪ್ರತಿ ಕಾಲಾವಧಿ 'ಟರ್ಮಿ'ಗೆ ಕನಿಷ್ಠ ಎರಡು ಪುಸ್ತಕಗಳನ್ನು ಮನೆಯಲ್ಲಿ ಓದುವುದು. ಈ ಪುಸ್ತಕಗಳು ವಾಚನಾಲಯದವಿದ್ದು, ಶಿಕ್ಷಕನ ಸಹಾಯ-

ವಿಂದ ಆಯ್ದುಕೊಂಡುವು ಇರಬೇಕು. ಹೆಚ್ಚು ಪುಸ್ತಕಗಳು ಮನರಂಜಕವಾಗಿರಬೇಕು. ಕೆಲವು ಮಾತ್ರ ಮಾಹಿತಿ ಪೂರೈಸುವಂತಹವು ಇರಬಹುದು. ಈ ಮೆಟ್ಟಿನ ಕೊನೆಗೆ ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಯಲ್ಲಿಯ ನಿಖ್ಯಾತ ಲೇಖಕರ ಬರೆಹಗಳನ್ನು ಕೆಲಮಟ್ಟಿಗೆ ಪರಿಚಯ ಮಾಡಿಕೊಳ್ಳುವರೆಂದು ನಿರೀಕ್ಷಿಸತಕ್ಕದ್ದು.

ವ್ಯಾಕರಣ

೧ನೆಯ ಇಯತ್ತೆ (ಹೈಸ್ಕೂಲಿನ)— ೫ನೆಯ ಇಯತ್ತೆ (ಪ್ರಾಥಮಿಕ) (೧) ವಾಕ್ಯ:— ವಿಚಾರಘಟಕ (೨) ವಾಕ್ಯಗಳ ಪ್ರಕಾರಗಳು. ವಿಧಾನಾರ್ಥಕ (ಸ್ವಾರ್ಥಿ), ನಿಶ್ಚಯಾರ್ಥಕ, ನಿಷೇಧಾರ್ಥಕ, ಪ್ರಶ್ನಾರ್ಥಕ ಹಾಗು ಉದ್ಗಾರವಾಚಕ (೩) ವಾಕ್ಯ ವಿಭಾಗಗಳು: ಕರ್ತೃ, ಕರ್ಮ, ಆಖ್ಯಾತ. (೪) ನುಡಿ ವಿಭಾಗಗಳು— ನಾಮ, ಸರ್ವನಾಮ, ವಿಶೇಷಣ, ಕ್ರಿಯಾಪದಗಳು ಮತ್ತು ಅವುಗಳ ಮುಖ್ಯ ಪ್ರಕಾರಗಳು ಹಾಗು ಅವುಗಳ ಕಾರ್ಯ (೫) ಅವ್ಯಯಗಳು. (೬) ಲಿಂಗ, ವಚನ, ಪುರುಷ. (೭) ಮೂರು ಮುಖ್ಯ ಕಾಲಗಳು. (೮) ವಿರಾಮಚಿಹ್ನೆಗಳು — ಪೂರ್ಣವಿರಾಮ, ಅಲ್ಪವಿರಾಮ, ಅವತರಣಿಕೆಗಳು, ಪ್ರಶ್ನಾರ್ಥಕ ಚಿಹ್ನ ಹಾಗು ಉದ್ಗಾರವಾಚಕ ಚಿಹ್ನಗಳು.

ಕೈ ಬರೆಹ ಹಾಗು ಪ್ರಬಂಧ

(೧) ಕೈ ಬರೆಹವನ್ನೂ ಅಕ್ಷರ ಜೋಡಣೆಯನ್ನೂ ಸುಧಾರಿಸಲು ಕಾಪಿ ಬರೆಹ ಹಾಗು ಶುದ್ಧ ಬರೆಹ.

(೨) ಉಕ್ತ ಲೇಖನ ಹಾಗು ಶುದ್ಧ ಬರೆಹ. ಅಕ್ಷರ ಜೋಡಣೆಯ ಮುಖ್ಯ ನಿಯಮಗಳನ್ನು ವಿವರಿಸಬೇಕು.

೧ನೆಯ ಇಯತ್ತೆ (ಹೈಸ್ಕೂಲ)—
೫ನೆಯ ಇಯತ್ತೆ (ಪ್ರಾಥಮಿಕ)

(ಅ) ರಸವತ್ತಾದ ಕಥೆಗಳು ಅಥವಾ ವರ್ಣನೆಗಳು ಇಲ್ಲವೆ ಸಾಮಾನ್ಯ ಅಭ್ಯಾಸದ ಪುಸ್ತಕಗಳಲ್ಲಿಯ ಇಲ್ಲವೆ ಸುತ್ತಮುತ್ತಲಿನ ಜೀವನದಲ್ಲಿಯ ಘಟನೆಗಳ ವರ್ಣನೆಗಳು.

(ಬ) ಚಿತ್ರಗಳು, ಸಂಗತಿಗಳು, ಒಕ್ಕಲುತನದ ಹಾಗು ಔದ್ಯೋಗಿಕ ವಿಧಾನಗಳು, ಹಬ್ಬಗಳು ಮೊದಲಾದವುಗಳನ್ನು ಮೌಖಿಕವಾಗಿ ಹಾಗು ಬರೆಹದಲ್ಲಿ ವರ್ಣಿಸುವುದು.

(ಕ) ಚರ್ಚೆಗಳಿಗಾಗಿ ಟಿಪ್ಪಣಿಗಳನ್ನು ತಯಾರಿಸುವುದು

(ಡ) ದಿನಚರಿ (ಹೆಚ್ಚಿನ ವಯೋಮಾನ ಹಾಗು ಹೆಚ್ಚು ವಿಶಾಲವಾದ ಅನುಭವಗಳಿಗೆ ಅನುಗುಣವಾಗಿ ಇದರ ವ್ಯಾಪ್ತಿಯನ್ನು ವಿಸ್ತರಿಸುವುದು.)

(ಇ) ಪತ್ರ ಬರೆಹ—ಯಥಾರ್ಥ ನಿರೂಪಣೆಯ ಗುರಿಯಿಟ್ಟುಕೊಂಡು ಅನೌಪಚಾರಿಕ ಹಾಗು ಔಪಚಾರಿಕ; ಉದಾ:- ಶಾಲೆಯಿಂದ ಗೈರ ಹಾಜರ ಇದ್ದದಕ್ಕೆ ಕ್ಷಮೆ ಕೇಳಿಕೊಳ್ಳುವ ಪತ್ರ, ಔತಣದೋಲೆಗಳು, ಅಭಿನಂದನಪರ ಪತ್ರಗಳು ಮುಂತಾದವು.

(ಫ) ಕೊಟ್ಟ ರೂಪರೇಷೆಗಳಿಂದ ಕಥಾ ರಚನೆ.

(ಗ) ಸಾದಾ ಸಂಭಾಷಣೆಗಳು.

(ಹ) ಪಡೆನುಡಿಗಳು ಹಾಗು ಕೂಡು ನುಡಿಗಳು. (Phrases)

೨. ಸಾಮಾನ್ಯವಿಜ್ಞಾನ

(ಸೂಚನೆ:— ವಿಜ್ಞಾನವಸ್ತು ಶಾಲೆಗಳಲ್ಲಿ ಅದೊಂದು ಪ್ರತ್ಯೇಕ ಶಾಸ್ತ್ರವೆಂದು ಭಾವಿಸದೇ ಇಡಿಯಾಗಿ ಪರಿಗಣಿಸಬೇಕು. ಜ್ಞಾನವು ಪುಸಂಬದ್ಧವಾಗಿರುವದರಿಂದ ಅದರಲ್ಲಿ ಎಲ್ಲ ಶಾಸ್ತ್ರಗಳನ್ನು ಹೆಣೆಯುವಂತೆ ಒಂದುಗೂಡಿಸುವ ಏಕಸೂತ್ರತೆ ಇರುವುದು ಅವಶ್ಯವಿದೆ. ಎಲ್ಲ ಶಾಸ್ತ್ರಗಳಲ್ಲಿ ಸಂಬಂಧವನ್ನುಂಟುಮಾಡುವ ಇಂತಹ ಒಂದೇ ಒಂದು ದ್ವಾರವಿದೆ. ಅದುವೇ ಜೀವನ ಕ್ರಮ. ಅಭ್ಯಾಸ ಪತ್ರಿಕೆಯಲ್ಲಿ ಜೀವನ ಕ್ರಮವನ್ನು ಮುಖ್ಯವಸ್ತು ವಿಷಯವಾಗಿ ಗ್ರಹಿಸಿ ಅದರ ಸುತ್ತಲೂ ಎಲ್ಲ ವಿಜ್ಞಾನಗಳನ್ನು ಒಂದುಗೂಡಿಸಿ ಹೆಣೆಯಲಾಗಿದೆ.)

ಜೀವನ ಕ್ರಮದ ಪ್ರತಿಯೊಂದು ಮಟ್ಟದಲ್ಲಿ ಅದನ್ನು ಪೋಷಿಸುವ ನಾಲ್ಕು ಮುಖ್ಯ ಚಟುವಟಿಕೆಗಳು ಇವೆ ಹಾಗು ಈ ಸಂಗತಿಯನ್ನು ಮಕ್ಕಳು ಸಹಜವಾಗಿ ಮೆಚ್ಚಬಲ್ಲರು. ಈ ನಾಲ್ಕು ಚಟುವಟಿಕೆಗಳು ಯಾವುವೆಂದರೆ:— ಶ್ವಾಸೋಛ್ವಾಸ, ಪೋಷಣೆ, ಚಲನೆ ಹಾಗು (ಇಂದ್ರಿಯ ಜನ್ಯ) ಜ್ಞಾನಗ್ರಹಣ. ಮಾನವ ಜೀವನದಿಂದ ಆರಂಭಿಸಿ ಕೆಳದರ್ಜೆಯ ಪ್ರಾಣಿಗಳು, ಸಸ್ಯಗಳು ಹಾಗು ಇತರ ಸ್ವಾಭಾವಿಕ ಪರಿಸ್ಥಿತಿಗಳನ್ನೊಳಗೊಂಡು ಈ ನಾಲ್ಕು ಚಟುವಟಿಕೆಗಳನ್ನು ಅಭ್ಯಸಿಸುವದೇ ಈ ಅಭ್ಯಾಸಕ್ರಮದ ಗುರಿಯಾ-

ಗಿದೆ. ನಾವು ಜೀವಿಸುವ ಹಾಗು ಚಲಿಸುವ ಪ್ರಾಕೃತಿಕ ವಾತಾವರಣವನ್ನು ಅಭ್ಯಸಿಸುವದೇ ಇದರ ಅಭಿಪ್ರಾಯವಿದೆ. ಮಕ್ಕಳು ತಾವು ಜೀವಿಸುತ್ತಿರುವ ವಿಶ್ವವನ್ನು ಕುರಿತು ಕೆಲಮಟ್ಟಿಗೆ ತಿಳಿದುಕೊಳ್ಳಲೆಂಬ ಉದ್ದೇಶದಿಂದ ಐದನೆಯ ಸದರನ್ನು — ವಿಶ್ವದ ಜ್ಞಾನವನ್ನು — ಕೂಡಿಸಲಾಗಿದೆ.

ಅಭ್ಯಾಸಕ್ರಮದ ಗುಂಪುಗಳನ್ನು ಮೇಲ್ಕಾಣಿಸಿದ ಐದು ಸದರುಗಳ ಕೆಳಗೆ ಮಾಡಿದೆಯಾದರೂ ವಾಸ್ತವಿಕವಾಗಿ ಈ ವಿಷಯಾಂಶಗಳು ಬಹುಮಟ್ಟಿಗೆ ಸಾಂಪ್ರದಾಯಿಕ ಅಭ್ಯಾಸಕ್ರಮದಲ್ಲಿ ಸಾಮಾನ್ಯವಾಗಿ ಕಂಡುಬರುವ ವಿಷಯಾಂಶಗಳೇ ಆಗಿವೆ ಮತ್ತು ಇವುಗಳನ್ನು ಆಯ್ದುಕೊಂಡು ಒಟ್ಟುಗೂಡಿಸುವುದು ಹಾಗು ಮಕ್ಕಳು ಮಾಡಿಕೆಯ ಕ್ರಮದಕ್ಕಿಂತಲೂ ಚನ್ನಾಗಿ ಮೆಚ್ಚುವಂತೆ ಹಾಗು ತಿಳಿಯುವಂತೆ ಕ್ರಮಗೊಳಿಸಿ ಅವರ ಮುಂದೆ ಇಡುವುದು ಶಿಕ್ಷಕನಿಗೆ ಕಠಿಣವಾಗಬಾರದು.

ಗೊತ್ತುಗುರಿಗಳು: —

(೧) ಮಕ್ಕಳು ಜೀವನಕ್ರಮದಲ್ಲಿ (ಉತ್ಕಟ) ಆಸಕ್ತಿ ವಹಿಸುವಂತೆ ಮಾಡುವುದು.

(೨) ಜೀವನಕ್ರಮವು ಮನುಷ್ಯ ಪ್ರಾಣಿ, ಕೆಳದರ್ಜೆಯ ಪ್ರಾಣಿ ಹಾಗೂ ಸಸ್ಯಗಳಿಗೆ ಕೆಲಮಟ್ಟಿಗೆ ಸಾಮಾನ್ಯವಾದಂಥದಿದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡುವುದು.

(೩) ನಮ್ಮ ಪರಿಸ್ಥಿತಿಯೊಡನೆ ಜ್ಞಾನೇಂದ್ರಿಯಗಳ ಮುಖಾಂತರ (ನಾವು) ಇಟ್ಟುಕೊಂಡ ಪ್ರಾಕೃತಿಕ ಸಂಬಂಧ (ಸಂಪರ್ಕ)ವು ಜೀವನಕ್ರಮವನ್ನು ಸುಗಮವಾಗಿ ಮಾಡುತ್ತದೆ ಎಂಬುದರ ಅರಿವು ಬಾಲಕರಿಗೆ ಆಗುವಂತೆ ಮಾಡುವುದು.

(೪) ಮನುಷ್ಯನು ಶಾಸ್ತ್ರೀಯ ಶೋಧನೆಯಿಂದ ತನ್ನ ಸ್ವಂತ ಜೀವನದಲ್ಲಿಯು ಈ ನಾಲ್ಕು ಜೀವಾಳದ ಚಟುವಟಿಕೆಗಳ ಫಲಕಾರಿತ್ವವನ್ನು ಹೇಗೆ ಬೆಳೆಯಿಸಿಕೊಂಡಿದ್ದಾನೆಂಬುದನ್ನು ಅಭ್ಯಸಿಸುವುದು.

(೫) ಮಕ್ಕಳಲ್ಲಿ ತಮ್ಮ ಸುತ್ತುಮುತ್ತಲಿನ ವಸ್ತುಗಳನ್ನು ನಿರೀಕ್ಷಿಸುವ ರೂಢಿಯನ್ನು ಮೂಡಿಸಿ ಬೆಳೆಯಿಸುವುದು.

೫ನೆಯ ಇಯತ್ತೆ (ಪ್ರಾಥಮಿಕ)—

೧ನೆಯ ಇಯತ್ತೆ (ಹೈಸ್ಕೂಲ)

ಶ್ವಾಸೋಛ್ವಾಸ:— ಸಸ್ಯ, ಮೀನ, ಪಕ್ಷಿ, ಪ್ರಾಣಿ (ಭೂಗತ ಪ್ರಾಣಿಗಳನ್ನೊಳಗೊಂಡು) ಹಾಗು ಮನುಷ್ಯರಲ್ಲಿಯ ಶ್ವಾಸೋಛ್ವಾಸ. ಹವೆ. ಅಂಗಾರಾಮ್ಲವಾಯು. ದೈನಂದಿನ ಜೀವನದಲ್ಲಿ ಅಂಗಾರಾಮ್ಲವಾಯುವಿನ ಪ್ರಯೋಜನಗಳು. ಕುಡಿಯುವ 'ನೀರು' (ವಾಟರ್). ಶುದ್ಧ ಹವೆಯ ಮಹತ್ವ. ಹವೆಯಲ್ಲಿಯ ಜೀವರಾಶಿ (ಹವೆಯಲ್ಲಿಯ ಮೂಲ ಜೀವಾಣು ಹಾಗೂ ಏಕ ಜೀವಾಣು—ಬ್ಯಾಕ್ಟೀರಿಯಾ—ಗಳು). ಮೂಗಿನಿಂದ ಉಸುರಾಡಿಸುವುದು.

ಪೋಷಣೆ:— ಜೈತನ್ಯಕ್ಕಾಗಿ ಆಹಾರದ ಅವಶ್ಯಕತೆ. ಆಹಾರದ ಪ್ರಕಾರಗಳು (ಮಾಂಸಾಹಾರ, ಶಾಕಾಹಾರ). ಆಹಾರದ ಬೇರೆ ಬೇರೆ ಘಟಕಗಳು. ನೀರು, ಪಿಷ್ಟ ಹಾಗೂ ಸಕ್ಕರೆ ಕೊಬ್ಬುಗಳು, ಸಸಾರಜನಕಗಳು ಹಾಗೂ ಜೀವನ ಸತ್ವಗಳು. ಸಸ್ಯ ಜೀವನದಿಂದ ಮನುಷ್ಯನಿಗೆ ಆಹಾರ, ತೆಗೆದುಕೊಳ್ಳುವ, ಉಪಯೋಗಿಸಿಕೊಳ್ಳುವ ರೀತಿಗಳು ಹಾಗೂ ಹಾಳಿನ ಪ್ರಮಾಣವನ್ನು ಇಲ್ಲದಂತೆ ಮಾಡುವ ರೀತಿಗಳು.

ನೀರು:— ನೀರು ದೊರಕುವ ಸ್ಥಾನಗಳು, ಅಶುದ್ಧತೆಗಳು, ಶುದ್ದೀಕರಿಸುವ ವಿಧಾನಗಳು. ನೀರು ಸ್ವಚ್ಛಗೊಳಿಸುವ ಸಾಧನ, ಬಟ್ಟೆ ಒಗೆಯುವುದು. ಸ್ವಚ್ಛಗೊಳಿಸುವ ಇತರ ಸಾಧನಗಳು. ಮಳೆಯ ಚಕ್ರ (ಬಾಷ್ಪೀಭವನ ಹಾಗೂ ಘನೀಭವನ).

ಚಲನೆ: — ಸಸ್ಯಗಳಲ್ಲಿಯ ಚಲನವಲನದ ಅಭ್ಯಾಸ, ಬೀಜ ಪ್ರಸಾರ, ಬಳ್ಳಿಗಳು, ಪಶುಗಳು, ಕ್ರಿಮಿ ಕೀಟಕಗಳು, ಹರಿದಾಡುವ ಜಂತುಗಳು, ಪಕ್ಷಿಗಳು, ಮೀನ ಹಾಗೂ ಸಸ್ತನ ಪ್ರಾಣಿಗಳು ಇವುಗಳಲ್ಲಿಯ ಚಲನವಲನಗಳ ಅಭ್ಯಾಸ. ಸ್ನಾಯುಗಳು, ಸಮತೋಲನ ಹಾಗೂ ಗುರುತ್ವಮಧ್ಯ.

ಜ್ಞಾನಗ್ರಹಣ (ಇಂದ್ರಿಯಜನ್ಯ):— ಕಣ್ಣು ಗಳು—ಪ್ರತಿಬಿಂಬ ಹಾಗೂ ಗೋಲಕ (Lens) (ಅಂತರ್ಗೋಲ ಬಹಿರ್ಗೋಲ ಕಾಜು) ಇವು ಫೊಟೊಗ್ರಫಿಯ ಯಂತ್ರ (Camera). ಚಿತ್ರವು ಚಲಿಸುವಂತೆ ಕಾಣುವ ಹಾಗೆ ಮಾಡುವ ಬಗೆ (ಚಲಚಿತ್ರವ ಚಿತ್ರಪಟ್ಟಿ). ಕಣ್ಣು ಗಳ ಬಗೆಗೆ ಜಾಗರೂಕತೆ. ವಿವಿಧ ಪ್ರಾಣಿಗಳಲ್ಲಿ ವಿವಿಧ ಪ್ರಕಾರದ ಕಣ್ಣುಗಳು. ಕಿವಿಯ ರಚನೆ. ಧ್ವನಿ, ಅದರ ಹುಟ್ಟು. ಧ್ವನಿಯ ತರಂಗಗಳು; ಸಪ್ಪಳ; ಮಾನವ ದೇಹದ ಮೇಲೆ ಅದರ ಪರಿಣಾಮ; ಸಪ್ಪಳವನ್ನು ನಿಯಂತ್ರಿಸುವುದು. ಪೌರನೀತಿಯ ದೃಷ್ಟಿಯಿಂದ ಅನರ ಮಹತ್ವ.

ವಿಶ್ವದ ಅಭ್ಯಾಸ:— ವಿಶ್ವದ ವೈಶಾಲ್ಯ, ನಕ್ಷತ್ರಗಳು, ಗ್ರಹಗಳು ಮತ್ತು ಆಕಾಶಗಂಗೆ. ಮಹತ್ವದ ಹಾಗೂ ವೈಶಿಷ್ಟ್ಯಯುಕ್ತ ನಕ್ಷತ್ರ ಪುಂಜಗಳು. ಧ್ರುವ ನಕ್ಷತ್ರ.

ಪ್ರಾಯೋಗಿಕವಾಗಿ ಮಾಡಿ ತೋರಿಸಬೇಕಾದ

ಪ್ರಾತ್ಯಕ್ಷಿಕೆಗಳ ಪಟ್ಟಿ

(೧) ಹವೆಯಲ್ಲಿ ಆಂಗಾರಾಮ್ಲ ವಾಯುವಿನ ಇರುವಿಕೆ ಹುನ್ನು—ಹನಿದುನ್ನು ಸುಣ್ಣದ ನೀರಿನಲ್ಲಿ ಹಾಯಿಸಿ—ತೋರಿಸುವುದು

(೨) ರಾಡಿ ನೀರಿನ ಮೇಲೆ ಪಟಿಕದ ಪರಿಣಾಮ.

(೩) ನೀರನ್ನು ಸೋಸುವ ಪದ್ಧತಿಯಿಂದ ಶುದ್ಧಗೊಳಿಸುವುದು.

(೪) ನೀರನ್ನು ಬಟ್ಟಿ ಇಳಿಸಿ ಶುದ್ಧ ಮಾಡುವುದು.

(೫) ಸಬಕಾರವು ಬಟ್ಟೆಗಳಲ್ಲಿಯ ಹೊಲಸು ಹಾಗೂ ಎಣ್ಣೆಗಳನ್ನು ಹೇಗೆ ಹೋಗಲಾಡಿಸುತ್ತದೆ ಎಂಬುದನ್ನು ತೋರಿಸುವುದು.

(೬) ಗುರುತ್ವಮಧ್ಯ ಹಾಗೂ ಸಮತೋಲನ ಸ್ಥಿತಿಗಳ ಪರಸ್ಪರ ಸಂಬಂಧವನ್ನು ತೋರಿಸುವುದು (ಆಧಾರ ತಳದ ಕ್ಷೇತ್ರದಲ್ಲಿ ಗುರುತ್ವಮಧ್ಯವು).

(೭) ಅಂತರ್ಗೋಲ ಅಥವಾ ಬಹಿರ್ಗೋಲ ಕಾಜಿನ ಮುಖಾಂತರ ಕಾಣುವ ಪ್ರತಿಬಿಂಬಗಳ ಸ್ಥಿತಿ ಸ್ವರೂಪವನ್ನು ತೋರಿಸುವುದು.

(೮) ತುಸುವೇ ಭಿನ್ನಭಿನ್ನವಾದ ಭಂಗಿಗಳಲ್ಲಿಯ ಚಿತ್ರಾವಳಿಗಳನ್ನು ಒಂದರ ನಂತರ ಮತ್ತೊಂದರಂತೆ ತೀವ್ರಗತಿಯಿಂದ ಪ್ರಕಾಶಿಸುವುದರಿಂದ ಆ ಚಿತ್ರಗಳ ಮೇಲೆ ಚಲನೆಯು ಪರಿಣಮಿಸುವ ಬಗೆಯನ್ನು ತೋರಿಸುವುದು.

೩. ಗಣಿತ

(೧) ಅಂಕಗಣಿತದ ಪ್ರಕರಣವನ್ನು ಕಲಿಸುವಲ್ಲಿ ಪ್ರತ್ಯಕ್ಷ ಉದಾಹರಣೆಗಳನ್ನು ಮಕ್ಕಳ ತತ್ಕಾಲೀನ ಎಲ್ಲ ವಿವಿಧ ವಿಷಯ ಹಾಗು ಚಟುವಟಿಗಗಳಿಗೆ ಸಂಬಂಧಿಸಲು ಶಕ್ಯವಿದ್ದಷ್ಟು ಯತ್ನಿಸಬೇಕು.

(೨) ಬಡ್ಡಿ, ಲಾಭಹಾನಿ, ವೇಳೆ-ಕೆಲಸ-ವೇಗ; ಹೊಲಗಳ ಅಳತೆ ಮೊದಲಾದ ಪ್ರಕರಣಗಳನ್ನು ಕಲಿಸುವಲ್ಲಿ ಈ ಸಮಸ್ಯೆ ಹಾಗೂ ವ್ಯವಹಾರಗಳಲ್ಲಿಯೆ ಸಾಮಾಜಿಕ ತೊಡಕನ್ನೂ ಚರ್ಚಿಸತಕ್ಕದ್ದು.

(೩) ಮಕ್ಕಳು ಎಣಿಕೆಗಳನ್ನು ಬರೆಯದೆ ವೇಗವಾಗಿ ಮಾಡುವಂತೆ ಅವರನ್ನು ಪ್ರೋತ್ಸಾಹಿಸಬೇಕು.

(೪) ೫, ೨೫, ೧೦೦, ೯೯ ಮುಂತಾದವುಗಳಿಂದ ಗುಣಿಸುವ ಹಾಗು ಭಾಗಿಸುವ ಸಂಕ್ಷಿಪ್ತ ರೀತಿಗಳು ವಿದ್ಯಾರ್ಥಿಗಳಿಗೆ ಗೊತ್ತಿರಬೇಕು.

(೫) ಅಭ್ಯಸನಗಳು ಸುಲಭವಾದವುಗಳೂ ಸರಿಯಾಗಿ ವರ್ಗೀಕರಿಸಲ್ಪಟ್ಟವುಗಳೂ ಮತ್ತು ವಾಸ್ತವಿಕವಾದವುಗಳೂ ಆಗಿರಬೇಕು. ಹಣದ ವ್ಯವಹಾರಗಳು ಬಳಕೆಯಲ್ಲಿರುವ ಸ್ಥಿತಿಗತಿಗಳಿಗೆ ಹೊಂದಿಕೆಯಾಗುವಂತಿರಬೇಕು.

೧೧ನೆಯ ಇಯತ್ತೆ (ಹೈಸ್ಕೂಲ)—
೫ನೆಯ ಇಯತ್ತೆ (ಪ್ರಾಥಮಿಕ)

(೧) ಅಪೂರಾಂಕಗಳಲ್ಲಿ ಅಂಕಗಣಿತದ ನಾಲ್ಕು ಮೂಕ್ರಿಯೆಗಳ ಪುನಃ ಪರಿಶೀಲನೆ.

(ತೊಡಕಿನ ಅಪೂರ್ಣಾಂಕಗಳನ್ನು ಬಿಟ್ಟು ಬಿಡಿರಿ).

(೨) ಅಂದಾಜುಗಳು. (ಪೂರ್ಣಾಂಕಗಳು) ಉದಾ:—

೧ ಫೈ = ೩, ೧ ಫೈ = ೧;

ಶತಕಗಳು:— ೪೫೧ ರಿಂದ ೫೪೯ = ೫೦೦ ಮುಂ.

(೩) ತ್ರೈರಾಶಿ:— ಸಾದಾ ಹಾಗು ಸಂಯುಕ್ತ.

(೪) ಸರಳಬಡ್ಡಿ:— ಬಡ್ಡಿಯ ದರ, ಮುದ್ದತ್ತು, ಸು, ಬಡ್ಡಿ ಮತ್ತು ಅಸಲು ತೆಗೆಯುವುದು. (ಪಟ್ಟಣ ಳಲ್ಲಿ ತೇವುಗಳ ಮೇಲಿನ ಬಡ್ಡಿಗಳನ್ನೂ ಉಲ್ಲೇಖಿಸಬ ಸುದು).

(೫) ದಶಾಂಶಗಳ ಪ್ರಾಥಮಿಕ ಕಲ್ಪನೆಗಳು, ಸಾದಾ ೀರೀಜು, ವಜಾಬಾಕಿ, ಉದ್ದಳತೆಗಳನ್ನು ಮಾತ್ರ ಅಳೆಯು ೂಕ್ಕೆ ಮೆಟ್ರಿಕ್ ಪದ್ಧತಿ.

(೬) ಉದ್ದಳತೆ (ಸರಳ ಹಾಗೂ ವಕ್ರ) ಉದ್ದಳತೆ ಗಳನ್ನು ದೃಷ್ಟಿಯಿಂದ ಅಂದಾಜು ಮಾಡುವುದು ಮತ್ತು ಳೆದು ತಾಳೆ ನೋಡುವುದು, (ಹೆಜ್ಜೆಗಳಿಂದ ಅಳೆಯು ವುದು ಮತ್ತು ಉದ್ದಳತೆ ಹೆಚ್ಚಾದಂತೆ ಅನುಕ್ರಮವಾಗಿ ಇಂಚು, ಫೂಟು, ಯಾರ್ಡುಗಳನ್ನು ಪಯೋಗಿಸಿ ಪ್ರತ್ಯಕ್ಷ ಳೆಯುವುದು.) ಇಂಚು ಹಾಗು ಸೆಂಟಿಮಿಟರುಗಳ ನಡು ುನ ಸಂಬಂಧ. ಯಾರ್ಡು ಹಾಗು ಮೀಟರುಗಳ ನಡುವಿನ ಂಬಂಧ. (ಇನ್ನೂ ಬಳಕೆಯಲ್ಲಿರುವ ಸ್ಥಾನಿಕ ಅಳತೆಗ ಗೂ ಸ್ಟಾಂಡರ್ಡ್—ಗೊತ್ತು ಪಡಿಸಿದ—ಅಳತೆಗಳಿಗೂ ರುವ ಪರಸ್ಪರ ಸಂಬಂಧವನ್ನು ಬಾಲಕರಿಗೆ ತೋರಿಸ ೀಕು).

(೭) ಕಾಟಕೋನ ಚೌಕೋನಗಳ ಕ್ಷೇತ್ರ (ಚೌರಸ ಂಚಿನ ಕಾಗದಗಳ ಸಹಾಯದಿಂದ ಕಾಟಕೋನ ಚೌಕೋ ಗಳ ಕ್ಷೇತ್ರವನ್ನು ಪ್ರತ್ಯಕ್ಷ ಅಳೆಯುವುದು.) ನೆಲಗಟ್ಟು ಮಾಡಲು ತಗಲುವ ವೆಚ್ಚ, ಗೋಡೆಗಳಿಗೆ ಸುಣ್ಣ ಬಳೆ ುಲು ತಗಲುವ ವೆಚ್ಚ, ಜಮಖಾನೆ ನೇಯಲು ತಗಲುವ ೆಚ್ಚ ಮುಂತಾದವುಗಳು. ಕಾಟಕೋನ ಚೌಕೋನಾಕಾ ದ ಹೊಲಗಳ ಕ್ಷೇತ್ರ—ಎಕರೆ ಬಿಘೆಗಳ ಕಲ್ಪನೆ, (ವರ್ಗದ ೋಣೆಯ ಗೋಡೆಗಳಿಗೆ ಬಾಲಕರು ಸ್ವತಃ ಸುಣ್ಣ ಬಳೆದು, ುಪಯೋಗಿಸಿದ ವಸ್ತುಗಳ ಬೆಲೆ ಮುಂತಾದುವನ್ನು ಂಡು ಹಿಡಿಯಬೇಕೆಂದು ಸೂಚಿಸಲಾಗಿದೆ.)

(೮) ಕೋನಗಳ ಅಳತೆ, ಕೋನ ಮಾಪಕದ ಸಹಾ ಯದಿಂದ ಕೋನಗಳನ್ನು ರಚಿಸುವುದು. (ಆರಂಭದಲ್ಲಿ ವರ್ತುಳಾಕಾರದ ಕೋನಮಾಪಕವನ್ನು ಪಯೋಗಿಸಬೇಕು.)

(೯) ಒಂದು ಬಿಂದುವಿನಲ್ಲಿಯ ಕೋನಗಳ ಗುಣ ಧರ್ಮಗಳು.

(೧೦) ಕಾಟಕೋನ ಚೌಕೋನಾಕಾರದ ಕ್ಷೇತ್ರಗ ಳನ್ನು ಸ್ಕೇಲಿಗನುಸರಿಸಿ ತೆಗೆಯುವುದು. ವರ್ಗದ ಕೋಣೆ, ಶಾಲೆ ಹಾಗು ಶಾಲೆಯ ಸುತ್ತುಮುತ್ತಲಿನ ಕಾಟಕೋನ ಚೌಕೋನಾಕಾರದ ಸ್ಥಳಗಳ ನಕ್ಷೆ. ಈ ಕೆಲಸಕ್ಕಾಗಿ ಮಕ್ಕಳು (ನಕ್ಷೆ ತೆಗೆಯಬೇಕಾದ) ತುಂಡು ನೆಲದ ಅಥವಾ ಕೋಣೆಯ ಉದ್ದಗಲಗಳನ್ನು ಪ್ರತ್ಯಕ್ಷವಾಗಿ ಅಳೆಯಬೇಕು.

(೧೧) ಶಾಲೆಯ ಸ್ನೇಹ ಸಮ್ಮೇಲನ, ಮಕ್ಕಳ ಸಹ ಕಾರೀ ಅಂಗಡಿ, ಹೊಲಗಳು ಮತ್ತು ದೈನಂದಿನ ಗೃಹೋ ಪಯೋಗಿ ಸಾಮಾನುಗಳ ಖರೀದಿ ಇವುಗಳ ಬಗೆಗೆ ಸಾದಾ ಜಮಾಖರ್ಚನ್ನು ಬರೆದಿಡುವುದು.

ಟಿಪ್ಪಣಿ:— ಪ್ರಾಯೋಗಿಕ ಕೆಲಸ—

(೧) ಇಂಚು ಮತ್ತು ಫೂಟುಗಳನ್ನು ಗುರುತಿಸಿದ ಗಜಕಟ್ಟಿಗೆಯನ್ನು ತಯಾರಿಸುವುದು.

(೨) ಸೆಂಟಿಮಿಟರ್ ಹಾಗು ಡೆಸಿಮಿಟರ್‌ಗಳನ್ನು ಗುರುತಿಸಿದ ಮಿಟರ್ ಕೋಲನ್ನು ತಯಾರಿಸುವುದು.

(೩) ೧೦ ಅಂಶಗಳಂತೆ ಗುರುತಿಸಿದ ವರ್ತುಳಾಕಾರದ ಕೋನಮಾಪಕವನ್ನು ತಯಾರಿಸುವದು.

(೪) ಕಾಗದದಿಂದ ಚೌರಸ ಇಂಚಿನ ತುಂಡುಗಳನ್ನು ಕತ್ತರಿಸಿ ತೆಗೆಯುವುದು.

(೫) ಯಾವುದೊಂದು ಅಂಚಿನ ಸರಳತೆಯನ್ನು ಪರೀಕ್ಷಿಸುವುದು.

(೬) ಚೌರಸಕೋನ (ಕಾಟಕೋನ) ವನ್ನು, ಕಾಗದ ವನ್ನು ಮಡಿಚಿ ತಯಾರಿಸುವುದು ಮತ್ತು ಅದನ್ನು ಕಾಟ ಕೋನಗಳನ್ನು ರಚಿಸಲು ಹಾಗು ಕಾಟಕೋನ ಆಕಾರದ ಮೂಲೆಗಳನ್ನು ಪರೀಕ್ಷಿಸಲು ಉಪಯೋಗಿಸುವುದು.

೪. ಇತಿಹಾಸ

೧ನೆಯ ಇಯತ್ತೆ (ಹೈಸ್ಕೂಲ)—
೫ನೆಯ ಇಯತ್ತೆ (ಪ್ರಾಥಮಿಕ)

(೧) **ಪ್ರಾಚೀನ** ಕಾಲ:–ಭೂಮಿಯ ಹುಟ್ಟು ಮತ್ತು ಪ್ರಾಚೀನ ಜನರ ಜೀವನ–ಗವಿಗಳಲ್ಲಿ ವಾಸಿಸುತ್ತಿದ್ದ ಬೇಟೆಗಾರರು, **ಅವರ** ಆಹಾರ ಆಚ್ಛಾದನಗಳು, ಆಯುಧಗಳು, ಪಲಕರಣೆಗಳು ಹಾಗು ಪಾತ್ರೆಗಳು; ಪಶುಗಳನ್ನು ಈಲು ಮಾಡಿಕೊಳ್ಳುವದು.

(೨) ನೈಲ್, ಯುಫ್ರೆಟಿಸ್, ಸಿಂಧು (ಮೋಹೆಂಜೊದಾರೊ ಮತ್ತು ಹರಪ್ಪಾ) ಗಂಗಾ ಹಾಗು ಹೊಲಿಂಗಹೊ ನದೀತೀರದ ಸಂಸ್ಕೃತಿಗಳು; ಅಡವಿಗಳನ್ನು ಬಯಲು ಗೊಳಿಸುವುದು, ಒಕ್ಕಲುತನದ ಸಂಶೋಧನೆ; ತಿಗುರಿಯ ಸಂಶೋಧನೆ, ಪ್ರವಾಸಗಳ ಪ್ರಕಾರಗಳು ಮತ್ತು ನದಿಯ ಮೇಲಿನ ಸಾಗಾಟ.

(೩) ಹಿಂದುಸ್ತಾನದಲ್ಲಿ ಆರ್ಯರ ಆಗಮನ, ಮೂಲ ನಿವಾಸಿಗಳೊಡನೆ ಅವರ ಸಂಪರ್ಕ. ಪ್ರಾಚೀನ ಹಿಂದೂ ಆರ್ಯರ ಸಾಮಾಜಿಕ ಹಾಗು ಧಾರ್ಮಿಕ ಜೀವನದ ಸುಲಭ ರೂಪರೇಷೆ.

(೪) ರಾಮಾಯಣ ಹಾಗು ಮಹಾಭಾರತಗಳಲ್ಲಿ ಕಂಡು ಬರುವ ಸಾಮಾಜಿಕ ಹಾಗು ಸಾಂಸ್ಕೃತಿಕ ಜೀವನ.

(೫) ಬುದ್ಧ ಮತ್ತು ಮಹಾವೀರ

(೬) ಘನವಂತನಾದ ಅಲೆಕ್ಸ್ಯಾಂಡರನ ದಾಳಿ; ಗ್ರೀಸ ಮತ್ತು ಹಿಂದುಸ್ತಾನದಲ್ಲಿಯ ತತ್ಕಾಲೀನ ಪರಿಸ್ಥಿತಿಗಳು. ಹಿಂದುಸ್ತಾನದಲ್ಲಿ ಅವನ ದಾಳಿಯ ಪರಿಣಾಮಗಳು.

(೭) ಚಂದ್ರಗುಪ್ತ ಮೌರ್ಯ; ಅರ್ಥಶಾಸ್ತ್ರದಲ್ಲಿ ಮತ್ತು ಮೆಗ್ಯಾಸ್ಥೆನಿಸನ ಬರಿಹಗಳಲ್ಲಿ ವರ್ಣಿಸಲ್ಪಟ್ಟ ಮೌರ್ಯರ ಕಾಲಿನ ಸಾಮಾಜಿಕ ಪರಿಸ್ಥಿತಿಗಳು.

(೮) ಮಹಾತ್ಮನಾದ ಅಶೋಕ; ಅವನ ಶಾಂತಿ ಪ್ರಚಾರಗಳು ಮತ್ತು ಧರ್ಮ ದಿಗ್ವಿಜಯ.

(೯) **ಕನಿಷ್ಕ** (ಸಿಥಿಯನ್ ಮತ್ತು ಯೂಚಿಗಳಂಥ (ಅನಾಗರಿಕ) ತಂಡಗಳ ಆಗಮನದೊಡನೆ ಸಂಬಂಧಿಸಬೇಕು).

(೧೦) ಗುಪ್ತ ಸಾಮ್ರಾಟರು (ವಿಜ್ಞಾನ ಹಾಗು ಸಾಹಿತ್ಯಗಳ ಸುವರ್ಣಯುಗ. ವರ್ಣಾಶ್ರಮ ಪದ್ಧತಿಯ ಬೆಳವಣಿಗೆ; **ಮತಾಚರಣೆಯ ಅತಿ ನಿಷ್ಠೆ**—ಕರ್ಮಠತನ—; ದೇಗುಲಗಳೂ ಮೂರ್ತಿಗಳೂ; ಪುರಾಣಗಳು).

(೧೧) "ವಿಶಾಲಭಾರತ" (ಬೃಹದ್ಭಾರತ), ಚೀನ ಮಧ್ಯ ಹಾಗೂ ಏಸಿಯಗಳಲ್ಲಿ ಬೌದ್ಧ ಧರ್ಮದ ಪ್ರಸಾರ. ಆಗ್ನೇಯ ಏಸಿಯಾದಲ್ಲಿ ಭಾರತೀಯ ಸಂಸ್ಕೃತಿಯ ಪ್ರಸಾರ.

(೧೨) ಹುಯೆನತ್ಸಾಂಗನ ಪ್ರವಾಸಗಳು; ತಕ್ಷಶಿಲಾ, ನಾಲಂದ, ವಿಕ್ರಮಶಿಲ ವಿಶ್ವವಿದ್ಯಾಲಯಗಳು.

(೧೩) ಹರ್ಷ, ರಾಜೇಂದ್ರ, ಚೋಳ, ಪುಲಕೇಶಿ.

(೧೪) ಶಂಕರಾಚಾರ್ಯರು.

೫. ಭೂಗೋಲ

೧ನೆಯ ಇಯತ್ತೆ (ಹೈಸ್ಕೂಲ)—
೫ನೆಯ ಇಯತ್ತೆ (ಪ್ರಾಥಮಿಕ)

(೧) ಹಿಂದುಸ್ತಾನದಲ್ಲಿಯ ಮುಖ್ಯ ಹವಾಮಾನವಲ್ಲಿಯ ಪ್ರದೇಶಗಳ ಜನರ ಜೀವನಕ್ರಮ ಹಾಗೂ ಉದ್ಯೋಗಗಳ ಸಾಮಾನ್ಯ ಅಭ್ಯಾಸ. ಸ್ಥಾನಿಕ ಪ್ರದೇಶ ಅಂದ ಗುಜರಾಥ, ಕೊಂಕಣ. ದೇಶ ಅಥವಾ ಕರ್ನಾಟಕ ವಿಶೇಷತೆಯಿಂದ ಉಲ್ಲೇಖಿಸಿ—

(೨) **ಜಗತ್ತಿನ** ಮುಖ್ಯ ಹವಾಮಾನ ಪ್ರದೇಶಗಳ ಬಾಹ್ಯರೇಷೆ; ಅಲ್ಲಿಯ ಜನರ ಜೀವನ ಹಾಗೂ ಉದ್ಯೋಗಗಳನ್ನು ಮೂರ್ತಿವತ್ತಾಗಿ ಪ್ರತಿಬಿಂಬಿಸಿ, ಪ್ರಾಕೃತಿಕ ಸ್ವರೂಪ, ವನಸ್ಪತಿಗಳು, ಉದ್ಯೋಗಗಳು ಮತ್ತು ವಾಸಸ್ಥಾನಗಳನ್ನು ವರ್ಣಿಸಿ—

(೩) ಪ್ರಾಕೃತಿಕ ಭೂಗೋಲ:—

(೧) ಪೃಥ್ವಿಯ ಆಕಾರ, ನೀರು, ನೆಲಗಳ ಪ್ರಸಾರ ಅವುಗಳ ನಿರ್ದಿಷ್ಟ ಸ್ಥಳಗಳು, ಪ್ರಮಾಣ, ವಿಸ್ತೀರ್ಣ ಹಾ ಸಾಮಾನ್ಯ ಗುಣಧರ್ಮಗಳು.

(೨) ಭೂಕವಚ— ಬಯಲು ಪ್ರದೇಶ, ಕಣಿವೆ ಗಳೂ ನದಿಗಳಾಗಿ ಪರಿಣಮಿಸುವ ಬುಗ್ಗೆಗಳು, ಇವುಗಳ ಜನ್ಮ; ನದೀ ಪಾತ್ರಗಳು.

(೩) ಹವಾಮಾನದ ಮೇಲೆ ಪರಿಣಾಮವನ್ನುಂಟು ಮಾಡುವ ಮುಖ್ಯ ಸಂಗತಿಗಳು.

(೪) ಋತುಮಾನಕ್ಕನುಸರಿಸಿ ಬೀಸುವ (ಮನ್ಸೂನ) ಗಾಳಿಗಳು. ಹಿಂದುಸ್ತಾನವನ್ನು ಮಾತ್ರ ಉದ್ದೇಶಿಸಿ—
೧) ಪ್ರಾಯೋಗಿಕ ರೀತಿಗೂ ನಿರೀಕ್ಷಣೆಯ ಕೆಲಸ.

(೧) ಬೇರೆ ಬೇರೆ ಋತುಮಾನಗಳಲ್ಲಿಯ ಸೂರ್ಯೋದಯ, ಸೂರ್ಯಾಸ್ತಗಳ ವೇಳೆಯನ್ನು ಮತ್ತು ದಿನಮಾನದ ಅವಧಿಯಲ್ಲಿ ಕಂಡುಬರುವ ಹೆಚ್ಚು ಕಡಿಮೆಯನ್ನು ನಿಯತ ಕಾಲಿಕವಾಗಿ ನಿರೀಕ್ಷಿಸುವುದು; ಅದರ ಸಾದಾ ಪತ್ರಿಕೆಯನ್ನು ಮಾಡುವುದು.

(೨) ಭೂಮಿಗೆ ಲಂಬವಾಗಿ ನಿಲ್ಲಿಸಿದ ಕೋಲಿನ ನೆರಳನ್ನು ಮಧ್ಯಾಹ್ನದಲ್ಲಿ ಪಕ್ಷಕ್ಕೊಮ್ಮೆ ನಿರೀಕ್ಷಿಸುವುದು.

(೩) ಬೇರೆ ಬೇರೆ ಋತುಗಳಲ್ಲಿ ಸೃಷ್ಟಿಯಲ್ಲಾಗುವ ಬದಲಾವಣೆಗಳನ್ನು ನಿರೀಕ್ಷಿಸಿ ಬರೆದಿಡುವುದು. ಮನುಷ್ಯನ ಜೀವನದ ಮೇಲೆ ಅವುಗಳ ಸಾಮಾನ್ಯ ಪರಿಣಾಮ.

(೪) ಸಾವಿಕನೆ ಹೋಕಾಯಂತ್ರದ ಉಪಯೋಗ.

(೫) ಸಾಲೆಯ ನೆರೆಹೊರೆಯ ಭಾಗದ ಸಾದಾ ನಕಾಶವನ್ನು ಸ್ಲೇಟು ಹಿಡಿಯದೇ ತೆಗೆಯುವುದು. ದಿಕ್ಕುಗಳನ್ನು ನಿರ್ದೇಶಿಸುವುದು.

(೬) ಸ್ಥಳಿಕ, ಪ್ರಾಕೃತಿಕ ಸ್ವರೂಪದ ನಕಾಶಗಳನ್ನು ಓದುವುದು.

(೭) ಮುಂಬಯಿ ಪ್ರಾಂತದ ಬಾಹ್ಯರೇಷೆಯ ನಕಾಶದಲ್ಲಿ ಮಹತ್ವದ ವಿವರಗಳನ್ನು ತುಂಬುವುದು.

(೮) ಚಿತ್ರಗಳನ್ನು, ಬೇರೆ ಬೇರೆ ಪ್ರಕಾರದ ಕಲ್ಲುಗಳನ್ನು ಮತ್ತು ಭೌಗೋಲಿಕ ಮಹತ್ವದ ಮತ್ತಿತರ ವಸ್ತುಗಳನ್ನು ಸಂಗ್ರಹಿಸುವುದು.

೬. ಪೌರನೀತಿ

ಟಿಪ್ಪಣಿ:— (೧) ಕೆಳಗೆ ಕೊಟ್ಟ ವಿಷಯಗಳು ಸೂಚಕವಾಗಿವೆ. ಸ್ಥಾನಿಕ ಸ್ಥಿತಿಗತಿಗಳಿಗೆ ಅನುಸರಿಸಿ ಇವುಗಳಲ್ಲಿ ಕೆಲವನ್ನು ಬಿಡಬಹುದು. ಬೇರೆ ಕೆಲವನ್ನು ತೆಗೆದು ಕೊಳ್ಳಬಹುದು.

(೨) ಮೂರು ವರ್ಗಗಳಲ್ಲಿ ಯಾವ ವರ್ಗಕ್ಕಾಗಿಯೂ ಯಾವುದೇ ಪಠ್ಯಪುಸ್ತಕವನ್ನು ಉಪಯೋಗಿಸತಕ್ಕದ್ದಲ್ಲ. ಆದರೆ ವಿದ್ಯಾರ್ಥಿಗಳು ಪೌರನೀತಿಯ ಅಭ್ಯಾಸವನ್ನು ತಮ್ಮ ಜೀವನದಲ್ಲಿ ವ್ಯಾವಹಾರಿಕವಾಗಿ ಆಚರಣೆಯಲ್ಲಿ ತರುವಂತೆಯೂ ಮತ್ತು ಆ ಒಗೆಯ ಮನೋಭಾವನೆಯು ಅವರಲ್ಲಿ ಮೂಡಿ ಬೆಳೆಯುವಂತೆಯೂ ತುಂಬಾ ಲಕ್ಷ್ಯ ಕೊಡತಕ್ಕದ್ದು.

೧ನೆಯ ಇಯತ್ತೆ (ಹೈಸ್ಕೂಲ)
೫ನೆಯ ಇಯತ್ತೆ (ಪ್ರಾಥಮಿಕ)—

(ಅ) ಕೆಳಗಿನ ವಿಷಯಗಳಲ್ಲಿ ಪಟ್ಟಣವು ಅಥವಾ ಹಳ್ಳಿ ಒಂದು ಸಸಂಘಟಿತ ಸಮಾಜವೆಂದು ತಿಳಿದು ಅವುಗಳನ್ನು ಕುರಿತು ಅಭ್ಯಸಿಸುವುದು.

(೧) ಜನವಸತಿ: ಮುಖ್ಯ ಉದ್ಯೋಗಗಳು.

(೨) ಆಹಾರ ಬೆಳೆಯುವ ಹಾಗು ಹಂಚುವ ಕೇಂದ್ರಗಳಿಗೆ ಸಂದರ್ಶನಗಳು.

(೩) ನೀರಿನ ಪೂರೈಕೆ:— ಮುಖ್ಯ ಜಲಾಶಯಗಳು. ವಿತರಣದ, ಶುದ್ಧೀಕರಣದ ಹಾಗೂ ಕಾಯ್ದಿಡುವದರ ಪದ್ಧತಿಗಳು.

(೪) (ಗ್ರಾಮ, ಪುರ) ಸ್ವೈರ್ಯಲ್ಯ:— ಗಟಾರಗಳು— ಇದ್ದುದಾದರೆ— ಅವುಗಳ ವ್ಯವಸ್ಥೆ.

(೫) ಆರೋಗ್ಯವನ್ನು ಕುರಿತು ಸೇವೆಗಾಗಿ ಸಾಮಾನ್ಯ ಏರ್ಪಾಡು.

(೬) ಮನರಂಜನೆಯ ಕೇಂದ್ರಗಳಿಗೆ ಸಂದರ್ಶನಗಳು.

(೭) ಸಾಗಾಟ:— ಆಂತರಿಕ ಹಾಗೂ ಬಾಹ್ಯ ಸಂಪರ್ಕಗಳ ಸಾಧನಗಳು. ರಸ್ತೆಗಳ ಕಲ್ಪನೆಯ ಬೆಳವಣಿಗೆ.

(ಅ) ಜೀವನಿತ್ತಗಳ ಸಂರಕ್ಷಣೆಗಾಗಿ ಇರುವ ಸಂಸ್ಥೆಗಳು. (ಬ) ಗಟ್ಟಾರ-ವ್ಯವಸ್ಥೆ ಪಾಗೂ ಹೊಲಸನ್ನು ಹೊರಗೆ ಸಾಗಿಸುವುದು.

(೧) ಮಕ್ಕಳು ದಿನಾಲು ತಮ್ಮ ಮನೆಯಲ್ಲಿಯು ಹೊಲಸು ಯೋಗ್ಯ ರೀತಿಯಿಂದ ಸಾಗಿಸಲ್ಪಟ್ಟಿವೆಯೋ ಹೇಗೆಂಬುದನ್ನು ಪರೀಕ್ಷಿಸುವುದು.

(೨) ಸಹಕಾರೀ ಚಟುವಟಿಕೆಯಿಂದು ಶಾಲೆಗಳಲ್ಲಿ ಸ್ವಚ್ಛತೆಯ (ಸಫಾಯಿ) ಕಾರ್ಯಕ್ರಮವನ್ನು ಕೈಕೊಳ್ಳುವುದು. (ಕ) ಚಿಕ್ಕ ಮಕ್ಕಳ ಸಲುವಾಗಿ, ವಿಶೇಷವಾಗಿ ತಾಯಿ ತಂದೆಗಳು ಕೆಲಸದಲ್ಲಿ ತೊಡಗಿದಾಗ, ಸಂಘಟಿಸಬಹುದಾದ ಆಟಗಳನ್ನು ವಿದ್ಯಾರ್ಥಿಗಳು ಕಲಿಯುವುದು.

(೩) ಸ್ಥಾನಿಕ, ರಾಷ್ಟ್ರೀಯ, ಧಾರ್ಮಿಕ ಹಾಗು ಋತು-ಮಾನಕ್ಕನುಸರಿಸಿ ಬರುವ ಹಬ್ಬಗಳ ಆಚರಣೆ.

(೪) ಸಮಾಜ ಸೇವಾ ಪಥಕಗಳ ಸಂಘಟನೆ.

೭. ಮೂಲ ಉದ್ಯೋಗ

ಗೊತ್ತಾ ಗುರಿಗಳು:—

(೧) ಮಾನವನ ಮೂರು ಮೂಲ ಅವಶ್ಯಕತೆಗಳಾದ ಆಹಾರ, ಆಚ್ಛಾದನ, ಆಶ್ರಯಗಳಲ್ಲಿಯು ಒಂದರ ವಿಷಯದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಸ್ವಾವಲಂಬಿಯಾಗುವಂತೆ ಅವಶ್ಯಕ ತರಬೇತಿಯನ್ನು ಕೊಡುವುದು.

(೨) ಮಕ್ಕಳು ಜೀವನೋದ್ಯೋಗಗಳಿಂದ ಉದ್ಭೂತವಾಗುವ ಸಮಸ್ಯೆಗಳ ಮುಖಾಂತರ ಅಭ್ಯಾಸಕ್ರಮದಲ್ಲಿಯ ವಿಷಯಗಳನ್ನು ಪ್ರಾಸಂಗಿಕವಾಗಿ ಕಲಿಯುವಂತೆ ಅವರಿಗೆ ಸಂದರ್ಭಗಳನ್ನೊದಗಿಸಿ ಕೊಡುವುದು.

(೩) ಜೀವನದಲ್ಲಿ ಅವಶ್ಯವಾದ ಪರಮಾವಧಿ ಕಟ್ಟು ನಿಟ್ಟುತನವನ್ನೂ ಜಾಗರೂಕತೆಯನ್ನೂ ಮಕ್ಕಳಲ್ಲಿ ಬೆಳೆಯಿಸುವುದು.

(೪) ಮಕ್ಕಳಲ್ಲಿ ಸ್ವ-ಸಹಾಯ, ಸೇವೆ ಹಾಗು ಸಹಕಾರಗಳಂತಹ ಸದ್ಗುಣಗಳನ್ನು ಮತ್ತು ಯಾವುದಾದೊಂದು ಕಾರ್ಯವನ್ನು ಪ್ರತ್ಯಕ್ಷ ಕೈಕೊಳ್ಳುವ ಪೂರ್ವದಲ್ಲ ಅದರ ಯೋಜನೆಯನ್ನು ತಯಾರಿಸಿಕೊಳ್ಳುವ ರೂಢಿಯನ್ನು ಳಲ್ಲಿ ಮೂಡಿಸಿ ಬೆಳೆಯಿಸುವುದು.

(೧) ಕೈಯಿಂದ ಹೊಲುವುದು ಹಾಗು ನೇಯುವ

೧ನೆಯ ಇಯತ್ತೆ (ಹೈಸ್ಕೂಲ)—
೫ನೆಯ ಇಯತ್ತೆ (ಪ್ರಾಥಮಿಕ)

ಪ್ರಾಯೋಗಿಕ:—

(೧) ಸಂಯುಕ್ತ ಕತಾಯಿ ಎಂದರೆ ಹೊಲ (ಅನುಕೂಲತೆಗಳಿದ್ದಲ್ಲಿ) ಹತ್ತಿಯನ್ನು ಬಿಡಿಸುವುದ ಆರಂಭಿಸಿ ನೂಲುವ ವರೆಗಿನ ಎಲ್ಲ ಕ್ರಿಯೆಗಳು.

(೨) ತುನಾಯಿ ಪದ್ಧತಿಯಿಂದ ಹಂಜಿಗಳನ್ನು ತ ರಿಸುವುದು.

(೩) ತಕಲಿ ಹಾಗು ಚರಖಾಗಳ ಮೇಲೆ ೧೬ ೨೦ ನಂಬರಿನ ನೂಲು ತೆಗೆಯುವುದು.

(೪) ಸಣ್ಣ 'ಮಾಲೆ' ತಯಾರಿಸುವುದು.

(೫) ನೇಯಿಗೆಯ ಪೀಠಿಕೆಯಾಗಿ ತೋಡುನ ಹಾಸು ಹೊಯ್ಯುವುದು ಮತ್ತು ಕೆಚ್ಚುವುದು.

(೬) 'ನವಾರ' ಪಟ್ಟಿಯನ್ನು ನೇಯುವುದು —

ಪ್ರಗತಿಯ ಮಟ್ಟ:—

(೧) ಹೊಲಗಳಲ್ಲಿ ಹತ್ತಿಯನ್ನು ಬಿಡಿಸುವುದು (ಯೊಬ್ಬ ವಿದ್ಯಾರ್ಥಿಯು ೧೫ ಪೌಂಡು ಹತ್ತಿಯನ್ನು ಬೇಕು).

(೨) ಸಂಯುಕ್ತ ಕತಾಯಿ— ಒಂದು ವರು ಹುರಿಗಿಂಟಿದ ೬೪೦ ಎಳೆಗಳ ೧೦ ಲಡಿಗಳು ಅಥವಾ ತ ಹಂಜಿಗಳನ್ನು ಪಯೋಗಿಸಿದರೆ ಮಾತ್ರ ೩೦ ಲಡಿಗಳು. ಖಾದ ಮೇಲೆ ನೂಲುವಾಗ, ಸಂಯುಕ್ತ ಕತಾಯಿ ಪ್ರತಿ ತಾಸಿನ ಪರಾಸರಿ ವೇಗವು ೬೦ ಸುತ್ತುಗಳು ನ ತಯಾರಿ ಹಂಜಿಗಳನ್ನು ಪಯೋಗಿಸಿದರೆ ೨೦೦ ಸುತ್ತು

(೩) ಒಂದು ವರುಷದಲ್ಲಿ ೩೦ ಫೂಟು ನವಾರ ಪಟ್ಟಿಯನ್ನು ನೇಯುವುದು. ನೇಯಿಗೆಯ ಪ್ರತಿ ತಾಸಿನ ವೇಗವು ೨ ಫೂಟು.

(೪) ಪ್ರಾಯೋಗಿಕ ಕೆಲಸದ ಜಮಾಖರ್ಚು ಮತ್ತು ಆ ಲೇಖಗಳನ್ನು ಬರೆದಿಡುವುದು.

ತಾತ್ವಿಕ ತರಬೇತಿ:—

(೧) ನೂತ ನೂಲಿನ 'ನಂಬರ' ಹಾಗೂ 'ಶಕ್ತಿ'ಗಳನ್ನು ಕಂಡುಹಿಡಿಯುವುದು.

(೨) ಕೊಟ್ಟ ಹತ್ತಿಯ ತೂಕದಿಂದ ಹೊರಡಬಹುದಾದ ನೂಲಿನ ತೂಕವನ್ನು ಲೆಕ್ಕ ಮಾಡಿ ಕಂಡುಹಿಡಿಯುವುದು.

(೩) ೧ ಗಜ ನವಾರ ಪಟ್ಟಿ ನೇಯಲು ತಗಲುವ ನೂಲಿನ ಪ್ರಮಾಣವನ್ನು ನಿರ್ಧರಿಸುವುದು.

(೪) ಬೇರೆ ಬೇರೆ ಜಾತಿಯ ಹತ್ತಿಯ ಗುಣಧರ್ಮಗಳನ್ನು ತಿಳಿದುಕೊಳ್ಳುವುದು; ಪ್ರತಿಯೊಂದರ ಗುಣಾವಗುಣಗಳು.

(೫) ಳರ್ಪಣೆಯ ತತ್ವವನ್ನು ತಿಳಿದುಕೊಳ್ಳುವುದು.

(೬) (ಬೆಲ್ಟ) ಪಟ್ಟಿ ಮತ್ತು ಗಡಗಡಿಗಳ ತತ್ವವನ್ನು ತಿಳಿದುಕೊಳ್ಳುವುದು.

(೭) ಸನ್ನೆಯ ತತ್ವವನ್ನು ತಿಳಿಯುವುದು.

(೮) ಪ್ರದಕ್ಷಿಣ (ಬಲ) ಮತ್ತು ಅಪ್ರದಕ್ಷಿಣ (ಎಡ) ಗತಿಗಳು.

(೯) ನೂಲಿನಲ್ಲಿಯ ತಂತುಗಳನ್ನು ತಿಳಿದುಕೊಳ್ಳುವುದು ಮತ್ತು ಹಿಂಜುವಾಗ ಹಾಗೂ ತುನಾಯಿ ಮಾಡುವಾಗ ಅವುಗಳ ರಚನೆಯನ್ನು ಕಂಡುಕೊಳ್ಳುವುದು.

(೧೦) ಹತ್ತಿಯ ಬೆಳೆಗೆ ಯೋಗ್ಯವಾದ ಭೂಮಿ ಹಾಗು ಹವಾಮಾನಗಳನ್ನು ಕುರಿತು ಅಭ್ಯಸಿಸುವುದು.

೨. ಒಕ್ಕಲುತನ

೧ನೆಯ ಇಯತ್ತೆ (ಹೈಸ್ಕೂಲ)— ೫ನೆಯ ಇಯತ್ತೆ (ಪ್ರಾಥಮಿಕ)

ತಾತ್ವಿಕ

ಭೂಮಿ, ಮಣ್ಣು ತಯಾರಾಗುವ ರೀತಿ, ಗಾಳಿ, ಮಳೆ, ಉಷ್ಣತೆ, ಜಳಿ, ಸಸ್ಯಗಳು, ಮಳೆಯುಳುಗಳು ಮುಂತಾದವುಗಳಿಂದಾಗುವ ಕಾರ್ಯ.

ಮಣ್ಣಿನ (ಭೂಮಿಯ) ವಿವಿಧ ಪ್ರಕಾರಗಳು. ಬೇರೆ ಬೇರೆ ಪ್ರಕಾರಗಳ ಭೂಮಿ ಹಾಗೂ ಬೆಳೆಗಳ ನಡುವಿನ ಸಂಬಂಧ.

ಸಸ್ಯ ಜೀವನ — ವನಸ್ಪತಿಯ ಭಾಗಗಳು ಹಾಗೂ ಅವುಗಳ ಕಾರ್ಯಗಳು— ಹತ್ತಿಯ ಗಿಡ, ಗೋದಿಯ ಸಸಿ, ತೊಗರಿಯ ಗಿಡ, ಮೆಣಸಿನ ಗಿಡ ಮುಂತಾದವುಗಳಲ್ಲಿ ಎರಡ್ಮೂರು ಪ್ರಥಮ ಅದಕ್ಕಿಂತ ಹೆಚ್ಚು ವನಸ್ಪತಿಗಳನ್ನುಲ್ಲೇಖಿಸಿ—

ಬೀಜಗಳ ಮೊಳಕೆಯೊಡೆಯುವಿಕೆ. ಪರಾಗಸ್ಪರ್ಶದ ವಿಧಾನಗಳು ಹಾಗು ವಿಶಿಷ್ಟ ಉಪಾಯಗಳು.

ಪ್ರಾಯೋಗಿಕ

ವಿದ್ಯಾರ್ಥಿಗಳು ಶಿಕ್ಷಕನ ಮಾರ್ಗದರ್ಶಕತ್ವದಲ್ಲಿ ಸ್ಥಳೀಕವಾದ ಹೊಲದ ಎರಡು ಮುಖ್ಯ ಬೆಳೆಗಳನ್ನು (ಒಂದು ಮುಂಗಾರಿ ಮತ್ತು ಒಂದು ಹಿಂಗಾರಿ) ಮತ್ತು ತೋಟದ ಎರಡು ಕಾಯಿಪಲ್ಲೆಗಳನ್ನು ಪಕ್ವವಾಗುವವರೆಗೆ ಯಶಸ್ವಿಯಾಗಿ ಬೆಳೆಯಿಸುವುದು.

ವಿದ್ಯಾರ್ಥಿಗಳು "ಗುಂಡಿ" ಪದ್ಧತಿಯಿಂದ ಕಚಡಿಯ ಗೊಬ್ಬರವನ್ನು ಸಗಣಿ, ಎಲೆಗಳು, ದಂಟುಗಳು, ಕಸ ಮುಂತಾದುವುಗಳಿಂದ ತಯಾರಿಸುವುದು.

ಸ್ಥಳಿಕ ಹೊಲ ಹಾಗು ತೋಟದ ಮುಖ್ಯ ಬೆಳೆಗಳ ಪರಿಚಯ. ಭೂಮಿಯನ್ನು ಹದಗೊಳಿಸುವಿಕೆ; ಮಡಿಗಳ ರಚನೆ. ಮುಂ. ಬೀಜಗಳ ಆಯ್ಕೆ ಹಾಗು ಸಂಗ್ರಹ, ಆಗಿಗಳನ್ನು ನೆಡುವ, ಗೊಬ್ಬರ ಹಾಳುವ, ನೀರುಣಿಸುವ ಹಾಗು ನೀರುಣಿಸುವ ಸಮಯ ಮತ್ತು ಪದ್ಧತಿಗಳು. ಕಾಯಿಪಲ್ಲೆಗಳನ್ನು ಒಣಗಿಸುವ, ಸಂಗ್ರಹಿಸುವ ಹಾಗು ಕಾಯ್ವಿಡುವ ಕ್ರಮಗಳ ಅಭ್ಯಾಸ.

೩. ಹೊಲಿಗೆ

ಪ್ರತಿಯೊಬ್ಬ ವಿದ್ಯಾರ್ಥಿನಿಯು ಹೊಲಿಗೆಯ ವಸ್ತುವಲ್ಲಿ ಪ್ರತಿ ವಾರದಲ್ಲಿ ಸುಮಾರು ೪ ರಿಂದ ೫ ಅವಧಿಗಳನ್ನು ಕಳೆಯುವಳೆ ಬಹುದು ಆ ಅವಧಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿನಿಯು ಪ್ರಶ್ನೆಪತ್ರಿಕೆಯಲ್ಲಿ ನಿರೀಕ್ಷಿಸಲಾಗುವ ೫ ಕೆಲಸಗಳನ್ನು ಮಾಡಿ ಮುಗಿಸಲು ಸಾಧ್ಯವಾಗುವಂತೆ ಅವಳಿಗೆ ಕೊಟ್ಟಿರುವ ಒಟ್ಟು ಸಮಯವನ್ನು ಯೋಗ್ಯ ಸಂಖ್ಯೆಗಳಾಗಿ ವಿಂಗಡಿಸಿ ಕೊಂಡಿರಲಿ, ಶಿಕ್ಷಣವು ಇದು ಎಲ್ಲಿಯವರೆಗೆ ಅವಶ್ಯವಾಗಿರಬಾರದು: ಆದರೆ ಇತರ ವಿಷಯಗಳ ಅರ್ಥವೇನೆಂದರೆ:— ಭೂಗೋಲ ಶಿಕ್ಷಕಿ ಅಥವಾ ಇತರ (ವಿಷಯಗಳ) ಶಿಕ್ಷಕರು ತನ್ನ ಕೆಲಸದ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುವಂತೆಯೇ ಹೊಲಿಗೆಯ ಶಿಕ್ಷಕಿಯು ತನ್ನ ಕೆಲಸದ ಪೂರ್ವ ಯೋಜನೆಯನ್ನು ಮಾಡಿಟ್ಟುಕೊಳ್ಳಬೇಕು. ಪ್ರತಿಯೊಂದು ಮೆಟ್ಟಿನಲ್ಲಿ ವಿಶಿಷ್ಟ ಹೊಲಿಗೆಯೊಂದನ್ನು ಉಪಯೋಗಿಸುತ್ತಿರುವ ಕಾರಣವನ್ನು ವಿದ್ಯಾರ್ಥಿನಿಯರು ಹುಡುಕುವಂತೆ ಅವರನ್ನು ಪ್ರಚೋದಿಸಬೇಕು ಕೆಲಸವನ್ನು ಉತ್ತಮವಾಗಿ ಕೊನೆಗೊಳಿಸುವಿಕೆ ಹಾಗೂ ಕೆಲಸದ ಅಚ್ಚುಕಟ್ಟುತನ ಇವುಗಳ ಬಗೆಗೆ ಅವರು ವಿಶೇಷ ಬುದ್ಧಿಯುಪರಿಬೇಕು.

ಉಪಯೋಗಿಸಿದ ವಸ್ತುಗಳ ಬೆಲೆಗಾಣ್ಮೆಯೋಗ್ಯತೆ, (ತಯಾರಿಸಬೇಕಾದ) ಉಡುಪಿನ ಜಾತಿ ಹಾಗೂ ಅದರ ನೆಯ ಅಗಲಳತೆಗಳನ್ನು ಲಕ್ಷ್ಯಕ್ಕೆಟ್ಟುಕೊಂಡು, ವಿಶಿಷ್ಟ ಉಡುಪುಗಳಿಗೆ ತಗಲುವ ಬೆಲೆ ಹಾಗೂ ಪ್ರಮಾಣ ಇವುಗಳನ್ನು ಕುರಿತು ಅವರು ಚರ್ಚಿಸಬೇಕು.

ಹರಿದ ಬಟ್ಟೆಗಳನ್ನು ಸರಿಪಡಿಸುವ ಕ್ರಿಯೆಗೆ (ಡಾಕುರಸ್ತಿಗೆ) ಎಲ್ಲ ವರ್ಗಗಳಲ್ಲಿಯೂ ಅಗ್ರಸ್ಥಾನವು ಹೊರೆಯಬೇಕು. ಗುಂಡಿ ಹಚ್ಚುವುದು. ಕನೆ ಹಚ್ಚುವುದು ಮುಂತಾದವುಗಳಿಗೆ ವಿಶೇಷ ಲಕ್ಷ್ಯ ಕೊಡಲ್ಪಡಬೇಕು.

ಒಂದನೆಯ ವರುಷ ಮುಗಿದ ನಂತರ ಎಲ್ಲ ಕೆಲಸವನ್ನು ಹೊಲಿಯುವ ರಾಶಿಯ ಮೇಲೆ ಮಾಡಲಾಗುವುದು. ಆಗ ವಿದ್ಯಾರ್ಥಿನಿಯರು ತಮಗೂ ತಮ್ಮ ಕುಟುಂಬಗಳಿಗೂ ಮತ್ತು ಮಾರಾಟಕ್ಕೂ ಸಹ ಅನೇಕ ಉಡುಪುಗಳನ್ನು ತಯಾರಿಸಬಹುದು

೧ನೆಯ ಇಯತ್ತೆ (ಹಾಯಸ್ಕೂಲ)— ೫ನೆಯ ಇಯತ್ತೆ (ಪ್ರಾಥಮಿಕ)

ಹೊಲಿಗೆಗಳು:— ಎಲ್ಲ ಸಾದಾ ಹೊಲಿಗೆಗಳನ್ನು ಕಲಿಸಬೇಕು— ಬಾಕೀ ಹಾಕುವುದು, ಗುಂಡಿ ಮನೆ (ಕಾಜಾ) ಮಾಡುವದು, ಗುಂಡಿ ಹಚ್ಚುವುದು ಹಾಗೂ ಕನೆ ಹಚ್ಚುವುದು.

ತಯಾರಿಸಬೇಕಾದ ಉಡುಪುಗಳು ಹಾಗೂ ವಸ್ತುಗಳು:—

ಕರವಸ್ತ್ರ.
ಲಂಗೋಟಿ (ಲಾಂಗ).
ವಿಡುವಾಪ (ರಟ್ಟು ಹಾಕದ) ಟೊಪ್ಪಿಗೆ.
ಕೂಸಿನ ಚಡ್ಡಿ.
ಕೂಸಿನ ರುಬ್ಬಾಲಾ ಅಥವಾ ಅಂಗಿ.
ಒಳ ಅಂಗಿ (ತೋಳು ಇಲ್ಲದ ಒಳ ಅಂಗಿ).

ಕತ್ತರಿಸುವುದು:— ಮೇಲಿನ ಉಡುಪುಗಳ ಮಾದರಿಗಳನ್ನು ತಯಾರಿಸುವುದು ಮತ್ತು ಕತ್ತರಿಸುವುದು.

(ಹೊಲಿಯುವ) ಯಂತ್ರದ ಕೆಲಸ:— ವರುಷದ ಎರಡನೆಯ ವಿಭಾಗದಲ್ಲಿ ವಿದ್ಯಾರ್ಥಿನಿಗಳಿಗೆ ಹೊಲಿಯುವ ರಾಟೆಯ ಮೇಲೆ ಕೂಡು-ಹೊಲಿಗೆಯನ್ನು ಹಾಕುವ ರೂಢಿಯಾಗಬೇಕು.

೪. ಸೂಜಿಗೆಲಸ ಹಾಗೂ ಕಸೂತಿ

ಪ್ರತಿಯೊಬ್ಬ ವಿದ್ಯಾರ್ಥಿನಿಯು ಪ್ರತಿಯೊಂದು ವರ್ಷದಲ್ಲಿ ಸುಮಾರು ಎಂಟು ಅವಧಿಗಳನ್ನು ಸೂಜಿಗೆಲಸದ ವರ್ಗಗಳಲ್ಲಿ ಕಳೆಯುವುಳೆಂಬ ಮತ್ತು ಪ್ರತಿಯೊಂದು ಅವಧಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿನಿಯು ಪ್ರಶ್ನೆ ಕಾರ್ಯದಲ್ಲಿ ತೊಡಗಿರುವುಳೆಂಬ ಭಾವನೆಯು, ಕೆಳಗೆ ಕೊಟ್ಟಿರುವ ಅಭ್ಯಾಸಪತ್ರಿಕೆಯ ತಳಪಡಿಯಾಗಿದೆ. ಯೋಗ್ಯ ಸಂಘಟನೆಯನ್ನು ಮಾಡಿಕೊಂಡಲ್ಲಿ, ಶಿಕ್ಷಕಿಗೆ ಇದು ಎಳ್ಳಷ್ಟೂ ಕಠಿಣವಾಗಬಾರದು; ಆದರೆ ಇತರ ಅಧ್ಯಾಪಕರಂದರೆ— ಭೂಗೋಲ ಶಿಕ್ಷಕ ಅಥವಾ ಇತರ (ವಿಷಯಗಳ) ಶಿಕ್ಷಕರು ತಮ್ಮ ಕೆಲಸದ ಪೂರ್ವ ಯೋಜನೆಯನ್ನು ಮಾಡಿ

ಕೊಳ್ಳುವಂತೆ ನಿರೀಕ್ಷಿಸಲಾಗುವಂತೆಯೇ ಸೂಜಿಗೆಲಸದ ಶಿಕ್ಷಕಿಯು ತನ್ನ ಕೆಲಸದ ಪೂರ್ಣ ಯೋಜನೆಯನ್ನು ಮಾಡಿಕೊಳ್ಳಲೇಬೇಕು.

ಪ್ರತಿಯೊಂದು ನಮೂನೆಯಲ್ಲಿ ವಿಶಿಷ್ಟ ಹೊಲಿಗೆ ಅಥವಾ ಕ್ರಮವನ್ನು ಏಕೆ ಉಪಯೋಗಿಸಲಾಗುತ್ತಿದೆ ಎಂಬುದನ್ನು ವಿದ್ಯಾರ್ಥಿನಿಯರು ಚರ್ಚಿಸುವಂತೆ ಅವರನ್ನು ಪ್ರಚೋದಿಸಬೇಕು.

ಹೊಲಿಗೆಯು ನೋಡಲು ಮತ್ತು ಅದನ್ನು ಉತ್ತಮವಾಗಿ ಕೊನೆಗಾಣಿಸುವಿಕೆ ಇವುಗಳ ಬಗೆಗೆ ಇವರು ಚಿಕಿತ್ಸಾಬುದ್ಧಿಯುಳ್ಳವರಾಗುವಂತೆ ಮಾಡಬೇಕು.

ಉಪಯೋಗಿಸಿದ ವಸ್ತುಗಳನ್ನು ಕುರಿತು, ವಿಶಿಷ್ಟ ಉಡುಪುಗಳಿಗಾಗಿ ಅಂದ, ಉಪಯುಕ್ತತೆ, ಸೌಖ್ಯ ಮತ್ತು ತಾಳಿಕೆ ಹಾಗೂ ಎಲ್ಲಕ್ಕೂ ಕಿಜ್ಞಾಸೆ ಬೆಲೆ ಇವೆಗಳ ಬಗೆಗೆ ಹಾಗೂ (ವಸ್ತುಗಳ) ಯೋಗ್ಯಾಯೋಗ್ಯತೆ—ಇವುಗಳನ್ನೂ ವಿದ್ಯಾರ್ಥಿನಿಯರು ಚರ್ಚಿಸಬೇಕು.

ಅರಿವೆಯು ಆಗಲುಕತೆ ಮತ್ತು ಉಡುಪಿನ ಅಳತೆಗಳಿಗೆ ಅನುಗುಣವಾಗಿ ಪ್ರತಿಯೊಂದು ಉಡುಪಿಗೆ ಅವಶ್ಯವಾದ ಅರಿವೆಯ ಪ್ರಮಾಣವು ಅವರಿಗೆ ಗೊತ್ತಿರಬೇಕು. ಅದರಲ್ಲಿ ವಿವಿಧ ಆರ್ಥಿಕ ಪಟ್ಟಿಗಳಿಗೆ ಹೊಂದಿಕೆಯಾಗುವ ಅವಶ್ಯಕತೆಗಳನ್ನೂ, ಪ್ರತ್ಯೇಕ ಸ್ಥಳಿಯ ಉಪಯೋಗದ ವಸ್ತುಗಳನ್ನೂ ಯಾವಾಗಲೂ ಲಕ್ಷ್ಯಕ್ಕೆಟ್ಟಿಟ್ಟುಕೊಳ್ಳಬೇಕು.

ಹರಿದ ಬಟ್ಟೆಗಳನ್ನು ಸರಿಪಡಿಸುವ ಕ್ರಿಯೆಗೆ ('ದುರಸ್ತಿ'ಗೆ) ಸೂಜಿಗೆಲಸದ ಎಲ್ಲ ವರ್ಗಗಳಲ್ಲಿಯೂ ಅಗ್ರಸ್ಥಾನವನ್ನು ಕೊಡಬೇಕು.

ಯಾವುದೇ ಶಾಲೆಯಲ್ಲಿ ಯಾವುದೇ ದಿನ ನೋಡಿದರೂ, ಕಳ್ಳಕ್ಷಣದಲ್ಲಿ ತೆಗೆದುಕೊಂಡು ಅಲ್ಲಿಂದಾಗ ಅಲ್ಲಿಂದಲ್ಲಿಯೇ 'ದುರಸ್ತಿ' ಮಾಡಲು ಬರುವಂತಹ ಬಟ್ಟೆಗಳು ಮಕ್ಕಳ ಮೈನೇಲೆ ದೊರೆಯುವವು.

ಉದ್ದವಾದ ಹೊಡುಹೊಲಿಗೆ ಮುಂತಾವಕ್ಕೆಗಳಿಗಾಗಿ ರಾಟೆಯ ಮೇಲಿನ ಕೆಲಸಕ್ಕೆ ಅನುಮತಿ ಕೊಡಬೇಕಾದುದರಿಂದ ಇಡೀ ವರುಷದಲ್ಲಿ ಪ್ರತ್ಯಕ್ಷ ಪರಿಶ್ರಮ ಪಡಿಸಿದ ಉಡುಪುಗಳನ್ನು ತಮಗಾಗಿಯಷ್ಟೇ ಅಲ್ಲದೆ ಮನೆಯ ಸ್ನೇಹಿತರಿಗೆ ಹಾಗೂ ಬಂಧುಗಳಿಗೆ ಸಹ ಸಾಕಾಗುವಷ್ಟು ತಯಾರಿಸಬಲ್ಲರು. ಮತ್ತು ಶಿಕ್ಷಕಿಯರು ಈ ಕೆಲಸದಲ್ಲಿ ನಿಜವಾದ ಆಭರುಚಿಯುಳ್ಳವರಾಗಿದ್ದರೆ (ಈ ವಿದ್ಯಾರ್ಥಿನಿಯರಿಂದ ತಯಾರಾದ) ಇಂಥ ಉತ್ತಮವಾದ ಕೆಲವಾದರೂ ಹುಸಿ ಹಬ್ಬುಗಳಿಕೆಯನ್ನೂ ತರಬಲ್ಲವು.

ಗಣಿತ ಇಯತ್ತೆ (ಹೈಸ್ಕೂಲು)—
ಜನಿಯ ಇಯತ್ತೆ (ಪ್ರಾಥಮಿಕ)

ಹೊಲಿಗೆಗಳು:— ಎಲ್ಲ ಸಾದಾ ಹೊಲಿಗೆಗಳನ್ನು ತಿಳಿದುಕೊಳ್ಳಬೇಕು. ಮತ್ತು ಅವುಗಳನ್ನು ಕೆಳಗೆ ನಮೂದಿಸಿದ ಉಡುಪುಗಳಲ್ಲಿ ತಯಾರಿಸುವ ಕಾರ್ಯದಲ್ಲಿ ಅವುಗಳ ಮೂಲಕ ಮಾಡಿಕೊಳ್ಳಬೇಕು. (ಪೂರುಹೊಲಿಗೆ, ಟಾಕೀ ಹೂಬಿಡೆ, ಬೆಟ್ಟೀ ಹೊಲಿಗೆ, ಕಂಬಳೀ ಹೊಲಿಗೆ, ಗೋಟು ಹೊಲಿಗೆ, ಜಾರು ಹೊಲಿಗೆ).

ಉಡುಪುಗಳು:— ಕೆಳಗಿನ ಉಡುಪುಗಳಿಗಾಗಿ ಅರಿವೆಯನ್ನು ಕತ್ತರಿಸುವುದು ಮತ್ತು ಪ್ರತ್ಯೇಕ ಅಳತೆಗಳಿಗೆ ಸರಿಯಾದ ಉಡುಪುಗಳನ್ನು ತಯಾರಿಸುವುದು. 'ಬ' 'ಕ' 'ಡ' ಈ ಉಡುಪುಗಳಿಗಾಗಿ ಅರಿವೆಯನ್ನು ಶಿಕ್ಷಕಿಯು ಕತ್ತರಿಸಬೇಕು ಮತ್ತು 'ಅ' ಹಾಗೂ 'ಇ' ಉಡುಪುಗಳಿಗಾಗಿ ಬಾಲಿಕೆಯರೇ ಕತ್ತರಿಸಬೇಕು.

(ಅ) ಪರಕಾಡ.

(ಬ) ಸಾಮಾನ್ಯವಾಗಿ ಹುಡುಗಿಯರು ತೊಡುವ ಜಾಕೀಟು.

(ಕ) ಕುಗಾ (ಇದು ನಿಜವಾಗಿಯೂ ಪರಕಾರ ಹಾಗು ಜಾಕೀಟುಗಳು ಕೂಡಿದ್ದು).

(ಡ) ಮಗುವಿನ ಒಳಚಲ್ಲಣ.

(ಇ) ಕಾಸಿನ ರುಬ್ಬಾ.

ಕಸೂತಿಯ ಕೆಲಸ:— ಕನಿಷ್ಠ ಪಕ್ಷ ಬೇರೆ ಬೇರೆ ಹನ್ನೆರಡು ಬಗೆಯ ಚಿತ್ರ ಹೊಲಿಗೆಗಳ ರೂಢಿಯಾಗಬೇಕು ಮತ್ತು ಅವುಗಳನ್ನು ತಯಾರಿಸಿದ ಉಡುಪುಗಳನ್ನು ಅಂದಗೊಳಿಸಲಿಕ್ಕೆ ಉಪಯೋಗಿಸಬೇಕು ಇಲ್ಲವೆ ಮೇಜು ಬಟ್ಟೆ, ಜೇಲಗಳು, ಕೊಡಿಕೆನಗಳು ಮತ್ತು ಪರದೆಗಳು. ಇವುಗಳ ಮೇಲೆ ಉಪಯೋಗಿಸಿಕೊಳ್ಳಬೇಕು.

ಹೊಂದ ಬಟ್ಟೆಗಳನ್ನು ಕುಗೆಗಳಿಸುವದು ('ಮರಸ್ತಿ' ಮಾಡುವದು):— ರಫ್ಫು ಮಾಡುವದು ಮತ್ತು ತೇಪೆ ಹಚ್ಚುವದು. ವಿದ್ಯಾರ್ಥಿನಿಯರು 'ಮರಸ್ತಿ'ಗಾಗಿ ಹೊಂದ ಉಡುಪುಗಳನ್ನು ತಮಮಂತೆ ನೋಡಿಕೊಳ್ಳಬೇಕು.

ಹೆಣಿಗೆ ಹಾಗು ಕ್ರೋಷೆ (ಕೂಡಣಿಯಿಂದ ಉಣ್ಣೆ-ದಾರದಲ್ಲಿ ಮಾಡುವ ಕೆಲಸ):—ಮಗುವಿನ ಸಮವಂಗಿಯಂತಹ ಸಾದಾ ಉಡುಪುಗಳು. ಹೆಣಿಗೆಯು ಸ್ಥಿತಿಸ್ಥಾಪಕವಾಗಿರುವ ಕಡೆಗೆ ಲಕ್ಷ್ಯ ಕೊಡಬೇಕು.

೫ ಕಟ್ಟಿಗೆಯ ಕೆಲಸ.

ಕಟ್ಟಿಗೆಯ ಕೆಲಸದ ಅಭ್ಯಾಸಕ್ರಮದ ಮೇಲೆ ಟಿಪ್ಪಣಿ

ಬಡಿಗತನದ ವೈಜ್ಞಾನಿಕ ಮತ್ತು ಸಾಮಾನ್ಯ ತಳಹದಿಯನ್ನು ಹಾಕುವದು ಮತ್ತು ಆ ವೈಜ್ಞಾನಿಕ ಎಲ್ಲ ಮೂಲ ಕ್ರಿಯೆಗಳಲ್ಲಿ ಕೌಶಲ್ಯವನ್ನು ವಿಕಾಸಗೊಳಿಸುವದೇ ಈ ಅಭ್ಯಾಸ ಪತ್ರಿಕೆಯ ಗುರಿಯಾಗಿದೆ. ಶಕ್ಯವಿದ್ದ ಮಟ್ಟಿಗೆ, ಸಾದಾ ಹಾಗೂ ಸ್ಥಳ ಜನ್ಯ ಸಲಕರಣೆಗಳನ್ನು ಇಟ್ಟುಕೊಳ್ಳಬೇಕು. ಅತ್ಯುತ್ತಮವಾಗಿ ತಯಾರಿಸಿದ ಮತ್ತು ಹೊಟ್ಟಿ ಬೆಲೆಯ ಸಲಕರಣೆಯನ್ನು ವಿಶೇಷವಾಗಿ ಪ್ರಾಥಮಿಕ ಶಾಲೆಗಳು ದೊರಕಿಸಿಕೊಳ್ಳುವದು ಇಷ್ಟವಲ್ಲ. ಆದುದರಿಂದ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಬಡಿಗರು ಉಪಯೋಗಿಸುವ ಹಲುಗೆಗಳ ಮೇಲೆ ಕೆಲಸನಾಡಬೇಕೆಂದು ಸೂಚಿಸಲಾಗಿದೆ. ಅವರೂ ಅನಶ್ಯವಿದ್ದಲ್ಲಿ, ಬಡಿಗತನದ ಬಾಕುಗಳನ್ನು ಉಪಯೋಗಿಸಿಕೊಳ್ಳಬಹುದು. ಹಳ್ಳಿಯ ಬಡಿಗರು ಉಪಯೋಗಿಸುವ ಸಾದಾ ಉಪಕರಣಗಳನ್ನು ಉಪಯೋಗಿಸಬೇಕು.

ಪ್ರತಿಯೊಬ್ಬ ವಿದ್ಯಾರ್ಥಿಗೆ ಅವನ ದೈನಂದಿನ ಉಪಯೋಗದ ಆಯುಧಗಳ ಕಟ್ಟು (ಸೆಟ್) ಒಂದನ್ನು ಪೂರೈಸುವದು ಇಷ್ಟವಾಗಿದೆ. ಸಲಕರಣೆಗಳ ಸಂಗ್ರಹವನ್ನು ವೈಯಕ್ತಿಕವಾಗಿ ಪೂರೈಸುವಲ್ಲಿ ವಿದ್ಯಾರ್ಥಿಗಳು ಆಯುಧಗಳ ಬಗೆಗೆ ಜಾಗರೂಕತೆ ವಹಿಸುವರು. ಹಾಗೂ ಪರಿಸೋಡುವ ಕಾರ್ಯಭಾವವೂ ಹಗುರಾಗುವದು ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಉಪಕರಣಗಳನ್ನು ಮತ್ತು ಚಿಕ್ಕ ಯೋಜನೆಗಳನ್ನು ಅಥವಾ ಅಟದ ವಸ್ತುಗಳನ್ನು ಇಲ್ಲವೆ ತಯಾರಿಕೆಯಲ್ಲಿರುವ ಇತರ (ಚಿಕ್ಕಪುಟ್ಟ) ವಸ್ತುಗಳನ್ನು ಇಟ್ಟುಕೊಳ್ಳುವದರ ಕುರಿತಾಗಿ ಅವನು ಯಂದು ಪ್ರತ್ಯೇಕ, ಸಾಕಷ್ಟು ಸೊಡ್ಡಾದ ಮತ್ತು ಭದ್ರವಾದ ಕಪಾಟನ್ನು ಕೊಡುವದು ಅವಶ್ಯವಾಗುವದು. ಪ್ರತಿಯೊಬ್ಬ ವಿದ್ಯಾರ್ಥಿಗೆ ನೈಯಕ್ತಿಕವಾಗಿ ಉಪಕರಣಗಳು ಪೂರೈಸಲ್ಪಡದಿದ್ದಲ್ಲಿ, ಶಾಲೆಯು ಒಂದು ಉಪಕರಣಗಳ ಸಂಗ್ರಹವನ್ನು (ಸೆಟ್ಟು) ಇಡಬಹುದು ಹಾಗೂ ಅದನ್ನು ೩೦ ಅಥವಾ ೩೫ ವಿದ್ಯಾರ್ಥಿಗಳು ಒಂದೊಂದು ಗುಂಪಾಗಿ ಉಪಯೋಗಿಸಬಹುದು. ಪೂರೈಸಬೇಕಾದ ಸಲಕರಣೆಗಳ ಪಟ್ಟಿಯನ್ನು ಅಭ್ಯಾಸಪತ್ರಿಕೆಯ ಕೊನೆಯಲ್ಲಿ ಕೊಡಲಾಗಿದೆ. ಶಕ್ಯವಿದ್ದಲ್ಲೆಲ್ಲ ಹಳ್ಳಿಯ ಬಡಿಗರ ಉಪಯೋಗಿಸುವ, ಸಾಮಾನ್ಯವಾದ ಬಾಳಿಕೆಯ ಉಪಯೋಗದ ರೂಢಿಯನ್ನು ವಿದ್ಯಾರ್ಥಿಗಳಿಗೆ ಕೊಡಬೇಕು.

ಕೊರೆಯುವದು, ಉಜ್ಜುಗೊರಡು ಹೊಡೆಯುವದು ಅಥವಾ ಸಂದುಗಳನ್ನು ಕೂಡಿಸುವುದು ಇಂತಹ ಕಟ್ಟಿಗೆಯ ಕೆಲಸದ ಪ್ರತಿ ಪಟ್ಟುನಿಟ್ಟಿನ ಅಭ್ಯಸನಗಳನ್ನು ಶಕ್ಯವಿದ್ದಷ್ಟು ಬಿಟ್ಟುಬಿಡಬೇಕೆಂದು ಬಲವಾಗಿ ಶಿಫಾರಸುಮಾಡಲಾಗಿದೆ. ವಸ್ತುಗಳನ್ನು ತಯಾರಿಸುವದು ಅವಶ್ಯಕ ರೂಢಿಯನ್ನು ಕೊಡಬೇಕು. ಅಭ್ಯಾಸದ ಕೊಟ್ಟಿಂತಹ ಸಂದುಗಳ ಜಾಗು ಅಭ್ಯಸನಗಳ ಉಪಯುಕ್ತತೆಗಳ ಅವಶ್ಯಕತೆಗಳುಳ್ಳ ವಸ್ತುಗಳನ್ನೇ ಕೊಡುವಂತೆ ಜಾಗರೂಕತೆ ವಹಿಸಬೇಕು; ಅವಶ್ಯಕ ರೂಢಿಯು ಆಗುವಂತೆ ವಸ್ತುಗಳನ್ನು ವರ್ಗೀಕರಿಸಿ ನಿರ್ದಿಷ್ಟಗೊಳಿಬೇಕು. ಮೇಲ್ಕಾಣಿಸಿದ ನಿರ್ಬಂಧನೆಗಳಿಗೊಳಪಟ್ಟು ವಿದ್ಯಾರ್ಥಿಯು ತಾನು ತಯಾರಿಸಲು ಕೈಕೊಳ್ಳಬೇಕಾದ ವಸ್ತುಗಳ ಆಯ್ಕೆಯನ್ನು ಅವನಿಗೇ ಬಿಟ್ಟುಬಿಡುವುದು ಇಷ್ಟವಾದುದು.

ಶಾಲೆಯ ವರುಷದಲ್ಲಿ ವಿದ್ಯಾರ್ಥಿಗಳಿಗೆ ತಾವು ಮಾಡುಗಿಸಿದ ಕೆಲಸದ ಬಗ್ಗೆ ಯೋಗ್ಯ ಹಣವು ದೊರೆಯುವಂತೆ ಪೀಠೋಪಕರಣ ಹಾಗೂ ಇತರ ಕಟ್ಟಿಗೆಯ ಕೆಲಸಗಳನ್ನು ಸ್ವೀಕರಿಸುವ ಧೋರಣೆ ಇಡಬೇಕು. ಆದರ ಸ್ವಪ್ರಯೋಜನಕ್ಕಾಗಿ ಬಾಲಕರ ಶ್ರಮದ ದುರುಪಯೋಗ ಮಾಡಿಕೊಳ್ಳಬಾರದು.

ಪ್ರತಿವಾರಕ್ಕೆ ೧೫ ಅವಧಿಗಳನ್ನು—ಎಂದರೆ ೪೫ ನಿಮಿಷಗಳನ್ನು—ತಳಹದಿಯಾಗಿಟ್ಟುಕೊಂಡ ಅಭ್ಯಾಸ—ಪತ್ರಿಕೆಯನ್ನು ಯೋಜಿಸಲಾಗಿದೆ; ಈ ಅವಧಿಗಳನ್ನು ವಿದ್ಯಾರ್ಥಿಗಳ ಅನುಕೂಲತೆ ಹಾಗೂ ಯೋ

ಗಳಿಗೆ ತಕ್ಕಂತೆ ಹಂಚಿಕೊಳ್ಳಬಹುದು. ಕೆಲಸವನ್ನು ಪ್ರತಿ ನ ಒಂದೇಸವನೆ ಎರಡು ಅವಧಿಗಳಲ್ಲಿ ಅಥವಾ ಎರಡು ನಕೊಮ್ಮೆ ಒಂದೇಸವನೆ ೩ ಅವಧಿಗಳಲ್ಲಿ ಮತ್ತು ಬೇರೆ ನಗಳಲ್ಲಿ ಒಂದು ಅವಧಿಯಲ್ಲಿ ತೆಗೆದುಕೊಳ್ಳಬಹುದು. ಶೇಷವಾಗಿ ಏಳನೆಯ ಇಯತ್ತೆಯಲ್ಲಿ ಹಾಗೂ ೬ನೆಯ ಇಯತ್ತೆಯ ವರ್ಷದಾನೆಯ ಅವಧಿಯಲ್ಲಿ(Term) ಒಂದೇಸವನೆ ೩ ಅವಧಿಗಳನ್ನು ತೆಗೆದುಕೊಳ್ಳುವುದು ಅವಶ್ಯವಾಗುವುದು. ಆದರೂ ಮುಲೋದ್ಯೋಗ ಶಿಕ್ಷಕನು ಕೆಲ ಸಂದರ್ಭಗಳಲ್ಲಿ ಸ್ವವಿಚಾರವನ್ನು ಉಪಯೋಗಿಸಿಕೊಳ್ಳಬಹುದು. ಮತ್ತು ಅಷ್ಟರ ಮಟ್ಟಿಗೆ ವೇಳಾಪತ್ರಿಕೆಯು ಹಿಗ್ಗುವಂತೆಯೂ ಕುಗ್ಗುವಂತೆಯೂ ಆಗಿ ಉಳಿಯಬೇಕು.

೧ನೆಯ ಇಯತ್ತೆ (ಹೈಸ್ಕೂಲು)— ೫ನೆಯ ಇಯತ್ತೆ (ಪ್ರಾಥಮಿಕ)

ತಾತ್ವಿಕ

(೧) ಬೇರೆ ಬೇರೆ ವ್ಯವಹಾರಗಳ ಗಿಡಗಳ ಅಳತೆ, ಆಯಾಗಳ ಸಾಮಾನ್ಯ ಅಭ್ಯಾಸ, ಅಡ್ಡಕೊಯ್ತದ ಅಭ್ಯಾಸ—ಚ್ಚು ಕಟ್ಟಿಗೆ, ಎಳೆಕಟ್ಟಿಗೆ, ಮರದ ವಾರ್ಷಿಕ ಸುತ್ತಿಗಳು, ತೊಗಟೆ ಮುಂತಾದವುಗಳ ಅಭ್ಯಾಸ.

ಉಪಯೋಗ: ಮಳೆಯಿಂದ ಕಟ್ಟಿಗೆಯು ಮೇಲಾಗುವ ವಿಷ್ಟ ಪರಿಣಾಮಗಳನ್ನು ತಡೆಯುವದು, ಬೇರು, ಎಲೆಗಳನ್ನು ಔಷಧದಂತೆ ಉಪಯೋಗಿಸುವದು, ಎಲೆಗಳನ್ನು ಭಾವಣಿಗೆಗೆ ಉಪಯೋಗಿಸುವದು, ಹಣ್ಣುಗಳನ್ನು ಆಹಾರವೆಂದು ಉಪಯೋಗಿಸುವದು, ಬೊಡ್ಡೆಗಳನ್ನು ಹೊಲೆ, ಜಂತೆ ಮುಂತಾದ ಇಮಾರತಿಯ ಕಟ್ಟಿಗೆಯಂತೆ ಪಾಗೂಳುವಲದಂತೆ ಉಪಯೋಗಿಸುವುದು, ತೊಗಟೆಯನ್ನು ಚರ್ಮ ಹದಗೊಳಿಸಲು ಮುಂತಾದವುಗಳಿಗಾಗಿ ಉಪಯೋಗಿಸುವುದು, ಆಕಾರ, ಗಾಳಿಗಳಿಂದ ಸಂರಕ್ಷಣೆ

ಅರಣ್ಯಗಳ ಪುನರುಜ್ಜೀವನ:— ಅವಶ್ಯಕತೆ, ಸಾಮಾನ್ಯ ಪದ್ಧತಿಗಳು, ಪ್ರಯೋಜನಗಳು, ನೈಸರ್ಗಿಕ ಅರಣ್ಯಗಳನ್ನು ನಾಶಮಾಡುವವರ ಪರಿಣಾಮ.

(೨) ಸಲಕರಣೆಗಳು:—ವಿದ್ಯಾರ್ಥಿಗಳು ಉಪಯೋಗಿಸುವ ಉಪಕರಣಗಳ ಪರ್ಣನೆ ಹಾಗು ಅವುಗಳನ್ನು ಗುರುತಿಸುವದು; ಅವುಗಳ ಉಪಯೋಗ ಹಾಗು ಅವುಗಳ ಬಗೆಗೆ ಜಾಗರೂಕತೆ.

ವಸ್ತುಗಳು ನಷ್ಟವಾಗದಂತೆ ಅಥವಾ ಉಪಯೋಗಿಸುವವರಿಗೆ ಗಾಯವಾಗದಂತೆ ಮುಂಜಾಗ್ರತೆಗಳು.

(೩) ತಯಾರಾದ ವಸ್ತುಗಳಲ್ಲಿ ಉಪಯೋಗಿಸಲ್ಪಟ್ಟ ಕಾನೂನುಗಳ ಬೆಲೆಯ ಅಂದಾಜು ಹಾಕುವದು.

ಪ್ರಾಯೋಗಿಕ

(೧) ಸ್ಥಳಿಕ ಸಾಮಾನ್ಯ ಗಿಡಗಳ ಕಟ್ಟಿಗೆ, ಎಲೆ ಮತ್ತು ಹಣ್ಣುಗಳನ್ನು ಸಂಗ್ರಹಿಸುವದು ಹಾಗು ಗುರುತಿಸುವದು.

ಗಿಡಗಳ ನಿರೀಕ್ಷಣೆಗಾಗಿ ಹೊಲಗಳಿಗೆ ಪ್ರವಾಸ.

(೨) ವಿದ್ಯಾರ್ಥಿಗಳು ಶಾಲೆಯ ಬೈಲಿನಲ್ಲಿ, ಸಾರ್ವಜನಿಕ ರಸ್ತೆಗಳ ಬದಿಗಳಲ್ಲಿ ಮತ್ತು ಮನೆಯ ಆವಾರದಲ್ಲಿ ಹಲವಾರು ಬಗೆಯ ಗಿಡಗಳನ್ನು ನೆಡುವದು ಹಾಗು ಅವುಗಳ ಬಗೆಗೆ ಜಾಗರೂಕತೆ ವಹಿಸುವದು.

(೩) ಕೊರೆಯುವದು, ಉಜ್ಜುಕೊರಡು ಹೊಡೆಯುವದು, ನಯಗೊಳಿಸುವದು, ಅಳತೆ ಹಾಗು ಆಕಾರಗಳಿಗೆ ತಕ್ಕಂತೆ ಉಳಿಯಿಂದ ಕಡಿಯುವದು ಹಾಗು ಉತ್ತಮವಾಗಿ ಪೂರ್ತಿಗೊಳಿಸುವದು, ಜರಿತೋಡುವದು, ಸಾದಾ ರೀತಿಯಿಂದ ಜೋಡಿಸುವದು.

(ಈ ಕ್ರಿಯೆಗಳನ್ನೊಳಗೊಂಡ ಸಾದಾ ವಸ್ತುಗಳ ತಯಾರಿಕೆಯಲ್ಲಿ ಶಕ್ಯ ವಿದ್ದ ಮಟ್ಟಿಗೆ ಕೆತ್ತನೆಯ ಕೆಲಸವನ್ನು ಮಾಡಬೇಕು.)

(೪) ಸಂದುಗಳು:—ಅರ್ಧಕಡಿತದ ಸಂದುಗಳು, ಕಂಬಿ, ತೀರು ಮೊದಲಾದವುಗಳನ್ನು ಸೇರುಕೊನೆಗಳ ದಪ್ಪದಲ್ಲಿ ಅರ್ಧತೆಗೆದು ಕೂಡಿಸುವದು (Lap halving) ಹಾಗು ಕತ್ತರಿ ಆಕಾರದ ಕಡಿತ (Cross halving) "ಹೌಸಿಂಗ ಜಾಯಿಂಟ್ಸ" ಮತ್ತು ಹೌಕಟ್ಟಿನ ಸಂದುಗಳು.

(೫) ತಯಾರಿಸಬೇಕಾದ ವಸ್ತುಗಳು- ಕುರ್ಚಿಗೆ, ಕುಡಗೋಲು ಮೊದಲಾದವುಗಳ ಹಿಡಿಕೆಗಳು. ರೂಲ

ಪ್ರತಿ ಚೌರಸ ಘೂಟಿನ ಬಿಲೆಯು ತಳಹದಿಯು ಮೇಲೆ ಲೆಕ್ಕಮಾಡಿ ತೆಗೆಯುವದು.

ಕಟ್ಟಿಗೆಗಳು, ತೋರುಗೋಲುಗಳು, ಗೂಟಗಳು (ಚೂ
ತೂಬುಗಳಲ್ಲಿ ಚೌದನ ಆಕಾರದ (Pointers) ಗು
ಗಳು) ಜಾಗದ ಭಾರಗಳು,(Paperweights)ಸಂ
. ಫಲಕಗಳು,ಬಟ್ಟಿಯನ್ನು ಒಗೆಯುವಷ್ಟುಪಯೋಗಿಸ
ಕೂಡಿಕೆಗಳು, ಸಾದಾ ಇರಸು ಹಾಗು ನೊಗಗಳ ಆ
ಗಳು, ಸಾದಾ ಮಣೆಗಳು. ಲಪೇಟಿಗಳು, ಹ
ಮಣೆಗಳು, ಕಟ್ಟಿಗೆಯ ಅರೆಯುವ ಫಲಗಳು, ಕ
ಪೆಟ್ಟಿಗೆ, "ಬ್ರಾಕೆಟ್"ಶೆಲ್ಫುಗಳು (ಚಿಕ್ಕವು, ಚೌಸಿ
ಸಂಬುಗಳುಳ್ಳವು) ಅರೆಗೊಯ್ತುದಿಂದ ಮುಂಚು ಪಾ
ಗಳನ್ನಿಡುವ ಅಡ್ಡಣಿಗೆ, ಮೊಳೆ ಹೊಡೆದು ತಯಾರಿ.
ಸಣ್ಣ ಸಾದಾ ಪೆಟ್ಟಿಗೆ, ಪುಸ್ತಕಗಳನ್ನಿಡುವ ತೆ
ಗೋಡೆ ಚೌಕಟ್ಟು (wall-rack) ಮೊಳೆ ಹೊಡೆ
ತಯಾರಿಸಿದ ಸಣ್ಣ ಅಡ್ಡಣಿಗೆ (Stool).

೬. ಜೇವದಾರು ಕಟ್ಟಿಗೆ ಅಥವಾ ಬರೆಯಿಡುವ
ಕಟ್ಟಿಗೆಗಳಿಂದ ಪ್ರಾಣಿಗಳ ಆಕಾರಗಳನ್ನು ಮತ್ತು ಆ
ಗಳನ್ನು ಚಿತ್ರಗೆಲಸದ ಕರಡಿನಿಂದ ಕೊರೆದು ತೆಗೆ
ವದು ಮತ್ತು ಜೇವದಾರು ಅಥವಾ ಪದರು ಕಟ್ಟಿ
ಗಳಿಂದ ಲಕ್ಕಣಿಕೆ ಇಡುವ, ಜಾಗವ ಇಡುವ ಉಪಕ
ಗಳನ್ನೂ, ಸಾದಾ ಪಂಜರ, ಕ್ಯಾಲೆಂಡರ ಹಾಗೂ ಚಿತ್ರ
ಚೌಕಟ್ಟುಗಳನ್ನೂ ತಯಾರಿಸುವದು.

೭. ರೇಖಿನ ಕಲೆಯಲ್ಲಿ ಮೂಲ ಸ್ಕೇಲುಗ
ಹಾಗೂ ಉಪಕರಣಗಳ ಉಪಯೋಗಗಳು, ಉಪಕರಣಗಳ ಹಾ
ಉಪಯೋಗ. ರೇಖಿನ ಕಲಾ ಫಲಕದ ಉ
ಯೋಗ, ಚೌಪಟ್ಟು ('T' square) ಹಾಗು ತ್ರಿಕೋ
ಪಟ್ಟಿಗಳ ಉಪಯೋಗ ಭೂಮಿತಿಯ ಸಾದಾ ವಿ
. ಹಾಗೂ ಸುಳುವುಗಳನ್ನು ಉಪಕರಣಗಳ ಸಹಾಯದಿ
ತೆಗೆಯುವದು. ಉದ್ದಗಲ ಮುಂತಾದ ಅಳತೆಗಳ
ಗೊತ್ತು ಪಡಿಸುವದು ಹಾಗೂ ಅಕ್ಷರ ತೆಗೆಯುವದು.
ಅಳತೆಗಳ ಸಹಾಯವಿಲ್ಲದೆ ವಿಷಯದಿಂದ ತೆಗೆಯುವ ರೇ
ಕಲೆ, (Freehand drawing) ಕಾಟ್ಟ ಸ್ಕೇಲುಗ
ಸಾರಮಾಡಿ ರೇಖಿನ ಕಲೆ, ವಿಷಯದಿಂದ ತೆಗೆದ, ವಿ
ಭಾಗಗಳಲ್ಲಿಯು ಸಾದಾ ಘನವಸ್ತುಗಳ ರೇಖಾ ಕೃತಿಗ
ಯೋಗ್ಯಸ್ಥಾನದಲ್ಲಿದ್ದ ಘನವಸ್ತುಗಳ ಗುಂಪುಗ
ಘನಗಳ ಮತ್ತು ಸಾದಾ ಕಂಬುಗಳ ಲಘವಾ ವಸ್ತು
ಒಂದೇ ಜಾತಿಯು ಹಾಗೂ ಸಚಿತ್ರವಾದ ಮುಂಚಾ
ವಿಕೆ (projection) (ಫ್ರೀಹ್ಯಾಂಡ ಹಾಗೂ ಸ್ಕೇ
ಗನುಸರಿಸಿ).

೮. ಸಂಗೀತ

ಗೊತ್ತುಗುರಿಗಳು:— ಸಂಗೀತದ ಗೊತ್ತುಗುರಿಗಳು ಕೆಳಗನಂತಿರಬೇಕು—

(ಅ) ಶ್ರವಣೇಂದ್ರಿಯದ ಉತ್ತಮ ಲಯಗಳನ್ನು ಉಂಟುಮಾಡುವುದು ಸ್ಪಷ್ಟ ಉಚ್ಚಾರದ ಮತ್ತು ಧ್ವನಿ ಕುಶಲತೆಯ ಸರಿಯಾದ ಪದ್ಧತಿಗಳು. ತಾಳಬದ್ಧತೆ, ಹಾಗು ಸ್ವರ ಮೇಳಗಳ ಕಡೆಗಿನ ಒಲವನ್ನು ಬೆಳೆಯಿಸುವುದು.

(ಬ) ಸಂಗೀತದ ಬಗೆಗೆ ಅಭಿರುಚಿಯನ್ನು ಹುಟ್ಟಿಸುವುದು ಹಾಗು ವಿಕಾಸಗೊಳಿಸುವುದು ಮತ್ತು ವಿದ್ಯಾರ್ಥಿಯು ತನ್ನ ಮುಂದಿನ ಜೀವನದಲ್ಲಿ ಸಂಗೀತದ ರುಚಿಯನ್ನು ಅನ್ವಯಿಸಲು ಸಮರ್ಥನಾಗುವಂತೆ ಅದರ ಕಲಹದಿಯನ್ನು ಹಾಕುವುದು. ಈ ಪ್ರಕಾರ ಅವನಿಗೆ "ಉದಾತ್ತಗೊಳಿಸುವ ಮನರಂಜನೆ"ಯನ್ನು ಪೂರೈಸುವುದು.

(ಕ) ಉತ್ತಮವಾದ ಸಂಗೀತವನ್ನು ಕೇಳುವಂತೆ ಹಾಗು ಮೆಚ್ಚುವಂತೆ ವಿದ್ಯಾರ್ಥಿಯನ್ನು ಪಳಗಿಸುವದು.

(ಡ) "ನಾದ ನಿರ್ಮಾಣ ಕುಶಲತೆ"ಯನ್ನು ವಿಕಾಸಗೊಳಿಸಿಕೊಳ್ಳುವ ವಿಶೇಷ ಪ್ರಕಾರದ ಒಲವನ್ನು ಪ್ರಕಟಗೊಳಿಸುವಂತೆ ಜನರನ್ನು— ಧ್ವನಿ ಸಂಬಂಧವಾದ ಕಥವಾ ಉಪಕರಣಜನ್ಯ ಸಂಗೀತ— ವಿಕಾಸಗೊಳಿಸಿಕೊಳ್ಳುವಂತೆ ಪ್ರೋತ್ಸಾಹನೆಯನ್ನು ಕೊಡುವುದು.

(ಇ) ಸಂಗೀತದ ತಳಪಡಿಯ ಮೇಲಿನ ಸಾಂಘಿಕ ಪಟುವಟಿಕೆಗಳ ಸುಸಂದರ್ಭಗಳನ್ನು ಒದಗಿಸಿಕೊಡುವುದು.

(ಫ) ಪ್ರೇಮ, ಗೌರವ, ಭಕ್ತಿ ಮತ್ತು ಸ್ವದೇಶಾಭಿಮಾನಗಳ ಉಚ್ಚತರ ಮನೋಭಾವನೆಗಳನ್ನು ಹುಟ್ಟಿಸುವುದು.

ಟಿಪ್ಪಣಿ:—(ಅ) ಸಂಗೀತ ಶಿಕ್ಷಣವು ಯೋಗ್ಯವಾಗಿ ನಿರ್ವಹಿಸಲ್ಪಟ್ಟಲ್ಲಿ ವಿದ್ಯಾರ್ಥಿಯ ಸಂಪೂರ್ಣ ವ್ಯಕ್ತಿತ್ವವನ್ನು— ಶಾರೀರಿಕ, ಬೌದ್ಧಿಕ, ಮಾನಸಿಕ, ಕಾಲ್ಪನಿಕ ಮತ್ತು ರಚನಾತ್ಮಕ ಶಕ್ತಿಗಳನ್ನು— ವಿಕಾಸಗೊಳಿಸಲು ಸಹಾಯಕವಾಗಬಲ್ಲದು. ಈ ಚಟುವಟಿಕೆಯು ವಿದ್ಯಾರ್ಥಿಯ ಮೂಲ ಸಹಜ ಪ್ರವೃತ್ತಿಗೆ ಪೋಂದಿಕೆಯಾಗುವ ಅನುಕೂಲತೆಯುಳ್ಳದ್ದಾಗಿದೆ. ಹಾಗು, ಇದು ಬಾಲಕನು ತಾನು ಶೋಧಿಸುವ ಎಲ್ಲ ವಸ್ತುಗಳಲ್ಲಿ, ಸುವ್ಯವಸ್ಥೆ, ಆಕಾರ, ತಾಳಬದ್ಧತೆ ಹಾಗು ಪರಸ್ಪರ ಸಾಮರಸ್ಯವನ್ನು ಕಾಣಲು ಅವನನ್ನು ಪ್ರಚೋದಿಸುತ್ತದೆ.

(ಬ) ಹಂಬೂರಿಯನ್ನು—ರಾಗದ ಪೆಟ್ಟಿಗೆ (Harmonium) ಯನ್ನಲ್ಲ—ಜಜ್ಜಾಗಿ ಉಪಯೋಗಿಸುವುದು ಇಷ್ಟವಾದುದು.

೫ನೆಯ-ಇಯತ್ತೆ-(ಹೈಸ್ಕೂಲು)—
೫ನೆಯ ಇಯತ್ತೆ (ಪ್ರಾಥಮಿಕ)

(ಅ) ರಾಗಗಳ ಪ್ರಾರಂಭಿಕ ಜ್ಞಾನ ಮತ್ತು ಪ್ರಾಥಮಿಕ, ಪಾರಿಭಾಷಿಕ ಶಬ್ದಗಳ ವ್ಯಾಖ್ಯೆಗಳು.

(ಬ) (ಡ) ದಲ್ಲಿ ಹೇಳಿದ ಪ್ರತಿಯೊಂದು ರಾಗದ ನಾಲ್ಕು ಗೀತಗಳು. ಅಂದರೆ ಒಂದು ಲಕ್ಷಣಗೀತ, ಒಂದು ಸರಿಗಮ ಗೀತ ಅಲ್ಲದೆ ಮತ್ತೆರಡು ಗೀತಗಳು.

(ಕ) ಭಕ್ತಿಪರ ಗೀತಗಳು, ಜಾನಪದ ಗೀತಗಳು, ಕೂಚ-ಗೀತಗಳು, ಹಾಗು ರಾಷ್ಟ್ರಗೀತಗಳು ಮತ್ತು ಇತರ ಸಾಂಘಿಕ ಗೀತಗಳು, ಸ್ವಾಗತ ಗೀತಗಳು ಮತ್ತು ಆಭಾರಗೀತಗಳು.

(ಡ) ಐದು ರಾಗಗಳು:—ಭೂಪಾಳಿ, ದುರ್ಗಾ, ಸರಿಗಮ, ದೇಶ ಹಾಗು ಖಮಾಜ. ತಾಳದೊಂದಿಗೆ ಹಾಡುವುದು.

ಶಿಕ್ಷಣವೂ ಸೃಷ್ಟಿ ನಿರೀಕ್ಷಣೆಯೂ

ಲೇಖಕರು:— ಶ್ರೀ. ವಿ. ಬ. ಚನ್ನಣ್ಣನವರು, ಬಿ. ಎಸ್ಸಿ., ಬಿ. ಟಿ.

ಚಿಕ್ಕ ಮಕ್ಕಳ ಶಿಕ್ಷಣದಲ್ಲಿ "ಸೃಷ್ಟಿ-ನಿರೀಕ್ಷಣೆ" ಈ ವಿಷಯವು ಒಳ್ಳೇ ಮಹತ್ವದ್ದಾಗಿದೆ. ಮಗುವು ಸುಮಾರು ಎರಡು ವರ್ಷದ್ದಾಗುವ ವರೆಗೆ ಅತನಲ್ಲಿ ಅಗಾಧ ಪ್ರವೃತ್ತಿ, ಕುತೂಹಲ ಪ್ರವೃತ್ತಿ ಸಂಗ್ರಾಹಕ ಪ್ರವೃತ್ತಿ ಮುಂತಾದವುಗಳು ಇನ್ನೂ ಮೂಲಸ್ವರೂಪದಲ್ಲಿಯೇ ಇದ್ದೇ ಪ್ರಬಲವಾದ ಆಂತರಿಕ ಶಕ್ತಿಗಳಾಗಿರುವವು. ಇವೇ ಮಗುವಿನ ಭವಿಷ್ಯತ್ಕಾಲದ ಶಿಕ್ಷಣದ ತಳಹದಿಯಾಗಿರುವವು. ಅವುಗಳ ಉದಾತ್ತೀಕರಣದಿಂದ ಮಗುವು ತನ್ನ ಜೀವನಕ್ಕೆ ಅತ್ಯವಶ್ಯವಾಗಿರುವ ಅನುಭವ ಹಾಗು ಜ್ಞಾನ ಗಳನ್ನು ಪಡೆಯುವನು. ಅದಲ್ಲದೆ ಮಗುವಿನಲ್ಲಿ ಭಾವನೆಗಳು ಬೆಳೆಯಲು ಪ್ರಾರಂಭವಾಗುವ ಕಾಲವೂ ಇದೆ. ಹೀಗೆ ನೇಕ ದೃಷ್ಟಿಯಿಂದ ಮಗುವಿನ ಶೀಲಸಂವರ್ಧನೆ ಹಾಗು ವ್ಯಕ್ತಿತ್ವದ ವಿಕಾಸ ಇವೆಲ್ಲವುಗಳ ಅಡಿಗಲ್ಲು ಹಾಕುವ ಅವ ಯವು ಬಾಲ್ಯಾವಸ್ಥೆಯಾಗಿರುವದು. ಇಂಥ ಅಪೂರ್ವ ವಾದ ಆಂತರಿಕ ಶಕ್ತಿಗಳನ್ನು ಸನ್ಮಾರ್ಗದಲ್ಲಿ ಹರಿಯಿಸಿ, ಬೆಳೆಯಿಸಿ, ಮಗುವಿನ ಸಂಪೂರ್ಣ ವಿಕಾಸಕ್ಕೆ ಅನುವು ಮಾಡಿಕೊಡುವ ಕಾರ್ಯವೆಲ್ಲ ಸೃಷ್ಟಿ ನಿರೀಕ್ಷಣೆಯಿಂದ ಸಾಧಿಸಲವದು. ಆದ್ದರಿಂದಲೇ ರೂಸೊ, ಫ್ರೊಬೆಲ್ ಮುಂ. ಶಿಕ್ಷಣತಜ್ಞರೂ ರವೀಂದ್ರನಾಥ ಟಾಗೋರ, ವರ್ಡ್ಸ್‌ವರ್ಥ್ ಮುಂ ಕವಿಗಳೂ ನಿಸರ್ಗವನ್ನು ಅಷ್ಟೊಂದು ಮುಕ್ತಕಂಠ ದಿಂದ ಹೊಗಳಿದ್ದಾರೆ. ಪೂಜ್ಯಭಾವದಿಂದ ಆರಾಧಿಸಿದ್ದಾರೆ. ಅಷ್ಟೇ ಅಲ್ಲ, ಕೇವಲ ಸೃಷ್ಟಿಯ ಸನ್ನಿಧಿಯಲ್ಲಿ ಪಡೆಯುವ ಶಿಕ್ಷಣವೇ ನಿಜವಾದ, ಕಲ್ಮಂಕರಹಿತ, ಪರಿಶುದ್ಧ ಹಾಗು ಸ್ವಾಭಾವಿಕ ಶಿಕ್ಷಣವೆಂದು ಪ್ರತಿಪಾದಿಸಿದ್ದಾರೆ. ಕಾರಣ ಪ್ರಾಥಮಿಕ ಶಿಕ್ಷಣದಲ್ಲಿ ಸೃಷ್ಟಿನಿರೀಕ್ಷಣೆಗೆ ಪ್ರಾಧಾನ್ಯ ಸ್ಥಾನ ದೊರಕ್ಕಿದ್ದು ಸಹಜವಾಗಿದೆ. ಈ ಸೃಷ್ಟಿ ನಿರೀಕ್ಷಣೆಯು ಮುಂಬರುವ ವಿಜ್ಞಾನ ಅಭ್ಯಾಸದ ತಳಹದಿಯಾಗುವದ ಸೃಷ್ಟಿನಿರೀಕ್ಷಣೆಯಿಂದ ಮಗುವು ಕ್ರಮೇಣ ಸಾಮಾ ವಿಜ್ಞಾನದ ಪರಿಚಯಕ್ಕೆ ಸಾಗುತ್ತಾನೆ. ಸಾಮಾನ್ಯ ವಿಜ್ಞಾನದಿಂದ ಕ್ರಮೇಣ ಮೇಲ್ತರಗತಿಯ ವಿಜ್ಞಾನದ ಅಭ್ಯಾಸಕ್ಕೆ ಅನುವು ಮಾಡಿಕೊಳ್ಳುವನು. ಇಂಥ ಅತಿ ಮಹತ್ವವುಳ್ಳ ಮತ್ತು ವಿಜ್ಞಾನದ ಮೂಲಾಧಾರವಾದ ಸೃಷ್ಟಿ ನಿರೀಕ್ಷಣೆಯ ಮೂಲಭೂತವಾದ ತತ್ವಗಳನ್ನು ಸ್ಥೂಲವಾಗಿ ದಿಂದ ಅರಿಯಬೇಕಾಗಿದೆ.

ಪ್ರಾಥಮಿಕ ಶಿಕ್ಷಣದ ಮಟ್ಟಿಲಿನಲ್ಲಿ ಸೃಷ್ಟಿನಿರೀಕ್ಷಣೆಂ ಮುಖ್ಯವಾಗಿ ಮಗುವಿನ ಹುಟ್ಟಿ ಸ್ವಭಾವವಾಗಿರುವ ಅಗಾ ಕುತೂಹಲ ಪ್ರವೃತ್ತಿಗಳನ್ನು ಪೋಷಿಸಿ ಬೆಳೆಯಿಸಲು ಮತ್ತು ಮಗುವು ನಿಸರ್ಗದ ನಂದನವನದಲ್ಲಿ ನಲಿದ ಆನಂದಪಡೆಯಲಿಕ್ಕಾಗಿದೆ. ಇವೇ ನಿಸರ್ಗ ದೇವತೆಯನ್ನ ಆರಾಧಿಸುವ ಮುಖ್ಯ ಧ್ಯೇಯಗಳಾಗಿವೆ. ಸೃಷ್ಟಿಯ ಸಂ ರ್ಕದಿಂದ ಮಗುವಿನ ಆತ್ಮ ವಿಕಾಸವು ಬಹು ಮುಖವಾ ಯಾವ ಅಡೆತಡೆಗಳಲ್ಲದೆ ಅತಿ ಸ್ವಾಭಾವಿಕವಾಗಿ ಆಗುವ ಮಗುವು ಆಗಿನ ಸಮಯದಲ್ಲಿ ಪರಿಪೂರ್ಣ ಜೀವನವ ಜೀವಿಸುವನು. ಆತನ ಜೀವನವು ಸಂಪೂರ್ಣ ಆನ ಮಯವೂ ನಿಸ್ವಾರ್ಥಪರವೂ ಪರಿಶುದ್ಧವೂ ಆಗಿರುವ ಅದಲ್ಲದೆ ತನ್ನ ಭವಿಷ್ಯತ್ಕಾಲದ ಜೀವನದ ತಯಾರಿಯನ್ನ ಅಪ್ರತ್ಯಕ್ಷರೀತಿಯಿಂದ ಮಾಡಿಕೊಳ್ಳುವನು. ತನ್ನ ಸು ಲಿನ ಜಗತ್ತಿನ, ಅಲ್ಲಿಯ ಜೀವನ, ಹಾಗು ಅಜೀವ ವಸ್ತುಗಳ ಜ್ಞಾನವನ್ನು ಪಡೆದು, ತನ್ನ ಸುತ್ತಲಿನ ಪ ತಿಯ ಮೇಲೆ ಪ್ರಭುತ್ವವನ್ನು ತಂದುಕೊಳ್ಳಬಹು ತನಗೆ ದೊಡ್ಡವನಾದ ಮೇಲೆ ಉಪಯೋಗವಾಗುವ ಲೌಕಿಕಜ್ಞಾನವನ್ನು ಪಡೆಯಬಹುದು. ಸರ್ವಾಂಗಸುಂ

ಾದ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಬಹುದು. ಆದರೆ ಈ ಭವಿ
ತ್ಯಾಲದ ಸುಖಕ್ಕಾಗಿಯೇ ಸದ್ಯದ (ಬಾಲ್ಯಾವಸ್ಥೆಯು)
ೀವನವನ್ನು ಸಾಗಿಸುವದಲ್ಲ. ಮುಂದಿನ ಹಿತಕ್ಕಾಗಿ,ಮುಂ
ನ ಸೌಖ್ಯಕ್ಕಾಗಿ ಇಂದಿನ ಜೀವನವನ್ನು ಎರವು ಮಾಡು
ದಲ್ಲ. ಆದ್ದರಿಂದ ಸೃಷ್ಟಿಯ ಅಭ್ಯಾಸದಲ್ಲಿ ಜ್ಞಾನಾರ್ಜ
ಯು ಅಷ್ಟೊಂದು ಮಹತ್ವದ್ದಲ್ಲ. ಅದು ಕೇವಲ ದ್ವಿತೀ
ಯ ಸ್ಥಾನವನ್ನು ಪಡೆಯಬಹುದು.

ನಿಸರ್ಗದ ಅನುಭವಗಳು ಹಾಗು ಜ್ಞಾನವು ಮಗುವಿಗೆ
ತಿ ನೈಸರ್ಗಿಕ ರೀತಿಯಲ್ಲಿ ಆಗಕಾಬೇಗುವದು. ಮಗು
ನ್ನು ಆವರಿಸಿದ ಎಲ್ಲ ವಸ್ತುಗಳ, ಎಲ್ಲ ಶಕ್ತಿಗಳ, ಎಲ್ಲ
ಾಪಾರಗಳ ಪರಿಣಾಮವು ಏಕಕಾಲಕ್ಕೆ ಮಗುವಿನ ಮೇಲೆ
ಆಗಬೇಕು. ಹೊರತು ಅವುಗಳ ಪರಿಣಾಮವು ಬಿಡಿಬಿಡಿ
ಯಾಗಿ, ಅನೈಸರ್ಗಿಕವಾಗಿ, ಮನುಷ್ಯನಿಂದ ಕಲ್ಪಿತ ರೀತಿ
ಯಲ್ಲಿ ಆಗಕೂಡದು. ಮಗುವು ಒಂದು ಉದ್ಯಾನದಲ್ಲಿ
ಾಲಿಟ್ಟಕೂಡಲೆ ಆತನಿಗೆ ಅಲ್ಲಿರುವ ಎಲ್ಲ ವಸ್ತುಗಳ ಅನು
ವ ಏಕಕಾಲಕ್ಕೆ ಆಗುವದು. ಆತನು ಅಲ್ಲಿರುವ ಎಲ್ಲ
ಹೂವಿನ ಗಿಡಗಳನ್ನು, ತನ್ಮುಷ್ಟಕ್ಕೆ ತಾವೇ ಬೆಳೆದ ಎಲ್ಲ
ನಸ್ಪತಿಗಳನ್ನು, ಅಲ್ಲಿ ನಲಿಯುವ ಪಾತರಗಿತ್ತಿ, ಭ್ರಮರ,
ಹೊಣ, ಜೇನ್ನೊಣ ಮುಂತಾದ ಕ್ರಿಮಿ ಕೀಟಕಗಳನ್ನು
ಮವೆಲ್ಲವುಗಳನ್ನೂ ಅವುಗಳ ಸ್ವಭಾವಿಕ ಸನ್ನಿವೇಶದಲ್ಲಿಯೇ
ಾಣುವನು. ಅವುಗಳ ಪರಸ್ಪರರ ಸಂಬಂಧ, ಅನಲಂ
ನ, ಇನ್ನಿತರ ಸಹಸ್ರಾರು ಸಂಗತಿಗಳನ್ನೂ ಏಕಕಾಲಕ್ಕೆ
ಖಂಡವಾಗಿ ಅರಿಯುವನು. ಆದರೆ ಅವೇ ವನಸ್ಪತಿಗ
ಳನ್ನು ಅವೇ ಕ್ರಿಮಿಕೀಟಕಗಳನ್ನು ವರ್ಗದ ಕೋಣೆ
ಯಲ್ಲಿ, ಅವುಗಳ ಸ್ವಾಭಾವಿಕ ಸನ್ನಿವೇಶದಿಂದ ಅಗಲಿಸಿ
ಂದು ಅಭ್ಯಸಿಸುವದು ನಿಜವಾದ ಸೃಷ್ಟಿ ನಿರೀಕ್ಷಣೆಯಾಗ
ಾರದು. ಅವುಗಳ ಅನುಭವವೂ, ಜ್ಞಾನವೂ ಸುವ್ಯವ
ಸ್ಥಿತವಾದ ಅಥವಾ ಕ್ರಮಬದ್ಧವಾದ ರೀತಿಯಲ್ಲಿ ಆಗ
ದು ಅಗತ್ಯವಿಲ್ಲ. ಇಂಥ ತರ್ಕಬದ್ಧವಾದ, ಕ್ರಮಬದ್ಧ
ಾದ ಅಭ್ಯಾಸವು ಸೃಷ್ಟಿನಿರೀಕ್ಷಣೆಯ ಮುಂದಿನ ಮೆಟ್ಟಿಲಿನ
ಕೆಲಸವು. ಆದರೆ ಸೃಷ್ಟಿನಿರೀಕ್ಷಣೆಯು ಮಾತ್ರ ಕೇವಲ
ಮಗುವಿನ ಜಿಜ್ಞಾಸೆಗಾಗಿ, ಆನಂದಕ್ಕಾಗಿ ಮುಡುಪಾಗಿರು
ವದು.

ಎರಡನೆಯದಾಗಿ ಸೃಷ್ಟಿನಿರೀಕ್ಷಣೆಯು ಋತುಮಾನ
ಗಳನ್ನು ಅನುಸರಿಸಿ ನಡೆಯಬೇಕು. ತಕ್ಕ ಸಂದರ್ಭಗಳು
ಉದ್ಭವಿಸಿದಾಗ ಸಮಯೋಚಿತವಾಗಿ ಅದು ಸಾಗಿಸಬೇಕಾ
ಗುವದು. ಆದ್ದರಿಂದ ಅನೇಕ ಸಾರೆ, ಪಠ್ಯಪುಸ್ತಕಗಳ
ಲ್ಲಿಯೆ ಕ್ರಮವನ್ನು, ವಿಷಯಗಳ ಕ್ರಮವನ್ನು, ವೇಳಾ
ಪತ್ರಿಕೆ ಅಥವಾ ಇನ್ನಿತರ ಪೂರ್ವ ಕಲ್ಪಿತ ಯೋಜನೆಗಳನ್ನು
ಬದಿಗೊತ್ತಿಡಬೇಕಾಗುವದು. ಒಂದೇ ಒಂದು ವಿಷಯದ
ಜ್ಞಾನ ಬೇರೆ ಬೇರೆ ಅನೇಕ ಸಂದರ್ಭಗಳಲ್ಲಿ ಆಗಬಹುದು.
ಅದೆಲ್ಲವನ್ನು ಒಟ್ಟುಗೂಡಿಸಿ ಒಮ್ಮೆಲೆ ಹೇಳಲಿಕ್ಕಾಗದು.
ಉದಾ: ಮೂರು ಋತುಗಳ ಪರಿಚಯ ಮೂರು ಬೇರೆ
ಸಮಯಕ್ಕೆ ಆಗಬೇಕಾಗುವದು. ಮಳೆಗಾಲದ ಜ್ಞಾನ
ಮಳೆಗಾಲದಲ್ಲಿ, ಚಳಿಗಾಲದ ಜ್ಞಾನ ಚಳಿಗಾಲದಲ್ಲಿ, ಬೇಸಿ
ಗೆ ಕಾಲದ ಜ್ಞಾನ ಬೇಸಿಗೆಯಲ್ಲಿಯೇ ಆಗಬೇಕಾಗುವದು.
ಅಲ್ಲದೆ ನಮ್ಮ ಅನುಕೂಲತೆಗಾಗಿ ಮಳೆಗಾಲ, ಚಳಿಗಾಲ,
ಬೇಸಿಗೆ ಕಾಲಗಳ ಜ್ಞಾನ ಒಮ್ಮೆಲೆ ಮಗುವಿಗೆ ಆಗಕೂ
ಡದು. ಆದರೆ ಮಳೆಗಾಲದ ಅಭ್ಯಾಸದ ಕಾಲಕ್ಕೆ ಆಗಿನ
ಪರಿಸ್ಥಿತಿಗೆ ನಿಕಟವಾಗಿ ಸಂಬಂಧಿಸಿದ ವಿಷಯವನ್ನು—
ಉದಾ: ಆಗಿನ ಮನುಷ್ಯನ ಉದ್ಯೋಗಗಳು, ಆಗ್ಗೆ ಕಂಡು
ಬರುವ ಕ್ರಿಮಿಕೀಟಕಗಳು, ಇತ್ಯಾದಿ — ಆದರೆ ಸಂಗಡವೇ
ಜೋಡಿಸಿಕೊಂಡು ಸಮ್ಮಿಶ್ರವಾಗಿ ಅಭ್ಯಸಿಸಬಹುದು.
ಒಟ್ಟಿನಮೇಲೆ ಹೇಳುವದೆಂದರೆ ಸೃಷ್ಟಿಯ ಕ್ರಮ, ನೈಸರ್ಗಿಕ
ಕ್ರಮವನ್ನೇ ಅನುಸರಿಸಬೇಕು, ಹೊರತು ಅಲ್ಲಿ ನಮ್ಮ
ತಾತ್ವಿಕ ಕ್ರಮ ಅಥವಾ ಶಾಸ್ತ್ರೀಯ ಕ್ರಮಗಳ ಉಪಯೋ
ಗವಿಲ್ಲ.

ಅದಲ್ಲದೆ ಸೃಷ್ಟಿ ನಿರೀಕ್ಷಣೆಯು ಸಾಮಾನ್ಯವಾಗಿ ವರ್ಗದ
ಕೋಣೆಯ ಹೊರಗೇ— ಉದ್ಯಾನಗಳಲ್ಲಿ, ವನದಲ್ಲಿ, ಪ್ರವಾ
ಸಗಳಲ್ಲಿ — ಇತ್ಯಾದಿ ಸಾಗಬೇಕು. ಯಾವದೊಂದು ಪೈರಿನ
ಅಭ್ಯಾಸ, ಯಾವದೊಂದು ಪಕ್ಷಿಯ ಅಭ್ಯಾಸ, ಅವುಗಳ
ನಿಜವಾದ ಇರುವ ಸ್ಥಾನದಲ್ಲಿ ನಡೆಯಬೇಕು. ಅವನ್ನೇ.
ವರ್ಗದ ಕೋಣೆಯಲ್ಲಿ ಅಭ್ಯಸಿಸುವದಲ್ಲ. ಹಾಗೆ ಮಾಡಿ
ದರೆ ಅದು ಅವುಗಳ ಬಗ್ಗೆ ಸಂಪೂರ್ಣ ಜ್ಞಾನವಾಗುವದಿಲ್ಲ.
ಅಂದಕೂಡಲೆ ಇಂಥ ಶಿಕ್ಷಣವನ್ನು ಶಾಲೆ
ಯಲ್ಲಿ ಒದಗಿಸಿ ಕೊಡುವದು ಸಾಧ್ಯವಿಲ್ಲವೆಂದು ಕೆಲವರು
ಆಕ್ಷೇಪವನ್ನು ಎತ್ತುವರು. ಆದರೆ ಶಿಕ್ಷಣವು ಯಾವಾ
ಗಲೂ ಶಾಲೆಯಲ್ಲಿಯೇ ಸಾಗಬೇಕೆಂದು ಕಟ್ಟಳೆಯಿಲ್ಲ.
ನಿಸರ್ಗವು ಶಾಲೆಯಕ್ಕಿಂತ ಯಶಸ್ವಿಯಾಗಿ ಶಿಕ್ಷಣವನ್ನು

ಕೊಡಬಲ್ಲ ಸುಹಾಸಾಲೆಯಾಗಿದೆ. ಇನ್ನು ಕೆಲವು ಸೃಷ್ಟಿಯ ಪಾಠಗಳನ್ನು ಚಿತ್ರ ಮಾಡೆಲ್ಲುಗಳ ಸಹಾಯದಿಂದ ಸಾಗಿಸುವ ರೂಢಿಯು ಕೆಲವು ಕಡೆ ಕಂಡುಬರುವದು. ಚಿತ್ರಗಳು, ಮಾಡೆಲ್ಲುಗಳು ನಿಜವಾದ ವಸ್ತುಗಳನ್ನು ಎಂದೂ ಸರಿಗಟ್ಟಲಾರವು. ಇಂಥ ಸಾಧನಗಳ ಮುಖಾಂತರ ಜ್ಞಾನ ಮಾಡಿಕೊಡುವದು ಸೃಷ್ಟಿಯ ಅಭ್ಯಾಸದ ವಿಡಂಬನವು. ಆದರೆ ಸೃಷ್ಟಿಯ ಅಭ್ಯಾಸ ಸಾಗಿದಾಗೆಲ್ಲ, ಸೃಷ್ಟಿಯ ವಸ್ತುಗಳು ಕಣ್ಣೆದುರಿಗೇ ಇರಬೇಕೆಂದು ತಿಳಿಯಕೂಡದು. ವರ್ಗದ ಹೊರಗೆ ಒಮ್ಮೆ ಕಂಡುಕೊಂಡು ಬಂದ ಅನುಭವಗಳ ವಿವೇಚನೆಯು ವರ್ಗದ ಕೋಣೆಯಲ್ಲಿ ಆ ವಸ್ತುಗಳಿಲ್ಲದೆಯೇ ಸಾಗಲು ಅಡ್ಡಿಯಿಲ್ಲ.

ಕೊನೆಯದಾಗಿ, ಇನ್ನು ಕೆಲವರು ಸೃಷ್ಟಿ ನಿರೀಕ್ಷಣೆಯೆಂದರೆ ಸಸ್ಯ ಜಾಗು ಪ್ರಾಣಿ ವರ್ಗದ ಅಭ್ಯಾಸವೆಂದು ಸಂಕುಚಿತ ದೃಷ್ಟಿಯನ್ನು ಇಟ್ಟುಕೊಂಡಿರುವದುಂಟು. ಪ್ರಾಣಿ ಜಾಗು ಸಸ್ಯಗಳ ಅಭ್ಯಾಸ ಮಗುವಿನ ಜೀವನದಲ್ಲಿ ಪ್ರಾಧಾನ್ಯವಾಗಿಯೂ ಸ್ಫೂರ್ತಿದಾಯಕವಾಗಿಯೂ ಇದ್ದಾಗ್ಯೂ ಇನ್ನುಳಿದ ಭೌತಿಕ ಸೃಷ್ಟಿಯ ಅಂಗವಾಗಿರುವ ಗಾಳಿ, ಮಳೆ, ಬಿಸಿಲು, ಪಪೆ, ನೀರು ಇತ್ಯಾದಿಗಳ ಅಭ್ಯಾಸವನ್ನು ಅಲಕ್ಷಿಸಲಾಗದು. ಅವು ಮಗುವಿನ ಜೀವನದಲ್ಲಿ ಅತಿ ನಿಕಟವಾಗಿ ಸೇರಿವೆ. ಆದ್ದರಿಂದ ಸೃಷ್ಟಿ ನಿರೀಕ್ಷಣೆಯು ಪ್ರಾಣಿ, ಸಸ್ಯ ಕುಟುಂಬಗಳ ಅಭ್ಯಾಸಕ್ಕಿಂತ ಹೆಚ್ಚು ವಿಶಾಲವಾಗಿದೆ.

ಅತಿ ಸಂಕ್ಷಿಪ್ತದಲ್ಲಿ ಹೇಳುವದೆಂದರೆ, ಸೃಷ್ಟಿ ನಿರೀಕ್ಷಣೆಯು ಮಗುವಿನ ಜೀವನಕ್ಕೆ ತಕ್ಕಂತೆ, ಆತನಲ್ಲಿಯ ಎಲ್ಲ ಸುಪ್ತ ಶಕ್ತಿಗಳು ಅರಳುವಂತೆ, ಮಗುವಿನ ಸಂಪೂರ್ಣ ವ್ಯಕ್ತಿತ್ವವು ವಿಕಾಸಹೊಂದುವಂತೆ ಸ್ವಾಭಾವಿಕ ರೀತಿಯಲ್ಲಿ ನಡೆಯಬೇಕು. ಅದು ಮುಂದಿನ ಹೆಚ್ಚಿನ ವಿಜ್ಞಾನದ ಅಭ್ಯಾಸಕ್ಕೆ ತಳಹದಿಯಾಗಿರಬೇಕು. ಸೃಷ್ಟಿಯ ಅರಿಧನೆಯು ಈ ರೀತಿ ಯೋಗ್ಯ ಮಾರ್ಗದಲ್ಲಿ ಸಾಗಿದ್ದಾದರೆ ಮಾನವನು ಈಗ್ಗೆ ವಿಜ್ಞಾನದ ಸಹಾಯದಿಂದ ನಡೆಯಿಸುವ ಅತ್ಯಂತ ಅಸುರೀ ಕೃತ್ಯಗಳು, ಘೋರತರವಾದ ಯುದ್ಧಗಳು, ಮಾನವಕುಟುಂಬದ ಪ್ರಳಯವು ಇವೆಲ್ಲವುಗಳನ್ನು ತಡೆಯಬಹುದು. ಇದೆಲ್ಲವೂ ಸಾಧ್ಯವಾಗಲಿಕ್ಕೆ ಬೇಕಾದುದು ಒಂದೇ ಒಂದು ಶಕ್ತಿ; ಅದು—ಸುಂದರವಾದದ್ದನ್ನೆಲ್ಲ ಪ್ರೀತಿಸುವದು ಮತ್ತು ಆರಾಧಿಸುವದು ಈ ಮಂತ್ರವೊಂದನ್ನು ಜಪಿಸಿದರೆ ಸಾಕು. ಈಗಿನ ಮಾನವ ಲೋಕವು ಸ್ವರ್ಗ ಲೋಕವಾಗುವದರಲ್ಲಿ ಸಂದೇಹವಿಲ್ಲ. ಈ ತರದ ಫಲವನ್ನು ಕೊಡುವ ಕ್ಷೇತ್ರವೇ ಸೃಷ್ಟಿಯು.

ಪ್ರಾಥಮಿಕ ಶಿಕ್ಷಕರ ಸ್ಥಾನಮಾನಗಳು

ಲೇಖಕರು:— ಶ್ರೀ. ರತ್ನಾಕರ ಹಾನೇರಿ, ಧಾರವಾಡ

ಭಾರತ ಸ್ವಾತಂತ್ರ್ಯದೊಡನೆ ಶಿಕ್ಷಕರ ಸ್ಥಾನಮಾನಗಳ ಸಮಸ್ಯೆ ರಾಷ್ಟ್ರೀಯ ಮಹತ್ವವನ್ನು ಪಡೆದಿದೆ. ರಾಷ್ಟ್ರ ನಿರ್ಮಾಣಕ ಉದ್ಯೋಗವನ್ನು ಸ್ವೀಕರಿಸಿದ ಶಿಕ್ಷಕರಿಗೆ ಸಮಾಜ ಮತ್ತು ಸರಕಾರಗಳಲ್ಲಿ ಯೋಗ್ಯ ಸ್ಥಾನ ಮಾನಗಳು ಸಿಗುವದು ಅತಿ ಅವಶ್ಯ. ಯಾಕಂದರೆ ಬಲವಾದ ರಾಷ್ಟ್ರವನ್ನು ಕಟ್ಟುವದು ಭಾರತದ ಪ್ರಥಮ ಯೋಜನೆಯಾಗಿದೆ. ಶಿಕ್ಷಕರ ಸಹಕಾರ ಸಹಾನು ಭೂತಿಗಳಿಲ್ಲದೆ ಈ ಕಾರ್ಯ ದುಸ್ತರ. ಶಿಕ್ಷಕರ ಬಗ್ಗೆ ಜನತೆಯಲ್ಲಿ 'ಮನಃತೆಯು ಅನಾದರ' ಕಂಡು ಬರುತ್ತಿದೆ. ಇದಕ್ಕೆ ಕಾರಣಗಳಿಲ್ಲದೆ ಇಲ್ಲ.

ವ್ಯವಹಾರ ಜ್ಞಾನ ಶೂನ್ಯತೆ

ಶಿಕ್ಷಕರ ಮೇಲಿನ ಗಂಭೀರವಾದ ಆರೋಪಗಳಲ್ಲಿ ವ್ಯವಹಾರ ಜ್ಞಾನ ಶೂನ್ಯತೆ ಅತಿ ವ್ಯಾಪಕವಾದದ್ದೆಂದು ಸಹಜವಾಗಿ ಹೇಳಬಹುದು. ಈ ಆರೋಪವನ್ನು ಹೊರಿಸುವ ಜನರು ಶಿಕ್ಷಕರ ಕೊಂಡುಕೊಳ್ಳುವ ವ್ಯವಹಾರದಲ್ಲಿ ಈ ಗುಣವು ಒಡೆದು ಕಾಣುತ್ತದೆ. ಎಂದು ಹೇಳುತ್ತಾರೆ. ಶಿಕ್ಷಕರ ಜೇಬಿನಲ್ಲಿರುವ ಪ್ರತಿಯೊಂದು ಪೈಯೂ ಪ್ರಾಮಾಣಿಕತ್ವವುಳಿದಗಳಿಸಿದ್ದೆಂದು ಹೇಳಿದರೆ ಉಳಿದ ಖಾತೆಯಲ್ಲಿ ದುಡಿಯುವವರ ಮೇಲೆ ಆರೋಪ ಹೊರಿಸಿದಂತಾದೀತು; ಜಂಭ ಕೊಚ್ಚಿಕೊಂಡಂತಾದೀತು. ಈ ಮಾತು ಬೇಡ. ಹೆಚ್ಚು ಬೆಲೆ ಬೀಳುವ ವಸ್ತುಗಳು ಬಹುದಿನ ಬಾಳುವವೆಂಬ ಮಾತು ಗೊತ್ತಿದ್ದರೂ ಆ ಸಾಮಾನುಗಳನ್ನು ಕೊಳ್ಳುವಷ್ಟು ಆರ್ಥಿಕ ಬಲವಿಲ್ಲ ವೆಂಬುದು ಶಿಕ್ಷಕರಿಗೂ ಗೊತ್ತು! ಜನರಿಗೂ ಗೊತ್ತು. ಆದರೂ ಈ ವ್ಯವಹಾರ ಜ್ಞಾನ ಶೂನ್ಯತೆಯ ಮಾತೇಕೋ. ತಿಳಿಯದು. ''ಹಾಸಿಗೆ ಇದ್ದಷ್ಟು ಕಾಲು ಚಾಚು ವದು'' ಬುದ್ಧಿವಂತಿಕೆಯ ಲಕ್ಷಣವಲ್ಲದೇ ಮತ್ತೇನು? ಮಿತವ್ಯಯದಿಂದ ಬಾಳುವ ಕಲೆಯಲ್ಲಿ ಪಾರಂಗತರಾದ ಶಿಕ್ಷಕರ ಮೇಲೆ ವ್ಯವಹಾರ ಜ್ಞಾನದ ಶೂನ್ಯತೆಯ ಆರೋಪವನ್ನು ಹೊರಿಸುವವರ ವ್ಯವಹಾರ ಜ್ಞಾನದಬಗ್ಗೆ ಏನು ಹೇಳಬೇಕು? ಈ ಆರೋಪದಲ್ಲಿ ಏನೂ ಹುರುಳಿಲ್ಲವೆಂದೇ ಹೇಳಬೇಕು.

ಇದ್ದುದರಲ್ಲಿಯೇ ಸಂತೋಷದ ಸಂಗತಿಯೇನೆಂದರೆ, ಶಿಕ್ಷಕರು ತಮ್ಮ ಕರ್ತವ್ಯವನ್ನು ಚೆನ್ನಾಗಿ ನೆರವೇರಿಸಿದ್ದಾರೆಂಬುದು. ಯಾಕಂದರೆ ಅವರಕೈಯಲ್ಲಿ ಕಲಿತ ಶಿಷ್ಯರಿಗೆ ವ್ಯವಹಾರ ಜ್ಞಾನದ ಪರಿಚಯ ಸಂಪೂರ್ಣವಾಗಿದೆ; ತಮಗೆ ಕಲಿಸಿದ ಗುರುಗಳಲ್ಲಿಯೂ ವ್ಯವಹಾರ ಜ್ಞಾನದ ಅಭಾವವಿದೆ ಯೆಂದು ತಿಳಿದುಕೊಳ್ಳುವಷ್ಟು ಅವರು ನೇಲ್ಬುದ್ಧಿಯುಳ್ಳವರಾಗಿದ್ದಾರೆ. ತಾವು ಸ್ವತಃ ವ್ಯವಹಾರ ಜ್ಞಾನ ಶೂನ್ಯರೆಂಬ ಖ್ಯಾತಿಯನ್ನು ಪಡೆದಾಗ್ಯೂ ಉಳಿದವರಿಗೆ ವ್ಯವಹಾರಜ್ಞಾನವನ್ನು ಕಲಿಸುವ ಶಿಕ್ಷಕರ ಕೌಶಲ್ಯವನ್ನು ಮೆಚ್ಚಲೇಬೇಕು, ಹೊಗಳಲೇಬೇಕು.

ಈ ಆರೋಪದಿಂದ ಉಳಿದ ವರ್ಗಗಳ ಶಿಕ್ಷಕರೂ ಮುಕ್ತರಲ್ಲ! ಆದರೆ ಈ ಮಾತಿನಲ್ಲಿ ಎಳ್ಳಷ್ಟು ಸತ್ಯವಿಲ್ಲವೆಂಬ ಸಂಗತಿಯನ್ನು ಸ್ವಲ್ಪ ಕಣ್ಣು ತೆರೆದು ನೋಡಿದರೆ ಸಹಜವಾಗಿ ಕಾಣಬಹುದು. ಕರ್ನಾಟಕದ ಮುಖಂಡರಾದ ಶ್ರೀ. ದಿವಾಕರ, ಹುಕ್ಕೇರಿಕರ, ನೇಸ್ವಿ, ಸರದಾರ ಪಾಟೀಲ, ಪಾಟೀಲ ಕಲ್ಲನಗೌಡ್ರು ಮತ್ತು ಬಿಂದು ಮಾಧವ ಬುರ್ಲಿ ಮೊದಲಾದವರು ಒಮ್ಮೆ ಶಿಕ್ಷಕರಿದ್ದರೆಂಬ ಮಾತನ್ನು ಮರೆಯುವಂತಿಲ್ಲ. ಶಿಕ್ಷಕರಿಗೆ ಹೇಳಾಗುವದಕ್ಕಿಂತ ಹೆಚ್ಚಿನ ವ್ಯವಹಾರ ಜ್ಞಾನ ಇವರಲ್ಲಿ ಇದ್ದುದರಿಂದಲೇ ಶಿಕ್ಷಕ ವೃತ್ತಿಯನ್ನು ತ್ಯಜಿಸಿದರೆಂದು ಹೇಳುವ ವ್ಯವಹಾರಜ್ಞಾನಿಗಳು ಇರಲಿಕ್ಕಿಲ್ಲವೆಂದು ನಾನು ಆಶಿಸುತ್ತೇನೆ. ಇನ್ನು ಇಂಥ ವೃತ್ತಿಯಷ್ಟು ಆರಿಸಿಕೊಂಡದ್ದೇ ವ್ಯವಹಾರ ಜ್ಞಾನ ಶೂನ್ಯತೆಯ ಲಕ್ಷಣವೆಂದರೆ ಸ್ವಲ್ಪ ಮಟ್ಟಿಗೆ ಒಪ್ಪಬಹುದು. ಆದರೆ ವಸ್ತುಸ್ಥಿತಿಯು ಹೀಗಿಲ್ಲ. ಈ ಖಾತೆಯಲ್ಲಿ ಸೇರುವವರು

ಸಾಮಾನ್ಯವಾಗಿ ಉಳಿದ ಜಾತಿಯುಲ್ಲಿ ಸೇರಲು ಬೇಕಾಗು ವಷ್ಟು ವಶೀಲಿ ಇಲ್ಲದವರು ಇಲ್ಲವೆ ಈ ವೃತ್ತಿಯನ್ನೇ ಮನಸ್ಸಿನಿಂದ ಆರಿಸಿಕೊಂಡವರು ಇರುತ್ತಾರೆ. ಈ ಎಲ್ಲ ಚರ್ಚೆಯಿಂದ ಒಂದು ಸಂಗತಿ ಒಪ್ಪಿದು ಕಾಣುತ್ತದೆ. ಆಸಕ್ತಿಯುಳ್ಳವರಿಗೆ ಈ ಜಾತಿಯು ಆಕರ್ಷಕವಾಗಬೇ ರಾವುದೆ ವಿಶಿಷ್ಟ ನೇತರ ಪ್ರಮಾಣಗಳಿರುವದು ಅವಶ್ಯ. ಶಿಕ್ಷಕರು ಉತ್ಸಾಹದಿಂದ ಕೆಲಸಮಾಡಲು ಪ್ರೋತ್ಸಾಹಿಸಲು ಶಾಲೆಯ ಮುಖ್ಯ ಅಧ್ಯಾಪಕರಿಗೆ ಹೆಚ್ಚಿನ ವೇತನ ಇಲ್ಲವೆ ಭತ್ತೆ ಕೊಡುವದು ಸಮಾಜೋಪಕಾರಿಯಾಗಿ ಇಲ್ಲವು. ಬಹು ಸುಟ್ಟಿಗೆ ಪಟ್ಟಣದಲ್ಲಿ ಸ್ಥಾನ ಮಾನಗಳು ರೊಕ್ಕ ರನ್ನೇ ಅವಲಂಬಿಸಿವೆ. ತಪಾಸಣೆ, ಪ್ರೌಢ ಶಿಕ್ಷಣ ಹಾಗೂ ಹಾಜರಿ ಅಧಿಕಾರಿಗಳ ಹುದ್ದೆಗಳಿಗೆ ಪ್ರಾಥಮಿಕ ಶಿಕ್ಷಕರನ್ನು ಹೆಚ್ಚು ಪ್ರಮಾಣದಿಂದ ಆರಿಸಿಕೊಳ್ಳುವದು ಇವರ ಸ್ಥಾನ ಮಾನಗಳ ದೃಷ್ಟಿಯಿಂದ ಹಿತಕರ.

ಶಿಕ್ಷಕರು ಮಕ್ಕಳೊಡನೆ ಆಡಿ, ಬುದ್ಧಿಯಲ್ಲಿಯೂ ಮಕ್ಕಳೇ ಆಗಿ ಬಿಡುತ್ತಾರೆಂದು ಸಾಧಾರಣವಾಗಿ ಜನರು ಆಕ್ಷೇಪಿಸುವ ಪಡುತ್ತಾರೆ. ಇದೂ ಕೂಡ ತಪ್ಪು ಕಲ್ಪನೆ. ಉತ್ಪತ್ತಿ ವ್ಯಾಪಾರಿಯು ತನ್ನ ಮಾಲಿನ ಗುಣಧರ್ಮಗ ಳನ್ನು ಚೆನ್ನಾಗಿ ತಿಳಿದುಕೊಳ್ಳುವದು ವ್ಯವಹಾರ ದೃಷ್ಟಿ ಯಿಂದ ಲಾಭಕರ. ಅದೇ ಪ್ರಕಾರ ಶಿಕ್ಷಕರು ತಮ್ಮ ಸರ ಕಾದ ಮಕ್ಕಳಗುಣ ಧರ್ಮಗಳನ್ನು ಚೆನ್ನಾಗಿ ಅರಿತು ಕೊಳ್ಳುವದು ಶೈಕ್ಷಣಿಕ ದೃಷ್ಟಿಯಿಂದ ಲಾಭಕರ,ಮಾನಸಿಕ ಶಾಸ್ತ್ರವು ಇದೇ ಮಾತನ್ನು ಧೃಢೀಕರಿಸುತ್ತದೆ.

ದರ್ಪದ ಅಭಾವ

ಈ 'ಮಮತೆಯು ಅನಾದರ' ಜನತೆಯುಲ್ಲಿ ಬೆಳೆಯುವ ದರ್ಪದ ಅಭಾವ ಬಹು ಮುಖ್ಯ ಕಾರಣ. ಶಿಕ್ಷಕರೆಂದರೆ ಹಿಡಿಮುಳ್ಳೊಂಡು ಹೋಗುವ ಪೋಲೀಸರಲ್ಲ; ಶಿಕ್ಷಿಸುವ ನ್ಯಾಯಾಧೀಶರಲ್ಲ, ಸಂಬಳತ್ತಿನ ಸಾಲ ಕೊಡಿಸುವ ಕಂದಾ ಯ ಖಾತೆಯವರಲ್ಲ ಆದಕಾರಣ ಶಿಕ್ಷಕರು "ನಿರುಪ ದ್ರವಿಪ್ರಾಣಿಗಳು," ಸ್ವಲ್ಪ ಅಲಕ್ಷ್ಯವಾದರೂ ನಡೆಯ ಬಹುದೆಂದೇ ಜನರ ನಂಬಿಕೆ. ಈ ಭಾವನೆ ಕೃತಘ್ನ ತೆಯ ರೂಪವನ್ನು ಇನ್ನೂ ತಾಳಿಲ್ಲವೆಂಬುದು ಶಿಕ್ಷಕರ ಸುದೈವ. ಜನತೆಯ ಲಕ್ಷ್ಯ ಆದರಗಳನ್ನು ಸೆಳೆದು ಕೊಳ್ಳಲು ಸ್ವಲ್ಪವಾದರೂ ದರ್ಪ ಅವಶ್ಯ.

ಒತ್ತಾಯ ಶಿಕ್ಷಣವೂ ಎಲ್ಲೆಡೆಯಲ್ಲಿಯೂ ಜಾರಿಯ ಬಂದಿದೆ. ಒತ್ತಾಯ ಶಿಕ್ಷಣದ ಗುನ್ಹೆಗಳನ್ನು ವಿಚಾರಿಸಲು ನ್ಯಾಯಾಧೀಶರೂ ಬೇಕೆ ಬೇಕು. ಈ ಅಧಿಕಾರವನ್ನು ಸ್ಥಾನಿಕ ಶಾಲೆಗಳ ಮುಖ್ಯ ಅಧ್ಯಾಪಕರಿಗೆ ಕೊಡುವ ರಿಂದ ಶಿಕ್ಷಕರ ಬಗ್ಗೆ ಜನತೆಯಲ್ಲಿ ಆದರ ಸಹಜವಾ ಇಡಮೂಡುತ್ತದೆ.

ಜನತೆಯ ದೃಷ್ಟಿ

ನಮ್ಮ ಜನರು ತಮ್ಮ ಮಕ್ಕಳ ಕಲ್ಯಾಣದ ಬಗ್ಗೆ ಸಾ ಷ್ಟು ಲಕ್ಷ್ಯ ಕೊಡುವದಿಲ್ಲವೆಂದು ವಿಷಾದದಿಂದ ಹೇಳಬೇ ಕಾಗಿದೆ. ಇನ್ನೂ ಅವರಿಗೆ ಶಾಲೆಯೆಂದರೆ ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಮಾತ್ರ ಸಂಬಂಧಿಸಿದ ಸಂಸ್ಥೆಯೆಂಬ ಭಾವನೆ ತುಂಬಿಕೊಂಡಿದ್ದಾರೆ. ಇನ್ನು ಕೆಲವರು ಶಾಲೆಗಳು ಸರಿ ಯಲ್ಲ, ಮಕ್ಕಳ ಚಾಟವನ್ನು ತಪ್ಪಿಸುವ ಸುಲಭ ಸಾಧನ ಗಳೆಂದೇ ತಿಳಿದು ವರ್ತಿಸುತ್ತಾರೆ. ತಮ್ಮ ಮಕ್ಕಳ ಜೀ ವನವನ್ನು ಹಚ್ಚಿಸಲು ಕೂಡ ಶಾಲೆಯ ಮೆಟ್ಟಿಲನ್ನು ಹತ್ತ ಪಾಲಕರು ಅನೇಕರಿದ್ದಾರೆ. ಈ ಘಾತಕ ಮನೋವೃತ್ತಿ ಬದಲಾಗದೆ ಭಾರತದ ಭಾಗ್ಯ ಬೆಳೆಯಲಾರದು, ಶಿಕ್ಷಣ ಕಾರ್ಯವು ಸುಗಮವಾಗಿ ಸಾಗಲಾರದು. ಯಾಕೆಂದ ತಾನು ಮಾಡುವ ಕಾರ್ಯವನ್ನು ಜನರು ಬೋಡಬೇಕು ಹೊಗಳಬೇಕೆಂಬು ಆಶಿಸುವದು ಮನುಷ್ಯನ ಸ್ವಾಭಾ ವಿಕ ಪ್ರವೃತ್ತಿ. ಶಿಕ್ಷಕರು ಹೆಚ್ಚಿನ ಉತ್ಸುಕತೆಯಿಂದ ದುಡಿ ಯಲು ಪಾಲಕರ ಪ್ರೋತ್ಸಾಹ, ಸಹಕಾರಗಳು ಅವಶ್ಯ ವೆಂಬ ಮಾತನ್ನು ಜನರು ಮರೆಯುವಂತಿಲ್ಲ.

ಎರಡನೆಯದಾಗಿ, ಜವಾಬ್ದಾರಿ ಅಧಿಕಾರ ದರ್ಪಗಳೇ ಆ ರಕ್ಕೆ ಪಾತ್ರವೆಂಬ ಭ್ರಾಮಕ ಕಲ್ಪನೆಯನ್ನು ಮರೆಯುಲೇ ಬೇಕು. ಶಿಕ್ಷಕರು ಅನಧಿಕಾರಿಗಳಾದರೂ, ಜನತೆಯ ನಿಜವಾದ ಕಲ್ಯಾಣ ಬಯಸುವವರು,ಸೇವಕರು. ದೇಶದ ಸಂಪತ್ತಾದ ಮಕ್ಕಳನ್ನು ಸಶ್ರಜೆಗಳನ್ನಾಗಿ ಮಾಡುವ ಹೊಣೆ ಹೊತ್ತ, ಮಕ್ಕಳಿಗೆ ಜೀವನ ನಾಟಕದಲ್ಲಿ ತಮ ಪಾತ್ರಗಳನ್ನು ಸರಿಯಾಗಿ ವಹಿಸಲು ಕಲಿಸಬಲ್ಲ ಮತ್ತು ಪಶುಗಳನ್ನು ಪಶುಪತಿಗಳನ್ನಾಗಿ ಮಾರ್ಪಡಿಸಬಲ್ಲ ಶಿಕ್ಷ ಕರಿಗೆ ಯೋಗ್ಯ ಮಾನ ಮರ್ಯಾದೆಗಳನ್ನು ಸಲ್ಲಿಸುವದು ನಾಗರಿಕರ ಕರ್ತವ್ಯ.

ಹೊಸ ದೃಷ್ಟಿ, ಹೊಸ ಸೃಷ್ಟಿ

ಶಿಕ್ಷಕರ ಸ್ಥಾನ ಮಾನಗಳನ್ನು ಸುಧಾರಿಸಲು ಮುಂಬಯಿ ಸರಕಾರವು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದೆ ಮತ್ತು ಈ ಬಗ್ಗೆ ಸಾಕಷ್ಟು ಲಕ್ಷ್ಯ ಪೂರೈಸಿದೆ.

ಆದರೆ ಸರಕಾರವೇ ಶಿಕ್ಷಕರ ಸ್ಥಾನಮಾನಗಳನ್ನು ನಿರ್ಣಯಿಸುವ ಕಾರ್ಯದಲ್ಲಿ ಅಸಕ್ತಿಯನ್ನು ವಹಿಸಿರುವ ದರಿಂದ ನಮ್ಮ ಕಾರ್ಯ ಸುಲಭವಾಯಿತೆಂದು ತಿಳಿದು ಕೊಳ್ಳುವದು ತಪ್ಪು. ಸರಕಾರವು ಈ ಧೋರಣೆಯಲ್ಲಿ ಮುಕ್ತಸ್ವಾತಂತ್ರ್ಯವನ್ನೇ ತೋರಿಸಿದೆ. ಈ ಸ್ಥಾನಕ್ಕೆ ಅವಶ್ಯವಿರುವ ಅರ್ಹತೆಯನ್ನು ಗಳಿಸಿಕೊಳ್ಳುವ ಹೊಣೆಯನ್ನು ಶಿಕ್ಷಕರ ಮೇಲೆಯೇ ಹೊರಿಸಿದೆ. ಮಾಸ್ತರರೆಲ್ಲ 'ಗುರುಗಳು' ಎಂದು ಸಂಬೋಧಿಸಿದಾಗ ಸರಕಾರವು ಪರೋಕ್ಷವಾಗಿ ಪ್ರಾಚೀನ ಭಾರತದ ಶೈಕ್ಷಣಿಕ ಪರಂಪರೆಯನ್ನು ಆದರ್ಶವಾಗಿಟ್ಟುಕೊಂಡೇ ಶಿಕ್ಷಕರು ಸಾಗಬೇಕೆಂದು ಸೂಚಿಸುತ್ತದೆ. ಶಾಲೆಗಳೆಲ್ಲ ನಿಜವಾಗಿಯೂ 'ಆಶ್ರಮ'ಗಳಾಗಬೇಕೆಂದು ಸರಕಾರದ ಮನೀಷೆಯಿದೆ.

ಶಿಕ್ಷಕರ ಸ್ಥಾನಮಾನಗಳು ಹೆಚ್ಚಾಗಬೇಕಾದರೆ ನಿದ್ಯಾಬಲವೂ ಸಾಕಷ್ಟು ಬೇಕೇ ಬೇಕು. ಈಗಿರುವ ಜ್ಞಾನ ಮಟ್ಟವನ್ನು ಬೆಳಸಿಕೊಳ್ಳಬೇಕು. ಸಾಮಾನ್ಯವಾಗಿ ಪರೀಕ್ಷೆ ಪಾಸಾದರೂ ಕೂಡಲೆ ನಾವು ಎಲ್ಲವನ್ನು ಕಲಿತಿದ್ದೇವೆ ಎಂದು ತಿಳಿದುಕೊಳ್ಳುವ ರೂಢಿ ಬೆಳೆದು ಬಂದಿದೆ. ಆದರೆ ಶಿಕ್ಷಕನು ಯಾವಾಗಲೂ ವಿದ್ಯಾರ್ಥಿಯೇ! ಜ್ಞಾನವನ್ನು ಉಳಿಸಿಕೊಳ್ಳುವದು ಮತ್ತ ಗಳಿಸಿಕೊಳ್ಳುವದು ಶಿಕ್ಷಕನ ನಿತ್ಯ ಕರ್ತವ್ಯವಾಗಬೇಕು. ಸರಕಾರವು ಶಿಕ್ಷಕರಿಗಾಗಿಯೇ ಒಂದು ಕೇಂದ್ರ ಸ್ಥಳದಲ್ಲಿ ಗ್ರಂಥಾಲಯವನ್ನು ತೆರೆಯಬೇಕು. ಉತ್ತಮವಾದ ಮಾಸಿಕ ಪತ್ರಿಕೆ ಮತ್ತು ದಿನಪತ್ರಿಕೆಗಳು ಪ್ರತಿ ಶಾಲೆಗೂ ಸಿಗುವ ವ್ಯವಸ್ಥೆಯಾಗಬೇಕು.

ಸ್ವತಂತ್ರ ಭಾರತದ ಭಾವೀ ನಾಗರಿಕರಾದ ಬಾಲಕರ ಆದರ್ಶ ಪುರುಷರಾದ ಶಿಕ್ಷಕರು ಸ್ವಾಭಿಮಾನಿಗಳೂ ಮತ್ತು ಸ್ವಾತಂತ್ರ್ಯ ಪ್ರಿಯರೂ ಆಗಲೇಬೇಕು. ಶಿಕ್ಷಕರು ಅನೇಕ ಅನನುಕೂಲ ಪರಿಸ್ಥಿತಿಗಳಲ್ಲಿ ಕೆಲಸ ಮಾಡುವ ಪ್ರಸಂಗ ಬಗೆಬಹುದು. ಸಾಧ್ಯವಿದ್ದಮಟ್ಟಿಗೆ ಧೈರ್ಯದಿಂದಲೂ ಸ್ವಾಭಿಮಾನದಿಂದಲೂ ಕಾರ್ಯ ಸಾಧಿಸಬೇಕು.

ಸ್ವತಂತ್ರ ಭಾರತದಲ್ಲಿ ಎಲ್ಲ ನೌಕರರೂ ಸರಿಸಮಾನರು; ಜನತಾ ಸೇವೆಯನ್ನು ಮಾಡುವ ಹಕ್ಕು ಎಲ್ಲರಿಗೂ ಸಮನಾಗಿದೆ. ಈ ಸತ್ಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ತಮ್ಮ ಜೀವನವನ್ನು ಸಾಗಿಸಬೇಕು. ಉಳಿದ ಪಾತೆಗಳ ಅಧಿಕಾರಿಗಳನ್ನು ಕಂಡು ಶಾಲೆಗೆ ಭೆಟ್ಟಿ ಕೊಡುವಂತೆ ಪ್ರಯತ್ನಿಸಬೇಕು. ಈಗ ಹೀಗೆ ಮಾಡದಿರುವಪರಿಪಾಠವೇ ಶಿಕ್ಷಕರ ಗತಿ ಹೀಗಾಗಿರಬೇಕು. ತಾವು ಕಡಿಮೆಯಾಜುವರೆಂಬ ಭಾವನೆ ತೊಡೆದು ಹಾಕಲೇಬೇಕು. ಆದರೂ ವಿದ್ಯೆಯ ಬಾಹ್ಯ ಲಕ್ಷಣವಾದ ವಿನಯವು ತಿಳಿಯದಿರಲಿ!

ಒಟ್ಟಾರೆ ಶಿಕ್ಷಕರಲ್ಲಿ ಹೊಸ ದೃಷ್ಟಿ ಬೇಕು; ಭಾರತದ ಘನತೆಯನ್ನು ಬೆಳೆಯಿಸಬಲ್ಲ ಹೊಸ ಸೃಷ್ಟಿ ಬೇಕು.

ಶಾರೀರಿಕ ಶಿಕ್ಷಣವೂ, ಜನತೆಯ ಹಾಗೂ ಸರಕಾರದ ಕರ್ತವ್ಯಗಳೂ

ಲೇಖನ:— ಶ್ರೀ. ಬ. ವೀ. ಮೂಲಿಮನೆ, ಇಟಗಿ.

ಕಳೆದ ಕೆಲ ವರ್ಷಗಳಿಂದ ಶಾರೀರಿಕ ಶಿಕ್ಷಣದ ಬಿರುಗಾಳಿಯು ಬಲವಾಗಿ ಬೀಸುತ್ತಿದ್ದುದು ಭಾರತದ ಭಾಗ್ಯೋದಯದ ಹೆಗ್ಗುರುತು. ಈಗಾಗಲೇ ಅನೇಕ ಅಲ್ಪಾವಧಿಯ ಶಾರೀರಿಕ ಶಿಕ್ಷಣ ಶಿಬಿರಗಳು ತೆರೆಯಲ್ಪಟ್ಟು; ನೂರಾರು ಶಿಕ್ಷಕರು ಶಿಕ್ಷಣವನ್ನು ಹೊಂದಿರುವರು. ಸ್ವತಂತ್ರ ಭಾರತಕ್ಕೆ ತಕ್ಕ ನಾಗರಿಕರನ್ನು-ಭಾರತದ ಭಾವೀ ಆಧಾರ ಸ್ತಂಭಗಳನ್ನು-ಸಿದ್ಧಪಡಿಸುವ ಸಂಪೂರ್ಣ ಹೊಣೆಯು ಶಾರೀರಿಕ ಶಿಕ್ಷಣವ ಶಿಕ್ಷಕರ ಮೇಲಿದ್ದು, ಅದನ್ನವರು ಎಷ್ಟರ ಮಟ್ಟಿಗೆ ಯಶಸ್ವಿಯನ್ನಾಗಿ ಮಾಡುವರೆಂಬದನ್ನು ಭವಿಷ್ಯತ್ತು ನಿರ್ಣಯಿಸುವದು. ಸರಕಾರವು ಇದಕ್ಕಾಗಿ ನೀರಿನಂತೆ ಹಣವನ್ನು ಸೂರೆಗೈಯ್ಯುತ್ತಿರುವರು, ಆದರೆ ಈ ವಿಷಯದಲ್ಲಿ ಶಾರೀರಿಕ ಶಿಕ್ಷಣದ ಶಿಕ್ಷಕರಿಗಾಗುವ ಆಡೆ-ತಡೆಗಳಾವವು? ಅವುಗಳನ್ನು ನೀಗುವ ಉಪಾಯಮಾರ್ಗಗಳಾವವು? ಇವುಗಳನ್ನು ಯೋಚಿಸುವ ಮೊದಲು ಶಾರೀರಿಕ ಶಿಕ್ಷಣದ ಇತಿಹಾಸವನ್ನು ಸ್ಥೂಲವಾಗಿ ವಿಹಂಗಮ ದೃಷ್ಟಿಯಿಂದ ಅವಲೋಕಿಸೋಣ.

ವೇದಕಾಲದಲ್ಲಿ ಮಗುವು ಉಪನಯನ ಸಂಸ್ಕಾರವನ್ನು ಹೊಂದಿ, ಗುರುಕುಲವನ್ನು ಸೇರಿ ವಿದ್ಯಾರ್ಜನೆಯನ್ನು ಮಾಡಬೇಕಾಗುತ್ತಿತ್ತು. ಭಾರತೀಯ (ಗುರುಕುಲ) ಶಿಕ್ಷಣ ಪ್ರಣಾಲಿಯಲ್ಲಿ ಶಾರೀರಿಕ ಶಿಕ್ಷಣಕ್ಕೆ ಪ್ರತ್ಯೇಕವಾದ ಏರ್ಪಾಡು ಇಲ್ಲದಿದ್ದರೂ ನೀರು ಜಗ್ಗುವದೂ, ಕಟ್ಟಿಗೆಯನ್ನೊಡೆಯುವದೂ, ಬಟ್ಟೆಗಳನ್ನೊಗೆಯುವದೂ ಸಮಿತ್ತುಗಳನ್ನಾಯ್ದು ತರುವದೂ ಮೊದಲಾದ ಗೃಹೋಪಯೋಗಿ ಕೆಲಸಗಳನ್ನು ಮಗುವು ಮಾಡಲೇಬೇಕಾಗುತ್ತಿದುದರಿಂದ ಬೈಲುಹವೆಯಲ್ಲಿ ಸಾಕಷ್ಟು ವ್ಯಾಯಾಮವು ಸಹಜವಾಗಿ ಸಿಕ್ಕುತ್ತಿತ್ತು. ಗುರುಕುಲಗಳು ಕೂಡ "Open air School" ಗಳಾಗಿದ್ದುವು. "ನಾಯಮಾತ್ಮಾ ಬಲಹೀನೇ ಲಭ್ಯತೆ" "ಶರೀರ ಮಾದ್ಯಂ ಖಲು ಧರ್ಮ ಸಾಧನಮ್" ಇವುಗಳ ದೃಢ ಶಿಲುಪಿಕೆಯ ಮೂಲಕ ಪ್ರತಿಯೊಬ್ಬ ತರುಣನು ಆಶಾವಾದಿ, ಸುದೃಢ, ಬಲಿಷ್ಠನಾಗಬಯಸುತ್ತಿದ್ದನು. ಮೇಲ್ಕಾಣಿಸಿದ ಗೃಹೋಪಯೋಗಿ ಕಾರ್ಯಗಳಲ್ಲದೆ, ಬೇಟೆಯಾಡುವದು, ಬಿಲ್ಲು-ಬಾಣಗಳನ್ನುಪಯೋಗಿಸುವದು, ಮೊದಲಾದವುಗಳಿಂದ ಬಲಸಂವರ್ಧನೆಯನ್ನು ಮಾಡಿಕೊಂಡು ನೂರುವರ್ಷಗಳವರೆಗೆ ಬದುಕುವ ಹೆಬ್ಬಾಸೆಯು ವೇದಕಾಲೀನರಲ್ಲಿ ಕಂಡುಬರುತ್ತಿತ್ತು.

ರಾಮಾಯಣ-ಮಹಾಭಾರತಗಳ ಕಾಲದಲ್ಲಿಯೂ ಕೂಡ ಇದೇ ಕ್ರಮವಿದ್ದುದು ಕಂಡುಬರುತ್ತದೆ. ಯೋಗಿವರ್ಯ ಭಗವಾನ್ ಶ್ರೀಕೃಷ್ಣನು ಗುರು ಸಾಂದೀಪನಲ್ಲಿ ಕಟ್ಟಿಗೆಯನ್ನೊಡೆಯುತ್ತಿದ್ದನಂತೆ. ಈ ಬಗೆಯ ಉದಾಹರಣೆಗಳು ಪುರಾತನ ಭಾರತೀಯ ಸಾಹಿತ್ಯದಲ್ಲಿ ಹೇರಳವಾಗಿ ಸಿಕ್ಕುತ್ತವೆ.

ಮೊಗಲ-ಮರಾಠರ ಕಾಲದಲ್ಲಿಯೂ ಶಾರೀರಿಕ ಶಿಕ್ಷಣಕ್ಕೆಂದು ಬೆಲೆಯಿತ್ತು. ಕರುಣರು ಕುಸ್ತಿ, ದಾಂಡಪಟ್ಟೆ, ಕತ್ತಿ-ಕಠಾರಿಗಳ ಉಪಯೋಗ, ಕುದುರೆಯನ್ನೇರುವದು, ಇತ್ಯಾದಿಗಳ ಮೂಲಕವಾಗಿ ಬಲಸಂವರ್ಧನೆಯನ್ನು ಮಾಡಿಕೊಳ್ಳುತ್ತಿದ್ದರು.

ಸನ್ ೧೮೫೭ರ ತರುವಾಯ ಪ್ರಾರಂಭವಾದ ಬ್ರಿಟಿಶರ ಆಳಿಕೆಯಲ್ಲಿ "ಮೆಕಾಲೆ ಸಿಸ್ಟಿಮ್" ದ ಪರಿಣಾಮವಾಗಿ ಜನತೆಯು ಕೇವಲ ಬೌದ್ಧಿಕ ವಿಕಾಸದ ಬೆನ್ನು ಹತ್ತಿ ಸರ್ವಸ್ವವನ್ನು ಕಳೆದುಕೊಂಡಿತು. "ಹತ್ಯಾರೀ ಆಕ್ಟ್" ದಿಂದಂತೂ ಭಾರತೀಯ ಶಾರೀರಕ ಬಲದ ಓಹರಿಗಾರಂಭವಾಯಿತು. ಸನ್ ೧೮೮೦ರಿಂದ ಸಾಲೆಗಳ ವ್ಯಾಯಾಮ ಶಿಕ್ಷಕರನ್ನು ನಿಯಮಿಸಲಾಗುತ್ತಿದ್ದರಾದರೂ ಯಾವ ಪರಿಣಾಮವೂ ಆಗಲಿಲ್ಲ. ಯಾಕೆಂದರೆ ಆಗಿನ ಕಾಲದ ಶಾರೀರಿಕ ಶಿಕ್ಷಣಕ್ಕೆ ಅನ್ಯಶಾಸ್ತ್ರಗಳ ಸಂಬಂಧವಿದ್ದಿಲ್ಲ. ಶಿಕ್ಷಕನೂ ಇತರ ಪೋಷಕ ಶಾಸ್ತ್ರಗಳ ಗಂಧವನ್ನರಿಯದವನಾಗಿರುತ್ತಿದ್ದನು. ಈ ಮೂಲಕ ಭಾರತೀಯ ಶಾರೀರಿಕ ಶಿಕ್ಷಣದ ಪಾರಜವು ಶೂನ್ಯಾಂಶಕ್ಕೆಳಿಯಿತು. ಸನ್ ೧೯೨೭ ರವರೆಗೂ ಇದೇ ಪರಿಸ್ಥಿತಿಯಿತ್ತು. ಆ ವರ್ಷ ಶಾರೀರಿಕ ಶಿಕ್ಷಣದ ಬಗ್ಗೆ ಒಂದು ಯೋಜನೆಯನ್ನು ಸಿದ್ಧಪಡಿಸಲೋಸುಗ ಸರಕಾರದವರು ನಿಯಮಿಸಲ್ಪಟ್ಟ "ಮುನಸಿ ಸಮಿತಿಯು" ಸನ್ ೧೯೨೯ರಲ್ಲಿ ತನ್ನ ವರದಿಯನ್ನು ಒಪ್ಪಿಸಿತಾದರೂ ಪರಕೀಯರಾಡಳಿತದ ಪರಿಣಾಮವಾಗಿ ಕಾರ್ಯವದಲ್ಲಿಯೇ ಉಳಿಯಿತು. ಸನ್ ೧೯೩೭ರಲ್ಲಿ ಕಾಂಗ್ರೆಸ ಸರಕಾರ ಅಧಿಕಾರಾರೂಢವಾದ ಮೇಲೆ ಸ್ವಾಮಿ ಕುವಲಯಾನಂದರ ನೇತೃತ್ವದಲ್ಲಿ ಮತ್ತೊಂದು ಸಮಿತಿಯು ನಿಯಮಿಸಲ್ಪಟ್ಟಿತು. ಈ ಸಮಿತಿಯ ದೃಶ್ಯಫಲವೇ ಇಂದಿ

ಂದೀವಲಿಯ ಶಾರೀರಿಕ ಶಿಕ್ಷಣ ಸಂಸ್ಥೆ. ಅಖಿಲ
ುಂಬಯಿ ಇಲಾಖೆಯಲ್ಲಿಯು ಅಲ್ಪಾವಧಿಯ ಶಾರೀರಿಕ
ಕ್ಷಣ ಶಿಬಿರಗಳಿಗೆ ಶಾಯಿಯಾಗಿದೆ ಈ ಸಂಸ್ಥೆ. ಇರಲಿ.

ಈಗಿನ ಶಾರೀರಿಕ ಶಿಕ್ಷಣದ ಗುರಿಯು ಮಕ್ಕಳನ್ನು
ೀವಲ ಜಟ್ಟಿಗಳನ್ನಾಗಿ ಮಾಡುವದಲ್ಲ. ಅರ್ಥಪತ್ತಾದಂದರೆ ಸಹಜ ವೃತ್ತಿಗಳಿಗನುಸಾರವಾದ ಚಟುವಟಿಕೆಳಿಂದ ಮಕ್ಕಳ ಮೈ-ಮನ-ಬುದ್ಧಿಗಳನ್ನು ವಿಕಾಸಗೊಳಿಸುವದು ಇದರ ರೀತಿ. ಮಕ್ಕಳ ಮೈ-ಮನ-ಬುದ್ಧಿಗಳು ಪ್ರತ್ಯೇಕವಾಗಿ ಬೆಳೆಯಲಾರವು; ಅವು ಏಕಕಾಲಕ್ಕೆ ಬೆಳೆಯುವವೆಂಬದನ್ನು ಆಧುನಿಕ ಶಿಕ್ಷಣ ಶಾಸ್ತ್ರಜ್ಞರು ಂಡು ಹಿಡಿದಿದ್ದಾರೆ. ಲಂಗ್ಲೆ ವಿದ್ವಾಂಸನಾದ ಸ್ಪೆನ್ಸ್ಲ್''ಯು "ಜವಗೊಪ್ಪಿಸಿದ ಕಾರ್ಯಗಳನ್ನು ಸಂತೋದಿಂದ-ಸಹಜವಾಗಿ ಮಾಡಲು ಸಮರ್ಥನೂ, ಶುದ್ಧ ಜ-ಶಾಂತವಾದ ಬುದ್ಧಿಯುಳ್ಳವನೂ, ಪ್ರಕೃತಿಯು ಯುಮಗಳಿಗೊಳಪಟ್ಟು-ಇಂದ್ರಿಯಗಳನ್ನು ಹಿಡಿತದಲ್ಲಿಟು ಾಳ್ಳಬಲ್ಲ-ಅರ್ಥವೃತ್ತಿಯು ವಿರುದ್ಧವಾಗಿರುವ, ನೀಚ ರ್ಯಗಳಿಗೆ ಹೇಸಿ-ಹಿಂದಾಗುವ ಮನಸ್ಸುಳ್ಳವನೇ ಶಿಕ್ಷಿತು'' ಎಂದು ಜೀಳಿ ಇಂಥವನನ್ನಾಗಿ ಮಾಡುವದೇ ಕ್ಷಣ" ವೆಂದು ಸಾರಿ, ಶಿಕ್ಷಣದ ವಿಷಯವಾಗಿ ಪೂರ್ವದ ಭಾವನೆಯನ್ನು ಅಂದರೆ "ಮಕ್ಕಳ ಬರಿದಾದ ಲೆಯಲ್ಲಿ ವಿಷಯಗಳನ್ನು ತುಂಬುವದೇ ಶಿಕ್ಷಣ" ಬುದನ್ನು ಅಳಿಸಿ ಬಿಟ್ಟಿದ್ದಾನೆ. ಶಿಕ್ಷಣದ ಈ ಮೂರು ಂಗಗಳಲ್ಲಿ ಮೊದಲನೆಯದಾದ-ಹಾಗೂ ಮುಖ್ಯವಾದ ೀರವನ್ನು ಉಪೇಕ್ಷಿಸಲಾಗದು. ಶರೀರ ಶಾಸ್ತ್ರ, ಹಾರ ಶಾಸ್ತ್ರ, ಮಾನಸ ಶಾಸ್ತ್ರ, ಪ್ರಥಮ ಚಿಕಿತ್ಸೆಗಳ ರಿಚಯವಿದ್ದ ಈಗಿನ ಶಾರೀರಿಕ ಶಿಕ್ಷಣದ ಶಿಕ್ಷಕದಲೇ ಈ ಗುರಿಯು ಸಾಧಿಸಬಲ್ಲುದು.

ಆದರೂ ಸದ್ಯದ ಶಾರೀರಿಕ ಶಿಕ್ಷಣದ ಬಗೆಗೆ ಜನತೆಲ್ಲೊಂದು ಬಗೆಯ ಜುಗುಪ್ಸಾ ಭಾವವು ನಿರ್ಮಾಣಗಿ, ಸಾಂಕ್ರಾಮಿಕ ರೋಗದಂತೆ ಬೆಳೆದು, ಜನಮನವನ್ನು ಕದಡಿ, ಶಾಲೆಯ, ಹಾಗೂ ಶಾರೀರಿಕ ಶಿಕ್ಷಣದ ಸ್ಕರ ಬಗೆ ಆನಾದರವು ಕಂಡುಬರುತ್ತಿದೆ. ಸುಶಿಕ್ಷಿತು, ಮುಂದಾಳುಗಳು ಈ ಬಗ್ಗೆ ಜಾಗ್ರತೆ ವಹಿಸಿ, ಕದ ವ ವಾತಾವರಣವು ತಿಳಿಯಾಗುವಂತೆ ಶ್ರಮಿಸಿ, ಮಾನ್ಯ ಜನತೆಯ ಸ್ನೇಹ-ಸಹಕಾರಗಳು ಲಭಿಸುತೆ ಮಾಡಿ ಸರಕಾರದ ಈ ಯೋಜನೆಯನ್ನು ಯಶಸ್ವಿಗಿಸುವಂತೆ ಮಾಡುವಲ್ಲಿ ಸಹಕರಿಸಬೇಕು.

ಇನ್ನು ಶಾರೀರಿಕ ಶಿಕ್ಷಣದ ಶಿಕ್ಷಕರಿಗೆ ಬರುವ ಡಕು-ತೊಂದರೆಗಳನ್ನೂ, ಅವುಗಳ ನಿವಾರಣೋಯಗಳನ್ನೂ ಯೋಚಿಸೋಣ.

ಮೊದಲನೆಯದು ಆಟದ ಬೈಲು. ಶಾರೀರಿಕ ಶಿಕ್ಷಣ ಯೋಜನೆಯು ಅಪೇಕ್ಷೋ ಉತ್ತಮವಿದ್ದರೂ ಆಟದ ಬೈಲಿನ ವಿಷಯ ಅದು ಅಪೂರ್ಣವೇ. ಬದಿಯಲ್ಲಿ ವಿಸ್ತಾರವಾದ ಬಯಲುಗಳುಳ್ಳ ಭಾಗ್ಯವಂತ ಶಾಲೆಗಳು ಬಹಳ ಕಡಿಮೆ. ಶಾಲೆಯ ಕೋಣೆಗಳಲ್ಲಿ, ಇಲ್ಲವೆ ಬದಿಯು ಯಾವದೊಂದು ಸ್ಥಳದಲ್ಲಿ ಅನಿವಾರ್ಯವಾಗಿ ಶಾರೀರಿಕ ಶಿಕ್ಷಣವನ್ನು ಕೊಡಬಹುದಾದರೂ ಅದು ಅಷ್ಟೊಂದು ಸಮಾಧಾನಕಾರಕವಾಗಲಾರದು. ಸರಕಾರದವರು ಈ ವಿಷಯದಲ್ಲಿ ಮನಸ್ಸು ಹಾಕಿ, ಯೋಗ್ಯವಾದ ಬೈಲು ದೊರೆಯುವಂತೆ ಏರ್ಪಾಡು ಮಾಡಬೇಕು.

೨. ಉಪಕರಣ ಹಾಗೂ ಪುಸ್ತಕೀಯ ಸಾಹಿತ್ಯ:— ಯಾವದೊಂದು ಪಾಠವನ್ನು ಹೊಡುವಾಗ ಅದಕ್ಕೆ ಸಂಬಂಧಿಸಿದ ಉಪಕರಣಗಳಿಂದ ಬಾಲಕರಲ್ಲಿ ಆ ವಿಷಯಕವಾದ ಅಭಿರುಚಿಯು ಉತ್ಪನ್ನವಾಗುವದು. ಶಾ. ಶಿಕ್ಷಣದ ವಿಷಯಕ ಅಭಿರುಚಿ ಉತ್ಪನ್ನವಾಗಲು, ಲಾಠಿ ಕಾಡಿ, ಲೋಡು ಇ. ಉಪಕರಣಗಳು ಅತ್ಯಾವಶ್ಯಕ. ಇವುಗಳನ್ನು ಸರಕಾರವು ತೀವ್ರವೇ ಪೂರೈಸಬೇಕು. ಅದರಂತೆ ಈ ವಿಷಯದಲ್ಲಿ ಆಸ್ಥೆಯುಂಟಾಗಲು ಇದನ್ನು ಪರೀಕ್ಷೆಯ ವಿಷಯವೆಂದು ಗ್ರಹಿಸಿ, ಈ ವಿಷಯದ ಬಗ್ಗೆ ದೇಶೀ ಭಾಷೆಗಳಲ್ಲಿ ಪುಸ್ತಕಗಳನ್ನು ಸಿದ್ಧ ಪಡಿಸಿ ಪ್ರಕಟಿಸಬೇಕು.

೩. ವೈದ್ಯ ಇಲ್ಲವೆ ಡಾಕ್ಟರರ ಸಲಹೆ:— ಶಾ. ಶಿಕ್ಷಣದಲ್ಲಿ ವೈದ್ಯ ಇಲ್ಲವೆ ಡಾಕ್ಟರರ ಸಲಹೆ ಸಹಕಾರಗಳು ದೊರೆತಷ್ಟು ಒಳಿತು. ಶಾ. ಶಿಕ್ಷಣದಿಂದ ಮಕ್ಕಳ ಶರೀರದ ಮೇಲೆ ಆಗುವ ಪರಿಣಾಮಗಳೇನು? ಅವು ಯೋಗ್ಯವೇ? ಬಾಲಕನಿಗಾಗುತ್ತಿರುವ ವ್ಯಾಯಾಮವು ಹೆಚ್ಚೇ? ಕಡಿಮೆಯೇ? ಶಾರೀರಿಕ ವ್ಯಂಗಗಳನ್ನು ಹೋಗಲಾಡಿಸಲು ಯಾವ ಬಗೆಯ ವ್ಯಾಯಾಮವನ್ನು ಕೊಡಬೇಕು? ಈ ಎಲ್ಲ ವಿಷಯಗಳಲ್ಲಿ ಡಾಕ್ಟರರ ಸಲಹೆ ಅಮೂಲ್ಯವಾದುದು. ಈ ಬಗ್ಗೆ ಸಾಲೆಗೊಬ್ಬ ವೈದ್ಯ ಇಲ್ಲವೆ ಡಾಕ್ಟರರು ದೊರೆಯುವದು ಅಶಕ್ಯವಾದರೂ ಪ್ರತಿ ಮೂರು ತಿಂಗಳಿಗೊಮ್ಮೆಯಾದರೂ ಅವರ ಭೆಟ್ಟಿಯ ಏರ್ಪಾಡು ಆಗಬೇಕು.

೪. ಆಹಾರ:— ಮಕ್ಕಳ ಶಾರೀರಿಕ ಬೆಳವಣಿಗೆಯ ಜೊತೆಗೆ ಅವರ ಆಹಾರ-ವಿಶ್ರಾಂತಿ-ನಿದ್ದೆ ಇವುಗಳ ಕಡೆಗೂ ಗಮನವೀಯಲೇಬೇಕು. ಇವುಗಳ ಹೊಣೆಯು ಬಹುತರವಾಗಿ ಪಾಲಕರ ಮೇಲಿರುತದಾದರೂ ನಮ್ಮ ನಾಡು ಧನ-ಧಾನ್ಯ ಸಂಪನ್ನವಾಗುವವರೆಗೆ ಶಾಲೆಯು ಮಕ್ಕಳಿಗೆ ಯೋಗ್ಯ ಆಹಾರವು ದೊರೆಯುವ ಏರ್ಪಾಡು-ಜನತಾ ಸರಕಾರದಿಂದಲೇ ಆಗುವದವಶ್ಯ.

ಇನ್ನೆ ತೊಡಕು-ತೊಂದರೆಗಳನ್ನು ನೀಗಿ ಶಾರೀರಿಕ ಶಿಕ್ಷಣವು ಬಲಶಾಲಿಯಾಗಿ ಬಾಳಲೆಂದು ಬಯಸಿ, ಭಗವಂತನಲ್ಲಿ ಬೇಡಿ ವಿರಮಿಸುವೆ. ———

ಭಾರತದಲ್ಲಿ ಜನತಾ ಶಿಕ್ಷಣ

ಲೇಖಕರು ಶ್ರೀ. ಡಿ. ಜಿ. ಭಟಕಳ, ಗಂ. ಟ್ರೇ. ಕಾ., ಧಾರವಾಡ.

ಯಾವದೊಂದು ರಾಷ್ಟ್ರವು ತನ್ನ ಕಾಲಮೇಲೆ ನಿಂತು ಬಾಳಬೇಕಾದರೆ ಆ ರಾಷ್ಟ್ರದ ಪರಿಪೂರ್ಣವಾದ ಅಂತರ್ಗತ ವಿಕಾಸವಾಗಬೇಕಾಗುತ್ತದೆ. ಬಹು ದಿವಸ ಬಾಳುವ ಮುಂಧೋರಣದ ಹಾದಿಯನ್ನು ಹಿಡಿಯಬೇಕಾಗುತ್ತದೆ. ಇಂದಿನ ಯಾಂತ್ರಿಕ ಯುಗದಲ್ಲಿ ಯಾವ ರಾಷ್ಟ್ರಕ್ಕಿಂತಲೂ ಹಿಂದೆ ಬೀಳದೆ, ಸರಿಸಮಾನತೆಯಿಂದ ಹೆಗಲಿಗೆ ಹೆಗಲು ಹಚ್ಚಿ ಜಗತ್ತಿನ ಶಾಂತಿಗೆ ಹೋರಾಡಬೇಕಾಗುತ್ತದೆ. ಬಾಹುಗಳಲ್ಲಿ ಕರ್ತವ್ಯದ ವಜ್ರದ ಕೆಚ್ಚಿಯಿರಬೇಕು. ಹೃದಯದಲ್ಲಿ ರಾಷ್ಟ್ರದ ಅನುಕಂಪವು ತುಂಬಿ ತುಳುಕಬೇಕು. ಆ ರಾಷ್ಟ್ರದ ನೈತಿಕ, ಆಧ್ಯಾತ್ಮಿಕ ಬಲವು ವಿಕಸಿತವಾಗಬೇಕು. ಸ್ವಾಮಿಂರಾಷ್ಟ್ರೀಯ ಮನೋಧರ್ಮವೇ ಆ ರಾಷ್ಟ್ರದ ಕಣಕಣಗಳಲ್ಲಿ ತುಂಬಿರಬೇಕು. ಸ್ಫೂರ್ತಿ ಕೊಡುತ್ತಿರಬೇಕು. ಬರಿಯ ಯಾಂತ್ರಿಕ ವಿಚಾರಗಳು ಆಯಾ ರಾಷ್ಟ್ರದ ಭದ್ರತೆಗೆ ಹದಿಯಾಗಲಾರವು. ಇಂಥ ಮಹತ್ಕಾರ್ಯ ಹೇಗೆ ಆಗಬಲ್ಲದು? ನಮ್ಮನ್ನು ಜಾಗ್ರತಗೊಳಿಸುವ ಶಿಕ್ಷಣದಿಂದಾಗಬಹುದು. ಅಂಥ ಶಿಕ್ಷಣವನ್ನೇ ಇಂದು ಭಾರತದ ಜನವು ಬೇಡುತ್ತಿರುವದು.

ನೂರಾರು ವರುಷಗಳ ವರೆಗೆ ಪರಕೀಯರ ಆಳಿಕೆಯಿಂದ ನಮ್ಮ ಭಾರತವು ನಿರಕ್ಷರಿಗಳ ಬೀಡಾಗಿದೆ. ಅವರು ತಮ್ಮ ದೇಶವನ್ನು ತ್ರಾನುಂತ ಮಾಡಿಕೊಳ್ಳುವ ಮಹತ್ವಾಕಾಂಕ್ಷೆಯು ಸ್ವಾರ್ಥದ ರಾಜಕೀಯ ಧೋರಣವೇ ಇವಕ್ಕೆ ಕಾರಣವು, ಎಂದು ತೋರಬಹುದು. ಅದರ ಪರಿಣಾಮವಾಗಿ ಪ್ರತಿ ನಿತ್ಯ ಕಾಣುವ ತಾಂಡವದಿಂದ ಹೃದಯವು ತಲ್ಲಣಿಸುವಂತಿದೆ. ಸ್ವಲ್ಪ ಜನರು ಶಿಕ್ಷಿತರಿದ್ದರೆ ಅವರು ಯಾಂತ್ರಿಕ ಶಿಕ್ಷಣದ ಗೊಂಬೆಗಳಾಗಿರುವರು. ತನ್ನ ಸ್ವಂತ ಬುದ್ಧಿಯನ್ನು ಉಪಯೋಗಿಸುವ ವಿವೇಚನೆಯನ್ನು ಕಳಕೊಂಡು ಪರದಾಸ್ಯದ ಶಿಕ್ಷಣವಂತರಾಗಿರುವರು. "ಶಿಕ್ಷಣವಂತರು ಪರಾವಲಂಬಿಗಳು" ಎಂಬ ನಿರಕ್ಷರಿಗಳ ಉಕ್ತಿಯನ್ನು ಸಾರ್ಥಕಪಡಿಸುವರು. ತನ್ನ ಸಂಸ್ಕೃತಿಯನ್ನು ಮರೆತು ಪರಸಂಸ್ಕೃತಿಗೆ ಮಾರು ಹೋಗಿರುವ ಪೋಲಿ ವಂತರಾಗಿರುವರು. ತನ್ನ ರಾಷ್ಟ್ರದ, ತನ್ನ ಕರ್ತವ್ಯ ಅರಿವಿಲ್ಲದ ಕಾರಕೂನ ಮನೋವೃತ್ತಿಯವರಾಗಿರುವರು.

ಆದರೆ ಭಾರತವು ಇಂದು ಸ್ವತಂತ್ರವಾಗಿದೆ. ತನ್ನ ಕಾಲ ಮೇಲೆ ನಿಂತುಕೊಳ್ಳುವ ಜವಾಬದಾರಿ ಬಿದ್ದಿದೆ. ಜಗತ್ತಿನಲ್ಲಿ ಯಾರೊಡನೆಯೂ ಹಿಂದೆ ಬೀಳುವದಿಲ್ಲ ಎಂದು ಮನವರಿಕೆ ಮಾಡಿ ಕೊಡುವ ರಾಜಕಾರಣ ನೈಪುಣ್ಯವನ್ನು ತೋರಿಸಲಿದೆ. ಇದಕ್ಕೂ ಮುಂದೆ ಹೋಗಿ ಮಾನವ ಹಕ್ಕುಬಾಧ್ಯತೆಗಳಿಗೆ ಯಾವ ಅಂಕುಶವೂ ಇದಿರಾಗುವದಿಲ್ಲವೆಂಬ ನೈತಿಕ ಉಪದೇಶವನ್ನು ಧೈರ್ಯದಿಂದ ಜಗತ್ತಿಗೆ ಸಾರುವ ಹೊಣೆ ಇದರ ಮೇಲೆ ಇದೆ. ಮಾನವತೆಯನ್ನು ಮರೆತು ಆಕ್ರಮಣ-ಕೊಳ್ಳೆ ಹಚ್ಚುವ ತಿಳಿಗೇಡಿಗಳಿಗೆ ಶಾಸನ ಮಾಡುವ ವೀರ ಹಿರಿತನದ ಭಾರವು ವಹಿಸಲಿದೆ. ಈ ಪ್ರಕಾರ ಭಾರತವನ್ನು ಸರ್ವತೋಮುಖವಾಗಿ ಬಲಯುತ ಮಾಡಬೇಕಾದ ಅದರ ಕರ್ತವ್ಯ-ಮಾಡಲು ಇವು ಒಪ್ಪ ಕಂಕಣರಾಗಬೇಕು. ತನ್ನ ಅಂತಃಶಕ್ತಿಯನ್ನು ಪರಿಪೂರ್ಣ ವಿಕಸಿಗೊಳಿಸಿ ವಜ್ರಾಯುಧರಾಗಬೇಕು. ಒಟ್ಟಿನಲ್ಲಿ "ತನ್ನ ರಾಷ್ಟ್ರದ ಉಳಿವೇ ತನ್ನ ಉಳಿವು" ಎಂಬುದನ್ನು

ಾಡಲು ಸುವಿಧೆಗಳು ಮಾರ್ಗದರ್ಶಕರಾಗಬೇಕು. ದುವೆ ಭಾರತಕ್ಕೆ ಅವಶ್ಯವಿರುವ ಸಲ್ಲಿಸಬೇಕಾದ ಸೇವೆ.

ಆ ಸೇವೆಯೆಂದರೆ ನಿಶ್ಚಿಂತತೆಯನ್ನು ನಿರ್ಮೂಲ ಮಾಡುವದು, ಇದಿರಾಗುವ ಉಚ್ಚ-ಅಡಚಣೆಗಳನ್ನು ದೂರ ಮಾಡುವದು, ಜನತೆಯಲ್ಲಿ ಯೋಗ್ಯವಿಚಾರ ಮಾಡುವ ಶಕ್ತಿಯನ್ನು ಪರಿಧಿಯನ್ನು ಪರಿಮಾಡುವದು. ಅದಕ್ಕಾಗಿ ಪ್ರೌಢ ಶಿಕ್ಷಣ ಸಾರ್ವತ್ರಿಕವಾಗುವದು. ಪ್ರೌಢಶಿಕ್ಷಣಕ್ಕೆ ಬೇಕಾದ ಓದು ವಿಷಯ ಒಂದೇ ಇರದೆ, ಜಲಚ್ಛಿತ್ರ, ಚಾನುಲಿ, ಜೀವನ ಅವಶ್ಯಕವಾದ ಭೌಗೋಳಿಕ, ಸಾಂಸ್ಕೃತಿಕ, ಐತಿಹಾಸಿಕ, ವೈಜ್ಞಾನಿಕ ಸಾಧನಸಾಮಗ್ರಿಗಳು, ವಸ್ತುಸಂಗ್ರಹಾಲಯ ಇರಬೇಕು. ಇದರಿಂದ ಶಿಕ್ಷಣ ರಾಷ್ಟ್ರ. ತಾವು ಮಾಡುತಕ್ಕ ಕರ್ತವ್ಯ ಜಾಗೃತವಾಗಿ ಗಾಢವಾದ ಅನುಭವಕ್ಕೆ ಕಾರಣವಾಗುವದು. ವೈಜ್ಞಾನಿಕವಾಗಿ ಅಸ್ಪೃಶ್ಯತೆಯ ಬೆಳವಣಿಗೆ ನಿಂತುಹೋಗುವದು. ಶಾಸ್ತ್ರೀಯ ಜ್ಞಾನವು ಕೆಲವು ಪರಿವಾರಗಳಲ್ಲಿ ಇನ್ನೆಲ್ಲ ಕಾರ್ಯಕಾರಣಗಳನ್ನು ಸೂಚ್ಯವಾದ ವೈಕರಣ ಅಲ್ಲ ಕಲಿಸಲಾಗುವ ಸ್ಥಾನವನ್ನೆಯಿರಬೇಕು. ರಕ್ತಮಿಂಚಿನ ಜಿಲ್ಲೆಗಳ ದೇಶವಾಗಿದ್ದು, ಕಳ್ಳಿಗಳ ಸಂಖ್ಯೆಯಿದ್ದ ಅಭಿವೃದ್ಧಿಯೇ ರಾಷ್ಟ್ರ ಜೀವಜೀವನೆಯೆಂಬ ಭಾವನೆಯು ನೆಲೆಗೊಂಡಾಗ, ಪ್ರತಿಯೊಂದು ಪ್ರಾಥಮಿಕ ಶಾಲೆಯ ಸ್ಥಳವಿನಯವನ್ನು ಸುಧಾರಿಸುವದು ರಾಷ್ಟ್ರೀಯ ಬೆಳವಣಿಗೆಯೆಂದು ಮುಖ್ಯ ಸಾಧನವು ಇಚ್ಛಾಶಕ್ತಿಯ ಸ್ಥೈರ್ಯ ಹಾಗೂ ಉಪಯುಕ್ತತೆ ಒಕ್ಕಲಿಗರ ನಿಜವರ್ತನೆಗೆ ಅಂದ ಅಜ್ಞಾನದಿಂದ ಸುಖಮಯ ಜೀವನಕ್ಕೆ ಅಲ್ಲಿ ಸಾಧ್ಯವೆಂದು ಪ್ರತಿಯೊಬ್ಬ ಒಕ್ಕಲಿಗನಿಗೆ ಎನಿಸಲು ಜ್ಞಾನಸಂಪಾದನೆ ಬೆಳೆಸಿಕೊಳ್ಳಲು ಅಲ್ಲಲ್ಲಿ ಗ್ರಂಥಾಲಯ ಸ್ಥಾಪಿಸಬೇಕು. ಇದಲ್ಲದೆ ಸಭೆ, ಸಮ್ಮೇಳನ, ಪ್ರದರ್ಶನಗಳು ವೈಜ್ಞಾನಿಕ ಪ್ರಸಂಗವಲ್ಲಿ ಮುಖ್ಯವಾಗಿ ವಿಸ್ತರಣೆ, ಮೇಳಗಳು ಮುಂತಾದ ನಾಗರಿಕತೆಗೆ ಅವಶ್ಯವಾದ ಸಂಗತಿಗಳನ್ನು ಕಲಿಸುವ ಉಪಯೋಗವನ್ನೆಬಹುದು. ಜಗತ್ತಿನ ಪುರೋಭಿವೃದ್ಧಿಗಳ ಪ್ರದರ್ಶನವು ಅಂಥ ಕಾರ್ಯಕ್ರಮಗಳಲ್ಲಿವೆ ಸಾಧನಗಳ ಕಾರ್ಯಯೋಜನೆಗಳನ್ನು ಸಾಧಿಸಲಾಗಿ, ಉದ್ಯೋಗಾಭಿವೃದ್ಧಿ ಮಾಡುವ ವೈಜ್ಞಾನಿಕ ಪರಿಣಾಮವಾಗಬಹುದು. ಇಂಥ ಸಭೆ, ಸಮ್ಮೇಳನಗಳಲ್ಲಿ ಕೆಲಸಿಗು ಜನರೇ ಭಾಗವಹಿಸಿ, ಸಭೆಯು ಕಾರ್ಯವನ್ನು ನಡೆಸಿಕೊಂಡು ಹೋಗುವ ಶಿಕ್ಷಣ ಅವರಿಗೆ ಸಿಕ್ಕಿಯಬೇಕು.

ಪೌರಕ ಬೌದ್ಧಿಕ ಒಲವನ್ನೇ ಅಲ್ಲದೆ ಕಾರ್ಯಾಂಶ ಒಲವನ್ನು ಬೆಳೆಸಬೇಕು ಹಾಗೆ ಆತ್ಮಾವಲೋಕನವನ್ನು ವಿರೋಧಿಸಲಿಕ್ಕೆ ಸಮಸ್ಯೆಯಲ್ಲಿ ಶಿಸ್ತು ಸಂಘಟನೆಗಳನ್ನು ಉಂಟುಮಾಡಿಕೊಳ್ಳಬೇಕು. ಯುದ್ಧ ವಿದ್ಯೆಯನ್ನು ಕಲಿತು ಪುಸ್ತಕಾಲಯದಲ್ಲಿ ಜೀವಕ್ಕಾಗಿ ಒಲಿದಾಸ ಮಾಡಬೇಕು. ಈ ಪ್ರಕಾರ ತರಬೇತಿಯು ಮನೆಮನೆಗೆ ಓಡಿ ಒಡೆಗಳನ್ನು ನೆಲೆಗೊಳ್ಳಬೇಕು. ಸರಕಾರದ ಹಾದಿಯನ್ನೇ ನೋಡಿ ಸಂರಕ್ಷಿಸಿಕೊಳ್ಳುತ್ತೇನೆಂಬ ಮಾತಿಗೆ ಎಳ್ಳಷ್ಟು ಪುಷ್ಟಿ ಕೂಡಿ ಬಾರದು. ಅಂದರೆ ನಮ್ಮ ರಾಷ್ಟ್ರ, ನಮ್ಮ ಸಂಸ್ಕೃತಿ ಉಳಿದೀತು. "ಆರೋಗ್ಯ ಭಾಗ್ಯವು ಎಲ್ಲ ಸುಖ ಸಾಧನಗಳನ್ನು ಅನುಭವಿಸಲಿಕ್ಕೆ ಬೇಕೇ ಬೇಕು" ಎಂಬ ಮನೋಭಾವನೆಯನ್ನು ಜೀವನದಲ್ಲಿ ಅನುಸರಿಸಬೇಕು. ಈ ಬಲ ಭಾರತದ ಅನೇಕ ರೋಗಗಳ ನಿವಾರಣೆಯೆಂಬ ಭರವಸೆಯಿದೆ. ಎಷ್ಟೇ ಸೀಮಿತವಿಕ ವ್ಯವಸ್ಥೆಯಿದ್ದರೂ ಅಲ್ಪಸ್ವಲ್ಪ ಆರೋಗ್ಯವನ್ನು ತನ್ನ ರಕ್ಷಣೆಗೆ ಮಾಡಿಕೊಳ್ಳಬೇಕು ಈ ಬಗೆಯ ವರ್ತನೆಯನ್ನು ಮಕ್ಕಳಲ್ಲಿ ಬೆಳೆಸಲಿಕ್ಕಾಗಿ ವಿದ್ಯಾಮಂದಿರವು ತಾಯಿಯಂದಿರು ಈ ಶಾಸ್ತ್ರವನ್ನು ತಮ್ಮಲ್ಲಿ ಬೆಳೆಸಿಕೊಳ್ಳುವಂತೆ ಮಾಡುವ ಶ್ರೀಮಂತರ ಅನ್ನಾವುಟ್ಟಿ ಜೀವನಗಳನ್ನು ತಾವೇ ಸೂಚಿಸಿಕೊಳ್ಳಲು ಏನು ಕ್ರಮವಾಗಬೇಕು ಮುಂತಾದ ನಾಯಕತ್ವವಾಗುವ ಬಾಲಕರನ್ನು ಯೋಗ್ಯತೆಯಾಗಿ ಮಾಡುವ ಅಗತ್ಯವಾದ ಜೊತೆಯು ತಾಯಿಯ ಮೇಲೆ ಇದೆ.

ಬಾಲಕನ ವೈಜ್ಞಾನಿಕ ವೃತ್ತಿಯಿಂದಲೂ ಈ ವರೆಗೆ ಒಪ್ಪಿಂದು ವರಿಣಾಮಕಾರಕ ಸುಧಾರಣೆಯಾಗಿಲ್ಲ. ಈ ವರೆಗೆ ನಡೆದ ಶಿಕ್ಷಣವನ್ನೇ ಮುಂದುವರಿಸಿದರೆ ರಾಷ್ಟ್ರಕ್ಕೆ ಮತ್ತೂಂದು ಬಗೆಯಂತಾಗುವದು. ಯಾಕಂದರೆ ಇಂದಿನ ಬಾಲಕರೇ ಮುಂದಿನ ರಾಷ್ಟ್ರದ ಆಧಾರಸ್ತಂಭರು. ಆದಕ್ಕಾಗಿ ತರಬೇತಿಯು ಫಲಿಪ್ರದವಾಗಿರಬೇಕು. ಪ್ರಾಥಮಿಕ ಶಿಕ್ಷಣ ಕೊನೆಗಂಡ ಮೇಲೆ ಜನ್ಮ ಸ್ವಂತ ಕಾಲ ಮೇಲೆ ನಿಂತು ಉಪಜೀವನ ನಡಾಗಿಸುವ ಯೋಗ್ಯತೆಯಿಲ್ಲದ ಜನರಿಂದ ರಾಷ್ಟ್ರಕ್ಕೆ ಯಾವ ಬಗೆಯ ಕಕ್ಕಿ ಸೋರಬೇತು? ಅವರ ಬಲೆಯಲ್ಲಿ ನೌಕರಿಗಾಗಿ ಎಡತಾಕುವ ಒಂದು ಒಂದು ವಿಚಾರವಿಲ್ಲವೇ? ಉಜ್ವಲ ರಾಷ್ಟ್ರಾಭ್ಯುದಯದ ಮಾರ್ಗವನ್ನು ಬಿಟ್ಟು ತನ್ನ ಹೊಟ್ಟೆ ತುಂಬಿಕೊಳ್ಳುವ ಸಂಕುಚಿತ ಧೋರಣೆಯಲ್ಲಿ ತೊಡಗಿರಬೇಕಾಗಿಲ್ಲವೇ?

ಇವನ್ನೆ ಬಾಲಕನು ನೆಂಬಿದ ಈ ವೃತ್ತಿಯೇ ತಾಪ
ಪೆಂಪೇ ದೇಶವನುನು ಇವು ನಮ್ಮ ಬಾಲಂ
"ವೃಷ್ಟಿಮೂಲ ಶಿಕ್ಷಣ ಕೊಡುವುದೆಂದು ಬಗೆದಂ
ನದು ಬಾಲಕರ ಎಳೆಮನಸ್ಸಿನಲ್ಲಿ ಜೀ
ಯನ್ನು ಹುಟ್ಟಿಸುವುದೇ ಕರುಗಂ ಬಾಲನ ದೈ
ಕ, ಮಾನಸಿಕ, ಶಕ್ತಿಯನ್ನ ಸಮರ್ಪಕವಾಗಿ ಬಳಸಿ
ಪ್ಪೆಯರ್ಸ, ಕಷಿಲ ವಿದ್ಯೆಗಳ, ರಾಷ್ಟ್ರೀಯ ಭಾವನೆಗಳ
ಬೆಳೆಸುವುದೇ ಇಂದಿನ ಪ್ರಾಥಮಿಕ ಶಿಕ್ಷಣದ ಗು

ಬಾಲಕರು ತಮ್ಮ ಬಾಲ್ಯವನ್ನು ನಿಸರ್ಗದಲ್ಲಿ ಬಿಡ
ಮಟ್ಟಿಕ್ಕೆ ಅವರನ್ನು ಒಯ್ದು ಬಿಡುವುದೇ ಇಂ
ಪ್ರಾಥಮಿಕ ಶಿಕ್ಷಣದ ಘೋಷಣೆ.

ನಾವು ಜಾರಿಗೊಯ್ದು ಶಿಕ್ಷಣ ಸುಧಾರಕರು "ವ್ಯಾ
ಮಿಕ ವಿದ್ಯಾಭ್ಯಾಸವು ಸರಳವಾದಷ್ಟೂ ಪರಿಣಾಮಕಾರಿಯಾಗಿ
ನೆಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಈ ಕಾರಣದಿಂದಲೇ. ಆಗ
ಬೇಕೆಂಬ ಕೂಗೆದ್ದಿರುವುದೂ ಅದೇ ಯುಕ್ತಿಯ ಮೂಲಕ
ಡು. ಶಿಕ್ಷಿತ ಜನತೆಯ ಸಹಕಾರ, ಸಹಾಯ ಪೋಷ
ಕರು, ಔದ್ಯೋಗಿಕ ಜನತೆಯು ತನ್ನ ದೃಷ್ಟಿಯನ್ನು
ಗುಂದಿನ ನಾಗರಿಕರಾಗುವ ಇಂದಿನ ಬಾಲಕರ ಮೆ
ವಹಿಸಿರುವ ಸರ್ಕಾರವು ಈಗಾಗಲೇ ಬಲವು ಪ್ರಯತ್ನ
ಮಾಡುತ್ತಾ ಬಂದಿದೆ. ಎಲ್ಲರೂ ಕೂಡಿ ಈ ಶಿಕ್ಷಣವೆಂಬ
ದೃಷ್ಟಿ ನಿಗಲು ದಬ್ಬಿ ಬಂದರೆ ಎಳೆಯಲು ಪ್ರಯತ್ನ
ಸಂವಹನ ಬಾಜಿ ಪಡಬಹುದೇ?

— ಜೈ ಹಿಂದ —

ನಮ್ಮ ಬಿಜಾಪುರದ ಪ್ರವಾಸ

ಲೇಖಕರು:— ಶ್ರೀ. ವಾ. ನಾ. ಶಾನಭಾಗ, ಕೆ. ಇ. ಬೋರ್ಡ ಟ್ರೇ. ಕಾ., ಧಾರವಾಡ.

ಮೊದಲೇ ನಿಶ್ಚಯಿಸಲ್ಪಟ್ಟಂತೆ ಧಾರವಾಡ ಕೇ. ಇ. ಬೋರ್ಡ ಟ್ರೈನಿಂಗ ಕಾಲೇಜಿನ ವಿದ್ಯಾರ್ಥಿ ಶಿಕ್ಷಕರು ತಾ ೨೧-೨-೪೯ನೆಯ ಸೋಮವಾರ ಮುಂಜಾನೆ ೪-೪೫ ಘಂಟೆಯ ಗಾಡಿಗೆ ಧಾರವಾಡದಿಂದ ಹೊರಟು ೧೧॥ ಘಂಟೆಗೆ ಗದಗಿಗೆ ತಲುಪಿದೆವು. ಅಲ್ಲಿ ಗಾಡಿಯಾ ನ್ನಿಳಿದು ಊರೊಳಗೆ ಹೋಗಿ ಐತಿಹಾಸ ಪ್ರಸಿದ್ಧವಾದ ವೀರನಾರಾಯಣನ, ತ್ರಿಕುಟೇಶ್ವರನ ಗುಡಿಗಳನ್ನು ನೋಡಿಕೊಂಡು ಪುನಃ ಸ್ಟೇಶನಿಗೆ ಬಂದು ಮಧ್ಯಾಹ್ನ ೨॥ ಘಂಟೆಯ ಗಾಡಿಗೆ ಕುಳಿತು ವಿಜಾಪುರವನ್ನು ಪ್ರಯಾಣಿಸಿದೆವು. ದಾರಿಯಲ್ಲಿ ಮಲಪ್ರಭಾ, ಕೃಷ್ಣಾನದಿಗಳ ಸೇತುವೆಗಳನ್ನು ನೋಡಿಕೊಂಡು ರಾತ್ರಿ ೯॥ ಘಂಟೆಗೆ ವಿಜಾಪುರಕ್ಕೆ ತಲುಪಿದೆವು. ಅಲ್ಲಿಂದ ಬಾಲಾಜಿ ಮಾರ್ಗದಾನಂ ಶ್ರೀನಿವಾಸ್ ಕೈರ ಛಾಯುಷಶಾಲೆಗೆ ಬಂದೆವು ಅಲ್ಲಿಯು ಪ್ರಿನ್ಸಿಪಾಲ ಶ್ರೀ॥ ಸೀತಾರಾಮಾಚಾರ ನಾಯಿಕರ ವ್ಯವಸ್ಥೆ ಮಾಡಿದ ಮೇರೆಗೆ ಅಲ್ಲಿ ನಮಗೆ ಎಲ್ಲ ಬಗೆಯ ಸೌಕರ್ಯಗಳಿದ್ದವು. ರಾತ್ರಿಯಲ್ಲಿ ಸುಖವಾಗಿ ನಿದ್ದೆಗೆಯ್ದೆವು. ಬೆಳಗಾಗುವುದರೊಳಗೆ ಎಷ್ಟು ಪ್ರಾತರ್ವಿಧಿಗಳನ್ನು ಪರಿಸಿಕೊಂಡು ಶಾಲೆಯ ಮಾಧ್ಯಮಿಕ ವಿಭಾಗ ವಿದ್ಯಾರ್ಥಿಗಳ ಕಾಯುರ್ಕ್ರಮದಂತೆ ಎಲ್ಲರಕಂಡ ಧ್ವಜವಂದನೆಯು ಕಾರ್ಯ ವೀರಿಸಿಕೊಂಡು, ಊರಲ್ಲಿ ಐತಿಹಾಸಿಕ ಪ್ರಸಿದ್ಧ ಸ್ಥಳಗಳನ್ನು ನೋಡ ಹೊರಟೆವು. ಬಿಸಿಲೇರುವವರೊಳಗಾಗಿ ಜಾಂಬ ಬಾನಡಿ, ಮುಳ್ಳಗಸೆ, ಉಪಲೀಬುಜಿ, ಮಲಿಕ-ಇ-ಮೈದಾನಸೋಪು, ಇಬ್ರಾಹಿಮರೋಜಾ, ತಾಜಬಾವಡಿ ಅಕ್ಕಳಂಗಿಯರ ಗುಮ್ಮಟಗಳನ್ನು ನೋಡಿಕೊಂಡು ವಿಜಾಪುರ ಬಾದಶಹರ ಶಿಲ್ಪಕಲಾ ಪ್ರೇಮವನ್ನೂ ಇವುಗಳನ್ನು ಕಟ್ಟಿಸುವ ಬಗ್ಗೆ ಅವರಲ್ಲಿದ್ದ ಅಭಿಲಾಷೆಯನ್ನೂ ಕೊಂಡಾಡುತ್ತ ಊಟಕ್ಕೆ ತೆರಳಿದೆವು. ಎಲ್ಲರೂ ಊಟ ತೀರಿಸಿಕೊಂಡು ಇಳಿಹೊತ್ತಾದ ಬಳಿಕ 'ಗೋಲ ಗುಮ್ಮಟ' ನೋಡುವ ಹುಮ್ಮಸದಿಂದ ಅದರ ಕಡೆಗೆ ನಡೆದೆವು. ಎಲ್ಲರೂ ತಲೆಗೆರಡಾಣೆಯಂತೆ ಪಾಸಲು ಕೊಟ್ಟು ಗುಮ್ಮಟವನ್ನೇರಿ ಮೇಲೆ ಹೋದೆವು. ಅಲ್ಲಿ ಪ್ರತಿಧ್ವನಿಸುವ ಚಮತ್ಕಾರವನ್ನು ನಿರೀಕ್ಷಿಸಿ ಆಶ್ಚರ್ಯ ಚಕಿತರಾದೆವು. ಗುಮ್ಮಟದ ವ್ಯಾಸವು ೧೩೪ ಫೂಟು ಆದೆ. ಅದರೊ ವಿನರ ಒಂದು ಬದಿಗೆ ಉಂಟಾದ ತೀರ ಸಣ್ಣ ಸಪ್ಪಳವು ಸಹ ವ್ಯಾಸದ ಎರಡನೆಯ ತುದಿಗೆ ಕುಳಿತವರಿಗೆ ಕೇಳಿ ತುವದು. ನಮ್ಮ ಗೆಳಯನೊಬ್ಬನು ಒಂದು ತುದಿಗೆ ಸಸ್ಸ ವಾಚ ಹಿಡಿದಿರಲು ಅದರ ಟಕ್. ಟಕ್ ಸಪ್ಪಳವು ಅವಿದ್ದ ಬದಿಗೆ ಕಿವಿಕೊಟ್ಟ ನಮಗೆ ಕೇಳಿಸಿತು. ಕೆಳಗಿಳಿದು ನೆಲಮನೆ ಯೊಳಗಿನ ಬಾದಶಹರ ಗೋರಿಯನ್ನೂ ತೊಲೆ-ಕಂಬಗಳಿಲ್ಲದೆ ಭದ್ರವಾಗಿ ಕಟ್ಟಿದ ಕಟ್ಟಡವನ್ನೂ ನೋಡಿ ಇಮಾರತು ಕಟ್ಟಿದ ಇಂಜಿನಿಯರನ ಕೌಶಲ್ಯವನ್ನು ಬಾಯಿತುಂಬ ಹೊಗಳಿದೆವು. ನಂತರ ಅದರ ಮುಂದಿನ ಐತಿಹಾಸಿಕ ವಸ್ತು ಸಂಗ್ರಹಾಲಯವನ್ನು ನೋಡಿ ಅವಶ್ಯವೆನಿಸಿದ ಎಲ್ಲ ವಿಷಯಗಳ ಮಾಹಿತಿ ಮಾಡಿಕೊಂಡೆವು. ಈ ಪ್ರವಾಸದಲ್ಲಿ ಹಿರಿಯರಾಗಿ ಬಂದಿದ್ದ ಶ್ರೀಯುತ ಡಿ. ಎಚ್. ತಾಕೂರ ಗುರುಗಳೂ, ನೇಲೋಗಲ ಗುರುಗಳೂ ಆಗಾಗ್ಗೆ ಪನ್ನೆಲ್ಲರಿಗೆ ಐತಿಹಾಸಿಕ ಮಾಹಿತಿ ಹೇಳುತ್ತಿದ್ದರು. ಅವರೇ ವಸ್ತು ಸಂಗ್ರಹಾಲಯದ ಕಳಬದಿಗೆ ಇಟ್ಟಿದ್ದ ಅನೇಕ ಸಣ್ಣ ದೊಡ್ಡ ತೋಪುಗಳನ್ನು, ಮೋಘಿನ ಗುಂಡುಗಳನ್ನು ನೋಡಿ ಅನಂದ ಭರಿತರಾದೆವು. ಅಲ್ಲಿಂದ ಬುರುಜುಗಳಿಗೆ, ಅಸುಂ ಬುರುಜು, ಮೆತಕೆರೆ ಮಹಾಲುಗಳನ್ನು ನೋಡಿ ಕತ್ತಲಾಗುತ್ತಲೇ ಒಡಾಡಕ್ಕೆ ಬಂದು ಸೇರಿದೆವು. ರಾತ್ರಿ ಊಟದ ವ್ಯವಸ್ಥೆಯಾದನಂತರ ಮಾದರಿ ದೀಪದ ಸಹಾಯದಿಂದ ವಿದ್ಯಾರ್ಥಿಗಳಲ್ಲಿ ಇನಸ್ಪೆಕ್ಟರರಾದ ಶ್ರೀ॥ ಅವರು ಆಯಾ ಜೋರಿಸಿದ ಅನೇಕ ಜಲಚಿತ್ರಗಳನ್ನು ನೋಡಿದೆವು ಸುಕ್ತಾ ಜೊನ್ನಾ ವರದಿಂದ ತರಿಸಿದ ಸುಪ್ರಸಿದ್ಧ ಯಕ್ಷಗಾನ ನಾಟಕ ಮಂಡಳಿಯ ಯಕ್ಷಗಾನವನ್ನು ಕೇಳಿ ಆನಂದಭರಿತರಾದೆವು.

ಮರುದಿನ ತಾ ೨೩-೨-೪೯ ಮುಂಜಾನೆ ಆದೇ ಹಾಯಸ್ಕೂಲಿನಲ್ಲಿ ಏರ್ಪಡಿಸಿದ 'ದೃಶ್ಯ ಶಿಕ್ಷಣೋಪಕರಣಗಳ ಪ್ರದರ್ಶನ'ವನ್ನು ಶೈಕ್ಷಣಿಕ ದೃಷ್ಟಿಯಿಂದ ಕೂಲಂಕಷವಾಗಿ ನಿರೀಕ್ಷಿಸಿ ಅವಶ್ಯವೆನಿಸಿದ ಟಿಪ್ಪಣಿ ತೆಗೆದು ಕೊಂಡೆವು. ಪ್ರದರ್ಶನದಲ್ಲಿ ಕೆಲ್ವೋನ್ಯರ ಕಂಪನಿಯವರ ಜೊತೆಗೂ ವಿಜಾಪುರ ಗರ್ಲ್ಸ ಹಾಯಸ್ಕೂಲಿನ ಹೆಣ್ಣು ಮಕ್ಕಳ ಕೈಕೆಲಸದ ಚಿತ್ರಪಟಗಳೂ, ನಮ್ಮ ಟ್ರೈನಿಂಗ ಕಾಲೇಜದಿಂದ ಏರ್ಪಡಿಸಲ್ಪಟ್ಟ ಕರ್ನಾಟಕದ ಐತಿಹಾಸಕ್ಕೆ ಸಂಬಂಧಿಸಿದ ವಾಚೀನ ವಸ್ತುಗಳು ಮತ್ತು ಚಿತ್ರಗಳು ಜೊತೆಗೂ ಧಾರವಾಡದ ಗ್ರಾ. ಬೇಸಿಕ್ ಕಾಲೇಜದ ಆಹಾರ ದಿನಚರಿ ಪಟಗಳು ಚಿತ್ತಾಕರ್ಷಕವಾಗಿದ್ದವು. ಇವನ್ನೆಲ್ಲ ನೋಡಿ ಲಗು ಬಗೆಯಿಂದ ಊಟ ಊಡಿಗೆ ತೀರಿಸಿಕೊಂಡು ಬಾದಾಮಿಯ ಕಲ್ಲು ನೆಗಳನ್ನು ನೋಡುವ ಆತುರತೆಯಿಂದ ಸ್ಟೇಶನಿಗೆ ಬಂದು ೧೨-೩೦ ಘಂಟೆಯ ಗಾಡಿಗೆ ಕುಳಿತು ೩॥ ಘಂಟೆಗೆ ಬಾದಾಮಿ ಸ್ಟೇಶನಿನಲ್ಲಿ ಇಳಿದೆವು. ಅಲ್ಲಿಂದ ಬಾದಾಮಿಯು ೩ ಮೈಲು ದೂರವಿತ್ತು. ಸಾಯಂಕಾಲ ಸಮಯ. ಎಲ್ಲರೂ ಕಾಲ್ನಡಿಗೆಯಿಂದ ಊರಿಗೆ ಬಂದೆವು. ಅಲ್ಲಿಯ ಕ. ಗ. ಮ. ಶಾಲೆ

ಯಲ್ಲಿ ಉಳಿಕೊಳ್ಳುವ ವ್ಯವಸ್ಥೆಯಾಗಿತ್ತು. ಅಲ್ಲಿಯು ಹೆ॥ ಮಾಸ್ತರರಾದ ಮುನಿಮುದ್ದಾರರು ನಮ್ಮೆಲ್ಲರಿಗೆ ಬೇಕಾಗುವ ಊಟ-ಉಪಕಾರಗಳ ಜನುಕೂಲತೆ ಮಾಡಿ ಕೊಟ್ಟರು. ಅಲ್ಲಿ ಅವಿನ ಧಾನ್ಯಯನ್ನು ಕಳೆಪೆವು. ನಮ್ಮ ಕರ್ನಾಟಕದ ಕನ್ನಡ ಅಂಗಡಿ ನೆಲವಿಡೆಸಿದ ವಾತಾ ವರಣದ ವ್ಯಾಪಿನ ಪ್ರೌಢವನ್ನು ನೋಡುವ ಅತುಸತೆ ಯಿಂದ ನಮಗೆ ಬಹುಬೇಗ ಎಚ್ಚರಾಯಿತು. ಮರುದಿನ ತಾ ೨೮-೨-೪೯ರ ಮುಂಜಾನೆ ಎಲ್ಲರೂ ಒಂದಾಗಿ ಕೃಸುವಾಗಿ ಒಂದರಿಂದೊಂದು ಮೂರು ಬಂಡಿಗಳಲ್ಲಿ ಕೂರೆದ ಮೂರು ಗುಡಿಗಳನ್ನು ಜಾಗೆಯೇ ವಾಹ್ಯಂದು ದೊಡ್ಡ ಬಂಡಿಗಲ್ಲಿದಲ್ಲಿ ಕೆಂರೆದು ಮಾಡಿದ ಜೈನ ಪೇಣ ಬಸತಿಯನ್ನೂ ನೋಡಿದೆವು. ಬಂಡಿಗಲ್ಲಿದಲ್ಲಿ ಕೊರೆದು ಮಾಡಿದ ಕಂಬ, ತೊಲೆ, ಗೋಂಬೆಗಳನ್ನೂ ವರವರದ ವಿಕ್ರ-ವಿಚಿತ್ರವಾದ ಸುಳುವುಗಳನ್ನು ನೋಡಿ ನಮ್ಮ ಪೂರ್ವಜರ ಶಿಲ್ಪಕಲಾಪ್ರಾವಿಣ್ಯತೆಯನ್ನು ಕಂಡು ಕಣ್ಣಿಡಿ ಗರಾದ ನಾವು ಪೆಮ್ಮೆಗೊಂಡೆವು. ಎರಡೂ ಬದಿಯು ಗುಡ್ಡದ ನೆಲಿರುವ ಕೋಟೆಯುಗೋಡೆ, ಮದ್ದಿನಮನೆ, ಹಳೆಯ ದೇವಾಲಯಗಳು ನಮ್ಮನ್ನು ದೆರಗುಗೊಳಿಸಿ ದವು. ನಂತರ ಅಲ್ಲಿಂದ ಒಬೆಲು ದೂರವಿರುವ ವ್ಯಾಪಿನ ಸುಪ್ರಿಸ್ಧ ಕಣ್ಣೋದ್ಭವನೆನಿಸಿದ ಬನಶಂಕರಿಯ ದರ್ಶನಕ್ಕೆ ನಡೆದೆವು. ಬಿಸಿಲೇರಿ ನೆಲತಾಯುವದರೊಳಗಾಗಿ ಬನವನ್ನು ಮುಟ್ಟಿದವು. ಅಲ್ಲಿಯೇ ಸಮೀಪದಲ್ಲಿರುವ ಸರನ್ಯಕಟೆಯಲ್ಲಿ ನಿಂದು ಬಟ್ಟೆಗಳನ್ನು ತೊಳೆದೆವು. ಮಜ್ಜನದಿಂದ ದೇವಿಯ ದರ್ಶನ ತಳ್ಳಾಂಡು ಪಣ್ಣು-ಕಾಯಿ ಮಾಡಿಸಿದ ಪ್ರಸಾದ ಕಳಿಸ್ಕಾಂಡು ಊಟದ ಶಿಷ್ಟಾಚಾರ ನುಗಿಸಿಕೊಂಡು ಪುಷ್ಠಿ ಅಲ್ಲಿಂದ ಹೊರಟು ಬಾದಾಮಿ ಸ್ಟೇಶನಿಗೆ ಬಂದೆವು.

ಬನಶಂಕರಿಯು ಸ್ಥಾನವು ಸ್ಥಾಪೀನಕಾಲದಿಂದಲೂ ಪ್ರಸಿಸ್ಧವಾದ ಪುಣ್ಯಭೂಮಿಯು. ಪ್ರತಿಸ್ಥಿಕವು-ಇಂತೆಯೇ ಇಲ್ಲಿ ಬನೇಕ ಲಗ್ನ ಶಾರ್ಯಗಳು ಪದೆಯೇ ಇವ್ವವು. ಬನ ಶಂಕರಿಯ ದೇವಾಲಯವು ವನದಲ್ಲಿ ಪೆದಸಿದೆ. ದೇವಾ ಲಯದ ಸನ್ನಿಧಿಯಲ್ಲಿ ಒಂದು ಪ್ರಾಚೀನ ವಿಧ್ವಸವಿದ್ದು ಅದರಲ್ಲಿ ಬುರುಸುಳ್ಳಳನ್ನು ತೆಗೆದ ಸ್ಥಾನದಲ್ಲಿ ಕಲ್ಲುರಿಸಿ ಚಲನಿತಾಚಲವಾಗಿಸುವಂತೆ, ಪ್ರಸಿದ್ಧ ಸ್ಥಾನ, ಪುಣ್ಯ ವನದ ಹುಣ್ಣಿಮೆಗೆ ಈ ದೇವಿಯು ಬಧೋತ್ಸವಾ ಎತ್ತಪೆ. ಈ ಬಧೋತ್ಸವಕ್ಕೆ ಲಕ್ಷಗಟ್ಟಿಲೆ ಜನರು ಕೇರು ತ್ತಾರೆ. ಎಲ್ಲಬಗೆಯು ಕೈಗಾರಿಕೆಯು, ಸಾಮಾನುಗಳ ಅಂಗಡಿಗಳು ತೂಡುತ್ತವೆ. ಮಿತಿ ಮೀರಿ ವ್ಯಾಪಾರವಾ ಗುತ್ತದೆ ಗುಡಿಯು ಮುಂಭಾಗದೆ ನಿಲ್ಲಿಸಿದ ಕಲ್ಲಿನ ರಥ ವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ದೇವಾಲಯದ ಸುತ್ತಲೆಲ್ಲ ತೆಂಗಿನ ಹಾಗೂ ವಿಳ್ಳೆದೆಲೆಗಳ ವನಗಳಿರುವ ದರಿಂದ ಯಾತ್ರಿಕರಿಗೆ ಎಲ್ಲ ಬಗೆಯ ಸೌಕರ್ಯಗಳಿರು ತ್ತವೆ. ಇಲ್ಲಿ ಪ್ರಾಚೀನಕಾಲದಲ್ಲಿ ಜನರಿಗೆ ತೊಂದರೆ ಕೊಡುತ್ತಿದ್ದ ವಾತಾಪಿ ಮತ್ತು ಇಲ್ವಲ ಎಂಬಿಬ್ಬರು ರಾಕ್ಷಸರ ಸಂಹಾರಕ್ಕಾಗಿ ದೇವಿಯು ಅವತರಿಸಿದಳೆಂದು ಅಖ್ಯಾಯಿಕೆ ಇದೆ.

ಬಾದಾಮಿ ಸ್ಟೇಶನದಿಂದ ೬ ಘಂಟೆಯ ಗಾಡಿಗೆ ಕುಳಿತು ರಾತ್ರಿ ೧೦ ಘಂಟೆಗೆ ಹುಬ್ಬಳ್ಳಿಗೆ ತಲುಪಿದೆವು. ಅಂದಿನ ರಾತ್ರಿಯನ್ನು ಅಲ್ಲಿಯೇ ರೈಲು ನಿಲ್ದಾಣದಲ್ಲಿಯೇ ಕಳೆ ದೆವು. ಬೆಳಿಗ್ಗೆ ಬೇಗನೆ ಎದ್ದು ತಾ ೨೯-೨-೪೯ನೆಯ ದಿನ ಮುಂಜಾನೆ ೮ ಘಂಟೆಗೆ ಹುಬ್ಬಳ್ಳಿಯಲ್ಲಿ ಏರ್ಪಡಿಸಿದ ಧಾರ ವಾಡ ಜಿಲ್ಲೆಯ ಒಕ್ಕಲತನ, ಕೈಗಾರಿಕೆ, ಆರೋಗ್ಯ ಇವು ಗಳಿಂದ ಕೂಡಿದ ಅಪ್ರತಿಮವಾದ ಪ್ರದರ್ಶನವನ್ನು ನೋಡಿ ಅನೇಕ ವಸ್ತುಗಳ ಮಾಹಿತಿ ಮಾಡಿಕೊಂಡೆವು. ಪ್ರದರ್ಶನದಲ್ಲಿ ಕೆಲೋರ್ಸ್ಕರವಾಡಿಯ ತರಕರದ ಯಂತ್ರ ಸಾಮಗ್ರಿಗಳೂ, ತರತರದ ಕೈಗಾರಿಕೆಯ ಸಾಮಗ್ರಾಮಗಳೂ. ಬಗೆಬಗೆಯ ನೂಡೆಲ್ಲುಗಳೂ ಪ್ರೇಕ್ಷಕ ರನ್ನು ದೆರಗುಗೊಳಿಸುವಂತಹವಿದ್ದವು. ಬಳಿಕ ಭವ್ಯ ವಾದ ಮಂಟಪದಲ್ಲಿ ಜಂದವಾದ ಗಿಗೀ ಪದಗಳನ್ನು ಕೇಳ ಕರ್ಣಾನಂದ ಭರಿತರಾದೆವು. ನಂತರ ಊಟದ ಸೌ ಜ್ಯ ತೀರಿಸಿಕೊಂಡು ರೇಲ್ವೆ ನಿಲ್ದಾಣಕ್ಕೆ ಬಂದು ೧॥ ಘಂಟೆಯು ಗಾಡಿಗೆ ಕುಳಿತು ೨ ಘಂಟೆಗೆ ಸರಿಯಾಗಿ ಧಾರವಾಡಕ್ಕೆ ತಲುಪಿದೆವು.

ಈ ನಮ್ಮ ಪ್ರವಾಸಕ್ಕೆ ತಕ್ಕ ಸಹಾಯವನ್ನು ಒದಗಿಸಿ ಕೊಟ್ಟ ನ್ಯಾಷನಲ್ ಅಧಿಕಾರಿಗಳಿಗೂ, ರೇಲ್ವೆ ವರಿಷ್ಠರಿಗೂ ನಾವು ನಮ್ಮ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸಿ ಈ ನನ್ನ ಚಿಕ್ಕ ಲೇಖನವನ್ನು ಮುಗಿಸುವೆನು.

ವಿಷ್ಣುಕ ಬಂಧು ಭಗಿನಿಯರಿಗಾಗಿ ಒಂದು ಮನವಿ

ಇಂಥ ಪ್ರವಾಸಗಳನ್ನು ಕೈಗೊಳ್ಳುವಾಗ (೧) ನೋಡತಕ್ಕ ಸ್ಥಳಗಳಿಗೆ ಸಂಬಂಧಪಟ್ಟ ಐತಿಹಾಸಿಕ ಮಾಹಿತಿಯನ್ನು ಮೊದಲೆ ಮಾಡಿಕೊಳ್ಳುವುದು (೨) ಆಯಾ ಸ್ಥಳಗಳನ್ನು ನೆನೆಪಿಮವಾಗಿ ಜಪ್ತುಗಳನ್ನು ಜೆನ್ನಾಗಿ ಬಲ್ಲವರ ಜತೆಯಲ್ಲಿ ನೋಡುವುದು (೪) ಆಮೇಲೆ ಆಯಾ ಸ್ಥಳ ಕಟ್ಟಡ-ವಿಗ್ರಹಗಳ ಮಹತ್ವವನ್ನು ಸಾಂಸ್ಕೃತಿಕ ದೃಷ್ಟಿ ಯಿಂದ ಸೌಂದರ್ಯೋಪಾಸಕ ದೃಷ್ಟಿಯಿಂದ ಚರ್ಚಿಸು ವುದು, ಇವು ಪ್ರವಾಸದಿಂದ ಆಂಟಾಗಬೇಕಾದ ಲಾಭದ ದೃಷ್ಟಿಯಿಂದ ಅತ್ಯವಶ್ಯಕಾದವುಗಳು.

ಭಾರತದ ಜ್ಯೋತಿಗಳು

[ಕಳೆದ ಸಂಚಿಕೆಯಿಂದ ಮುಂದುವರೆದಿದೆ]

ಕವಿ:– ಶ್ರೀ. ರಂಗನಾಥ, ಓಕ ಹೆ. ಮಾ. ಶಿರಹಟ್ಟಿ.

[ಈ ಪದ್ಯಗಳನ್ನು ಓದಿ ಅನುಗಳಲ್ಲಿ ನರ್ದಿಷ್ಟವಾಗಿರುವ ಮುಖ್ಯ ವ್ಯಕ್ತಿಗಳ ಸರಿಯಾದ ಹೆಸರುಗಳನ್ನು ಅನುಕ್ರಮವಾಗಿ ಬರೆದು ಕಳುಹಿಸಿದ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರಾಥಮಿಕ ಲಕ್ಷಣದಲ್ಲಿ ಪ್ರಕಟಿಸಲಾಗುವುದು. — ಸಂಪಾದಕರು.]

?

ಗಂಡ ಮಡಿದಬಳಿಕ ತನ್ನ । ಪುಂಡ ಜನರ ಕಟ್ಟಿಕೊಂಡು ।
ಗಂಡು ದಲದ ನೃಪ ಶಿವಾಜಿ ಶೂರ ರಾಯನಾ ॥
ದಂಡಿನೊಡನೆ ಯುದ್ಧ ಮಾಡಿ । ಚಂಡಿಯಂತೆ ಶೌರ್ಯದೋರಿ ।
ಭಂಡತನವ ಮುರಿದು ಬಿಟ್ಟ ಶೂರಳೀಕೆಯೂ ॥ ೧೩ ॥

?

ಚಿತ್ರದುರ್ಗ ಕೋಟೆಯೊಳಗೆ । ಶತ್ರು ಸೈನ್ಯ ನುಗ್ಗುತಿರಲು ।
ಕತ್ತಲಿದ್ದ ಕಳ್ಳ ದಾರಿಯೊಳಗೆ ಧೈರ್ಯದೀ ॥
ಉತ್ತುಮಾದ ಒನಕೆ ಪಿಡಿದು । ಒತ್ತಿ ಒರುವ ಭಟರ ಬಡಿದು ।
ಸುತ್ತಲೆಲ್ಲ ಪೆಳರುಗೊಂಡ ಧೀರಳೀಕೆಯೂ ॥ ೧೪ ॥

?

ಉತ್ತುಮಾದ ನಮ್ಮ ನಿಯಮ । ಕಿತ್ತುವಗೆದಳೀಕೆಯೆಂದು ।
ಮತ್ತಗೊಂಡು ಕದನ ತೆಗೆದ ಮೋಸದಾಂಗ್ಲರಾ ॥
ಸತ್ಕೃತ್ಯ ರಾಮ ಹತ್ತು ಶಿರನ । ಸುತ್ತಿ ಸೂರೆ ಹೊಯ್ದು ತೆರದಿ ।
ಸುತ್ತಿ ಮುತ್ತಿ ಸೂರೆಹೊಯ್ದ ಶೂರಳೀಕೆಯೂ ॥ ೧೫ ॥

?

ಪತಿಯು ಮಡಿದ ದುಃಖ ತಡೆದು । ಸತರ ತೆರದಿ ಜನರ ಸುಖಿಸಿ ।
ಸತತ ರುದ್ರ ನನತೆಯಿಂದ ನಡೆದು ಭರತದೀ ॥
ಯತಿಮ ಖಾನೆಗಳನು ರಚಿಸಿ । ಚತುರೆ ಜ್ಞಾನದಾನಿಯಾಗಿ ।
ಪ್ರತಿಭೆಯಂತೆ ಮೆರೆದು ಹೋದ ಸಾಧ್ವಿ ಈಕೆಯೂ ॥ ೧೬ ॥

?

ನುನ್ನೆ ತಂನೆ ತಾಯಿ ಮಡಿವ । ಚನ್ನರಾಜ ಕುವರನನ್ನು ।
ನನ್ನೆಯಿಂನ ಸಲಹುತಿರಲು ಬನದ ಬೀರನೂ ॥
ಕಿನ್ನಿ ಮನನಿ ಕೊಲಲು ಬರಲು । ಖಿನ್ನಳಾಗಿ ಚತುರತನದಿ ।
ತನ್ನ ಮಗನ ಕೊಟ್ಟು ಕಾದ ಧಾತ್ರಿ ಈಕೆಯೂ ॥ ೧೭ ॥

?

ವಿಲಜ ನೃಪನು ಮುಕುರದೊಳಗೆ । ಲಲನೆ ನೋಡಿ ಹೋಗ್ವ ಸಮಯ
ಕಳುಹಹೋದ ಭೀಮಸಿಂಗ ನೃಪನ ಪಿಡಿದಿರೇ ॥
ಕಳುಹಿ ಸೈನ್ಯ ಯುಕುತಿಯಿಂದ । ಕಳೆದ ಪತಿಯ ಪಡೆದುಕೊಂಡು
ಬಳಿಕ ಜೋಹರವನು ಗೆಯ್ದೆ ಧೀರಳೀಕೆಯೂ ॥ ೧೮ ॥

?

ಭರತದೊಳಗೆ ಬಂಡಿಸಿಂದ । ಹರಡಿವಂಥ ದ್ವೇಷ ಮುಚ್ಚಿ ।
ಸಿರುತ ಸುಖವ ಕೊಡುವೆನೆಂಬ ಸರಳ ನುಡಿಯೊಳೂ ॥
ಬರಿದ ಬರೆಸಿ ತಿಳಿಸಿ ಪೇಳ । ಮರುಳು ಮಾಡಿ ನಮ್ಮ ಜನಕೆ ।
ಪಿರಿಯ ಸಾರತಂತ್ರ್ಯದೊಳಗೆ ಹಿಡಿದ ಜಾಣೆಯೂ ॥ ೧೯ ॥

?

ಮುರಿದು ಕಂಚ್ಕಿ ಕಟ್ಟುಗಳನು । ಕರೆದು ವೀರ ಟೋಪಿಯನ್ನು ।
ಧರಿಸಿ ಪುರುಷ ವೇಶದಿಂದ ಹೊಕ್ಕು ಧುರದೊಳೂ ॥
ತರುಣಿ ಕರದ ಸೀರದೋರಿ । ತರಿದು ಕವಟಿ ವೀರರನ್ನು ।
ಮುರಿದು ಜೋದ ಝಾಂಸಿ ಪುರದ ಧೀರಳೀಕೆಯೂ ॥ ೨೦ ॥

?

ಹಲವು ತೆರದ ಭಾಷೆಗಲಿತು । ಹಲವು ತೆರದ ವಿದ್ಯೆಗಲಿತು ।
ಆಲಿಗೆ ಕ್ರಿಯೆ ಪಕ್ಷಿಯೆನಿಸಿ ಘೋರ ಯುದ್ಧದೀ ॥
ಪ್ರಳಯ ರುದ್ರೆ ತೆರದಿ ಕಾದು । ಬಲದ ವೈರಿ ನೃಪನ ಜಡಿದು ।
ಗೆಲುವ ತಂದ ವಿಜಯಪುರದ ಶೂರಳೀಕೆಯೂ ॥ ೨೧ ॥

?

ಪೆಣ್ಣು ಬೇಳುಗಳೆವ ಜನಕೆ । ಅಣ್ಣ ಅಪ್ಪಗಳಿರಾ ಯೆಂದು ।
ಕಣ್ಣ ತೆರೆವ ತೆರದಿ ಕಾವ್ಯ-ವನ್ನು ರಚಿಸುತಾ ॥
ಅಣ್ಣ ಯತಿಗೆ ಮಹಿಮೆದೋರಿ । ತಣ್ಣಗಿದ್ದ ಯುವತಿ ಜನಕೆ ।
ಪೆಣ್ಣ ಮಹಿಮೆ ತಿಳಿಸಿ ಕೊಟ್ಟ ಸಂಚಿಜಾಣೆಯೂ ॥ ೨೨ ॥

ಹಳ್ಳಿಯ ಶಿಕ್ಷಣದ ಕೆಲವು ಸಮಸ್ಯೆಗಳು

ಲೇಖಕರು:— ಶ್ರೀ. ನಾಯಕ ಜಯಂಕರಾಯರು

ಅನುವಾದಕರು:— ಶ್ರೀ ವ್ಹಿ ವ್ಹಿ. ಪಾಟೀಲ, ಬಿ. ಎ., ಡಿ. ಬಿ. ಇ.

ಇಂದುಸ್ತಾನದಂಥ ಹಳ್ಳಿಗಳ ದೇಶದಲ್ಲಿ, ಹಳ್ಳಿಯ ಶಿಕ್ಷಣದ ಸಮಸ್ಯೆಗಳು ಉಳಿದ ಎಲ್ಲ ಶೈಕ್ಷಣಿಕ ಸಮಸ್ಯೆಗಳಿಗಿಂತ ಹೆಚ್ಚು ಮಹತ್ವದವು ಇದ್ದುದರಿಂದ ನಾವು ಅವುಗಳನ್ನು ಹೆಚ್ಚು ಸೂಕ್ಷ್ಮವಾಗಿ ಮತ್ತು ಆಳವಾಗಿ ಅಭ್ಯಾಸ ಮಾಡಬೇಕಾಗುವದು. ಆದರೆ ನಮ್ಮ ರಾಷ್ಟ್ರದ ದುರ್ದೈವದಿಂದ ಹಿಂದಕ್ಕೆ ಆ ಸಮಸ್ಯೆಗಳ ಕಡೆಗೆ ಯಾರೂ ಲಕ್ಷ್ಯ ಕೊಡಲಿಲ್ಲ ಮತ್ತು ಈಗೂ ಕೂಡ ಸಾಕಷ್ಟು ಲಕ್ಷ್ಯವನ್ನು ನೀವು ಕೊಡುತ್ತಿರುವದಿಲ್ಲ. ಇಂತಹ ಪರಿಸ್ಥಿತಿಯ ದುರ್ದೈವದ ಕಾರಣವನ್ನು ಹುಡುಕುವದು ಅಷ್ಟೇನು ಕಠಿಣವಾದದಲ್ಲ. ಇಂಗ್ಲಂಡದಂತಹ ಔದ್ಯೋಗಿಕ ಮತ್ತು ಸಾಮಾನ್ಯ ಶೈಕ್ಷಣಿಕ ಅವಶ್ಯಕತೆಗಳನ್ನು ಚನ್ನಾಗಿ ಬಲ್ಲ, ಆದರೆ ಇಂದುಸ್ತಾನದಂತಹ ಹಳ್ಳಿಯ ಮತ್ತು ದೇಶಕಿ ಸಮಾಜದ ಸಮಸ್ಯೆಗಳನ್ನು ಹಾಗು ಬೇಡಿಕೆಗಳನ್ನು ಎಷ್ಟೂ ಅರಿಯದ ಆಂಗ್ಲೀಷ ಜನರಿಂದ ನಮ್ಮ ಆಧುನಿಕ ಶಿಕ್ಷಣ ಪದ್ಧತಿಯು ಹುಟ್ಟಿ ಬೆಳೆದಿಡೆ. ಆದುದರಿಂದ ಹಿಂದುಸ್ತಾನದಲ್ಲಿ ನಮ್ಮಾರು ಗಣ್ಯರ ವರೆಗೆ ಅಧಿಕಾರ ಸೂತ್ರಗಳನ್ನು ನಿಯಂತ್ರಣದಲ್ಲಿಟ್ಟುಕೊಂಡ ಇಂಗ್ಲೀಷ ಅಧಿಕಾರಿಗಳಿಂದ ಹಳ್ಳಿಯ ಶಿಕ್ಷಣವು ಸಾಮಾನ್ಯವಾಗಿ ದುರ್ಲಕ್ಷಿಸಲ್ಪಟ್ಟಿತು. ಹಿಂದುಸ್ತಾನದಲ್ಲಿ ಇಂಗ್ಲೀಷರು ಸ್ಥಾಪಿಸಿದ ಕೇಂದ್ರೀಕೃತ ಆಧಿಕಾರ ಪದ್ಧತಿ ಈ ಪರಿಸ್ಥಿತಿಗೆ ಎರಡನೇ ಕಾರಣವಾಗಿತ್ತು.

ರಾಜ್ಯ ಪದ್ಧತಿಯಲ್ಲಿ ಸರಕಾರದ ಹಣವನ್ನು ಖರ್ಚು ಮಾಡುವಾಗ ಮತ್ತು ಲಕ್ಷ್ಯವನ್ನು ಪೂರೈಸುವಾಗ ಕೇಂದ್ರ ರಾಜಧಾನಿಗೆ ಪ್ರಾಮುಖ್ಯತೆಯನ್ನು ಕೊಟ್ಟು, ಬಳಿಕ ಅನುಮವಾಗಿ ಪ್ರಾಂತಿಕ ರಾಜಧಾನಿಗಳಿಗೆ, ಜಿಲ್ಲೆಯ ಸ್ಥಳಗಳಿಗೆ, ತಾಲೂಕಾ ಸ್ಥಳಗಳಿಗೆ ಮತ್ತು ಉಳಿದ ಪಟ್ಟಣಗಳಿಗೆ ಮನ ಕೊಡಲಾಗುತ್ತಿತ್ತು. ವಶುಪದ ಬಹು ಭಾಗದಲ್ಲಿ ಸರಕಾರೀ ಅಧಿಕಾರಿಗಳು ಇಂತಹ ಸ್ಥಳಗಳಲ್ಲಿಯೇ ಇದ್ದು ಕೆಲಸ ಮಾಡುತ್ತಿದ್ದುದರಿಂದ ಅವುಗಳನ್ನು ಸುಧಾರಿಸಲು ಶಕ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿತ್ತು. ಆದರೆ ಸಾಮಾನ್ಯ ಮನುಷ್ಯನು ಇದ್ದ ಒಂದು ಸಾಮಾನ್ಯ ಹಳ್ಳಿಗೆ ಎಳ್ಳಷ್ಟೂ ಲಕ್ಷ್ಯ ಕೊಡುತ್ತಿದ್ದಿಲ್ಲ. ಏಕೆಂದರೆ ದೊಡ್ಡ ಸಾಹೇಬರು ಕ್ವಚಿತ್ತಾಗಿ ಅಂತಹ ಸ್ಥಳಗಳಿಗೆ ಭೆಟ್ಟಿ ಕೊಡುತ್ತಿದ್ದರು. 'ಕಣ್ಣರೆ— ಮಣ್ಣರೆ' ಎಂಬ ಗಾದೆಯ ಮಾತು ಸಾಮಾನ್ಯವಾಗಿ ಎಲ್ಲ ಆಡಳಿತದ ಭೋರಣೆಗಳಿಗೆ ಅನ್ವಯಿಸುತ್ತದೆ. ಹಳ್ಳಿಯ ಶಿಕ್ಷಣ ಹಿಂದು ಬೀಳಲಿಕ್ಕೆ ಮೂರನೆಯದೊಂದು ಕಾರಣವಿದೆ. ಅದು ಯಾವದೆಂದರೆ, ಬ್ರಿಟಿಷರ ರಾಜಸತ್ತೆಯು ಸಾಮಾನ್ಯ ಜನತೆಗೆ ಶಿಕ್ಷಣ ಕೊಡುವ ಜೋಡಿಗಾರಿಕೆಯನ್ನು ಎಂದೂ ತನ್ನ ಮೇಲೆ ಹೊತ್ತುಕೊಳ್ಳಲಿಲ್ಲ. ನಮ್ಮ ದೇಶದ ಅತಿ ಹೆಚ್ಚಾದ ಜನಸಂಖ್ಯೆ ಮತ್ತು ಬಡತನ ಇವುಗಳ ಸಾಮೂಹಿಕ ಪರಿಣಾಮವಾಗಿ ಬ್ರಿಟಿಶ ಸರಕಾರಕ್ಕೆ ಜನತೆಯ ಶಿಕ್ಷಣವು ಹಿಂದುಸ್ತಾನದಲ್ಲಿ ಅಶಕ್ಯವಾದ ಮಾತು ಎನಿಸಿತು. ತಲ್ಲಿರುದ್ಧವಾಗಿ ಒಂದು ವಿಶಿಷ್ಟ ಗುಂಪನ್ನಾಗಲಿ ಇಲ್ಲವೆ ಪ್ರತಿಯೊಂದು ಮತ ಅಥವಾ ಸಮಾಜದ ಘಟಕದಿಂದ ಕೆಲವು ಮುಂದಾಳುಗಳಿಗೆ ಮಾತ್ರ ಶಿಕ್ಷಣ ಕೊಡಲು ಅದು ಪ್ರಯತ್ನ ಮಾಡಿತು. ಅಲ್ಲದೇ ಈ ಕೆಲವು ಸುಶಿಕ್ಷಿತ ಜನರು ಯಾವುದೊ ಒಂದು ದಿನ ಮತ್ತು ಹೇಗೋ, ತಮ್ಮ ಉಳಿದ ಬಾಂಧವರಲ್ಲಿ ಶಿಕ್ಷಣದ ಸಾರವನ್ನು ಹಬ್ಬಿಸುವರೆಂದು ನಂಬಿತ್ತು. ಆದುದರಿಂದ ಬ್ರಿಟಿಶ ರಾಜಸತ್ತಾಧಿಕಾರಿಗಳು ಹಳ್ಳಿಯ ಶಿಕ್ಷಣದ ಸಮಸ್ಯೆಗಳನ್ನು ಅಭ್ಯಾಸ ಮಾಡಲು ಎಂದೂ ಮನಸ್ಸು ಮಾಡಲಿಲ್ಲ. ಇಂಗ್ಲೀಷ ಜನರ ಸ್ಥಳದಲ್ಲಿ ಹಿಂದೀ ಅಧಿಕಾರಿಗಳನ್ನು ನಿಯಮಿಸುವದರಿಂದ ಪರಿಸ್ಥಿತಿ ಸುಧಾರಿಸಲಿಲ್ಲ. ಏಕೆಂದರೆ, ಈ ಸುಶಿಕ್ಷಿತ ಹಿಂದೀಯರು ಪಟ್ಟಣದ ನಿವಾಸಿ

ಇಲ್ಲಿಯವರೆಗೆ ಇಂಗ್ಲೀಷ ಜನಾಂಗದಿಂದ ಪಟ್ಟಣದ ಸಂಸ್ಕೃತಿಯು ಪ್ರಭಾವಿತವಾಗಿದ್ದರು. ಈ ಮೊದಲಾದ ಕಾರಣಗಳಿಂದ ಹಳ್ಳಿಯ ಶಿಕ್ಷಣದ ಸಮಸ್ಯೆಯು ಇನ್ನೂ ಇತ್ಯರ್ಥದ ಸುಸೂತ್ರಸ್ಥಿತಿಗೆ ಬಂದಿಲ್ಲವೆಂದು ಹೇಳಬಹುದು.

ಮೊದಲನೆಯ ಜಾಗತಿಕ ಯುದ್ಧದ ತರುವಾಯ ಸರಕಾರದ ಧೋರಣೆಯಲ್ಲಿ ನಿಜವಾದ ಬದಲಾವಣೆ ಕಂಡು ಬಂದಿತು. ಇದರಿಂದ ಮುಂದಿನ ಮಹತ್ವದ ಪ್ರಗತಿಯು ಸಾಧ್ಯವಾಗಿದ್ದು ತೋರಿಬಂದಿತು. ಮೊದಲನೆಯದಾಗಿ ಹಳ್ಳಿಯ ಕ್ಷೇತ್ರವನ್ನು ಸಂಪೂರ್ಣವಾಗಿ ಒಂದು ಘಟಕವೆಂದು ಪರಿಗಣಿಸಲಾಯಿತು. ಎರಡನೆಯದಾಗಿ ಗ್ರಾಮದ ಆಸಕ್ತಿಯ ಬಳಕೆಯಿಂದ ಹಳ್ಳಿಯ ಕ್ಷೇತ್ರದ ಸರಕಾರಿ ಶಾಲೆಯ ಪಠ್ಯಕ್ರಮವನ್ನು ಪರಿವರ್ತಿಸಲಾಯಿತು. ಮೂರನೆಯದಾಗಿ ಗ್ರಾಮೀಣ ಶಿಕ್ಷಣದ ಪ್ರಸಾರವನ್ನು ಮಾಡಿ ಶಾಲೆಯನ್ನೆಂದೂ ಕಾಣದ ಸಾವಿರಾರು ಹಳ್ಳಿಗಳಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಿದೆವು. ಆಗ ಬ್ರಿಟಿಶ ಸರಕಾರಕ್ಕೆ ಹಳ್ಳಿಗಳ ಮಹತ್ವ ಗೊತ್ತಾಯಿತು. ತತ್ಪರಿಣಾಮವಾಗಿ ಹಳ್ಳಿಯ ಜೀವನದ ಸಾಮಾನ್ಯ ಸಮಸ್ಯೆಗಳು-ವಿಶೇಷವಾಗಿ ಶಿಕ್ಷಣದ ಸಮಸ್ಯೆಯು ಸರಕಾರಿ ಅಧಿಕಾರಿಗಳ ಗಮನಕ್ಕೆ ಒರತೊಡಗಿದವು. ಆದರೆ, ಗ್ರಾಮೀಣರಲ್ಲಿ ಪ್ರಾಂತಿಕ ಸ್ವಾಯುತ್ತತೆಗೆ ಅನುಗುಣವಾಗಿ ಆರಿಸಲ್ಪಟ್ಟ ಜನತೆಯ ಮಂತ್ರಿಮಂಡಳಗಳು ಹಿಂದೆಂದೂ ಕಾಣದಷ್ಟು ಮನಃಪೂರ್ವಕವಾಗಿ ಈ ಸಮಸ್ಯೆಯನ್ನು ಎತ್ತಿ ಕೊಳ್ಳುವ ವರೆಗೆ, ಅಷ್ಟು ಫಲಸವಾಗಿದ್ದಿಲ್ಲ. ಇಂದು ಹಳ್ಳಿಯ ಶೈಕ್ಷಣಿಕ ಸಮಸ್ಯೆಯ ಮಹತ್ವ ಹಾಗೂ ಸಿಸ್ತಾರವನ್ನು ಸರಕಾರವು ಪೂರ್ಣವಾಗಿ ತಿಳಿದುಕೊಂಡಿದೆ ಎಂದೂ ಮತ್ತು ಸಾಮಾನ್ಯ ಹಳ್ಳಿಗಳ ದೀನ ದೆಶೆಯ ಬಗ್ಗೆ ಸರಕಾರಕ್ಕೆ ಸಹಾನುಭೂತಿ ಉಂಟಾಗಿದೆ ಎಂದೂ ಮತ್ತು ಅವನ ಜೀವನದ ಮಟ್ಟವನ್ನು ಹಾಗು ಅವನ ಶೈಕ್ಷಣಿಕ ಸ್ಥಿತಿಯನ್ನು ಮೇಲಕ್ಕೆ ಎತ್ತಲು ಸರಕಾರವು ಆತುರವಾಗಿದೆಯೆಂದೂ ನಾವು ಧಾರಾಳವಾಗಿ ಹೇಳಬಹುದು. ಆದರೆ ಬರಿಯ ಸಹಾನುಭೂತಿ ಮತ್ತು ಆತುರತೆಯಿಂದ ಸರಿಯಾದ ತೀವ್ರ ಪ್ರಗತಿಯಾಗದು ಮತ್ತು ಶಿಕ್ಷಣ ತಜ್ಞರು ಹಳ್ಳಿಯ ಶಿಕ್ಷಣದ ಸಮಸ್ಯೆಗಳನ್ನು ಬಿಡಿಸಲು ಸಮಾಧಾನಕರವಾದ ಮತ್ತು ಪರಿಣಾಮಕಾರಿಯಾದ ಒಂದು ಪದ್ಧತಿಯನ್ನು ಹುಡುಕಲು ಶಕ್ತರಾಗದ್ದರಿಂದ ನಮ್ಮ ಪ್ರಗತಿ ಕುಂಠಿತವಾಗಿದೆ. ಈ ಕೆಳಗಿನ ವಾಕ್ಯಾವಳಿಗಳಲ್ಲಿ ಕೊಟ್ಟ ಕೆಲವು ಉದಾಹರಣೆಗಳಿಂದ ಹಳ್ಳಿಯ ಶಿಕ್ಷಣದ ಸಮಸ್ಯೆಯು ಎಷ್ಟು ತೊಡಕಿನದು ಮತ್ತು ವಿಸ್ತಾರವಾದದ್ದು ಎಂಬುದು ಗೊತ್ತಾಗುವದು.

ಹಳ್ಳಿಯ ಶಿಕ್ಷಣದ ಮೊಟ್ಟಮೊದಲನೆಯ ಸಮಸ್ಯೆಯೆಂದರೆ, ಬಹು ಜನರು ಉಪಯೋಗಿಸುವ, ಆದರೆ ತೀರ ಸ್ವಲ್ಪ ಜನರು ತಿಳಿದಿರುವ 'ಹಳ್ಳಿ' ಎಂಬ ಶಬ್ದದ ವ್ಯಾಖ್ಯೆಯನ್ನು ಕೊಡುವದು. 'ಹಳ್ಳಿ' ಯೆಂದರೇನು? ತೆರಿಗೆಯನ್ನೆತ್ತುವ ಮತ್ತು ಭೂಮಿಯ ಹಕ್ಕುಗಳನ್ನು ನಮೂದಿಸುವ ತನ್ನ ಧ್ಯೇಯಸ್ಪಷ್ಟತೆಗಾಗಿ ಕಂದಾಯ ಖಾತೆಯು 'ಹಳ್ಳಿ' ಯೆಂದರೆ ಒಂದು ವಿಶಿಷ್ಟ ಕ್ಷೇತ್ರ ಘಟಕವೆಂದು ವ್ಯಾಖ್ಯೆಯನ್ನು ಕೊಟ್ಟಿತು. ಆ ಹಳ್ಳಿಯಲ್ಲಿ ಜನರು ವಸತಿ ಮಾಡುತ್ತಿದ್ದಲಿಲ್ಲದಿರಲಿ ಅಥವಾ ಅವಶ್ಯವಿಲ್ಲದಿರಲಿ 'ಬೇಚಿರಾಕ ಹಳ್ಳಿ' ಎಂದೆನ್ನಿಸಿಕೊಳ್ಳುತ್ತಿದ್ದರು. ಸಾಮಾನ್ಯವಾಗಿ ಆ ಕ್ಷೇತ್ರದೊಳಗೆ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಜನರು ವಸತಿ ಮಾಡುವದು ಸಾಮಾನ್ಯವಾಗಿತ್ತು. ಅಂತಹ ಉದಾಹರಣೆಗಳಲ್ಲಿ ಜನರು ಮಾಡಿಸುವ ಪ್ರತಿಯೊಂದು ಸ್ಥಳಕ್ಕೆ 'ಹಟ್ಟಿ' ಯೆಂದು ಕರೆಯುತ್ತಾರೆ ಮತ್ತು ಈ ಎಲ್ಲ ಹಟ್ಟಿಗಳು ಸೇರಿ ಒಂದು ಹಳ್ಳಿಯಾಗುತ್ತದೆ. ಕೆಲವು ಒಂದು ಹಟ್ಟಿಯಿಂದ ಮತ್ತೊಂದು ಹಟ್ಟಿಗೆ ಎಷ್ಟೋ ಮೈಲುಗಳ ಅಂತರವಿರುತ್ತವೆ ಉದಾಹರಣಾರ್ಥವಾಗಿ ರತ್ನಾಗಿರಿ ಜಿಲ್ಲೆಯಲ್ಲಿ ೧೮೦೦ ಹಳ್ಳಿಗಳಿವೆ. ಪ್ರತಿಯೊಂದು ಹಳ್ಳಿಯಲ್ಲಿ ಎಷ್ಟೋ ಹಟ್ಟಿಗಳಿವೆ. ಒಂದು ಹಳ್ಳಿಯಲ್ಲಂತೂ ಹಟ್ಟಿಗಳ ಸಂಖ್ಯೆ ೩೦! ಆ ಜಿಲ್ಲೆಯಲ್ಲಿ ಒಟ್ಟು ಹಟ್ಟಿಗಳ ಸಂಖ್ಯೆ ೧೦,೦೦೦ ಕಂದಾಯ ಖಾತೆಯವರಿಗೆ ಈ ಮಾತುಗಳು ಮಹತ್ವದ್ದಾಗಿರಬೇಕು ಎಲ್ಲ ಹಟ್ಟಿಗಳ ಜನಸಂಖ್ಯೆಯನ್ನು ಹಳ್ಳಿಯ ಜನಸಂಖ್ಯೆಯೆಂದೇ ಲೆಕ್ಕಕ್ಕೆ ಹಿಡಿಯುವದು ರೂಢಿಯಲ್ಲಿದೆ. 'ಹಳ್ಳಿ'ಗೆ ಕಂದಾಯ ಖಾತೆಯವರು ಕೊಟ್ಟ ಈ ವ್ಯಾಖ್ಯೆಯು ಶಿಕ್ಷಣ ಖಾತೆಯ ಬೇಡಿಕೆಗಳಿಗೆ ಅನುಗುಣವಾಗಿಲ್ಲವೆಂಬುದು ಸ್ಪಷ್ಟವಿದೆ. ಶಿಕ್ಷಣ ತಜ್ಞರಿಗೆ ಬೇಕಾದುದು ಒಂದು ಕ್ಷೇತ್ರದ ಘಟಕವಲ್ಲ, ಆದರೆ ಜನಸಂಖ್ಯೆಯ ಒಂದು ಘಟಕ. ಆದುದರಿಂದ, ಶಾಲೆ, ವಾಚನಾಲಯ

ಮೊದಲಾದವುಗಳ ಸಾಮಾನ್ಯ ಅನುಕೂಲತೆಗಳ ದೃಷ್ಟಿಯಿಂದ ಒಂದು ವಿಶಿಷ್ಟ ಕ್ಷೇತ್ರದಲ್ಲಿ ಗುಂಪು ಕಟ್ಟಿಕೊಂಡು ಇರುವ ಜನತೆ, ಎಂದರೆ ಒಂದು ಹಳ್ಳಿಯಾಗುತ್ತದೆ. ಆದುದರಿಂದ ಇಂಥ ಎಲ್ಲ ಬೇರೆ ಬೇರೆ ಜನತಾ ಕೇಂದ್ರಗಳನ್ನು ಗುರುತಿಸಿ ಗೊತ್ತುಪಡಿಸಲು ಶಿಕ್ಷಣ ಖಾತೆಯವರು ಇಡೀ ಪ್ರಾಂತದ ಕ್ಷೇತ್ರವನ್ನು ಪರಿಶೀಲಿಸಬೇಕು. ಈ ಕೇಂದ್ರಗಳಲ್ಲಿ ಕೆಲವು ತೀರ ಚಿಕ್ಕವುಗಳಿದ್ದುದೂ ಮತ್ತು ಹಲವಾರು ಕೇಂದ್ರಗಳು ಒಂದಕ್ಕೊಂದು ತೀರ ಸಮೀಪವಿದ್ದು ಒಂದೇ ಶಾಲೆಯಿಂದ ಎಲ್ಲವುಗಳ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಬಹುದೆಂಬ ಮಾತು ಸತ್ಯ. ಅಂಥ ಪ್ರಸಂಗಗಳಲ್ಲಿ ಶಿಕ್ಷಣ ಖಾತೆಯು ಒಂದೇ ಶಾಲೆಯಿಂದ ಕೆಲಸವನ್ನು ಸಾಗಿಸಲು ಶಕ್ಯವಿದ್ದ ಜನತಾ ಕೇಂದ್ರಗಳನ್ನು ಗುಂಪುಗೂಡಿಸಲು ಸರಕಾರವು ನಿರ್ಧರಿಸಬೇಕು. ಈ ಜನತೆಯ ಕೇಂದ್ರಗಳನ್ನು ಪರಿಶೀಲಿಸಿ ಅವುಗಳನ್ನು ಯೋಗ್ಯವಾದ ಗುಂಪುಗಳನ್ನಾಗಿ ಮಾಡಿದ ನಂತರವೇ ಎಷ್ಟು ಶಾಲೆಗಳನ್ನು ನಾವು ಪೂರೈಸಬೇಕೆಂಬುದು ಮತ್ತು ಅವುಗಳನ್ನು ಎಲ್ಲಿ ಕಟ್ಟಬೇಕೆಂಬುದೂ ನಿಶ್ಚಿತವಾಗಿ ನಮಗೆ ಗೊತ್ತಾಗುವದು. ಇಂಥ ಪರಿಶೀಲನೆಯ ಮಹತ್ವವನ್ನು ಒತ್ತಿ ಹೇಳುವ ಅವಶ್ಯಕತೆಯಿಲ್ಲ.

ಈ ದೃಷ್ಟಿಯಿಂದ ನಮ್ಮ ಜಿಲ್ಲೆಗಳನ್ನು ಇನ್ನೂ ಪರಿಶೀಲಿಸದೇ ಇರುವದು ನಮ್ಮ ದುರ್ದೈವವೇ ಸರಿ. ೧೯೩೯ರ ಸುಮಾರಿಗೆ ಪ್ರಾಂತಿಕ ಪ್ರಾಥಮಿಕ ಶಿಕ್ಷಣದ ಸಮಿತಿಯು ಈ ತರಹದ ಪರಿಶೀಲನೆ ನಡೆಸಬೇಕೆಂಬುವ ಸೂಚನೆಯನ್ನು ಸರಕಾರದ ಮುಂದಿಟ್ಟಿತು. ಆದರೆ ಒಂದಿಲ್ಲೊಂದು ನೆವದಿಂದ ಆಗಿನ ಸರಕಾರವು ಅದನ್ನು ಅಂಗೀಕರಿಸಲಿಲ್ಲ. ಸುದೈವದಿಂದ ಸದ್ಯದ ಸರಕಾರವು ಹೊಸ ಧೋರಣೆಯನ್ನು ತಾಳಿ ರತ್ನಾಗಿರಿ ಜಿಲ್ಲೆಯ ಪರಿಶೀಲನೆಯನ್ನು ನಡೆಸಲು ಜಿ. ಆರ್. ಪ್ರಿ. ಸರುಳೇಕರರವರಿಗೆ ಅನುವು ಮಾಡಿಕೊಟ್ಟಿದೆ. ಅದೇ ಪ್ರಕಾರ ವಾಂದ್ರೆಕರ ಕಮೀಟಿಯವರು ರತ್ನಾ ಜಿಲ್ಲೆಯ ಒಂದು ಭಾಗವನ್ನು ಪರಿಶೀಲಿಸಿದ್ದಾರೆ. ಆದರೆ, ಇಲ್ಲಿಯೂ ಕೂಡ ಅವರ ಫಲಿತಾಂಶಗಳು ಇನ್ನೂ ಪ್ರಕಟವಾಗಿಲ್ಲ ಮತ್ತು ಸಾಮಾನ್ಯ ಜನತೆಯ ಕೈಯಲ್ಲಿ ಇಲ್ಲ. ಅಲ್ಲದೇ ಉಳಿದ ಜಿಲ್ಲೆಗಳಲ್ಲಿ ಇಂತಹ ಪರಿಶೀಲನೆಯನ್ನು ನಡೆಸಲು ಯಾವ ಯೋಜನೆಯನ್ನೂ ಕೈಕೊಳ್ಳಲಾಗಿಲ್ಲ. ಆದುದರಿಂದ ಎಲ್ಲ ಜಿಲ್ಲೆಗಳಲ್ಲಿ ಆದಷ್ಟು ಬೇಗ ಇಂತಹ ಪರಿಶೀಲನೆ ನಡೆಸಲು ಮತ್ತು ಫಲಿತಾಂಶಗಳನ್ನು ಪ್ರಕಟಿಸುವದು ಶಿಕ್ಷಣ ಖಾತೆಯ ಪ್ರಥಮ ಕರ್ತವ್ಯ. ಎರಡನೆಯದಾಗಿ ಖಾನೆಸುಮಾರಿ ಅಂಕೆಗಳನ್ನು ಕೊಡುವ ಪದ್ಧತಿಯಲ್ಲಿ ಬದಲಾವಣೆ ಮಾಡುವ ಅವಶ್ಯಕತೆಯನ್ನು ಶಿಕ್ಷಣ ಖಾತೆಯು ಎತ್ತಿ ತೋರಿಸಬೇಕು. ಸದ್ಯಕ್ಕೆ ಒಂದು ಹಳ್ಳಿಯ ಎಲ್ಲ ಹಟ್ಟಿಗಳ ಒಟ್ಟು ಜನಸಂಖ್ಯೆಯನ್ನು ಖಾನೆಸುಮಾರಿ ತೋರಿಸುತ್ತಿದೆ. ಶೈಕ್ಷಣಿಕ ದೃಷ್ಟಿಯಿಂದ ಇದು ನಿರುಪಯೋಗವಾಗಿರುತ್ತದೆ ಮತ್ತು ನಾವು ಪ್ರತಿಯೊಂದು ಹಟ್ಟಿಯ ಬೇರೆ ಬೇರೆ ಜನಸಂಖ್ಯೆಯನ್ನು ತರ್ಕ ಮಾಡಿಯೇ ಗೊತ್ತುಪಡಿಸಬೇಕಾಗುತ್ತದೆ ಹೊರತು ಇತರ ಮಾರ್ಗವಿಲ್ಲ. ಆದುದರಿಂದ ಪ್ರತಿಯೊಂದು ಹಟ್ಟಿಯ ಜನಸಂಖ್ಯೆಯನ್ನು ಖಾನೆಸುಮಾರಿಯಲ್ಲಿ ನಮೂದಿಸುವದು ಅವಶ್ಯವಿದೆ. ಸರಕಾಲಕ್ಕೆ ಖಾನೆಸುಮಾರಿ ಅಧಿಕಾರಿಗಳಿಗೆ ಇದನ್ನು ತಿಳಿಸಿದರೆ ಈ ಕೆಲಸವು ಸಹಜ ಸಾಧ್ಯವಿದೆ ಮತ್ತು ೧೯೩೧ರ ನೇ ಇಸ್ವಿಯಲ್ಲಿ ನಡೆಯಬೇಕಾದ ಖಾನೆಸುಮಾರಿ ಕಾಲಕ್ಕೆ ಅವಶ್ಯಕ ಕ್ರಮವನ್ನು ಕೈಕೊಳ್ಳಲಾಗುವದೆಂದು ನಂಬಬಹುದು.

ಶಿಕ್ಷಣಕ್ಕಾಗಿ ಹೆಚ್ಚು ಅನುಕೂಲತೆಯ ದೃಷ್ಟಿಯಿಂದ ಜನತೆಯ ಕೇಂದ್ರಗಳನ್ನು ಗುಂಪುಗಳನ್ನಾಗಿ ಮಾಡುವದೇ ಹಳ್ಳಿಯ ಶಿಕ್ಷಣದ ಎರಡನೆಯ ಸಮಸ್ಯೆ. ನಮ್ಮ ಅನೇಕ ವಸತಿ ಕೇಂದ್ರಗಳು ತೀರ ಚಿಕ್ಕವಿದ್ದು ಅವುಗಳಿಗೆ ಪ್ರಾಥಮಿಕ ಶಾಲೆಯೊಳನೇ ಇಯತ್ತೆಯ ವರೆಗೆ ಕಲಿಸುವ ಅನುಕೂಲತೆಯುಳ್ಳ ಒಬ್ಬ ಶಿಕ್ಷಕನಿರುವ ಶಾಲೆಗಳನ್ನು ಕೊಡುವದು ಮಾತ್ರ ಶಕ್ಯವಿದೆ. ತೀರ ಸ್ವಲ್ಪ ಕೇಂದ್ರಸ್ಥಳಗಳಲ್ಲಿ ಮಾತ್ರ ಪೂರ್ಣ ಪ್ರಾಥಮಿಕ ಶಾಲೆಗಳನ್ನು ಮತ್ತು ಮಾಧ್ಯಮಿಕ ಶಾಲೆಗಳನ್ನು ಕೊಡುವದು ಶಕ್ಯವಿದೆ. ಆದುದರಿಂದ ಶಿಕ್ಷಣಕ್ಕಾಗಿ ಹೆಚ್ಚಿನ ಅನುಕೂಲತೆಯ ದೃಷ್ಟಿಯಿಂದ ಈ ವಸತಿ ಕೇಂದ್ರಗಳನ್ನು ಯಾವ ತಳಹದಿಯ ಮೇಲೆ ಗುಂಪುಗಳನ್ನಾಗಿ ಮಾಡಿತು ಎಂಬುದೇ ಶಿಕ್ಷಣ ತಜ್ಞರು ಬಿಡಿಸಬೇಕಾದ ಸಮಸ್ಯೆಯಾಗಿದೆ. ಹೀಗೆ ಗುಂಪುಗಳನ್ನು ಮಾಡುವದು ಆಡಳಿತೆಯ ದೃಷ್ಟಿಯಿಂದಲೂ ಉಪಯುಕ್ತವಾಗಿದೆ. ಏಕೆಂದರೆ, ಅಂತಹ ವಸತಿ ಕೇಂದ್ರಗಳು ಒಂದೊಂದು ಗುಂಪಿನಲ್ಲಿ ಎಲ್ಲ ಶಾಲೆಗಳು ಕೂಡಿ ಆಡಳಿತೆ ಮತ್ತು ತಪಾಸಣೆಯ ದೃಷ್ಟಿಯಿಂದ ಯೋಗ್ಯವಾದ ಒಂದೊಂದು ಘಟಕವಾಗುತ್ತವೆ.

ಸದ್ಯಕ್ಕೆ ಹೀಗೆ ಗುಂಪುಗಳನ್ನಾಗಿ ಮಾಡುವದು ಯಾವ ಪ್ರಯತ್ನವೂ ಆದಂತೆ ಕಂಡುಬರುವದಿಲ್ಲ. ಕಂದಾಯ

ಖಾತೆಯ ಹಳ್ಳಿಗಳನ್ನು ತಾಲೂಕಗಳನ್ನಾಗಿ, ಪೇಶಾಗಳ ನ್ನಾಗಿ ಮತ್ತು ಮಹಾಲಗಳನ್ನಾಗಿ ತನ್ನ ಅನುಕೂಲತೆಯ ದೃಷ್ಟಿಯಿಂದ ಗುಂಪುಗಳನ್ನಾಗಿ ಮಾಡಿಕೊಂಡಿದೆ. ಶಿಕ್ಷಣ ಖಾತೆಯು ತನ್ನದೇ ಆದ ಒಂದು ದೃಷ್ಟಿಕೋನದಿಂದ ಹಳ್ಳಿಯ ಕ್ಷೇತ್ರವನ್ನು ಅಭ್ಯಾಸ ಮಾಡಲು ಎಂದೂ ಲಕ್ಷ್ಯ ಕೊಟ್ಟಿಲ್ಲ ಮತ್ತು ತನ್ನ ಆಡಳಿತವ ಸಲುವಾಗಿಯೂ ಈ ಕಂದಾಯದ ವಿಭಾಗಗಳನ್ನೇ ಇಟ್ಟುಕೊಳ್ಳುವದರಲ್ಲಿ ತೃಪ್ತಿಯನ್ನು ತೋರಿಸಿದೆ —ಹೀಗಾಗಿ, ಒಂದು ತಾಲೂಕಾ ಅಥವಾ ಪೇಶಾವಳ್ಳಿಯ ಎಲ್ಲ ಶಾಲೆಗಳು ಪಗಾರ ಹಂಚುವ ಆಂಕಿ ಸಂಖ್ಯೆಗಳನ್ನು ಕಲಿಕಾಕುವದು ಮೊದಲಾದ ಆಡಳಿತದ ದೃಷ್ಟಿಯಿಂದ ಒಬ್ಬ ತಾಲೂಕಾ-ಮಾಸ್ತರನ ಕೆಳಗೆ ಗುಂಪು ಗುಂಪಾಗಿ ಮಾರ್ಪಟ್ಟಿವೆ.— ತಪಾಸಣೆಯ ಸಲುವಾಗಿ ಒಂದು ಜಿಲ್ಲೆಯನ್ನೇ ಒಂದು ಘಟಕವೆಂದು ಎಣಿಸಲಾಗುತ್ತಿದ್ದು, ಅದನ್ನು ನಿಯಮಿಸಲ್ಪಟ್ಟ ತಪಾಸಣೆಯ ಅಧಿಕಾರಿಗಳ ಸಂಖ್ಯೆಗೆ ಅನುಗುಣವಾಗಿ ಬೇರೆ ಬೇರೆ ಉಪ ಗುಂಪುಗಳನ್ನಾಗಿ (ಶಕ್ಯವಿದ್ದಲ್ಲೆಲ್ಲ, ತಾಲೂಕಾ ಮತ್ತು ಪೇಶಾ ಪದ್ಧತಿಯನ್ನನುಸರಿಸಿ) ಹೇಗೋ ವಿಭಾಗಿಸಲಾಗಿದೆ. ಆದರೆ, ತರ್ಕಬದ್ಧವಾದ ಮತ್ತು ಶೈಕ್ಷಣಿಕ ತಳಹದಿಯ ಮೇಲೆ, ತೀರ ಸ್ವಲ್ಪ ಅತಿ ಹೆಚ್ಚು ಉಪಯುಕ್ತವಾಗುವ ಯೋಜನೆಯ ಮೇರೆಗೆ ಶಿಕ್ಷಣದ ಅತ್ಯುತ್ತಮ ಅನುಕೂಲತೆಗಳನ್ನು ಒದಗಿಸಲು ವಸತಿ ಕೇಂದ್ರಗಳ ರಚನೆಯನ್ನು ಮಾಡಲು ಪ್ರಯತ್ನವನ್ನು ಮಾಡಲಾಗಿಲ್ಲ. ಈ ಕಂದಾಯ ವಿಭಾಗಗಳನ್ನು ಬಿಟ್ಟುಕೊಟ್ಟು ಶೈಕ್ಷಣಿಕ ದೃಷ್ಟಿಯಿಂದ ಅನುಕೂಲವಾದ ಆಡಳಿತ ಯೋಜನೆಯನ್ನು ಮಾಡಿಕೊಳ್ಳುವದು ಶಿಕ್ಷಣ ಖಾತೆಯ ಮೊದಲನೆಯ ಕೆಲಸ. ಉಳಿದ ಅನೇಕ ಖಾತೆಗಳಲ್ಲಿ ಈಗಾಗಲೇ ಹೀಗೆ ಯೋಜಿಸಲಾಗಿದೆ. ಉದಾಹರಣೆಗಾಗಿ ಲೋಕೋಪಯೋಗಿ ಖಾತೆಯವರು ಮತ್ತು ಅರಣ್ಯ ಖಾತೆಯವರು ಮೊದಲು ಈ ಕಂದಾಯ ವಿಭಾಗಗಳನ್ನೇ ತಮ್ಮ ಆಡಳಿತದ ತಳಹದಿಯನ್ನಾಗಿಟ್ಟುಕೊಂಡು ಸ್ವಾರಂಭಿಸಿದರು. ಆದರೆ ಈ ಕಂದಾಯ ವಿಭಾಗಗಳು ತಮ್ಮ ಉದ್ದೇಶಕ್ಕೆ ಅನುಗುಣವಾಗಿರುವವೆಂಬುವನ್ನು ತೀವ್ರವೇ ಕಂಡುಹಿಡಿದು ತಮ್ಮದೇ ಆದ ಆಡಳಿತೆಯ ವಿಭಾಗಗಳನ್ನು ಅವರು ಮಾಡಿಕೊಂಡರು ಈ ಹೊಸ ವಿಭಾಗಗಳು ಕಂದಾಯ ಖಾತೆಯ ವಿಭಾಗಗಳಿಗಿಂತ ತೀರ ಭಿನ್ನವಾದುವು. ಶಿಕ್ಷಣ ಖಾತೆಯವರೂ ಹೀಗೆಯೇ ಮಾಡುವ ಹೊತ್ತು ಮೀರಕೊಡಗಿದೆ. ತೀವ್ರವಾದಷ್ಟು ಉತ್ತಮ.

ಆಡಳಿತೆಯ, ತಪಾಸಣೆಯ ಮತ್ತು ಶೈಕ್ಷಣಿಕ ಅನುಕೂಲತೆಗಳ ದೃಷ್ಟಿಯಿಂದ ವಸತಿ ಕೇಂದ್ರಗಳನ್ನು ಸಂತೆ ಸ್ಥಳಗಳ ತಳಹದಿಯ ಮೇಲೆ ಯೋಗ್ಯ ಗುಂಪುಗಳನ್ನ ವಿಭಾಗಿಸಬೇಕು. ಅಂದರೆ, ಸಂತೆಯ ನೆರೆಯುವ ಒಂ ಊರು ಕೇಂದ್ರ ಸ್ಥಳವೆಂದು ಪರಿಗಣಿಸಲ್ಪಡಬೇಕು. ಮು ಅದರಿಂದ ಐದರಿಂದ ಏಳು ಮೈಲುಗಳ ವರೆಗಿನ ತ್ರಿಜ್ಯ ಬರುವ ಮತ್ತು ಸಾಮಾನ್ಯತಃ ಸಂತೆಯಲ್ಲಿ ಭಾಗವಹಿಸ ಎಲ್ಲ ಹಳ್ಳಿಗಳನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಒಂದೇ ಘ ವೆಂದು ಆ ಕೇಂದ್ರ ಸ್ಥಳದೊಡನೆ ಒಂದು ಗುಂಪನ ಮಾಡಬೇಕು. 'ವಾರ ಸಂತೆಯು' ತೀರ ಹಿಂದಿನ ತಿಯದಿದ್ದು, ಒಂದಕ್ಕೊಂದು ಹತ್ತಿರವಿದ್ದ ಎಷ್ಟೋ ಗಳ ಜನರು ಅನೇಕ ಶತಮಾನಗಳ ವರೆಗೆ ಆವಶ್ಯಕ ಸಾ ನುಗಳ ವ್ಯವಹಾರವನ್ನು ಸಾಗಿಸಲು ವಾರಕ್ಕೊಮ್ಮೆ ಕೂ ತ್ತಿರುವ ಸಂಗತಿಯು, ಆ ಪದ್ಧತಿಯ ಶಕ್ತಿಯನ್ನು ಸ್ಪ ವಾಗಿ ವ್ಯಕ್ತಪಡಿಸುತ್ತದೆ. ಅಲ್ಲದೇ ಅಂತಹ ಹಳ್ಳಿ ನಡುವೆ ಇದ್ದ ಆಳವಾದ ಸಾಮಾಜಿಕ ಮತ್ತು ಆರ್ಥಿಕ ಸೂತ್ರತೆಯೇ ಅವುಗಳನ್ನು ಒಂದೊಂದು ಗುಂಪುಗಳನ್ನಾ ವಿಭಾಗಿಸಲು ಸಹಜವಾದ ಅನುಕೂಲತೆಗಳನ್ನು ಒದ ಕೊಡುತ್ತದೆ. ಮೇಲಾಗಿ ಸಂತೆಯ ಕೇಂದ್ರಸ್ಥಳ ಪ್ರಚಾರ ಮತ್ತು ಆಡಳಿತೆಯ ದೃಷ್ಟಿಯಿಂದ ಎಷ್ಟೋ ಅ ಕೂಲತೆಯುಳ್ಳದ್ದಿರುತ್ತದೆ. ಏಕೆಂದರೆ, ಅದನ್ನೇ ನ ತಳಹದಿಯನ್ನಾಗಿಟ್ಟುಕೊಂಡು ಅದಕ್ಕೆ ಸಂಬಂಧಿಸಿ ಹಟ್ಟಿಗಳಲ್ಲಿ ಏನು ನಡೆಯುತ್ತದೆಂಬುದನ್ನು ತಿಳಿದುಕೊ ವದಕ್ಕೂ ಪರಸ್ಪರ ಸುದ್ದಿ ಹಾಗು ಸಾಮಾನುಗಳನ್ನು ತ ಲಿಕ್ಕೂ ಅಥವಾ ಕಳಿಸಲಿಕ್ಕೂ ಸ್ಥಾನಿಕ ಜನರ ಕೂಡ ವ್ಯ ಹಾರ ಸಾಗಿಸಲಿಕ್ಕೂ, ಮತ್ತು ಸಾಮಾನ್ಯವಾಗಿ ಒಂ ಉತ್ತಮವಾದ ಬೌದ್ಧಿಕ ಆಡಳಿತೆಯ, ಮತ್ತು ಪ್ರಚಾರ ಕೇಂದ್ರವನ್ನು ಬೆಳೆಸಲಿಕ್ಕೂ ತೀರ ಸುಲಭವಾಗುತ್ತ ಅಂತಹ ಒಂದು ಕೇಂದ್ರ ಸ್ಥಳದಲ್ಲಿ ಏರ್ಪಡಿಸಿದ ಉ ಶಿಕ್ಷಣದ ಅನುಕೂಲತೆಯು ಉಳಿದ ಯಾವ ಸ್ಥಳಗಳಿ ತಲೂ ಆ ಕೇಂದ್ರ ಸ್ಥಳಗಳಿಗೆ ಸಂಬಂಧಿಸಿದ ಹಟ್ಟಿಗಳ ರಿಗೆ ಹೆಚ್ಚು ಉಪಯುಕ್ತವಾಗುತ್ತದೆ. ಆದುದರಿಂ ವಾರದ ಸಂತೆಯ ತತ್ವದ ಮೇಲೆ ವಸತಿ ಕೇಂದ್ರಗಳ ಗು ವುಗಳನ್ನಾಗಿ ಮಾಡುವ ಉದ್ದೇಶದಿಂದ ಶಿಕ್ಷಣ ಖಾತೆಯ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಒಂದು ಪರಿಶೀಲನೆ ಕೈಕೊ ಬೇಕು. ಗುಜರಾಥದಲ್ಲಿ ಮತ್ತು ಕೊಂಕಣದ ಕೆಲವು ಭಾ ಗಳಲ್ಲಿ ಈ ವಾರದ ಸಂತೆಗಳು ಇಲ್ಲವೆಂಬ ಮಾತು ಸ

ಥದರಲ್ಲಿ ಬೇರೆ ಒಂದು ತತ್ವವನ್ನು ಅನುಸರಿಸಬೇಕಾ
ವದು. ಈ ಕ್ಷೇತ್ರಗಳಲ್ಲಿಯೂ ಕೂಡ ಪರಸ್ಪರ ವ್ಯವ
ರ, ಹೆಚ್ಚಿನ ಜನವಸತಿ, ಸ್ಥಾನಿಕ ಮಹತ್ವ ಮೊದಲಾದ
ಗಳ ದೃಷ್ಟಿಯಿಂದ ಕೇಂದ್ರ ಸ್ಥಳಗಳನ್ನು ಆರಿಸುವದು
ಲಭ ಸಾಧ್ಯವೆಂದು ನನ್ನ ಅನುಭವ. ಇದರಲ್ಲಿ ಕೇಂದ್ರ
ಳದಿಂದ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯು ಏಳು
ಲುಗಳಿಗಿಂತ ಹೆಚ್ಚು ಅಂತರದ ಮೇಲೆ ಇರದಂತೆ
ತಿಯೊಂದು ಗುಂಪನ್ನು ನಿರ್ಮಾಣ ಮಾಡುವದೇ
ಮ್ಯ ವಿಚಾರ.

ಒಮ್ಮೆ ಈ ಗುಂಪುಗಳಾದವೆಂದರೆ, ಆ ಗುಂಪುಗಳ
ಂದ್ರಸ್ಥಳಗಳಲ್ಲಿ ಒಂದು ಮಾದರಿಯ ಪ್ರಾಥಮಿಕ ಶಾಲೆ
ನ್ನು ಸ್ಥಾಪಿಸುವದು ಮುಂದಿನ ಹೆಜ್ಜೆ. ಸದ್ಯಕ್ಕೆ ನಾವು
ಥಮಿಕ ಶಿಕ್ಷಣವು ಸುಧಾರಿಸಬೇಕೆಂಬ ಬಗ್ಗೆ ಮತ್ತು
ಸ ಹೊಸ ಸುಧಾರಿಸಿದ ಪದ್ಧತಿಗಳನ್ನು ಅನುಸರಿಸ
ಕು ಎಂಬ ಬಗ್ಗೆ ಮಾತನಾಡುತ್ತಿದ್ದೇವೆ. ಈ ನಮ್ಮ
ತು ಸಾಮಾನ್ಯ ಪ್ರಾಥಮಿಕ ಶಿಕ್ಷಕರನ್ನು ಕ್ರಚಿತ್ತಾಗಿ
ಟ್ಟುತ್ತವೆ. ಮತ್ತು ಸಾಮಾನ್ಯ ಹಳ್ಳಿಗಳಿಗಂತೂ ಅದು
ಟ್ಟುವದೇ ಇಲ್ಲ. ಇದರ ಪರಿಣಾಮವಾಗಿ ನಾವಿಷ್ಟು
ಸ ವಿಚಾರಗಳನ್ನು ನೇರಿಸಲು ಪ್ರಯತ್ನ ಮಾಡಿದಾಗ್ಯೂ
ೃಯ ಕ್ಷೇತ್ರದಲ್ಲಿದ್ದ ಶಾಲೆಗಳು ತಮ್ಮ ಮೊದಲಿನ ಹಳೇ
ರಿಗುಂಟ ಸಾಗುವದೇ ಕಂಡುಬರುತ್ತದೆ. ನಮಗೀಗ
ಕಾದುದು ಪ್ರತಿಯೊಂದು ವಸತಿ ಕೇಂದ್ರದ ಗುಂಪಿನಲ್ಲಿ
ಸ ಮಾದರಿಯ ಉತ್ತಮ ಶಾಲೆಯನ್ನು ನಿರ್ಮಾಣ
ಡುವದು. ಅಂದರೆ, ಪ್ರತಿಯೊಂದು ತರದ ಸ್ಥಾನಿಕ
ಸ್ಥಿತಿಯಲ್ಲಿ ಆ ಮಾದರಿಯ ಶಾಲೆಗಳು ಕೆಲಸ ಮಾಡು
ುವದನ್ನು ಸಾಮಾನ್ಯ ಶಿಕ್ಷಕ ಹಾಗು ಸಾಮಾನ್ಯ ಹಳ್ಳಿಗ
ರಿಗೆ ನೋಡಲು ಸಿಗುತ್ತದೆ. ಇದರಿಂದ ಅವನಿಗೆ ಒಂದು
ರ್ಗದರ್ಶನ ಮತ್ತು ಏತರಿಂದಲೂ ದೊರೆಯದ ಸ್ಫೂರ್ತಿ
ಟಾಗಿ ಒಟ್ಟಿನಲ್ಲಿ ನಮ್ಮ ಶಾಲೆಗಳ ಮಟ್ಟನ್ನು ಮೇಲಕ್ಕೆ
ತ್ತುವ ಅತ್ಯುತ್ತಮ ಸಾಧನವು ಇದು ಆಗಬಹುದು.—
ಕ್ಕೆ ನಮ್ಮ ಖಾತೆಗೆ ಇದ್ದ ಜನ-ಧನ, ಇವುಗಳ ಆಳವು
ರದೇ ಈ ವಿಚಾರಕ್ಕಾಗಿಯೇ ನಾವು ಮುಂದಿನ ಎರಡು
ರು ವರುಷಗಳನ್ನು ಕಳೆದರೆ ದೇಶದಾದ್ಯಂತ ಪ್ರತಿ
ಂದು ಹಳ್ಳಿಯಿಂದ ಐದರಿಂದ ಏಳು ಮೈಲುಗಳ ಒಳ
ಕ್ಷೇತ್ರದಲ್ಲಿಯೇ ಒಂದು ಉತ್ತಮ ರೀತಿಯಿಂದ ನಡೆದ
ಿಯನ್ನು ನಿರ್ಮಾಣ ಮಾಡಬಹುದು.

ಇಂತಹ ಗುಂಪುಗಳನ್ನು ಒಮ್ಮೆ ಮಾಡಿದೆವೆಂದರೆ, ಅವು ಉಳಿದ ಅನೇಕ ಉದ್ದೇಶಗಳಿಗಾಗಿಯೂ ಉಪಯುಕ್ತವಾಗುವವು. ಉದಾಹರಣೆಗಾಗಿ, ಅಂತರ್‌ಶಾಲಾ ಪಂದ್ಯಾಟಗಳು, ಅಂತರ್‌ಶಾಲಾ ಪ್ರವಾಸಗಳು, ಶಿಕ್ಷಕರ ವಾಚನಾಲಯಗಳಿಗಾಗಿ ಪುಸ್ತಕಗಳನ್ನು ಕಲೆಹಾಕಲು ವಿದ್ಯಾರ್ಥಿಗಳಿಗೆ ಸಂಚಾರಕ-ವಾಚನಾಲಯಗಳನ್ನು ಸಂಘಟಿಸಲು ತೀರ ಸ್ವಲ್ಪ ಖರ್ಚಿನಲ್ಲಿ ಅಥವಾ ಏನೂ ಖರ್ಚಿಲ್ಲದೇ ಶಿಕ್ಷಕರ ಸ್ನೇಹ ಸಮ್ಮೇಲನಗಳನ್ನು ಆಗಾಗ್ಗೆ ನೆರೆಯಿಸಲು ಈ ಗುಂಪುಗಳು ಉಪಯುಕ್ತವಾಗುವವು. ಒಟ್ಟಾರೆ, ಅಂತಪ ಗುಂಪುಗಳನ್ನು ನಿರ್ಮಾಣ ಮಾಡುವುದರಿಂದ ಶಿಕ್ಷಣ ಪದ್ಧತಿಯ ಹೊಸ ಸಂಘಟನೆಯ ಭಾರವನ್ನು ತಾಳುವಂತಹ ಒಂದು ತಳಕಟ್ಟು ಶಿಕ್ಷಣ ಖಾತೆಗೆ ದೊರೆಯುವದು. ಶೈಕ್ಷಣಿಕ ದೃಷ್ಟಿಯಿಂದ ಪ್ರತಿಯೊಂದು ಹಳ್ಳಿಯು ತೀರ ಚಿಕ್ಕ ಮತ್ತು ತಾಲೂಕವು ತೀರ ದೊಡ್ಡ ಘಟಕವು ಆಗಿರುವ ಸದ್ಯದ ವ್ಯವಸ್ಥೆಗಿಂತಲೂ ಈ ಹೊಸ ಯೋಜನೆಯು ಹೆಚ್ಚು ಉಪಯುಕ್ತವಾಗುವದು.

ಹಳ್ಳಿಯ ಶಿಕ್ಷಣದ ಮೂರನೆಯ ಸಮಸ್ಯೆಯು ಆಡಳಿತ ಯಂತ್ರಕ್ಕೆ ಸಂಬಂಧಿಸಿದ್ದು. ಹಳ್ಳಿಯ ಶಾಲೆಗಳನ್ನು ತೀರ ಕಡಿಮೆ ವೆಚ್ಚದಿಂದ ಮತ್ತು ಹೆಚ್ಚು ಪರಿಣಾಮಕಾರಕವಾದ ರೀತಿಯಲ್ಲಿ ಮೇಲ್ವಿಚಾರಣೆ ಮಾಡುವಂತೆ ಅದನ್ನು ಸರಿಗೊಳಿಸುವದೇ ಆಗಿದೆ. ಈ ಸಮಸ್ಯೆಯು ಇಷ್ಟು ದಿನ ದುರ್ಲಕ್ಷಿಸಲ್ಪಟ್ಟಿತ್ತು ಎಂಬುದು ವಿದಿತವಿದೆ. ಆಧುನಿಕ ಶಿಕ್ಷಣ ಪದ್ಧತಿಯ ಪ್ರಾರಂಭದಿಂದಲೂ ಜಿಲ್ಲೆಯೇ ಆಡಳಿತದ ಒಂದು ಘಟಕವೆಂದು ತೆಗೆದುಕೊಳ್ಳಲ್ಪಟ್ಟಿದೆ; ಪ್ರತಿಯೊಂದು ಶಾಲೆಯು ಉಳಿದ ಎಲ್ಲ ಶಾಲೆಗಳಿಂದ ಸ್ವತಂತ್ರವೆಂದು ತಿಳಿದುಕೊಳ್ಳಲ್ಪಟ್ಟು ಅದನ್ನು ನೇರವಾಗಿ ಜಿಲ್ಲಾ ಶಿಕ್ಷಣಾಧಿಕಾರಿಗೆ ಕೊಟ್ಟಿದೆ. ಮತ್ತು ಕೊನೆಗೆ ವರುಷದಲ್ಲಿ ಒಂದೆರಡು ಸಲ ಪ್ರತಿಯೊಂದು ಶಾಲೆಯನ್ನು ಸಂದರ್ಶಿಸಲು ಮತ್ತು ಅದರ ಕೆಲಸವನ್ನು ಅಳೆಯಲು ಕೆಲವು ಮೇಲ್ವಿಚಾರಕ ಅಧಿಕಾರಿಗಳನ್ನು ನೇಮಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ಶಾಲೆಗಳ ಸಂಖ್ಯೆಯು ಕಡಿಮೆ ಇದ್ದಾಗ ಈ ಪದ್ಧತಿಯು ಚನ್ನಾಗಿ ಕೆಲಸ ಮಾಡಿತು. ಆದರೆ ಈಗ ಪ್ರತಿಯೊಂದು ಜಿಲ್ಲೆಯಲ್ಲಿ ಶಾಲೆಗಳು ಅತಿ ಹೆಚ್ಚಾಗಿ ಬೆಳೆದುದರಿಂದ ಈ ಪದ್ಧತಿಯು ಕುಸಿದು ಬಿದ್ದಿದೆ ಎನ್ನಲು ಅಡ್ಡಿ ಇಲ್ಲ. ಆರ್ಥಿಕ ದೃಷ್ಟಿಯಿಂದ ಸಾಕಷ್ಟು ಆವಶ್ಯಕ ಮೇಲ್ವಿಚಾರಕ ಅಧಿಕಾರಿಗಳನ್ನು ನೇಮಿಸುವದು ಸರಕಾರಕ್ಕೆ ಶಕ್ಯವಾಗಿಲ್ಲ.

ತತ್ಪರಿಣಾಮವಾಗಿ ಪ್ರಾಥಮಿಕ ಶಾಲೆಗಳ ಆಡಳಿತ ಹಾಗೂ ತಪಾಸಣೆ ಇತ್ತೀಚಿನ ಕೆಲವು ವರ್ಷಗಳಲ್ಲಿ ತೀರ ಅಸಮಾಧಾನಕರವಾಗಿವೆ. ನಮ್ಮ ತಪಾಸಣೆಯ ಅಧಿಕಾರಿಗಳು ಶಿಕ್ಷಕರಿಗೆ "ಗೆಳೆಯರೂ, ಮಾರ್ಗದರ್ಶಕರೂ, ತತ್ವಜ್ಞಾನಿಗಳೂ" ಆಗಿರುವವರ ಬದಲು ಹೆಚ್ಚಾಗಿ ಪೋಲೀಸ ಮತ್ತು ಮುಲ್ಕಿ ಅಧಿಕಾರಿಗಳಾಗಿದ್ದಾರೆ. ತೀರ ಹೆಚ್ಚಿನದೆಂದರೆ, ನಮ್ಮ ಆಡಳಿತದ ಪದ್ಧತಿಯು ಕೇಂದ್ರೀಕೃತ ಪದ್ಧತಿಯ ಮೇಲೆಣ್ಣಿ ಸಲ್ಪಟ್ಟಿತ್ತು; ನಿಯಮ ಕಾಯದೆಗಳ ಬಿಗುವಿನಿಂದ ಅತಿಯಾಗಿ ನಿಯಂತ್ರಿತವಾಗಿತ್ತು; ಶಿಕ್ಷಕರಿಗೂ ಹಾಗೂ ಶಾಲೆಗಳಿಗೂ ಯಾವ ತರಹದ ಸ್ವಾತಂತ್ರ್ಯವನ್ನು ಕೊಟ್ಟಿರಲಿಲ್ಲ. ನಮ್ಮ ತಪಾಸಣೆಯ ಅಧಿಕಾರಿಗಳಿಗೆ ತಮ್ಮ ಬಂದೋಬಸ್ತಿ (ಪೋಲೀಸ) ಕರ್ತವ್ಯಗಳನ್ನೂ ಕೂಡ ಸರಿಯಾಗಿ ನಿರ್ವಹಿಸಲು ತೀರ ಸ್ವಲ್ಪ ಸಮಯವಿರುತ್ತದೆ ಮತ್ತು ಇದರ ಪರಿಣಾಮವಾಗಿ ಶಾಲೆಗಳಿಗೆ ಸ್ಫೂರ್ತಿಯನ್ನಿತ್ತು ಮಾರ್ಗದರ್ಶನ ಮಾಡುವ ತಮ್ಮ ಶೈಕ್ಷಣಿಕ ಕರ್ತವ್ಯಗಳನ್ನು ಅವರು ದುರ್ಲಕ್ಷಿಸುತ್ತಾರೆ. ಸರಕಾರದವರು ಆದಷ್ಟು ಬೇಗನೆ ಆವಶ್ಯಕ ಸಂಖ್ಯೆಯಷ್ಟು ಅಧಿಕಾರಿಗಳನ್ನು ನಿಯಮಿಸಲು ಶಕ್ತರಾಗುವರೆಂದು ಸಾಮಾನ್ಯವಾಗಿ ಆಶಿಸಲಾಗಿದೆ. ಆದರೆ ಯಾವಾಗಲೂ ಆಪರ ದಾರಿಯಲ್ಲಿ ಆರ್ಥಿಕ ತೊಡಕುಗಳು ಉಂಟಾಗಿವೆ. ಮತ್ತು ಶಿಕ್ಷಣದ ಇತಿಹಾಸದ ಅಭ್ಯಾಸುಗಳಿಗೆ, ತಪಾಸಣೆಯ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಲು ೧೯೨೧ರಲ್ಲಿಯೇ ಚಳುವಳಿಯು ಪ್ರಾರಂಭವಾಗಿದ್ದರೂ (Hartgag) ಹಾರ್ಟಗಾಗ ಕಮಿಟಿ ವರದಿಗೆ ಅನುಸಾರವಾಗಿ ತಪಾಸಿಗರ ಸಂಖ್ಯೆಯಲ್ಲಿಯ ಏರಿಕೆಯು ಶಾಲೆಗಳ ಬೆಳವಣಿಗೆಯೊಂದಿಗೆ ಮುನ್ನಡೆ ಇಡಲು ಎಂದೂ ಶಕ್ಯವಾಗಿಲ್ಲವೆಂಬ ಮಾತು ಸ್ಪಷ್ಟವಾಗಿ ಕಾಣುವದು. ಮತ್ತು ಹಾರ್ಟಗಾಗ್ ಕಮಿಟಿಯ ವರದಿಯಲ್ಲಿ ಚಿತ್ರಿಸಲ್ಪಟ್ಟದ್ದಕ್ಕಿಂತಲೂ, ಪರಿಸ್ಥಿತಿಯು ಇಂದು ಹೆಚ್ಚು ಹದಗೆಟ್ಟಿದೆ. ಈ ರೀತಿಯ ಸ್ಥಿತಿಗತಿಯು ಎಷ್ಟು ದಿನ ಸಾಗುವದು ಎಂಬುದೇ ಮುಖ್ಯ ಪ್ರಶ್ನೆಯಾಗಿದೆ. ನನ್ನ ದೃಷ್ಟಿಯಿಂದ ಜನನಸತಿ ಕೇಂದ್ರಗಳ ಪ್ರತಿಯೊಂದು ಗುಂಪನ್ನು ಆಡಳಿತದ ಮತ್ತು ತಪಾಸಣೆಯ ಒಂದು ಘಟಕವೆಂದು ರಚಿಸಿ ಆ ಕೇಂದ್ರ ಮಾರಿಯ ಶಾಲೆಯ ಮುಖ್ಯಾಧ್ಯಾಪಕನನ್ನು ಆ ಗುಂಪಿನ ಎಲ್ಲಾ ಶಾಲೆಗಳಿಗೆ ತಪಾಸಣೆಯ ಮತ್ತು ಮೇಲ್ವಿಚಾರಕ ಅಧಿಕಾರಿಯೆಂದು ನಿಯಮಿಸುವದು ಒಂದು ಮಿತವ್ಯಯ ಮತ್ತು ಹೆಚ್ಚು ವ್ಯಾವಹಾರಿಕವಾದ ಯೋಜನೆಯಾಗಿರುವದು. ಆ ಮುಖ್ಯಾಧ್ಯಾಪಕರ ಮೇಲೆ ಅಂಥ ೧೫ ಅಥವಾ ೨೦ ಗುಂಪಿಗೆ ಒಬ್ಬರಂತೆ ಪ್ರವಾಸಿಕ ತಪಾಸಣೆಯ ಅಧಿಕಾರಿಗಳು ಇರಬೇಕು ಮತ್ತು ಅವರು ನೇರವಾಗಿ ಜಿಲ್ಲೆಯ ಶೈಕ್ಷಣಿಕ ಅಧಿಕಾರಿಗಳ ಕೆಳಗೆ ಕೆಲಸ ಮಾಡಬೇಕು. ಅಂದರೆ, ತೀರ ತುಸು ಹೆಚ್ಚುಖರ್ಚಿನಿಂದ ಪ್ರಚಲಿತ ಪದ್ಧತಿಯಲ್ಲಿ ಆಮೂಲಾಗ್ರ ಮತ್ತು ಅತಿ ಫಲಕಾರಿಯಾದ ಬದಲಾವಣೆಯುಂಟಾಗುವದು ಮತ್ತು ಹಳ್ಳಿಯ ಶಾಲೆಗಳ ತಪಾಸಣೆ ಮತ್ತು ಆಡಳಿತವನ್ನು ಒಂದು ಗಟ್ಟಿಮುಟ್ಟಾದ ಮತ್ತು ಸೋಯಿರವಾದ ತಳಹದಿಯ ಮೇಲೆ ಈ ಯೋಜನೆಯು ನಿಲ್ಲಿಸುವದು. ಈ ಸಮಸ್ಯೆಯನ್ನು ನಾವು ಕೂಡಲೆ ಮತ್ತು ಆವಾದ ಅಭ್ಯಾಸದಿಂದ ನೋಡಬೇಕು.

ಮೇಲೆ ವಿವರಿಸಿದಂತೆ ರಚಿತವಾದ ಜನನಸತಿ ಕೇಂದ್ರಗಳ ಗುಂಪುಗಳು ಮತ್ತೊಂದು ಉದ್ದೇಶದ ಸಲುವಾ ಅಂದರೆ, ಒತ್ತಾಯದ ಶಿಕ್ಷಣವನ್ನು ದಾರಿಯಲ್ಲಿ ತರಲು ಅತ್ಯಂತ ಉಪಯುಕ್ತ ವಾಗುವವು. ಸದ್ಯಕ್ಕೆ ಒಂದು ಸಾವಿರ ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಎಲ್ಲ ಹಳ್ಳಿಗಳಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಲಾಗಿದೆ. ಆಡಳಿತದ ದೃಷ್ಟಿಯಿಂದ ಈ ನಿರ್ಧಾರವು ತುಸು ಅಸಮಾಧಾನಕರವಾದುದು. ಏಕಂದರೆ, ಒತ್ತಾಯದ ಶಿಕ್ಷಣದ ಅನೇಕ ಕ್ಷೇತ್ರಗಳನ್ನು ಒಂದಕ್ಕೊಂದು ಸಂಬಂಧವಿಲ್ಲದಂತೆ ದೂರದೂರ ಇರಿಸುತ್ತದೆ. ಇದರ ಬದಲು ಸಮೀಪವ ಪರಸ್ಪರ ಸಂಬಂಧವುಳ್ಳ ನಿರ್ದಿಷ್ಟ ಕ್ಷೇತ್ರಗಳಲ್ಲಿ ಒತ್ತಾಯದ ನಿಯಮವನ್ನು ಜಾರಿಮಾಡುವದು ಒಂದು ಉತ್ತಮ ಬದಲಾವಣೆಯಾಗಬಹುದಾಗಿತ್ತು. ಈ ಸಮಸ್ಯೆಗೆ ಈಗ ಅಷ್ಟು ಮಹತ್ವ ಉಳಿದಿಲ್ಲ. ಏಕಂದರೆ, ಸ್ವಲ್ಪ ದಿನಗಳಲ್ಲಿ ಇಡಿಯ ಪ್ರಾಂತದಲ್ಲೆಲ್ಲ ಒತ್ತಾಯವು ಪ್ರಾರಂಭವಾಗುವದು. ಆಗ ಪರಸ್ಪರ ಸಂಬಂಧವಿಲ್ಲದ ಕ್ಷೇತ್ರಗ

ಸದ್ಯದ ಆಡಳಿತದ ತೊಂದರೆಯು ಇಲ್ಲದಂತಾಗುವದು. ಆದರೆ, ನಾವು ಈಗ ಕೂಡ ಎದುರಿಸ ಬೇಕಾದ ಮತ್ತು ಸಣ್ಣಸಣ್ಣ ಹಳ್ಳಿಗಳಲ್ಲಿ ಒತ್ತಾಯವು ಪ್ರಾರಂಭವಾಗುತ್ತ ಹೋದಂತೆ ನಮಗೆ ಹೆಚ್ಚು ಹೆಚ್ಚು ತೊಂದರೆ ಯುಂಟು ಮಾಡುವ ಒಂದು ಮಹತ್ವದ ಸಮಸ್ಯೆ ಯೆಂದರೆ ಈ ಒತ್ತಾಯದ ನಿಯಮವನ್ನು ಮುರಿದ ಉದಾಹರಣೆಗಳನ್ನು ನಿಕಾಲಿ ಮಾಡಲು ಒಂದು ಮಧ್ಯಸ್ತರ ಮಂಡಲವನ್ನು ಹುಡುಕ ಬೇಕಾದುದೇ ಆಗಿರುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿ ಈ ಉದ್ದೇಶಕ್ಕಾಗಿ ಸಂಬಳಕೊಟ್ಟಾಗಲೀ ಇಲ್ಲವೇ ಗೌರವ ನ್ಯಾಯಾಧಿಕಾರಿಗಳನ್ನಾಗಲೀ ನಿಯಮಿಸುವದು ಶಕ್ಯವಾಗು ವದಿಲ್ಲ. ಆದುದರಿಂದ ಒಟ್ಟಿನಲ್ಲಿ ಪ್ರತಿಯೊಂದು ಹಳ್ಳಿಗೆ ಒಂದೊಂದು 'ಪಂಚಾಯತಿ' ಯಾಗುವದೆಂದು ಆಶಿಸಿದರೆ ೨ ಪಂಚಾಯತಿಗಳೇ ಅಂಥ ಹಟ್ಟಿಗಳನ್ನು ನಡೆಸುವದು. ಆದರೆ, ಇದು ತೀರ ದೂರದ ಮತ್ತು ಅಸ್ಪಷ್ಟ ಆಶೆ. ಮತ್ತು ಈ ಸ್ಥಾನಿಕ ಹಳ್ಳಿಯ ಪಂಚಾಯತಿಗಳು ತಮ್ಮ ಕ್ಷೇತ್ರಗ ಳಲ್ಲಿ ಒತ್ತಾಯವನ್ನು ಜಾರಿಯಲ್ಲಿ ತರಲು ಎಷ್ಟರಮಟ್ಟಿಗೆ ಸಮರ್ಥರಾಗುವನೆಂಬುದನ್ನು ಯಾರೂಹೇಳಲಾರರು. ಸಂದ ರ್ಭದಲ್ಲಿ ಮಧ್ಯಪ್ರಾಂತದವರು ನಡೆಸಿದ ಪ್ರಯೋಗವು ನಮಗೆ ಉತ್ತಮ ದಾರಿಯನ್ನು ತೋರಿಸುವದು. ಅದರ ಪ್ರಕಾರ ಪ್ರತಿಯೊಂದು ಹಳ್ಳಿಯಲ್ಲಿ, ಅಂದರೆ ಅನುಕೂಲ ವಾದ ಅಂತರದೊಳಗಿನ ಹಳ್ಳಿಗಳ ಒಂದೊಂದು ಗುಂಪಿಗೆ ಒಂದು ನ್ಯಾಯ-ಪಂಚಾಯತಿಯನ್ನು ಸ್ಥಾಪಿಸಬೇಕು. ಮಧ್ಯ ಪ್ರಾಂತದಲ್ಲಿ ಇಂತಹ ಸುಮಾರು ಐದುನೂರು ನ್ಯಾಯ-ಪಂಚಾಯತಿಗಳು ಆವೆ, ಮತ್ತು ರೂಢಿಯಲ್ಲಿ ಪಂತೆನೆರೆಯುವ ಹಳ್ಳಿಗಳಲ್ಲಿಯೇ ಬಹುತರವಾಗಿ ಎಲ್ಲವೂ ಇವೆ. ಈ ಪದ್ಧತಿಯು ಹಳ್ಳಿಗಳ ಒಂದೊಂದು ಗುಂಪಿನಲ್ಲಿ ಸಮಾಧಾನಕರವಾಗಿ ಕೆಲಸ ಮಾಡುತ್ತದೆಂಬುದು ವರದಿ ಯಿಂದ ಗೊತ್ತಾಗುತ್ತದೆ. ಏಕಂದರೆ, ನಿಷ್ಪಕ್ಷಪಾತದೃಷ್ಟಿ ಯಿಂದ ಈ ಪಂಚಾಯತಿಯ ಮೇಲೆ ಕೆಲಸ ಮಾಡುವ ಕೆಲವು ಉತ್ತಮ ಜನರನ್ನು ಆರಿಸಲು ಶಕ್ಯವಾಗುವದು. ಈ ನ್ಯಾಯ ಪಂಚಾಯತಿಗಳ ಪದ್ಧತಿಯನ್ನು ನಾವು ಇಡಿ ಯಾಗಿ ಸ್ವೀಕರಿಸಬಹುದು, ಅಥವಾ ಜನವಸತಿ ಕೇಂದ್ರಗಳ ಪ್ರತಿಯೊಂದು ಗುಂಪಿಗೆ ಒತ್ತಾಯದ ಶಿಕ್ಷಣದಲ್ಲಿ ಬರತಕ್ಕ ಹಟ್ಟಿಗಳನ್ನು ನಡೆಸಲು ಒಂದು ಸ್ಥಾನಿಕ ಸಮಿತಿಯನ್ನು ನಾವು ನಿಯಮಿಸಬಹುದು ಸದ್ಯದ ವ್ಯವಸ್ಥೆಗಿಂತಲೂ ಈ ಪದ್ಧತಿಯು ಹೆಚ್ಚು ಉತ್ತಮವಾಗಿ ಕಾರ್ಯಕಾರಿಯಾಗು ವದು ಮತ್ತು ಅಕಾರಮಾನಕ್ಷನುಸಾರವಾಗಿ ಒಂದು ಅಥವಾ ಹೆಚ್ಚು ಗುಂಪುಗಳಿಗಾಗಿ ಒಬ್ಬ ಆಟೆಂಡೆನ್ಸ ಆಫೀಸರ ನನ್ನು (ಹಾಜರಿಅಧಿಕಾರಿ) ನಿಯಮಿಸಿ ಖರ್ಚನ್ನು ಕಡಿಮೆಮಾ ಡಲು ಶಕ್ಯವಿದೆ. ಹೀಗೆ ಒತ್ತಾಯವನ್ನು ಕಾರ್ಯಕಾರಿ ಮಾಡುವ ದೃಷ್ಟಿಯಿಂದ ಹಳ್ಳಿಗಳನ್ನು ಗುಂಪುಗುಂಪಾಗಿ ವಿಭಾಗಿಸುವ ಈ ಪದ್ಧತಿಯು ಹೆಚ್ಚು ಅನುಕೂಲವುಳ್ಳದ್ದೂ ಮತ್ತು ಕಡಿಮೆ ಖರ್ಚಿನದೂ ಇರುವ ಕಾರಣದಿಂದ ಶಿಕ್ಷಣ ಖಾತೆಯವರು ಆದಷ್ಟು ಬೇಗನೆ ಈ ಪ್ರಶ್ನೆಯನ್ನು ಎತ್ತಿ ಕೊಂಡು ಬಿಡಿಸಬೇಕು.

ಸ್ಥಾನಿಕ ಪರಿಸ್ಥಿತಿಗಳಿಗನುಸಾರವಾಗಿ ಹಳ್ಳಿಯ ಶಾಲೆಯು ಕೆಲಸದ ವೇಳೆಯನ್ನು ಮತ್ತು ಬಿಡುವಿನ ದಿನಗಳನ್ನು ಸರಿ ಪಡಿಸಿಕೊಳ್ಳುವದು ಹಳ್ಳಿಯ ಶಿಕ್ಷಣದ ಸಾಲ್ಕನೆಯ ಸಮಸ್ಯೆ. ಹಾಗೆ ಮಾಡುವ ಅವಶ್ಯಕತೆಯು ಎಲ್ಲ ಕಡೆಯಿಂದಲೂ ಒಪ್ಪಿಗೆಯನ್ನು ಪಡೆದಿದೆ. ಸದ್ಯದ ನಿಯಮಗಳೂ ಕೂಡ ಅವುಗಳನ್ನು ನಿರ್ಧರಿಸಲು ಸ್ಕೂಲಬೋರ್ಡುಗಳಿಗೆ ಅಧಿಕಾರವನ್ನು ಕೊಟ್ಟಿವೆ. ಆದರೆ ಈ ಅಧಿಕಾರವನ್ನು ಸ್ಕೂಲ ಬೋರ್ಡಿನವರು ಕ್ವಚಿತ್ತಾಗಿ ಉಪಯೋಗಿಸುತ್ತಾರೆ. ಮತ್ತು ನಿಯಮಗಳಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟಿದ್ದರೂ ಎಲ್ಲ ಕಡೆಗೆ ಒಂದೇ ತರಹದ ಯೋಜನೆಯ ಮೇರೆಗೆ ಕೆಲಸದ ಅವಧಿ ಮತ್ತು ಬಿಡುವಿನ ದಿನಗಳನ್ನು ಸಾಮಾನ್ಯವಾಗಿ ನಿರ್ಧರಿಸುತ್ತಾರೆ. ಸ್ಥಾನಿಕ ಪರಿಸ್ಥಿತಿಯ ಸಶಾಸ್ತ್ರದ ಅಭ್ಯಾಸದ ಅಭಾವದಿಂದಲೇ ಈ ಪರಿಸ್ಥಿತಿಯು ಉಂಟಾಗಿದೆ. ಶಿಶು ಶ್ರಮದ ದೃಷ್ಟಿಯಿಂದ ಹಳ್ಳಿಯ ಆರ್ಥಿಕ ಪರಸ್ಥಿತಿಯ ಆಳವಾದ ಅಭ್ಯಾಸವೇ ನಮಗೆ ಬೇಕಾಗಿದೆ. ಉದಾಹರಣಾರ್ಥವಾಗಿ ಒಂದು ಜಿಲ್ಲೆಯಲ್ಲಿ ಅಭ್ಯಾಸ ಕ್ಕಾಗಿ ಮೊಟ್ಟಮೊದಲು ಪ್ರತಿಯೊಂದು ಗುಂಪಿಗೆ ಒಂದು ಹಳ್ಳಿಯಂತೆ ಮಾದರಿಗಾಗಿ ಕೆಲವು ಹಳ್ಳಿಗಳನ್ನು ಆರಿಸಿ ಕೊಳ್ಳಬೇಕು. ಆಮೇಲೆ ಆ ಜಿಲ್ಲೆಯಲ್ಲಿಯ ಉಳಿದ ಹಳ್ಳಿ ಗಳಿಗೆ ಈ ಅಭ್ಯಾಸದ ಪರಿಣಾಮಗಳನ್ನು ಅನ್ವಯಿಸಿ-ನೋಡಬಹುದು. ಈ ಅಭ್ಯಾಸದ ವಂದಿನ ಹೆಜ್ಜೆಯೆಂದರೆ ಹಳ್ಳಿಯ ಶಾಲೆಗಳಲ್ಲಿ ಹಾಜರಿಯು ಏಕೆ ಅನಿಯಮಿತವಾ ಗಿದೆ ಮತ್ತು ಎಷ್ಟೋ ಬಾಲಕರು ಶಾಲೆಗಳಿಗೆ ಹೋಗಲು ಯಾವ ಅಡಚಣೆಗಳಿವೆ ಎಂಬುದನ್ನು ಕಂಡುಹಿಡಿಯು ವದು. ಸಾಮಾನ್ಯವಾಗಿ ಬಿತ್ತುವ ಮತ್ತು ಸುಗ್ಗಿಯ ಸಮ ಯಕ್ಕೆ ಹಾಜರಿಯ ಸಂಖ್ಯೆಯು ಹೆಚ್ಚು ಕೆಳಗೆ ಇಳಿದದ್ದು ಕಂಡು ಬರುವದು. ಆಗ್ಗೆ ಒಕ್ಕಲಿಗರು ತಮ್ಮ ಮಕ್ಕಳ ಸಹಾ ಯವನ್ನು ಪಡೆಯಲೇ ಬೇಕಾಗುವದು ಮತ್ತು ಮಕ್ಕಳು

ಹಿಚ್ಚಾಗಿ ತಮ್ಮ ಕುಟುಂಬವ ಸಲುವಾಗಿ ಕೆಲವೊಂದು ಕೆಲ
ಗಳನ್ನು ಮಾಡುವ ಅವಶ್ಯಕತೆಯೆ ಅವರ ಗೈರಹಾಜರಿಯ ಕಾ
ರಣವೆಂದು ಗೊತ್ತಾಗದೆ ಇರದು. ಒಂದು ನಿರ್ದಿಷ್ಟ ವ
ನವಸತಿ ಕೇಂದ್ರದಲ್ಲಿ ಚಿಕ್ಕ ಮಕ್ಕಳು ಮಾಡುತ್ತಿರುವ ಕೆಲಸವ ಪ್ರಕಾರದ ಸೂಕ್ಷ್ಮ ಅಭ್ಯಾಸ ಮಾಡಲಾಗಿ ಕಂಡು ಬ
ರುವದೇನಂದರೆ: ಶಾಲೆಯ ಕೆಲಸವ ವೇಳೆಯನ್ನು ಸರಿ
ಯಾಗಿ ಹೊಂದಿಸಿದರೆ ಹಳ್ಳಿಯ ಬಾಲಕರಿಗೆ ಪ್ರತಿ ದಿವಸ
ಮೂರು ತಾಸಾದರೂ ಶಾಲೆಗೆ ಬರಲು ಅನುಕೂಲವಾಗು
ವದು. ಶಕ್ಯವಿದ್ದಲ್ಲಿ ಒಕ್ಕಲತನದ ದುಡಿತದ ಕಾಲಕ್ಕೆ ಅನು
ಗುಣವಾಗಿ ಹಳ್ಳಿಯ ಶಾಲೆಗಳ ಸೂಟಿಯ ಅವಧಿಗಳನ್ನು
ನಿಷ್ಕರ್ಷತೆಯಿಂದ ನಿರ್ಧರಿಸಿದರೆ ಶಾಲೆಯ ಕೆಲಸದ ತಾಸುಗಳಲ್ಲಿ
ಹಾಜರಿಯ ಸಂಖ್ಯೆಯು ಏರುವದಲ್ಲದೆ ಶಾಲೆಗಳಿಗೆ ಹೆಚ್ಚು
ವಿದ್ಯಾರ್ಥಿಗಳು ಹೆಸರನ್ನು ಹಚ್ಚುವರು. ಈ ಮೇಲೆ ಕಾಣಿ
ಸಿದ ಅಭ್ಯಾಸವು ತೀರ ಅವಶ್ಯಕ ಮತ್ತು ಸರಕಾರವು ಅದ
ಕ್ಕಾಗಿ ಬೇಗನೆ ಹಣದ ಸಹಾಯ ಮಾಡಿ ಅಂತಹ ಅಭ್ಯಾಸಕ್ಕೆ
ದಾರಿ ಮಾಡಿ ಕೊಡಬೇಕು.

ಹಳ್ಳಿಯ ಶಿಕ್ಷಣದ ಎರಡನೆಯ ಸಮಸ್ಯೆಯು ಅಭ್ಯಾಸ ಪತ್ರಿಕೆಗೆ ಸಂಬಂಧಿಸಿದ್ದು. ಹಳ್ಳಿಯ ಶಾಲೆಗಳ ಅಭ್ಯಾಸ ಪತ್ರಿಕೆಯು ಶಹರದ ಶಾಲೆಗಳಂತೆಯೇ ಇರಬೇಕೋ? ಅಥವಾ ಬೇರೆಯಾಗಿರಬೇಕೋ? ಶಹರದ ಮತ್ತು ಹಳ್ಳಿಯ ಮಕ್ಕಳಿಗೆ ಒಂದೇ ಮಟ್ಟಿನ ಶಿಕ್ಷಣವನ್ನು ಕೊಡು
ವದು ಅವಶ್ಯವಿದ್ದರೂ ಹಳ್ಳಿಯ ಮತ್ತು ಶಹರದ ಶಾಲೆ
ಗಳ ಅಭ್ಯಾಸ ಪತ್ರಿಕೆಗಳಲ್ಲಿ ಅಂತರವಿರುವದು ಅನಿವಾರ್ಯ. ಶಹರದ ವಾತಾವರಣಕ್ಕಿಂತ ಹಳ್ಳಿಯ ವಾತಾವರಣವು ತೀರ ಭಿನ್ನವಾಗಿರುವದರಿಂದ ಹಳ್ಳಿಯ ಶಾಲೆಯ ಅಭ್ಯಾಸ ಪತ್ರಿಕೆಕೋವನವು ಶಹರದ ಶಾಲೆಯನ್ನು ನೋಡುವ ದೃಷ್ಟಿ
ಯಿಗಿಂತ ತೀರ ಭಿನ್ನವಾಗಬೇಕಾದುದು ಸಹಜ. ಇಲ್ಲಿಯ ವರೆಗೆ ಈ ಪ್ರಶ್ನೆಯನ್ನು ಅಭ್ಯಸಿಸಲು ತೀರ ಕಡಿಮೆ ಪ್ರಯ
ತ್ನವನ್ನು ಮಾಡಲಾಗಿದೆ. ಹೀಗಾಗಿ ಹಳ್ಳಿಯ ಶಾಲೆಯ
ಲ್ಲಿಯ ಶಿಕ್ಷಣವು ತನ್ನ ಸನಿಹದ ವಾತಾವರಣಕ್ಕೆ ಸಂಬಂಧಿಸಿ
ಸಾಗಿಲ್ಲ ಮತ್ತು ಅದೇ ಕಾರಣದಿಂದ ಅದರಲ್ಲಿ ಜೀವಕಳೆಯೂ ಇಲ್ಲ. ಈ ಹೊದಲು ಹೇಳಿದಂತೆ ಜನವಸತಿ ಕೇಂದ್ರಗಳ ಪ್ರತಿಯೊಂದು ಗುಂಪಿನಲ್ಲಿ ಮಾದರಿಯ ಪ್ರಾಥಮಿಕ ಶಾಲೆಗಳು ಸ್ಥಾಪಿತವಾದರೆ ಅವುಗಳ ಮುಖಾಂತರ ಶಿಕ್ಷಣವನ್ನು ಕೊಡುವ ವಿಶಿಷ್ಟ ಸಂದರ್ಭದಲ್ಲಿ ಮಾತ್ರ ಹೆಚ್ಚಿನ ಶಿಕ್ಷಕರು ಅವಶ್ಯಕ. ಆದರೆ, ಇಂಥ ಅಪವಾದಗಳನ್ನು ನಾವು ಅಷ್ಟು ಮಹತ್ವದವುಗಳೆಂದು ಪರಿಗಣಿಸದೇ ಬಿಡಬಹುದು. ಆದರೆ ಹಳ್ಳಿಯ ಕ್ಷೇತ್ರಗಳಲ್ಲಿ ಏಕ ಶಿಕ್ಷಕ ಶಾಲೆಗಳ ಸಂಖ್ಯೆಯೇ ಅತಿ ದೊಡ್ಡದಾಗಿರುವದು. ಇಲ್ಲಿಯವರೆಗೆ ಇಂತಹ ಶಾಲೆಗಳ ಕಡೆಗೆ ನಮ್ಮ ಪ್ರವೃತ್ತಿಯು ಸ್ವಲ್ಪವೂ ಬಗ್ಗದ ಪ್ರತಿಗಾಮಿ ರೂಪದ್ದಾಗಿದೆ. ಇಂಗ್ಲಂಡಿ
ದಂತಹ ಶಹರ ಸಮಾಜದಲ್ಲಿ ಏಕ ಶಿಕ್ಷಕ ಶಾಲೆಯು ಪ್ರತ್ಯೇ
ಯೇ ಉದ್ಭೂತವಾಗುವದಿಲ್ಲ. ಇಂಥ ಬ್ರಿಟಿಷರ ಅಭಿಪ್ರಾ
ಯದಿಂದ ಪ್ರೇರಿತರಾಗಿ ಏಕ ಶಿಕ್ಷಕ ಶಾಲೆಯನ್ನು ಕಿತ್ತಿ
ಹಾಕುವದನ್ನೇ ಅಥವಾ ಹಾಜರಿಯ ಮೇಲಿನ ಸಂಖ್ಯೆ
ಯನ್ನು ವಿಚಾರಿಸದೇ ಅದನ್ನು ದ್ವಿ-ಶಿಕ್ಷಕ ಶಾಲೆಯನ್ನಾಗಿ
ಮಾರ್ಪಡಿಸುವದನ್ನೇ ನಾವು ಯಾವಾಗಲೂ ಪುರಸ್ಕರಿಸಿ
ದ್ದೇವೆ. ಇವೆರಡೂ ಸೂಚನೆಗಳು ಅವ್ಯವಹಾರ್ಯವಿದ್ದು
ನಾವು ಏಕ ಶಿಕ್ಷಕ ಶಾಲೆಗಳ ವಿಶೇಷ ಸಮಸ್ಯೆಗಳನ್ನು ಇದು
ವರೆಗೆ ದುರ್ಲಕ್ಷಿಸುತ್ತ ಬಂದಿದ್ದೇವೆಂಬುದನ್ನು ಒಪ್ಪಲೇ
ಬೇಕಾಗುವದು. ಈ ದಿಶೆಯಲ್ಲಿ ನಾವು ಅಮೇರಿಕೆಯ
ಮತ್ತು ಆಸ್ಟ್ರೇಲಿಯದ ಪದ್ಧತಿಗಳನ್ನು ಅಭ್ಯಸಿಸಿದರೆ ಒಳ್ಳೆ
ತಾದೀತು. ಈ ಎರಡೂ ದೇಶಗಳಲ್ಲಿ ಏಕ ಶಿಕ್ಷಕ ಶಾಲೆಗಳ
ಪ್ರಮಾಣವು ದೊಡ್ಡದಿದ್ದು ಅಲ್ಲಿ ಅವುಗಳನ್ನು ಹೆಚ್ಚು ಉಪ
ಯುಕ್ತ ಮಾಡಲು ಅತ್ಯುತ್ತಮ ಪದ್ಧತಿಗಳನ್ನು ಹುಡುಕಿ
ತೆಗೆಯಲಾಗಿದೆ. ಅವರ ಅನುಭವದಿಂದ ನಾವು ಎಷ್ಟೋ
ಸಂಗತಿಗಳನ್ನು ಕಲಿತುಕೊಳ್ಳಬಹುದು. ಮತ್ತು ನಮ್ಮ
ವಾತಾವರಣಕ್ಕೆ ಹೊಂದುವಂತೆ ಹೊಸ ಪದ್ಧತಿಗಳನ್ನು
ಹುಡುಕಬಹುದು. ನಮ್ಮ ಖಾತೆಯು ಈ ದೃಷ್ಟಿಕೋನ
ದಿಂದ ವಿಶೇಷ ಅಭ್ಯಾಸದ ಕ್ರಮವನ್ನು ಕೈಕೊಳ್ಳಬೇಕು
ಮತ್ತು ಅದಕ್ಕೆ ಉತ್ತೇಜನ ಕೊಡಬೇಕು.

ಹಳ್ಳಿಯ ಕ್ಷೇತ್ರಗಳಲ್ಲಿ ಶಿಕ್ಷಕರ ಸಮಸ್ಯೆಯೇ ಎಳ್ಳ
ಯದು. ಶಿಕ್ಷಕರು ಶಿಕ್ಷಕರಾಗಿರಬೇಕಾದರೆ ಮಾನವ ಜ್ಞಾನ
ಸಂಗ್ರಹ, ಸಮಾಜದಲ್ಲಿಯ ಹೊಸ ಸುಧಾರಣೆಗಳು, ಆಧು
ನಿಕ ಸಮಸ್ಯೆಗಳು ಮತ್ತು ಕಲಿಸುವ ಹೊಸ ವಿಧಾನಗಳು
ಇವೇ ಮೊದಲಾದ ಪ್ರಗತಿಯ ಮಾರ್ಗಗಳ ಜತೆಗೆ ಸಾಗಲೇ
ಬೇಕು. ಅನೇಕ ಅನುಕೂಲತೆಗಳಿದ್ದಂತಹ ಶಹರದ
ಕ್ಷೇತ್ರಗಳಲ್ಲಿಯೂ ಕೂಡ ಇಂಥ ಎಲ್ಲ ಹೊಸ ಸುಧಾರಣೆಗಳ
ಪರಿಜ್ಞಾನವನ್ನು ಶಿಕ್ಷಕರಿಗೆ ಮಾಡಿಕೊಡುವ ಸಮಸ್ಯೆಯು
ಸುಲಭವಾದುದಲ್ಲ. ಹಳ್ಳಿಯ ಕ್ಷೇತ್ರದಲ್ಲಿಯಂತೂ ಅದು
ಇನ್ನಷ್ಟು ಕಠಿಣ. ಸ್ತಬ್ಧವಾದ ಹಳ್ಳಿಯ ವಾತಾವರಣದಲ್ಲಿ
ರಹದಾರಿಯನ್ನು ಬಿಟ್ಟು ಅತೀ ದೂರ ಯಾವದೋ ಒಂದು

ಹಳ್ಳಿಯಲ್ಲಿ ಕೆಲಸ ಮಾಡುವ ಏಕಾಕಿಯಾದ ಶಿಕ್ಷಕನು ಆಧುನಿಕ ಪ್ರಗತಿಯೊಡನೆ ಎಲ್ಲ ಸಂಬಂಧವನ್ನು ಕಳೆದುಕೊಳ್ಳುತ್ತಾನೆ. ಅವನಿಗೆ ವೃತ್ತಪತ್ರಗಳು ಸಿಗುವದಿಲ್ಲ. ಅವನ ಊರಿಗೆ ಪ್ರಸಿದ್ಧ ವ್ಯಕ್ತಿಗಳು ಭೆಟ್ಟಿಯಾಗುವದು ತೀರ ಕ್ವಚಿತ. ಸಾಮಾನ್ಯವಾಗಿ ಓದಲು ಅವನಿಗೆ ಪುಸ್ತಕಗಳಿಲ್ಲ. ಮತ್ತು ಓದುವ ರೂಢಿಯನ್ನು ಕಾಯ್ದುಕೊಳ್ಳಲು ಅವನಿಗೆ ಯಾವ ತರಹದ ಸಂಸ್ಕೃತಿಕ ಸಂಬಂಧಗಳೂ ಇಲ್ಲ. ಇಂತಹ ಪರಿಸ್ಥಿಯಲ್ಲಿ ಅವನ ಕಲಿಸುವ ಪದ್ಧತಿಯು ಬೇಗನೆ ಹಳೆಯದಾಗುತ್ತದೆ ಎಂಬ ಮಾತು ಆಶ್ಚರ್ಯಕರವಾದುದಲ್ಲ. ೧೯೪೦ರಲ್ಲಿಯೂ ಕೂಡ ಸಿಂಧವು ಮುಂಬಯಿ ಪ್ರಾಂತದ ಒಂದು ಭಾಗವೆಂದು ಭೂಗೋಲ ಕಲಿಸುವ ಹಳ್ಳಿಯ ಶಿಕ್ಷಕರನ್ನು ನಾನು ನೋಡಿದ್ದೇನೆ. ಕಾಲ ಮೀರಿದ ಇಂಥ ಶಿಕ್ಷಣ ಪದ್ಧತಿಯ ಉದಾಹರಣೆಗಳನ್ನು ನಾವು ಸಹಜವಾಗಿಯೇ ಬೆಳೆಸಬಹುದು. ಆದರೆ ಹೀಗೆ ಮಾಡುವ ಅವಶ್ಯಕತೆಯೇ ಈಗ ಉಳಿದಿಲ್ಲ. ಏಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ ಹಳ್ಳಿಯ ಶಿಕ್ಷಕರು ಕಾಲಪ್ರವಾಹದಗುಂಟ ಸಾಗುವದು ಅವಶ್ಯವೆಂಬ ಮಾತನ್ನೂ ಮತ್ತು ಅಂತಹ ಶಿಕ್ಷಕರಿಗೆ ಸಹಾಯ ಮಾಡಲು ವಿಶೇಷ ಯೋಜನೆಯನ್ನು ಕೈಕೊಳ್ಳುವದು ಅತ್ಯಾವಶ್ಯಕವೆಂಬುದನ್ನೂ ಎಲ್ಲರು ಒಪ್ಪುತ್ತಾರೆ. ಸರಕಾರವು ಒಳ್ಳೆ ದಕ್ಷತೆಯಿಂದ ತಕ್ಷಣವೇ ಗಮನ ಕೊಡುವದು ಅವಶ್ಯವಿದ್ದ ಒಂದು ಸಮಸ್ಯವಿದು, ಮತ್ತು ಸದ್ಯದ ಕುಂದು ಕೊರತೆಗಳನ್ನು ದೂರ ಮಾಡುವ ಯೋಜನೆಗಳನ್ನು ತಯಾರಿಸಲು ಶಿಕ್ಷಣ ಖಾತೆಯು ಮುಂದೆ ಬರಬೇಕು.

ಹಳ್ಳಿಯ ಶಿಕ್ಷಣದ ಎಂಟನೆಯ ಸಮಸ್ಯೆ—ಈ ಲೇಖನದಲ್ಲಿ ನಾನು ಚರ್ಚಿಸುವ ಕಡೆಯ ಸಮಸ್ಯೆ— ಎಂದರೆ, ಶಾಲೆ ಹಾಗು ಹಳ್ಳಿಯ ಸಮಾಜ ಇವುಗಳಲ್ಲಿರುವ ಸಂಬಂಧ ಯಾವ ತೆರನಾಗಿರಬೇಕೆಂಬುದು. ಇಂಗ್ಲಂಡ ಮತ್ತು ಅಮೇರಿಕೆಗಳಲ್ಲಿ ಶಾಲೆಗಳು ಯಾವಾಗಲೂ ಜನತೆಯನ್ನು ಹೊಂದಿಕೊಂಡೇ ಇರುತ್ತವೆ. ಅಲ್ಲಿಯ ಪ್ರಾಥಮಿಕ ಶಿಕ್ಷಣದ ಪ್ರಗತಿಯ ಇತಿಹಾಸದಲ್ಲಿಯೇ ಇದರ ಮೂಲವಿದೆ. ಇಂಗ್ಲಂಡದಲ್ಲಿ ತೀರ ಮೊದಲಿನ ಪ್ರಾಥಮಿಕ ಶಾಲೆಗಳು ಜನರಿಂದಲೇ ಸಂಘಟಿತವಾದ ಗಾವಠಿ ಶಾಲೆಗಳಾಗಿದ್ದವು ಮತ್ತು ಸ್ವಾಭಾವಿಕವಾಗಿ ಅವುಗಳಲ್ಲಿ ಜನರು ತೀರ ಆಳವಾದ ಅಭಿರುಚಿಯನ್ನು ತೋರಿಸುತ್ತಿದ್ದರು. ೧೮೭೦ರಲ್ಲಿ ಜನರ ಈ ಸ್ವ-ಪ್ರೇರಿತ ಪ್ರಯತ್ನವನ್ನು ಕೆತ್ತಿ ಹಾಕುವದಕ್ಕಲ್ಲ ಆದರೆ ಮತ್ತಷ್ಟು ಬೆಳಸಲಿಕ್ಕೆಯೇ ಮೊದಲನೆಯ ಸಾರೆ ಸ್ಕೂಲ ಬೋರ್ಡುಗಳ ನಿರ್ಮಾಣವಾಯಿತು. ಈ ಬೋರ್ಡುಗಳು ಕೂಡ ಸಣ್ಣ ಸಣ್ಣ ಸ್ಥಾನಿಕ ಕ್ಷೇತ್ರಗಳ ಪ್ರತಿನಿಧಿಗಳಿಂದಲೇ ಕೂಡಿದ್ದುವಾಗಿದ್ದವು ಮತ್ತು ಅವರಿಂದ ಸ್ಥಾಪಿತವಾದ ಶಾಲೆಗಳ ಮೇಲೆ ಈ ಬೋರ್ಡುಗಳ ವಿಸ್ತೃತವಾದ ಅಧಿಕಾರವಿತ್ತು. ಕಕ್ಷೇಣಾಮವಾಗಿ ಜನರಿಗೂ ಬೋರ್ಡುಗಳಿಗೂ ತೀರ ನಿಕಟ ಸಂಬಂಧವಿತ್ತು. ೧೯೦೦ರಲ್ಲಿ ಮತ್ತು ೧೯೦೪ರಲ್ಲಿ ಎಜ್ಯೂ ಬದಲಾವಣೆಗಳನ್ನು ಮಾಡಿದರೂ ಕೂಡ ಇಂದಿನ ವರೆಗೆ ಈ ಸಮೀಪದ ಸಂಬಂಧ ಭಾವನೆಯು ಹಾಗೆಯೇ ಸಾಗಿದೆ. ಏಕೆಂದರೆ ಪ್ರತಿಯೊಂದು ಸ್ಥಾನಿಕ ಅಧಿಕಾರಿಯ ಕ್ಷೇತ್ರವು ಇಂದಿಗೂ ಸಾಮಾನ್ಯವಾಗಿ ಸಣ್ಣದಾಗಿದ್ದು ಜನರು ಆ ಸ್ಥಾನಿಕ ಸಂಸ್ಥೆಯಲ್ಲಿದ್ದ ತಮ್ಮ ಪ್ರತಿನಿಧಿಗಳ ಮುಖಾಂತರ ಶಾಲೆಗಳ ಮೇಲೆ ತಮ್ಮ ನಿಜವಾದ ಮತ್ತು ಮಹತ್ವದ ಅಧಿಕಾರವನ್ನು ಉಪಯೋಗಿಸಲು ಉದ್ಯುಕ್ತರಾಗುತ್ತಾರೆ. ಅಮೇರಿಕೆಯ ಬಹುತರ ಎಲ್ಲ ರಾಜ್ಯ ಘಟಕಗಳಲ್ಲಿ ಪ್ರಾಥಮಿಕ ಶಾಲೆಗಳು ಸಣ್ಣ ಸ್ಥಾನಿಕ ಸಂಸ್ಥೆಗಳಿಂದ ಇಂದಿನ ವರೆಗೂ ಸಂಪೂರ್ಣವಾಗಿ ನಿಯಂತ್ರಿತವಾಗಿ ಅವುಗಳಿಂದಲೇ ಹಣದ ಸಹಾಯವನ್ನು ಪಡೆಯುತ್ತವೆ. ಅದರಿಂದಲೇ ಶಾಲೆಗಳು ಜನತೆಗೆ ಅತಿ ಸಮೀಪವಾಗಿ ಹೊಂದಿಕೊಂಡಿದ್ದು ಹಾಗೆಯೇ ಸಾಗಿದೆ. ಹಿಂದುಸ್ತಾನದಲ್ಲಿ ತೀರ ದುರ್ದೈವದ ಮಾತೆಂದರೆ ಒಮ್ಮನಸ್ಸು (ಈ ಒಂದುತನದ) ಭಾವನೆ ತೀರ ಇಲ್ಲದಂತಾಗಿದೆ. ಒಬ್ಬ ಸಾಮಾನ್ಯ ಹಳ್ಳಿಗನಿಗೆ ಸ್ಥಾನಿಕ ಪ್ರಾಥಮಿಕ ಶಾಲೆಯು ತನ್ನದೆಂದೆನಿಸುವದಿಲ್ಲ. ತನ್ನೊಡನೆ ತೀರ ಸ್ವಲ್ಪ ಆಥವಾ ಯಾವ ಸಂಬಂಧವೂ ಇಲ್ಲದ ಯಾವುದೋ ಒಂದು ಸಂಸ್ಥೆಯು ಎಂದು ಅವನು ಭಾವಿಸುತ್ತಾನೆ. ಈ ಭಾವನೆಯನ್ನು ಕೂಡ ನಾವು ಐತಿಹಾಸಿಕ ಪ್ರಗತಿಯ ಆಧಾರದ ಮೇಲೆ ಸ್ಪಷ್ಟೀಕರಿಸಬಹುದು. ತಮ್ಮಿಂದಲೇ ನಿರ್ಮಿತವಾದ ಗಾವಠಿ ಶಾಲೆಗಳ ಕಡೆಗೆ ಹಳ್ಳಿಯ ಜನರು ಒಂದು ಮಮತೆಯಿಂದ ನೋಡುತ್ತಿದ್ದರು ಮತ್ತು ೧೮೭೦ನೆಯ ಶತಮಾನದ ಕೊನೆಯ ವರೆಗೆ ಇಂಥ ಶಾಲೆಗಳು ಬಹು ದೊಡ್ಡ ಸಂಖ್ಯೆಯಲ್ಲಿದ್ದವು. ಇಂಗ್ಲಂಡದಲ್ಲಿ ಜನಪ್ರೇರಿತ ಶಾಲೆಗಳನ್ನು ಕೂಡಿಸಿಕೊಂಡಂತೆ ಶಿಕ್ಷಣ ಪದ್ಧತಿಯಲ್ಲಿ ಈ ಶಾಲೆಗಳನ್ನೂ ಕೂಡಿಸಿಕೊಂಡುಬಿಟ್ಟಿದ್ದರೆ, ಹಳ್ಳಿಯ ಜನತೆಯು ಶಾಲೆಗಳಿಗೆ ತಮ್ಮ ನಿಕಟ ಸಂಬಂಧನಿದೆ ಎಂದು ಭಾವಿಸಬಹುದಿತ್ತು. ಆದರೆ, ದುರ್ದೈವದಿಂದ ಅಧಿಕಾರಿವರ್ಗದ ದುರ್ಲಕ್ಷ್ಯದ ಮೂಲಕ ಎಲ್ಲ ಗಾವಠಿ ಶಾಲೆಗಳು

ಮಾಯವಾದವು (ಸತ್ತು, ಹೋದವು). ಮತ್ತು ಸದ್ಯದ ಪ್ರಾಥಮಿಕ ಶಾಲೆಗಳ ಪದ್ಧತಿಯು ಕೇಂದ್ರೀಕೃತ ಅಧಿಕಾರದ ಮುಖಾಂತರವಾಗಿ ಹಳ್ಳಿಗರ ಮೇಲೆ ಹೇರಲ್ಪಟ್ಟಿತು. ಆದುದರಿಂದ ಹಳ್ಳಿಯ ಜನಶಿಯು ಹಳ್ಳಿಯ ಶಾಲೆಗಳ ಸಮೀಪದ ಭಾವನೆಯನ್ನು ಎಂದೂ ತಳೆದಿಲ್ಲ. ಇದೇ ಭಾವನೆಯೇ ಗ್ರಾಮೀಣ ಪ್ರಾಥಮಿಕ ಶಿಕ್ಷಣದ ಕಾಯಿದೆಯಿಂದಲೂ ದೂರಾಗಲಿಲ್ಲ. ಏಕೆಂದರೆ, ಈ ಕಾಯಿದೆಯನ್ವಯ ಸ್ಥಾಪಿತವಾದ ಸ್ಕೂಲ ಬೋರ್ಡುಗಳ ಅಧಿಕಾರ ಕ್ಷೇತ್ರ ತೀರ ವಿಸ್ತೃತವಾಗಿತ್ತು ಮತ್ತು ಅದರಿಂದಲೇ ಸಾಮಾನ್ಯ ಹಳ್ಳಿಗನ ಮನಸ್ಸಿನಲ್ಲಿ ಸ್ಥಾನಿಕ ಅಭಿಮಾನವನ್ನು ಹುಟ್ಟಿಸಲು ಸಮರ್ಥವಾಗಲಿಲ್ಲ ಗ್ರಾಮೀಣರ ಮತ್ತು ಗ್ರಾಮೇತರ ಕಾಯಿದೆಯನ್ವಯ ಸ್ಕೂಲಬೋರ್ಡುಗಳ ಅಧಿಕಾರಗಳು ಕಡಿಮೆಯಾಗಿ ಪದ್ಧತಿಯನ್ನು ಮತ್ತಷ್ಟು ಹದಗೆಡಿಸಿದೆ ಮತ್ತು ಇಂದು ಹಳ್ಳಿಯ ಜನರು ಸ್ಥಾನಿಕ ಪ್ರಾಥಮಿಕ ಶಾಲೆಗಳತ್ತ ಏಕೋಭಾವನೆಯಿಂದ ನೋಡುವದನ್ನು ಬಿಟ್ಟುಕೊಟ್ಟಿವೆ.

ಸಮಾಧಾನಕರವಾದ ಪ್ರಗತಿಯಾಗಬೇಕಾದರೆ ಸಮಾಜವು ತನ್ನ ಪ್ರಾಥಮಿಕ ಶಾಲೆಗಳಲ್ಲಿ ಒಂದು (ಸಜೀವ) ಅಭಿರುಚಿಯನ್ನು ತಾಳುವದು ಅತ್ಯವಶ್ಯವೆಂಬುದು ಸಹಜವಾಗಿ ಒಪ್ಪತಕ್ಕ ಮಾತು. ಆದರೆ ಶಾಲೆಯು ಉಚ್ಚ ಮಟ್ಟವನ್ನು ಕೈಗಿಳಿಸದೇ ಈ ಉದ್ದೀಪನವನ್ನು ಸಾಧಿಸುವ ಬಗೆ ಹೇಗೆ ಎಂಬ ಪ್ರಶ್ನೆಗೆ ನಮ್ಮ ಶಿಕ್ಷಣ ತಜ್ಞರು ಉತ್ತರ ಕೊಡಬೇಕು. ಅನೇಕ ದಾರಿಗಳನ್ನು ನಾವು ಸೂಚಿಸಬಹುದು. ಶಿಕ್ಷಣದ ಅವಶ್ಯಕತೆಯನ್ನು ಕಂಡುಕೊಳ್ಳುವಂತೆ ನಿರಕ್ಷರ ಹಳ್ಳಿಗರಿಗೆ ಪರಿಣಾಮಕಾರಿಯಾದ ಪ್ರೌಢ ಶಿಕ್ಷಣದ ಪ್ರಭಾವ ಶಾಲೆಯನ್ನು ಹಳ್ಳಿಯ ಪುನರುಜ್ಜೀವನದ ಸಾಧನವನ್ನಾಗಿ ಮತ್ತು ಹಳ್ಳಿಯ ಜೀವನದ ಕೇಂದ್ರವನ್ನಾಗಿ ಮಾಡುವಂತೆ ಶಾಲೆಯ ರೂಪವನ್ನೇ ಬದಲಾಯಿಸುವದು; ಸಣ್ಣ ಕ್ಷೇತ್ರಗಳಿಗೆ ಸ್ಥಾನಿಕ ಶಾಲಾ ಸಮಿತಿಗಳನ್ನು ನಿರ್ಮಾಣ ಮಾಡುವದು; ಮತ್ತು ಶಾಲೆಗಳಲ್ಲಿ ಅಭಿರುಚಿಯನ್ನು ವಹಿಸುವಂತೆ ಸಾಕಷ್ಟು ವಿಸ್ತೃತ ಅಧಿಕಾರಗಳನ್ನು ಅವುಗಳಿಗೆ ಕೊಡುವದು— ಈ ಮೊದಲಾದ ಅತ್ಯಂತ ಮಹತ್ವದ ವಿಚಾರಗಳನ್ನು ಮುಂದೆ ಇಡಬಹುದು. ಶಿಕ್ಷಣ ಖಾತೆಯ ಸಾಮರ್ಥ್ಯಕ್ಕೆ ಒಂದು ದೊಡ್ಡ ಆಹ್ವಾನವು ಇಲ್ಲಿ ಇದೆ ಮತ್ತು ಶಿಕ್ಷಣ ಖಾತೆಯು ಕ್ಷಿಪ್ರದಲ್ಲಿಯೇ ಈ ಪ್ರಶ್ನೆಯನ್ನು ಮನಃಪೂರ್ವಕವಾಗಿ ಎತ್ತಿಕೊಳ್ಳುವದೆಂದು ನಾವು ನಿಜವಾಗಿಯೂ ಆಶಿಸೋಣ.

ಸ್ಥಳಾಭಾವದ ಮೂಲಕ ಹಳ್ಳಿಯ ಶಿಕ್ಷಣದ ಎಲ್ಲ ಸಮಸ್ಯೆಗಳನ್ನಾಗಲೀ ಅಥವಾ ಒಂದೇ ಸಮಸ್ಯೆಯನ್ನು ಆಳವಾಗಿ ಇಲ್ಲಾಗಲೀ ಚರ್ಚಿಸುವದು ನನಗೆ ಇಲ್ಲಿ ಸಾಧ್ಯವಾಗಿಲ್ಲ. ಆದುದರಿಂದ ಕೆಲವು ಮಹತ್ವದ ಸಮಸ್ಯೆಗಳನ್ನು ಮಾತ್ರ ಹೇಳಲು ಪ್ರಯತ್ನಿಸಿದ್ದೇನೆ. ಮತ್ತು ಅವುಗಳನ್ನು ತಾತ್ಪರ್ತಿಕವಾಗಿ ಬಿಡಿಸುವ ದಾರಿಯನ್ನು ಸೂಚಿಸಿದ್ದೇನೆ. ಹಳ್ಳಿಯ ಶಿಕ್ಷಣದಲ್ಲಿ ನಮ್ಮನ್ನೆದುರಿಸುವ ಸಮಸ್ಯೆಗಳು ಜಟಿಲವಾಗಿಯೂ ಬಹು ಸಂಖ್ಯಾಕವಾಗಿರುತ್ತವೆಂದೂ ಮತ್ತು ಅಭ್ಯಾಸಕ್ಕಾಗಿ ಇವುಗಳನ್ನು ಎತ್ತಿಕೊಳ್ಳುವದು ಅತ್ಯಂತ ಅವಶ್ಯವೆಂದೂ ಮತ್ತು ಏನೂ ತಡಮಾಡದೇ ನಾವು ಪ್ರಯೋಗಕ್ಕೆ ತೊಡಗಬೇಕೆಂದೂ, ಆದನ್ನು ಕೂಡ ಶಕ್ಯವಿದ್ದಷ್ಟು ದೊಡ್ಡ ಪ್ರಮಾಣದ ಮೇಲೆ ಸಾಗಿಸಬೇಕೆಂದೂ ಒತ್ತಿ ಹೇಳುವದೇ ನನ್ನ ಉತ್ಕಟೇಚ್ಛೆಯಾಗಿದೆ— ಶಿಕ್ಷಣ ಖಾತೆಯು ನಮ್ಮ ರಾಷ್ಟ್ರೀಯ ಶಿಕ್ಷಣದ ಈ ಮಹತ್ವದ ವಿಭಾಗಕ್ಕೆ ಬೇಗನೇ ಸಾಕಷ್ಟು ಸಮಯವನ್ನು ಕೊಡುವದೆಂದು ನಾನು ಆಶಿಸುತ್ತೇನೆ.

['Adventure of Education'ದ ಕೃಪೆಯಿಂದ]

———

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳು. ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ

ಸಾಮಾನ್ಯ ವಿಜ್ಞಾನ :—ಒಳ್ಳೇ ಅನುಭವದಿಂದ

೧ ರಿಂದ ೫ನೇ ಇಯತ್ತ್ತೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ ನೇ ಇಯತ್ತೆಯಿಂದ ೬ನೇ ಇಯತ್ತೆಯವರೆಗೆ ಭೂಗೋಲದ ಹೊಸ ಜ್ಞಾನ ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು. **ಮುಲ್ಕೀ ಪರೀಕ್ಷೆಗಾಗಿ**

ಕುಮಾರ ಕಿಟ್ಟಣ್ಣ ೦—೫—೦		ಗಣಿತಸಂಗ್ರಹ ೧—೪—೦	
ಮಹಾತ್ಮರ ಪರಿಚಯ ೦—೪—೦		ವಾಕ್ಯರಚನೆ ಹಾಗೂ ನಿಬಂಧಬರೆಹ ೧—೦—೦	
ರಾಮಕೃಷ್ಣನೀತಿಯಕಥೆ ೦—೬—೦		ಗುಣವಿವೇಚನೆ ೦—೮—೦	

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ್ ರೋಡ, ಹುಬ್ಬಳ್ಳಿ.

ಕನ್ನಡ

ಪ್ರಾಥಮಿಕ ಶಿಕ್ಷಣ



ವಾರ್ಷಿಕ ಚಂದಾ
೪ ರೂಪಾಯಿ

ಬಿಡಿ ಸಂಚಿಕೆ
೧೨ ಆಣೆ

ಎಪ್ರೀಲ್ ಮೇ ೧೯೪೪

ಕಲಿಯಿರಿ !

ಕಲಿಯಿರಿ !!

ನಾಟ್ಯಾಚಾರ್ಯ ಕುಲಕರ್ಣಿ ಶ್ರೀನಿವಾಸರ ನೇತೃತ್ವದಲ್ಲಿ

೧೯೪೯ ಜೂನ ೧೫ನೆಯ ತಾರೀಖಿನಿಂದ

ನೃತ್ಯ-ಸಂಗೀತ ಶಾಲೆಯು

ಧಾರವಾಡದಲ್ಲಿ ಪ್ರಾರಂಭವಾಗಿದೆ

ನೃತ್ಯ ವರ್ಗಗಳು

ಭರತನಾಟ್ಯ, ಕಥಕ್, ಕಥಕ್ಕಳಿ, ಮ
ಪುರಿ ಮೊದಲಾದ ಭಾರತೀಯ ನೃತ್ಯ ಶ
ಂಬಂಧಿ ಶಿಕ್ಷಣವನ್ನು ಕೊಡಲಾಗುವದು.

ಪ್ರಾರಂಭಿಕ ವರ್ಗ: ಆರು ತಿಂಗಳ
ಅಭ್ಯಾಸ; ವಾರದಲ್ಲಿ ೩ ಪಾಠಗಳು

ಪ್ರತಿ ತಿಂಗಳಿಗೆ ಫೀ: ರೂ. ೧೦-೦

ಪ್ರಾಗತಿಕ ವರ್ಗ: ಆರು ತಿಂಗಳ
ಅಭ್ಯಾಸ; ವಾರದಲ್ಲಿ ೬ ಪಾಠಗಳ
ಪ್ರತಿ ತಿಂಗಳಿಗೆ ಫೀ: ರೂ. ೨೫-೦

ಸಂಗೀತ ವಾದನ ವರ್ಗ

ಹಿಂದುಸ್ತಾನಿ ಹಾಗೂ ದಕ್ಷಿಣಾದಿ ಪ
ಯಲ್ಲಿ ಹಾಡುಗಾರಿಕೆ; ಹಾರ್ಮೋನಿಯ
ಲರುಬಾ, ಕೊಳಲು, ಪಿಟೀಲು ಮು
ತಲಾದ ಇವು ಗಳನ್ನು ನುಡಿಸಲು ಶಿಕ್ಷ
ಣವನ್ನು ಕೊಡಲಾಗುವದು.

ಪ್ರಾರಂಭಿಕ ವರ್ಗ: ಆರು ತಿಂಗಳ
ಅಭ್ಯಾಸ; ವಾರದಲ್ಲಿ ೩ ಪಾಠಗ
ಪ್ರತಿ ತಿಂಗಳ ಫೀ: ರೂ. ೫-೦

ಪ್ರಾಗತಿಕ ವರ್ಗ: ಆರು ತಿಂಗಳ
ಅಭ್ಯಾಸ. ವಾರದಲ್ಲಿ ೬ ಪಾಠಗಳ
ಪ್ರತಿ ತಿಂಗಳ ಫೀ: ರೂ. ೧೦-೦

ಪ್ರವೇಶ ಫಿ ರೂ. ೫

ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಧಾರವಾ
ಡದಲ್ಲಿ ಮೂರು ಕಡೆಗಳಲ್ಲಿ ಶಿಕ್ಷಣ ಕೊಡ
ಲಿಕ್ಕಾಗಿ ಏರ್ಪಾಡು ಮಾಡಿದೆ.

೧. ಬಲಭೀಮ ವ್ಯಾಯಾಮಶಾಲಾ
ಮೂಳವು
೨. ಎ. ವಿ. ಸ್ಕೂಲ, ಕಾಲೇಜಿನ ಪಕ್ಕ
೩ ಮಿಶನ್ ಹಾಯಸ್ಕೂಲ,

ಸ್ಟೇಶನ್ ರೋಡ

ವಿಶೇಷ ವಿವರಗಳಿಗಾಗಿ: **ಕಾರ್ಯದರ್ಶಿ ಭಾರತೀಯ ನೃತ್ಯಕಲಾಕೇಂದ್ರ, ಲೈನಬಜಾರ, ಧಾರವಾಡ**

ಕನ್ನಡ ಪ್ರಾಥಮಿಕ ಶಿಕ್ಷಣ

ಸಂಪಾದಕ ಮಂಡಳ

ಸಂಚಾಲಕರು: ಶ್ರೀ. ಎ. ಎನ್. ಸಾನೆ ಎಜ್ಯುಕೇಶನಲ್ ಇನಸ್ಪೆಕ್ಟರ, ದ. ಭಾ. ಧಾರವಾಡ.
ಸಂಪಾದಕರು: ಶ್ರೀ. ಆರ್. ಕೆ. ಲಕ್ಕುಂಡಿ., ಶ್ರೀ. ಆರ್. ವ್ಹಿ. ದೇಸಾಯಿ., ಮಿಸ್ ವಾಯ್. ಡಿ. ನಾಡಕರ್ಣಿ.

ಏಪ್ರೆಲ್-ಮೇ ಪ ರಿ ವಿ ಡಿ ೧೯೪೯

೧.	ಸಂಪಾದಕೀಯ			೩
೨.	ಪ್ರಾಥಮಿಕ ಮಾಧ್ಯಮಿಕ ಹಾಗೂ ಮೂಲ ಶಿಕ್ಷಣ ಬೋರ್ಡುಗಳಿಂದ ಪರೀಕ್ಷಿಸಲ್ಪಟ್ಟು ಸ್ವೀಕೃತವಾದ ಅಭ್ಯಾಸ ಪತ್ರಿಕೆ— (ಪ್ರಾಥಮಿಕ ೬, ೭ ಮತ್ತು ಹೈಸ್ಕೂಲು ೨, ೩ನೆಯ ಇಯತ್ತೆಗಳಿಗಾಗಿ)			೫
೩.	ಪ್ರಾಥಮಿಕ ಶಾಲೆಗಳಿಗಾಗಿ ಶಾರೀರಿಕ ಶಿಕ್ಷಣದ ಅಭ್ಯಾಸ ಪತ್ರಿಕೆ (೧ರಿಂದ ೪ ಇಯತ್ತೆಗಳ ವರೆಗೆ)			೨೮
೪.	ಪ್ರಾಥಮಿಕ ಶಾಲೆಗಳಿಗೆ ರೇಖನ ಕಲೆಯ ಅಭ್ಯಾಸ ಪತ್ರಿಕೆ (೧ರಿಂದ ೪ ಇಯತ್ತೆಗಳ ವರೆಗೆ)			೩೮
೫.	ಸೂಜಿಗೆಲಸದ ಅಭ್ಯಾಸ ಪತ್ರಿಕೆ (೧ರಿಂದ ೪ನೆಯ ಇಯತ್ತೆಗಳ ವರೆಗೆ)			೪೫
೬.	ನವರತ್ನ (ಪದ್ಯ)	ಶ್ರೀ. ಬ. ಮ. ತಡಕನಹಳ್ಳಿ	....	೫೧
೭.	ಕನ್ನಡ ವರ್ಧ ಪ್ರಾಯೋಜ ಪರೀಕ್ಷೆ, ೧೯೫೦			೫೩
೮.	ಪ್ರಿನ್ಸಿಪಾಲ್ ಲಕ್ಕುಂಡಿ ರಂಗರಾಯರಿಗೆ ಮಾನಪತ್ರ ಸಮರ್ಪಣೆ			೫೪
೯.	ಸರೋಜಿನಿ ನಾಯಡು (ಕವನ)	ಶ್ರೀ. ಓಕ	....	೫೫
೧೦.	ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ (ಪ್ರಕಟನೆ)			೫೬

ಶ್ರೀಮಾನ್ ಎಲ್. ಆಯ್. ಆಕಳವಾಡಿ ಬಿ. ಎ., ಬಿ. ಕಾಮ್ ಅವರಿಂದ
ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟು

ಪಠ್ಯ ಪುಸ್ತಕ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆಯು ೬ ಪುಸ್ತಕಗಳು : (೧ನೆಯ ಇಯತ್ತ್ಯೆಯಿಂದ ೬ನೆಯ ಇಯತ್ತ್ಯೆಯವರೆಗೆ)

ಸಚಿತ್ರ ಸಾರನೀತಿ ಮಾಲೆಯ ೭ ಪುಸ್ತಕಗಳು : (೨ನೆಯ ಇಯತ್ತ್ಯೆಯಿಂದ ೮ನೆಯ ಇಯತ್ತ್ಯೆಯ ವರೆಗೆ)

ಭೌಗೋಲಿಕ ನಕಾಶ ಪುಸ್ತಕ ಮಾಲೆಯು ೬ ಪುಸ್ತಕಗಳು: (೨ನೆಯ ಇಯತ್ತ್ಯೆಯಿಂದ ೭ನೆಯ ಇಯತ್ತ್ಯೆಯವರೆಗೆ)

ಭೂಮಂಡಲ ಪರಿಚಯ : (ಭಾಗ ೩, ೬ನೆಯ ಇಯತ್ತ್ಯೆಗೆ, ಭಾಗ ೪, ೭ನೆಯ ಇಯತ್ತ್ಯೆಗೆ)

ಆಧುನಿಕ ರೈತ : ೧ ನೆಯ ಭಾಗ ೪ನೆಯ ಇಯತ್ತ್ಯೆಗೆ, ೨ನೆಯ ಭಾಗ, ೫ನೆಯ ಇಯತ್ತ್ಯೆಗೆ.) ಈ ಪುಸ್ತಕಗಳು ಒಕ್ಕಲುತನದ ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯಂತೆ ರಚಿಸಲ್ಪಟ್ಟಿವೆ.

ಭಾರತೀಯ ರಾಜ್ಯತಂತ್ರ: ಇಂದಿನ ಘಟನಾ ಸಮಿತಿ: ಹಿಂದುಸ್ತಾನದ ಶಾಸನ ಪದ್ಧತಿಯನ್ನು ಕ್ರಮದಿಂದ ಬದಲಾವಣೆಯನ್ನು — ಸುಬೋಧವಾಗಿ ವರ್ಣಿಸಲಾಗಿದೆ.

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಬೇರೆ ಪುಸ್ತಕಗಳೂ, ಕಥೆ, ಕಾದಂಬರಿ ನಾಟಕ, ಕಾವ್ಯಗಳೂ, ಬಾಲ ಸಾಹಿತ್ಯದ, ಪುಸ್ತಕಗಳೂ ದೊರೆಯುತ್ತವೆ.

ಪ್ರಾಥಮಿಕ (ಸಾಮಾನ್ಯ ಹಾಗು ಬೇಸಿಕ್) ಶಾಲೆಗಳ ಹೊಸ
ಅಭ್ಯಾಸಪತ್ರಿಕೆಯನ ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಲೇಖಕರು:- ಎಂ. ರಾ. ಶೇಲಾ

ಪ್ರಾಥಮಿಕ ಭೂಮಿತಿ	(೪ನೆಯ ಇಯತ್ತ್ಯೆಗಾಗಿ)	.....	ಬೆಲೆ ೮ ಆಣೆ
ಪ್ರಾಥಮಿಕ ಭೂಮಿತಿ	(೫ನೆಯ ಇಯತ್ತ್ಯೆಗಾಗಿ)	.....	,, ೧೪ ಆಣೆ
ಪ್ರಾಥಮಿಕ ಭೂಮಿತಿ	(೬ನೆಯ ಇಯತ್ತ್ಯೆಗಾಗಿ)	.....	,, ೧ ರೂ. ೬ ಆ.
ಪ್ರಾಥಮಿಕ ಭೂಮಿತಿ	(೭ನೆಯ ಇಯತ್ತ್ಯೆಗಾಗಿ)	.....	,, ೧ ರೂ. ೮ ಆ.

ಎಲ್ಲಿ ಪುಸ್ತಕಗಳೂ ಪಠ್ಯ ಪುಸ್ತಕಗಳೆಂದು ಮಂಜೂರಾಗಿವೆ.

ಹೊಸ ಅಭ್ಯಾಸ ಪತ್ರಿಕೆಯಂತೆ ವ್ಯಾಯೋಗ ಭೂಮಿತಿಯನ್ನು ಕುರಿತು ಸಚಿತ್ರವಾಗಿ ಬರೆದ ಕನ್ನಡ ಪುಸ್ತಕ ಮಾಲೆಯು ಇದೊಂದೇ ಇರುವದು.

ಸೋಲ್ ಡಿಸ್ಟ್ರಿಬ್ಯೂಟರ್ಸ್ :—

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪ್ರತಿಗಳು ಕರ್ನಾಟಕದ ಎಲ್ಲಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲಿಯೂ ದೊರೆಯುವವು.

ಕನ್ನಡ ಪ್ರಾಥಮಿಕ ಶಿಕ್ಷಣ



ಪ್ರಧಾನ ಸಂಪಾದಕರು: ರಂ. ಕೃ. ಲಕ್ಕುಂಡಿ

ಪುಟ ೮೮ ಎಪ್ರೀಲ—ಮೇ ೧೯೪೯ ಸಂಚಿಕೆ ೧೧-೧೨

ಸಂಪಾದಕೀಯ

ನಮ್ಮ ಮಾತು:

ಸಂಯುಕ್ತ ಸಂಚಿಕೆಗೆ 'ಕನ್ನಡ ಪ್ರಾಥಮಿಕ ಶಿಕ್ಷ-
ಎಂಬತ್ತೈಂಟು ವರುಷಗಳು ತುಂಬಿದವು. ಇದು
ವರುಷ ಕಷ್ಟ-ಪಟ್ಟಷ್ಟು ಹಿಂದೆ ಎಂದೂ ಪಟ್ಟಿರಲಿಲ್ಲ
ಹೇಳಬಹುದಾಗಿದೆ. ದೇಶದ ಆರ್ಥಿಕ ಮುಗ್ಗಟ್ಟಿನ
ನಮ ಈ ಪತ್ರಿಕೆಯ ಮೇಲೂ ಆಗದೆ ಹೋಗಲಿಲ್ಲ.
ವುಗಳನ್ನೂ ಕಾಲ ಕಾಲಕ್ಕೆ ಇದು ಪರಿಹಾರ ಮಾಡಿ
ಳುತ್ತ ಈ ವರುಷವನ್ನು ಕಳೆಯಿತು. ಇದು ಬೆಳೆಯುತ್ತಿ
ಕಾಲದಲ್ಲಿಯೆ ಅನೇಕ ಎಡರುಗಳನ್ನು ಎದುರಿಸ
ಗಿ ಬಂದರೂ ಎಲ್ಲವನ್ನೂ ನೀಗಿ ಎಂಬತ್ತೊಂಬತ್ತ
ವರುಷದಲ್ಲಿ ಹೆಜ್ಜೆಯನ್ನಿಕ್ಕಲು ಸಿದ್ಧವಾದುದು
ಮಿಕ ಶಿಕ್ಷಣದಲ್ಲಿ ಸಂಜೀವಿನಿ ಶಕ್ತಿ ಇದೆಯೆಂಬು
ವ್ಯಕ್ತಗೊಳಿಸುತ್ತದೆ. ಇದು ಸಂತೋಷದ
ಯಾಗಿದೆ. ತನಗೆ ಸಾಧ್ಯವಿದ್ದಷ್ಟು ಮತ್ತು ತನ್ನ
ನ್ನು ಮೀರಿ ಸಹ ಈ ವರುಷ ಇದು ಪ್ರಾಥಮಿಕ
ಕ್ಷೇತ್ರಕ್ಕೆ ತನ್ನ ಸೇವೆಯನ್ನು ಸಲ್ಲಿಸಿದೆ. ಮುಂದಿನ
ವರುಷ ಇದಕ್ಕೂ ಹೆಚ್ಚಾಗಿ ಹಾಗೂ ಸುಂದರವಾಗಿ ತನ್ನ
ಸೇವೆಗೆ ಸಿದ್ಧವಾಗಲಿದೆಯೆಂದು ತಿಳಿಸಲು ಸಂತೋಷವಾ
ಗುತ್ತದೆ.

ಕೃತಜ್ಞತೆ:

ಈ ವರುಷ ನಮ್ಮ ಪತ್ರಿಕೆಗೆ ಲೇಖನಗಳ ಮುಖಾಂತರ
ವಾಗಿ ನೆರವಾದ ಲೇಖಕರಿಗೂ ಜಾಹೀರಾತುಗಳನ್ನು
ಕೊಟ್ಟು ಸಹಾಯ ಸಲ್ಲಿಸಿದ ಜಾಹೀರಾತುದಾರರಿಗೂ ನಮ್ಮ
ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹವಿತ್ತ ಸ್ಕೂಲ್
ಬೋರ್ಡುಗಳ ಅಧಿಕಾರ ವರ್ಗಕ್ಕೂ ಇತರ ಚಂದಾದಾರ
ರಿಗೂ ನಾವು ಕೃತಜ್ಞರಾಗಿದ್ದೇವೆ. ಇದು ಅಲ್ಲದೆ ನಮಗೆ
ತಮ್ಮ ಸಂಸ್ಥೆಯ ಪಡಿಯಚ್ಚುಗಳನ್ನು ಕೊಟ್ಟು ನೆರವಾದ
ಕನ್ನಡ ಸಂಶೋಧನೆಯ ಡೈರೆಕ್ಟರರಾದ ಶ್ರೀಮಾನ್ ಪಂಚ
ಮುಖಿಯವರಿಗೂ ಜಯಕರ್ನಾಟಕದ ಸಂಪಾದಕರಾದ
ಶ್ರೀ. ಶಿ. ಶಿ. ಬಸವನಾಳರಿಗೂ ಸಮಾಜ ಪುಸ್ತಕಾಲಯದ
ಒಡೆಯರಾದ ಶ್ರೀ. ಭಾಲಚಂದ್ರ ಫಾಣೇಕರರಿಗೂ ನಾವು
ಋಣಿಯಾಗಿದ್ದೇವೆ.

ನಮ್ಮ ಈ ಪತ್ರಿಕೆಯನ್ನು ಸುಗಮವಾಗಿ ಸಾಗಿಸುವುದಕ್ಕೆ ನೆರವಾದ ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರಾದ ಶ್ರೀ. ಕೆ. ಜಿ. ಸೈಯನೈನ ಅವರಿಗೂ ವಿದ್ಯಾಖಾತೆಯ ಪೈರೆಕ್ಟರವಾದ ಶ್ರೀ. ಡಿ. ಸಿ. ಪಾವಟೆ ಅವರಿಗೂ ನಾವು ಚಿರಋಣಿಯಾಗಿದ್ದೇವೆ. ನಮ್ಮ ಭಾಗದ ವಿದ್ಯಾಧಿಕಾರಿಗಳಾದ ಶ್ರೀ. ಜ. ನ. ನಾನೆಯವರು ಪತ್ರಿಕೆಯ ಸಂಪಾದನೆಯ ಕಾರ್ಯದಲ್ಲಿ ಸದಾ ನೆರವನ್ನು ಈಯುತ್ತಿದ್ದರು. ಅವರಿಗೂ ಸಂಪಾದಕ ವರ್ಗವು ಚಿರ ಕೃತಜ್ಞವಾಗಿದೆ.

ಪ್ರಾಥಮಿಕ ಶಿಕ್ಷಣದ ಭಾವಿ ಯೋಜನೆ:

ಮುಂಬಯಿ ಸರಕಾರದ ಶಿಕ್ಷಣ ಸಲಹೆಗಾರರು ಪ್ರಾದೇಶಿಕ ಪ್ರಾಥಮಿಕ ಶಿಕ್ಷಣ ಪತ್ರಿಕೆಗಳು ಯಾವ ರೀತಿಯಲ್ಲಿ ನಡೆಯಬೇಕೆಂಬ ಬಗೆಗೆ ಆಗಾಗ್ಗೆ ಸಲಹೆಗಳನ್ನು ಕೊಡುತ್ತಿದ್ದಾರೆ. ಅವರ ಮಾರ್ಗದರ್ಶನದಂತೆ ನಮ್ಮ ಪತ್ರಿಕೆಯೂ ನಡೆಯುವದು. ಅವರ ಸಲಹೆಯ ಮೇರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಕೆಳಗೆ ಕಾಣಿಸಿದಂತೆ ವಿಭಾಗಗಳನ್ನು ಮಾಡಲಾಗುವದು.

(೧) ಮಾಸಿಕ ಸಮಾಚಾರ-ವಿಚಾರ. (೨) ಸಂಪಾದಕರ ದೈನಂದಿನಿದ. (೩) ಶೈಕ್ಷಣಿಕ ಪ್ರಯೋಗಗಳು. (೪) ಪುಸ್ತಕ ಪರಿಚರ್ಶೆ ಮತ್ತು ಸೂಚನೆ. (೫) ಮಕ್ಕಳ ವಿಶಿಷ್ಟ ಸಮಸ್ಯೆಗಳು. (೬) ಶಾಲೆಯ ಚಟುವಟಿಕೆಗಳು. (೭) ಶೈಕ್ಷಣಿಕ ಲೇಖನಗಳು. (೮) ಶಿಕ್ಷಣ ತಜ್ಞರ ಲೇಖನಗಳು. (೯) ಬೇಕಾಗುವ ಲೇಖನಗಳ ಪಟ್ಟಿ.

ಈ ವಿಭಾಗಗಳಿಗೆ ಡಿ. ಇ. ಆಯ್, ಅಸಿಸ್ಟಂಟ ಡಿ. ಇ. ಆಯ್, ಮ್ಯುನಿಸಿಪಲ್ ಹಾಗು ಡಿಸ್ಟ್ರಿಕ್ಟ ಸ್ಕೂಲ್ ಬೋರ್ಡುಗಳ ಏ. ಓ ಮತ್ತು ಅವರ ವರ್ಗದವರು, ಎಲ್ಲ ಟ್ರೇನಿಂಗು ಕಾಲೇಜುಗಳ ಪ್ರಿನ್ಸಿಪಾಲರೂ ಅವರ ಶಿಕ್ಷಕ ವೃಂದವೂ ಶಿಕ್ಷಕ-ವಿದ್ಯಾರ್ಥಿಗಳೂ ಲೇಖನಗಳ ಮುಖಾಂತರ ನೆರವಾಗಬೇಕೆಂದು ನಮ್ಮ ನಾಡಿನ ಶಿಕ್ಷಣ ಸಲಹೆಗಾರರ ಮತ್ತು ಮೆ| ಡೈರೆಕ್ಟರರ ಅಪೇಕ್ಷೆಯುಂಟು. ಮೇಲ್ಕಾಣಿಸಿದವರೆಲ್ಲರೂ ನಮ್ಮ ವ್ಯವಸಾಯದ ಸಲಹೆಗಾರರ ಮತ್ತು ಉಜ್ಜಾಧಿಕಾರಿಗಳ ಅಪೇಕ್ಷೆಯನ್ನು ಈಡೇರಿಸುವರೆಂದೂ ಪ್ರಾಥಮಿಕ ಶಿಕ್ಷಣವು ಶಿಕ್ಷಣಾಭಿಮಾನಿಗಳ ಪ್ರಿಯ ಪತ್ರಿಕೆಯಾಗುವಂತೆ ಮಾಡಲು ಹೃತ್ಪೂರ್ವಕ ನೆರವನ್ನೀಯುವರೆಂದೂ ಸಂಪಾದಕ ಮಂಡಳವು ನಂಬಿದೆ.

ಅಭ್ಯಾಸ ಪತ್ರಿಕೆಗಳು:

ಕಳೆದ ಫೆಬ್ರುವರಿ ಮತ್ತು ಮಾರ್ಚ ತಿಂಗಳುಗಳ ಸಂಯುಕ್ತ ಸಂಚಿಕೆಯಲ್ಲಿ ಪ್ರಾಥಮಿಕ ೫ನೆಯ ಮತ್ತು ಹೈಸ್ಕೂಲು ೧ನೆಯ ಇಯತ್ತೆಯ ಅಭ್ಯಾಸ ಪತ್ರಿಕೆಯನ್ನು ಕೊಡಲಾಗಿತ್ತು. ಈ ಎಪ್ರಿಲ್ ಹಾಗೂ ಮೇ ತಿಂಗಳುಗಳ ಸಂಯುಕ್ತ ಸಂಚಿಕೆಯಲ್ಲಿ ಪ್ರಾಥಮಿಕ ೫, ೬ನೆಯ ಮತ್ತು ಹೈಸ್ಕೂಲು ೨, ೩ನೆಯ ಇಯತ್ತೆಗಳ ಅಭ್ಯಾಸ ಪತ್ರಿಕೆಯನ್ನು ಕೊಡಲಾಗಿದೆ. ಇದರ ಹೊರತಾಗಿ ೧ ರಿಂದ ೪ ಇಯತ್ತೆಗಳ ವರೆಗೆ ಶಾರೀರಿಕ ಶಿಕ್ಷಣ, ರೇಖನ ಕಲೆ (ಡ್ರಾಯಿಂಗ), ಸೂಜಿಗೆಲಸದ ಅಭ್ಯಾಸ ಪತ್ರಿಕೆಗಳನ್ನೂ ಕೊಡಲಾಗಿದೆ. ಶಿಕ್ಷಕರೆಲ್ಲರೂ ಈ ಅಭ್ಯಾಸ ಪತ್ರಿಕೆಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಂಡು ನಾಡಿನ ಶಿಕ್ಷಣದ ಪ್ರಗತಿಗೆ ನೆರವಾಗಬೇಕೆಂದು ಹಾರೈಸುತ್ತೇವೆ.

ವಿನ್ನಹ ಹಾಗೂ ಸೂಚನೆ

೧೯೪೯-೫೦ ನೆಯ ವರುಷದ ಪ್ರಾಥಮಿಕ ಶಿಕ್ಷಣಕ್ಕೆ ವಿದ್ಯಾ ಪ್ರೇಮಿಗಳೂ ಜಾಹೀರಾತುದಾರರೂ ನೆರವಾಗಬೇಕೆಂದು ಬೇಡುತ್ತೇವೆ. ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಜಾಹೀರಾತುಗಳನ್ನು ಮಾತ್ರ ಪ್ರಕಟಿಸಲಾಗುವದು. ಪ್ರಶ್ನೋತ್ತರ ಪುಸ್ತಕ, ಗೈಡು ಮುಂತಾದವುಗಳ ಜಾಹೀರಾತುಗಳನ್ನು ಸ್ವೀಕರಿಸಲಾಗುವುದಿಲ್ಲ. ವಿದ್ಯಾಖಾತೆಯಿಂದ ಮಂಜೂರಾದ ಪುಸ್ತಕಗಳ ಜಾಹೀರಾತುಗಳನ್ನು ಸ್ವೀಕರಿಸಲಾಗುವುದು. ಇತ್ತ ಜಾಹೀರಾತುದಾರರು ಗಮನ ಕೊಡಬೇಕೆಂದು ವಿನ್ನಹ.

ಪ್ರಾಥಮಿಕ, ಮಾಧ್ಯಮಿಕ ಹಾಗು ಮೂಲಶಿಕ್ಷಣ ಬೋರ್ಡುಗಳಿಂದ ಸಂಯುಕ್ತವಾಗಿ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ ಅಭ್ಯಾಸ—ಪತ್ರಿಕೆಯು

(ಹಿಂದಿನ ಸಂಯುಕ್ತ ಸಂಚಿಕೆಯಿಂದ ಮುಂದುವರೆದುದು)

★

೧. ವ್ಯಾಕರಣ

೨ನೆಯ ಇಯತ್ತೆ (ಹೈಸ್ಕೂಲ)—
೬ನೆಯ ಇಯತ್ತೆ (ಪ್ರಾಥಮಿಕ)

(೧) ಮೂಲಾಕ್ಷರಗಳು (ವರ್ಣವಿಚಾರ):—ಸ್ವರಗಳು ಮತ್ತು ವ್ಯಂಜನಗಳು. (೨) ಮುಖ್ಯ ಸ್ವರಸಂಧಿಗಳು. (೩) ನಾಮಗಳ ಪ್ರಕಾರಗಳು: ೧ನೆಯ ಇಯತ್ತೆಯ ಅವರ್ತನೆ ಉಜಳಣೆ), ಧಾತುಗಳಿಂದ ಹುಟ್ಟಿದ ನಾಮಗಳು. (೪) ವಿಭಕ್ತಿಗಳು—(ಕಾರಕಗಳು), ಎಂಟು ವಿಭಕ್ತಿ ಪ್ರತ್ಯಯಗಳ ರೂಪಗಳು. (೫) ಸರ್ವನಾಮಗಳು: ೧ನೆಯ ಇಯತ್ತೆಯ ಅವರ್ತನೆ, ಸಂಬಂಧಾರ್ಥಕ, ಸಾಮಾನ್ಯಾರ್ಥಕ ಸರ್ವನಾಮಗಳು. (೬) ಕಾಲಗಳು: ೧ನೆಯ ಇಯತ್ತೆಯ ಅವರ್ತನೆ; ಅಪೂರ್ಣ, ಪೂರ್ಣ, ಮತ್ತು ರೀತಿವಾಚಕ (ರೂಢ್ಯರ್ಥಕ) ಪ್ರಯೋಗಗಳು. (೭) ಪ್ರಯೋಗಗಳು: ಕರ್ತರಿ, ಕರ್ಮಣಿ. (೮) ಅವ್ಯಯಗಳು ಮತ್ತು ಕ್ರಿಯಾವಿಶೇಷಣಗಳು ಮತ್ತು ಬೇರೆ ಅವ್ಯಯಗಳು (ಉಭಯಾನ್ವಯೀ, ಶಬ್ದಯೋಗೀ, ಕೇವಲ ಪ್ರಯೋಗೀ* (೯) ಬರೆಹದಲ್ಲಿಯ ವಿರಾಮ ಚಿಹ್ನಗಳು: ೧ನೆಯ ಇಯತ್ತೆಯ ಅವರ್ತನೆ. (೧೦) ವಾಕ್ಯ ಮತ್ತು ಪದಗಳ ಸ್ವರೂಪ ಕಥನ. ಸಾಮಾನ್ಯವಾಕ್ಯ ವಿಭಜನೆ.

* ಆದರೆ ಇವು ಕನ್ನಡದಲ್ಲಿ ಇಲ್ಲ. —ಸಂ.

೩ನೆಯ ಇಯತ್ತೆ (ಹೈಸ್ಕೂಲು)—
೭ನೆಯ ಇಯತ್ತೆ (ಪ್ರಾಥಮಿಕ)

(೧) ಸ್ವರಗಳು ಮತ್ತು ವ್ಯಂಜನಗಳು:—ಆರ್ಧಸ್ವರಗಳು; ಹ್ರಸ್ವ ಮತ್ತು ದೀರ್ಘಸ್ವರಗಳು. (೨) ಶಬ್ದಗಳು—ತತ್ಸಮ, ತದ್ಭವ ಮತ್ತು ದೇಶ್ಯ. (೩) ಸಾಮಾನ್ಯ, ಸಮ್ಮಿಶ್ರ ಮತ್ತು ಸಂಯುಕ್ತ ವಾಕ್ಯ. (೪) ವಾಕ್ಯ ಮತ್ತು ಪದ ಇವುಗಳ ಸ್ವರೂಪಕಥನ-ಮುಂದುವರೆದುದು. (೫) ಕ್ರಿಯಾಪದದ ರೂಪಗಳು (ಅರ್ಥಗಳು):—ಆಜ್ಞಾರ್ಥಕ, ಸಂಭಾವನಾರ್ಥಕ, ಸಾಪೇಕ್ಷಕ ಮತ್ತು ಸಾಂಕೇತಿಕ. (೬) ಸಂಧಿಗಳು. ಸ್ವರಸಂಧಿಗಳ ಅವರ್ತನೆ: ಮುಖ್ಯ ವ್ಯಂಜನ ಸಂಧಿಗಳು. (೭) ಮುಖ್ಯ ಸಮಾಸಗಳು: ದ್ವಂದ್ವ, ಕರ್ಮಧಾರಯ, ತತ್ಪುರುಷ, ಬಹುವ್ರೀಹಿ ಮತ್ತು ಅವ್ಯಯೀಭಾವ (ಅಂಶಿ).(ಪಠ್ಯ ಪುಸ್ತಕಗಳಲ್ಲಿ ಬಂದವುಗಳನ್ನು ಗುರುತಿಸುವುದು. ಎರಡಕ್ಕಿಂತ ಹೆಚ್ಚು ಪದಗಳು ಕೂಡಿರಕೂಡದು). (೮) ಪ್ರಯೋಗಗಳು— ಅವರ್ತನೆ— ಭಾವೇ ಪ್ರಯೋಗ * (೯) ವಾಕ್ಯವಿಭಜನೆ— ಅವರ್ತನೆ: ಸಮ್ಮಿಶ್ರ ಮತ್ತು ಸಂಯುಕ್ತ ವಾಕ್ಯಗಳು. (೧೦) ಬರೆಹದಲ್ಲಿಯ ವಿರಾಮ ಚಿಹ್ನಗಳು—ಅವರ್ತನೆ; ಅರ್ಧವಿರಾಮ, ಅಪೂರ್ಣವಿರಾಮ, ನಿರ್ದೇಶಕ.

*ಇದು ಕನ್ನಡದಲ್ಲಿ ತೀರ ಏರಳ. —ಸಂ.

(ನಿರ್ದೇಶಕಕ್ಕೆ ಉದಾ: ಹೈಸ್ಕೂಲು— ಇತ್ತೀಚಿನ ವರುಷಗಳಲ್ಲಿ, ಅರ್ಧಮರ್ಧ ಹಳ್ಳಿಗಳಲ್ಲಿ, ತನ್ನ ಶಾಖೋಪಶಾಖೆಗಳನ್ನು ಕನಲೊಡೆಯಿಸಿದ್ದರೂ—ನಗರದ ವೈಶಿಷ್ಟ್ಯವನ್ನು ಕಾಯ್ದುಕೊಂಡಿದೆ). (೧೧) ಸಾಮಾನ್ಯ ಮತ್ತು ಮುಖ್ಯ ಅಲಂಕಾರಗಳು (ಗುರುತಿಸುವದು ಮಾತ್ರ). ಉದಾ:– ಶಬ್ದಾಲಂಕಾರ ಮತ್ತು ಅರ್ಥಾಲಂಕಾರ; ಉದಾ:– ಯಮಕ ಮತ್ತು ಅನುಪ್ರಾಸ ಮತ್ತು ಉಪಮೆ, ರೂಪಕ, ಉತ್ಪ್ರೇಕ್ಷೆ ಅನ್ಯೋಕ್ತಿ (ಉದಾಹರಣೆಗಳು ಸಾಧ್ಯವಿದ್ದಮಟ್ಟಿಗೆ ಪಠ್ಯ ಪುಸ್ತಕಗಳಿಂದ ಆಯ್ದುಕೊಂಡವು ಇರಬೇಕು). (೧೨) ಸಾಮಾನ್ಯ ಶಬ್ದಗಳ ವ್ಯುತ್ಪತ್ತಿ (ಪಠ್ಯ ಪುಸ್ತಕಗಳಲ್ಲಿ ಕಂಡು ಬರುವ ಶಬ್ದಗಳು). (೧೩) ಸಾಮಾನ್ಯ ವಾಕ್ಯ ಮತ್ತು ಪದ ಇವುಗಳ ಸ್ವರೂಪಕಥನ (ಮುಂದುವರಿಸುವದು).

——[]——

ಕೈ ಬರೆಹ ಹಾಗೂ ಪ್ರಬಂಧ

೨ನೆಯ ಇಯತ್ತೆ (ಹೈಸ್ಕೂಲ)—
೬ನೆಯ ಇಯತ್ತೆ (ಪ್ರಾಥಮಿಕ)

ಈ ಮಟ್ಟದಲ್ಲಿ ಬೆಳೆದು ಬಂದ ಅನುಭವಕ್ಕೆ ಹೊಂದಿಕೆಯಾಗುವಂತೆ ವ್ಯಾಪ್ತಿಯನ್ನಿಟ್ಟುಕೊಂಡು ೧ನೆಯ ಇಯತ್ತೆಯ ಸಲುವಾಗಿ ಇದ್ದುದೇ.—

ಸಂಭಾಷಣೆಗಳು.

ಜೀವನ ಚರಿತ್ರೆಗಳು.

ಲೇಖ ಪರಿಚ್ಛೇದ (ವಾಕ್ಯವೃಂದ)ಗಳು ಹಾಗೂ ಸುಲಭ ನಿಬಂಧಗಳು.

ಸಾರಾಂಶ ಲೇಖನ ಹಾಗೂ ವಿಸ್ತೃತ ಲೇಖನ.

ಪಡೆನುಡಿಗಳು ಹಾಗೂ ಕೂಡುನುಡಿಗಳು (ಮುಂದವರಿಸುವದು).

೩ನೆಯ ಇಯತ್ತೆ (ಹೈಸ್ಕೂಲು)—
೭ನೆಯ ಇಯತ್ತೆ (ಪ್ರಾಥಮಿಕ)

(ಅ) ಪತ್ರಗಳು ಹಾಗು ಮನವಿಗಳು.

(ಬ) ಸುಲಭ ನಿಬಂಧ ಲೇಖನ.

(ಕ) ಕಥೆ ಹಾಗು ಸಂಭಾಷಣೆಗಳು. (ಮುಂದುವರಿಸುವದು.)

(ಡ) ಗದ್ಯ ವಿಭಾಗಗಳ ಸಾರಾಂಶ ಲೇಖನ ಇಲ್ಲವೆ ವಿಸ್ತರಣೆ.

(ಇ) ಪಡೆನುಡಿ ಮತ್ತು ಕೂಡುನುಡಿಗಳ ಉಪಯೋಗ ಮುಂದುವರಿಸುವದು .

(ಫ) ಒಂದನೆಯ ಮತ್ತು ಎರಡನೆಯ ಇಯತ್ತೆಗಳ ಕಲಿತ ಸಂಗತಿಗಳ ಆವರ್ತನೆ.

——][——

೨. ಸಾಮಾನ್ಯವಿಜ್ಞಾನ

೬ನೆಯ ಇಯತ್ತೆ (ಪ್ರಾಥಮಿಕ)—
೨ನೆಯ ಇಯತ್ತೆ (ಹೈಸ್ಕೂಲು)

ಶ್ವಾಸೋಚ್ಛ್ವಾಸ:—ಸಜೀವ ವಸ್ತುಗಳು ಅಂಗಾರಾಮ್ಲವಾಯುವನ್ನು ತಯಾರಿಸುವ ಬಗೆ. ಜ್ವಲನಕ್ರಿಯೆಯಿಂದ (ಹೊರಡುವ) ಅಂಗಾರಾಮ್ಲವಾಯು. ಸಾದಾ ಭಸ್ಮೀಭವನ (Oxidisation) ಕ್ರಿಯೆಗೆ ಸಂಬಂಧಿಸಿ ಉಷ್ಣತೆಯ ಅಭ್ಯಾಸ. ಪ್ರಾಣವಾಯು, ರಕ್ತವನ್ನು ಶುದ್ಧಗೊಳಿಸುವದರಲ್ಲಿ ಜೀವನಕ್ಕೆ ಅದರ ಮಹತ್ವ. ವನಸ್ಪತಿಗಳಿಗೆ ಅಂಗಾರಾಮ್ಲ ವಾಯುವಿನ ಮಹತ್ವ. ಆಪದ್ಧಾರೋಪಯೋಗಿ ವನಸ್ಪತಿಗಳು. ಮನುಷ್ಯನಿಗೆ ಅಹಾರದ ಮಹತ್ವ. ಪ್ರಾಣವಾಯು, ಅಂಗಾರಾಮ್ಲವಾಯುಗಳ ಚಕ್ರ.

ಪೋಷಣೆ:— ಬಾಯಿ, ಜಠರ ಹಾಗೂ ಕರುಳು ಇವುಗಳಲ್ಲಿ ಆಹಾರದ ರಸಾಯನಿಕ ಬದಲಾವಣೆಗಳು, ಬೇರೆ ಬೇರೆ ಮಟ್ಟಗಳಲ್ಲಿ ಸ್ರಾವಗಳ ಪಾತ್ರ. ರಕ್ತಗತವಾದ ಆಹಾರವು ದೇಹದ ದೈನಂದಿನ ಸವಕಳಿಗಳನ್ನು ಪೂರೈಸಿ ದೇಹದ ಬೆಳವಣಿಗೆಗೆ ಸಹಾಯವಾಗುವ ಬಗೆ. ರಕ್ತದ ಘಟಕಗಳು, ರಕ್ತಾಭಿಸರಣ ಕ್ರಿಯೆ; ಸಮವಾದ (ದೈಹಿಕ) ಉಷ್ಣತಾಮಾನವನ್ನು ಕಾಯ್ದಿಡುವದು. ಡಾಕ್ಟರ ಉಷ್ಣತಾಮಾಪಕ. ಆಹಾರ ಸೇವನೆ ಮತ್ತು ಮಲವಿಸರ್ಜನೆಗಳ ಯೋಗ್ಯ ಹಾಗೂ ಆರೋಗ್ಯಕಾರಕ ಪದ್ಧತಿಗಳು. ಮಲವಿಸರ್ಜನೆಯ ಕ್ರಿಯೆ. ಸ್ವಚ್ಛತೆಯ ಸೌಕರ್ಯಗಳ ಬಗೆಗೆ ದಕ್ಷತೆ. ಪ್ರಾಣಿಜನ್ಯ ಗೊಬ್ಬರಗಳು. ಭೂಮಿ ಹಾಗೂ ಆಹಾರದ ಮೇಲೆ ಅದರ ಪರಿಣಾಮ.

ಚಲನೆ:—ಏರುವದರಲ್ಲಿ ಅತಂಕಗಳು; ಇಳುಕಲು (Inclined plane); ಪರ್ವತ ಮಾರ್ಗಗಳು. ಮನೆಯ ಯ ಸೊನ್ನೆಗಳು. ಸೊನ್ನೆಗಳಂತಿರುವ ದೈಹಿಕ ಅಂಗಾಂಗಳು. ಸೊನ್ನೆಗಳು ಶ್ರಮವನ್ನು ಕಡಿಮೆ ಮಾಡುವವು. ದಾರ್ಢ್ಯಗಳನ್ನು ತಲೆ, ಟೊಂಕ ಇವುಗಳ ಮೇಲೆ ಒಯ್ಯುವದರಲ್ಲಿ ಮತ್ತು ಅವುಗಳನ್ನು ದೂಡಿ ಇಲ್ಲವೆ ಜಗ್ಗಿ ಒಯ್ಯುವದರಲ್ಲಿ ಅಂತರ.

ಜ್ಞಾನಗ್ರಹಣ (Sensing):— ಕಣ್ಣುಗಳು. ವಸ್ತುಗಳ ಬಣ್ಣಗಳು ಹಗಲಿನಲ್ಲಿಯೇ ಏಕೆ ಕಾಣುವವು. ಸುತ್ತಲಿನ ವಸ್ತುಗಳ ಮೇಲೆ ಬಣ್ಣಗಳ ಪರಿಣಾಮ. ಪ್ರಾಣಿಗಳಲ್ಲಿ ಹಾಗೂ ಮನುಷ್ಯನಲ್ಲಿ ಸಂರಕ್ಷಕಬಣ್ಣ (Protective colouration). ತ್ವಚೆಯಲ್ಲಿ ವರ್ಣದ್ರವ್ಯ. ಸೂರ್ಯಪ್ರಕಾಶದ ಮಹತ್ವಗಳು. ಸೂರ್ಯ ಕಿರಣಗಳ ಮುಖಾಂತರ ಜೀವಸತ್ವಗಳು. ಸ್ವಚ್ಛ ಹವೆಯ ಮಹತ್ವ. ಜೀವನಸತ್ವಗಳ ಕೊರತೆಗಳನ್ನು ಪೂರೈಸುವ 'ಕ್ಷ' ಕಿರಣದ ಉಪಯೋಗ. ಹೆಚ್ಚು ಬಟ್ಟೆ ಧರಿಸುವದರಿಂದ ಅಪಾಯ.

ವಿಶ್ವದ ಅಭ್ಯಾಸ:— ಗ್ರಹಗಳು ಮತ್ತು ಗ್ರಹಮಾಲೆ ಸೂರ್ಯ ಮತ್ತು ಚಂದ್ರಗ್ರಹಣಗಳು. ಮೇಷಾದಿ ಹನ್ನೆರಡು ರಾಶಿಗಳು.

೬ನೆಯ ಇಯತ್ತೆ (ಪ್ರಾಥಮಿಕ)
೩ನೆಯ ಇಯತ್ತೆ (ಹೈಸ್ಕೂಲ)—

ಶ್ವಾಸೋಚ್ಛ್ವಾಸ:— ಶ್ವಾಸೋಚ್ಛ್ವಾಸದ ಬಗೆಗಳು ಪುಪ್ಪುಸಗಳು ಮತ್ತು ಶ್ವಾಸೋಚ್ಛ್ವಾಸ ಕ್ರಿಯೆ. ಶ್ವಾಸೋಚ್ಛ್ವಾಸದಲ್ಲಿ ಮಾಡಲಾಗುವ ಜಲನವಲನಗಳು. ಸಾಯಕಲ್ ಪಂಪು ಮತ್ತು ಜೀಕಳಿಗಳು. ಹವೆಯ ಒತ್ತಡ. ಹವೆಯ ಆಕುಂಚನ. ಉನ್ನತ ಪ್ರದೇಶಗಳಲ್ಲಿ ಉಸುರಾಡಿಸುವದರಲ್ಲಿಯ ಅಂತರ. ಸಾಕಷ್ಟು ಮತ್ತು ಸ್ವಚ್ಛ ಹವೆಯ ಮಹತ್ವ. ಹವೆಯ ದೋಷಗಳು. ಶುದ್ಧ ಮಾಡುವ ಬೇರೆ ಬೇರೆ ಪದ್ಧತಿಗಳು. ಹವೆಯಿಂದ ಪ್ರಸಾರವಾಗುವ ಬೇನೆಗಳು ಮತ್ತು ಮೂಗಿನಿಂದ ಉಸಿರಾಡಿಸುವವರ ಮಹತ್ವ. ಬೇಕುಬೇಕಾದಲ್ಲಿ ಉಗುಳದಿರುವದರ ಮಹತ್ವ ಮತ್ತು ಬಾಯಿ ಮುಚ್ಚಿಕೊಳ್ಳದೆ ಕೆಮ್ಮದಿರುವದರ ಅಥವಾ ಸೀನದಿರುವದರ ಮಹತ್ವ.

ಪೋಷಣೆ:— ಶಕ್ತಿ ಹಾಗೂ ಬೆಳವಣಿಗೆಗಳನ್ನು ಒದಗಿಸುವದರಲ್ಲಿ ಮತ್ತು ದೇಹದ ವಿಕಸನದಲ್ಲಿ ಆಹಾರದ ಬೇರೆ ಬೇರೆ ಘಟಕಗಳ ಮಹತ್ವ. ವಯಸ್ಸು, ಉದ್ಯೋಗ ಮತ್ತು ಹವಾಮಾನ ಇವುಗಳ ಮೇರೆಗೆ ಆಹಾರದಲ್ಲಿ ಹೆಚ್ಚು ಕಡಿಮೆ. ಹಲ್ಲು ಮತ್ತು ಒಸಡೆಗಳ ಬಗೆಗೆ ದಕ್ಷತೆ. ಏಕಾಣುಜೀವಿಗಳು (Bacteria). ಅಲ್ಪ ಇಲ್ಲವೆ ಅಯೋಗ್ಯ ಆಹಾರದಿಂದ (ಉಂಟಾಗುವ) ಬೇನೆಗಳು. ಆಹಾರವು ಮಲಿನವಾಗುವದು. ಆಹಾರವನ್ನು ಕಾಯ್ದಿಡುವದು. ಕಾಯಿಸುವದು, ಆರಿಸುವದು, ಉಪ್ಪು ಬೆರಸುವದು, ಒಣಗಿಸುವದು.

ನೀರಿನಿಂದ ಪ್ರಸಾರವಾಗುವ ಬೇನೆಗಳು:— ಪ್ರತಿಬಂಧಕ ಹಾಗೂ ನಿವಾರಣೋಪಾಯಗಳು. ಸಂಬಂಧಿಸಿದ (ಪೌರಸಭೆಯ) ಅಧಿಕಾರಿಗಳು. ಪಳ್ಳಯಲ್ಲಿ ಹಾಗೂ ಪಟ್ಟಣದಲ್ಲಿ ಆಹಾರ ಮತ್ತು ನೀರಿನ ಪೂರೈಕೆಗಳ ಮೇಲ್ವಿಚಾರಣೆ. ಸ್ವಚ್ಛತೆ. ಕೆಗ್ಗಣ ಹಾಗೂ ಇತರ ಕ್ರೆಮಿಗಳ ನಾಶ. ಕ್ರೆಮಿನಾಶಕಗಳ ಜ್ಞಾನ.

ಚಲನೆ:— ಗಾಲಿಗಳ ಉಪಯೋಗ ವೇಗದಲ್ಲಿ ಹೆಚ್ಚು ಅಥವಾ ಕಡಿಮೆ ಮತ್ತು ಶ್ರಮ ಕಡಿಮೆಯಾಗುವದು. ಜಲಚಕ್ರ; ಗಡಿಗಡಿಗಳು (ಚರ ಮತ್ತು ಸ್ಥಿರ); ಗಾಲಿ; ತಿಗುರಿ ಮತ್ತು ಹೊಲಿಯುವ ರಾಟೆಯ ಚಕ್ರ ಮುಂತಾದವು. ಸಾಯುಕಲ್ಲಿನಲ್ಲಿಯ ಸರಪಳಿ (Chain), ಜಾಲಕ ಸಲಕರಣೆ (Gearing). ಘರ್ಷಣೆ ಮತ್ತು ಘರ್ಷಣೆ ಕಡಿಮೆ ಮಾಡುವ ಎಣ್ಣೆ ಮುಂತಾದವು (Lubricants).

ಜ್ಞಾನಗ್ರಹಣ:— ಪ್ರಾಣಿಗಳಲ್ಲಿ ಹಾಗೂ ಮನುಷ್ಯನಲ್ಲಿ ಮೆದುಳು. ನರಗಳು ಹಾಗೂ ನರಕೇಂದ್ರಗಳು. ನರಗಳ ವ್ಯೂಹ. ಸ್ಪರ್ಶೇಂದ್ರಿಯ ಹಾಗೂ ರಸನೇಂದ್ರಿಯಗಳು. ತ್ವಚೆಯ ಆರೋಗ್ಯ; ಸಾಂಸರ್ಗಿಕ ರೋಗಗಳು; ಪ್ರತಿಬಂಧ ಹಾಗೂ ನಿವಾರಣೆ.

ವಂಶಾಭಿವೃದ್ಧಿ:— ಸಸ್ಯಗಳಲ್ಲಿ ಜೀವನವು ಮುಂದುವರೆಯುವ ಬಗೆ. (ಪರಾಗಾಧಾನ, ಕಸಿ ಮಾಡುವದು, ಕತ್ತರಿಸುವದು, ಮೊಗ್ಗೊಡೆಯುವದು ಮತ್ತು ಗಿಡದ ರೆಂಬೆ ಹೂತು ಸಸ್ಯ ವೃದ್ಧಿಯಾಗುವದು), ಪ್ರಾಣಿಗಳಲ್ಲಿ ಹಾಗೂ ಮನುಷ್ಯ ಜೀವಿಗಳಲ್ಲಿ ಜೀವನವು ಮುಂದುವರೆಯುವ ಬಗೆ.

ವಿಶ್ವದ ಅಭ್ಯಾಸ:— ನಕ್ಷತ್ರಗಳ, ಚಂದ್ರನ ಇಲ್ಲವೆ ಸೂರ್ಯನ ಸ್ಥಾನದ ನಿರೀಕ್ಷಣೆಯಿಂದ ವೇಳೆಯನ್ನು ಗೊತ್ತುಪಡಿಸುವದು. ಚಂದ್ರನ ಕಲೆಗಳ ಪರೀಕ್ಷಣೆಯಿಂದ ತಿಥಿಯನ್ನು ಕಂಡುಹಿಡಿಯುವದು. ನಕ್ಷತ್ರಪುಂಜಗಳಲ್ಲಿ ಚಂದ್ರನ ಸ್ಥಾನದ ನಿರೀಕ್ಷಣೆಯಿಂದ ಮಾಸ (ತಿಂಗಳು) ವನ್ನು ಕಂಡುಹಿಡಿಯುವದು.

ರಾತ್ರಿಯಲ್ಲಿ ಪ್ರಭುತ್ವ ಬೀರುವ ವಿಶಿಷ್ಟ ನಕ್ಷತ್ರಗಳ ಸಹಾಯದಿಂದ ಋತುಗಳನ್ನು ಗೊತ್ತುಪಡಿಸುವದು.

ಪಂಚಾಂಗದಲ್ಲಿಯ ಸೌರಮಾನ ಹಾಗೂ ಚಂದ್ರಮಾನ ಪದ್ಧತಿಗಳು, ಅಧಿಕಮಾಸ.

ಪ್ರಾಯೋಗಿಕವಾಗಿ ಮಾಡಿ ತೋರಿಸಬೇಕಾದ ಪ್ರಾತ್ಯಕ್ಷಿಕೆಗಳ ಪಟ್ಟಿ

೬ನೆಯ ಇಯತ್ತೆ (ಪ್ರಾಥಮಿಕ)— ೨ನೆಯ ಇಯತ್ತೆ (ಹೈಸ್ಕೂಲು)

(೧) ಉಚ್ಛ್ವಸಿಸಲ್ಪಟ್ಟ ಹವೆಯಲ್ಲಿ ಅಂಗಾರಾಮ್ಲ ವಾಯುವಿನ ಸಾನ್ನಿಧ್ಯವನ್ನು ತೋರಿಸುವದು.

(೨) (ಮೇಣ) ಬತ್ತಿಯು ಉರಿಯುವಾಗ ಅಂಗಾರಾಮ್ಲ ವಾಯುವು ಉಂಟಾಗುವದೆಂಬುದನ್ನು ತೋರಿಸುವದು.

(೩) ಒಂದು ಮೂಲ ಧಾತುವು ಪ್ರಾಣವಾಯುವಿನಲ್ಲಿ ಇಲ್ಲವೆ ಹವೆಯಲ್ಲಿ ಜ್ವಲಿಸಲು, (ಆದರ) ಜಲಜನಕ ಸಂಯುಕ್ತವು (Oxide) ಹೇಗೆ ಉಂಟಾಗುವದೆಂಬುದನ್ನು ತೋರಿಸುವದು.

(೪) ಸಕ್ಕರೆಯು ನೀರಿನಲ್ಲಿ ಹೇಗೆ ಕರಗುವದೆಂಬುದನ್ನು ತೋರಿಸುವದು.

(೫) ಸಂಗಮವರಿ ಕಲ್ಲು ಹೈಡ್ರೋಕ್ಲೋರಿಕ್ (Hydrochloric) ಆಮ್ಲದಲ್ಲಿ ಹೇಗೆ ಕರಗುವದೆಂಬುದನ್ನು ತೋರಿಸುವದು.

(೬) ಇಳಕಲು ಯಾಂತ್ರಿಕ ಲಾಭ (Mechanical advantage) ವನ್ನು ಹೇಗೆ ಕೊಡುವದೆಂಬುದನ್ನು ತೋರಿಸುವದು.

(೭) ವಿವಿಧ ಬಗೆಯ ಸೊನ್ನೆಗಳು ಶ್ರಮವಷ್ಟು ಹೇಗೆ ಕಡಿಮೆ ಮಾಡುವವು ಇಲ್ಲವೆ ದಿಕ್ಕನ್ನು ಹೇಗೆ ಬದಲಿಸುವವು ಎಂಬುದನ್ನು ತೋರಿಸುವದು.

(೮) ಪ್ರಕಾಶವು ಸರಳ ರೇಖೆಗಳಲ್ಲಿ ಚಲಿಸುವದನ್ನು ಹಾಗೂ ನೆರಳು ಉಂಟಾಗುವ ಬಗೆಯನ್ನು ತೋರಿಸುವದು.

೭ನೆಯ ಇಯತ್ತೆ (ಪ್ರಾಥಮಿಕ)—
೩ನೆಯ ಇಯತ್ತೆ (ಹೈಸ್ಕೂಲು)

(೧) ಸಾಯಿಕಲ್ ಪಂಪಿನ ಇಲ್ಲವೆ ಜೀಕಳಿಯ ಕಾರ್ಯ ವಿಧಾನವನ್ನು ತೋರಿಸುವದು.

(೨) ಹವೆಯು ಒತ್ತುವಿಕೆಯನ್ನುಂಟುಮಾಡುವ ದನ್ನು ತೋರಿಸುವದು.

(೩) ಹವೆಯನ್ನು ಸ್ವಚ್ಛಗೊಳಿಸುವದು—ಹವೆಯನ್ನು (ಆರ್ದವಾದ) ಸುಣ್ಣದ ಮೇಲೆ ಹಾಯಿಸಿ ಆಂಗಾರಾಮ್ಲ ವಾಯುವನ್ನು ಬೇರ್ಪಡಿಸುವದು.

(೪) ಗಾಲಿಗಳನ್ನು ಉಪಯೋಗಿಸುವದರಿಂದ ವೇಗ ವನ್ನು ಹೇಗೆ ಹೆಚ್ಚಿಸಬಹುದು ಇಲ್ಲವೆ ಹೇಗೆ ಕಡಿಮೆ ಮಾಡ ಬಹುದೆಂಬುದನ್ನು ತೋರಿಸುವದು.

(೫) ಗಡಗಡಿಗಳು ಶ್ರಮವನ್ನು ಹೇಗೆ ಕಡಿಮೆ ಮಾಡ ಬಲ್ಲವು ಇಲ್ಲವೆ ದಿಕ್ಕನ್ನು ಹೇಗೆ ಬದಲಿಸಬಲ್ಲಿವೆಂಬುದನ್ನು ತೋರಿಸುವದು.

(೬) ಗಾಲಿಯ ಸಹಾಯದಿಂದ ಚಲನವಲನವನ್ನು ಹೇಗೆ ಅತ್ತಿಂದಿತ್ತ ಇತ್ತಿಂದತ್ತ ಸಾಧಿಸಬಹುದೆಂಬುದನ್ನು ತೋರಿಸುವದು.

ಟೀಪು:— ಇದು ಪ್ರಾಯೋಗಿಕ ಕೆಲಸದಲ್ಲಿ ಅಪೇಕ್ಷಿಸ ಲಾದ ಕನಿಷ್ಠ ಪ್ರಮಾಣವು.

---

೩. ಗಣಿತ

೨ನೆಯ ಇಯತ್ತೆ (ಹೈಸ್ಕೂಲು)—
೬ನೆಯ ಇಯತ್ತೆ (ಪ್ರಾಥಮಿಕ)

ದಶಾಂಶ ಅಪೂರ್ಣಾಂಕಗಳು:— ಅಂಕಗಣಿತದ ನಾಲ್ಕು ಮೂಲ ನಿಯಮಗಳ ಮೇಲಿನ ಸುಲಭ ಅಭ್ಯಸನಗಳು. ವ್ಯವಹಾರಿ ಅಪೂರ್ಣಾಂಕಗಳನ್ನು ದಶಾಂಶ ಅಪೂರ್ಣಾಂಕಗ ಳಲ್ಲಿ ರೂಪಾಂತರಿಸುವದು. ರೂಪಾಯಿ, ಆಣೆ, ಪೈಗಳಂ ತಹ ವಿವಿಧ ಪರಿಮಾಣಗಳನ್ನು ರೂಪಾಯಿಗಳಲ್ಲಿ ಮತ್ತು ಅದರ ದಶಾಂಶ ಅಪೂರ್ಣಾಂಕಗಳಲ್ಲಿ ರೂಪಾಂತರಿಸುವದು. ದಶಾಂಶ ಅಪೂರ್ಣಾಂಕಗಳಲ್ಲಿ ಅಂದಾಜು. ದಶಕ ಪದ್ಧತಿ ಮತ್ತು ಹಿಂದುಸ್ತಾನ ಹಾಗೂ ವಿದೇಶಗಳಲ್ಲಿಯ ನಾಣ್ಯ ಪದ್ಧತಿ ಇವುಗಳ ಬಗೆಗೆ ಸಾಮಾನ್ಯ ಜ್ಞಾನ; ಅದರಲ್ಲಿಯೂ ವಿಶೇಷತಃ ದಶಕ ಪದ್ಧತಿಯು ಬಳಕೆಯಲಿರುವ ದೇಶಗಳ ನಾಣ್ಯ ಪದ್ಧತಿಯ ಬಗೆಗೆ—

(೨) ಚಕ್ರಬಡ್ಡಿ:— ಬಡ್ಡಿಯನ್ನು ಮಾತ್ರ ತೆಗೆಯು ವದು. ಇದರಲ್ಲಿ ದಶಾಂಶ ಪದ್ಧತಿಯನ್ನು ಉಪಯೋಗಿ ಸುವದು ಹೆಚ್ಚು ಇಷ್ಟವಾದುದು. ಸೇವ್ಹಿಂಗ್ಸ ಬ್ಯಾಂಕ್ ವ್ಯವಹಾರಗಳು. ಪೋಷ್ಟಿನ ಕ್ಯಾಶ್ ಸರ್ಟಿಫಿಕೆಟುಗಳು ಮುಂತಾದವು.

(೩) ಸರಾಸರಿ ಮತ್ತು ಶತಮಾನ:— (ಬಾಲಕರು ತಮ್ಮ ವರ್ಗದ ಬಾಲಕರ ಎತ್ತರ,ತೂಕ, ದೈನಂದಿನ ಹಾಜರಿ ಮತ್ತು ಗುಣ ಇವುಗಳ ಬಗೆಗೆ ಇಡೀ ವರ್ಗದ ಸರಾಸರಿ ಪಟ ವನ್ನು ತಯಾರಿಸಿ ಕಾಯ್ದಿಡಬೇಕು). ಪಾಲುಗಾರಿಕೆಯ ಮೇಲಿನ ಸುಲಭ ಅಭ್ಯಸನಗಳು.

(೪) ಲಾಭ-ಹಾನಿಯ ಮೇಲಿನ ಸುಲಭ ಅಭ್ಯಸನ ಗಳು. ದಲಾಲಿ ಹಾಗು ಮುರಕೊಳ್ಳುವ ಬಡ್ಡಿ ಇವುಗಳ ಕಲ್ಪನೆ. ವಸ್ತುಗಳ ತೋಕ ಮತ್ತು ಕಿರುಕಳ ಬೆಲೆಗಳು. (ಶಾಲೆಯ ಸಹಕಾರಿ ಸಂಘಗಳ ಮುಖಾಂತರ ಬಾಲಕರಿಗೆ ಅವುಗಳಲ್ಲಿಯ ಎಲ್ಲ ವ್ಯವಹಾರಗಳನ್ನು ಅವರಿಗೇ ಮಾಡ ಲಿಕ್ಕೆ ಹಚ್ಚಿ ಇದನ್ನು ಕಲಿಸಬಹುದು. ಇದು ಅವರಿಗೆ ನಿತ್ಯದ ವಿವಿಧ ವ್ಯವಹಾರಗಳಲ್ಲಿಯ ನೈಜವಾದ ಕಲ್ಪನೆ ಯನ್ನು ಮಾಡಿ ಕೊಡಲು ಸಹಾಯವಾಗುವದು).

(೫) ರೂಢಿ ಗಣಿತ:- (ತೋಕತಾಳೆ) ಅಂಗಡಿಕಾರರು ಲೆಖ್ಖ ಮಾಡುವಾಗ ಉಪಯೋಗಿಸುವ ವೇಗವಾದ ಪದ್ಧತಿ ಗಳು.

(೬) ಜನಸಂಖ್ಯೆ, ಶಾಲೆಯ ಹಾಜರಿ, ಗುಣಗಳು, ಮೂಲೋದ್ಯೋಗ, ಬೆಳೆಗಳು,ಜನನ-ಮರಣ ಮುಂತಾದ ವುಗಳಿಗೆ ಸಂಬಂಧಿಸಿದ ಸ್ತಂಭಾಲೇಖಗಳನ್ನು ಓದುವದು ಮತ್ತು ರಚಿಸುವದು. ಕೆಲವೊಂದು ವಸ್ತುಗಳ (ಬೆಲೆಯು ಹಾಗೂ ಪರಿಮಾಣಗಳ) ಬಗೆಗೆ ವಾರದ ಅಥವಾ ತಿಂಗಳದ ಪಟಗಳನ್ನು ಬರೆದಿಡುವದು.

(೭) (ಕಂಪಾಸಿನ ಸಹಾಯದಿಂದ) ಕೊಟ್ಟ ಕೋನಕ್ಕೆ ಸರಿಯಾದ ಕೋನವನ್ನು ರಚಿಸುವದು. ರೇಖೆಗಳನ್ನು

ಹಾಗೂ ಕೋನಗಳನ್ನು ದ್ವಿಭಾಗಿಸುವನು. ಕೊಟ್ಟ ಬಿಂದು ವಿನಿಂದ ಅಥವಾ ಕೊಟ್ಟ ರೇಖೆಯಲ್ಲಿ ಲಂಬಗಳನ್ನು ತೆಗೆಯುವನು. ತೂಗು-ಗುಂಡು-ನಾವಿನಿಂದ ಲಂಬವಾದ ಗೋಡೆಯನ್ನು ಪರೀಕ್ಷಿಸುವನು.

(೬) ತ್ರಿಕೋನದ ಪ್ರಕಾರಗಳು. ತ್ರಿಕೋನದ ಗುಣ ಧರ್ಮಗಳು: ಸಮ ಭುಜಗಳು ಇಲ್ಲವೆ ಎರಡು ಭುಜಗಳು ಹಾಗು ಇನ್ನೂ ಸಮವಿಲ್ಲದ ಕೋನ ಇಲ್ಲವೆ ಎರಡು ಕೋನಗಳು ಸಮ ಹಾಗು ಮೂರು ಭುಜ ಇನ್ನೂಗಳನ್ನೂ ಕೊಟ್ಟಾಗ ತ್ರಿಕೋನವನ್ನು ರಚಿಸುವ ರೀತಿ. (ಸಮಿಶ್ರ ಉದಾಹರಣೆಗಳನ್ನು ಬಿಡಿಸಬೇಕು.)

(೯) ಪ್ರವಾಸಗಳ ಪರಿಸರಕ್ಕೆ ತಕ್ಕಂತೆ ಸ್ಥಳೀಯ ಸ್ಥಳಗಳಿಗನುಸರಿಸಿ ಪ್ರವಾಸಗಳನ್ನು ಗುರುತಿಸುವದು. (ವರ್ಗದ ಬಾಲಕರು ಎರಡು ಇಲ್ಲವೆ ಹೆಚ್ಚು ಪ್ರವಾಸಗಳನ್ನು ಕೈಕೊಳ್ಳುವಂತೆ ಮಾಡಬೇಕು. ಇವುಗಳಲ್ಲಿ ಪ್ರತ್ಯಕ್ಷ ದಿಕ್ಕಿನ ಬದಲಾವಣೆ ಮತ್ತು ದಾರಿಯ ಅಂತರಗಳನ್ನು ಬರೆಸಿಟ್ಟು, ಅವುಗಳನ್ನು ಸ್ಥಳೀಯ ಸ್ಥಳಗಳಿಗನುಸರಿಸಿ ಮಾರ್ಪಡಿಸಬೇಕು. ಉಪಯೋಗಿಸಿದ ಸ್ಥಳವನ್ನು ನಮೂದಿಸಬೇಕು.) ಕೊಟ್ಟ ಸ್ಥಳವನ್ನು ನಕಾಶೆಯಲ್ಲಿ ಉಪಯೋಗಿಸಿ ಖಾಸ್ತಾನಿಕ ಅಂತರಗಳನ್ನು ಕಂಡು ಹಿಡಿಯುವದು.

(೧೦) ಶಾಲೆಯ ಸ್ನೇಹ ಸಮ್ಮೇಲನ, ಮಕ್ಕಳ ಸಹಕಾರಿ ಅಂಗಡಿ, ಹೊಲಗಳು ಹಾಗು ದೈನಂದಿನ ಗೃಹೋಪಯೋಗಿ ಸಾಮಾನುಗಳ ಖರೀದಿ, ಇವುಗಳ ಬಗೆಗೆ ಸಾದಾ ಜಮಾಖರ್ಚುಪಟ್ಟಿಯನ್ನು ಬರೆದಿಡುವದು. ರೇಖಾ ಪದ್ಧತಿಯ ಸಂಕೇತಗಳು.

ಪ್ರೌಢಶಾಲೆಯ ಪ್ರಥಮ ವರ್ಷ (ಹೈಸ್ಕೂಲು)—ಎಸ್.ಎಸ್.ಎಲ್.ಸಿ (ಪ್ರಾಥಮಿಕ)

(೧) ತ್ರಿಕೋನ ಸಜ್ಜತಿಯಿಂದ ಹೊಲಗಳ ನಕ್ಷೆ ತೆಗೆಯುವದು. (ಥಿಯೋಡೋಲಾಯಿಟ್ ಉಪಕರಣದ ಕೆಲಸವನ್ನೇ ಕೊಡಲು ತಯಾರಿಸಿದ ಸುಲಭ ಸಾಧನವನ್ನು ಉಪಯೋಗಿಸಿ; ಒಂದು ಅಥವಾ ಎರಡು ಹೊಲಗಳು ಅಳೆಯಲ್ಪಡಬೇಕು).

(೨) ತ್ರಿಕೋನಾಕಾರದ ಅಕೃತಿಗಳ ಕ್ಷೇತ್ರ ತೆಗೆಯುವದು. ವಿಷಮ ಆಕೃತಿಗಳನ್ನು (ಬಹುಕೋನಾಕೃತಿಗಳನ್ನು) ತ್ರಿಕೋನಾಕೃತಿಗಳಲ್ಲಿ ಮಾರ್ಪಡಿಸಿ, ಅವುಗಳ ಕ್ಷೇತ್ರ ತೆಗೆಯುವದು.

(೩) ವರ್ತುಲದ ಕ್ಷೇತ್ರ, ಪರಿಘ, ಮತ್ತು ವ್ಯಾಸ ಹಾಗೂ ಕ್ಷೇತ್ರ ಮತ್ತು ತ್ರಿಜ್ಯ. ಇವುಗಳ ನಡುವಿನ ಸಂಬಂಧ. ವೃತ್ತಚಿತಿ (Cylinder) ಆಕಾರದ ವಸ್ತುಗಳ ಮೇಲ್ಮೈಯ ಕ್ಷೇತ್ರ.

(೪) ಘನಮಾಪನ, ಕಾಟಕೋನ ಚೌಕೋನಾಕಾರದ ವಸ್ತುಗಳ ಗಾತ್ರ. (ಅವಶ್ಯವೊಂದ ಅಳತೆಗಳನ್ನು ಅಳೆದು, ಗೋಡೆ ಇಲ್ಲವೆ ತೊಲೆಗಳ ಬೆಲೆಯನ್ನು ತೆಗೆಯುವದು.)

(೫) ವೃತ್ತಚಿತಿಯಾಕಾರದ ಪಾತ್ರೆ, ಭಾವಿ ಮುಂತಾದವುಗಳ ಗಾತ್ರ, ಗ್ಯಾಲನ್. ಧಾರಣಶಕ್ತಿಯ ಮಾಪು (ಪ್ರವಾಹಿಗಳಿಗಾಗಿ).

(೬) ವೇಳೆ, ಕೆಲಸ ಹಾಗು ವೇಗದ ಸುಲಭ ಲೆಖ್ಖಗಳು.

(೭) ಸಮಾಂತರ ರೇಖೆಗಳ ಗುಣಧರ್ಮಗಳು. ಕೊಟ್ಟ ಸರಳ ರೇಖೆಗೆ ಸಮಾಂತರವಾಗಿ ಇನ್ನೊಂದು ರೇಖೆಯನ್ನು ತೆಗೆಯುವದು. ಸಮಾಂತರ ರೇಖೆಗಳ ಗುಣಧರ್ಮಗಳನ್ನುಪಯೋಗಿಸಿ, ಕೊಟ್ಟ ಒಂದು ಕೋನಕ್ಕೆ ಸರಿಯಾಗುವಂತೆ ಇನ್ನೊಂದು ಕೋನ ರಚಿಸುವದು.

(೮) ಜನಸಂಖ್ಯೆಯ ಬೆಳವಣಿಗೆ, ಶಾಲೆಯಲ್ಲಿ ಮಕ್ಕಳ ಒಟ್ಟು ಸಂಖ್ಯೆ, ಅವರ ಎತ್ತರ ಹಾಗೂ ತೂಕಗಳು, ಮೂಲೋದ್ಯೋಗದಲ್ಲಿಯ ಪ್ರಗತಿ, ವಸ್ತುಗಳ ಬೆಲೆ ಮುಂತಾದವುಗಳ ರೇಖಾ ಲೇಖಗಳನ್ನು ಓದುವದು ಮತ್ತು ರಚಿಸುವದು.

(೯) ಶಾಲೆಯ ಸ್ನೇಹ-ಸಮ್ಮೇಲನ, ಮಕ್ಕಳ ಸಹಕಾರಿ ಅಂಗಡಿ, ಹೊಲಗಳು ಹಾಗೂ ದೈನಂದಿನ ಗೃಹೋಪಯೋಗಿ ಸಾಮಾನುಗಳ ಖರೀದಿ ಇವುಗಳ ಬಗೆಗೆ ಸಾದಾ ಜಮಾಖರ್ಚು ಬರೆದಿಡುವದು. ರೇಖಾ ಪದ್ಧತಿಯ ಸಂಕೇತಗಳು.

(೧೦) ಸಾಮಾನ್ಯೀಕರಣ ಹೊಂದಿದ ಅಂಕಗಣಿತವು ಬೀಜಗಣಿತ. ಅಂಕಿಗಳ ಬದಲು ಅಕ್ಷರಗಳ ಉಪಯೋಗ ಸುಲಭವಾದ ಸೂತ್ರಗಳನ್ನು ಕಟ್ಟುವದು. ಸೂತ್ರಗಳನ್ನ

ಅಕ್ಷರಗಳ ಬದಲಾಗಿ ಅಂಕೆಗಳನ್ನಿಡುವದು. ಅತಿ ಸುಲಭವಾದ ಸಮೀಕರಣಗಳನ್ನೊಳಗೊಂಡ ಅಭ್ಯಸನಗಳನ್ನು ಬಿಡಿಸುವದು.

———

೪. ಇತಿಹಾಸ

೨ನೆಯ ಇಯತ್ತೆ (ಹೈಸ್ಕೂಲು)—
೬ನೆಯ ಇಯತ್ತೆ (ಪ್ರಾಥಮಿಕ)

(೧) ಇಸ್ಲಾಮ ಧರ್ಮಕ್ಕಿಂತ ಮೊದಲು ಹಿಂದುಸ್ತಾನ ಮತ್ತು ಅರಬಸ್ತಾನಗಳ ನಡುವಿನ ಸಂಬಂಧಗಳು. ಸಮುದ್ರ ಮಾರ್ಗದಿಂದ ವ್ಯಾಪಾರ. ಮುಹಮ್ಮದ ಪೈಗಂಬರರ ಹಾಗೂ ಅವರ ನಂತರ ಕೂಡಲೇ ಆಗಿಹೋದ ಅವರ ಅನುಯಾಯಿಗಳ ಜೀವನ ಮತ್ತು ತತ್ವಬೋಧೆ; ಇಸ್ಲಾಮ ಧರ್ಮದ ಪ್ರಸಾರ. ಸಿಂಧ ಪ್ರಾಂತದ ಮೇಲೆ ಅರಬರ ದಾಳಿ.

(೨) ರಜಪೂತರು, ಅವರೊಳಗಿನ (ರಾಜಕೀಯ) ಬಣಗಳು, ಅವರಲ್ಲಿಯ ಪರನಾರೀ ಸಹೋದರತ್ವದ ಬುದ್ಧಿ ಮತ್ತು ಕ್ಷಾತ್ರತೇಜ. ಬಣಗಳಲ್ಲಿಯ ಪರಸ್ಪರ ವೈರ; ಭಿನ್ನಾಳದ ಪ್ರತಿಹಾರ ರಾಜ್ಯ ಮತ್ತು ಕನೋಜ; ೧ನೆಯ ಭೋಜ.

(೩) ಉತ್ತರ ಹಿಂದುಸ್ತಾನವಲ್ಲಿ ಮುಸಲ್ಮಾನ ಸತ್ತೆಯ ಸ್ಥಾಪನೆ. ಘಜನಿ ಮಹಮೂದ ಹಾಗೂ ದಿಲ್ಲಿಯ ಪಠಾಣ ಅರಸರು.

(೪) ದಕ್ಷಿಣ ಹಿಂದುಸ್ತಾನದ ದಿಗ್ವಿಜಯ; ಅಲ್ಲಾವುದ್ದೀನ ಖಿಲಜಿ. ಹಾಗೂ ಮುಹಮ್ಮದ ತಘಲಕ.

(೫) ಪಠಾಣ ಅರಸರ ಕಾಲದಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳು. ಪರ್ಶಿಯನ್, ಅಡಳಿತೆಯ ಹಾಗೂ ಒಡ್ಡೋಲಗದ ಭಾಷೆ. ಹಿಂದು ಹಾಗೂ ಮುಸಲ್ಮಾನರ ನಡುವಿನ ಸಂಪರ್ಕ. ಸಾಧುಗಳು ಹಾಗೂ ಫಕೀರರು. ರಮಾನಂದ ಮತ್ತು ಕಬೀರ; ನಾನಕ.

(೬) ವಿಜಯನಗರ ಮತ್ತು ಬಹಮನಿ ರಾಜ್ಯಗಳು, ಅವುಗಳ ಉದಯೋತ್ಕರ್ಷ ಹಾಗೂ ಪತನ, ಅವುಗಳ ವೈಭವ, ವಿದ್ಯೆ ಹಾಗೂ ಕಲೆಗಳಿಗೆ ಆಶ್ರಯ. ಉರ್ದು ಭಾಷೆಯ ಉದಯ.

(೭) ಮೊಗಲ ಸತ್ತೆಯ ಸ್ಥಾಪನೆ, ಬಾಬರನ ದಾಳಿ, ೧೫೨೬; ಬಾಬರನು ಕಂಡ ಹಿಂದುಸ್ತಾನ, ಹುಮಾಯುನ ಹಾಗೂ ಶೇರಶಾಹ. ಶೇರಶಾಹನ ರಾಜ್ಯದಾಡಳಿತೆಯ ಪದ್ಧತಿ.

(೮) ಘನವಂತನಾದ ಅಕ್ಬರ; ಸಾಮ್ರಾಜ್ಯದ ವಿಸ್ತರಣೆ ಹಾಗೂ ಅದರ ಸುವ್ಯವಸ್ಥೆ, ಮನವೊಲಿಸುವ ಆತನ ಧೋರಣೆ; ಧರ್ಮದ ಬಗೆಗೆ ಆವನ ಉದಾರ ಧೋರಣೆ—ದೀನ್-ಇಲಾಹಿ. ಕಲೆ ಹಾಗೂ ಸಾಹಿತ್ಯಗಳಿಗೆ ಆಶ್ರಯ.

(೯) ಜಹಾಂಗೀರ ಮತ್ತು ಶಾಹಜಹಾನ. ಒಡ್ಡೋಲಗದಲ್ಲಿ ವೈಭವ. ತಾಜಮಹಾಲ, ಮುತ್ತಿನ ಮಸೀದಿ.

(೧೦) ಔರಂಗಜೇಬ—ಅವನ ಸ್ವಭಾವ ಹಾಗೂ ಧೋರಣೆ. ದಕ್ಷಿಣದಲ್ಲಿಯ ಯುದ್ಧಗಳು.

(೧೧) ಶೀಖರ ಏಳಿಗೆ, ಆವರ ಗುರುಗಳು ಹಾಗೂ 'ಗ್ರಂಥಸಾಹೇಬ.'

(೧೨) ಮೊಗಲರ ಅಡಳಿತೆಯಲ್ಲಿಯ ಹಿಂದುಸ್ತಾನದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳ ಸಾಮಾನ್ಯ ಆವಲೋಕನ, ಬಲಿಷ್ಠ ಕೇಂದ್ರ ಸರಕಾರ, ನಿಷ್ಪಕ್ಷಪಾತವಾದ ಅಡಳಿತೆ, ಜ್ಞಾನಾರ್ಜನೆಗೆ ಪ್ರೋತ್ಸಾಹನೆ. ಪರ್ಶಿಯನ್ ಭಾಷೆಯ ಹಿಂದೂ ಗ್ರಂಥಕಾರರು ಮತ್ತು ಹಿಂದೀ ಹಾಗೂ ಸಂಸ್ಕೃತ ಭಾಷೆಗಳ ಮುಸಲ್ಮಾನ ಗ್ರಂಥಕಾರರು, ಉಡಿಗೆತೊಡಿಗೆ, ಆಹಾರ, ಉತ್ಸವ ಹಾಗೂ ಮನರಂಜನೆ ಮುಂತಾದ ವಿಷಯಗಳಲ್ಲಿ ಸಾಮಾನ್ಯ ಜೀವನದ ಬೆಳವಣಿಗೆ.

(೧೩) ಕರ್ನಾಟಕದಲ್ಲಿ ಧಾರ್ಮಿಕ ಅಂದೋಲನಗಳು: ಬಸವೇಶ್ವರರು ಮತ್ತು ಮಧ್ವಾಚಾರ್ಯರು.

(೧೪) "ಭಕ್ತಿ" ಪಂಥ, ಮಹಾರಾಷ್ಟ್ರದ ಸಂತರು: ಜ್ಞಾನೇಶ್ವರ, ಏಕನಾಥ, ತುಕಾರಾಮ, ರಾಮದಾಸ, ತುಳಸೀದಾಸ, ಮೀರಾಬಾಯಿ, ದಕ್ಷಿಣ ಹಿಂದುಸ್ತಾನದ ಆಳಾ

ರರು, ಕರ್ನಾಟಕದ ದಾಸರು, ಬಂಗಾಲದ ಚೈತನ್ಯ, ಗುಜರಾತಿನ ನರಸಿಂಹ ಮೆಹತಾ.

(೧೫) ಘನಸುಂತೆನಾದ ಶಿವಾಜಿಯು.

(೧೬) ಮೊದಲನೆಯ ಮೂವರು ಸೇಕ್ಸೆಯರ ಕಾಲದ ಸ್ಟೆಯ ಮಹಾನ್ ರಾಜ್ಯಸ್ಥ ನಿರ್ಮಾಣ.

(೧೭) ೧ನೆಯ ಮಾಳವನಾಯ.

(೧೮) ಮಾಗರ ಅಳಗಾಲ. ಅವರ ಅಳಿಕೆಯಲ್ಲಿಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳು.

೭ನೆಯ ಅಧ್ಯಾಯ (ಪೈಸ್ಕೂಲು)—
೭ನೆಯ ಅಧ್ಯಾಯ (ಪ್ರಾಥಮಿಕ)

(೧) ಮಸಾಲೆಯ ಸಾಮಾನುಗಳಿಗಾಗಿ ಶೋಧ, ಕಡಲ ಸಾಹಸಗಳು, ಪೋರ್ತುಗೀಜರು (ಅಲ್ಬುಕರ್ಕ ಹಾಗೂ ನೇಂಟ ಫ್ರಾನ್ಸಿಸ್) ಮತ್ತು ಡಚ್ಚರು. ಅವರ ನಂತರ ಬಂದ ಫ್ರೆಂಚರು ಹಾಗೂ ಇಂಗ್ಲೀಷರು, ಫ್ರೆಂಚ ಮತ್ತು ಇಂಗ್ಲೀಷರಲ್ಲಿ ಸ್ಪರ್ಧೆ, ಡುಪ್ಲೆ ಮತ್ತು ಕ್ಲೈವ.

(೨) ಪ್ಲಾಸಿಯ ಕಾಳಗ ಮತ್ತು ಇಂಗ್ಲಿಷರಿಂದ ಬಂಗಾಲದ ಆಕ್ರಮಣ.

(೩) ಹೇಸ್ಟಿಂಗ್ಸ ಮತ್ತು ಮರಾಠರು.

(೪) ವೆಲ್ಲಸ್ಲಿ ಹಾಗೂ ಹಿಂದುಸ್ತಾನದಲ್ಲಿ ಬ್ರಿಟಿಶ ಸತ್ತೆಯ ವಿಸ್ತರಣೆ, ಸಹಾಯಕ ಸೈನ್ಯ ಹಾಗೂ ತಜ್ಜನ್ಯ ಮಿತ್ರತ್ವದ ಒಡಂಬಡಿಕೆಗಳು.

(೫) ರಾಜಾ ರಾಮಮೋಹನ ರಾಯ ಮತ್ತು ಬೆಂಟಿಂಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಆಡಳಿತೆಯ ಸುಧಾರಣೆಗಳು.

(೬) ರಣಜಿತಸಿಂಗ ಹಾಗೂ ಶೀಖರು.

(೭) ಡಾಲಹೌಸಿ; ಅತನ ಸುಧಾರಣೆಗಳು, ಖಾಲಸಾ ಪದ್ಧತಿಯ ತತ್ವ, ಒಳಸೇರಿಸಿಕೊಳ್ಳಲ್ಪಟ್ಟ ಸಂಸ್ಥಾನಗಳು.

(೮) ೧೮೫೭ ರ ಯುದ್ಧ ಮತ್ತು ರಾಜ್ಯದಾಡಳಿತೆಯಿಂದ ಈಸ್ಟ ಇಂಡಿಯಾ ಕಂಪನಿಯ ನಿರ್ಗಮನ.

(೯) ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳಿಗಾಗಿ ೧೮೫೭ ರ ನಂತರದ ಪ್ರಯತ್ನಗಳು; ವಿಶ್ವವಿದ್ಯಾಲಯಗಳ ಸ್ಥಾಪನೆ. ಬ್ರಹ್ಮೊ ಹಾಗೂ ಆರ್ಯ ಸಮಾಜ (ಮುಂಬೈಯಲ್ಲಿ ಪ್ರಾರ್ಥನಾ ಸಮಾಜ) ದಾದಾ ಭಾಯಿ ನವರೋಜಿ, ರಾನಡೆ, ಸುರೇಂದ್ರನಾಥ ಬ್ಯಾನರ್ಜಿ

(೧೦) ರಾಷ್ಟ್ರೀಯ ಕಾಂಗ್ರೆಸ್ಸಿನ ಜನನ.

(೧೧) ಸರ್ ಸಯ್ಯದ ಅಹಮ್ಮದ ಹಾಗೂ ಅಲಿಗಡ ಆಂದೋಲನ.

(೧೨) ಕರ್ಜನ್, ಜಪಾನದ ವಿಜಯ ಹಾಗು ಹಿಂದೀಯರ ಮನಸ್ಸಿನ ಮೇಲೆ ಅದರ ಪರಿಣಾಮ ದಕ್ಷಿಣ ಆಫ್ರಿಕೆಯಲ್ಲಿ ಮಹತ್ಮಾ ಗಾಂಧಿಯವರ ಸತ್ಯಾಗ್ರಹ ಚಳವಳಿ. ಬಂಗಾಲದ ವಿಭಜನೆ ಮತ್ತು ಸ್ವದೇಶಿ, ಬಹಿಷ್ಕಾರ ಹಾಗೂ ರಾಷ್ಟ್ರೀಯ ಶಿಕ್ಷಣಗಳ ಉದಯ.

(೧೩) ಟಿಳಕ ಮತ್ತು ಗೋಖಲೆ.

(೧೪) ಟಾಟಾ : ಹಿಂದೀ ಉದ್ದಿಮೆಗಳ ಉದಯೋತ್ಕರ್ಷ.

(೧೫) ಮೊದಲನೆಯ ಜಾಗತಿಕ ಯುದ್ಧ—ರಾಷ್ಟ್ರ ಸಂಘ.

(೧೬) ೧೯೧೯ ರ ಮಾಂಟಿಗ್ಯೂ—ಚೆಮ್ಸ್‌ಫರ್ಡ ಸುಧಾರಣೆಗಳು; ಲಖನೌ ಒಪ್ಪಂದ, ೧೯೧೬.

(೧೭) ಮಹಾತ್ಮಾ ಗಾಂಧಿ. ಅಸಹಕಾರ ಚಳವಳಿ ಸಾಯಮನ್ ಕಮಿಶನ್, ದುಂಡು ಮೇಜಿನ ಪರಿಷತ್ತುಗಳು. ೧೯೩೫ ರ ಕಾನೂನು ಹಾಗೂ ನಂತರದ ಸಂಗತಿಗಳು.

(೧೮) ಎರಡನೆಯ ಜಾಗತಿಕ ಯುದ್ಧ—ಸಂಯುಕ್ತ ರಾಷ್ಟ್ರ ಸಂಘ (U. N. O).

(೧೯) ಪಾಕಿಸ್ತಾನದ ಜನನ. ಹಿಂದು ಸ್ತಾನದ ಸ್ವಾತಂತ್ರ್ಯ, ೧೯೫೦ ರ ಆಗಸ್ಟ, ೧೯೪೭.

೫. ಭೂಗೋಲ

೨ನೆಯ ಇಯತ್ತೆ (ಹೈಸ್ಕೂಲು)--
೬ನೆಯ ಇಯತ್ತೆ (ಪ್ರಾಥಮಿಕ

(೧) ಹಿಂದುಸ್ತಾನದ ದ್ವೀಪಕಲ್ಪಾಕಾರವಾದ ಭಾಗದ ವಿವರವಾದ ಅಭ್ಯಾಸ.

(೨) ನಮ್ಮ ನೆರೆಹೊರೆಯವರು— ಜೀವನ ಹಾಗೂ ಉದ್ಯೋಗಗಳು, ಹಿಂದುಸ್ತಾನದೊಡನೆ ಸಂಬಂಧದ ಬಗೆ. ನಮ್ಮ ನೆರೆಯ ದೇಶಗಳ ಹಾಗೂ ನಾವು ನಿಕಟ ಸಂಬಂಧ ಇಟ್ಟುಕೊಂಡ ದೇಶಗಳ ಸ್ಥೂಲ ಅಭ್ಯಾಸ; ಉದಾ: ಪಾಕಿಸ್ತಾನ, ಚೀನ, ತಿಬೇಟ, ಜಪಾನ, ಸಿಂಹಲದ್ವೀಪ, ಬ್ರಹ್ಮದೇಶ, ಮಲಯಾ ಹಾಗೂ ಇಂಡೋನೇಶಿಯಾ, ಆಸ್ಟ್ರೇಲಿಯಾ, ದಕ್ಷಿಣ ಹಾಗೂ ಪೂರ್ವ ಆಫ್ರಿಕಾ, ಇರಾಣ, ಅರಬಸ್ತಾನ, ಅಫಗಾನಿಸ್ತಾನ ಹಾಗೂ ಮಧ್ಯ ಏಶಿಯಾದ ರಶಿಯನ್ ಪ್ರಜಾಪ್ರಭುತ್ವದ ರಾಜ್ಯಗಳು.

(ಅ) ಪ್ರಾಕೃತಿಕ ಭೂಗೋಲ:—

(೧) ಪೃಥ್ವಿಯ ಆಕಾರ (ಆಧಾರಗಳನ್ನು ಕೊಡಬೇಕು), ಅಕ್ಷವೃತ್ತ ಹಾಗೂ ರೇಖಾವೃತ್ತಗಳು, ವಾರ್ಷಿಕ ಗತಿ (ಇಲ್ಲಿ ಋತುಮಾನಗಳ ಬಗೆಗೆ ಕಲಿಸಕೂಡದು). ದೈನಂದಿನ ಗತಿ, ಹಗಲು ಹಾಗೂ ರಾತ್ರಿಗಳ ಘಟನೆ.ವೇಳೆ, ಸ್ಥಾನಿಕ ಹಾಗೂ ಪ್ರಮಾಣ ವೇಳೆಗಳು. ಭೂಕಂಪ ಹಾಗೂ ಜ್ವಾಲಾಮುಖಿಗಳು.

(೨) ಹವಾಮಾನದ ಕಟಿಬಂಧಗಳು.

(೩) ಏಶಿಯಾದ ಆಗ್ನೇಯ ದೇಶಗಳು, ಜಪಾನ, ಚೀನ ದೇಶಗಳು ಇವುಗಳ ಮೇಲೆ ಪರಿಣಾಮವನ್ನುಂಟುಮಾಡುವ ಋತುಮಾನದ ಗಾಳಿಗಳು.

(೪) ಮಳೆ-ಭಾಷ್ಪೀಭವನ ಮತ್ತು ಘನೀಭವನ.

(ಬ) ಪ್ರಾಯೋಗಿಕ ಹಾಗೂ ನಿರೀಕ್ಷಣೆಯ ಕೆಲಸ:

(೧) ಬೇರೆ ಬೇರೆ ಋತುಮಾನಗಳಲ್ಲಿಯ ಸೂರ್ಯನ ಕೋರಿಕೆಯ ಸ್ಥಾನಗಳ ನಿರೀಕ್ಷಣೆ ಮತ್ತು ದಿನಮಾನ ಹಾಗೂ ಉಷ್ಣತಾಮಾನಗಳ ಮೇಲೆ ಅವುಗಳ ಪರಿಣಾಮಗಳು.

(೨) ನಡುಮಧ್ಯಾಹ್ನದ ಮಳೆಯಲ್ಲಿ ಉಷ್ಣತಾಮಾನದ ನಿರೀಕ್ಷಣೆ ಹಾಗೂ ಟಿಪ್ಪಣಿ.

(೩) ಪರ್ಜನ್ಯ ಮಾಪಕದ ಉಪಯೋಗ.

(೪) ಹಿಂದುಸ್ತಾನದ ವೇಳೆಗೆ ಅನ್ವಯಿಸಿ ಜಗತ್ತಿನ ಬೇರೆ ಬೇರೆ ಭಾಗಗಳ ವೇಳೆಯನ್ನು ಕಂಡುಹಿಡಿಯುವದು.

(೫) ಹಿಂದುಸ್ತಾನದ ದ್ವೀಪಕಲ್ಪಾಕಾರವಾದ ಭಾಗದ (ಬಾಹ್ಯರೇಷೆಯ) ನಕಾಶದಲ್ಲಿ ಮಹತ್ವದ ವಿವರಗಳನ್ನು ತುಂಬುವದು.

(೬) ಹಿಂದುಸ್ತಾನದ ಹಾಗೂ ನೆರೆಹೊರೆಯ ದೇಶಗಳ ಸುಲಭವಾದ ನಕಾಶಗಳನ್ನು ಓದುವದು ಮತ್ತು ಅರ್ಥ ಮಾಡಿಕೊಳ್ಳುವದು.

(೭) ಚಂದ್ರನ ಕಲೆಗಳು ಹಾಗೂ ಭರತ ಓಹಟಗಳು.

(೮) ಸಂಗ್ರಹದ ಕೆಲಸವನ್ನು ಮುಂದುವರಿಸುವದು.

೩ನೆಯ ಇಯತ್ತೆ (ಹೈಸ್ಕೂಲು)—
೨ನೆಯ ಇಯತ್ತೆ (ಪ್ರಾಥಮಿಕ)

(೧) ಹಿಂದುಸ್ತಾನದ ವಿವರವಾದ ಅಭ್ಯಾಸ: ಸ್ಥಾನ, ಅಳತೆ. ಆಕಾರಗಳು, ಪ್ರಾಕೃತಿಕ ಸ್ವರೂಪ; ಮಳೆಯನ್ನೊಳಗೊಂಡು ಹವಾಮಾನ, ನೀರಾವರಿ, ವನಸ್ಪತಿ, ಜನವಸತಿ, ಕರಾವಳಿ ಪ್ರದೇಶ (ಸಂರಕ್ಷಣೆ ಹಾಗೂ ಮೀನಗಾರಿಕೆ), ನದಿಗಳು, ಪರ್ವತಗಳು, ರಾಜಕೀಯ ವಿಭಾಗಗಳು, ಮುಖ್ಯ ಭಾಷೆಗಳು, ಮುಖ್ಯ ಪಟ್ಟಣಗಳು, ಬಂದರುಗಳು, ಸಾರಿಗೆ ಹಾಗೂ ಸಂಪರ್ಕಗಳ ಸಾಧನಗಳು.

(೨) ಹಿಂದುಸ್ತಾನದ ಸಂಪತ್ತು, ಕೆಳಗಿನವುಗಳಲ್ಲಿ—

ಜಲಶಕ್ತಿ, ಅರಣ್ಯ--ಹುಟ್ಟುವಳಿ, ಸಮುದ್ರ-ಹುಟ್ಟುವಳಿ, ಖನಿಜಗಳು, ಒಕ್ಕಲುತನ ಮುತ್ತು ಉದ್ದಿಮೆ.

(೩) ಹಿಂದುಸ್ತಾನದ ಪರರಾಷ್ಟ್ರ ವ್ಯಾಪಾರ. ಜಗತ್ತಿನ ಭೌಗೋಲಿಕ ಪರಸ್ಪರಾವಲಂಬನ.

(೪) ಯುರೋಪಿನ ಮತ್ತು ಅಮೇರಿಕೆಗಳ ಮುಖ್ಯ ದೇಶಗಳ ಸ್ಥೂಲ ಅಭ್ಯಾಸ.

(ಆ) ಪ್ರಾಕೃತಿಕ ಭೂಗೋಲು—

(೧) ವಿಶ್ವದ ಬಗೆಗೆ ಸಾಮಾನ್ಯ ಕಲ್ಪನೆ. ಸೂರ್ಯ ಮಾಲೆ. ಗ್ರಹಣಗಳು.

(೨) ಪೃಥ್ವಿ—ಸೂತುಮಾನುಗಳು; (ನೀರು, ಗಾಳಿ ಮುಂತಾದವಗಳುಂಟುಮಾಡುವ) ಸವಕಳಿ ಹಾಗೂ ಪೂರ್ಯಿಕೆ.

(೩) ಗಾಳಿಗಳು ಮತ್ತು ಸಮುದ್ರ ಪ್ರವಾಹಗಳು ಇವುಗಳ ಪ್ರಾಥಮಿಕ ಕಲ್ಪನೆ.

(೪) ಹವಾಮಾನ, ಅದರಮೇಲೆ ಪರಿಣಾಮವನ್ನುಂಟುಮಾಡುವ ಮೂರು ಮುಖ್ಯ ಸಂಗತಿಗಳು—ಅಕ್ಷಾಂಶ, ಸಮುದ್ರ ಸಾಮೀಪ್ಯ ಮತ್ತು ಪರ್ವತಗಳ ಸ್ಥಾನ, ಗಾಳಿಗಳು ಹಾಗೂ ಸಮುದ್ರ ಪ್ರವಾಹಗಳು.

(ಬ) ಪ್ರಾಯೋಗಿಕ ಹಾಗೂ ನಿರೀಕ್ಷಣೆಯ ಕೆಲಸ—

(೧) ಗ್ರಹಗಳನ್ನು ಹಾಗೂ ಮುಖ್ಯ ನಕ್ಷತ್ರ ಪುಂಜಗಳನ್ನು ಗುರ್ತಿಸುವದು.

(೨) ಗ್ರಹಣಗಳ ನಿರೀಕ್ಷಣೆ.

(೩) ಜನಸಂಖ್ಯೆ, ಮುಖ್ಯ ಹುಟ್ಟುವಳಿಗಳು ಮುಂತಾದವುಗಳನ್ನು ನಿರೂಪಿಸುವ ಸುಲಭವಾದ ಸ್ತಂಭಾಲೇಖಗಳು.

(೪) ಹಿಂದುಸ್ತಾನದ ಹಾಗೂ ಜಗತ್ತಿನ ನಕಾಶಗಳನ್ನು ಓದುವದು ಮತ್ತು ಅವುಗಳ ಅರ್ಥ ವಿವರಣೆ ಮಾಡಿಕೊಳ್ಳುವದು.

(೫) ಸ್ಕೇಲಿಗನುಸರಿಸಿ ಹಿಂದುಸ್ತಾನದ ನಕಾಶವನ್ನು ತೆಗೆಯುವದು ಹಾಗೂ ಅದರಲ್ಲಿ ಮಹತ್ವದ ವಿವರಗಳನ್ನು ತುಂಬುವದು.

(೬) ಹವಾಮಾನದ ಮೇಲಿನ ಸುಲಭವಾದ ಅಭ್ಯಸನಗಳು.

(೭) ಸಮೋನ್ನತಾದರ್ಶಕ ರೇಖೆಗಳ ಸುಲಭವಾದ ನಕಾಶಗಳನ್ನು ಓದುವದು ಹಾಗೂ ಅಂತಹ ನಕಾಶಗಳನ್ನು ಶಿಕ್ಷಕನ ಮಾರ್ಗದರ್ಶಕತ್ವದಲ್ಲಿ ಸಾಂಘಿಕ ಕಾರ್ಯವಾಗಿ ತಯಾರಿಸುವದು.

(೮) ಒಂದು ಚಿಕ್ಕ ವಸ್ತುಸಂಗ್ರಹಾಲಯವನ್ನು ತೆರೆಯುವ ಉದ್ದೇಶವನ್ನಿಟ್ಟುಕೊಂಡು ಕಲೆಹಾಕುವ ಕೆಲಸವನ್ನು ಮುಂದುವರಿಸುವದು.

೬. ಪೌರನೀತಿ

೨ನೆಯ ಇಯತ್ತೆ (ಹೈಸ್ಕೂಲು)
೬ನೆಯ ಇಯತ್ತೆ (ಪ್ರಾಥಮಿಕ)—

(೧) ಕೆಳಗಿನವುಗಳ ಮುಖಾಂತರ ಪ್ರಚಲಿತ ಸಂಗತಿಗಳ ಅಭ್ಯಾಸ:—

(ಅ) ಸಾಮೂಹಿಕವಾಗಿ ವೃತ್ತಪತ್ರಗಳನ್ನು ಓದುವದು. ಮತ್ತು ಸುದ್ದಿಗಳನ್ನು ಚರ್ಚಿಸುವದು.

(ಬ) ಒಂದು ಪುಟದ ವೃತ್ತಪತ್ರವನ್ನು ಪ್ರಕಟಿಸುವದು.

(೨) (i) ಜಿಲ್ಲಾ ಲೋಕಲ್‌ಬೋರ್ಡುಗಳು ನಗರ ಸಭೆಗಳು ಮತ್ತು ಗ್ರಾಮ ಪಂಚಾಯತಿಗಳು ಹಾಗೂ ಅವುಗಳ ಕಾರ್ಯಗಳು.

(ii) ಜಿಲ್ಲಾಧಿಕಾರಿಗಳ ಕರ್ತವ್ಯಗಳು.

(೩) (i) ಸಮಾಜಸೇವೆಗಾಗಿ ಒಂದು ಕಾರ್ಯವಾಹಕ ಶಾಖೆಯನ್ನು ಸ್ಥಾಪಿಸುವದು.

(ii) ಸ್ಥಳೀಯ ಜನರ ಹಿತಕ್ಕಾಗಿ ಪುನರಂಜನೆಯ ಕಾರ್ಯಕ್ರಮವನ್ನು ಸಂಘಟಿಸುವದು.

(೪) ಮನೆ ಹಾಗೂ ಅಂಗಡಿಗಳಲ್ಲಿ ಆಹಾರವನ್ನು ಕಾಯ್ದಿಡುವದು. ಪ್ರಚಲಿತವಿರುವ ಸ್ಥಿತಿಗತಿಗಳನ್ನು ನಿರೀ-

ಸ್ಸಿಸುವದು, ಬರೆದಿಡುವದು, ಹಾಗೂ ಚರ್ಚಿಸುವದು. ಶಾಲೆಯ ಸುತ್ತುಮುತ್ತಲಿನ ಸ್ವಚ್ಛತೆ. ನಿರ್ದಿಷ್ಟ ಸ್ಥಳದ ಹೊರತಾಗಿ ಉಳಿದ ಸ್ಥಳಗಳಲ್ಲಿ ಬಾಲಕರು ಮೂತ್ರ-ವಿಸರ್ಜನೆ ಮುಂತಾದವುಗಳನ್ನು ಮಾಡದಂತೆ ಬಾಲಕರ ಒಂದು ಗುಂಪು ನೋಡಿಕೊಳ್ಳಬೇಕು. ಪಟ್ಟಣಗಳಲ್ಲಿ ಮೇಲಿನವುಗಳಿಗಾಗಿ ಏರ್ಪಡಿಸಿದ ಸೌಕರ್ಯಗಳ ಯೋಗ್ಯ ಉಪಯೋಗವಾಗುವದರ ಸಲುವಾಗಿ ಲಕ್ಷ್ಯ ಕೊಡಬೇಕು. ಅವು ಸುಸ್ಥಿತಿಯಲ್ಲಿರದಿದ್ದರೆ, ಮುಖ್ಯಾಧ್ಯಾಪಕರಿಗೆ ವರದಿ ಮಾಡಬೇಕು.

(ಜ) (i) ಸಾಕ್ಷರತೆಯ ಕೆಲಸ. ತನ್ನ ಸ್ವಂತ ಮನೆಯವರನ್ನು ಸಾಕ್ಷರರನ್ನಾಗಿ ಮಾಡುವದು; ಭಿತ್ತಿಪತ್ರಗಳನ್ನು ತಯಾರಿಸುವದು; ನೆರೆಹೊರೆಯಲ್ಲಿ ಸಾಕ್ಷರತೆಯ ಕಾರ್ಯವನ್ನೊಳಗೊಂಡು ಸಮಾಜ ಸೇವೆ ಮಾಡುತ್ತಿರುವ ಸಂಘ, ಸಂಸ್ಥೆಗಳಿಗೆ ಸಹಾಯ ಸಲ್ಲಿಸುವದಕ್ಕಾಗಿ ದೊಡ್ಡ ಬಾಲಕರನ್ನು ವಾರಕ್ಕೊಮ್ಮೆ ಕಳಿಸಿ ಕೊಡಬೇಕು.

(ii) ಜಾತ್ರೆ ಹಾಗೂ ಸಂತೆಯ ದಿನಗಳಲ್ಲಿ ಸಹಾಯ ಸಲ್ಲಿಸಲು ಸ್ವಯಂಸೇವಕರ ಪಥಕಗಳನ್ನು ಸಂಘಟಿಸುವದು.

(ಟ) ಹಿಂದಿನ ಇಯತ್ತೆಗಳಲ್ಲಿ ಮಾಡಿದ ಪ್ರಾಯೋಗಿಕ ಕಾರ್ಯವನ್ನು ಮುಂದುವರಿಸುವದು.

೩ನೆಯ ಇಯತ್ತೆ (ಹೈಸ್ಕೂಲ)—
೭ನೆಯ ಇಯತ್ತೆ (ಪ್ರಾಥಮಿಕ)

(೧) ಪ್ರಾಂತಿಕ ಹಾಗೂ ಕೇಂದ್ರ ಸರಕಾರಗಳ ಕಾರ್ಯಗಳು.

(೨) ಪ್ರಜಾಪ್ರಭುತ್ವದ ಅರ್ಥ ಮತ್ತು ನಾಗರಿಕನ ಹಕ್ಕು ಬಾಧ್ಯತೆ ಹಾಗೂ ಕರ್ತವ್ಯಗಳು.

(೩) ಹಿಂದಿನ ಇಯತ್ತೆಯಲ್ಲಿ ಮಾಡಿಸಿ ಕಾರ್ಯವನ್ನು ಮುಂದುವರಿಸುವದು.

(೪) ಸ್ವಚ್ಛತೆಯ ಬಗೆಗೆ ಲಕ್ಷ್ಯ.

(ಜ) ಶಿಕ್ಷಕನ ಮಾರ್ಗದರ್ಶಕತ್ವದಲ್ಲಿ ಸಹಕಾರಿ ಚಟುವಟಿಕೆಯಾಗಿ, ಶಾಲೆಯ ಅಥವಾ ವರ್ಗದ ಪುಸ್ತಕಾಲಯಗಳು, ಸಹಕಾರಿ ಅಂಗಡಿಗಳು, ವಸ್ತು ಸಂಗ್ರಹಾಲಯಗಳು ಇವುಗಳನ್ನು ವ್ಯವಸ್ಥಿತ ರೀತಿಯಿಂದ ಸಾಗಿಸಿಕೊಂಡು ಹೋಗುವದು.

೭. ಮೂಲೋದ್ಯೋಗ

೨ನೆಯ ಇಯತ್ತೆ (ಹೈಸ್ಕೂಲು)—
೬ನೆಯ ಇಯತ್ತೆ (ಪ್ರಾಥಮಿಕ)

ಪ್ರಾಯೋಗಿಕ:— ವಿದ್ಯಾರ್ಥಿಗಳು ಈ ಇಯತ್ತೆಯ ಪ್ರಾರಂಭದ ಮಟ್ಟದಲ್ಲಿ ಹತ್ತಿಯಿಂದ ಒಳ್ಳೆಯ ಶಕ್ತಿ ಹಾಗೂ ಸಮಾನತೆಗಳುಳ್ಳ ನೂಲನ್ನು ತೆಗೆಯಲು ಕಲಿತಿರುವರೆಂದು ಗ್ರಹಿಕೆ ಮಾಡಿಕೊಳ್ಳಲಾಗಿದೆ.

(೧) ತಕಲಿ ಹಾಗೂ ಚರಖಾಗಳ ಮೇಲೆ ೧೬ ರಿಂದ ೨೦ರ ವರೆಗಿನ ನಂಬರಿನ ನೂಲನ್ನು ತೆಗೆಯುವದು; ಪ್ರತಿದಿನ ಶಾಲೆಯಲ್ಲಿ ಅರ್ಧ ತಾಸಿನ ವರೆಗೆ ಸಾಮೂಹಿಕವಾಗಿ ನೂಲುವದು.

ಸೂಚನೆ:— ವಿದ್ಯಾರ್ಥಿಗಳು ತಮ್ಮ ತಮ್ಮ ಸ್ವಂತ ಬಟ್ಟೆಗಾಗಿ, ಸ್ವಾವಲಂಬಿಯೋಗಲು, ಶಾಲೆಯಲ್ಲಿ ಗೊತ್ತು ಪಡಿಸಲಾದ ವೇಳೆಯ ಹೊರತಾಗಿ ೫೦ ಲಡಿಗಳನ್ನು ತಯಾರಿಸಬೇಕು.

(೨) ನೇಯುವದಕ್ಕೆ ಸಂಬಂಧಿಸಿ ಕೆಳಗಿನವುಗಳನ್ನು ಸಾಧಿಸುವದು.

(ಅ) ಹಾಸಿದ ಎಳೆಗಳನ್ನು ಕೂಡಿಸುವದು (ಕೆಚ್ಚುವದು).

(ಬ) ನೂಲನ್ನು ತೋಡುವದು.

(ಕ) ಉರುಳೆಗಳ ಮೇಲೆ ಸುತ್ತುವದು.

(ಡ) ಹಾಸು ಹೊಯ್ಯುವದು.

(ಇ) ಗಂಜಿ ತೊಡೆಯುವದು.

(ಈ) ನೇಯುವದು:—

(ಅ) ಅಸನಗಳು ಮತ್ತು ಜಮಖಾನೆಗಳು. (ಅರಂಭಿಗರು ಉತ್ಪಾದನ ಮಾಡಿದ ಉರುಟು ನೂಲನ್ನು ಇದಕ್ಕಾಗಿ ಉಪಯೋಗಿಸತಕ್ಕದ್ದು).

(ಬ) ಸಣ್ಣ ಅಗಲಳತೆಯ ಜೋಡಿಳೆ ಖದ್ದರು.

(ಳ) ನವಾರ ಪಟ್ಟಿಯನ್ನು ನೇಯುವದಕ್ಕಾಗಿ ಮಗ್ಗವನ್ನು ಕೂಡಿಸುವದು.

(ಱ) ನೂಲುವದು, ಹಿಂಜುವದು ಮತ್ತು ನೇಯುವದು ಇವುಗಳಿಗಾಗಿ ಬಿದಿರಿನ ಸಣ್ಣ ಉಪಕರಣಗಳನ್ನು ತಯಾರಿಸುವದು.

(ಉದಾ: ಹಿಂಜುವ ಧನುಸ್ಯ, ಹಂಜಿಯ ಸಳಿ, ನೂಲುಸುತ್ತುವ ಲಪೇಟಾ ಅಥವಾ ಘಾಲಕಾ, ನೇಯುವದರಲ್ಲಿ ಉಪಯೋಗಿಸುವ ಚಕ್ಕೆಗಳು ಇತ್ಯಾದಿ).

ಪ್ರಗತಿಯ ಮಟ್ಟ:—

(೧) ೧೬ರಿಂದ ೨೦ ನಂಬರಿನ ನೂಲನ್ನು ಸಂಯುಕ್ತವಾಗಿ ನೂಲುವದು. ಒಂದು ವರ್ಷದಲ್ಲಿ ೬೪೦ ಜೋಡಿಳೆಯ ೫ ಲಡಿಗಳು, ಅಥವಾ ಕೇವಲ ತಯಾರಿ ಹಂಜಿಗಳನ್ನು ಉಪಯೋಗಿಸಿದರೆ, ೧೫ ಲಡಿಗಳು. ಒಂದೆಳೆಯ ನೂಲುವ ವೇಗ, ಒಂದು ತಾಸಿನಲ್ಲಿ ೬೦ ಸುತ್ತುಗಳು. ಚರಪಾದ ಮೇಲೆ ತಯಾರಿ ಹಂಜಿಗಳಿಂದ ನೂಲುವ ವೇಗ ಪ್ರತಿ ತಾಸಿಗೆ ೨೪೦ ಸುತ್ತುಗಳು.

(೨) ಅಸನಗಳನ್ನು ಮತ್ತು ಜಮಖಾನೆಗಳನ್ನು ನೇಯುವದು. ಒಂದು ವರ್ಷದಲ್ಲಿ ೪ ಘೂಟುಗಳು.

(೩) ಜೋಡಿಳೆಯ ಖದ್ದರನ್ನು ನೇಯುವದು. ಪ್ರತಿ ವರ್ಷದಲ್ಲಿ ೬ ಮಿತಿಗಳ "೩೦" ಅಗಲಳತೆಯ" ೧೦ ಘೂಟುಗಳನ್ನು ನೇಯುವದು. ನೇಯುವ ಸರಾಸರಿ ವೇಗ, ಪ್ರತಿ ತಾಸಿಗೆ ೨ ಘೂಟು.

ತಾತ್ವಿಕ ಶಿಕ್ಷಣ:—

(೧) ನೇಯುವದರಲ್ಲಿಯ ಅಳತೆಗಳು—ವಿಶಿ, ಹುಂಜ ಮತ್ತು ಕೂಡೀ ಮುಂತಾದವುಗಳು.

(೨) ಮಗ್ಗದ ಭಾಗಗಳ ಹೆಸರುಗಳು ಮತ್ತು ಅವುಗಳ ಉಪಯೋಗಗಳು.

(೩) ಸೂಕ್ಷ್ಮದರ್ಶಕ ಕಾಜಿನ ಮುಖಾಂತರ ಖದ್ದರಿನ ನೆಯ್ಗೆ-ಬಂಧವನ್ನು (ನೆಯ್ಗೆತನ) ಪರೀಕ್ಷಿಸುವದು.

(೪) ಖದ್ದರನ್ನು ಚೌರಸ ಯಾರ್ಡುಗಳಲ್ಲಿ ಅಳತೆ ಮಾಡುವದು.

(೫) ಗಂಜಿ ತೊಡೆಯುವದರ ಅವಶ್ಯಕತೆ.

(೬) ನೂಲನ್ನು ತೋಯಿಸಿಡುವದರ ಅವಶ್ಯಕತೆ.

(೭) ಗಂಜಿಯೆನ್ನು ತಯಾರಿಸುವ ವಿಧಾನ.

(೮) ಅರೆಯುವದು, ತುನಾಯಿ ಪದ್ಧತಿಯಿಂದ ಹಿಂಜುವದು, ನೂಲುವದು ಮತ್ತು ನೇಯುವದು ಇವುಗಳ ಮೇಲೆ ಹವಾಮಾನದ ಪರಿಣಾಮ.

(೯) ಪ್ರತಿಯೊಂದು ವ್ಯಕ್ತಿ, ಕುಟುಂಬ, ಸಮಾಜ ಮತ್ತು ಹಳ್ಳಿ ಇವುಗಳಿಗೆ ಪ್ರತಿವರ್ಷಕ್ಕೆ ಬೇಕಾಗುವ ಖಟ್ಟೆಯ ಪರಿಮಾಣ.

(೧೦) ನೂಲುವ ಗಾಲಿಯಲ್ಲಿ ಉಂಟಾಗಿರುವ ಸುಧಾರಣೆಗಳ ಇತಿಹಾಸ.

(೧೧) ಹತ್ತಿಯನ್ನು ಉತ್ಪಾದಿಸುವದೇಶವೆಂಬ ದೃಷ್ಟಿಯಿಂದ, ಜಗತ್ತಿನಲ್ಲಿ ಹಿಂದುಸ್ತಾನದ ಸ್ಥಾನ.

(೧೨) ಹಳ್ಳಿಯ ಜೀವನದಲ್ಲಿ ಗ್ರಾಮೋದ್ಯೋಗಗಳ ಸ್ಥಾನ.

(೧೩) ಕಳೆದ ಎರಡು ಶತಮಾನಗಳಲ್ಲಿ ಗ್ರಾಮೋದ್ಯೋಗಗಳ ಅವನತಿಯ ಇತಿಹಾಸ.

೩ನೆಯ ಇಯತ್ತೆ (ಹೈಸ್ಕೂಲು)—
೭ನೆಯ ಇಯತ್ತೆ (ಪ್ರಾಥಮಿಕ)

ಕ್ರಿಯೋಗಿಕ:— (೧) (ಅ) ಹಿಂದಿನ ಘೂಟುಗಳಲ್ಲಿ ಹಾಕಿಕೊಟ್ಟ ಪ್ರಮಾಣಕ್ಕೆ ಅನುಸರಿಸಿ, ಅರ್ಧ ತಾಸಿನವರೆಗೆ ಸಾಮೂಹಿಕವಾಗಿ ನೂಲುವದು.

(ಬ) ಬಟ್ಟೆಯ ಬಗೆಗೆ ಸ್ವಯಂಪೂರ್ಣತೆಗಾಗಿ, ಶಾಲೆಯ ಮೇಲ್ನೋಟದಲ್ಲಿ, ೫೦ ಲಡಿಗಳನ್ನು (೧೦-೧೨ ಯಾರ್ಡು ಉಳಿಗೆ ಸಾಕಾಗುವಷ್ಟು) ನೂಲುವದು.

(೨) ನೇಯುವದು:— ಜೋಡೆಳೆಯ ಹಾಗು ಒಂಟಿ ಳೆಯ ಖದ್ದರನ್ನು ನೇಯುವದು. ನೇಯುವದಕ್ಕಾಗಿ, ತೈಮಗ್ಗವನ್ನು ಅಥವಾ ಹಾರು-ಲಾಳಿಯ ಮಗ್ಗವನ್ನು ಉಪಯೋಗಿಸತಕ್ಕದ್ದು.

ನೇಯುವದರಲ್ಲಿ ಕೆಳಗಿನ ವಿಧಾನವನ್ನು ಸೇರಿಸಲಾಗು ವದು:—

(ಅ) ಹಾಸು ಮತ್ತು ಹೊಕ್ಕುಗಳಿಗಾಗಿ ನೂಲನ್ನು ಪರೀ ಕ್ಷಿಸುವದು ಮತ್ತು ಲಡಿಗಳನ್ನು ವಿಂಗಡಿಸುವದು.

(ಆ) ಹಾಸಿಗಾಗಿ ನೂಲನ್ನು ನೀರಿನಲ್ಲಿ ನೆನೆಯಿಡು ವದು ಮತ್ತು ಅದನ್ನು ಬಡಿಯುವದು.

(ಇ) ಹಾಸು ಹೊಯ್ಯುವದು ಮತ್ತು ನೂಲನ್ನು ಸರಿ ಪಡಿಸುವದು.

(ಈ) ಗಂಜಿ ತೊಡೆಯುವದು.

(ಉ) ಹಾಸಿನ ಎಳೆಗಳನ್ನು ಕೂಡಿಸುವದು (ಕೆಚ್ಚು ವದು).

(ಊ) ಮಗ್ಗದ ಮೇಲೆ ಹಾಸನ್ನು ಹಾಕುವದು ಮಗ್ಗ ಹೂಡುವದು).

(ಏ) ಖದ್ದರನ್ನು ತೊಳೆಯುವದು ಮತ್ತು ಮಡಿಕೆ ಹಾಕುವದು.

(೩) ಪ್ರಾಯೋಗಿಕ ಕೆಲಸದ ಲೆಕ್ಕ ಪತ್ರಗಳನ್ನು ಮತ್ತು ಅಲೇಖಗಳನ್ನು ಇಡುವದು.

ಪ್ರಗತಿಯ ಮಟ್ಟ:—

(೧) ಸಂಯುಕ್ತ ನೂಲುವದು (ನಂಬರ ೨೦ ರಿಂದ ೨೪) ೬೪೦ ಜೋಡೆಳೆ ಸುತ್ತುಗಳ ೬ ಲಡಿಗಳು. ಜೋಡೆಳೆ ಕುರಿದಾರದ ನೂಲುವ ವೇಗ, ಪ್ರತಿ ತಾಸಿಗೆ ೧೦೦ ಸುತ್ತು ಗಳು. ತಯಾರಿ ಹಂಜಿಗಳಿಂದ ನೂಲುವ ವೇಗ, ಪ್ರತಿ ತಾಸಿಗೆ ೨೫೦ ಸುತ್ತುಗಳು.

(೨) ಖದ್ದರನ್ನು ನೇಯುವದು. ಜೋಡೆಳೆ ನೂಲಿ ೬ ವಿಶಿಗಳು × ೩"—೪ ಯಾರ್ಡುಗಳು. ನೇಯುವ ವೇಗ ಪ್ರತಿ ತಾಸಿಗೆ ೧'. ಒಂಟೆಳೆಯ ಖದ್ದರ—೯ ವಿಸಿಗಳು × ೩"—೪ ಯಾರ್ಡುಗಳು. ನೇಯುವ ವೇಗ ಪ್ರತಿ ತಾಸಿಗೆ ೧'.

ತಾತ್ವಿಕ ಶಿಕ್ಷಣ:—

(೧) ಅವಶ್ಯಕವಾದ ನೂಲಿನ ಪರಿಮಾಣವನ್ನು ವಿ ಮತ್ತು ಉದ್ದಳತೆಗಳಿಂದ ಗೊತ್ತುಪಡಿಸುವದು.

(೨) ವಿಶಿಯನ್ನು ಮತ್ತು ಖದ್ದರಿನ ಬೆಲೆಯನ್ನು ನೆಯ್ಗೆಬಂಧದಿಂದ ಗೊತ್ತುಪಡಿಸುವದು.

(೩) ಬೇರೆ ಬೇರೆ ಪ್ರಕಾರಗಳ ನೆಯ್ಗೆ-ಬಂಧಗ ಜ್ಞಾನ.

(೪) ಲಡಿಗಳಿಗೆ ಗಂಜಿ ತೊಡೆಯುವದು ಮತ್ತು ಕು ಚಗಳಿಂದ ಗಂಜಿ ತೊಡೆಯುವದು, ಇವುಗಳಲ್ಲಿಯ ವಿಧಾ ಗಳ ಜ್ಞಾನ.

(೫) ಬಟ್ಟೆಯ ಮೇಲೆ ಗಂಜಿ ತೊಡೆಯುವದರ ಪ ಣಾಮ, ಬೇರೆ ಬೇರೆ ಪದಾರ್ಥಗಳ ಗಂಜಿ ಮತ್ತು ಅವುಗ ಪರಿಣಾಮ.

(೬) ಮಗ್ಗದ ಭಾಗಗಳು, ಅವುಗಳ ಅಳತೆಗಳ ಮತ್ತು ಉಪಯೋಗಗಳು.

(೭) ಘರ್ಷಣೆಯನ್ನು ಕಡಿಮೆ ಮಾಡಲು ಉಪಯೋ ಗಿಸುವ ಸಾಧನಗಳು.

(೮) ನೂಲುವ, ಹಿಂಜುವ ಮತ್ತು ನೇಯುವ ಹಳೆಯ ಹಾಗು ಹೊಸಕಾಲದ ಉಪಕರಣಗಳ ಇತಿಹಾಸ

(೯) ಖಾದಿಯ ಪುನರುಜ್ಜೀವನಕ್ಕಾಗಿ ಆಂದೋಲನ.

(೧೦) ಹಳ್ಳಿಗಳಲ್ಲಿ ಮತ್ತು ಸಾಮಾನ್ಯವಾಗಿ ಹಿಂದ ಸ್ಥಾನದಲ್ಲಿ ಬಟ್ಟೆಯ ಪೂರೈಕೆಯ ಸಮಸ್ಯೆ.

(೨) ಒಕ್ಕಲುತನ

೨ನೆಯ ಇಯತ್ತೆ (ಹೈಸ್ಕೂಲು)—೭ನೆಯ ಇಯತ್ತೆ (ಪ್ರಾಥಮಿಕ)

ತಾತ್ವಿಕ

ಮಣ್ಣು ಹಾಗೂ ಮಣ್ಣಿನ ವ್ಯವಸ್ಥೆ. ಮಣ್ಣಿನಲ್ಲಿಯ ಪ್ರಾಣಿಜನ್ಯ ಪದಾರ್ಥ; ಅವರ ಉತ್ಪತ್ತಿ ಹಾಗೂ ಉಪಯುಕ್ತತೆ ಮತ್ತು ಉಸುಕು ಮಣ್ಣು ಹಾಗೂ ಜಿಗುಟು ಮಣ್ಣುಗಳನ್ನು ಉತ್ತಮಗೊಳಿಸುವವರಲ್ಲಿ ಅದರ ಮಹತ್ವ

ಬೀಜಗಳ ಪ್ರಸಾರ. ಬಿತ್ತುವದನ್ನು ಹೊರತುಪಡಿಸಿ ಬೇರೆ ಪದ್ಧತಿಗಳಿಂದ ಪ್ರಸಾರ— ಕೊಯ್ಯುವದು, ಕಸಿ ಮಾಡುವದು, ರೆಂಬೆ ನೆಡುವದು; ಪುಷ್ಪಧಾರಣ ಮಾಡುವ ಹಾಗೂ ಪುಷ್ಪಧಾರಣ ಮಾಡದ ವನಸ್ಪತಿಗಳು.

ಕಾಲಗೈ (ಬೆಳೆಗಳ ಪರಿವರ್ತನೆ) ಮಾಡುವದು, ಮಿಶ್ರ ಪೈರುಗಳನ್ನು ಬೆಳೆಯುವದು, ಪಡ ಬಿಡುವದು, ಯೋಗ್ಯ ಅಂತರ ಬಿಟ್ಟು ಬಿತ್ತುವದು, ಸುಧಾರಿಸಿದ ಪದ್ಧತಿಯಿಂದ ತಯ್ದ ಬೀಜಗಳನ್ನು ಬಿತ್ತುವದು, ಕಸಿ ಮಾಡುವದು, ತಿಂಗಲ ಮಾಡುವದು, ಮುಂತಾದವುಗಳನ್ನೊಳಗೊಂಡ ಸಾಮಾನ್ಯ ತತ್ವಗಳ ಅಭ್ಯಾಸ.

ಉಳುವದು, ಅದರ ಉದ್ದೇಶ, ಮಣ್ಣು, ಹವಾಮಾನದ ಪರಿಸ್ಥಿತಿಗಳು ಹಾಗೂ ಬೆಳೆಯ ಅವಶ್ಯಕತೆಗಳು ಇವುಗಳ ಮೇರೆಗೆ ಉಳುವದರಲ್ಲಿಯ ಬೇರೆ ಬೇರೆ ಪ್ರಕಾರಗಳು.

ಪ್ರಾಯೋಗಿಕ

ಒಣ ಬೇಸಾಯ ಪದ್ಧತಿಯಿಂದಾಗಲಿ ಇಲ್ಲವೆ ನೀರಾವರಿಯಿಂದಾಗಲಿ, ವಿದ್ಯಾರ್ಥಿಗಳು ಎರಡು ಬೆಳೆಗಳನ್ನು ಅವು ಪರಿಪಕ್ವವಾಗುವ ವರೆಗೆ ಯಶಸ್ವಿಯಾಗಿ ಬೆಳೆಯಬೇಕು. (೧ನೆಯ ಇಯತ್ತೆಯಲ್ಲಿ ಬೆಳೆಯಲಾಗುವ ಬೆಳೆಗಳನ್ನು ಬಿಡಬೇಕು. ಒಂದು ಬೆಳೆಯನ್ನು ಆರಿಸಬೇಕು).

ಇದನ್ನು ವಿದ್ಯಾರ್ಥಿಗಳು ಸಾಧಾರಣವಾಗಿ ನಾಲ್ವರು ಕೂಡಿ ಒಂದು ಗುಂಪಿನಂತೆ ಮಾಡಬೇಕು.

ಸಾದಾ ಕಸಿ ಮಾಡುವದರಲ್ಲಿ ಹಾಗೂ ರೆಂಬೆ ನೆಡುವುದರಲ್ಲಿ ರೂಢಿ.

ತಂಡಗಳ ಪದ್ಧತಿಯಿಂದ ಕುಣಿ ಗೊಬ್ಬರ ತಯಾರಿಸುವದು (ಇಂದೂರ ಪದ್ಧತಿ).

೩ನೆಯ ಇಯತ್ತೆ (ಹೈಸ್ಕೂಲು)—೨ನೆಯ ಇಯತ್ತೆ (ಪ್ರಾಥಮಿಕ)

ತಾತ್ವಿಕ

ಮಣ್ಣು ಹಾಗೂ ಮಣ್ಣಿನ ವ್ಯವಸ್ಥೆ. ಒಡ್ಡು, ಸಮ ಮಾತಳ, ಕಾಲುವೆ ಮತ್ತು ಗೊಬ್ಬರ ಇವುಗಳಿಂದ ಮಣ್ಣನ್ನು ಉತ್ತಮಗೊಳಿಸುವದು; ಬೆಳೆಯ ಉತ್ಪತ್ತಿಯಲ್ಲಿ ಅವುಗಳ ಮಹತ್ವ.

ಕರಿಕೆಗಳ ಜ್ಞಾನ. ಅದರ ಪ್ರಸಾರ ಹಾಗೂ ನಿಯಂತ್ರಣ.

ವನಸ್ಪತಿಗಳ ರೋಗಗಳು ಹಾಗೂ ಅವುಗಳಯ ನಿಂತ್ರಣ.

ಬೆಳೆಗಳ ವರ್ಗೀಕರಣ—ಒಣ ಬೇಸಾಯದ ಮತ್ತು ನೀರಾವರಿಯ ಬೆಳೆಗಳು; ಆಹಾರಕ್ಕಾಗಿ ಉಪಯೋಗ ಬೀಳುವ ಮತ್ತು ಬೀಳದ ಬೆಳೆಗಳು.

ಜಿಲ್ಲೆಯಲ್ಲಿಯ ನೀರಾವರಿಯ ಉತ್ಪತ್ತಿ ಹಾಗೂ ವಿಧಾನಗಳ ಅಭ್ಯಾಸ. ಜಿಲ್ಲೆಯಲ್ಲಿಯ ಬೆಳೆಗಳ ಉತ್ಪತ್ತಿ. ಅಂಕಿ ಸಂಖ್ಯೆಗಳು. ಒಕ್ಕಲುತನಕ್ಕಾಗಿ ಸುಧಾರಿಸಿದ ಸಲಕರಣೆಗಳು. ಸಲಕರಣೆಗಳ ಬಗೆಗೆ ಜಾಗರೂಕತೆ.

ಪ್ರಾಯೋಗಿಕ

೨ನೆಯ ಇಯತ್ತೆಯಲ್ಲಿದ್ದಂತೆಯೆ; ಸಾಧ್ಯವಾದರೆ ವೈಯಕ್ತಿಕವಾಗಿ ಮಾಡಬೇಕು.

ಹೊಲದ ಸುಲಭ ಲೆಕ್ಕ ಪತ್ರಗಳನ್ನಿಡುವದು. ಹೊಲದ ಕೆಲಸದಲ್ಲಿ ಉಪಯೋಗಿಸಲಾಗುವ ಸಾಧನ-ಸಾಮಗ್ರಿಗಳನ್ನು ಹೊಂದಿಕೆಗೊಳಿಸುವದು ಹಾಗೂ ಉಪಯೋಗಿಸುವದು.

(೩) ಹೊಲಿಗೆ

೩ನೆಯ ಇಯತ್ತೆ (ಹೈಸ್ಕೂಲು)— ೭ನೆಯ ಇಯತ್ತೆ (ಪ್ರಾಥಮಿಕ)

ಯಂತ್ರದ ಕೆಲಸ:— ಯಂತ್ರದ ಉಪಯೋಗ ಹಾಗು ಅದರ ಬಗೆಗೆ ಜಾಗರೂಕತೆ. ಈಗಿನಿಂದ ಪ್ರಾರಂಭಿಸಿ ಇನ್ನು ಮುಂದೆ, ಬಟ್ಟೆಗಳಿಗೆ ಟಾಕೀ ಹಾಕುವದು ಮತ್ತು ಅವುಗಳನ್ನು ಪೂರ್ಣಗೊಳಿಸುವದು, ಕಾಜೂ-ತೂತುಗಳನ್ನು ನೂಡುವದು ಇವಲ್ಲದೆ, ಕೆಲಸದ ಬಹುಭಾಗವು ಯಂತ್ರದ ನೂಲಕ ಮಾಡಲ್ಪಡುವದು.

ಕತ್ತರಿಸುವದು ಮತ್ತು ನಮೂನೆಗಳನ್ನು ಮಾಡುವದು ಹಾಗೂ ಅಳತೆಗೆ ಸರಿಯಾಗಿ ಕೆಳಗಿನ ಬಟ್ಟೆಗಳನ್ನು ತಯಾರಿಸುವದು.

ಸದರಾ (ಅಂಗಿ).

ಲಂಡ ಜೊಣ್ಣಗಳು.

(ಉದ್ದ) ಇಜಾರು (ಪಾಯಜಾಮಾ).

ಫೈರನು.

ಲಂಗ (ಪರಕಾರ).

ಸರಿಪಡಿಸುವದು:— ತೇಪೆ ಹಚ್ಚುವದು ಮತ್ತು ಸುಲಭ ರಫ್ಪು ಹೊಲಿಗೆ ಹಾಕುವದು.

೩ನೆಯ ಇಯತ್ತೆ (ಹೈಸ್ಕೂಲು)— ೭ನೆಯ ಇಯತ್ತೆ (ಪ್ರಾಥಮಿಕ)

ಹೊಲಿಯುವ ಯಂತ್ರಗಳು. ೨,

ಇಸ್ತರಿ ಪೆಟ್ಟಿಗೆ. ೨,

ಅರಿವೆ ಕತ್ತರಿಸುವ ಕತ್ತರಿಗಳು. ೮,

ಯಂತ್ರದ ಕೆಲಸ:— ಯಂತ್ರದಲ್ಲಿ ಎಲ್ಲ ಬೇರೆ ಬೇರೆ ಭಾಗಗಳನ್ನು ಸರಿಪಡಿಸಿಕೊಳ್ಳುವದನ್ನು ತಿಳಿದುಕೊಳ್ಳುವದು. ಯಂತ್ರವನ್ನು ಧಾರಾಳವಾಗಿ ಉಪಯೋಗಿಸುವದು.

ಅಳತೆಗೆ ಸರಯಾಗಿ ಕೆಳಗಿನ ಬಟ್ಟೆಗಳ ನಮೂನೆಗಳನ್ನು ಮಾಡುವದು ಮತ್ತು ಅವುಗಳನ್ನು ಕತ್ತರಿಸುವದು.

ಕೊರಳಪಟ್ಟಿಯಿಲ್ಲದ ಶರ್ಟು.

ಕೊರಳಪಟ್ಟಿ.

ಇಜಾರು (ಪರಾಯಿ).

ಬ್ಲೌಜು.

ಬುಶ್-ಕೋಟು.

ಸರಿಪಡಿಸುವದು:— ಬಟ್ಟೆಗಳಿಗೆ ತೇಪೆ ಹಚ್ಚುವ ಮತ್ತು ಅವುಗಳನ್ನು ಸರಿಪಡಿಸುವ ಎಲ್ಲ ಪ್ರಕಾರಗಳು ಮತ್ತು ಬಟ್ಟೆಗಳನ್ನು ಲಂಡ, ಉದ್ದ ಅಥವಾ ಅಗಲ ಮಾಡುವದು.

ಸಲಕರಣೆ

ದೊಡ್ಡ ಮೇಜಿನ ಅವಶ್ಯಕತೆ ಇಲ್ಲ. ಹೆಣ್ಣುಮಕ್ಕಳ ಬಹುಕರ ಎಲ್ಲ ವರ್ಗಗಳಲ್ಲಿ, ಕತ್ತರಿಸುದವನ್ನು ನೆಲದ ಮೇಲೆ ಮಾಡಲಾಗುತ್ತದೆ. ಒಂದು ಮೇಜನ್ನು ದೊರಕಿಸಲು ಸಾಧ್ಯವಿದ್ದರೆ, ಅಷ್ಟುಮಟ್ಟಿಗೆ ಹೆಚ್ಚು ಒಳ್ಳೆಯದು. ಅಥವಾ ಊರಿಕಟ್ಟಿನ (ಕಾಲಟ್ಟಿದ) ಒಂದು ದೊಡ್ಡ, ಕಟ್ಟಿಗೆಯ ಹಲಗೆಯನ್ನು ಕೂಡ ಉಪಯೋಗಿಸಬಹುದು. (೫೧' × ೩೧').

ಸುವ್ಯವಸ್ಥೆಯಿದ್ದರೆ, ಒಂದರಿಂದಲೆ ಸಹ ಕೆಲಸ ಮಾಡಲು ಸಾಧ್ಯವಾಗಲೇಬೇಕಿದ್ದರೂ ಕೂಡ;

ಉತ್ತಮ ಕೆಲಸದ ಸಲುವಾಗಿ ಇವು ಅತ್ಯವಶ್ಯವಾಗಿ ಬೇಕು.

ಎರಡು ಭಿನ್ನ ಅಳತೆಯವು.

ಸಣ್ಣ ಹದನಾದ ಕತ್ತರಿಗಳು ೪,

ಸೂಜಿಗಳು. ಉತ್ತಮ ತರಹದ, ಬೇರೆ ಬೇರೆ ಅಳತೆಯ ಆರು ಪೊಟ್ಟಣಗಳು.

ಅಳತೆ ತೆಗೆದುಕೊಳ್ಳುವ ಟೇಪು, ಅಳತೆ ತೆಗೆದುಕೊಳ್ಳುವ ಇತರ ಸಾಧನಗಳು. ಒಂದು ಕಟ್ಟು (set).

---

(೪) ಸೂಜಿಗೆಲಸ ಹಾಗೂ ಕಸೂತಿ

೨ನೆಯ ಇಯತ್ತೆ (ಹೈಸ್ಕೂಲು)—
೬ನೆಯ ಇಯತ್ತೆ (ಪ್ರಾಥಮಿಕ)

ಹೊಲಿಗೆಗಳು:— ಎಲ್ಲ ಸಾದಾ ಹೊಲಿಗೆಗಳು ಗೊತ್ತಿರಬೇಕು ಮತ್ತು ಬಟ್ಟೆಗಳನ್ನು ತಯಾರಿಸುವಲ್ಲಿ ಅವುಗಳನ್ನು ಉಪಯೋಗಿಸಬೇಕು. ಗುಂಡಿ-ಮನೆಗಳ ಬಗೆಗೆ, ವಿಶೇಷವಾಗಿ ಅವುಗಳ ಸ್ಥಾನ ಹಾಗು ಅಳತೆ-ಆಕಾರಗಳ ಬಗೆಗೆ, ವಿಶೇಷ ಲಕ್ಷ್ಯ ಕೊಡಬೇಕು.

ಯಂತ್ರದ ಕೆಲಸ:— ವಿದ್ಯಾರ್ಥಿಗಳಿಗೆ ಸುಲಭ ಯಂತ್ರದ ಕೆಲಸವನ್ನು ಮತ್ತು ಹೊಟ್ಟೆಹೊದಲು ಕೇವಲ ಉದ್ದವಾದ, ಸರಳ, ಕೂಡು-ಹೊಲಿಗೆಗಳಿಗಾಗಿ ಮಾತ್ರ ಯಂತ್ರವನ್ನು ಉಪಯೋಗಿಸಲು ಕಲಿಸಬೇಕು. ವಿದ್ಯಾರ್ಥಿನಿಯರು, ಕೈ ಹೊಲಿಗೆಯಲ್ಲಿ ಒಪ್ಪ ಕೌಶಲ್ಯವನ್ನು ಪಡೆದರೆಂದರೆ, ಈ ಕೂಡು-ಹೊಲಿಗೆಗೆ ಕೈಕೆಲಸದಲ್ಲಿ ವೇಳೆಯನ್ನು ವೆಚ್ಚ ಮಾಡಕೂಡದು.

ಕತ್ತರಿಸುವದು:— ಪ್ರತಿಯೊಬ್ಬ ವಿದ್ಯಾರ್ಥಿನಿಯು ಕೆಳಗಿನವುಗಳ ನಮೂನೆಗಳನ್ನು ಕತ್ತರಿಸಬೇಕು.

(ಅ) ಮೊಣಕಾಲು ವರೆಗಿನ ಚೊಣ್ಣ.

(ಬ) ಅಂಗಿ.

(ಕ) ಉದ್ದ ಚೊಣ್ಣಗಳು (ಪಾಯಜಾಮಾಗಳು).

(ಡ) ಬ್ಲೌಜು.

(ಇ) ಝುಗಾ.

ಇವುಗಳ ಬೇರೆ ಬೇರೆ ಆಕಾರಗಳ ನಮೂನೆಗಳನ್ನು ಕತ್ತರಿಸುವದರಲ್ಲಿ ರೂಢಿಯನ್ನು ಕೊಡಬೇಕು. ವಿದ್ಯಾರ್ಥಿನಿಯರಿಗೆ ಒಂದು ತಯಾರಿ ನಮೂನೆಯನ್ನು, ಕೊಟ್ಟ ಅಳತೆ ಆಕಾರಗಳಿಗೆ ಹೇಗೆ ಸರಿಪಡಿಸಿಕೊಳ್ಳಬೇಕು ಎಂಬುದನ್ನು ಕಲಿಸಬೇಕು.

ಬಟ್ಟೆಗಳು:— ಕೆಳಗಿನ ಬಟ್ಟೆಗಳನ್ನು ತಯಾರಿಸುವದು ಮತ್ತು ಅವುಗಳನ್ನು ಸರಿಯಾಗಿ ಹಚ್ಚಿದ ಪಟ್ಟಿಗಳು, ಗುಂಡಿಗಳು ಮೊದಲಾದವುಗಳಿಂದ ಪೂರ್ಣಗೊಳಿಸಬೇಕು.

(ಅ) ಮೊಣಕಾಲು ವರೆಗಿನ ಚೊಣ್ಣಗಳು.

(ಬ) ಪೆಟ್ಟಿಕೋಟು (Petti-coat) ಅಥವಾ ಪರಕಾರ.

(ಕ) ಬ್ಲೌಜುಗಳು:— ಸ್ಥಳಳ ಪರಿಸ್ಥಿತಿಯ ಮೇರೆಗೆ ಬೇರೆ ಬೇರೆ ಆಕಾರದ ತೋಳುಗಳುಳ್ಳಂಥವು.

(ಡ) ಉದ್ದ ಚೊಣ್ಣಗಳು (ಪಾಯಜಾಮಾಗಳು)

(ಇ) ಬಾಲಕನ ಶರ್ಟು ಅಥವಾ ಪೈರನು.

ಕಸೂತಿ:— ಹಿಂದೆ ಹೇಳಿದ ಹೊಲಿಗೆಗಳನ್ನು ಮತ್ತು ಇತರ ಹೊಲಿಗೆಗಳನ್ನು ಉಪಯೋಗಿಸಿ, ಹೆಚ್ಚು ಸೂಕ್ಷ್ಮ ಮತ್ತು ಸೊಗಸಾದ ಕಸೂತಿ. ಅಜಮಾಸು ಇಪ್ಪತ್ತು ಹೊಲಿಗೆಗಳನ್ನು ತಿಳಿದುಕೊಳ್ಳಬೇಕು ಮತ್ತು ಬಟ್ಟೆಗಳ ಅಥವಾ ಮನೆತನದ ಇತರ ವಸ್ತುಗಳ ಮೇಲೆ ಯೋಗ್ಯ ಸ್ಥಳಗಳಲ್ಲಿ ಉಪಯೋಗಿಸಬೇಕು.

ದುರಸ್ತಿ ಮಾಡುವದು ಮತ್ತು ರಫ್ಫು ಹೊಲಿಗೆ:— ಉಪಯೋಗಿಸುವ ಬಟ್ಟೆಗಳನ್ನು ಎಲ್ಲ ಪ್ರಕಾರವಾಗಿ ದುರಸ್ತಿ

ಮಾಡುವದು ಮತ್ತು ಅವುಗಳಿಗೆ ತೀವೆ ಹಚ್ಚುವದು. ಇಡಿಯ ವರ್ಷ ರೂಢಿ ಕೊಡಬೇಕು.

ಎರಡು ಸೂಜಿಯ ಹೆಣಿಕೆಯ ಕೆಲಸ ಹಾಗೂ ಕೊಕ್ಕೆ ಸೂಜಿಯ ಕೆಲಸ (Crochet):— ಸಾದಾ ಬಟ್ಟೆಗಳು. ವಿದ್ಯಾರ್ಥಿನಿಯರು ಬರೆದಿಟ್ಟ ಸೂಚನೆಗಳನ್ನು ಅನುಸರಿಸಲು ಸಮರ್ಥರಾಗಬೇಕು ಮತ್ತು ಸಾಲ್ಕು ಸೂಜಿಗಳ ಮೇಲೆ ಹೆಣಿಕೆ ಹಾಕಬೇಕು. ಚಿಕ್ಕ ಮಕ್ಕಳಿಗೆ ತಕ್ಕುದಾದ ಎಲ್ಲ ಪ್ರಕಾರದ ಬಟ್ಟೆಗಳು. ಬಾಲಕರಿಗಾಗಿ ಅಥವಾ ಗಂಡು ಸರಿಗಾಗಿ ಗುಳ್ಳನೆದು ಉಣ್ಣೆಯ ಜುಬ್ಬ (Pull-over) ಮತ್ತು ಕಾಲುಚೀಲಗಳು.

೩ನೆಯ ಇಯತ್ತೆ (ಮೈಸ್ಕೂಲ)—
೭ ನೆಯ ಇಯತ್ತೆ (ಪ್ರಾಥಮಿಕ)

ಹೊಲಿಗೆಗಳು:— ಈ ವರ್ಗಕ್ಕೆ ಬರುವ ಸಮಯಕ್ಕೆ ವಿದ್ಯಾರ್ಥಿನಿಯರು ಎಲ್ಲ ಸಾದಾ ಹೊಲಿಗೆಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಲು ಸಮರ್ಥರಾಗಿರಬೇಕು.

ಯಂತ್ರದ ಕೆಲಸ:— ವಿದ್ಯಾರ್ಥಿನಿಯರು ಹೊಲಿಗೆ ಯಂತ್ರದ ಉಪಯೋಗದ ಬಗೆಗೆ ಪರಿಚಿತರಿರಬೇಕು ಮತ್ತು ಅದಕ್ಕೆ ಎಣ್ಣೆ ಹಾಕಲು ಹಾಗು ಅದನ್ನು ಸ್ವಚ್ಛ ಮಾಡಲು ಸಮರ್ಥರಿರಬೇಕು. ಈಗ ಬಹುತರ ಎಲ್ಲ ಬಟ್ಟೆಗಳನ್ನು ಟಾಕೇ ಹಾಕಿದ ನಂತರ ಯಂತ್ರದ ಮೂಲಕ ತಯಾರಿಸಲಾಗುವದು. ಟಾಕೇ ಹಾಕದೆ ಯಂತ್ರದ ಕೆಲಸವನ್ನು ಮಾಡಕೂಡದು.

ಕತ್ತರಿಸುವದು:— ಎಲ್ಲ ಚಿಕ್ಕಮಕ್ಕಳ ಹಾಗು ಹೆಂಗಸರ ಬಟ್ಟೆಗಳ ನಮೂನೆಗಳನ್ನು ಅಳತೆಗೆ ಸರಿಯಾಗಿ ಕತ್ತರಿಸುವದು.

(ಅ) ಮೊಣಕಾಲು ವರೆಗಿನ ಚೊಣ್ಣಗಳು.

(ಬ) ಅಂಗಿಗಳು.

(ಕ) ಝಗಾಗಳು.

(ಡ) ಬ್ಲೌಜುಗಳು.

(ಇ) ಉದ್ದ ಚೊಣ್ಣಗಳು (ಪಾಯಜಾಮಾಗಳು).

(ಫ) ಕುಪ್ಪಸಗಳು (ಒತ್ತು ಅಳತೆಯ ಒಳ ಕುಪ್ಪಸ), ಮತ್ತು ಗಂಡಸರಿಗಾಗಿ ಹಾಗು ಬಾಲಕರಿಗಾಗಿ ಕೆಳಗಿನ ಬಟ್ಟೆಗಳು:

(೧) ಶರ್ಟುಗಳು (೨) ಬಾಡಿ (೩) ಲಂಡ ಚೊಣ್ಣಗಳು

ಬಟ್ಟೆಗಳು:— ಮೇಲಿನ ಬಟ್ಟೆಗಳನ್ನು ತಯಾರಿಸಿ ಪೂರ್ಣಗೊಳಿಸುವದು.

ಕಸೂತಿ:— ಎಲ್ಲ ಪ್ರಕಾರದ ಕಸೂತಿ. ಒಂದು ಚಿತ್ರದಿಂದ ಅಥವಾ ನಮೂನೆಯಿಂದ ಹೊಸ ಪ್ರಕಾರಗಳನ್ನು ನಕಲು ಮಾಡುವ ಶಕ್ತಿಯನ್ನು ಪ್ರೋತ್ಸಾಹಿಸುವದು.

'ದುರಸ್ತಿ' ಮಾಡುವದು ಮತ್ತು ರಪ್ಪ ಹೊಲಿಗೆ ಹಾಕುವದು:— ಈಗಾಗಲೇ ಕಲಿಸಿದ 'ದುರಸ್ತಿ' ಮಾಡುವದು ಹಾಗು ರಪ್ಪ ಹೊಲಿಗೆ ಹಾಕುವದು, ಇವುಗಳ ಜೊತೆಗೆ ಹೆಚ್ಚು ಸಣ್ಣ ಅಥವಾ ದೊಡ್ಡ ಅಳತೆ-ಆಕಾರಗಳಿಗೆ ಹೊಂದಿಕೆಯಾಗುವಂತೆ ಹೊಸ ಬಟ್ಟೆಗಳನ್ನು ತಯಾರಿಸುವದನ್ನು ಕಲಿಸಬೇಕು.

ಎರಡು ಸೂಜಿಯ ಹೆಣಿಕೆಯ ಕೆಲಸ ಮತ್ತು ಕೊಕ್ಕೆ ಸೂಜಿಯ ಕೆಲಸ:— ಬಹಳ ವಿವರವಾಗಿ ಪರ್ಯಾಲೋಚಿಸಿ ಮಾಡಿದ ನಮೂನೆಗಳನ್ನೊಳಗೊಂಡ ಎಲ್ಲ ಪ್ರಕಾರದ ಬಟ್ಟೆಗಳು ಮತ್ತು ಹೆಣಿಕೆ ಪಟ್ಟಿಗಳು.

ಸಲಕರಣೆ

ದೊಡ್ಡ ಮೇಜಿನ ಅವಶ್ಯಕತೆಯಿಲ್ಲ. ಹೆಣ್ಣುಮಕ್ಕಳ ಬಹುತೇಕ ವರ್ಗಗಳಲ್ಲಿ ಕತ್ತರಿಸುವದನ್ನು ನೆಲದ ಮೇಲೆ ಮಾಡಲಾಗುತ್ತಿದೆ. ಒಂದು ಮೇಜನ್ನು ದೊರಕಿಸಲು ಸಾಧ್ಯವಿದ್ದರೆ, ಅಷ್ಟು ಮಟ್ಟಿಗೆ ಹೆಚ್ಚು ಒಳ್ಳೆಯದು. ಗಾತ್ರ ಅಜಮಾಸು ೫' × ೩'

೧. ಕತ್ತರಿಸುವದಕ್ಕಾಗಿ ಕತ್ತರಿಗಳು.

೬ ಎರಡು ಭಿನ್ನ ಅಳತೆಯವು. ಇವು ಒಳ್ಳೆಯ ಸತ್ವಯುತವಾಗಿರಬೇಕು.

೨. ಹದನಾದ ಸಣ್ಣ ಕತ್ತರಿಗಳು. ೩.

೩. ಇಸ್ತ್ರೀ ಪೆಟ್ಟಿಗೆ. ೧.

೪. ಸೂಜಿಗಳು

೫. ಹೊಲಿಯುವ ಯಂತ್ರ. ೧.

೬ ಪೊಟ್ಟಣಗಳು—ಬೇರೆ ಬೇರೆ ಅಳತೆಯವು.

——[:]——

(೫) ಕಟ್ಟಿಗೆಯ ಕೆಲಸ

೨ನೆಯ ಇಯತ್ತೆ (ಹೈಸ್ಕೂಲು)—೬ನೆಯ ಇಯತ್ತೆ (ಪ್ರಾಥಮಿಕ)

ತಾತ್ವಿಕ

(೧) ಒಡಿಗತನವ ಕೆಲಸ, ಕಟ್ಟಡದ ಕೆಲಸ ಮುಂತಾ ನವುಗಳಿಗೆ ಉಪಯೋಗಿಸುವ ಮರಗಳ (Timber) ಅಭ್ಯಾಸ—

ಬಿರುಗು ಕಟ್ಟಿಗೆ ಮತ್ತು ಮೃದುವಾದ ಕಟ್ಟಿಗೆ.

ಹಿಂಜುಸ್ತಾನ ಹಾಗೂ ನೆರೆಯ ದೇಶಗಳ, ವ್ಯಾಪಾರೀ ದೃಷ್ಟಿಯಿಂದ ಮುಖ್ಯವಾದ ಮರಗಳು. ಬೇರೆ ಬೇರೆ ತರದ ಕಟ್ಟಿಗೆಯ ಉಪಯೋಗಗಳು. ಕಟ್ಟಿಗೆಯನ್ನು ಪದಗೊಳಿಸುವದು ಅವಶ್ಯಕತೆ, ಉದ್ದೇಶ, ವಿಧಾನಗಳು.

ಬಿನಾರಕಾರಿಗಳು:— ಕಟ್ಟಿಗೆಗೆ ಕೇಡನ್ನುಂಟುಮಾಡುವ ಕ್ರಿಮಿ ಕೀಟಕಗಳು. ವರ್ಣನೆ ಮತ್ತು ಅವುಗಳಿಂದಾಗುವ ಹಾನಿಯನ್ನು ತಡೆಯುವ ವಿಧಾನಗಳು.

ಹಿಂದುಸ್ತಾನ ಹಾಗೂ ಜಗತ್ತಿನ ಆರಣ್ಯ ಪ್ರದೇಶಗಳು.

(ಬೆಂಬರ) ಕಟ್ಟಿಗೆಯ ಆಯಾತ ಹಾಗೂ ನಿರ್ಯಾತ.

(೨) ಉಪಕರಣಗಳ ಉಪಯೋಗ ಹಾಗೂ ಅವುಗಳ ಬಗೆಗೆ ಜಾಗರೂಕತೆ.

(೩) ಬಡಿಗೆ ಮಾಡಿದ ಸಂದುಗಳ ಪ್ರಕಾರಗಳು, ಅವುಗಳ ವರ್ಣನೆ ಹಾಗೂ ಉಪಯೋಗ.

(೪) ಉಪ್ಪ ಮಾಡಿಕೊಳ್ಳಿಸುವದು:—

ಉಸುಕಿನ ಕಾಗದದಿಂದ ತಿಕ್ಕಿ, ಪೂರ್ತಿಗೊಳಿಸಿದ ವಸ್ತುಗಳನ್ನು ವಿರುಗುಗೊಳಿಸಲು ಸಿದ್ಧಗೊಳಿಸುವದು. ತೂತುಗಳನ್ನು ಮುಚ್ಚಲು ಉಪಯೋಗಿಸುವ ವಿಧಾನಗಳು.

ಪ್ರಾಯೋಗಿಕ

(೧) ಕಡಿಯುವದು, ಕರಗಸದಿಂದ ಕೊಯ್ಯುವದು, ಉಜ್ಜುಕೊರಡು ಹೊಡೆಯುವದು ಮೊದಲಾದವುಗಳಲ್ಲಿಯ ಅಭ್ಯಸನಗಳನ್ನು ಮುಂದುವರಿಸುವದು.

(೨) ಸಂದುಗಳು—ಕೆಳಗಿನ ಸಂದುಗಳನ್ನೊಳಗೊಳ್ಳು ವಂತಹ ವಸ್ತುಗಳನ್ನು ತಯಾರಿಸುವದು.

(i) ಪೆಟ್ಟಿಗೆಯ ಕೂಲುಗಳು (Dovetail halving joints).

(ii) ಜೌಕಟ್ಟಿನ ಸಂದು:— (mortice and tenuon joint).

(ಅ) ಸಾದಾ (Plain).

(ಬ) ಅಸರೆಯು ಕಂಬಕ್ಕೂ ನೆತ್ತಿಗೂ ನಡುವಿನ ಕಮಾನಿನಂತಹ ಸಂದು (Haunched).

(iii) ನಡು ಸಂದು, ಥಡಿಯಾಕಾರದ ಸಂದು. (Bridle and saddle joint)

(೩) ವಸ್ತುಗಳು:— ರೊಟ್ಟಿಯ ಮಣೆ, ಚಿತ್ರದ ಜೌಕಟ್ಟು, ದೀಪದ ಅಡ್ಡಣಿಗೆ, ಮಡಿಚುವ ಗೂಟಗಳು. ಸೀಸುಕಡ್ಡಿಯನ್ನು ಇಡುವ ಪೆಟ್ಟಿಗೆ, 'ಡ್ರಾಫ್ಟ್' ಆಟದ ಮಣೆ, ಲೇಖನ ಸಾಮಗ್ರಿಗಳನ್ನಿಡುವ ಸಾಧನ, ಕಟ್ಟಿಗೆಯ ತಟ್ಟೆ (Tray), ಬುಕ್ ಶೆಲ್ಫು, ಕಟ್ಟಿಗೆಯ ಸಾದಾ ಮಂಚ, ಡೆಸ್ಕು, ಕುರ್ಚಿ, ಕೈಕುಂಟಿ, ನೊಗ, ಒಕ್ಕಲಿಗರು ಉಪಯೋಗಿಸುವ ಇಂಥ ಮತ್ತಿತರ ಸಾದಾ ವಸ್ತುಗಳು, ಸಾದಾ ಸ್ಟೂಲು, ಮಡಿಚುವ ಸ್ಟೂಲು, ಇಳಿಜಾರಾದ ಸಣ್ಣ ಡೆಸ್ಕು,

ತೂತುಗಳನ್ನು ಮುಚ್ಚಲಿಕ್ಕೆ ಉಪಯೋಗಿಸುವ ಬೇರೆ ಬೇರೆ ವಸ್ತುಗಳು.

'ಫ್ರೆಂಚ ಪಾಲಿಶ್' ದಲ್ಲಿ ಉಪಯೋಗಿಸಲಾಗುವ ಬೇರೆ ಬೇರೆ ಘಟಕಗಳು.

'ಪಾಲಿಶ್' ದಲ್ಲಿಯ ಹಾಗೂ ಅದರ ತಯಾರಿಕೆಯಲ್ಲಿಯ ವೈವಿಧ್ಯತೆಗಳು. ಅರಗಿನ ಮೆರುಗಿಗಾಗಿ ಉಪಯೋಗಿಸಲ್ಪಡುವ ಬೇರೆ ಬೇರೆ ಘಟಕಗಳು. ಅದನ್ನು ತಯಾರಿಸುವದು ಮತ್ತು ಬಣ್ಣ ಕೊಡುವದು.

(೫) ವಸ್ತುಗಳನ್ನು ತಯಾರಿಸುವದರಲ್ಲಿ ಉಪಯೋಗಿಸಿದ ಸರಕುಗಳ ಬೆಲೆಯ ಅಂದಾಜು ಮಾಡುವದು.

ರಾಟೆಯ ಚಿಕ್ರಗಳು, ಕಟ್ಟಿಗೆಯ ತಳ, ಕದುರಿನ ಆಧಾರ ಸ್ತಂಭಗಳು, ಹಾಗೂ ನೂಲುವದರಲ್ಲಿ ಉಪಯೋಗಿಸಬಲ್ಲ ಇಂಥ ಮತ್ತಿತರ ಸಲಕರಣೆಗಳು.

(೪) ಸರಿಹಚ್ಚಿ ಜೋಡಿಸುವದು, ಪೂರ್ಣತೆ ಕೊಡುವದು, ಉಜ್ಜಿ ನಯಗೊಳಿಸುವದು, ಮುಂತಾದವುಗಳು.

ಸಿದ್ಧಗೊಳಿಸಿದ ವಸ್ತುಗಳಿಗೆ ಅರಗಿನ ಮೆರುಗೆಣ್ಣೆ ಹಾಗೂ ಬಣ್ಣಗಳನ್ನು ಹಚ್ಚುವದು.

(೫) ಗಾಡಿಯ ಕೆಲಸ:— ರೊಲು ಕಟ್ಟಿಗೆ, ನೊಗದ ಗುಣಿಗಳು, ಡಂಬೆಲ್ಸು, ಉರುಳುವ ರೂಲುಕಟ್ಟಿಗೆ, ವಿದ್ಯುದ್ದೀಪದ ಅಡ್ಡಣಿಗೆ, ದೇಶೀ ದೀಪಗಳ ಅಡ್ಡಣಿಗೆ, ಗೂಟಗಳು, ಸಣ್ಣ ಆಟಿಗೆಗಳು ಈ ಮೊದಲಾದವುಗಳನ್ನು ತಯಾರಿಸುವದು.

(೬) ಚಿತ್ರಕಲೆಯು ಮುಂದುವರಿಯಬೇಕು.

ಸಂದುಗಳ ಹಾಗೂ ತಯಾರಿಸಿದ ವಸ್ತುಗಳ ಸಮಾಪರಿಮಾಣದ (Isometric) ಹಾಗೂ ಸಹಜ ಘನರೂಪ್ರದರ್ಶಕ (Orthographic) ಚಿತ್ರರೇಖನಗಳು.

(೭) ಉಪಕರಣಗಳ ಬಗೆಗೆ ಜಾಗರೂಕತೆ ಮತ್ತು ಅವುಗಳನ್ನು ಕಾಯ್ದಿಡುವದು;

ಉಳಿ ಹಾಗೂ ಉಜ್ಜುಗೊರಡಿನ ಅಲಗುಗಳನ್ನು ಹದಗೊಳಿಸುವದು.

———

೩ನೆಯ ಇಯತ್ತೆ (ಹೈಸ್ಕೂಲು)—೭ನೆಯ ಇಯತ್ತೆ (ಪ್ರಾಥಮಿಕ)

ತಾತ್ವಿಕ

(೧) ಬೆಲೆಯ ಲೆಕ್ಕಾಚಾರ:—

(ಅ) ವಿವಿಧ ಪೀಠೋಪಕರಣ ಮುಂತಾದವುಗಳಿಗೆ ಬೇಕಾಗುವ ಕಟ್ಟಿಗೆಯ ಅಳತೆಗಳ ಯಾದಿಯನ್ನು ತಯಾರಿಸುವದು, ಪರಿಮಾಣವನ್ನು ಲೆಕ್ಕ ಮಾಡಿ ತೆಗೆಯುವದು. ಕೂಲಿಯ ವೆಚ್ಚವನ್ನೊಳಗೊಂಡು (ವಸ್ತುಗಳ) ಬೆಲೆಯ ಅಂದಾಜು ಮಾಡುವದು.

ಪ್ರಾಯೋಗಿಕ

(೧) ಹಿಂದಿನ ವರ್ಷಗಳಲ್ಲಿಯಂತೆ ಅಭ್ಯಸನಗಳು.

(೨) ಸಂದುಗಳು:— ಕೆಳಗೆ ಕೊಟ್ಟ ಸಂದುಗಳನ್ನು ಒಳಗೊಳ್ಳುವಂತಹ ವಸ್ತುಗಳನ್ನು ತಯಾರಿಸುವದು—

ಪೆಟ್ಟಿಗೆಯ ಕೂಲುಗಳು, ವಿವಿಧ ಪ್ರಕಾರಗಳು. ಒಳಗೆ ಹಾಕಿದ ಸಂದು (Tongued and [illegible]) ಗಳು.

(ಬ) ದುಂಡಗಿನ ಕೊರಡುಗಳಲ್ಲಿಯ ಕಟ್ಟಿಗೆಯ (ಟಿಂಬರ) ಪರಿಮಾಣವನ್ನು ಲೆಕ್ಕ ಮಾಡಿ ಗೊತ್ತುಪಡಿಸುವ ರೀತಿಗಳು.

(ಕ) ಕಟ್ಟಿಣದ ಸಾಮಾನುಗಳು.

ಗುರುತಿಸುವದು: ಸೊಕ್ಕೆಗಳು, ತಿರುಪುಮೊಳೆಗಳು, ಪಟ್ಟಿಗಳು ಹಾಗೂ ಇನ್ನಿತರ ಸಾಮಾನ್ಯ ಸಲಕರಣೆಗಳ ಉಪಯೋಗ ಮಾಡಿ ಅವುಗಳನ್ನು ಕೂಡಿಸುವ ವಿಧಾನಗಳು.

(೨) ಸಲಕರಣೆಗಳ ಬಗೆಗೆ ಜಾಗರೂಕತೆ:—

(ಅ) ಸ್ವಚ್ಛಗೊಳಿಸುವದು ಮತ್ತು ಎಣ್ಣೆ ಹಚ್ಚುವದು.

(ಬ) ಸಲಕರಣೆಗಳನ್ನು ಸಾಣೆ ಹಿಡಿಯುವದು ಹಾಗೂ ನುಸಿಯುವದು.

(ಕ) ಅಡ್ಡಕೊಯ್ತದ ಹಾಗೂ ಉದ್ದಕೊಯ್ತದ ಕರಗಸಗಳಲ್ಲಿಯ ಭೇದ.

(೩) ಕಟ್ಟಿಗೆಯ ಕೆಲಸದಲ್ಲಿ ಬಳಸುವ ಭೂಮಿತಿಯ ಆಕಾರಗಳು:—

(ಅ) ತ್ರಿಕೋನ:— (ಕಟ್ಟಡದಲ್ಲಿ, ಮರದ ಅಥವಾ ಕಬ್ಬಿಣದ) ಪಟ್ಟಿ (Braces), (ಜಪ್ಪರ ಮುಂತಾದವುಗಳ) ಆಸರ ಪಟ್ಟಿ (Trusses) ಮುಂತಾದವು.

(ಬ) ವರ್ತುಲ:— ಕಮಾನುಗಳು.

(ಕ) ಅಲಂಕಾರಕ್ಕಾಗಿ ನಾನಾಪ್ರಕಾರದ ಆಕಾರಗಳು.

(ಡ) ಪಿತೋಪಕರಣ ಮುಂತಾದವುಗಳಲ್ಲಿ ನಕ್ಷೆ ತೆಗೆಯುವದು.

(೪) 'ಪದರು ಕಟ್ಟಿಗೆ' ತಯಾರಿಸುವ ವಿಧಾನಗಳು. ಉಪಯೋಗಿಸಲಾಗುವ ಕಟ್ಟಿಗೆಗಳು. 'ಪದರು ಕಟ್ಟಿಗೆ'ಯ ಉಪಯೋಗ, 'ಪಾಲಿಶ್', 'ಮೈರುಗೆಣ್ಣೆ', ಹಾಗೂ ಒಣ್ಣಗಳು. ಪ್ರತಿಯೊಂದರಲ್ಲಿ ಉಪಯೋಗಿಸಲಾಗುವ ಘಟಕಗಳು ಹಾಗೂ ಅವುಗಳ ತಯಾರಿಕೆ.

(೫) ವಸ್ತುಗಳು:— ಮಡಿಚುವ ಹಾಗೂ ಸಾದಾ ಮಂಚಗಳು, ಪೆಟ್ಟಿಗೆ, ನೇಗಿಲು, ಕುಂಟೆ, ಕಳೆಗುದ್ದಲಿ, ಚಕ್ಕಡಿಗಳ ಇರಚು, ಮಡಿಚುವ ಪರದೆ, ಚಹ ಕುಡಿಯಲು ಉಪಯೋಗಿಸುವ ಮೇಜು. ಕುರ್ಚಿಗಳು, ಸಣ್ಣ ಮೇಜುಗಳು, ಸುತ್ತಲಿನ ಮಟ್ಟಕ್ಕಿಂತ ಇಳಿಸಿದ ಅಥವಾ ಎತ್ತರಿಸಿದ ಪ್ರತ್ಯೇಕ ವಿಭಾಗಗಳಿಂದ ಯುಕ್ತವಾದ, ಬಾಗಿಲುಳ್ಳ ಸಣ್ಣ ಕವಾಟುಗಳು ಮತ್ತು ಸ್ಥಳಿಕ ಬೇಡಿಕೆಗಳುಳ್ಳ ಇಂಥ ಇನ್ನಿತರ ವಸ್ತುಗಳು.

(೪) ನೂಲುವ ರಾಟೆಯ ಚಕ್ರ, ಚಕ್ಕಡಿಗಳಿಗಾಗಿ (ಹಲ್ಲುಗಳುಳ್ಳ) ಗಾಲಿಗಳು, ಬಾವಿ ಮುಂತಾದವುಗಳಿಂದ ನೀರನ್ನು ಮೇಲಕ್ಕೆತ್ತಲು ಉಪಯೋಗಿಸುವ ಒಂದು ತರದ ದೊಡ್ಡ ಚಕ್ರ (persian wheel) ಮತ್ತು ಇತರ ಜಲ ಚಕ್ರಗಳು ಮುಂತಾದವುಗಳು.

ಗಾಡದ ಕೆಲಸವು ಮುಂದುವರೆಯಬೇಕು.

(೫) ಮೇಲ್ಪರದ 'ಪಾಲಿಶ್' ಮಾಡುವದು ಮತ್ತು ಅರಗಿನ ಮೆರಗು ಕೊಡುವದು ಹಾಗೂ 'ಪಾಲಿಶ್' ಹಚ್ಚುವದು.

(೬) ಕರಗಸಗಳನ್ನು ಜೋಡಿಸುವದು—

ಜೋಡಣೆಗೊಳಿಸುವದು, ಅಣಿಗೊಳಿಸುವದು, ಅಡ್ಡ ಕೊಯ್ತದ ಹಾಗೂ ಉದ್ದ ಕೊಯ್ತದ ಕರಗಸಗಳೆರಡನ್ನೂ ಅರಗಳಿಂದ ಹದನಗೊಳಿಸುವದು.

(೭) ತಯಾರಿಸಿದ ಅನೇಕ ವಸ್ತುಗಳ ಸಹಜಘನ ರೂಪ ಪ್ರದರ್ಶಕ ಚಿತ್ರರೇಖನಗಳನ್ನು ಸ್ಕೇಲಿಗನುಸರಿಸಿ ತೆಗೆಯುವದು.

(೮) ಐಚ್ಛಿಕ ಚಟುವಟಿಕೆಗಳು—

(ಅ) ಬೆತ್ತದ ಕೆಲಸ— ಸ್ಟೂಲುಗಳಿಗೆ, ಕುರ್ಚಿಗಳಿಗೆ, ಬೆತ್ತ ಹೆಣೆಯುವದು ಮತ್ತು ಇತರ ಸುಲಭವಾದ ವಸ್ತುಗಳನ್ನು ತಯಾರಿಸುವದು.

– ಅಥವಾ –

(ಬ) ಕಟ್ಟಿಗೆಯ ಕೆತ್ತನೆಯ ಕೆಲಸ—
ಚಕ್ಕೆಯೆಬ್ಬಿಸಿ ಕೆತ್ತುವದು, ಅಥವಾ ಇತರ ಸುಲಭವಾದ ಅಲಂಕಾರಿಕ ಕೆತ್ತನೆಗಳು.

ಬಡಿಗತನದ ಸಲಕರಣೆಗಳ ಪಟ್ಟಿ

ವೈಯಕ್ತಿಕ ಉಪಕರಣಗಳು

(ಪ್ರತಿಯೊಬ್ಬ ಬಾಲಕನಿಗೆ)

(೧) ಬಾಜಿ.

(೨) ಉಳಿಗಳು ~~೪"~~, ~~೪"~~

(೩) ಉಜ್ಜುಗೊರಡಿನ ಅಲಗು, ೧",-~~೪"~~

(೪) ಘೂಟಪಟ್ಟಿ

(೫) ಮೂಲೆ ಮಟ್ಟ (ತ್ರಿಕೋನಪಟ್ಟಿ) ೬"

ಇತರ ಸಾಧನಗಳು

(೧) ಗಟ್ಟಿಯಾಗಿ ಹಿಡಿಯುವ ಸಾಧನ (vise) ಸಹಿತವಾದ ಕೆಲಸದ ಮೇಜು ೧

(೨) ಫಲಕಗಳು ೨೦

(೩) ಸಲಕರಣೆಗಳ ಕಪಾಟುಗಳು ೨೦

(೪) ಅವಶ್ಯಬಿದ್ದಂತೆ 'ಟಿಂಬರ್' ಮತ್ತು ಕಬ್ಬಿಣದ ಸಾಮಾನುಗಳು.

ಸಾಮಾನ್ಯ ಉಪಕರಣಗಳು

(೧) ಉಳಿಗಳು, ೧~~೪"~~, ~~೪"~~ ೩ ಕಟ್ಟುಗಳು (ಸೆಟ್ಟುಗಳು)

(೨) ಕರಗಸಗಳು—

(ಅ) ಆಡ್ಡ ಕೊಯ್ತದ ಕರಗಸಗಳು ....
....೪ (೯ ಪಾಯಿಂಟು)

(ಬ) ಉದ್ದ ಕೊಯ್ತದ ಕರಗಸಗಳು ....
.... ೨ (೫ ಪಾಯಿಂಟು)

(೩) ಸುತ್ತಿಗೆಗಳು ....

(೪) ತಿರುಪು ಮೊಳೆಗಳನ್ನು ತಿರುಗಿಸುವ ಉಪಕರಣಗಳು (Screw drivers)

ದೊಡ್ಡವು ೨

ಸಣ್ಣವು ೨

(೫) 'ಸೇಲಸೆಟ್' (Sail set), ಮೊಳೆಯನ್ನು ಕೂಡಿಸುವಾಗ ಕಂಡಿಯ ಮೇಲ್ಭಾಗವನ್ನು ತಿಕ್ಕಿ ಆಗಲ ಮಾಡುವ ಸಾಧನ (Counter sink), ಮಧ್ಯದಲ್ಲಿ ತೂತು ಕೊರೆಯುವ ರಂಧ್ರಕ (Centre Punch).... ಪ್ರತಿಯೊಬ್ಬರಿಗೆ ೧

(೬) ಇಕ್ಕುಳ ೧

(೭) ಕೈಯಿಂದ ಉಪಯೋಗಿಸುವ ರಂಧ್ರಕ (Hand drill) ೧

ಬೇರೆ ಬೇರೆ ಅಳತೆಗಳ ಅಲಗುಗಳುಳ್ಳ ಕಟ್ಟು ೧

(೮) ಬಿಗಿಯಾಗಿ ಹಿಡಿಯುವ ಸಾಧನ—
(Clamp G. Clamp) ೧

(೯) ಕಂಪಾಸ ೧

(೧೦) ವಕ್ರವಾದ (ಅಲಗುಗಳುಳ್ಳ) ಉಜ್ಜುಗೊರಚ
ಗಳು ....

(೧೧) ತೆಳುವಾದ ಫಲಕುಗಳನ್ನು ಚಿತ್ರಾಕಾರಗಳ
ಕೊರೆಯುವದಕ್ಕಾಗಿ ಚೌಕಟ್ಟಿನಲ್ಲಿ ಅಳವಡಿಸಿದ ಸಣ್ಣ ಕ
ಗಸ (Fret saw) ಗಳ ಕಟ್ಟುಗಳು ....

(೧೨) ಕರಗಸಗಳ ಕಟ್ಟು.....೧ (ಕರಗಸಗಳ ಹಲ್ಲ
ಗಳನ್ನು 'ದುರಸ್ತಿ' ಮಾಡಲು ಒಂದು ಸಾಧನ).

(೧೩) ಅರಗಳು.

ಅರ್ಧ ವರ್ತುಲಾಕಾರದ ಉರುಟು ಅರ ೯" ಉದ್ದ
ದುದು ....

(೧೪) ಸಾಣೆ ಹಿಡಿಯುವ ಸಪಾಟಾದ ಕಲ್ಲು (ನೀ
ಸಹಾಯದಿಂದ).

(ಆ) ಸಾಣೆ ಹಿಡಿಯುವ ಸಪಾಟಾದ ಕಲ್ಲು (ಎಂಣೆ
ಸಹಾಯದಿಂದ) ....

(೧೫) ಸಮಾಂತರ ಗೆರೆಗಳನ್ನು ಎಳೆಯುವದಕ್ಕ
ಹೊಂದಿಕೆಗೊಳಿಸಲಾಗುವ ಬಡಗಿಯ ಸಾ
(Marking gauges) ಗಳು ....

---

೮. ಸಂಗೀತ

~~ಪ್ರೌಢಶಾಲೆ ಪರೀಕ್ಷೆ (ಹೈಸ್ಕೂಲು)~~—
ಪ್ರೌಢಶಾಲೆ ಪರೀಕ್ಷೆ (ಪ್ರಾಥಮಿಕ)

(ಅ) ಹಿಂದಿನ [~~(ಆ)~~ (ಅ) ದಲ್ಲಿ ಕಾಣಿಸಿದಂತೆ]
ಅಭ್ಯಾಸ ಪತ್ರಿಕೆಯನ್ನು ಮುಂದುವರಿಸುವದು.

(ಬ) ~~೫~~ ಗಳಿಗೆ (ಡ) ದಲ್ಲಿ ಕಾಣಿಸಿದ ಪ್ರತಿಯೊಂದು ರಾಗ
ದಲ್ಲಿ ನಾಲ್ಕು ಗೀತಗಳು, ಅಂದರೆ ಒಂದು ಲಕ್ಷಣ ಗೀತ,
ಒಂದು ಸರಿಗಮ ಮತ್ತು ಎರಡು ಗೀತಗಳು.

(ಕ) ~~ಪ್ರೌಢ~~ ಶಾಲೆಯ ಇಯತ್ತೆಯ (ಕ) ದಲ್ಲಿ ತೋರಿಸಿದ ಹಿಂ
ದಿನ ಅಭ್ಯಾಸ ಪತ್ರಿಕೆಯನ್ನು ಮುಂದುವರಿಸುವದು.

(ಡ) ಐದು ರಾಗಗಳು: ಕಾಫಿ, ಭೀಮ್~~ಪ~~ಪಲಾಸ, ಬ
ಶ್ರೀ, ಅಸಾವೇರಿ? ಮತ್ತು ಭೈರವಿ.

~~ಪ್ರೌಢಶಾಲೆ ಪರೀಕ್ಷೆ (ಹೈಸ್ಕೂಲು)~~—
ಪ್ರೌಢಶಾಲೆ ಪರೀಕ್ಷೆ (ಪ್ರಾಥಮಿಕ)

(ಅ) ~~ಪ್ರೌಢ~~ ಶಾಲೆಯ ಇಯತ್ತೆಯ (ಅ) ದಲ್ಲಿ ಕಾ
ಹಿಂದಿನ ಅಭ್ಯಾಸಪತ್ರಿಕೆಯನ್ನು ಮುಂದುವರಿಸುವದ

(ಬ) ಕೆಳಗೆ (ಡ) ದಲ್ಲಿ ಕಾಣಿಸಿದ ಪ್ರತಿಯೊಂ
ದಲ್ಲಿ ಒಂದು ಸರಿಗಮ. ಒಂದು ಲಕ್ಷಣ ಗೀತ
ಎರಡು ಗೀತಗಳು. ಒಂದು ಝಂಪ ತಾಳ.

(ಕ) ~~ಪ್ರೌಢ~~ ಶಾಲೆಯ ಇಯತ್ತೆಯ (ಕ) ದಲ್ಲಿ
ಹಿಂದಿನ ಅಭ್ಯಾಸ ಪತ್ರಿಕೆಯನ್ನು ಮುಂದುವರಿ

(ಡ) ಐದು ರಾಗಗಳು-ಕಲ್ಯಾಣ, ಹಮೀರ, ಕೇದಾರ ಬೇಹಾಗ ಮತ್ತು ಮಾಲಕಂಸ.

೯. ಕಲೆ (ನಂತರ ತಿಳಿಸಲಾಗುವದು)

೧೦ ಪ್ರಾಥಮಿಕ ಮತ್ತು ಹೈಸ್ಕೂಲುಗಳ ಇಯತ್ತೆಗಳಿಗಾಗಿ ಹಿಂದುಸ್ತಾನಿ

ಹಿಂದೀರಾಷ್ಟ್ರೀಯ ಜೀವನದಲ್ಲಿ ತನಗೆ ಯೋಗ್ಯವಾದ ಸ್ಥಾನವನ್ನು ಪಡೆದಿರುವ, ಮುಂಬಯಿ ಪ್ರಾಂತದ ಪ್ರತಿಯೊಬ್ಬ ಸುಶಿಕ್ಷಿತ ಯುವಕನು ಹಿಂದುಸ್ತಾನದಲ್ಲಿ ಎಲ್ಲಕ್ಕೂ ಹೆಚ್ಚು ವ್ಯಾಪಕವಾಗಿ ಮಾತಾಡಲ್ಪಡುವ ಹಿಂದುಸ್ತಾನಿಯು, ವ್ಯವಹಾರದಲ್ಲಿ ಸಾಕಾಗುವಷ್ಟು ಜ್ಞಾನವನ್ನು ಪಡೆದವನಿರಲೇಬೇಕು. ಈ ಬೇಡಿಕೆಯನ್ನು ಪೂರೈಸಲು ಎಲ್ಲಕ್ಕೂ ಮೊದಲನೆಯದಾಗಿ ಈ ಪ್ರಾಂತದ ಎಲ್ಲ ಶಾಲೆಗಳಲ್ಲಿ ಹಿಂದುಸ್ತಾನಿಯ ಅಭ್ಯಾಸವನ್ನು ಪ್ರಾರಂಭಿಸುವ ಏರ್ಪಾಡುಗಳಾಗಬೇಕು. ಈ ಭಾಷೆಯ ಶಿಕ್ಷಣವು ಕೆಳಗಿನಂತೆ ಸಾಗುವದು:—

ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಲ್ಲಿ ೩ ವರ್ಷ ಅಂದರೆ ಆವುಗಳಲ್ಲಿಯ ೫ನೆಯ, ೬ನೆಯ ಮತ್ತು ೭ನೆಯ ಇಯತ್ತೆಗಳಲ್ಲಿ; ಹೈಸ್ಕೂಲುಗಳ ೧ನೆಯ, ೨ನೆಯ ಮತ್ತು ೩ನೆಯ ಇಯತ್ತೆಗಳಲ್ಲಿ; 'ಇಂಗ್ಲಿಷ ಟೀಚಿಂಗ್' ಶಾಲೆಗಳ ೨ನೆಯ, ೩ನೆಯ ಮತ್ತು ೪ನೆಯ ಇಯತ್ತೆಗಳಲ್ಲಿ; ಮತ್ತು ಯುರೋಪಿಯನ್ ಶಾಲೆಗಳ ೩ನೆಯ, ೪ನೆಯ ಮತ್ತು ೫ನೆಯ ಇಯತ್ತೆಗಳಲ್ಲಿ ಸಾಗುವದು.

ಕೊನೆಗೆ, ಪ್ರಾಂತದಲ್ಲಿ ಸರಕಾರದಿಂದ ಮಾನ್ಯತೆ ಪಡೆದ ಎಲ್ಲ ಶಾಲೆಗಳಲ್ಲಿ ಹಿಂದುಸ್ತಾನಿಯನ್ನು ಕಡ್ಡಾಯವಾಗಿ ಕಲಿಸಬೇಕಾಗುವದು. ಮತ್ತು ಅದನ್ನು ದೇವನಾಗರಿ ಮತ್ತು ಉರ್ದು ಈ ಎರಡು ಲಿಪಿಗಳಲ್ಲಿ ಕಲಿಸುವ ವ್ಯವಸ್ಥೆ ಮಾಡಲಾಗುವದು—ವಿದ್ಯಾರ್ಥಿಗಳು ತಮ್ಮ ಇಚ್ಛಾನುಸಾರವಾಗಿ (ಅವುಗಳಲ್ಲಿಯ) ಬೇಕಾದ ಒಂದು ಲಿಪಿಯನ್ನು ಆರಿಸಿಕೊಳ್ಳಬಹುದು. ಹಿಂದುಸ್ತಾನಿ ಪಾಠಗಳಿಗೆ ವಿದ್ಯಾರ್ಥಿಗಳು ತಪ್ಪದೆ ಹಾಜರ ಇರಲೇಬೇಕು. ಮತ್ತು ಇದರ ಹೊರ್ತಾಗಿ ಪ್ರತಿಯೊಂದು ಮಟ್ಟಕ್ಕೆ ನಿರ್ದಿಷ್ಟಪಡಿಸಿದ ಸ್ವಾವೀಣ್ಯತೆಯ ಕೆಲವೊಂದು ಅಂಶವನ್ನು ಅವರು ತೋರಿಸಬೇಕಾಗುವದು.

"ವ್ಯವಹಾರದಲ್ಲಿ ಸಾಕಾಗುವಷ್ಟು ಹಿಂದುಸ್ತಾನಿಯ ಜ್ಞಾನ" ವೆಂಬುದರ ಅರ್ಥವು, ಮಹತ್ವದ ಮೇರೆಗೆ ಕೆಳಗಿನ ಅನುಕ್ರಮದಂತಿರುವದು:—

(೧) ಓದುವದು ಹಾಗು ಅರ್ಥವನ್ನು ಗ್ರಹಿಸುವದು.

(೨) ಮಾತನಾಡುವದು.

(೩) ಬರೆಯುವದು.

ಹಿಂದುಸ್ತಾನಿ ೩ನೆಯ ಇಯತ್ತೆಯನ್ನು ಮುಗಿಸಿದ ಬಾಲಕನು ಮತ್ತು ಬಾಲಕಿಯು ಸುಲಭ ಹಿಂದುಸ್ತಾನಿ ಪುಸ್ತಕಗಳು, ಮಕ್ಕಳ ಮಾಸಿಕಗಳು, ಮಕ್ಕಳ ಕಥೆ ಪುಸ್ತಕಗಳು ಮುಂತಾದವುಗಳನ್ನು ಓದಿ ಅವುಗಳ ಅರ್ಥವನ್ನು ಗ್ರಹಿಸಲು ಸಮರ್ಥರಾಗಿರಬೇಕು. ಈ ಬಾಲಕನು ನಿರ್ದಿಷ್ಟಪಡಿಸಿದ ಅಭ್ಯಾಸ ಪತ್ರಿಕೆಯಲ್ಲಿಯ ಹಿಂದುಸ್ತಾನಿ ಗದ್ಯ ಭಾಗವನ್ನು ತಕ್ಕಮಟ್ಟಿಗೆ ಓದಿರಬೇಕು ಮತ್ತು ಅದರ ಸಾರಾಂಶದ ಬಗೆಗೆ ಕೇಳಿದ ಪ್ರಶ್ನೆಗಳನ್ನು ಉತ್ತರಿಸಲು ಸಮರ್ಥನಾಗಿರಬೇಕು. ಬಾಲಕ ಅಥವಾ ಬಾಲಕಿಯು ಉಚ್ಚಾರ ಮತ್ತು ಧ್ವನಿಯ ರೀತಿಗಳಿಗೆ ಮೊದಲಿನಿಂದ ಕೊನೆಯವರೆಗೆ ವಿಶೇಷ ಲಕ್ಷ್ಯ ಕೊಡಬೇಕು. ಅವನು ಸರಿಯಾಗಿ ಪ್ರಶ್ನೆಗಳನ್ನು ಕೇಳಲು ಮತ್ತು ಕೇಳಿದ ಪ್ರಶ್ನೆಗಳನ್ನು ಉತ್ತರಿಸಲು ಸಮರ್ಥನಾಗಿರಬೇಕು. ಅವನು ತನಗೆ ಗೊತ್ತಿದ ಶಬ್ದಗಳ ಸರಿಯಾದ ಅಕ್ಷರ ಜೋಡಣೆಯನ್ನು ಮಾಡಲು ಮತ್ತು ಸುಲಭ ಶೈಲಿಯಲ್ಲಿ ಅಂದವಾಗಿ ಬರೆಯಲು ಸಮರ್ಥನಾಗಿರಬೇಕು.

ವ್ಯಾಕರಣದ ಅಭ್ಯಾಸದಲ್ಲಿ ವಿಶೇಷ ವ್ಯಾವಹಾರಿಕ ಮಹತ್ವವಿಲ್ಲದ ಸೂಕ್ಷ್ಮ ಭೇದಗಳು ಮತ್ತು ಅಸಮ ರೂಪಗಳು ಇವುಗಳ ಬಗೆಗೆ ಅನಾವಶ್ಯಕವಾಗಿ ವೇಳೆಯನ್ನು ಕಳೆಯದಿರುವದು ಮಹತ್ವದ ಸಂಗತಿಯು. ಹಿಂದುಸ್ತಾನಿಯನ್ನು ಕಲಿಸುವಾಗ ತುಲನಾತ್ಮಕ ಅಭ್ಯಾಸದ ಕಡೆಗೆ ಲಕ್ಷ್ಯಕೊಡಬೇಕು—ಪ್ರಾಮುಖ್ಯವಾಗಿ, ಮಾತೃಭಾಷೆಯಲ್ಲಿಯ ಮತ್ತು ಹಿಂದುಸ್ತಾನಿಯಲ್ಲಿಯ ವಾಕ್ಯರಚನೆ, ಪದೆನುಡಿಗಳು ಮತ್ತು ಶಬ್ದಗಳು ಇವುಗಳ ನಡುವಿನ ಸಾಮ್ಯಗಳನ್ನು ಕುರಿತು—

ವಿದ್ಯಾರ್ಥಿಗಳು ನಿರ್ದಿಷ್ಟಪಡಿಸಿದ ಕಾಲಾವಧಿಯೊಳಗೆ ತಕ್ಕಮಟ್ಟಿಗೆ ಪ್ರಗತಿಯನ್ನು ಹೊಂದಲು ಸಮರ್ಥರನ್ನಾಗಿ ಮಾಡುವದರ ಸಲುವಾಗಿ ಅವರು ಓದುವ ಪುಸ್ತಕಗಳು ಸಾಕಷ್ಟು ಆವರ ತಿಳುವಳಿಕೆಯ ಮಟ್ಟದೊಳಗಿನವೂ ಮತ್ತು ಅವರ ಅರ್ಥಗ್ರಹಣ ಶಕ್ತಿಯ ಮಟ್ಟಕ್ಕೆ ಸಂಯಾದವೂ ಇರುವದು ಮುಖ್ಯವಾದುದು.

ಪ್ರಾಥಮಿಕ ಶಾಲೆಗಳಿಗಾಗಿ ಶಾರೀರಿಕ ಶಿಕ್ಷಣದ ಅಭ್ಯಾಸ ಪತ್ರಿಕೆ

[ಜಿ. ಆರ್. ಇ. ಲ್ಯಂಡ ಆಯ್. ಡಿಪಾರ್ಟಮೆಂಟ ನಂ. ೬೧೭೪, ೬ನೆಯ ನವ್ಹಂಬರ ೧೯೪೬ರ ಜೊತೆ.]

ಇಯತ್ತೆಗಳು ೧ ರಿಂದ ೪.

ಧ್ಯೇಯ:— ಭಾವೀಜೀವನದ ನಾಗರಕತೆಯ ತಳಹದಿಯನ್ನು ಹಾಕುವದರ ಸಲುವಾಗಿ ಮಗುವಿನ ಶಾರೀರಿಕ, ನೈತಿಕ ಮತ್ತು ಸ್ವೈಚ್ಛಿಕ ಬೆಳವಣಿಗೆಯನ್ನು ಸರ್ವತೋಮುಖವಾಗಿ ಉಂಟುಮಾಡುವದೇ ಪ್ರಾಥಮಿಕ ಶಾಲೆಗಳಲ್ಲಿಯ ಶಾರೀರಿಕ ಶಿಕ್ಷಣದ ಮುಖ್ಯ ಧ್ಯೇಯವಾಗಿರಬೇಕು.

೨. ಗುರಿಗಳು:— (೧) ಮಗುವಿನ ಸ್ವಯಂ-ಪ್ರೇರಿತವಾದ ಚಟುವಟಿಕೆಗಳು ಹಿತಕರವಾಗಿ ಹೊರಹೊಮ್ಮುವಂತೆ ಸಮಾಧಾನಕರವಾದ ಅವಕಾಶವನ್ನು ಕಲ್ಪಿಸಿಕೊಡುವದು.

(೨) ಮಗುವಿನ ಸ್ನಾಯು ಹಾಗು ಮಜ್ಜಾತಂತುಗಳ ಸಮನ್ವಯವನ್ನೂ ಕೌಶಲ್ಯವನ್ನೂ ಒಳಗೊಂಡ ಶಾರೀರಿಕ ಶಕ್ತಿಗಳನ್ನು ಬೆಳೆಯಿಸುವದು.

(೩) ಆರೋಗ್ಯ ಮತ್ತು ಶ್ರಮಸಹಿಷ್ಣುತೆಗಳ ರೂಢಿ ಚಟುವಟಿಕೆಗಳನ್ನು (ಜೀವನರೀತಿ) ಬೆಳೆಯಿಸುವದು.

(೪) ಶಾರೀರಿಕ ದೋಷಗಳನ್ನು ಸರಿಪಡಿಸುವದು.

(೫) ಶಾಲೆ ಹಾಗು ಸಂಘಗಳ ಸಾಮೂಹಿಕ ಜೀವನಕ್ಕೆ ಸಿದ್ಧವು ಹೊಂದಿಕೊಂಡು ಹೋಗುವಂತೆ ಮಾಡುವದು.

(೬) ಚುರುಕುತನ, ಜಾಗರೂಕತೆ, (ಕೆಲಸದಲ್ಲಿ) ಮುಂಕೊಡಗುವಿಕೆ, ಸಾಹಸ, ಪ್ರಸಂಗಾವಧಾನ, ನಿಸ್ವಾರ್ಥತೆ, ಧಂಸ್ಥಾಭಿಮಾನ, ಮುಂದಾಳುತನ, ಇಂಥಗುಣಗಳನ್ನು ಅಭಿವೃದ್ಧಿಗೊಳಿಸುವದು. ಮತ್ತು ಕೆಲವೊಂದು ಉಪಯುಕ್ತವೂ ಉದಾತ್ತವೂ ಆದ ಉದ್ದೇಶಕ್ಕಾಗಿ ಶ್ರಮಿಸುವಂತೆ ಮಾಡುವದು.

(೭) ಶೀಲ ಹಾಗು ನಾಗರೀಕತೆಗಳಿಗೆ ತಳಹದಿಯಾದ ಸೇವಾ ಬುದ್ಧಿಯನ್ನು ಅಭಿವೃದ್ಧಿಗೊಳಿಸುವದು.

೧ನೆಯ ಇಯತ್ತೆ

ಶಾರೀರಿಕ ಚಟುವಟಿಕೆಗಳು:—

ಅ. ಕೆಳಗೆಕೊಟ್ಟಂತೆ, ಮೂಲಭೂತ ಹಾಗು ನಿರಾಂತಕವಾದ ಚಲನವಲನಗಳು. (೧) ನಡೆಯುವದು.— (ಅ) ಮುಂಬದಿಗೆ. (ಬ) ಹಿಂಬದಿಗೆ (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

(೨) ಹಿಮ್ಮಡಗಳ ಮೇಲೆ ನಡೆಯುವದು.— (ಅ) ಮುಂಬದಿಗೆ. (ಬ) ಹಿಂಬದಿಗೆ.

(ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

(೩) ಕಾಲ್ಬೆರಳುಗಳ ಮೇಲೆ ನಡೆಯುವದು.— (ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

(೪) ಓಡುವದು.— (ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

(೫) ಹಿಮ್ಮಡಗಳ ಮೇಲೆ ಓಡುವದು:— (ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

(೬) ಜಿಗಿಯುವದು (ಪಾದಬಿಡಿಸಿ).— (ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ನಿಂತಸ್ಥಳದಲ್ಲಿ.

(೭) ಜಿಗಿಯುವದು (ಪಾದಜೋಡಿಸಿ).—(ಅ)ಮುಂಬದಿಗೆ. (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ. (ಇ) ಮೇಲ್ಗಡೆಗೆ. (ಫ) ಎಡ ಹಾಗೂ ಬಲಮಗ್ಗಲುಗಳಿಗೆ.— ಒಮ್ಮೆ ಎಡಕ್ಕೆ, ಒಮೆ ಬಲಕ್ಕೆ, ಈ ಪ್ರಕಾರ.

(ಗ) ಮುಂಬದಿ ಹಾಗು ಹಿಂಬದಿಗಳಿಗೆ—ಒಮ್ಮೆ ಎಡಕ್ಕೆ, ಒಮ್ಮೆ ಬಲಕ್ಕೆ. ಈ ಪ್ರಕಾರ.

(ಆ) ಕುಂಟುವದು (ಎಡ ಹಾಗು ಬಲಕಾಲಿನಿಂದ).—(ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

ಬ. ಅನುಕರಣ, ನಟನೆ, ಮತ್ತು ಹಾಡಿನ ಆಟಗಳು:—

(೧) ಪರಿಶಿಷ್ಟ ೨ರಲ್ಲಿ ಕೊಟ್ಟಂತೆ.

(೨) ಓ.ಪಿ.ಏ.ದ ಮೂರನೆಯ ಪ್ರಕರಣದಲ್ಲಿ ಕೊಟ್ಟಂತೆ.

ಕ. ಆಟಗಳು.— ಎಲ್.ಎಂ.ಕೇ; ಕೇ.ಎಸ್;ಪಿ.ಎಸ್ ಎಸ್.ಪಿ; ಎಂ. ಎ. ಮತ್ತು ಎಸ್.ಆರ್.ಗಳಲ್ಲಿ ಕೊಟ್ಟಂತೆ.

ಪರಿಶಿಷ್ಟ ೨ರಲ್ಲಿ ಕೊಟ್ಟಂತೆ.

ಡ. ಬೀಡು ಬಿಡುವದು.— ವರುಷದಲ್ಲಿ ಎರಡಾವರ್ತಿ ಶಾಲೆಯ ಅವಾರದಲ್ಲಿ ಸುಮಾರು ಎಂಟು ತಾಸು ಅವಧಿಯಷ್ಟು ತಂಗುವದು.

೨ನೆಯ ಇಯತ್ತೆ.

ಶಾರೀರಿಕ ಚಟುವಟಿಕೆಗಳು:—

ಅ. ೧ನೆಯ ಇಯತ್ತೆಯ 'ಅ' ದಲ್ಲಿ ಕೊಟ್ಟ ಮೂಲ ಭೂತ ಹಾಗು ನಿರಾಂತಕವಾದ ಚಲನವಲನಗಳ ಹೊರತಾಗಿ ಕೆಳಗೆ ಕಾಣಿಸಿದವುಗಳು:—

(೧) ಕಾಲ್ಬೆರಳುಗಳ ಮೇಲೆ ಓಡುವದು:—(ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ಎಡಮಗ್ಗಲಿಗೆ. (ಡ) ಬಲಮಗ್ಗಲಿಗೆ.

(೨) ಮೊಣಕಾಲುಗಳನ್ನು ಮೇಲಕ್ಕೆ ಎತ್ತರಿಸಿ ಓಡುವದು:—

(ಅ) ಮುಂಬದಿಗೆ. (ಬ) ಹಿಂಬದಿಗೆ. (ಕ) ನಿಂತ ಸ್ಥಳದಲ್ಲಿ.

(೩) ಕುಂಟುವದು (ಎಡ ಹಾಗು ಬಲಗಾಲಿನಿಂದ).—(ಅ) ಮೇಲ್ಗಡೆಗೆ. (ಬ) ಎಡ ಹಾಗು ಬಲಮಗ್ಗಲುಗಳಿಗೆ—ಒಮ್ಮೆ ಎಡಕ್ಕೆ, ಒಮ್ಮೆ ಬಲಕ್ಕೆ, ಈ ಪ್ರಕಾರ.

(೪) ಲಾಗ ಹಾಕುವದು.—(ಅ) ಮುಂಬದಿಗೆ. (ಬ) ಹಿಂಬದಿಗೆ.

(೫) ಉರುಳುವದು.— (ಅ) ಮುಂಬದಿಗೆ. (ಬ) ಹಿಂಬದಿಗೆ.

(೬) ಹೊಟ್ಟೆ ಹೊಸೆಯುವದು.—ಕೈಕಾಲುಗಳನ್ನು ಬೇರೆ ಬೇರೆ ಅಂತರದಲ್ಲಿಟ್ಟು—ಶರೀರಕ್ಕೆ ಸಮಾಂತರವಾಗಿ.—(ಅ) ಮುಂಬದಿಗೆ, (ಬ) ಹಿಂಬದಿಗೆ.

(೭) ಏರುವದು.— (ಅ) ನಿಚ್ಚಣಿಕೆ. (ಬ) ಹಗ್ಗದ ನಿಚ್ಚಣಿಕೆ. ಹಗ್ಗಗಳು. (ಕ) ಸಣ್ಣ ಗಿಡಗಳು.

(೮) ಉಯ್ಯಾಲೆಯಾಡುವದು.— (ಅ) ಅಡ್ಡ ನಿಲ್ಲಿಸಿದ ಕಂಬಿಯ ಮೇಲೆ. (ಬ) ತೂಗುಬಿಟ್ಟ ಹಗ್ಗದಮೇಲೆ. (ಕ) ಮೇಲ್ಬದಿಗೆ ಅಡ್ಡವಾಗಿ ಇಟ್ಟ ನಿಚ್ಚಣಿಕೆಯ ಹಲ್ಲುಗಳನ್ನು ಹಿಡಿಯುತ್ತ.

(ಬ) ಅನುಕರಣ, ಕಥೆಯ ಆಟ, ನಟನೆ ಮತ್ತು ಹಾಡಿನ ಆಟಗಳು:—

(೧) ಪರಿಶಿಷ್ಟ ೨ರಲ್ಲಿ ಕೊಟ್ಟಂತೆ.

(೨) ಓ. ಪಿ. ಏ. ದ ಮೂರನೆಯ ಪ್ರಕರಣದಲ್ಲಿ ಕೊಟ್ಟಂತೆ.

ಕ. ಅಂಗಸಾಧನೆಗಳು — ಬಿ. ಈ. ಎಸ್. ಪಿ. ಟಿ. ದಲ್ಲಿಯ ೧-೬ ಪಾಠಗಳಲ್ಲಿ ಕೊಟ್ಟಂತೆ.

ಡ. ಆಟಗಳು:— (೧) ಬಿಈಎಸ್‌ಪಿಟಿ ದಲ್ಲಿಯ ಯೋಗ್ಯ ಆಟಗಳು.

(೨) ಓಪಿಏ ದ ೫ನೆಯ ಪ್ರಕರಣದಲ್ಲಿ ವರ್ಣಿಸಿದ ಸಾದಾ ಆಟಗಳು:—

ಪುಟಗಳು ೬೦ ರಿಂದ ೭೭--ಮತ್ತು ಎಸ್‌ಆರ್ ಮತ್ತು ಎಂ ಏ ಗಳೊಳಗಿನವು ಕೂಡ.

(೩) ಪರಿಶಿಷ್ಟ ೨.

೫. ಬೀಡು ಬಿಡುವದು.—ವಿದ್ಯಾರ್ಥಿಗಳು ವರುಷದಲ್ಲಿ ಎರಡಾವರ್ತಿ ಶಾಲೆಯು ಆವಾರವಲ್ಲಿ ೧೫ ತಾಸು ತಂಗುವದು.

೩ನೆಯ ಇಯತ್ತೆ.

ಶಾರೀರಿಕ ಚಟುವಟಿಕೆಗಳು:—

ಅ. ೨ನೆಯ ಇಯತ್ತೆ 'ಅ' ದಲ್ಲಿ ಮತ್ತು ೩ನೆಯ ಇಯತ್ತೆಯ 'ಅ' ದಲ್ಲಿ ಕೊಟ್ಟ ಮೂಲ ಭೂತ ಹಾಗು ರಾತಂತ್ರವಾದ ಚಲನವಲನಗಳ ಹೊರತಾಗಿ ಕೆಳಗೆ ತೋರಿಸಿದವುಗಳು:—

(೧) ಒಗೆಯುವದು:— ಕಟ್ಟಿಗೆಯ ಚಂಡು, ಟೆನಿಸ ಚಂಡು, ಆರಿವೆಯ ಚಂಡು, ಮುಂತಾದವುಗಳನ್ನು ಬೇರೆ ಬೇರೆ ದಿಕ್ಕುಗಳಲ್ಲಿ.

(೨) ಲಾಗಹಾಕುವದು:— (ಅ) ಮುಂಬದಿಗೆ ಉರುಳುವದು–ಹಿಮ್ಮಡಗಳನ್ನು ಹಿಡಿದುಕೊಂಡು.

(ಬ) ಹಿಂಬದಿಗೆ ಉರುಳುವದು–ಹಿಮ್ಮಡಗಳನ್ನು ಹಿಡಿದುಕೊಂಡು

(೪) ಒಂದೇ ಸವನೆ ಮುಂದುರುಳುವದು, ಇತ್ಯಾದಿ.

(೩) ನಿಲದಗುಂಟೆ ಅಂಗಾಲು ಸರಿಸುತ್ತ ಸಾಗುವದು. (ಒಮ್ಮೆ ಎಡಗಾಲನ್ನು, ಒಮ್ಮೆ ಬಲಗಾಲನ್ನು ಸರಿಸುತ್ತ).

ಬ. ಕತೆಯ ಆಟಗಳು, ನಟನೆ ಮತ್ತು ಸಾಭಿನಯ ಗೀತೆ:—

(೧) ಪರಿಶಿಷ್ಟ ೨ ರಲ್ಲಿ ಕೊಟ್ಟಂತೆ.

(೨) ಓದಿದ ೩ನೆಯ ಪ್ರಕರಣದಲ್ಲಿ ಕೊಟ್ಟಂತೆ.

ಕ. ಕವಾಯತು.— ಮೂಲಭೂತವಾದ ದೈಹಿಕ ತ್ವಿಗಳು:—

ಕೆಳಗಿನಂತೆವು—

(ಅ) ಸಾಲಿನಲ್ಲಿ ನಿಲ್ಲುವದು (ಏಕ್-ಕತಾರ್); ಸಜ್ಜಾಗಿ ನಿಲ್ಲುವದು (ಏಡೀ-ಮಿಲಾವ್); ಎಡಕ್ಕೆ ಇಲ್ಲವೆ ಬಲಕ್ಕೆ ಕತ್ತನ್ನು ಹೊರಳಿಸಿ ನೋಡುತ್ತ ಹೊಂದಿಕೆಯಾಗಿ ನಿಲ್ಲುವದು (ತಮಾಮ್—ಥಾಟ್); ನಿರಾಮದಲ್ಲಿ ನಿಲ್ಲುವದು (ಕದಮ್—ಖೋಲ್); ಆರಾಮದಲ್ಲಿ (ಆ-ರಾಮ್).

(ಬ) ಸಂಖ್ಯೆಯನ್ನು ಎಣಿಸುವದು.

(ಕ) ಬಲಕ್ಕೆ ಇಲ್ಲನೆ ಎಡಕ್ಕೆ ತಿರುಗುವದು.

(ಡ) ಮುಂಬದಿಗೆ ಇಲ್ಲವೆ ಮಗ್ಗಲಿಗೆ ಹೆಜ್ಜೆ ಇಕ್ಕುವದು.

(ಇ) ಒಂದು ಇಲ್ಲವೆ ಎರಡು ಸಾಲುಗಳಲ್ಲಿ ಕೂಚು ಮಾಡುವದು.

(ಫ) ನಮಸ್ತೆ.

(ಗ) ವಿಸರ್ಜನೆ.

ಡ. ಉಪಕರಣರಹಿತ ಅಂಗಸಾಧನೆಗಳು:—

ಬಿ ಈ ಎಸ್ ಪಿ ಟಿ ದ ೭೦೦ ೧೨ ಕೋಷ್ಟಕಗಳಲ್ಲಿ ಕೊಟ್ಟಂತೆ.

ಇ ಸರ್ವಾಂಗ ಸುಂದರ ವ್ಯಾಯಾಮ:—

(೧) ಝೂಲೆ–ಹಾಥ್. (೨) ಸೀಧೀ-ದೋ. (೩) ಮಿಶ್ರ-ಹಾಥ್. (೪) ಕಮರ್-ಝುಕ್. (೫) ಕುಪ್—ಕಸ್. (೬) ಅಗೇ-ಪಾವ್. (೭) ಪೀಛೇ ಪಾವ್. (೮) ಬಾಹೂ-ಪಾವ್. (೯) ಕುದಾನ್-ತಾಲ್. ಶಿಕ್ಷಕನು ಶರೀರದ ಬೇರೆ ಬೇರೆ ಭಾಗಗಳ ಚಲನವಲನಗಳನ್ನೊಳಗೊಂಡ ೬-೮ ಅಂಗಸಾಧನೆಗಳ ಗುಂಪನ್ನು ಯೋಜಿಸಿಕೊಳ್ಳಬೇಕು.

ಕೆಳಗೆ ತೋರಿಸಿದ ೫ವಿಗಳನ್ನು ಉಪಯೋಗಿಸಬಹುದು. ಅಂಗಸಾಧನೆಗಳನ್ನು ಎರಡು ಇಲ್ಲವೆ ನಾಲ್ಕು ಎಣಿಕೆಗಳಲ್ಲಿ ಮಾಡಬಹುದು.

೫ವಿಗಳು:— (೧) ಟೊಂಕದ ಮೇಲೆ ಕೈಗಳು. (೨) ಪಾದ ಬಿಡಿಸಿ ಜಿಗಿಯುವದು. (೩) ತೋಳುಗಳನ್ನು ಮೇಲಕ್ಕೆ, ಕೆಳಕ್ಕೆ ಮಾಡುವದು—ಮುಂಬದಿಗೆ, ಮಗ್ಗಲಿಗೆ, ಮೇಲ್ಗಡೆಗೆ. (೪) ವೊಣಕೈ (ಸ್ಥಾನ)ಗಳಲ್ಲಿ. ತೋಳುಗ

ಳನ್ನು ಮಣಿಸುವದು ಮತ್ತು ಅವುಗಳನ್ನು ಮುಂಬದಿಗೆ, ಮಗ್ಗಲಿಗೆ, ಮೇಲ್ಗಡೆಗೆ ಬೀಸುವದು.

(ಜ) ಧಡ (Trunk) ವನ್ನು ಮುಂಬದಿಗೆ ಬಗ್ಗಿಸುವದು.

(ಟ) ಧಡವನ್ನು ಮಗ್ಗಲಿಗೆ ಬಗ್ಗಿಸುವದು.

(ಒ) ಎಡ ಹಾಗೂ ಬಲಗಾಲುಗಳನ್ನು ಚಾಚುವದು— ಮುಂಬದಿಗೆ, ಮಗ್ಗಲಿಗೆ, ಮತ್ತು ಹಿಂಬದಿಗೆ.

(ಅ) ಮೊಣಕಾಲು ಮಣಿಸುವದು.

(ಕ) ಕಾಲು ಬಿಡಿಸಿ ಜಿಗಿಯುತ್ತ ತಲೆಯ ಮೇಲ್ಗಡೆಗೆ ಚಪ್ಪಾಳೆ ಇಕ್ಕುವದು; ಜಿಗಿದು ಕಾಲು ಜೋಡಿಸುತ್ತ ತೊಡೆಗಳ ಮೇಲೆ ಚಪ್ಪಾಳಿಸುವದು.

ಫ. ಡಂಬೆಲ್-ಕವಾಯಿತು:—

ಶಿಕ್ಷಕನು ಶರೀರದ ಬೇರೆ ಬೇರೆ ಭಾಗಗಳ ಚಲನವಲನಗಳನ್ನೊಳಗೊಂಡ ೬-೮ ಅಂಗಸಾಧನೆಗಳ ಗುಂಪನ್ನು ಯೋಜಿಸಿಕೊಳ್ಳಬೇಕು. ಕೆಳಗೆ ಕಾಣಿಸಿದ ರೀತಿಗಳನ್ನು ಉಪಯೋಗಿಸಬಹುದು. ಲಂಗಸಾಧನೆಗಳನ್ನು ಎರಡು ಅಥವಾ ನಾಲ್ಕು ಎಣಿಕೆಗಳಲ್ಲಿ ಮಾಡಬಹುದು.

ರೀತಿಗಳು.—ನಿಲ್ಲುವ ರೀತಿ—ಪಾದಗಳನ್ನು ಬಿಡಿಸಿ:—

ಡಂಬೆಲ್ಲುಗಳನ್ನು (ಅ) ಎದೆಯ ಮುಂಬದಿಗೆ ಒಂದಕ್ಕೊಂದು ಬಡೆಯುವದು (ಬ) ಹಿಂಬದಿಗೆ ಒಂದಕ್ಕೊಂದು ಬಡೆಯುವದು.

(ಕ) ತಲೆಯ ಮೇಲ್ಗಡೆಗೆ ಒಂದಕ್ಕೊಂದು ಬಡಿಯುವದು.

(ಡ) ಎಡ ಹಾಗು ಬಲ ಮೊಣಕಾಲುಗಳ ಕೆಳಗಡೆ ಒಂದಕ್ಕೊಂದು ಬಡೆಯುವದು.

(ಇ) ಧಡವನ್ನು ಬಾಗಿಸಿ, ಕಾಲ್ಬೆರಳುಗಳ ಹತ್ತರ ಒಂದಕ್ಕೊಂದು ಬಡೆಯುವದು

(ಫ) ಕಾಲು ಬಿಡಿಸಿ ಜಿಗಿಯುತ್ತ ತಲೆಯ ಮೇಲ್ಗಡೆಗೆ ಒಂದಕ್ಕೊಂದು ಬಡೆಯುವದು.

ಗ. ತಾಳಬದ್ಧವಾದ ಕೃತಿಗಳು:—

(೧) ಹಗ್ಗದ ಜಿಗಿದಾಟ. (೨) ಪ್ರತಿ ಎರಡನೆಯ ಮತ್ತು ನಾಲ್ಕನೆಯ ಎಣಿಕೆಗೆ ಚಪ್ಪಾಳೆ ಇಕ್ಕುತ್ತ ತಾಳಕ್ಕೆ ಸರಿಯಾಗಿ ಕಾಲು ಬಡೆಯುವದು.

೩) ಚಪ್ಪಾಳೆಯ ತಾಳಕ್ಕೆ ಅನುಸರಿಸಿ ನಡೆಯುವದು

೪) ಚಪ್ಪಾಳೆಯ ತಾಳಕ್ಕೆ ಅನುಸರಿಸಿ ಓಡುವದು.

ಹೆಣ್ಣುಮಕ್ಕಳ ಸಲುವಾಗಿ ತಾಳಬದ್ಧವಾದ ಕೃತಿಗಳು ಮತ್ತು ಆಟಗಳು:—

(೧) ಕಿಕಿಚೇ-ಪಾನ (೨) ಘುಗಡಿ— ಏಕಪಾತೀ ದೋ-ಪಾತೀ, ದಂಡಾಚೇ. (೩) ಝಿಮ್ಮಾ-ಟಾಳೀಚಾ ಚುಟಕೀಚಾ. (೪) ಟಿಪ್ಪ್ಯಾ-ಸಾದಾ ಪ್ರಕಾರಗಳು (ಜ) ಕರಾಸ-ಕರ ಯಾ (ಟ) ಶಿಡೀ (ಒ) ಟಿಪ್ಪಾ ಪಾಣೀ. (ಅ) ಅಶೀ-ಲವೆ, ತಶೀ-ಲವೆ.

ಹ. ಆಟಗಳು ಹಾಗೂ ಮುಜಲು(ಟಪ್ಪೆ)ಓಟದ ಪಂದ್ಯಗಳು:—

ಎಲ್ ಎಂ ಕೇ, ಕೇಎಸ್, ಪಿಎಸ್ ಎಸ್‌ಪಿ, ಬಿಈಎಸ್ ಟಿಟಿ, ಎಸ್ ಆರ್ ಇವುಗಳಲ್ಲಿ ಕೊಟ್ಟಂತೆ.

ಯು. ಬೀಡು ಬಿಡುವದು:— ವಿದ್ಯಾರ್ಥಿಗಳು ಶಾಲೆಯ ಸಮೀಪದಲ್ಲಿ ವರುಷದಲ್ಲಿ ಎರಡಾವರ್ತಿ ಹಗಲಿನಲ್ಲಿ ಮೂರು ಒಂದೇಸವನೆ ಎರಡು ದಿನ ಪರ್ಯಂತ ತಂಗಬೇಕು.

(ಪ್ರತಿ ದಿನ ೧೨ ತಾಸು

ಳನೆಯ ಇಯತ್ತೆ.

ಅ. ಶಾರೀರಿಕ ಚಟುವಟಿಕೆಗಳು.—

೧ನೆಯ ಇಯತ್ತೆ 'ಅ', ೨ನೆಯ ಇಯತ್ತೆಯ 'ಅ' ಮತ್ತು ೩ನೆಯ ಇಯತ್ತೆಯ 'ಅ'ಗಳಲ್ಲಿಯ ಮೂಲಭೂತ ಹಾಗೂ ನಿರಾತಂಕವಾದ ಚಲನವಲನಗಳ ಹೊರತಾಗಿ ಕೆಳಗೆ ಕಾಣಿಸಿದವುಗಳು:—

(೧) ಒಗೆಯುವದು:— (ಅ) ಹಾಕಿ ಚೆಂಡು, 'ಫ್ಲೇ-ಗ್ರೌಂಡ" ಆಟದ ಚೆಂಡುಗಳನ್ನು ಒಗೆಯುವದು; (ಬ

ಟಿನ್ನಿಸ್ ಚಂಡು, ಹಾಕಿ ಚಂಡುಗಳಿಂದ ಗುರಿಯಿಟ್ಟು ಒಗೆಯುವದು.

(೨) ಲಾಗ ಹಾಕುವದು ಮತ್ತು ಕಸರತ್ತುಗಳು:— ಬಂಡಿಗಾಲಿಗಳಂತೆ ಜೋಡಿಯಾಗಿ ಉರುಳುವದು ಇತ್ಯಾದಿ.

ಬ. ಕತೆಯ ಆಟಗಳು ಮತ್ತು ಸಾಭಿನಯ ಸಂಗೀತ:— ಪರಿಶಿಷ್ಟ ೨ರಲ್ಲಿ ಕೊಟ್ಟಂತೆ.

ಓಹಿಯೆದ ಮೂರನೆಯ ಪ್ರಕರಣದಲ್ಲಿ ಕೊಟ್ಟಂತೆ.

ಕ. ಬಿಈಎಸ್‌ಪಿಟಿ ದ ೧೩-೧೮ ಪಾಠಗಳಲ್ಲಿ ಕೊಟ್ಟ ಅಂಗಸಾಧನೆಗಳು.

ಡ. ಸರ್ವಾಂಗ ಸುಂದರ ವ್ಯಾಯಾಮ ಮಾಲಿಕೆ:—

(೧) ಫಾತಾ-ಚೌಡನ. (೨) ಮಿಶ್ರಹಾಥ್-ದೋ. (೩) ಕಮರ್-ಪವಿತ್ರಾ. (೪) ಕುಪ್-ಕಸ್-ದೋ. (೫) ಮೇರುತಾನ್. (೬) ಪೇಟ್-ಫುಟನ್. (೭) ದೋ-ಮುಪ್-ಮೋಲೇದಾರ್. (೮) ಕುದಾನ್-ತಾಲ್.

ಶಿಕ್ಷಕನು ಶರೀರದ ಬೇರೆ ಬೇರೆ ಭಾಗಗಳ ಚಲನವಲನಗಳನ್ನೊಳಗೊಂಡ ೬-೮ ಅಂಗಸಾಧನೆಗಳ ಗುಂಪನ್ನು ಯೋಜಿಸಿಕೊಳ್ಳಬೇಕು. ಮೂರನೆಯ ಇಯತ್ತೆಗೆ ಸೂಚಿಸಿದವುಗಳ ಹೊರತಾಗಿ ಕೆಳಗೆ ಕಾಣಿಸಿದ ಠೀವಿಗಳನ್ನು ಉಪಯೋಗಿಸಬಹುದು. ಅಂಗಸಾಧನೆಗಳನ್ನು ಎರಡು ಇಲ್ಲವೆ ನಾಲ್ಕು ಎಣಿಕೆಗಳಲ್ಲಿ ಮಾಡಬಹುದು.

ಠೀವಿಗಳು:— (೧) ಕುತ್ತಿಗೆಯ ಮೇಲೆ ಕೈಗಳು. (೨) ಹಿಮ್ಮಡಗಳನ್ನು ಎತ್ತರಿಸುವದು. (೩) ತೋಳುಗಳನ್ನು ಎತ್ತರಿಸುವದು—ಮುಂಬದಿಗೆ, ಮೇಲ್ಗಡೆಗೆ; ಮಗ್ಗಲಿಗೆ, ಮೇಲ್ಗಡೆಗೆ (೪) ತೋಳುಗಳನ್ನು ಮೊಣಕೈ (ಸ್ಥಾನ) ಗಳಲ್ಲಿ ಮಡಿಸುವದು. ಮತ್ತು ಅವುಗಳನ್ನು ಮುಂಬದಿಗೆ, ಮಗ್ಗಲಿಗೆ, ಮೇಲ್ಗಡೆಗೆ ಬೀಸುವದು. (೫) ಧಡವನ್ನು ಕೆಳಗಡೆಗೆ ಬಗ್ಗಿಸುವದು. (೬) ಧಡವನ್ನು ಮಗ್ಗಲಿಗೆ ತಿರುಗಿಸುವದು. (೭) ಮೊಣಕಾಲನ್ನು ಮುಂಬದಿಗೆ ಪಾಗೂ ಮಗ್ಗಲಿಗೆ ಇಟ್ಟು ಮಡಿಸುವದು. (೮) ಕಾಲನ್ನು ಎತ್ತರಿಸುವದು—ಮುಂಬದಿಗೆ, ಮಗ್ಗಲಿಗೆ, ಹಿಂಬದಿಗೆ. (೯) ಮೊಣಕಾಲು ಮಡಿಸುವದು. (೧೦) ಕಾಲು ಬಿಡಿಸಿ ಜಿಗಿಯುತ್ತ ತಲೆಯ ಮೇಲ್ಗಡೆಗೆ ಚಪ್ಪಾಳೆ ಇಕ್ಕುವುದು; ಜಿಗಿದು ಕಾಲು ಜೋಡಿಸುತ್ತ ತೊಡೆಗಳನ್ನು ಚಪ್ಪಾಳಿಸುವದು.

ಇ. ಉಪಕರಣರಹಿತ, ಕಟ್ಟುನಿಟ್ಟಿನ ಅಂಗಸಾಧನೆಗಳು:—

(೧) ಸಾದೀದಂಡ್. (೨) ಫುಟನ್‌ದಂಡ್. (೩) ಸಾದೀ ಬೈಠಕ್. (೪) ಸರಕ್ ಬೈಠಕ್.

ಫ. ಕವಾಯತು:— ಮೂಲಭೂತ ಠೀವಿಗಳನ್ನು ಮುಂದುವರಿಸುವದು. ಮೂರನೆಯ ಇಯತ್ತೆಯಲ್ಲಿ ಕಲಿತ ಚಲನವಲನಗಳ ಪುನರಾವರ್ತನೆಯ ಹೊರತಾಗಿ ಕೆಳಗಿನವುಗಳು:— (೧) ವಿರುದ್ಧ ದಿಶೆಯಲ್ಲಿ ತಿರುಗುವದು. (೨) ಮಗ್ಗಲಿಗೆ, ಹಿಮ್ಮಡಿಗೆ, ಹೆಜ್ಜೆ ಇಕ್ಕುವದು. (೩) "ಇಬ್ಬಿಬ್ಬರ" "ಮೂಮೂವರ" ಗುಂಪುಗಳನ್ನು ಮಾಡುವದು. (೪) ತಾಳಬದ್ಧವಾಗಿ ನಿಂತಲ್ಲಿಯೇ ನೆಲಕ್ಕೆ ಕಾಲು ಬಡೆಯುವದು. (೫) ಒಂಟೊಂಟಿಯಾಗಿ ಇಲ್ಲವೆ ಜೋಡಿ ಜೋಡಿಯಾಗಿ ಸಾಲಿನಲ್ಲಿ ಕೂಚು ಮಾಡುವದು.

ಗ. ಡಂಬೆಲ್ ಕವಾಯತು:— ಶಿಕ್ಷಕನು ಕೆಳಗಿನ ಠೀವಿಗಳನ್ನು ಉಪಯೋಗಿಸಿ ಶರೀರದ ಬೇರೆ ಬೇರೆ ಭಾಗಗಳ ಚಲನವಲನಗಳನ್ನೊಳಗೊಂಡ ೬-೮ ಅಂಗಸಾಧನೆಗಳ ಗುಂಪನ್ನು ಯೋಜಿಸಿಕೊಳ್ಳಬೇಕು. ಚಲನವಲನೆಯನ್ನು ನಾಲ್ಕು ಎಣಿಕೆಗಳಲ್ಲಿ ಮಾಡಬಹುದು.

ನಿಲ್ಲುವ ಠೀವಿ:— ಅವಶ್ಯ ಬಿದ್ದಂತೆ, ಪಾದ ಜೋಡಿಸಿ ಇಲ್ಲವೆ ಬಿಡಿಸಿ.

ಠೀವಿಗಳು.— ಡಂಬೆಲ್ಲುಗಳನ್ನು (೧) ಎದೆಯ ಮುಂಬದಿಗೆ ಹಾಗು ಹಿಂಬದಿಗೆ ಒಂದಕ್ಕೊಂದು ಬಡೆಯುವದು. (೨) ಎದೆಯ ಹಿಂಬದಿಗೆ ಮತ್ತು ಮುಂಬದಿಗೆ ಬಡೆಯುವದು. (೩) ತಲೆಯ ಮೇಲ್ಗಡೆಗೆ ಮತ್ತು ಹಿಂಬದಿಗೆ ಬಡಿಯುವದು. (೪) ಧಡವನ್ನು ಮುಂಬದಿಗೆ ಬಗ್ಗಿಸಿ ಎಡ ಮತ್ತು ಬಲ ಕಾಲ್ಬೆರಳಿನ ಹತ್ತರ ಬಡಿಯುವದು. (೫) ಧಡವನ್ನು ಎಡ ಮತ್ತು ಬಲ ಮಗ್ಗಲುಗಳಿಗೆ ತಿರುವಿ ಕಾಲುಗಳ ಮಧ್ಯದಲ್ಲಿ ಬಡಿಯುವದು. (೬) ಪಾದ ಬಿಡಿಸಿ ಜಿಗಿಯುತ್ತ ತಲೆಯ ಮೇಲ್ಗಡೆಗೆ ಬಡಿಯುವದು.

ಹ. ಕಾಠಿ (ಬಡಿಗೆ) ಕವಾಯತು.— ಶಿಕ್ಷಕನು ಶರೀರದ ಬೇರೆ ಬೇರೆ ಭಾಗಗಳ ಚಲನವಲನಗಳನ್ನೊಳಗೊಂಡ ೬-೮

ಅಂಗಸಾಧನೆಗಳ ಗುಂಪನ್ನು ಯೋಜಿಸಿಕೊಳ್ಳಬೇಕು. ಕೆಳಗಿನ ಶೀವಿಗಳನ್ನು ಉಪಯೋಗಿಸಬಹುದು. ಅಂಗಸಾಧನೆಗಳನ್ನು ಎರಡು ಇಲ್ಲವೆ ನಾಲ್ಕು ಎಣಿಕೆಗಳಲ್ಲಿ ಮಾಡಬಹುದು.

ಶೀವಿಗಳು.— ಪ್ರಾರಂಭದ ಶೀವಿ— ಅವಶ್ಯಬಿದ್ದಂತೆ ಪಾದಗಳನ್ನು ಕೂಡಿಸಿ ಇಲ್ಲವೆ ಬಿಡಿಸಿ

ಕಾಶಿಯನ್ನು (೧) ಮುಂದಕ್ಕೆ ಎತ್ತರವಾಗಿ ಎತ್ತರಿಸುವದು.

(೨) ಮೇಲ್ಗಡೆಗೆ ಸಮಾಂತರವಾಗಿ ಎತ್ತರಿಸುವದು.

(೩) ಎಡ ಹಾಗು ಬಲಮಗ್ಗಲುಗಳಿಗೆ ಸಮಾಂತರವಾಗಿ ಎತ್ತರಿಸುವದು.

(೪) ಎದೆಗೆ ಸಮಾಂತರವಾಗಿ ಎತ್ತರಿಸುವದು.

(೫) ಧಡವನ್ನು ಕೆಳಗಡೆಗೆ ಬಗ್ಗಿಸಿ ಸಮಾಂತರವಾಗಿ ಹಿಡಿಯುವದು.

(೬) ಕುತ್ತಿಗೆಯ ಹಿಂಬದಿಯಲ್ಲಿ ಹಿಡಿಯುವದು.

(ಸೂಚನೆ— ಅಂಗಸಾಧನೆಗಳನ್ನು ಮಾಡುವಾಗ ಹಿಮ್ಮಡಿಗಳನ್ನು ಎತ್ತರಿಸುವದು, ಕಾಲ್ಬೆರಳುಗಳಿಂದ ಸ್ಪರ್ಶಿಸುವದು, ಹೆಜ್ಜೆ ಇಕ್ಕುವದು, ಕಾಲನ್ನು ಎತ್ತರಿಸುವದು, ಮೊಣಕಾಲು ಬಾಗಿಸುವದು ಇತ್ಯಾದಿ ಪಾದದ ಇತರ ಚಲನವಲನಗಳನ್ನು ಸಹ ಮಾಡಬಹುದು.)

ಯ. ತಾಳಬದ್ಧ ಕೃತಿಗಳು:—

(೧) ಚಪ್ಪಾಳೆಯ ತಾಳಕ್ಕನುಸರಿಸಿ ಕಾಲು ಬಡಿಯುವದು, ಮತ್ತು ಎಡ, ಬಲ ಬದಿಗಳಿಗೆ ಮತ್ತು ವಿರುದ್ಧ ದಿಕ್ಕಿಗೆ ತಿರುಗುವದು.

(೨) ಪ್ರತಿ ಎರಡನೆಯ ಇಲ್ಲವೆ ನಾಲ್ಕನೆಯ ಎಣಿಕೆಗೆ ಚಪ್ಪಾಳೆಯಿಕ್ಕುತ್ತ, ನಾಲ್ಕು ಸಾರೆ ಹಗುರವಾಗಿ ಮತ್ತು ನಾಲ್ಕು ಸಾರೆ ಭಾರವಾಗಿ ಕಾಲು ಬಡಿಯುವದು.

(೩) ಚಪ್ಪಾಳೆಯ ತಾಳಕ್ಕನುಸರಿಸಿ ಒಂದು ಸಾಲಾಗಿ ಹಾಗೂ ಜೋಡು ಸಾಲಾಗಿ ಮುಂದಕ್ಕೆ ನಡೆಯುವದು.

(೪) ಚಪ್ಪಾಳೆಯ ತಾಳಕ್ಕನುಸರಿಸಿ ಒಂದು ಸಾಲಾಗಿ ಮತ್ತು ಜೋಡು ಸಾಲಾಗಿ ಮುಂದಕ್ಕೆ ಓಡುವದು.

(೫) ಓಡುತ್ತ ಹೆಜ್ಜೆ ಇಕ್ಕುವದು—ಪ್ರತಿ ನಾಲ್ಕನೆಯ ಎಣಿಕೆಗೆ ಬಗ್ಗುತ್ತ ಮುಂಬದಿಗೆ, ಎಡ ಹಾಗೂ ಬಲಮಗ್ಗಲುಗಳಿಗೆ.

ಹೆಣ್ಣುಮಕ್ಕಳ ಸಲುವಾಗಿ ತಾಳಬದ್ಧ ಕೃತಿಗಳು ಹಾಗೂ ಆಟಗಳು—

(೧) ಕಿಕೀಜಿಪಾನ. (೨) ಘುಗಡಿ–ಬಸ, ಕಾಸವ, ಲೋಳಣ, ನಖುಲ್ಯಾಂ (೩) ಝಿಮ್ಮಾ-ಪಂಖೀ, ಸಾತಾರೀ, ಲಾಡೂ, ಫೇರ. (೪) ಟಿಪ್ಪ್ಯಾ—ಸಾದಾ ಪ್ರಕಾರಗಳು. (೫) ಅಡವಳ ಫೆಮ್, ಪಡವಳಫೆಮ್. (೬) ಹಿಂಗಣ ಬೇಟ. (೭) ಓಧಾಓಢೀ. (೮) ಝುರಚಿ. (೯) ಪಿಂಗಾ. (೧೦) ಭಲೇಭಲ.

ಜ. ಮೇಲಾಟಗಳು (Athleties).—

(೧) ೫೦ ಯಾರ್ಡುಗಳ ಓಟ. (೨) ನಿಂತಲ್ಲಿಂದ ಮತ್ತು ಓಡುತ್ತ ಬಂದು ಉದ್ದಜಿಗಿತ. (೩) ಎತ್ತರ ಜಿಗಿತ. (೪) ಟೆನಿಸ್ ಮತ್ತು ಕ್ರಿಕೆಟ್ ಚಂಡಿನ ಒಗೆತ. (೫) ಬಟಾಟಿ ಶರ್ಯತ್ತು.

ಖ. ಕಾದಾಟಗಳು— ಕುಸ್ತಿಯ ಸಾದಾ ಹಿಡಿತಗಳು.

ಲ. ಆಟಗಳು ಮತ್ತು ಮಜಲು ಓಟಗಳು:—

ಎಲ್ಎಂಕೆ, ಕೆಎಸ್, ಪಿಎಸ್ ಎಸ್‌ಪಿ, ಬಿಳಿಎಸ್ ಪಿಟಿ, ಓಪಿವಿ, (೬೦-೭೭ ಪುಟಗಳಲ್ಲಿ) ಎಂಎ ಮತ್ತು ಎಸ್ ಆರ್‌ಗಳಲ್ಲಿ ಕೊಟ್ಟಂತೆ. ಪರಿಶಿಷ್ಟ ೨ರಲ್ಲಿ ಕೊಟ್ಟಂತೆ.

ಮ. ಬೀಡು ಬಿಡುವದು—(೧) ಹಳ್ಳಿ ಇಲ್ಲವೆ ಪಟ್ಟಣದ ಹೊರಗೆ ವರುಷದಲ್ಲಿ ಎರಡಾವರ್ತಿ ಹಗಲಿನಲ್ಲಿ ಮಾತ್ರ ಒಂದೇಸವನೆ ಎರಡು ದಿನ ತಂಗಬೇಕು.

ಅಥವಾ

(೨) ವಿದ್ಯಾರ್ಥಿಗಳು ಹಳ್ಳಿ ಇಲ್ಲವೆ ಪಟ್ಟಣದ ಹೊರಗಡೆ ವರುಷದಲ್ಲಿ ಒಂದು ಸಲ ಎರಡು ದಿವಸ ಬೀಡು ಬಿಡುವದು.

ಪರಿಶಿಷ್ಟ ೧.

ಶಾರೀರಿಕ ಶಿಕ್ಷಣದ ಕಾರ್ಯಕ್ರಮವನ್ನು ತೃಪ್ತಿಕರವಾಗಿ ನಿರವೇರಿಸಲೋಸುಗ ಶಿಕ್ಷಕರಿಗೆ ಲಾಭಕರವಾಗುವ ಸಾಮಾನ್ಯ ಸೂಚನೆಗಳು:—

೧. ಶಾರೀರಿಕ ಶಿಕ್ಷಣದ ಅವಧಿಗಳು:—

ಪ್ರಾಥಮಿಕ ಶಾಲೆಗಳ ೧೦ಂಚ ಳನೆಯ ಇಯತ್ತೆಗಳಲ್ಲಿ ಶಾರೀರಿಕ ಶಿಕ್ಷಣದ ಸಲುವಾಗಿ ಪ್ರತಿ ದಿನ ೩೦ ರಿಂದ ೪೦ ನಿಮಿಷಗಳ ವರೆಗಿನ ಒಂದು ಅವಧಿಯು ಇರಲಿಕ್ಕೆ ಬೇಕು. ಒಂದು ವರುಷದಲ್ಲಿಯ ಅವಧಿಗಳ ಕನಿಷ್ಠ ಸಂಖ್ಯೆಯು ೨೭೦-ಕ್ಕಿಂತ ಕಡಿಮೆ ಇರಕೂಡದು.

ನಿತ್ಯ ಶಾಲಾವಧಿಯು ೧೧ರಿಂದ ೫ರ ವರೆಗೆ ಇರುವುದಾದರೆ ಶಾರೀರಿಕ ಶಿಕ್ಷಣದ ಅವಧಿಯು, ಶಾಲಾವಧಿಯ ಕೊನೆಯ ಭಾಗದಲ್ಲಿರಬೇಕು ಮತ್ತು ಶಾಲೆಯು ನಿತ್ಯ ೨ ಅವಧಿಗಳಲ್ಲಿ (ಮುಂಜಾವಿನಲ್ಲಿ ಹಾಗೂ ಮಧ್ಯಾಹ್ನದ ನಂತರ) ನಡೆಯುವದಾದರೆ ಶಾರೀರಿಕ ಶಿಕ್ಷಣದ ಸಲುವಾಗಿ ಮುಂಜಾವಿನಲ್ಲಿ ಒಂದು ಅವಧಿ ಇರಬೇಕು. ಶಾರೀರಿಕ ಶಿಕ್ಷಣದ ಅವಧಿಯಲ್ಲಿ ಚಟುವಟಿಕೆಗಳನ್ನು ಕೆಳಗಿನಂತೆ ಹಂಚಬೇಕು:—

(೧) ೫ ನಿಮಿಷಗಳು— ವ್ಯಾಸ್ತಾವಿಕ ಚಟುವಟಿಕೆಗಳು; ೧೦-೧೫ ನಿಮಿಷಗಳು—ಕಟ್ಟು ನಿಟ್ಟಿನ ಚಟುವಟಿಕೆಗಳು ಮತ್ತು ೧೫-೨೦ ನಿಮಿಷಗಳು—ಆಟಗಳು.

ಅವಧಿಯಲ್ಲಿ ನಡುನಡುವೆ ಯೋಗ್ಯ ವಿಶ್ರಾಂತಿ ವಿರಾಮ ಗಳಿರಬೇಕು.

೨. ವಿದ್ಯಾರ್ಥಿಗಳ ವರ್ಗೀಕರಣ:—

(೧) ಎಲ್ಲ ಬಾಲಕರು ಒಂದೇ ವೇಳೆಯಲ್ಲಿ ಶಾರೀರಿಕ ಚಟುವಟಿಕೆಗಳನ್ನು ಕೊಡಬೇಕಾಗಿ, ಶಾರೀರಿಕ ವಯಸ್ಸಿನ ಮೇರೆಗೆ ೧ನೆಯ ಮತ್ತು ೨ನೆಯ ಇಯತ್ತೆಗಳಲ್ಲಿ, ಬಾಲಕ ಬಾಲಿಕೆಯರನ್ನು ಪ್ರತ್ಯೇಕಿಸುವ ಅವಶ್ಯಕತೆಯಿಲ್ಲ. ೩ನೆಯ ಮತ್ತು ೪ನೆಯ ಇಯತ್ತೆಗಳಲ್ಲಿ, ಅವಶ್ಯವೆನಿಸಿದರೆ, ಅವರನ್ನು ಪ್ರತ್ಯೇಕ ಗುಂಪುಗಳಾಗಿ ಮಾಡಬಹುದು. ಮತ್ತು (೨) ಶಕ್ಯವಿದ್ದಲ್ಲೆಲ್ಲ ವೈದ್ಯಕೀಯ ಸಲಹೆಯ ಮೇರೆಗೆ.

೩. ಸಾಧನ ಸಾಮಗ್ರಿಗಳು:—

(೧) ೨೦೦ ಬಾಲಕರುಳ್ಳ ಪ್ರಾಥಮಿಕ ಶಾಲೆಗಳಿಗಾ ಸಾಮಾನ್ಯ ಪರಿಸ್ಥಿತಿಗಳಲ್ಲಿ:—

(೧) ಬೇರೆ ಬೇರೆ ಗಾತ್ರದ ಚೆಂಡುಗಳು—೬ ಯಿಂದ ಮಾಡಿದ—೧೦-೧೫; (೨) ಅವರೆ ಮುಂ ಬೀಜಗಳ ಚೀಲಗಳು; (೩) ಅರಿವೆಯ ಪಟ್ಟಿಗಳು (೩ athers) (೪) ಜಿಗಿದಾಟದ ಹಗ್ಗಗಳು—೨೦ (೫) ಏ ಹಗ್ಗಗಳು—೩, ಪ್ರತಿಯೊಂದು ೨೦ ಫೂಟು ಉದ್ದ ದಪ್ಪ; (೬) ಉಸುಬಿನ ಪೆಟ್ಟಿಗೆ. (೭) ಲೇಝಿಮು ೫ ಡಝನ (೮) ಲಾಠಿಗಳು—೫ ಡಝನ; (೯) ಗಳು—೩೬ ಜೋಡಿ; (೧೦) ಉಯ್ಯಾಲೆಗಳು—೨- (೧೧) ಬೊಗರೆಗಳು, ಬೆನಕಗಳು, ಚಿಣಿಫಣಿಗಳು.

೪. ಸಮವಸ್ತ್ರಗಳು:—

(ಅ) ಬಾಲಕರ ಸಲುವಾಗಿ— ಲಂಡ ಚಣ್ಣ, ' ಬ್ಲೂಸ್ಯ' ಇಲ್ಲವೆ 'ಖಾಕಿ' ಇಲ್ಲವೆ 'ಬಿಳಿ' ಬಣ್ಣದ್ದು ಹ ಇಷ್ಟವಾದುದು; ಲಂಡ ಅಂಗಿ (ಬಿಳಿದು)

ಸೂಚನೆ:— ಲಂಗೋಟಿಯನ್ನು ಉಪಯೋಗಿಸು ಅನಿವಾರ್ಯವೆಂದು ಬಾಲಕರಿಗೆ ಕಲಿಸಬೇಕು.

(ಬ) ಬಾಲಿಕೆಯರ ಸಲುವಾಗಿ— ಬಾಲಿಕೆಯರು ೧ ವಯಸ್ಸಿನ ವರೆಗೆ ಅಂದರೆ, ಪ್ರಾಥಮಿಕ ಶಾಲೆಯ ನೆಯ ಇಯತ್ತೆಯ ಕೊನೆಯ ವರೆಗೆ ಮೇಲಿನ ಸಮ ಗಳನ್ನೇ ಉಪಯೋಗಿಸಬೇಕು.

ಸೂಚನೆ— ಉತ್ಸವ, ಸಮಾರಂಭ ಮುಂತಾದ ಸ ಗಗಳಲ್ಲಿ ಗಾಂಧಿ ಟೊಪ್ಪಿಗೆಯನ್ನು ಉಪಯೋಗಿಸಬಹ

೫. ಅಧ್ಯಾಪಕ ವರ್ಗದವರಿಗೆ ಸಲಹೆಗಳು:—

ಶಾರೀರಿಕ ಶಿಕ್ಷಣದ ಕಾರ್ಯಕ್ರಮದಲ್ಲಿ ಎಲ್ಲ ಶಿಕ್ಷ ಮನಃಪೂರ್ತಿಯಾಗಿ ಭಾಗವಹಿಸಬೇಕು. ತಮ್ಮ ಸ ಉದಾಹರಣೆಯಿಂದ, ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಶಾರೀ ಶಿಕ್ಷಣದ ಬಗೆಗೆ ನಿಜವಾದ ಆಸಕ್ತಿಯನ್ನುಂಟುಮಾ ಪ್ರಯತ್ನಿಸಬೇಕು ಮತ್ತು ಕೊನೆಯದಾಗಿ, ಅವರು ಶಾರೀರಿಕ ಶಿಕ್ಷಣವು ಶಿಕ್ಷಣದ ಇತರ ವಿಷಯಗಳಷ್ಟೇ ಮಹ

ದುದೆಂಬದನ್ನು ಬಾಲಕರು ಮನಗಾಣುವಂತೆ ಮಾಡ ಬೇಕು.

೬. ಅವಗಾಹನೆಗಾಗಿ ಸೂಚಿಸಿದ ಪುಸ್ತಕಗಳು:—

೧. ಎಲ್‌ಎಮ್‌ಕೆ. (LMK.) = 'ಲಹಾನ ಮುಲಾಂಚೆ ಖೇಳ' ಲೇ. ವಾಯ್. ಜಿ. ಮೋಡಕ.

೨. ಕೇಎಸ್ (KS) = 'ಖೇಳಾಂಚೆ ಸಂಗ್ರಹ' ಲೇ. ಮಿ. ಜೋಶಿ ಹಾಗು ಡಾ॥ ಎಮ್. ಎಸ್. ನಾತು.

೩. ಪಿಎಸ್‌ಎಸ್‌ಪಿ (PSSP) = 'ಪ್ರಾಥಮಿಕ ಶಾಳಾಂತೀಲ ಶಾರೀರಿಕ ಶಿಕ್ಷಣ ಪದ್ಧತಿ' (ಮುನಿಸಿಪಲ್ ಸ್ಕೂಲ್ ಕಮೀಟಿ, ಬಾಂದ್ರಾ)

೪. ಬಿಇಎಸ್‌ಪಿಟಿ (BESPT). = 'ಬೋರ್ಡ್ ಆಫ್ ಎಜ್ಯುಕೇಶನ್ ದ ಸಿಲಬಸ್ ಆಫ್ ಫಿಜಿಕಲ್ ಟ್ರೇನಿಂಗ, ೧೯೩೩'

೫. ಓಪಿಏ (OPA) = "ಅವರ್ ಫಿಜಿಕಲ್ ಆ್ಯಕ್ಟಿವಿಟೀಜ್" ಲೇ. ದಿ ಓಲ್ಡ್ ಸ್ಟೂಡಂಟ್ಸ ಅಸೋಸಿಯೇಶನ್, ಟ್ರೇನಿಂಗ್ ಇನ್‌ಸ್ಟಿಟ್ಯೂಟ್ ಫಾರ ಫಿಜಿಕಲ್ ಎಜುಕೇಶನ್, ಕಾಂದಿವಲಿ.

೬. ಎಮ್‌ಏ (MA) = 'ಮಕ್ಕಳ ಆಟಗಳು' ಲೇ. ವ್ಹಿ. ಕೆ. ಜವಳಿ, ಎಮ್. ಈಡಿ.

೭. ಎಸ್‌ಆರ್ (SR) = 'ಸಾದೀ ರಮತೋ' ಲೇ. ಮಿ. ಚಿನುಭಾಯಿ ಶಹಾ.

೮. ವ್ಹಿಏ (VA) = 'ವ್ಯಾಯಾಮಾಚಾ ಅಭ್ಯಾಸ' ಲೇ. ಮೆಸರ್ಸ ಗುಪ್ತೆ ಹಾಗೂ ಗುರವ.

೯. ಎಸ್‌ಎಸ್ (SS) = 'ಶರೀರ ಶಿಕ್ಷಣ' ಲೇ. ಮಿ. ಕೆ. ಜಿ. ನಾಡಗೀರ.

೧೦. ಆರ್‌ಏಕೆ (RAK) = 'ರಮತೊ ಅನೆ ಖೇಲ ಕೂದ' ಲೇ. ಮಿ. ಚಿನುಭಾಯಿ ಶಹಾ.

೧೧. ಎಸ್‌ವ್ಹಿ (SV) = 'ಸಂಘ ವ್ಯಾಯಾಮ' ಲೇ. ಮಿ. ಚಿನುಭಾಯಿ ಶಹಾ.

೧೨. ಪಿಎಸ್‌ವ್ಹಿಏ (PSVA) = 'ಪ್ರಾಥಮಿಕ ಶಾಲೋಮಾಟೆ ವ್ಯಾಯಾಮ ಅನೆ ಅಭ್ಯಾಸಕ್ರಮ' ಲೇ. ಮಿ. ಚಿನುಭಾಯಿ ಶಹಾ.

೧೩. ಕೆ (K) = 'ಕವಾಯತ' ಲೇ. ಮಿ. ಚಿನುಭಾಯಿ ಶಹಾ.

೧೪. ಪಿಪಿಈಡಿಜಿ (PPEDG) = 'ಪ್ರೋಗ್ರಾಮ ಆಫ್ ಫಿಜಿಕಲ್ ಎಜ್ಯುಕೇಶನ್ ಫಾರ ಗರ್ಲ್ಸ್ ಸ್ಕೂಲ್ಸ್' ಲೇ. ಮಿಸೆಸ್ ಬಕ್.

೧೫. ಮುಂಬಯಿ ಸರಕಾರದ ಶಿಕ್ಷಣ ಖಾತೆಯಿಂದ (ಪ್ರಾದೇಶಿಕ ಭಾಷೆಗಳಲ್ಲಿ) ಪ್ರಾಥಮಿಕ ಹಾಗೂ ಟ್ರೇನಿಂಗ ಸಂಸ್ಥೆಗಳ ಸಲುವಾಗಿ ಪ್ರಕಟಿಸಲಾದ ಶಾರೀರಿಕ ಶಿಕ್ಷಣದ ಅಭ್ಯಾಸ ಪತ್ರಿಕೆಯು. ಸಿಲಬಸ್ ಆಫ್ ಫಿಜಿಕಲ್ ಆ್ಯಕ್ಟಿವಿಟೀಜ್).

ಸೂಚನೆ— ಅವಗಾಹನೆಗಾಗಿ ಮೇಲ್ಕಾಣಿಸಿದ ಪುಸ್ತಕಗಳು ಮತ್ತು ಪರಿಶಿಷ್ಟ ೨ರಲ್ಲಿ ಕಾಣಿಸಿದವುಗಳೂ ಕೇವಲ ಮಾರ್ಗದರ್ಶನಕ್ಕಾಗಿ ಮಾತ್ರ ಇರುತ್ತವೆ.

ಪರಿಶಿಷ್ಟ ೨.

೧. ಅನುಕರಣಗಳು.

(೧) ಪ್ರಾಣಿ

(೧) ಆಕಳಿನಂತೆ, ಕೋಳಿಯಂತೆ, ಕಾಗೆಯಂತೆ, ಪಾರಿವಾಳದಂತೆ ಒದರುವದು ಇಲ್ಲವೆ ಕೂಗುವದು. ಕಪ್ಪೆಗಳಂತೆ, ಮುಂಗಗಳಂತೆ, ಜಿಗಿದಾಡುವದು. (೨) ಹೋರಿಯಂತೆ, ಎಮ್ಮೆ ಕೋಣಗಳಂತೆ ಒದರುವದು; ಕುದುರೆಯಂತೆ ಹೇಕರಿಸುವದು ಇತ್ಯಾದಿ; ಕುದುರೆಯಂತೆ ನಾಗಾಲೋಟದಿಂದ ಓಡುವದು. (೩) ನಾಯಿಗಳ ಕಾದಾಟ, ಹುಂಜಗಳ ಕಾದಾಟ, ಗಾಯಗೊಂಡ ನಾಯಿ (೪) ಸಿಂಹ, ಹುಲಿ, ಚಿರ್ಚ ಇವುಗಳಂತೆ ಗರ್ಜಿಸುವದು; ಜಗಳಾಡುವ ಬೆಕ್ಕು, ನಾಯಿ ಮುಂತಾದವುಗಳ ಅನುಕರಣ ಮಾಡುವದು.

(೨) ಯಂತ್ರ— (೧) ಮೋಟಾರಿನ ತುತೂರಿ, ಎಂಜನ್ನಿನ ಸೀಟಿ, ನೀರನ್ನು ಜಗ್ಗುವ ಯಂತ್ರ ಇವುಗಳ ಶಬ್ದವನ್ನು ಅನುಕರಣ ಮಾಡುವದು.

(೨) ಮೋಟಾರು, ಉಗಿಬಂಡಿ, ಪವನಚಕ್ಕೆ ಇವುಗಳನ್ನು ನಡೆಯಿಸುವದು.

(೩) ಉಗಿಬಂಡಿಯಂತೆ ಓಡುವದು, ವಿಮಾನಿನಂತೆ ಹಾರುವದು.

(೩) ಔದ್ಯೋಗಿಕ—

(೧) ಅಗಸ, ಸವಾತ ಮತ್ತು ಕೋಲುಕುದುರೆ, ಟಾಂಗಾವಾಲಾ, ಕಟ್ಟಿಗೆ ಕಡಿಯುವವ, ನೀರಿನಲ್ಲಿ ನಡೆಯುವದು.

(೨) ಹವಾಲ, ಕಟ್ಟಿಗೆ ಕೊರೆಯುವದು, ನೀರನ್ನು ಜಗ್ಗುವದು, ನವೀ ಅಜೆಗೆ ಈಸುವದು.

(೩) ಹೊಲದಲ್ಲಿಯ ಒಕ್ಕಲಿಗ—ಅಗಿಯುವ, ರೆಂಟೆ ಹೊಡೆಯುವ; ತೋಟಿಗ—ನೀರು ಹಣಿಸುವ, ನೀರು ಜಗ್ಗುವ.

(೪) ಕುಟ್ಟು ಹಾಕುವದು, ಮುಷ್ಟಿಯುದ್ಧ, ಪೋಲೀಸನೂ ಕಳ್ಳನೂ, ಸುಗ್ಗಿ ಮಾಡುವದು, ಕುರಿಗಳನ್ನು ಜೋಪಾನ ಮಾಡುವ ಕುರುಬ.

(೪) ಅಂಗವಿನ್ಯಾಸ ಮತ್ತು ಠೀವಿಗಳು—

(೧) ವಿಠೋಬ, ಹನುಮಂತ, ವೆಂಕಟೇಶ, ಮುಂತಾದವರಂತೆ ನಿಲ್ಲುವದು.

(೨) ಬಾಣ ಬಿಡುವ ರಾಮ, ಸಿದ್ಧತೆಯಲ್ಲಿದ್ದ ಶಿಪಾಯಿ, ಗಸ್ತೀ ಮಾಡುವ ಸೈನಿಕ, ಬುದ್ಧ ಅಥವಾ ಋಷಿಯಂತೆ ಕೂಡ್ರುವದು.

(೩) ತಲೆಯ ಮೇಲೆ, ಟೊಂಕದ ಮೇಲೆ, ಹೆಗಲ ಮೇಲೆ, ಬೆನ್ನಮೇಲೆ ಭಾರ ಹೊತ್ತು ನಡೆಯುವದು, ಸರಸ್ವತಿಯಂತೆ, ಶಂಕರರಂತೆ ಕೂಡ್ರುವದು, ಸೈನಿಕನಂತೆ ಕೂಚು ಮಾಡುವದು.

(೪) ಪ್ರಾಥಮಿಕ ಕುಣಿತದ ಠೀವಿಗಳ (ಭಂಗಿಗಳ) ಪುನರಾವರ್ತನೆ.

೨. ಕಥಾರೂಪದ ಆಟಗಳು

ಸೂಚನೆ— ಅಭಿನಯಕ್ಕೆಳಸುವ, ಕೇಳಿದ ಅಥವಾ ಓದಿದ ಕಥೆಗಳಿಗೆ ಮೊದಲ ಪ್ರಾಶಸ್ತ್ಯ ದೊರೆಯಬೇಕು. ಮಕ್ಕಳ ಪುಸ್ತಕಗಳಿಂದ ಹಾಗೂ ಬಾಲ ಸಾಹಿತ್ಯದಿಂದ ಕಥೆಗಳನ್ನು ಆಯ್ದುಕೊಳ್ಳಬಹುದು.

ಇಯತ್ತೆ ೧:— (೧) ನೀರಡಿಸಿದ ಕಾಗೆ. (೨) ನರಿಯೂ ದ್ರಾಕ್ಷೆಯ ಹಣ್ಣುಗಳೂ. (೩) ಮಂಗವೂ ಬಡಿಗನೂ (೪) ಮೋಸಗಾರನೇ ಮೋಸಹೋದನು ಅಥವಾ ಶೋಧಿಸಲ್ಪಟ್ಟ ಕಳ್ಳ. (೫) "ದಿ ಪಿಗ್ ಫೈಂಡ್ಸ್ ಹಿಜ್ ಬ್ರದರ್"

ಇಯತ್ತೆ ೨:— (೧) ಭೀಮನೂ ಬಕಾಸುರನೂ. (೨) ಜೀವ, ದನಗಾಯಿ. (೩) ಭೂಮಿಯು ಒಡೆದು ಚೂರು ಚೂರಾಗುತ್ತದೆ ('ದಿ ಅರ್ಥ್ ಈಜ್ ಶ್ಯಾಟರ್ಡ್'). (೪) ಅಜಾತಕ ಕಥೆ.

ಇಯತ್ತೆ ೩:— (೧). ಹಜರತ ಪೈಗಂಬರರೂ ಕಟ್ಟಿಗೆ ಕಡೆಯುವವನೂ. (೨) ಕತ್ತೆಯೂ ಉಪ್ಪು ಮಾರುವನೂ. (೩) ಹುಲಿದೊಗಲಿನಲ್ಲಿಯ ಕತ್ತೆ. (೪) ಹೆಸರಿನಲ್ಲೇನಿದೆ? (೫) ಠಕ್ಕ ನರಿಯೂ ಮೂರ್ಖ ಒಂಟೆಯೂ.

ಇಯತ್ತೆ ೪:— (೧) ತೋಳವೂ ಕುರಿ ಮರಿಯೂ. (೨) ಮಂಗವೂ ಟೊಪ್ಪಿಗೆ ಮಾರುವವನೂ. ೩) ನರಿಯೂ ಕಾಗೆಯೂ. ೪) ನಾವಲಿಗ ಅಲಿ ಹಾಗೂ ಕಟ್ಟಿಗೆ ಕಡಿಯುವವ. (೫) ಹನುಮಂತನೂ ರಾವಣನೂ.

೩. ಅಭಿನಯ

ಇಯತ್ತೆ ೧:— ೧) ಹಾವಾಡಿಗ. ೨) ಅಪತ್ತಿಗಾಗುವವನೇ ನಿಜವಾದ ಸ್ನೇಹಿತನು. ೩) "ದಿ ಮಾಸ್ಟರ್ ಪಿಗ್ ಫೈಂಡ್ಸ್ ಹಿಜ್ ಬ್ರದರ್", ಮುಂತಾದವುಗಳು.

ಇಯತ್ತೆ ೨:— ೧) ಬಾಲ ಕಳೆದುಕೊಂಡ ನರಿ. ೨) ದುರಗಮುರಗಿ ಅಥವಾ ಖಡಕ ಲಕ್ಷ್ಮಿ. ೩) ಕುರುಡನು ಹಾಗು ಅವನ ಹೆಳವ ಮಿತ್ರನು. ೪) ಚಕ್ರವ್ಯೂಹದಲ್ಲಿಯ ಅಭಿಮನ್ಯು, ಮುಂತಾದವುಗಳು.

ಇಯತ್ತೆ ೩:— ೧) ರಾಮ ರಾವಣರ ಯುದ್ಧ. ೨) ಶಿಬಿಚಕ್ರವರ್ತಿ. ೩) ಪ್ರಹ್ಲಾದ ಮತ್ತು ಹಿರಣ್ಯಕಶ್ಯಪು.

೪) ರಣರಂಗದಲ್ಲಿಯ ಉತ್ತರಕುಮಾರ ಮುಂತಾದವುಗಳು.

ಇಯತ್ತೆ ೪:— ೧) (ತೆನ್ನಾಲಿ) ರಾಮಕೃಷ್ಣ ನುತ್ತು ಆಕೆಬುರುಕ ಬ್ರಾಹ್ಮಣರು. ೨) ರಂಗಾಂಸಿ ಲಕ್ಷ್ಮೀಬಾಯಿ. ೩) ಗಾಂಧೀಜಿಯ ದಾಂಡಿಯ ದಂಡಯಾತ್ರೆ.

೪. ಸುಲಭ ಸಂಘಟನೆಯ ಆಟಗಳು.

ಇಯತ್ತೆ ೧:— ೧) ಆಯ್ಲ ಅ್ಯಂಡ ಟ್ಯಾಗ್. (೨) ಸನ್ ಅ್ಯಂಡ್ ಶಾಡೊ. ೩) ಹೆಡ್ ಟ್ಯಾಗ್. ೩) ಸಿಂಪಲ್ ಟ್ಯಾಗ್ ಇನ್ ಎ ಸರ್ಕಲ್. ೫) ನಂಬರ್ ಗೇಮ್. ೬) ಸ್ಟೋನ್ ಟ್ಯಾಗ್. ೭) ಆಯ್ ನೇ 'ಸ್ಟೂಪ್'. ೮) ಇಮಿಟೇಶನ್ ಟ್ಯಾಗ್. ೯) ಸ್ಪಡ್ ಬಾಲ್. (೧೦) ಸರ್ಕಲ್ ಸ್ಪ್ಯಾಟ್.

ಇಯತ್ತೆ ೨:—೧) ಬಾಯ್ಲರ್ ಬರ್ಸ್ಟ್. ೨) ಇಂಗೆ ಬಾ ೩) ಹಾಯ್ಡ್ ಅ್ಯಂಡ್ ಸೀಕ್. ೪) ಕ್ಯಾಟ್ ಅ್ಯಂಡ್ ಮೌಸ್. ೫) ವಾಲ್ ಬಾಲ್. ೬) ಲ್ಯಾಂಬ್ ಅ್ಯಂಡ್ ದಿ ಉಲ್ಫ್. ೭) ಪುಸ್ಸ ಇನ್ ದಿ ಕಾರ್ನರ್. ೮) ಸ್ಟ್ಯಟೂಟ್. ೯) ಫಾಕ್ಸ ಅ್ಯಂಡ್ ಸ್ಕ್ವಿರಲ್. ೧೦) ಫ್ರಾಗ್ ಇನ್ ದಿ ಸೀ. ೧೧) ಗುಡ್ ಮಾರ್ನಿಂಗ್. ೧೨) ಶಾಡೊ ಟ್ಯಾಗ್. ೧೩) ಸೋರ್ ಟ್ಯಾಗ್.

ಇಯತ್ತೆ ೩:— ೧) ಸೇವ್ ಸಾಯ್ಡ್ ಟ್ಯಾಗ್. ೨) ಆಟ್ಟಿಚ್ ಟ್ಯಾಗ್. ೩) ಚೇನ್ ಟ್ಯಾಗ್. ೪) ಸಿಟಿಂಗ್ ಸರ್ಕಲ್ ಟ್ಯಾಗ್. ೫) ಕ್ಯಾಪ ಸ್ಕ್ಯಾಟ್ಯಿಂಬಲ್. ೬) ಸ್ನೇಕ್ ಕ್ಯಾಚ್. ೭) ಸ್ಕ್ಯಾವ್ಯಟ್ ಟ್ಯಾಗ್. ೮) ಸ್ವಿಮ್ಮಿಂಗ್ ದಿ ಕ್ಯಾಸಲ್. ೯) ಸ್ಟ್ರಾಯಯ್ಡ್ಡ ಅ್ಯಂಡ್ ಚೇಜ್. ೧೦) ಟ್ರ್ಯಾವಲಿಂಗ್ ಆಲ್ಫ್ಸ. ೧೧) ಕ್ಯಾಚ್ ದಿ ಕೇನ್. ೧೨) ದಿಸ್ ಇನ್ ಮಾಯ್ ಎಲ್ಬೊ. ೧೩) ಡೂ ದಿಸ್ ಡೂ ದ್ಯಟ್. ೧೪) ಗ್ರೂಪಿಂಗ್. ೧೫) ಸರ್ಕಲ್ ರಶ್. ೧೬) ವೆದರ್ ಕಾಕ್. ೧೭) ಕ್ರಾಸಿಂಗ್ ದಿ ಬುಕ್. ೧೮) ರಾಮ ಅ್ಯಂಡ ರೋಹಿಣಿ.

ಇಯತ್ತೆ ೪:— ರೌಂಡ್ ಅ್ಯಂಡ್ ರ್ಯಾಬಿಟ್. ೨) ಜಂಪ್ ದಿ ಶಾಟ್. ೩) ಹಾಯ್ಡ್ ಅ್ಯಂಡ ಸೀಕ್ ಇನ್ ಗ್ರೂಪ್ಸ. ೪) ವ್ಹಾಟ್ ಈಜ್ ದಿ ಟಾಯ್ಮ್, ಮಿಷ್ಟರ್ ವುಲ್ಫ್. ೫) ಟೂ (Two) ಡೀಪ್. ೬) ಆರ್ಮ್ ಟು ಆರ್ಮ್ ಟ್ಯಾಗ್. ೭) ರಿಯ್ಡರ್ ಟ್ಯಾಗ್. ೮) ಎಕ್-ಎಕ್-ಎ-ಟೂಮ್-ಟೂಮ್. ೯) ಸರಬಡಗಿ. ೧೦) ಸರ್ಕಲ್ ರಶ್. ೧೧) ಕಾನ್-ಕಾನ್-ಉತ್ತತ್ತಿ. ೧೨) ಮಂಕೀ ಅ್ಯಂಡ್ ಸ್ಟಿಕ್. ೧೩) ಫಣಿ ಚಂಡ್ (ಕಂಟ್ರಿ ಜೇಸ್ ಬಾಲ್). ೧೪) ಸಿಕ್ಸ್ ಡಡ್ಸ್. ೧೫) ಚಿಣಫಣಿ-ಕಾಂಪೆಟೆಟಿವ್ ಪಿಟಿ ದಾಂಡು. ೧೬) ಸ್ಟೇಕ್ ಸ್ನ್ಯಾಚ್. ೧೭) ಸ್ಕ್ವೆಟ್ ಗೇಮ್ಸ.

೫. ಮಜಲು (ಟಪ್ಪೆ) ಪಂದ್ಯಗಳು

ಇಯತ್ತೆ ೩:—೧) ರನ್ನಿಂಗ್. ೨) ಹಾಪಿಂಗ್ ಶಾರ್ಟ್ ಡಿಸ್ಟ್ಯನ್ಸಸ್. ೩) ಹಾಪಿಂಗ್ ರಿಲೇ i) ಇನ್ ಲಾಯ್ನ್. ii) ಇನ್ ಎ ಸರ್ಕಲ್. ೪) ರನ್ನಿಂಗ್ ಅ್ಯಂಡ್ ಹಾಪಿಂಗ್ ರಿಲೇ. ೫) ಕ್ಯಾಪ್-ಪಾಸ್ ರಿಲೇ. ೬) ರಾಯ್ಡಿಂಗ ದಿ ಅ್ಯಸ್ಟಾಯ್ಡ ರಿಲೇ. ೭) ಆರ್ಮ್ ಲಾಕ್ ರಿಲೇ.

ಇಯತ್ತೆ ೪:— ೧) ಹಾರ್ಸ ರಿಲೇ. ೨) ಫ್ರಾಗ್ ಜಂಪ್ ರಿಲೇ. ೩) ಪಾಸ್ ಥ್ರೂ ದಿ ಹೂಪ್ ರಿಲೇ. ೪) ಮೆಸೇಜ್ ರಿಲೇ ೫) ಬಡ್ನ್ ಕ್ಯಾರಿಯಿಂಗ್ ರಿಲೇ. (೬) ಕ್ರಾಲ್ ಅಂಡರ್ ಅಂಡ್ ಪಾಸ್ ರಿಲೇ. (೭) ಟನೆಲ್ ಬಾಲ್ ರಿಲೇ. (೮) ಕಪಲ್ ರಿಲೇ. (೯) ಟ್ರೇನ್ ರಿಲೇ.

ಪ್ರಾಥಮಿಕ ಶಾಲೆಗಳು
೧ರಿಂದ ೪ ಇಯತ್ತೆಗಳಲ್ಲಿ ರೇಖಾ ಕಲೆಯ (ಡ್ರಾಯಿಂಗದ)
ಅಭ್ಯಾಸ ಪತ್ರಿಕೆ

ಸಾಮಾನ್ಯ ನಿರೂಪಣೆಗಳು:

★

ಶಾಲೆಗಳಲ್ಲಿಯ ಪರಿಸ್ಥಿತಿಗಳನ್ನು ಮತ್ತು ಅವುಗಳಲ್ಲಿ ಅತ್ಯಲ್ಪ ಸಾಧನ ಸಾಮಗ್ರಿಗಳನ್ನೊಳಗೊಂಡ ಹಾಗೂ ಸಾಮಾನ್ಯ ಪರಿಸ್ಥಿತಿಗಳಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿಯ ಚಿಕ್ಕ ಮಕ್ಕಳಿಗೆ ಕಲೆಯನ್ನು ಕಲಿಸುವ ಆದರೆ ಕಲಾವಿಶೇಷಜ್ಞರಲ್ಲದ ಶಿಕ್ಷಕರ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಅಭ್ಯಾಸಪತ್ರಿಕೆಯನ್ನು ತಯಾರಿಸಲಾಗಿದೆ. ತಮ್ಮ ಭಾವ ಮೊದಲಾದವನ್ನು ನಿರೂಪಿಸುವ ರೀತಿ (expression, ಅಭಿವ್ಯಕ್ತಿ) ಯನ್ನು ಕುರಿತು ಮಕ್ಕಳಿಗೆ ಸಾಧ್ಯವಿದ್ದಷ್ಟು ಸ್ವಾತಂತ್ರ್ಯವನ್ನು ಕೊಡಬೇಕು. ಆದರೆ ಅವರಿಗೆ ಮಾರ್ಗನಿರ್ದೇಶ ಮಾಡಲಿಕ್ಕೆ, ವಿಷಯವನ್ನು ವಿವರಿಸಲಿಕ್ಕೆ ಹಾಗೂ ಅವರ ಕೃತಿಗಳನ್ನು ಅಭಿವೃದ್ಧಿಗೊಳಿಸಲಿಕ್ಕೆ ಶಿಕ್ಷಕನು ಅವರ ಬಳಿಯಲ್ಲಿರಬೇಕು. ಈ ದೃಷ್ಟಿಯಿಂದ ಅಭ್ಯಾಸಪತ್ರಿಕೆಯಲ್ಲಿ ಮುಖ್ಯವಾಗಿ ಎರಡು ವಿಭಾಗಗಳನ್ನು ಮಾಡಬೇಕಾಗುತ್ತದೆ-- ರೇಖಾ ಚಿತ್ರಗಳಿಂದ ವಿಶದೀಕರಣ ಹಾಗೂ ಅವಿಷ್ಕರಣ ಮತ್ತು ನಿರೀಕ್ಷಣೆ ಹಾಗೂ ಕಲಾಕೌಶಲ್ಯಗಳ ಯೋಗ್ಯತೆಗಳನ್ನು ಅಭಿವೃದ್ಧಿಗೊಳಿಸುವದು. ಶಕ್ಯವಿದ್ದಮಟ್ಟಿಗೆ, ಸ್ಥಳಿಕ ಸಾಮಗ್ರಿಗಳನ್ನು ಉಪಯೋಗಿಸಬೇಕು. ಮತ್ತು ರೇಖಾ ಕಲಾಕೃತಿಗಳು ಶಾಲೆಯ ಸಮಗ್ರ ಕಾರ್ಯ-ಕಲಾಪಗಳ ಅಖಂಡಭಾಗವಾಗಿರಬೇಕಲ್ಲದೆ, ಕೆಲವೊಂದು ವಿಶಿಷ್ಟ ಪಲ್ಕಿಗಳು ಇಂಥ ವಿಶಿಷ್ಟಕೃತಿಗಳಿಗಾಗಿ ಮೀಸಲಾಗಿರುವದಾದರೂ ಸಹ, ಅವುಗಳಿಗಾಗಿಯೆ (ಕೆಲವೊಂದು ವಿಶಿಷ್ಟ ಪಲ್ಕಿಗಳಿಗಾಗಿಯೇ) ಇದನ್ನು ಮೀಸಲಾಗಿಡಕೂಡದು. ಪ್ರಾಥಮಿಕ ಮಟ್ಟಗಳಲ್ಲಿ ಮಕ್ಕಳಿಗೆ ಶಿಕ್ಷಣವು ಒಬ್ಬನೇ ಆವ ಶಿಕ್ಷಕನಿಂದ ದೊರೆಯುವದು, ವಿಷಯ ವಿಶೇಷಜ್ಞರಿಂದಲ್ಲ. ಹೀಗಿರುವದರಿಂದ, ಮೇಲಿನಂತೆ ಮಾಡುವದು (ರೇಖಾ ಕಲಾಕೃತಿಗಳನ್ನು ಶಾಲೆಯ ಸಮಗ್ರ ಕಾರ್ಯಕಲಾಪಗಳ ಅಖಂಡ ಭಾಗವನ್ನಾಗಿ ಮಾಡುವದು) ಮತ್ತೂ ಹೆಚ್ಚು ಸಾಧ್ಯವಿರುವದು.

ಮೊದಲಿನಿಂದಲೂ ಬಣ್ಣಗಳನ್ನು ಧಾರಾಳವಾಗಿ ಉಪಯೋಗಿಸಬೇಕು. ಇವು ವಿಶೇಷ ವೆಚ್ಚತಗಲುವ ಬಣ್ಣಗಳಿರಬೇಕೆಂಬ ಅವಶ್ಯಕತೆ ಇಲ್ಲ. ಖಡುಬಿಗಾಗಿ ಮತ್ತು ರಂಗೋಲಿಯ ಕೆಲಸಕ್ಕಾಗಿ ಹಳ್ಳಿಯಲ್ಲಿ ಉಪಯೋಗಿಸುವ ಸ್ಥಳಿಕ ಬಣ್ಣಗಳನ್ನು ಹಾಗು ಮಕ್ಕಳಿಂದಲೇ ಮಣ್ಣು ಮುಂತಾದವುಗಳಿಂದ ಮಾಡಲ್ಪಡಬಹುದಾದವುಗಳನ್ನು ಉಪಯೋಗಿಸಬೇಕು. ಸಣ್ಣ ಕೆಲಸಗಳಿಂದ ಹಾಗೂ ವಿಶಿಷ್ಟ ಪ್ರಕಾರದ ಸಸ್ಯ-ಕಾಂಡ (ದೇಟು) ಮುಂತಾದವುಗಳಿಂದ ಕುಂಚಗಳನ್ನು ಸಹ ಮಾಡಿಕೊಳ್ಳಬಹುದು. ಇದ್ದಲಿ ಹಾಗೂ ಇತರ ಸುಟ್ಟ ಸಾಮಗ್ರಿಗಳನ್ನು ಸಹ ಚಿತ್ರದಲ್ಲಿ ಬಗೆಬಗೆಯ ಛಾಯೆಗಳನ್ನು ತೋರಿಸುವದಕ್ಕಾಗಿ ಉಪಯೋಗಿಸಬಹುದು. ಒಂದು ವೇಳೆ ಸಾಧ್ಯವೇ ಇದ್ದಲ್ಲಿ, ಮಕ್ಕಳ ಕಲಾಭಿರುಚಿಯನ್ನು ಪಳಗಿಸುವದಕ್ಕಾಗಿ ಒಳ್ಳೆಯ ಚಿತ್ರಗಳನ್ನೂ ಪ್ರಕಟನೆಯ ಪಲಿಗೆಗಳನ್ನೂ (Posters) ಸಹ ಶಾಲೆಗಳಿಗಾಗಿ ಸಂಪಾದಿಸಬೇಕು ಮತ್ತು ಅವುಗಳನ್ನು ಸಿಬ್ಬಂದಿಕೋಣೆಯಲ್ಲಿ ಕಾಯಂಆಗಿ ತೂಗಿಹಾಕಬೇಕು. ಹೀಗೆ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೂ, ಹೊಸ್ತಿ ಪಲ್ಕಿಗಳಲ್ಲಾದರೂ ಕೆಲವು ಶಾಲೆಗಳು ಸುಲಭವಾಗಿ ಉತ್ತಮ ಚಿತ್ರಗಳನ್ನು ಸಂಪಾದಿಸಿ ಅವುಗಳನ್ನು ಪ್ರದರ್ಶಿಸಬಲ್ಲವಾಗಿರಲಿಲ್ಲವೇ? ಮೇಲಿನ ಪದ್ಧತಿಗಳು ಬಾಲಕರೊಂದಿಗೆ ಅವುಗಳನ್ನು ವಿಮರ್ಶಿಸಿಸುವದರಿಂದ ಅವರ ಕಲಾಸೌಂದರ್ಯ ಗ್ರಹಣ ಶಕ್ತಿಯನ್ನು ತರಬೇತುಗೊಳಿಸಬಲ್ಲವು. ಮೊದಲಿನ ಮಟ್ಟಗಳಲ್ಲಿ ಸ್ಪಷ್ಟವಾದ ಅನುಕರಣ ಕಾರ್ಯವನ್ನು (ಕರಡು ಬರಿಪವನ್ನು) ಅತ್ಯಲ್ಪವಾಗಿ ಮಾಡಿಸಬೇಕು. ಕೈ ಬರೆಹವು ಕಲಾ ಶಿಕ್ಷಣದ ಭಾಗವೊಂದೆಂದು ತಿಳಿಯು

ಬೇಕು. ಮೊದಲಿನ ಮಟ್ಟಗಳಲ್ಲಿ ತಿದ್ದುವ ಕೆಲಸವು ಸಾಧ್ಯವಿದ್ದಷ್ಟು ಕಡಿಮೆಯಾಗಿ ನಡೆಯಬೇಕು. ಸಾಧ್ಯವಿದ್ದಲ್ಲಿ, ತುಸು ಪ್ರತಿಕೃತಿಗಳನ್ನೂ ಮಾಡಿಸಬೇಕು ಎಲ್ಲ ಚಿತ್ರಾಕೃತಿ (Patterns) ಗಳಲ್ಲಿ ಬಣ್ಣಗಳ ಮೇಳವನ್ನು ಅಭ್ಯಸಿಸ ಬೇಕು ಮತ್ತು ಮಕ್ಕಳು ತಮ್ಮ ಮನರಂಜಿಸುವ ಹಾಗೂ ಮನರಂಜಿಸದ ಬಣ್ಣಗಳನ್ನು ಕುರಿತು ಮಾತನಾಡುವಂತೆ ಅವರನ್ನು ಧಾರಾಳವಾಗಿ ಪ್ರೋತ್ಸಾಹಿಸಬೇಕು. ಮೊದಲಿನಿಂದ ಕೊನೆಯ ವರೆಗೂ ಅತಿ ಕಟ್ಟುನಿಟ್ಟು (ಅತಿನಿಷ್ಠೆ) ಹಾಗೂ ಸಾಂಪ್ರದಾಯಕತೆಗಳನ್ನು ಒತ್ತಾಯಪಡಿಸದೆ, ಅಚ್ಚುಕಟ್ಟುತನ ಹಾಗೂ ಕಲಾಸೌಂದರ್ಯಯುಕ್ತ ರಚನೆಗಳಿಗೆ ಲಕ್ಷ್ಯ ಕೊಡಬೇಕು.

ಅ—ಕೈ ಹಾಗೂ ಬೆರಳುಗಳ ಹತೋಟಿಯನ್ನು ಕೆಳಗಿನಂತೆ ಸಾಧಿಸಬಹುದು.

(ಅ) ಸಾದಾ ಸರಳ ರೇಖೆ ಅಥವಾ (ಲೇಖನಿ, ಸೀಸದ ಕಡ್ಡಿ ಮೊದಲಾದವುಗಳಿಂದ ಎಳೆದ) ಗೆರೆ (Stroke drawing); ನಂತರದಲ್ಲಿ ವಿವಿಧ ಆಕಾರದ ಆಕೃತಿಗಳು, ಈ ಬಾಹ್ಯರೇಷೆಗಳನ್ನು ಅವುಗಳಿಗೆ ಸ್ಥೂಲ ವಸ್ತುಗಳ (Masses) ಕಲ್ಪನೆ ತಂದು ಕೊಡಲಿಕ್ಕೆ ಬಣ್ಣಗಳಿಂದ ಎದ್ದು ಕಾಣುವಂತೆಯೂ ಮತ್ತು ಸರಿಯಾಗಿಯೂ ತುಂಬುವದು.

(ಬ) ರೇಖಾಚಿತ್ರದಲ್ಲಿ ಬಗೆಬಗೆಯ ಛಾಯೆಗಳನ್ನು ತೋರಿಸುವದಕ್ಕಾಗಿ ಅಭ್ಯಾಸ-ಪಾಠಗಳು. (Colour shading Exercises). ಆಕಾರ ತುಂಬಿಕೊಳ್ಳುವಾಗ ಛಾಯಾಕರಣದಲ್ಲಿ ಹತೋಟಿ, ವಿವಿಧ ಆಕಾರಗಳನ್ನು, ಭೂಮಿತಿಯ ಹಾಗೂ ಇತರ ಆಕಾರಗಳನ್ನು ತೆಗೆದು ಅವುಗಳನ್ನು ವಿಭಾಗಿಸಿ, ಕೆಳಗಿನಂತೆ ವಿವಿಧ ಸ್ಥಮಾಣಗಳಲ್ಲಿ ಅವುಗಳ ಛಾಯೆಗಳನ್ನು ತೋರಿಸುವದು.

ಉದಾಹರಣೆಗಾಗಿ:—

ಎಸ್ I ಸಾಯಿಜ

ಈ ಅಭ್ಯಾಸ-ಪಾಠಗಳು ಕೇವಲ ಕೈ ಹತೋಟಿಗಾಗಿ ಇವೆ ಇಲ್ಲಿಗೆ ರೇಖಾಚಿತ್ರಕಲೆಯ ಪಾಠವು ಮುಗಿದಂತಾಯಿತೆಂಬ ಸೂಚನೆ ಇಲ್ಲ. ಎದ್ದು ಕಾಣುವಂತೆ ಗೆರೆಗಳನ್ನು, ರೇಖೆಗಳನ್ನು, ವಕ್ರರೇಖೆಗಳನ್ನು ತೆಗೆಯುವದರಲ್ಲಿ ಸಾಕಷ್ಟು ತರಬೇತಿಯನ್ನು ಕೊಟ್ಟನಂತರ, ಕಾಲ್ಪನಿಕ ವಸ್ತು ಅಥವಾ ಚಿತ್ರ ನಿರೂಪಣೆಯಲ್ಲಿ ಅದನ್ನು ಪ್ರಯೋಗಿಸಬಹುದು. ಉದಾಹರಣೆಗಾಗಿ:—

(ಅ) ಸರಳ ರೇಖೆಗಳನ್ನು ಎದ್ದು ಕಾಣುವಂತೆಯೂ, ಸರಿಯಾಗಿಯೂ, ತೆಗೆಯುವ ಯೋಗ್ಯತೆಯನ್ನು ಕೆಳಗಿನವುಗಳ ಚಿತ್ರನಿರೂಪಣೆಗಾಗಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಅವು ಯಾವವೆಂದರೆ, ಬೇಲಿಗಳು, (ಅಗಸೆ) ಬಾಗಿಲಗಳು (gates), ತಾರಾ ತಂತಿಕಂಬಗಳು, ಮನೆಯ ಬಾಹ್ಯರೇಷೆಗಳು, ದಿಂಬಿನಾಕಾರವ ಪೆಟ್ಟಿಗೆಗಳು ಇತ್ಯಾದಿ.

(ಬ) ವಕ್ರ ಮತ್ತು ಸರಳರೇಖೆಗಳನ್ನು ತೆಗೆಯುವ ಯೋಗ್ಯತೆಗಳನ್ನು ಕೆಳಗಿವುಗಳ ಚಿತ್ರ ನಿರೂಪಣೆಗಾಗಿ ಪರಿಣಾಮಕಾರಿಯಾಗಿ ಏಕೀಕರಿಸಬಹುದು. ಅವು ಯಾವವೆಂದರೆ, ಗಿಡಗಳು, ಹೂಗೊಂಚಲುಗಳು, (ರಬ್ಬರಿನ) ಬಲೂನ್

ಗಳು, ಆಟದ ಸಾಮಾನುಗಳು, ಪ್ರಾಣಿಗಳು (ಬೆಕ್ಕು, ಆನೆ....), ಬೈಸಿಕಲ್ ಇತ್ಯಾದಿ.

(ಕ) ಚಿತ್ರಕತಿಗಳನ್ನು ತೆಗೆಯುವದು (Pattern-making), ರೇಖೆ, ಆಕಾರ, ದಳದ ಆಕಾರದ ಗೆರೆಗಳು ಅಥವಾ ಬಣ್ಣದ ಚುಕ್ಕೆ (blobs of colour) ಇವುಗಳನ್ನು ಬಗೆಬಗೆಯಾಗಿ ಮೇಳಿಸುವದರಿಂದ—

(ಬ) ಕೈ ಮತ್ತು ಬೆರಳುಗಳ ಹಲೋಟಿಯನ್ನು, ಕಂಡ ಹಾಗೂ ಕಲ್ಪಿಸಿಕೊಂಡ ವಸ್ತುಗಳ ಮಾನಸಿಕ ಪ್ರತಿರೂಪ ಹಾಗೂ ಪ್ರತಿಬಿಂಬಗಳೊಂದಿಗೆ ಸುಸಂಘಟಿತ(Coordination)ವಾಗಿಸುವದರಲ್ಲಿ ತರಬೇತಿಕೊಡುವದು, ದೀಪದ ಕಡ್ಡಿಗಳಿಂದ ಚಿತ್ರನಿರೂಪಣೆ—

ಶಾರೀರಿಕ ಕ್ರಿಯೆ ಮತ್ತು ವಿವಿಧ ಅಂಗವಿನ್ಯಾಸಗಳನ್ನು ಸೂಚಿಸುವ ಕಡ್ಡಿಯ ಮಾನವಾಕೃತಿಗಳು— ("Stick-people").

(ಕ.) ನಿರೀಕ್ಷಣೆಯಲ್ಲಿ ತರಬೇತಿಕೊಡುವದು. (ಪಳಗಿಸುವದು):—ರೇಖನ ಕಲೆಯ ಕೆಲವೊಂದು ಮೂಲಭೂತ ಅಂಶಗಳನ್ನು (ಅ) ಪ್ರಮಾಣ (ಬ) ಯಥಾದೃಷ್ಟರೂಪಣ (Perspective) (ಕ) ಸಮತೋಲ (ಡ) ವ್ಯತ್ಯಾಸ, (ಬಣ್ಣ, ಆಕಾರ, ಅಳತೆ (ಗಾತ್ರ,....ಗಳಲ್ಲಿ) ಇವುಗಳನ್ನು ಮೊದಲಿನಿಂದ ಕೊನೆಯವರೆಗೂ ಬೇರೂರಿಸಬೇಕು. ಪ್ರಾಮುಖ್ಯವಾಗಿ, ಕತೆಯ ಅಥವಾ ಭೂಡೈಶ್ಯದ ಚಿತ್ರ ನಿರೂಪಣೆಯಲ್ಲಿ ಮಗುವಿನ ಪ್ರಯತ್ನಗಳ ಬಗೆಗೆ ಮಗುವಿಗೆ ಸೂಚನೆಗಳನ್ನು ಕೊಡುವ ಅಥವಾ ಅವುಗಳನ್ನು ವಿಮರ್ಶಿಸುವ ಪ್ರಸಂಗಗಳಲ್ಲಿ.

ಹೀಗೆ ಮಾಡುವಾಗ ಪ್ರಾಢರ ಪ್ರಗತಿ ಪರಿಪೂರ್ಣತೆಗಳ ಮಟ್ಟಗಳನ್ನು (ಮಕ್ಕಳ ಕೃತಿಗಳಲ್ಲಿ) ನಿರೀಕ್ಷಿಸಬಾರದು. ಯಾಕಂದರೆ, ಸ್ವಯಂಪ್ರೇರಣೆ ಮತ್ತು (ರಚನಾತ್ಮಕ) ಕಲೆಯ ನಿರೀಕ್ಷಣೆಯನ್ನಿಟ್ಟುಕೊಂಡು ಅವನ್ನು ಅಭಿವೃದ್ಧಿಗೊಳಿಸುವದಿರುವದು.

೧ನೆಯ ಇಯತ್ತೆ

ಚಿತ್ರ ನಿರೂಪಣೆ ಮತ್ತು ಅವಿಷ್ಕರಣ

ಅಭಿನಯದ ಮೂಲಕ ಭಾವನೆಗಳ ಅವಿಷ್ಕರಣಕ್ಕೆ ಸಂಧಿಯನ್ನಿದಗಿಸಿ ಕೊಡುವ ಸರಳ ಶಿಶುಗೀತೆಗಳು, ಕತೆಗಳು, ಪ್ರಸಂಗಗಳು.

ಉದಾ:— ಕೇಳಿಸಿವುಗಳ ಚಿತ್ರನಿರೂಪಣೆ.

೧) ಚಂಡು ಹಲ್ಲಣೆ ಬಲೂನ್‌ಗಳೊಡನೆ ಆಡುವದು.

೨) ಅಂಚೆಪೆಟ್ಟಿಗೆ ಕಂಬದಲ್ಲಿ ಪತ್ರ ಹಾಕುವದು.

೩) ಗಿಡದಲ್ಲಿ ಹಕ್ಕಿಯ ಗೂಡನ್ನು ಶೋಧಿಸುವದು.

ನಿರೀಕ್ಷಣ ಶಕ್ತಿ ಹಾಗೂ ಕಲಾಕೌಶಲ್ಯಗಳ ಬೆಳವಣಿಗೆ

ಎದ್ದು ಕಾಣುವ ಗೀಟುಗಳನ್ನು ಹೊಡೆಯುವ, ತಿರುವು (Curves)ಗಳನ್ನು ಎಳೆಯುವ, ಅವುಗಳನ್ನು ಜೋಡಿಸುವ ಅಭ್ಯಾಸ-ಪಾಠಗಳು, ಮತ್ತು ಪ್ರಯೋಗ....ಅಂಚೆಪೆಟ್ಟಿಗೆ ಕಂಬ, ಬಲೂನ್‌ಗಳು, ಗಿಡಗಳು ಸಾಯಿಕಲ್‌ಗಳು....

ಆಕಾರ ತುಂಬಿಕೊಳ್ಳುವ ಚಿತ್ರ (Mass drawing)ಗಳಲ್ಲಿ ಹತೋಟಿಗಾಗಿ

ಅಭ್ಯಾಸ ಪಾಠಗಳು ಉದಾ:— ಗಿಡ.

ಸಂಯೋಜನೆ:— ಸಾದಾ ಕಾಗದದ ಮೇಲೆ ಅಥವಾ ಬಣ್ಣದ ಕಾಗದದ ಮೇಲೆ ಸಾಕಷ್ಟು ಪರಿಸರ (margin)

ವನ್ನು ಇಲ್ಲವೆ ದಂಡೆಕಟ್ಟನ್ನು (frame) ಇಟ್ಟು ಚಿತ್ರವನ್ನು ಅಂಟಿಸುವದು. ಮುಖ್ಯೋದ್ದೇಶವನ್ನು ಗಮನದಲ್ಲಿಟ್ಟುಕೊಂಡು ಚಿಕ್ಕ ಪುಟ್ಟ ವಿವರಗಳಿಗೆ ಮಹತ್ವವನ್ನು ಕೊಡದಲೆ, ಚಿತ್ರಿಸಬೇಕಾದ ವಸ್ತುವೊಂದರಿಂದಲೇ ಇಡಿಯ ಚಿತ್ರ (ಸ್ಥಾನ) ವನ್ನು ತುಂಬುವದು.

ರೂಪರೇಖನ (Figure-drawing)

ಆಕೃತಿಗಳನ್ನು ತೆಗೆಯುವದು, ಕಡ್ಡೀಮಾನವಾಕೃತಿಗಳು, ಹುಡುಗಾಟದ ಚಿಹ್ನಗಳು ಉದಾ: ಗಿಡ, ಇತ್ಯಾದಿ.

ನಿರೀಕ್ಷಣೆ:— (ಅ) ಮಾನಸಿಕ ಪ್ರತಿರೂಪಗಳ ರಚನೆಯಲ್ಲಿ ರೂಢಿ, ಕಣ್ಣು ಮುಚ್ಚಿಕೊಂಡು ತೆಗೆದ ರೇಖನಾಕೃತಿಗಳ ಮುಖಾಂತರ.

(ಬ) ಸ್ಮರಣ ಚಿತ್ರಗಳು:— ಗೊಂಬೆಗಳು, ಆಟಿಗೆಗಳು, ಉಡುತೊಡುವ ವಸ್ತ್ರಗಳು....ಟೊಪ್ಪಿಗೆ, ಕೋಟು, ಚಪ್ಪಲ ಮೊದಲಾದವು.

ಬಣ್ಣ:— ಮಿಶ್ರಣ ಮಾಡದ ಕಾಂತಿಯುಕ್ತ ಬಣ್ಣಗಳು.

ಸಾಧನ (medium):— ಬಣ್ಣದ ಖಡುಗಳು ಮತ್ತು / ಅಥವಾ ಬಣ್ಣದ "ಬಳಪ"ಗಳು (crayons).

ಸಾಮಗ್ರಿಗಳು:— ಬಣ್ಣದ ಕಾಗದ, ಪಾಟಿ, ಉದ್ದೇಶಪೂರ್ವಕವಾಗಿ ತಯಾರಿಸಿದ ನೆಲ ಇಲ್ಲವೆ ಗೋಡೆಯ ವಿಭಾಗ ಅಥವಾ ಕರಿಯ ಹಲಿಗೆ.

ತಿನೆಯ ಇಯತ್ತೆ

ಚಿತ್ರನಿರೂಪಣೆ ಮತ್ತು ಆವಿಷ್ಕರಣ

ಮೇಲಿನಂತೆ, ಹಾಗೂ ಕೆಳಗಿನವುಗಳು:—

"ಅ" ಕಥಾಭಿರುಚಿಯ ವಿಕಾಸ. ಒಂದಕ್ಕಿಂತ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಕತೆಗಳನ್ನು ಉಪಯೋಗಿಸಬಹುದು.

"ಬ" ಮಾದರಿಯ ಚಿತ್ರಾಕೃತಿ (pattern) ಮತ್ತು ಕಲ್ಪನಾ ಶಕ್ತಿಗಳಿಗೆ ಇಂಬುಗೊಡುವ ಅಲಂಕಾರಿಕ ಹಾಗೂ ಉಜ್ವಲ ಬಣ್ಣದ ಚಿತ್ರಗಳು.

ನಿರೀಕ್ಷಣ ಶಕ್ತಿ ಹಾಗೂ ಕಲಾಕೌಶಲ್ಯಗಳ ಬೆಳೆವಣಿಗೆ

ಹೆಚ್ಚಿನ ಕೈಹತೋಟೆಯ ಸಲುವಾಗಿ ಚಿತ್ರಗಳಲ್ಲಿ ಬಗೆಬಗೆಯ ಛಾಯೆಗಳನ್ನು ತೋರಿಸುವ ಅಭ್ಯಾಸ ಪಾಠ (Exercises) ಗಳೊಂದಿಗೆ ಇದರ ಹಿಂದಿನ ವರ್ಷದ ಅಭ್ಯಾಸಕ್ರಮವನ್ನು ಮುಂದುವರಿಸುವದು.

ಸಂಯೋಜನೆ:— ಆಕೃತಿಗೆ ಹಿನ್ನೆಲೆಯನ್ನು ನೇರಿಸುವದು.

ರೂಪರೇಖನ:— ಕತ್ತರಿಸಿದ ಕಾಗದದ ತುಣುಕುಗಳ ಇಲ್ಲವೆ ದೀಪದ ಕಡ್ಡಿಗಳ ಸಹಾಯದಿಂದ ಕ್ರಿಯೆ ಹಾಗು ಪ್ರಮಾಣಗಳನ್ನು ಕಲಿಸುವದು. ಮುಖಭಾವ (ಮುದ್ರೆ) ಗಳ ಶೀವಿಯನ್ನು ಮತ್ತು ಕೂದಲಿನ ಬೆಳವಣಿಗೆಯನ್ನು ವಿಶೇಷವಾಗಿ ಅನುಲಕ್ಷಿಸಿ ಮುಖದ ಚಿತ್ರ (ತೆಗೆಯುವದು)

ಶಿರೀಕ್ಷಣೆ:— ಗಿಡದ ಸಾಂಕೇತಿಕ ಚಿತ್ರವನ್ನು ಟೊಂಗೆ ಗಳಿಂದೊಡಗೂಡಿಸಿ ವಾಸ್ತವಿಕ ಗಿಡದ ರೂಪದಲ್ಲಿ ಅದನ್ನು ಮಾರ್ಪಡಿಸುವದು. ಚಿತ್ರನಿರೂಪಣೆಯಲ್ಲಿ ಉಪಯುಕ್ತವಾದ ಅಂಡಾಕೃತಿಯ (Elliptical) ವಸ್ತುಗಳ ಸ್ಮರಣ ಚಿತ್ರಗಳು (Memory drawings) ಉದಾ:— ಕೊಳಗ ಪಾತ್ರೆ (pail), ಟಬ್ಬು (tub), ಕೊಳ (ಹೊಂಡ, pond). ಗಾತ್ರ, ಆಕಾರ, ಪ್ರಮಾಣಗಳ ಮೇಲೆ ಅಂತರದ ಪರಿಣಾಮಗಳು....

ಕುಂಚದ ಕೆಲಸ:— ಸೂಕ್ಷ್ಮ ಹಾಗೂ ದಪ್ಪ ಗೆರೆಗಳು (ಕುಂಚದಿಂದ ಎಳೆಯುವದು). ಉದಾ:— ಚಿತ್ರಗಳಿಗೆ ದಂಡೆ ಕಟ್ಟುಗಳು, "ಕಡ್ಡಿಯ ಮಾನವಾಕೃತಿಗಳ" ಬಾಹ ರೇಷೆಗಳು— ಚಿತ್ರಗಳಿಗೆ ತಲೆಬರಹಗಳು, ಚಿತ್ರಗಳಿಗೆ ರುಜ್ಜೆ ಹಾಕುವದು....ಏಕರೂಪತೆಯುಳ್ಳ ಬಣ್ಣಗಳನ್ನು ಬಳೆಯುವದು. ಉದಾ:— ಆಕಾಶ, ಹೊಲ, ಗೋಡೆ ಮುಂತಾದವುಗಳು.

ಮಾದರಿಯ ಚಿತ್ರಾಕೃತಿಗಳನ್ನು ತೆಗೆಯುವದು:—

ಕುಂಚದಿಂದ ನೀರು-ಬಣ್ಣದ ದಲದ ಆಕಾರದ ಎಳೆತಗಳಿಂದ, ಬಣ್ಣದ ಖಡು ಅಥವಾ ಬಳಪಗಳಿಂದ.

ಸಿನೆಯ ಇಯತ್ತೆ

(ಅ) ಉಗ್ರಕ್ರಿಯೆ ಇಲ್ಲವೆ ಘಟ್ಟನೆ ಸಂಭವಿಸುವ ಮನೋಭಾವ ಇವುಗಳನ್ನೊಳಗೊಂಡ ವಿಷಯ, ಉದಾ:— ಜಲ್ಲಿದ ಕಾಲು (ಕುಗ್ಗಿದ ಮನೋಭಾವ), ಗಾಳಿ, ಮಳೆ, ಬಿರುಗಾಳಿ.

(ಬ) ಅನೇಕ ವ್ಯಕ್ತಿ, ವಿಶೇಷಗಳನ್ನೊಳಗೊಂಡ ಭೂಗೋಲ ವಿಷಯಗಳು.

ಸಂಯೋಜನೆ:— (ಕರಿ ಹಾಗು ಬಿಳಿ) ಕಾಗದಗಳ ಕತ್ತರಿಸಿದ ತುಂಡುಗಳಿಂದ ಚಿತ್ರದ ಸಾದಾ ವಿಭಾಗಗಳನ್ನು ತಯಾರಿಸುವದನ್ನೊಳಗೊಂಡ ಅಭ್ಯಾಸ – ಪಾಠಗಳು, ಉದಾ:— ಹೊಲ; ಆಕಾಶ ಮತ್ತು ಕಾಲುದಾರಿ; ಆಕಾಶ, ಮನೆಗಳು ಮತ್ತು ನದಿ ಮುಂತಾದವುಗಳು. ಆಕಾಶ ರೇಖೆಯನ್ನು ಚಪ್ಪರ ಮತ್ತು ಹೊಗೆಗೊಳವೆ ಮುಂತಾದವುಗಳ ಸಾಲಿನಂತೆ ಕಲ್ಪಿಸಿ ಛಾಯಾಚಿತ್ರಗಳನ್ನು (Silhouettes, ಬಿಳಿಯ ಹಿನ್ನೆಲೆಯ ಮೇಲೆ ಹೊರರೇಖೆಯನ್ನು

ತೋರಿಸುವ. ಸಾಮಾನ್ಯವಾಗಿ ಒಳಗೆಲ್ಲ ಕಪ್ಪು ಬಣ್ಣ ತುಂಬಿದ ಅಥವಾ ಕಪ್ಪು ಕಾಗದದಲ್ಲಿ ಕತ್ತರಿಸಿದ ಮನುಷ್ಯನ ಅಥವಾ ವಸ್ತುವಿನ ಪಾರ್ಶ್ವ ಚಿತ್ರಗಳು) ತಯಾರಿಸುವದು.

ರೂಪರೇಖನ:— ಬಾಗಿದ, ಬಗ್ಗಿದ ಇಲ್ಲವೆ ಕುಳಿತ ವ್ಯಕ್ತಿಗಳ ಸ್ಮರಣ ಚಿತ್ರಗಳು. ಬಗೆಬಗೆಯ ಭಾವಗಳ ವಾಸ್ತವಿಕ ಆಕಾರಗಳನ್ನು ವ್ಯಕ್ತಗೊಳಿಸಲು ತುಸುಮಟ್ಟಿಗೆ ಪ್ರಯತ್ನಿಸುವ ಉದ್ದೇಶದಿಂದ ಮುಖಮುದ್ರೆಗಳನ್ನು ಅಭ್ಯಸಿಸುವದು.

ನಿರೀಕ್ಷಣೆ:— ರೇಖೆಗಳು ಕಾಣದಂತಾಗುವದರ ಸ್ವಾಭಾವಿಕ ಕಲ್ಪನೆಗಳು:— ಕಾಲುದಾರಿ, ಸಾಲು ಮರಗಳ ಮಾರ್ಗ, ರಾಜಮಾರ್ಗ, ರೇಲ್ವೆ ಮಾರ್ಗಗಳಲ್ಲಿ ಕಣ್ಣಿಗೆ ಬೀಳುವಂತೆ.

ಕುಂಚದ ಕೆಲಸ:— ಬಣ್ಣಗಳನ್ನು ಒಟ್ಟುಗೂಡಿಸಿಟ್ಟುಕೊಂಡು ಒಂದು ವಿಶಿಷ್ಟ ಕ್ರಮದಲ್ಲಿ ಹೊಂದಿಕೆಯಾಗುವಂತೆ ಅವುಗಳನ್ನು ಎಳೆಯುವದು. ಉದಾ:— ಸೂರ್ಯಾಸ್ತಗಳು, ಕಾಮನಬಿಲ್ಲುಗಳು, ಉರಿಯುವ ಅಥವಾ ಹೊಗೆಯಾಡುವ ದೀಪದ ಕಡ್ಡಿಯಂಥ ಕ್ಷಣಿಕ ಪರಿಣಾಮಗಳು—

ಸಾಧಾರಿಯ ಚಿತ್ರಾಕೃತಿರೇಖನ:— ಕುಂಚ ಮೊದಲಾದವುಗಳಿಂದ ಎಳೆದು, ತಿರುವಿ, ಆಕಾರ ತುಂಬಿ ಭೂಮಿತಿಯ ಅಥವಾ ಮತ್ತಿತರ ಆಕಾರಗಳನ್ನು ತೆಗೆಯುವದು. ಗೋಡೆಗೆ ಅಂಟಿಸಬಹುದಾದ ಚಿತ್ರಾಲಂಕಾರ ಪಟ್ಟಿಗಳು (Wall Frezes)— ಕತ್ತರಿಸಿದ ಕಾಗದದ ತುಣುಕುಗಳಿಂದ — ವರ್ಗಸಹಕಾರಿ.

ಆನೆಯು ಇಯತ್ತೆ

(ಅ) ಬಣ್ಣಗಳ ಮುಖಾಂತರ ಅವಿಸ್ಮರಣ. ಉದಾ:— ನೋಟಗಳು— ವಸಂತಕಾಲ, ಮಳೆಗಾಲ ಇತ್ಯಾದಿ.

(ಬ) ಹೆಚ್ಚು ವಿಚಾರ ಹಾಗೂ ಕಲ್ಪನೆಗಳ ಅವಶ್ಯಕತೆಯುಳ್ಳ ಕತೆಗಳು.

(ಕ) ಇತಿಹಾಸ, ಭೂಗೋಲ, ಪುರಾಣಾದಿಗಳಿಂದ ಆಯ್ದುಕೊಂಡ ವಿಷಯಗಳು.

ಸಂಯೋಜನೆ:— ಕಪ್ಪು ಕಾಗದ ಕತ್ತರಿಸುವ ಅಥವಾ ಆಕಾರ ತುಂಬುವ ಸ್ಥೂಲ ಚಿತ್ರಗಳಲ್ಲಿ ಸಮತೋಲತೆಯ ಸಲುವಾಗಿ ಬಣ್ಣ ಬಳಿಯುವ ಮತ್ತು ಒಂದು ಸ್ಥೂಲ ಚಿತ್ರವನ್ನು ಮತ್ತೊಂದರೊಂದಿಗೆ ಜೋಡಿಸುವ ರೂಢಿ.

ಎರಡು ಇಲ್ಲವೆ ಹೆಚ್ಚು ವ್ಯಕ್ತಿವಿಶೇಷವನ್ನೊಳಗೊಂಡ ವಿಷಯಗಳು. ಗಿಡ ಮೊದಲಾದವುಗಳ ವ್ಯವಸ್ಥಿತ ರಚನೆ

ರೂಪರೇಖನ:— (ಅ) ಮಕ್ಕಳು ತಮ್ಮ ರೇಖನಗಳಲ್ಲಿ ಕಾಲು, ತೋಳು ಮೊದಲಾದವುಗಳನ್ನು ಹೆಚ್ಚು ಸರಿಯಾಗಿ ರೂಪಿಸುವಂತೆ ಮಾಡುವ ಉದ್ದೇಶದಿಂದ ಕುಳಿತ ವ್ಯಕ್ತಿ-ವಿಶೇಷಗಳ ಅಭ್ಯಾಸ ಮಾಡಿಸುವದು.

(ಬ) ಭಾರತೀಯ ವಿವಿಧ ಉಡುಪು ತೊಡಪುಗಳಲ್ಲಿಯ ವ್ಯಕ್ತಿಗಳ ಸ್ಮರಣ-ಚಿತ್ರಗಳು.

ನಿರೀಕ್ಷಣೆ:— ದೃಷ್ಟಿ ಮಟ್ಟದ ಪ್ರಾಥಮಿಕ ಕಲ್ಪನೆ— ತೆರೆದ ಬಾಗಿಲು, ಕೋಣೆಯ ಮೂಲೆ....ಇವುಗಳನ್ನು ಚಿತ್ರನಿರೂಪಣೆಯಲ್ಲಿ ಪ್ರಾರಂಭಿಸಬೇಕು.

ಕುಂಚದ ಕೆಲಸ:— ಬಣ್ಣ ಎಳೆಯುವದರಲ್ಲಿ ಹೆಚ್ಚಿನ ರೂಢಿ. ಒಂದೇ ಬಣ್ಣವನ್ನು ವಿವಿಧ ಮಟ್ಟಗಳಲ್ಲಿ ಬಳಿಯುವದು.

ಮೂಡರಿಯ ಚಿತ್ರಾಕೃತಿ ರೇಖನ:—

ಸವಿಗೂಟ ಸಮಾರಂಭಗಳಲ್ಲಿ ರಂಗೋಲಿ, ಅಲಂಕಾರ ಮೊದಲಾದವುಗಳ ಕಲ್ಪನೆ.

ಗೋಡೆಗೆ ಅಂಟಿಸಬಹುದಾದ ಚಿತ್ರಾಲಂಕಾರ ಪಟ್ಟಿಗಳು.

———

ಸೂಚನೆ

ಈ ಮೂಲಕ ತಿಳಿಸುವದೇನಂದರೆ ಮಾನ್ಯತೆ ಪಡೆದ ಗಾವಠೀ ಶಾಲೆಗಳಲ್ಲಿ (೧-೪ ರ್ಗದಿಂದ ಖಾಸಗಿ ಪ್ರಾಥಮಿಕ ಶಾಲೆಗಳೆಂದು ಕರೆಯಲ್ಪಡುವ ಶಾಲೆಗಳಲ್ಲಿ) ಕನಿಷ್ಠ ಪಕ್ಷಕ್ಕೆ ಎರಡು ವರ್ಷಗಳವರೆಗೆ ನೌಕರಿ ಮಾಡಿದ ಮತ್ತು ೩೦ ವರ್ಷಗಳ ಕೆಳಗೆ, ೨೦ ವರ್ಷಗಳ ಮೇಲೆ ವಯಸ್ಸುಳ್ಳ, ಪರೀಕ್ಷೆ ಪಾಸಾಗದ ಶಿಕ್ಷಕರು, ಶಾಲೆಯಲ್ಲಿ ಹೆಸರು ಹಚ್ಚದೆ ಪ್ರಾಥಮಿಕ-ಶಾಲಾ-ಪ್ರಮಾಣ ಪರೀಕ್ಷೆಗೆ ಕುಳಿತು ಕೊಳ್ಳಬಹುದು.

ಡಿ. ಇ. ಆಯ್. ವಿಜಾಪುರ

೧ರಿಂದ ೪ನೆಯ ಇಯತ್ತೆಗಳಿಗಾಗಿ ಸೂಜಿಗೆಲಸ

೧ನೆಯ ಇಯತ್ತೆ

ಕೆಳಗಿನ ಹೊಲಿಗೆಗಳನ್ನು ಕಲಿಸಬೇಕು:—

೧:— ಟಿಬ್ಬಿ

ಟಿಬ್ಬಿ

ವ್ಯಾರಂಭ—

೨:— ಎಳೆ (ಹಾರಹೊಲಿಗೆ)

ಹಾರಹೊಲಿಗೆ

೩:— ಕತ್ತರಿ ಹೊಲಿಗೆ (Cross stitch)



ಕತ್ತರಿ ಹೊಲಿಗೆ

೪:— ಕಂಬಳಿ ಹೊಲಿಗೆ.



ಕಂಬಳಿ ಹೊಲಿಗೆ

ಅರಿವೆಯ ಮೇಲಿನ ಆಕೃತಿಗಳ ಮೇಲೆ ಅಥವಾ ಗೆರೆಗಳನ್ನು ಎಳೆದು ಅವುಗಳ ಮೇಲೆ ಹೊಲಿಯಬೇಕು. ಕೈವಸ್ತ್ರ ವಸ್ತ್ರ, ಟಾವೆಲ್ಲುಗಳು, ಜಾಳಿಗೆ ಅರಿವೆಗಳು (mats) ಮುಂತಾದ ಅರಿವೆಗಳನ್ನು ಉಪಯೋಗಿಸಬೇಕು. ಆ ಅರಿವೆಯು ತೀರ ದಪ್ಪ ಅಥವಾ ತೀರ ತೆಳವು ಇರಕೂಡದು.

ಹೊಲಿಗೆಯ ಇಯತ್ತೆ

ಕೆಳಗಿನ ಹೊಲಿಗೆಗಳನ್ನು ಕಲಿಸಬೇಕು:—

೧:— ಟಬ್ಬಿ

ಟಬ್ಬಿ

ಪ್ರಾರಂಭ—

೨:— ಎಳೆ (ಹಾರಹೊಲಿಗೆ)

ಹಾರಹೊಲಿಗೆ

೩:— ಕತ್ತರಿ



ಕತ್ತರಿ ಹೊಲಿಗೆ

೪:— ಕಂಬಳಿ ಹೊಲಿಗೆ



ಕಂಬಳಿ ಹೊಲಿಗೆ

೫:— ಪೃಷ್ಟಗಾಮಿ ಹೊಲಿಗೆ (Topstitching) (ಬಟ್ಟೆಗಳನ್ನು ಒಳಭಾಗಕ್ಕೆ ಹೊಲಿದಬಳಿಕ, ಒಳಗಿನ ಟಬ್ಬಿಯು ಹತ್ತರ ಬರುವಂತೆಯೇ ಬಟ್ಟೆಯ ನೀಲ್ಬಾಗಕ್ಕೆ ಉಪಯೋಗಿಸುವ ಹೊಲಿಗೆ)



ಪೃಷ್ಟಗಾಮಿ ಹೊಲಿಗೆ

ಟಿ:— ಬಟ್ಟೆಯ ಎರಡು ತುಣುಕುಗಳನ್ನು ಜೋಡಿಸುವ ಹೊಲಿಗೆ.

ದೊಡ್ಡ ಮತ್ತು ಸಣ್ಣ ಎಳೆಗಳು ಒಮ್ಮೆ ದೊಡ್ಡ, ಒಮ್ಮೆ ಸಣ್ಣ, ಈ ಪ್ರಕಾರ



ದೊಡ್ಡ ಸಮಾನ ಎಳೆಗಳು

ಟಿ:— ತುರುಪಿ (ದುಂಡು ಕಟ್ಟುವ) ಹೊಲಿಗೆ.



ತುರುಪಿ ಹೊಲಿಗೆ

ಈ ಎಲ್ಲ ಹೊಲಿಗೆಗಳನ್ನು ಅರಿವೆಯ ಮೇಲೆ ಹಾಕಲು ಕಲಿಸುವದು. ಇವುಗಳನ್ನು ಮೇಜಿನ ಮೇಲೆ ಹಾಕುವ ಅರಿವೆ, ಕೈ ವಸ್ತ್ರ, ಚೀಲ, ಜಾಳಿಗೆ ಅರಿವೆ ಮುಂತಾದ ಉಪಯುಕ್ತ ಸಣ್ಣ ವಸ್ತುಗಳಿಗಾಗಿ ಉಪಯೋಗಿಸುವದು. ಈ ಎಲ್ಲ ಹೊಲಿಗೆಗಳನ್ನು ಅರಿವೆಯ ಮೇಲೆ ಹೊಂದಿಕೆಯಾಗುವ ದಾರದಿಂದ ಹೊಲಿಯತಕ್ಕದ್ದು.

ಮಡಿಚುವ ಮತ್ತು ದುಂಡು ಕಟ್ಟುವದಕ್ಕಾಗಿ ದಳಿಗೆ ಹಾಕುವ ಕೆಲಸವನ್ನು ಶಿಕ್ಷಿಕೆಯು ಮಾಡತಕ್ಕದ್ದು.

ಎರಡು ಸೂಜಿಗಳ ಮೇಲಿನ ಹೆಣಿಕೆ ಮತ್ತು ಕೊಕ್ಕೆ ಸೂಜಿಯ ಹೆಣಿಕೆಗಳ ಸಾದಾ ಪಟ್ಟಿಗಳು. ಈ ಪಟ್ಟಿಗಳನ್ನು—ಕೊರಳು ವಟ್ಟಿ ಆಸನ ಮೊದಲಾದವುಗಳನ್ನು ಮಾಡಲಿಕ್ಕೆ—ಮಾಡುವದಕ್ಕಾಗಿ ಜೋಡಿಸಿಕೊಳ್ಳಬಹುದು.

೩ನೆಯ ಇಯತ್ತೆ

ಸ್ಕರ್ಟ ಅಥವಾ ಪರಕಾರ ಹೊಲೆಯುವದು ಅಳತೆಗಳನ್ನು ಬಾಲಿಕೆಯರೇ ತೆಗೆದು ಕೊಳ್ಳತಕ್ಕದ್ದು. ಪರಕಾರದ ಬದಿಗಳನ್ನು ಜೋಡಿಸುವದು, ದುಂಡು ಕಟ್ಟುವದು, ನಡಪಟ್ಟಿ ಮುಂತಾದವುಗಳನ್ನು ಬಾಲಕೆಯು ಹೊಲೆಯಬೇಕ ಆದರೆ ಮೇಲಿನ ನಡಪಟ್ಟಿಯಲ್ಲಿ ನೀರಿಗೆಗಳನ್ನು ನಿರ್ಣಯಿಸಿ ಸಹಾಯಮಾಡುವ ಕೆಲಸವನ್ನು ಶಿಕ್ಷಿಕೆಯು ಮಾಡಬೇಕ

ಹೊಲಿಯುವ ಕೆಲಸವನ್ನು ಬಾಲಿಕೆಯು ಮಾಡತಕ್ಕದ್ದು. ಕೆಳಗಿನ ಚಿತ್ರವಿಚಿತ್ರ (Fancy) ಹೊಲಿಗೆಗಳನ್ನು ಕಲಿಸ ಬೇಕು.—

೧:— ಗುಂಡಿ ಮನೆ ಹೊಲಿಗೆ.



ಗುಂಡಿಮನೆ ಹೊಲಿಗೆ

೨:— ಸರಪಳಿ ಹೊಲಿಗೆ.

ಸರಪಳಿ ಹೊಲಿಗೆ

೩:— ರಪ್ಪು ಹೊಲಿಗೆ.



ರಪ್ಪು ಹೊಲಿಗೆ

೪:— ರೆಕ್ಕೆ ಹೊಲಿಗೆ.

೫:— ಟಂಜಿನ ಹೊಲಿಗೆ.



೬:— ದೇಟನ ಹೊಲಿಗೆ.



ಪರಕಾರವನ್ನು ಅಲಂಕರಿಸುವದರ ಸಲುವಾಗಿ ಈ ಹೊಲಿಗೆಗಳನ್ನು ಉಪಯೋಗಿಸುವದು.

ಕೊಕ್ಕೆ ಸೂಜಿಯ ಹೆಣಿಕೆಯಿಂದ ಮತ್ತು ಎರಡು ಸೂಜಿಗಳ ಮೇಲಿನ ಹೆಣಿಕೆಯಿಂದ ಉಣ್ಣೆಯ ಸಾದಾ ಚಾಕ ಗಳು ಅಥವಾ ಸಂಣ ಸಂಣ ಉಡುಪುಗಳು.

ಳನೆಯ ಇಯತ್ತೆ

ವಿದ್ಯಾರ್ಥಿನಿಯು ತನ್ನ ಅಳತೆಯ ಶಕ್ಯ ಒಂದು ಝುಂಪರ ಅಥವಾ ಅಖಂಡ ಪೋಲಕಾ (Magyar Blouse) ಮತ್ತು ಚಡ್ಡಿ ಇವುಗಳನ್ನು ತಾನೇ ಕತ್ತರಿಸಿ ಹೊಲಿಯುವದು. ಈ ಕೆಳಗಿನ ಹೊಲಿಗೆಗಳು ಗೊತ್ತಿರಬೇಕು!—

(೧) ಟಬ್ಬಿ. (೨) ಎಳೆ. (೩) ದಳಿಗೆ. (೪) ದುಂಡು ಕಟ್ಟುವದು. (೫) ಒಮ್ಮೆ ಎಳೆಹಾಕಿ ಮುಡಿಚಿ ದುಂಡು ಕಟ್ಟುವದು.

ವಿದ್ಯಾರ್ಥಿನಿಯು ತಾನು ಧರಿಸುವ ಉಡುಪಿನ ಬಿರಡಿ ಹಚ್ಚುವದು ಇಲ್ಲವೆ ಭದ್ರತೆಗಾಗಿ ಹುಕ್ಸ ಅಥವಾ ಕಸಿ ಹಚ್ಚುವದು. ಬಿರಡಿ ಮನೆ ಮಾಡುವದು. ಮತ್ತು ಅವುಗಳನ್ನು ಸರಿ ಪಡಿಸುವದನ್ನು ಕಲಿಸತಕ್ಕದ್ದು.

ಈ ಮೊದಲೇ ಕಲಿಸಿದಂಥ ಚಿತ್ರವಿಚಿತ್ರ ಹೊಲಿಗೆಗಳು ಮತ್ತು ಕೆಳಗೆಕೊಟ್ಟವುಗಳ:—

೧:— ಗಂಟಿನ ಹೊಲಿಗೆ.



ಗಂಟಿನ ಹೊಲಿಗೆ

೨:— (ಎಳೆ ತೆಗೆದು) ಗಂಟು ಹಾಕುವ ಟಬ್ಬಿ.



ಗಂಟು ಹಾಕುವ ಟಬ್ಬಿ

೬:— ಫರ್ನ್ ಹೊಲಿಗೆ (ಎಲೆ ಹೊಲಿಗೆ).

೪:— ಹೂವಿನ ಹೊಲಿಗೆ (ಹೂವಿನ ಮಗ್ಗಿಗಳಂತೆ ಶೋಭಿಸುವ ಒಂದು ಅಂದದ ಹೊಲಿಗೆ) (**Lazy Daisy stich**)



೫:— ತುಂಬು ಹೊಲಿಗೆ (ರೇಶಿಮೆ ಇಲ್ಲವೆ ಜರದ ದಾರದಿಂದ ಅರಿವೆಯ ಮೇಲಿನ ಹೂವಿನ ಪಕಳಿಗಳನ್ನು ತುಂಬುವ ಹೊಲಿಗೆ). (**Satinstitch**)



ಈ ಎಲ್ಲವುಗಳನ್ನು ಕೊರಳಿನ ಸುತ್ತಲೂ ತೋಳಿನ ಸುತ್ತಲೂ ಮತ್ತು ಉಡುಪಿನ ಕೆಳ ಅಂಚಿಗೆ ಪರಿಪೂರ್ಣತೆಗಾಗಿ ಹಾಕತಕ್ಕದ್ದು.

ಸಾದಾ ಕಸೂತಿಯ ಕೆಲಸ. ಸಾದಾ ಕೊಳ್ಳೆ ಸೂಜಿಯ ಲೇಸು ಅಥವಾ ಚೌಕು ಹೆಣಿಕೆಯ ವಸ್ತ್ರ.

ಬೇರೆ ಬೇರೆ ಹೆಣಿಕೆಗಳ ಎರಡು ಸೂಜಿಗಳ ಮೇಲಿನ ಕೊರಳ ಪಟ್ಟಿಗಳನ್ನು ತಯಾರಿಸುವದು.

ಟಿಪ್ಪಣಿ:— ೧ನೆಯ ಮತ್ತು ೨ನೆಯ ಇಯತ್ತೆಗಳಿಗೆ ವಾರದಲ್ಲಿ ಒಂದು ತಾಸು ಕೆಲಸದಂತೆಯೂ ೩ನೆಯ ಮತ್ತು ೪ನೆಯ ಇಯತ್ತೆಗಳಿಗೆ ಒಂದೂ ವರೆ ತಾಸು ಕೆಲಸದಂತೆಯೂ ಈ ಮೇಲಿನ ಅಭ್ಯಾಸ ಪತ್ರಿಕೆಯನ್ನು ರಚಿಸಲಾಗಿದೆ.

ನವರತ್ನ

ಲೇಖಕರು: ಶ್ರೀ. ಬ. ಮು. ತಡಕನಹಳ್ಳಿ.

★

ಶ್ರೀ ಮಹಾದೇವನನು ಭಜಿಸುತ ।
ನೇಮದಿಂದಿರೆ ಶ್ರೀಘ್ರ ಮನ್ಮಥ ।
ನಾಮ ಸಂವತ್ಸರದಿ ಕೃಷ್ಣಪ್ಪಾತ್ಮಜರೆ ನೀವು ॥
ಗ್ರಾಮ ಲಕ್ಷ್ಮೇಶ್ವರದಿ ಜನಿಸಿ, ಸು ।
ನಾಮ ಲಕ್ಕುಂಡೆಂಬದೇ ಕಡೆ ।
ನಾಮ ನಿಮಗೈ ರಂಗರಾಯರೆ ಮುತ್ತಿ ನಂತಹದು ॥ ೧ ॥

ಓದುಕಲಿಯಲು ಬೆಂಗಳೂರಿಗೆ ।
ಮೋದದಿಂದಲಿ ಪೋಗಿ ಕನ್ನಡ।
ದೋದು ಮುಗಿಸುತ ಮಾಧ್ಯಮಿಕದೊಳಗಾರು ತರಗತಿಯ ॥
ಓದಿ ಬಂದಿರಿ ಧಾರವಾಡದೊ ।
ಳಾದಿರೈ ಮ್ಯಾಟ್ರಿಕ್ ಪರೀಕ್ಷೆಯ ।
ಸಾಧಿಸಿದಿರೈ ಪದವಿ ಪುಣೆಯೊಳು ಮಾಣಿಕದ ತೆರದಿ ॥ ೨ ॥

ಅನುನಯದಿ ಶಿಕ್ಷಣದ ಕಾರ್ಯದಿ ।
ಮನವನಿರಿಸುತ ರಾಣೆಬೆನ್ನೂ ।
ರಿನಲಿ ಯದರೋಲ್ ವಿಜಯ ಪುರದೊಳು ಕಾರವಾರದೊಳು ॥
ಜನರೊಲಿಯೆ ಬೆಳಗಾವಿಯೊಳು ತನು ।
ಮನದನರ್ಪಿಸಿ ಸೇವೆ ಸಲಿಸಲು ।
ಘನತರದ ಕೀರ್ತಿಯದು ಲಭಿಸಿತು ವಜ್ರದಂತಹದು ॥ ೩ ॥

ಇರದೆ ತರಬೇತಿಯನು ಹೊಂದಲು ।
ಸರಸದಿಂ ಮುಂಬೈಗೆ ತೆರಳುತ ।
ದೊರಕಿಸಿದಿರೈ ಯುಕವನಾ ತರಬೇತಿ ವರ್ಗದಲಿ ॥
ನೆರೆಪೊಗಳೆ ಹುಬ್ಬಳ್ಳಿಯೊಳು ಗುಣ ।
ವರರೆ ಧಾರಾ ನಗರದೊಳು ಮೇಣ್ ।
ಪುರವು ಬೆಳಗಾವಿಯೊಳು ಮೆರೆದಿರಿ ಮರಕತದ ತೆರದಿ ॥ ೪ ॥

ಧಾರವಾಡಕೆ ಬಂದಿರಲ್ಲವೆ ।
ಸಾರ ವಿದ್ಯಾಮೃತವನುಣಿಸಲು ।
ಧೀರ ಸದ್ಗುರು ದೊರೆಯೆ ನಮ್ಮಯ ಪುಣ್ಯಕೆಣೆಯುಂಟೆ ॥

ತೋರುವಿರಿ ಸಂಸ್ಥೆಯೊಳು ಮನುತೆಯು ।
ಬೀರುವಿರಿ ಶಿಷ್ಯರೊಳು ಪ್ರೀತಿಯೆ ।
ನಾರು ಸರಿಯೈ ತಮಗೆ ತಮ್ಮದು ಹವಳ ದಾಕಾಂತಿ ॥ ೫ ॥

ಜೀವನವೆ ಶಿಕ್ಷಣವು ಶಿಕ್ಷಣ ।
ಜೀವನವು ತಾನೆಂಬ ತತ್ವದ ।
ಭಾವನೆಯನೊಡ ಮೂಡಿಸುತ ಕೃತಿರೂಪಕಿಳಿಸಿದಿರಿ ॥
ನಾವು ಮಾಡುವನೇಕ ಹಬ್ಬಗ ।
ಳಾವ ತತ್ವದೊಳಿರುವವೆಂಬುವ ।
ಭಾವನತೆಯನು ತಿಳಿಸಿ ಮೆರೆಯುವಿರಿಂದ್ರನೀಲದವೋಲ್ ॥ ೬ ॥

ಕೋಳಿ ಕೂಗದ ಮುನ್ನ ವೇಳುತ ।
ಭಾಳಲೋಚನನನ್ನು ನೆನೆದರೆ ।
ಲಳಿನಾಳಾರ್ಜನೆಂಬುವದನ್ನು ನಿರೆ ಬಗೆದು ॥
ವೇಳೆಯಾಗಿರಲಾರುಗಂಟೆಯು ।
ಮೇಳದೊಡನೈತಂದು ತಪ್ಪದೆ ।
ತಾಳದಿಂ ಸ್ತುತಿನಾಡಿ ಮೆರೆವಿರಿ ಪುಷ್ಯರಾಗದವೋಲ್ ॥ ೭ ॥

ಮಾತು ಮೃದುವಿವೆ ಹೃದಯ ಸರಳದೆ ।
ಜಾತುರತೆಯಿಡೆ ಮಾಳ್ಪ ಕಾರ್ಯದಿ ।
ಮಾತು ಹೊರಟೆರೆ ಮುತ್ತು ಹೊರಟಂತಾಗುತಿಹುದಲ್ತೇ ॥
ನೀತಿ ಚತುರರೆ ಪ್ರೀತಿ ಪೂರ್ಣರೆ ।
ಭೀತಿ ರಹಿತರೆ ಸತ್ಯವಂತರೆ ।
ಖ್ಯಾತಿ ಚರಿತದಿ ಮೆರೆವಿರೈ ಗೋಮೇದಿಕದ ತೆರದಿ ॥ ೮ ॥

ಪ್ರೌಢ ಜನರಿಗೆ ಓದು ಕಲಿಸಲು ।
ಪ್ರೌಢ ಶಿಕ್ಷಣ ವರ್ಗ ತೆಗೆದಿರಿ ।
ರೂಢಿಯಾಯಿತು ಮೂಲ ಶಿಕ್ಷಣ ನಿಮ್ಮ ಶಿಷ್ಯರಿಗೆ ॥
ಕಾಡು ಸ್ಥಿತಿಯೊಳಗಿರುವ ಜನರನು ।
ತೀಡಲೋಸುಗ ಹಳ್ಳಿಗಾಡಿಗೆ ।
ನೋಡಿ ಗಮಿಸಿದ ನಿಮ್ಮ ಯಶ ವೈಡೂರ್ಯದಂತಹದು ॥ ೯ ॥

ತರಣಿಕೋಟಿ ಪ್ರಕಾಶ ಕಾಪಾ ।
ಡರಿಕೆಯನು ಕೊಟ್ಟೆಲ್ಲ ನರತನು ।
ಕರ ಮುಗಿದು ಬೇಡುವೆನು ದೇವನೆ ಭಕ್ತ ರಕ್ಷಕನೆ ॥
ನರರ ಪೊರೆಯುವಿ ಸುರರ ಪೊರೆಯುವಿ ।
ಹರುಷದಿಂದರಿಕೆಯನು ನೀಕೊ– ।
ಳ್ಳಿರದೆ ರಕ್ಷಿಸು ಕಾಂತರೆಮ್ಮಯ ಪ್ರಿನ್ಸಿಪಾಲರನು ॥ ೧೦ ॥

ಕನ್ನಡ "ವರ್ಧಪ್ರಾಯೋಜ" ಪರೀಕ್ಷೆ, ೧೯೫೦

೧. **ಪರೀಕ್ಷೆಯ ವಿಷಯಗಳು :**—(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ— ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸಗನ್ನಡ ನಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು. (ಬ) ವರ್ಧಸಾಹೇಬರು ರಚಿಸಿರುವ ವ್ಯಾಕ್ಯಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆ ಯಲ್ಲಿ ಅರ್ಥವಿವರಣೆ, ಟೀಕೆಟಿಪ್ಪಣಿ ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ:**— ಈ ಮೊದಲು ಇದ್ದ ೬೦ ರೂ. ಗಳ ಒಂದೇ ಬಹುಮಾನದ ಬದಲು ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ. ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ನಾಪಾಸಾಗಿದ್ದರೆ ಬಹು ಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿಮಾಡತಕ್ಕ ಅವಧಿ :**—ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೫೦ನೆಯ ಇಸವಿಯ ಎಗಸ ತಿಂಗಳ ೧೫ನೆಯ ತಾರೀಖಿನೊಳಗಾಗಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೆ ದಕ್ಷಿಣಭಾಗ, ಧಾರವಾಡ, ಇವರಿಗೆ ಮುಟ್ಟುವಂತೆ ಅನೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿನಸ ಹಾಗು ವೇಳೆ :**— ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೫೦ನೆಯ ಇಸವಿಯ ಅಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು, ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. **ಪ್ರಶ್ನೆ ಕಾಗದಗಳು :**— ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು :—ವ್ಯಾಕ್ಯಾವ್ಯಮಾಲೆ ೭೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು :—ಹಳಗನ್ನಡ ನಿಬಂಧ ೫೦; ಕನ್ನಡಬಾವುಟದಲ್ಲಿಯ ಕವಿತಾಭಾಗ ೩೦; ಹಳಗನ್ನಡ ಅಪರಿಚಿತ ಗದ್ಯಭಾಗಗಳು ೨೦.

ಮೂರನೆಯದು:—ಹೊಸಗನ್ನಡ ನಿಬಂಧ ೭೫;ಹನ್ನೆರಡನೆಯ ತತಮಾನದ ಕನ್ನಡ ಸಾಹಿತ್ಯ ಪರಿಚಯ ೭೫

ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:—(೧) ರಾಷ್ಟ್ರಕೂಟ ರಾಜನ ಶಾಸನ ಪುಟ ೫ (೨) ಕನ್ನಡ ನಾಡಿನ ಚೆಲುವು ಪುಟ ೧೭—೨೦ ಪೂರ್ಣ (೩) ಬಸವಣ್ಣನವರ ಗುಣ ಪುಟ ೪೫ (೪) ಮಹಾದೇವಿಯಕ್ಕ ಪುಟ ೪೬-೪೯ ಪೂರ್ಣ (೫) ಕನಕದಾಸರು ಪುಟ ೫೯-೬೧ ಪೂರ್ಣ (೬) ಅರುಣೋದಯ ಪುಟ ೯೭ (೭) ಹರ್ಷಾಲದ ವೈಭವ ಪುಟ ೧೦ (೮) ಕೊಡಗು ಪುಟ ೧೦೨ (೯) ತೆಂಕಣಗಾಳಿಯೂಟ ಪುಟ ೧೦೬ (೧೦) ಕುಮಾರವ್ಯಾಸ ಪುಟ ೧೨೧ (೧೧) ಬೇಲೂರಿನ ಶಿಲಾಬಾಲಿಕೆಯರು ಪುಟ ೧೩೬,

ಕವಿತಾ ಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೭೫ಗುಣಗಳ ಹನ್ನೆರಡನೆಯ ತತಮಾನದ ಕನ್ನಡ ಸಾಹಿತ್ಯಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವರ್ನಮೆಂಟ ಟ್ರೇನಿಂಗ್ ಕಾಲೇಜ
ಫಾರ್ ಮೆನ್, ಧಾರವಾಡ, ೭೧-೪--೧೯೫೯

(sd) **R. K. Lakkundi**
ಪ್ರಿನ್ಸಿಪಾಲರು

ಪ್ರಿನ್ಸಿಪಾಲ್ ಶ್ರೀ. ಲಕ್ಕುಂಡಿ ರಂಗರಾಯರಿಗೆ ಮಾನಪತ್ರ ಸಮರ್ಪಣೆ

★

ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ (ಧಾರವಾಡ) ದ ಪ್ರಿನ್ಸಿಪಾಲರಾದ ಶ್ರೀ. ರಂ. ಕೃ. ಲಕ್ಕುಂಡಿಯವರಿಗೆ ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳೂ ಶಿಕ್ಷಕರೂ ಪ್ರ್ಯಾಕ್ಟೀಸಿಂಗ ಸ್ಕೂಲಿನ ಶಿಕ್ಷಕರೂ ಒಟ್ಟು ಗೂಡಿ ದ. ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಶ್ರೀ. ಏ. ಎನ್. ಸಾನೆ ಅವರ ಅಧ್ಯಕ್ಷತೆಯಲ್ಲಿ ತಾ. ೫-೪-೧೯೪೪ ನೆಯ ದಿನ ಬಿನ್ನವತ್ತಳೆಯನ್ನು ರೇಶ್ಮೆಯ ಚೀಲದಲ್ಲಿ ಅರ್ಪಿಸಿದರು. ಶ್ರೀ. ಸಾನೇ ಅವರು ಪ್ರಿನ್ಸಿಪಾಲ್ ಶ್ರೀ. ಲಕ್ಕುಂಡಿಯವರ ಭಾವಚಿತ್ರದ ಅನಾವರಣವನ್ನು ಮಾಡಿ ಸಮಯೋಚಿತ ಉದ್ಬೋಧಕ ಭಾಷಣ ಮಾಡಿದರು. ಟ್ರೇನಿಂಗ ಕಾಲೇಜದ ಜನರಲ್ ಹಾಲ್ ನಗರದ ಪ್ರತಿಷ್ಠಿತ ವಿದ್ಯಾಭಿಮಾನಿಗಳಿಂದ ಕಿಕ್ಕಿರಿದು ತುಂಬಿತ್ತು. ಮಾನಪತ್ರ ಸಮಾರಂಭವು ಅತ್ಯಂತ ಆಚ್ಛಾದಕಪೂರ್ಣತೆಯಿಂದ ಸಾಗಿತು.

ಶ್ರೀ. ಲಕ್ಕುಂಡಿ ರಂಗರಾಯರು

ಮೊದಲು ಸ್ವಾಗತ ಗೀತೆಯಾದ ನಂತರ ಕಾರ್ಯಕ್ರಮವು ಪ್ರಾರಂಭವಾಯಿತು. ಪ್ರಿನ್ಸಿಪಾಲ್ ಶ್ರೀ. ಲಕ್ಕುಂಡಿಯವರ ಪರಿಚಯವನ್ನು ಈ ಮಾನಪತ್ರ ಸಮರ್ಪಣೆ ಮತ್ತು ಸತ್ಕಾರ ಸಮಿತಿಯ ಹಿರಿಯರಾದ ಶ್ರೀ. ಸಾಧನಿ ಎಸ್. ಎಸ್. (ಶಿಕ್ಷಕ ವಿದ್ಯಾರ್ಥಿ) ಅವರು ಮಾಡಿಕೊಟ್ಟರು. ನಂತರ ಶ್ರೀ. ಸೂದಿ (ಶಿಕ್ಷಕ ವಿದ್ಯಾರ್ಥಿ) ಅವರು ಮಾನಪತ್ರ ಓದಿದರು ಪ್ರಿನ್ಸಿಪಾಲ್ ಶ್ರೀ. ಲಕ್ಕುಂಡಿಯವರು ಮಾನಪತ್ರಕ್ಕೆ ಪ್ರಸಂಗೋಚಿತ ಮಮತೆಯ ಕಳಕಳಿಯ ಉತ್ತರವಿತ್ತರು. ಶ್ರೀ. ಶಿ. ಮು. ಹಿಳ್ಳಿ (ಶಿಕ್ಷಕ ವಿದ್ಯಾರ್ಥಿ) ಅವರು ಸರ್ವರ ಆಭಾರ ಮನ್ನಿಸಿದರು. ಬಂದವರೆಲ್ಲರಿಗೂ ಪಾನಕವನ್ನು ಕೊಡಲಾಯಿತು.

ಪ್ರಿನ್ಸಿಪಾಲ್ ಶ್ರೀ. ಲಕ್ಕುಂಡಿಯವರ ಪರಿಚಯ

ಜನನ:—೧೮೯೪ ಜುಲೈ ೨೦ನೆಯ ತಾರೀಖಿನ ದಿನ ಲಕ್ಷ್ಮೇಶ್ವರದಲ್ಲಿ.

ವಿದ್ಯಾಭ್ಯಾಸ:— ಬೆಂಗಳೂರಲ್ಲಿ ಪ್ರಾಥಮಿಕ ಶಿಕ್ಷಣ ಮಾಧ್ಯಮಿಕ ಶಿಕ್ಷಣ. ಧಾರವಾಡದಲ್ಲಿ ಸರಕಾರಿ ಹೈಸ್ಕೂಲಿನಲ್ಲಿ ಮ್ಯಾಟ್ರಿಕ್‌ದ ವರೆಗೆ ಶಿಕ್ಷಣ. ೧೯೧೫ ರಲ್ಲಿ ಮ್ಯಾಟ್ರಿಕ್‌ವಲ್ಲಿ ಅಲ್ಲಿಂದ ತೇರ್ಗಡೆಯಾದರು. ಪುಣೆಯ ಫರ್ಗ್ಯೂಸನ್ ಕಾಲೇಜದಲ್ಲಿ ಉಚ್ಚ ಶಿಕ್ಷಣ ಪಡೆದ ೧೯೧೯ರಲ್ಲಿ ಬಿ. ಎ. (ಆನರ್ಸ) ಪರೀಕ್ಷೆಯ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾದರು. ಮುಂಬಯಿ ಬಿ. ಟಿ. ಕಾಲೇಜದಲ್ಲಿ ಶಿಕ್ಷಣ ಹೊಂದಿ ೧೯೨೫ರಲ್ಲಿ ಬಿ. ಟಿ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆ ಹೊಂದಿದರು.

ವಿದ್ಯಾಖಾತೆಯಲ್ಲಿ ಸೇವೆ:—ಧಾರವಾಡ, ಕಾರವಾರ, ಬೆಳಗಾವಿ, ವಿಜಾಪುರದ ಹೈಸ್ಕೂಲುಗಳಲ್ಲಿ ಶಿಕ್ಷಕರಾ

ಕೆಲಸ ಮಾಡಿದರು. ಹುಬ್ಬಳ್ಳಿಯ ಆಂಗ್ಲೋ-ಉರ್ದು ಹೈಸ್ಕೂಲಿನಲ್ಲಿ ೧೩ ವರ್ಷ ಶಿಕ್ಷಕರಾಗಿ ಕಾರ್ಯ ಮಾಡಿದರು. ೧೯೩೯ ಜೂನ್‌ದಿಂದ ೧೯೪೭ ಮೇ ತಿಂಗಳ ವರೆಗೆ ಬೆಳಗಾವಿಯ ಬಿ. ಟಿ. ಕಾಲೇಜದಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿದ್ದರು. ೧೯೪೭ ಮೇ ತಿಂಗಳಲ್ಲಿ ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದರು.

ವಿಶಿಷ್ಟ ಒಲವು:— ಇತಿಹಾಸವು ಇವರಿಗೆ ಅತ್ಯಂತ ಪ್ರೀತಿಯ ವಿಷಯ. ಆಟಗಳಲ್ಲಿ ಟೇಬಲ್ ಟೆನ್ನಿಸ, ಬ್ಯಾಡ್‌ಮಿಂಟನ್, ಫುಟ್‌ಬಾಲ್, ಟೆನ್ನಿಸ್‌ಗಳಲ್ಲಿ ವಿಶೇಷ ಒಲವು ಉಳ್ಳವರು. ಪ್ರಾರ್ಥನೆಯಲ್ಲಿ ವಿಶೇಷ ಆಸ್ಥೆ ಇವರಿಗೆ.

ಟ್ರೇನಿಂಗ ಕಾಲೇಜದಲ್ಲಿ ಮಾಡಿದ ಸುಧಾರಣೆ:— ಮಾದರಿ ವಾರಗಳ ಸಪ್ತಾಹ. ಸಹಾಯಿ ಕಾರ್ಯ. ಹಬ್ಬಗಳ ದಿನಾಚರಣೆ. ಸೂತ್ರಯಜ್ಞ. ವಸತಿಗೃಹದ ಆದರ್ಶ ವ್ಯವಸ್ಥೆ. ಪ್ರಾಥಮಿಕ ಶಿಕ್ಷಣವು ಪರಿವರ್ಧಿತ ಮಾಸಪತ್ರಿಕೆಯಾದುದು.

ಪ್ರಿನ್ಸಿಪಾಲ್ ಶ್ರೀ. ಲಕ್ಕುಂಡಿಯವರು ಕಾಲೇಜದ ವಿದ್ಯಾರ್ಥಿ ವೃಂದಕ್ಕೂ ಶಿಕ್ಷಕ ವೃಂದಕ್ಕೂ ಅತೀವ ಪ್ರಿಯರಾಗಿದ್ದುದಕ್ಕೆ ಅವರಿಗೆ ದೊರೆತ ಮಾನಪತ್ರ, ಸತ್ಕಾರ ಸಮಾರಂಭದಲ್ಲಿಯ ಶಿಕ್ಷಕ--ವಿದ್ಯಾರ್ಥಿ ಮುಂತಾದವರ ನಿರ್ವ್ಯಾಜಸ್ತುತಿಯುಕ್ತ ಭಾಷಣಗಳೇ ಸಾಕ್ಷಿ. ಇವರು ೧೯೪೯ ಜುಲೈ ೨೦ನೆಯ ತಾರೀಖಿಗೆ ಸೇವಾನಿವೃತ್ತರಾಗಲಿದ್ದಾರೆ. ದೇವರು ಇವರಿಗೆ ಅಖಂಡ ಆರೋಗ್ಯ ಹಾಗು ಆಯುಸ್ಸನ್ನು ಕೊಡಲೆಂದು ಹಾರೈಕೆ.

—ಓರ್ವ ಪ್ರತ್ಯಕ್ಷದರ್ಶಿ.



ಸರೋಜಿನಿ—ನಾಯಡು

ಶ್ರೀ. ಓಕ. ಹೆಡ್‌ಮಾಸ್ತರ, ಶಿರಹಟ್ಟಿ

[ಶ್ರೀ. ಓಕ ಅವರು ರಚಿಸಿದ ಕವನಗಳಿಗೆ ಅನೇಕ ವಿದ್ಯಾರ್ಥಿಗಳು ಸರಿಯಾದ ಉತ್ತರಗಳನ್ನು ಕಳಿಸಿರುವರು. ಅವರ ಹೆಸರುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವದು.

—ಸಂಪಾದಕರು]

ಕಿರಿಯತನದಿ ಕಾವ್ಯ ಬರೆದು । ಹಿರಿಯ ಕಾವ್ಯ ಜನನಿಯೆನಿಸಿ ।
ಭರತ ರಾಷ್ಟ್ರ ಮುಂದುವರೆವ ನೇವೆ ಗೈಯಲೂ ॥
ದೊರೆಯೆ ಯು. ಪಿ. ರಾಜ್ಯ ತಂತ್ರ । ಸುರಭಿ ತೆರದಿ ಜನಕೆ ಸುಖಿಸಿ ।
ತರಣಿ ಕುಲಜಳಂತೆಯಾಳ್ದ ಸುಕವಿಯಾತ್ರಿ ಈಕೆಯೂ ॥

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

(ಪ್ರಕಟನೆ)

★

೧೯೪೮-೪೯ರಿಂದ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯನ್ನು ಭಾಷಾವಾರ ತಳಹದಿಯ ಮೇಲೆ ನಡೆಯಿಸಲಾಗುತ್ತಿದೆ. ಉಮೇದುವಾರರಿಗಾಗಿ ಪ್ರಾಂತದ ಮೂರು ಪ್ರಾದೇಶಿಕ ಭಾಷೆಗಳಲ್ಲಿ ಪ್ರತ್ಯೇಕ ಪ್ರಶ್ನಾಕಾಗದಗಳಿರುವವು. ಅಲ್ಲದೆ ಅಂಥವೇ ಉರ್ದು ಮತ್ತು ಹಿಂದಿಯಲ್ಲಿ ಸಹ ಪ್ರಶ್ನಾಕಾಗದಗಳಿರುವವು. ಈ ವ್ಯವಸ್ಥೆಯ ಮೇರೆಗೆ ಉತ್ತರ ಭಾಗದಲ್ಲಿಯ ಗುಜರಾತಿ ಮತ್ತು ಉರ್ದು ಉಮೇದುವಾರರಿಗೆ ಇತಿಹಾಸ ಹಾಗು ಗಣಿತದಂತಹ ವಿಷಯಗಳಲ್ಲಿ ಬೇರೆ ಬೇರೆ ಪ್ರಶ್ನಪತ್ರಿಕೆಗಳನ್ನು ತೆಗೆಯಲಾಗುತ್ತದೆ. ನಿಜವಾಗಿ ಪ್ರಾಂತದ ತುಂಬೆಲ್ಲ ಉರ್ದು-ಗುಜರಾತಿ, ಉರ್ದು-ಕನ್ನಡ, ಉರ್ದು- ಮರಾಠಿ ವಿದ್ಯಾರ್ಥಿಗಳು ಒಂದೇ ಬಗೆಯ ಪ್ರಶ್ನಾಕಾಗದಗಳನ್ನು ಉತ್ತರಿಸಬೇಕಾಗುವುದು, ಆದರೆ ಗುಜರಾತಿ, ಮರಾಠಿ ಮತ್ತು ಕನ್ನಡ ಉಮೇದವಾರರು ಬೇರೆ ಪ್ರಶ್ನಾಕಾಗದಗಳನ್ನು ಉತ್ತರಿಸಬೇಕಾಗುವದು. ಹಿಂದಕ್ಕೆ ಉರ್ದು ಉಮೇದವಾರರಿಗೆ (ಅರ್ಥಾತ್ ಉರ್ದು ಮಾಧ್ಯಮದಿಂದ ಶಿಕ್ಷಣ ಪಡೆಯುತ್ತಿದ್ದವರಿಗೆ) ಕೆಲವೊಂದು ಜಲ್ಲೆಗಳಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಮುದ್ರಿತವಾದ ಗಣಿತ (ಅಂಕಗಣಿತ, ಭೂಮಿತಿ ಮತ್ತು ಸಾದಾ ಜಮಾಖರ್ಚಿನ) ದ ಪ್ರಶ್ನಪತ್ರಿಕೆಗಳನ್ನು ತೆಗೆಯಲಾಗುತ್ತಿತ್ತೆಂದು ತೋರುತ್ತದೆ.ಆದರೆ ಇನ್ನು ಮುಂದೆ ಇದು ಸಾಧ್ಯವಾಗುವುದಿಲ್ಲ.ಏಕೆಂದರೆ, ಉರ್ದು ಹಾಗು ಉರ್ದುವಲ್ಲದ ಉಮೇದುವಾರರ ಗಣಿತ ವಿಷಯದ ಪ್ರಶ್ನಾ ಕಾಗದಗಳು ಸಂಪೂರ್ಣ ಭಿನ್ನವಾಗುವವು. ಅಲ್ಲದೆ ಹಾಗೆ ಮಾಡುವುದು ಶೈಕ್ಷಣಿಕ ಕಾರಣಗಳಿಂದಲೂ ನ್ಯಾಯಸಮ್ಮತವಾದುದಲ್ಲ. ಉರ್ದುವು ಮಾತೃಭಾಷೆಯೆಂದು ಹೇಳಿಕೊಳ್ಳುವ ಹಾಗು ಉರ್ದುವಿನ ಮಾಧ್ಯಮದಿಂದ ಶಿಕ್ಷಣ ಪಡೆಯುತ್ತಿರುವ ಉಮೇದುವಾರರು ಉರ್ದುವಿನಲ್ಲಿ ತೆಗೆದ ಪ್ರಶ್ನಾ ಪತ್ರಿಕೆಗಳನ್ನು ಉತ್ತರಿಸಲು ಸಮರ್ಥರಾಗಿರಲೇ ಬೇಕು. ಆದುದರಿಂದ ೧೯೫೦ರಲ್ಲಿ ನಡೆಯಲಿರುವ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಕುಳಿತುಕೊಳ್ಳಲಿರುವ ಉರ್ದು ಉಮೇದುವಾರರಿಗೆ ಎಲ್ಲ ವಿಷಯಗಳಲ್ಲಿ ಉರ್ದುವಿನಲ್ಲಿಯೇ ಕೊಡುವ ಪ್ರಶ್ನಾ ಪತ್ರಿಕೆಗಳನ್ನು ಅವರು ಉತ್ತರಿಸಬೇಕಾಗುವುದೆಂದು ಅವರಿಗೆ ಎಚ್ಚರ ಕೊಡಬೇಕು, ಇಂಥ ಉಮೇದುವಾರರಿಗೆ ಗಣಿತ ಮತ್ತು ಇತರ ವಿಷಯಗಳನ್ನು ಉರ್ದು ಮಾಧ್ಯಮದಿಂದಲೇ ಕಲಿಸುವ ಏರ್ಪಾಟು ಮಾಡಬೇಕು; ಗುಜರಾತಿ ಉರ್ದು, ಮರಾಠಿ-ಉರ್ದು ಮತ್ತು ಕನ್ನಡ-ಉರ್ದು ಉಮೇದುವಾರರ ಮಾತೇ (ವಿಷಯವೇ) ಬೇರೆಯಾಗಿದೆ, ಮತ್ತು ಅವರು ಈ ಮೊದಲಿನಂತೆ ಉರ್ದುವನ್ನು ಹೆಚ್ಚಿನ ವಿಷಯವೊಂದನ್ನಾಗಿ ತೆಗೆದುಕೊಂಡು ಗುಜರಾತಿ, ಮರಾಠಿ ಹಾಗು ಕನ್ನಡ ಉಮೇದುವಾರರಿಗಾಗಿ ಇರುವ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಕುಳಿತುಕೊಳ್ಳಬೇಕು.

(ಸಹಿ) * * * *

ಡಿ. ಪಿ. ಆಯ್. ಅವರ ಪರವಾಗಿ.

ತ್ವರೆಮಾಡಿರಿ

ಶ್ರೀ. ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯೋಗಿ ಶಾಲೋಪಯೋಗಿ ಪುಸ್ತಕಗಳು. ಸರಕಾರದಿಂದ ಮಂಜೂರ ಆಗಿವೆ. ಹೊಸ ಅಭ್ಯಾಸ ಪತ್ರಿಕೆಯಂತೆ ಬರೆಯಲ್ಪಟ್ಟಿವೆ

ಸಾಮಾನ್ಯ ವಿಜ್ಞಾನ :—ಒಳ್ಳೇ ಅನುಭವದಿಂದ

೧ ರಿಂದ ೫ನೇ ಇಯತ್ತ್ರೆಯವರೆಗೆ ಬರೆದವುಗಳಿವೆ. ಸಚಿತ್ರವಿದ್ದು ವಿದ್ಯಾರ್ಥಿಗಳಿಗೆ ತಕ್ಕವುಗಳಾಗಿವೆ. ಬೆಲೆ ಕಡಿಮೆ ಅವೆ.

ಪೌರ ನೀತಿ

೧ ರಿಂದ ೬ನೇ ಇಯತ್ತ್ರೆಯ ವರೆಗೆ ಅವೆ. ಇವೂ ತೀರ ಹೊಸ ಅಭ್ಯಾಸ ಕ್ರಮದಂತೆ ಅನುಭವದಿಂದ ರಚಿಸಲ್ಪಟ್ಟಿವೆ.

ಪ್ರಪಂಚ ಪರಿಚಯ

೧ ನೇ ಇಯತ್ತ್ರೆಯಿಂದ ೬ನೇ ಇಯತ್ತ್ರೆಯವರೆಗೆ ಭೂಗೋಲದ ಹೊಸ ಜ್ಞಾನ ಮಾಡಿ ಕೊಡುವ ಪುಸ್ತಕಗಳಿವು.

ಕಥೆಯ ಪುಸ್ತಕಗಳು. **ಮುಲ್ಕೀ ಪರೀಕ್ಷೆಗಾಗಿ**

ಕುಮಾರ ಕಿಟ್ಟಣ್ಣ ೦—೪—೦		ಗಣಿತಸಂಗ್ರಹ	೧—೪—೦
ಮಹಾತ್ಮರ ಪರಿಚಯ ೦—೪—೦		ವಾಕ್ಯರಚನೆ ಹಾಗೂ ಸಂಬಂಧಬರೆಹ	೧—೦—೦
ರಾಮಕೃಷ್ಣನೀತಿಯಕಥೆ ೦—೬—೦		ಗುಣವಿವೇಚನೆ	೦—೮—೦

ಇದರಂತೆ ೧೦—೧೫ ಕಥೆಯ ಪುಸ್ತಕಗಳಿವೆ. ಇವಲ್ಲದೆ ನಮ್ಮಲ್ಲಿ ಚಿ. ಶ್ರೀ. ಕುಲಕರ್ಣಿಯವರ ಮುಲ್ಕೀ ಪರೀಕ್ಷೆಯ ಎಲ್ಲ ವಿಷಯಗಳ ಪ್ರಶ್ನೋತ್ತರ ಮಾಲೆಗಳು ಠೋಕಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕೆ. ಎಸ್. ಕುಲಕರ್ಣಿ ಬುಕ್‌ಡಿಪೋ,

ಸ್ಟೇಶನ ರೋಡ, ಹುಬ್ಬಳ್ಳಿ.

ಸೂಚನೆ

ಸರಕಾರದ ಪತ್ಯಪುಸ್ತಕ ಕಮೀಟಿಗ ಳಿಂದ ಮಂಜೂರಾದ ಪುಸ್ತಕಗಳ ಜಾಹೀ ರಾತುಗಳನ್ನಷ್ಟೇ ಸ್ವೀಕರಿಸಲಾಗುವದು.

ಕ. ಶ್ರ ಲಕ್ಕುಂಡಿ
ಪ್ರಧಾನ ಸಂಪಾದಕರು.

ಸಮಾಜ ಪುಸ್ತಕಾಲಯ, ಧಾರವಾಡ

ಕ್ರಯಪಟ್ಟಿ ಉಚಿತ!!!

ನಿಮ್ಮ ಮುನಿಯ ಪಾಠ ಶಾಲೆಯ ವಾಚನಾಲಯ ಗಳಿಗೆ ಶ್ರೇಷ್ಠ ಸಾಹಿತ್ಯ ಬೇಕೆಲ್ಲವೇ? ಹಾಗಾದರೆ ಸಮಾಜ ಪುಸ್ತಕಾಲಯಕ್ಕೇ ಬರೆಯಿರಿ.

ವಿವಿಧ ಪ್ರಕಾಶಕರಿಂದ ಪ್ರಕಟವಾದ ಕತೆ ಕಾದಂಬರಿ ಗಳೂ ಮಕ್ಕಳ ಪುಸ್ತಕಗಳೂ ಶಾಸ್ತ್ರೀಯ ಪುಸ್ತಕಗಳೂ, ಸಾಹಿತ್ಯ ಸಂಶೋಧನೆ ಇತ್ಯಾದಿ ಎಲ್ಲ ಬಗೆಯ ಗ್ರಂಥ ಗಳೂ ದೊರೆಯುವ ಒಂದೇ ಒಂದಾದ ಸ್ಥಳ— ಸಮಾಜ ಪುಸ್ತಕಾಲಯ, ಧಾರವಾಡ.

ನಿಮ್ಮ ಸಂಪೂರ್ಣ ಅಪೇಕ್ಷೆಗೆ ಮೀರಿದ ವಿಳಾಸಕ್ಕೆ ಪತ್ರ ಬರೆಯಿರಿ. ನಿಮ್ಮ ವಿಳಾಸವನ್ನು ಸುಸ್ಪಷ್ಟವಾಗಿ ಬರೆಯುವುದು ಅವಶ್ಯಕ.

ಸರಕಾರದಿಂದ ಮಂಜೂರಾದ ಪುಸ್ತಕಗಳು

ಶ್ರೀಮತ್ ಶಾಲಿ ರಾಮಚಂದ್ರರಾಯರಿಂದ ರಚಿತವಾದವು.

ಬಾಲಕಾಂಡ ೧—೦—
ಅಯೋಧ್ಯಾಕಾಂಡ ೧—೪—

ಪೂರ್ತಿಯ ಗಣಕ: ಶ್ರೀ. ಕೆ. ಕೆ ಗಲಗಲಿ.

ಪ್ರಾಥಮಿಕ ಶಾಲೆಯ ಇಯತ್ತೆಗಳಿಗೆ ಬೆಲೆ ೧—೦—

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಕಳವಾಡಿ ಬುಕ್ ಡಿಪೋ
ವಿಜಯಮೋಡ, ಧಾರವಾಡ

ಶ್ರೀ. ಪಾವಟಿ ಚಿನ್ನಪ್ಪನವರು ಜಡಲ್ಲ ಎಂ ಕೇರಿಯ ಅಧ್ಯಾಪಕರು, ಗೋಕಾಕ ಇವರಿಂದ ರಚಿತವಾ

ಹೊತ್ತಿಗೆಗಳು

೧) ಮಕ್ಕಳ ಪದ್ಯಾವಳಿ ೨—
೨) ಕಾಂತಿಸಮರ ೦—
೩) ಪಿಸೇರ (ವಿಕಾಂಕ ನಾಟಿಕ) ೦—
೪) ಅಶಿಕ್ಷಿತರ ಗೋಳು (ವಿಕಾಂಕ ಪ್ರಾ ೨—
೫) ಕರುಣಾ (ಶ್ರೀ. ಕಾ. ದ ತನೆಯ ನವರಕ್ಕೆ ಪಠ್ಯವೆಂದು ಮಂಜೂರುಗೊಂಡಿದೆ) ೧—

ಕರ್ನಾಟಕದಿಂದ ಲಾಯಲ್ಪರಿ ಪುಸ್ತಕದಂದು ಮಂಜೂರಾದ ಇವಲ್ಲದೆ ಕೆಳಿಸಿದ ಪುಸ್ತಕಗಳೂ ದೊರೆಯುವು

೬) ವಯಸ್ಕರ ಪದ್ಯಾವಳಿ ೦—

ಅಚ್ಚಾಗಲಿರುವ ಪುಸ್ತಕಗಳು:

೭) ವಯಸ್ಕರ ಶಿಕ್ಷಣ ಶಿಕ್ಷಕ

ಪುಸ್ತಕಗಳು ದೊರೆಯುವ ಸ್ಥಳ
ನವಿನ ಚಿನ್ನಪ್ಪ ಪಾವಟಿ
ಜಯಶಾಲಿಯ ಪ್ರಕಾಶನ ಸಮಿತಿ, ಗೋಕಾ

Printed by D. T. Kayasth at Ravindra Press, 1 B Hill (House No 1290) D
Edited and Published by B K. Lakkundi Principal T. C. M., R. V. Desai Principal
V D. Nadakarni, Lady Superintendent T. C. W Dharwar Jointly at the Kannada P
Shikshan Office Govt. Training College for Men Dharwar

1950 – 51

ಸ್ಥಾಪನೆ : ೧೯೬೫ ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು
ಶತಮಾನೋತ್ತರ ಬೆಳ್ಳಿ ಮಹೋತ್ಸವ
ಪುಸ್ತಕ ಪ್ರದರ್ಶನ ೧೯೮೯

ಶತಮಾನೋತ್ಸವ ಬೆಳ್ಳಿ ಸಭೆ
(ಅಕ್ಟೋಬರ್ ೧೯೮೯ ಮಾಹೆ)
ವರ್ಷ 1950

ಶ್ರೀ ಚನ್ನಬಸಪ್ಪನವರು
ಗದಗ-ಡಂಬಳ
ನೆಯ ಸಂಪುಟ

ಕನ್ನಡ ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತತಿ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ
ಡೆಪ್ಯೂಟಿ ಚನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೮

ಕನ್ನಡ

ಪ್ರಾಥಮಿಕ ಶಿಕ್ಷಣ

ಪ್ರತಿ

ಜೂನ–ಜುಲೈ

೧೯೫೦

*

ವಾರ್ಷಿಕ ಚಂದಾ

೪–೦–೦

*

ಬೆಲೆ

೦–೧೨–೦

—ಕನಕದಾಸರು

ಕನ್ನಡ ಪ್ರಾಥಮಿಕ ಶಿಕ್ಷಣ

ಸಂವಾದಕ ಮಂಡಳ

ಸಂಚಾಲಕರು: ಶ್ರೀ. ಬಿ. ಎಂ. ಮೀಮಾಂಸಿ, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ
ಪ್ರಧಾನ ಸಂವಾದಕರು: ಶ್ರೀ. ರಾ. ವಿ. ದೇಸಾಯಿ, ಪ್ರಿನ್ಸಿಪಾಲ, ಗಂಡುಮಕ್ಕಳ ಟ್ರೇನಿಂಗಕಾಲೇಜ, ಧಾರವಾಡ
ಸಹಸಂವಾದಕರು:
ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೦	ಜೂನ-ಜುಲೈ ೧೯೫೦	ಸಂಚಿಕೆ ೯-೨

ಪರಿವಿಡಿ

೧.	ಸಂಪಾದಕೀಯ		೨
೨.	ಮೂಲ ಶಿಕ್ಷಣದಲ್ಲಿ ಸಮವಾಯ ಪದ್ಧತಿಯ ಮಹತ್ವ	ಶ್ರೀ. ರಾ. ವಿ. ದೇಸಾಯಿ	೫
೩.	ಕೋಲ್ಹಿಸ್‌ನಗರದ ನರಪಶು ರಾಕ್ಷಸವು	ಶ್ರೀ. ತಟ್ಟಿ ಶ್ಯಾಮರಾಯರು	೯
೪.	ಮನಃಶಾಸ್ತ್ರವೂ ಶಿಕ್ಷಣವೂ, ...	ಶ್ರೀ. ಬ. ಮ. ಶಿಂತ್ರಿ	೧೪
೫.	ಪ್ರಾಥಮಿಕ ಶಾಲೆಯ ಮಂದಗಾಮಿ ಶಿಶು-೧	ಹೆ. ಟ್ರೆ. ಕಾ. ಧಾರವಾಡ ಇವರಿಂದ	೧೮
೬.	ಶಿಕ್ಷಣದಿಂದ ಗ್ರಾಮಗಳ ಪುನರ್ಘಟನೆ	ಶ್ರೀ. ತಟ್ಟಿ ಶ್ಯಾಮರಾಯರು	೨೫
೭.	ದುಡಿಮೆ	ಶ್ರೀ. ಕೆ. ಬಿ. ತೇರಗಾಂವಕರ	೩೨
೮.	ಪುಸ್ತಕ-ವಿಮರ್ಶೆ	ಶ್ರೀ. ಮಾನೇಶ್ವರ ನಾಯಿಕ	೩೫
೯.	ಸಂಶೋಧನ ಕಾರ್ಯದಲ್ಲಿ ತೊಡಗಿದ ಶಿಕ್ಷಕ-ಶಿಕ್ಷಕಿಯರು	ಶ್ರೀ. ಬ. ಮ. ಶಿಂತ್ರಿ	೩೪
೧೦.	ಮಧುಸಂಚಯ	ಶ್ರೀ. ಜೋಗು	೪೧
೧೧.	ವಿಮಾನ ಮಾರ್ಗಗಳು	ಶ್ರೀ. ಕಲಕರ್ಣಿ ಕೇಶವರಾಯರು	೪೨

ಪ್ರಧಾನ ಸಂಪಾದಕರು: ಡಾ. ರಾ. ವಿ. ದೇಸಾಯಿ

ಸಂಪಾದಕೀಯ

ಹೊಸ ವರ್ಷಾರಂಭ:

ಈ ಸಂಚಿಕೆಯಿಂದ ಕನ್ನಡ ಪ್ರಾಥಮಿಕಶಿಕ್ಷಣವು ಂನೆಯ ವರುಷದಲ್ಲಿ ತನ್ನಡಿಯನ್ನು ಇಟ್ಟಿದೆ. ಕಳೆದ ವರುಷ ಇದು ಅನೇಕ ಎಡರುಗಳಿಗೆ ಈಡಾಗುತ್ತ, ವನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯನ್ನಿಡು- ತ್ತಿರುವುದು ಆನಂದ ಸಂಗತಿಯಾಗಿದೆ. ಇದಕ್ಕೆ ಜೀವನ- ಶಿಕ್ಷಣದ ಸಂಜೀವನಿ ಶಕ್ತಿಯೇ ಕಾರಣವೆಂದು ಹೇಳಿದಲ್ಲಿ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಈ ಹೊಸ ವರುಷದಲ್ಲಿ 'ಕನ್ನಡ ಪ್ರಾಥಮಿಕ ಶಿಕ್ಷ- ಣವು' ಧಾರವಾಡ ಭಾಗದ ವಿದ್ಯಾಧಿಕಾರಿಗಳಾದ ಶ್ರೀ. ವಿ.ಎಂ. ಮೀರಜಾಂಸಿ ಅವರ ನೇತೃತ್ವದಲ್ಲಿ ಒಂದು ಹೊಸ ಪೀಠಿಜ್ಜೆಯನ್ನು ಇಡಲಿದೆ. ಅದಾವುದೆಂದರೆ—ಪ್ರಾಥಮಿಕ ಶಿಕ್ಷಣದಲ್ಲಿ ಮುಡಿಯುವವರೆಲ್ಲರಿಗೂ ಶಿಕ್ಷಣದ ಪ್ರಗತಿಗೆ ಸಂಬಂಧಪಟ್ಟ ಪುಟ್ಟ ಪುಟ್ಟ ಹೊತ್ತಿಗೆಗಳನ್ನು ಕೊಡುವದು. ಇದರಿಂದಾಗಿ ಪ್ರಾಥಮಿಕ ಶಿಕ್ಷಣವು ಕನ್ನಡ ಸಾಹಿತ್ಯ ಭಾಂಡಾರವಲ್ಲಿ ಇರುವ ಶಿಕ್ಷಣ ವಿಷಯಕ ಸಾಹಿತ್ಯದ ಪರಿಚಯವನ್ನು ತುಂಬಿಕೊಡುವ ಸಾಹಸದ ಕಾರ್ಯವನ್ನು ಕೊರಲಿದೆ. ಈ ಕಾರ್ಯಕ್ಕೆ ಸರ್ವ ಶಿಕ್ಷಣ ಪ್ರೇಮಿಗಳ ಹಾಗೂ ವಿಶೇಷತಃ ಪ್ರಾಥಮಿಕ ಶಿಕ್ಷಕರ ಸಕ್ರಿಯ ಸಹಾಯ, ನೆರವು, ಸಹಾನುಭೂತಿ ಅವಶ್ಯಕವೆಂದು ಹೇಳದಿರಲಾರೆವು. ಹೋದ ವರುಷದಂತೆಯೆ ನವು ಚಂದಾದಾರರಾಗಿರುವವರೂ ಜಾಹೀರಾತುದಾರರೂ ಲೇಖಕರೂ ನಮಗೆ ನೆರವಾಗಿ ನಮ್ಮಿಂದ ಕನ್ನಡನಾಡ ಶಿಕ್ಷಣದ ಪ್ರಗತಿಗಾಗಿ ಸೇವೆಯನ್ನು ತೆಗೆದುಕೊಳ್ಳುವ ರೆಂದು ನೆನೆನಂಬಿದ್ದೇವೆ.

ಸಂಪಾದಕ ಮಂಡಳದ ವಿಸ್ತರಣೆ:

ಮುಂಬಯಿ ರಾಜ್ಯದ ಸರಕಾರವು ಪ್ರಾಥಮಿಕ ಶಿಕ್ಷಣದತ್ತ—ಜೀವನಶಿಕ್ಷಣದತ್ತ—ವಿಶೇಷ ಲಕ್ಷ್ಯ ಹರಿಸಿರುವುದು ಆಭಿನಂದನೀಯವೂ ಸ್ವಾಗತಾರ್ಹವೂ ಆಗಿದೆ. ಮುಂಬಯಿ ರಾಜ್ಯದಲ್ಲಿ ಈಗ ನಡೆಯುತ್ತಿರುವ ಗುಜರಾತಿ, ಮರಾಠಿ, ಉರ್ದು ಮತ್ತು ಕನ್ನಡ ಪ್ರಾಥ- ಮಿಕ, ಶಿಕ್ಷಣ ಈ ಪತ್ರಿಕೆಗಳು ಪ್ರಾಥಮಿಕ ಶಿಕ್ಷಕರಿಗೆ ಪ್ರಾಥಮಿಕ ಶಿಕ್ಷಣದ ನಾನಾ ಅಂಗಗಳ, ಸಂಶೋಧನೆ ಗಳ, ಹೊಸ ಹೊಸ ಪದ್ಧತಿಗಳ ಹಾಗೂ ಶೈಕ್ಷಣಿಕ ಪ್ರಯೋಗಗಳ ಪರಿಚಯವನ್ನು ಮಾಡಿಕೊಡಬೇಕೆಂಬ ಉದ್ದೇಶದಿಂದ—ಶಾಲಾಪತ್ರಿಕೆಗಳು ಹೆಚ್ಚು ಉಪಯುಕ್ತ ವಾಗಬೇಕೆಂಬ ಉದ್ದೇಶದಿಂದ—ಸಂಪಾದಕ ಮಂಡಲ ದಲ್ಲಿ ವಿಸ್ತರಣೆಯನ್ನು ಮಾಡಿರುವುದಲ್ಲದೆ, ಪ್ರಥಮ ಕರಗತಿಯ ಹಾಗೂ ದ್ವಿತೀಯ ಕರಗತಿಯ ಶಾಲೆಗಳಿಗೂ 'ಪ್ರಾಥಮಿಕ ಶಿಕ್ಷಣ'ದ ಪ್ರತಿಗಳು ಮುಟ್ಟುವಂತೆ ಮಾಡ

ೀಕೆಂದು ಯೋಜಿಸಿದೆ. ಮುಂಬಯಿ ಸರಕಾರದ ಈ ೋಜನೆಯ ಮೇರೆಗೆ 'ಕನ್ನಡ ಪ್ರಾಥಮಿಕ ಶಿಕ್ಷಣ'ದ ಂಪಾದಕ ಮಂಡಳಕ್ಕೆ ಧಾರವಾಡ ಭಾಗದ ಸೇವಾ ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ುವ ಶ್ರೀ. ಬಿ. ಯಂ. ಶಿಂತ್ರಿಯವರನ್ನೂ ನವಲಗುಂದದ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಶ್ರೀ. ಎಸ್. ಆರ್. ತಟ್ಟಿ ಅವರನ್ನೂ ಸಹಾಯಕ ಸಂಪಾದಕ ನ್ನಾಗಿ ನಿಯಮಿಸಿದೆ. ಇವರೀರ್ವರೂ ನುರಿತ, ಅನು ನವಿಕ ಶಿಕ್ಷಣವಿಶಾರದರು. ಇವರೀರ್ವರ ಸೇರ್ಪಡೆ ಯಿಂದ ಸಂಪಾದಕ ಮಂಡಳದ ಕಳೆಯು ಇಮ್ಮಡಿಸಿದೆ ಯೆಂದು ತಿಳಿಸಲು ಸಂತೋಷವೆನಿಸುತ್ತದೆ. ಮತ್ತು ಪರಿವರ್ಧಿತ ಸಂಪಾದಕ ಮಂಡಳವು ಪ್ರಾಥಮಿಕ ಶಿಕ್ಷ ಣದ ಸೇವೆಯನ್ನು ಇತೋಪ್ಯಧಿಕವಾಗಿ ಮಾಡುವು ದೆಂದು ಭರವಸೆಯನ್ನಿಯುತ್ತೇವೆ.

ವರ್ಗಾವರ್ಗಿ:

ಶಿಕ್ಷಣ ಕ್ಷೇತ್ರದಲ್ಲಿ ಈಗ ಭರದಿಂದ ಕ್ರಾಂತಿಯಾಗ ತೊಡಗಿದೆ. ಹಳೆಯದು ಹೋಗಿ ಹೊಸತನವು ಬರು ತ್ತಿದೆ. ಹಳಬರು ಹೊಸಬರಿಗೆ ಸ್ಥಾನಗಳನ್ನು ತೆರವು ಮಾಡಿ ಕೊಡುತ್ತಿದ್ದಾರೆ. ಹೊಸ ಹುರುಪಿನ ವಿದ್ಯಾ ವಿನಯಸಂಪನ್ನ ತರುಣ ಪೀಳಿಗೆಯ ಕೈಗೆ ಶಿಕ್ಷಣದ ಸೂತ್ರಗಳು ಹೋಗುತಿವೆಯೆಂಬುದಕ್ಕೆ ನಮ್ಮ ಭಾಗ ದಲ್ಲಾದ ವರ್ಗಾವರ್ಗಿಯೇ ಸಾಕ್ಷಿಎಂದು ಹೇಳಿದರೆ ತಪ್ಪಾ ಗಲಿಕ್ಕಿಲ್ಲ; ಅನುಚಿತವಾಗಲಿಕ್ಕಿಲ್ಲ. ಧಾರವಾಡ ಭಾಗದ ಹಿಂದನೆಯ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ರಾಗಿದ್ದ ಡಾ. ಚಿಕ್ಕರಮನೆಯವರು ಬೆಳಗಾಂವಿಯ ಮಾಧ್ಯಮಿಕ ಶಿಕ್ಷಕರ ತರಬೇತಿ ಕಾಲೇಜಿಗೆ ಪ್ರಿನ್ಸಿಪಾಲ ರಾಗಿ ನಿಯಮಿಸಲ್ಪಟ್ಟಿದ್ದಾರೆ ಮತ್ತು ಅವರ ಸ್ಥಳಕ್ಕೆ ಬೆಳಗಾಂವಿಯ ಸರದಾರ್ಸ ಹಾಯಸ್ಕೂಲಿನ ಹೆಡ್ ಮಾಸ್ತರರಾದ ಶ್ರೀ. ಆರ್. ವ್ಹಿ. ಕೊಪ್ಪೀಕರರೂ ಹಾಗು ಶ್ರೀ. ಬಿ. ಬಿ. ಶೇಖರವರು ಸರದಾರ್ಸ ಹಾಯಸ್ಕೂಲಿನ ಹೆಡ್‌ಮಾಸ್ತರರಿಂದೂ ನೇಮಕ ಮಾಡಲ್ಪಟ್ಟಿದ್ದಾರೆ. ವಿಜಾಪುರದ ಸರಕಾರಿ ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಎಚ್.ಎಮ್. ಕಾಳೆ ಯವರು ಕಾರವಾರದ ಸರಕಾರಿ ಪ್ರಾಥಮಿಕ ಟ್ರೇನಿಂಗ ಕಾಲೇಜಕ್ಕೂ, ಕಾರವಾರದ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಎಸ್. ಆರ್. ಜೋಶಿಯವರು ವಿಜಾಪುರದ ಸರಕಾರಿ ಟ್ರೇನಿಂಗ ಕಾಲೇಜಿಗೂ ಪ್ರಿನ್ಸಿ ಪಾಲರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಧಾರವಾಡ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದ ಶ್ರೀ. ಎಂ. ಜಿ. ಹಂದ್ರಾಳ ಅವರು ಧಾರವಾಡ ಭಾಗದ ದ್ವಿತೀಯ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಥಳಕ್ಕೆ ನಿಯಮಿಸಲ್ಪಟ್ಟಿದ್ದಾರೆ. ಇವರುಗಳಲ್ಲದೆ ಇನ್ನೂ ಅನೇಕ ವರ್ಗಾವರ್ಗಿಗಳು ಆಗಿವೆ, ಇನ್ನೂ ಕೆಲವು ಆಗಲಿವೆಯೆಂಬುದರ ಮುಂಗುರುತುಗಳು ತೋರತೊಡ ಗಿವೆ. ಹೊಸ ಹೊಸ ಸ್ಥಾನಮಾನಗಳಿಗೆ ಹೋದ ಶಿಕ್ಷಣದ ಈ ಅನುಭಾವಿಗಳು ತಮ್ಮ ಕಾರ್ಯವನ್ನು ಪ್ರಗತಿಪಥದಲ್ಲಿ ಸಾಗಿಸುವರೆಂದು ನಂಬಿ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಮತ್ತು ಅವರು ಈ ಪ್ರಾಥಮಿಕ ಶಿಕ್ಷಣದಲ್ಲಿ ಲೇಖಗಳನ್ನು ಬರೆದು ತನ್ಮೂಲಕ ತಮ್ಮ ಅನುಭವದ ಲಾಭವನ್ನು ಪ್ರಾಥಮಿಕಶಿಕ್ಷಕರಿಗೆ ಮಾಡಿಕೊಡುವರೆಂದು ಹಾರೈಸುತ್ತೇವೆ.

ಟ್ರೇನಿಂಗ ಸಂಸ್ಥೆಗಳ ಹೊಸ ಅಭ್ಯಾಸಪತ್ರಿಕೆ:

ಜೀವನ ಶಿಕ್ಷಣವು ಸಾರ್ವತ್ರಿಕವಾಗಬೇಕೆಂಬ ಉದ್ದೇ ಶದಿಂದ ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳಿಗಾಗಿ ಹೊಸ ಅಭ್ಯಾಸಪತ್ರಿಕೆಯು ಸಿದ್ಧಗೊಳಿಸಲ್ಪಟ್ಟಿದೆ. ಆ ಮೇರೆಗೆ ಇದೇ ವರುಷದಿಂದ ಶಿಕ್ಷಣವು ಪ್ರಾರಂಭವಾಗಿದೆ. ಗನೆಯ ವರುಷದ ಶಿಕ್ಷಕ ವಿದ್ಯಾರ್ಥಿಗಳು ಮಾತ್ರ ಈ ಹೊಸ ಅಭ್ಯಾಸಪತ್ರಿಕೆಯಂತೆ ಅಧ್ಯಯನವನ್ನು ಪಡೆಯುತ್ತಿದ್ದಾರೆ ಮುಂದಿನ ವರುಷದಿಂದ ಎಲ್ಲ ಪ್ರಾಥಮಿಕ ಟ್ರೇನಿಂಗ ಸಂಸ್ಥೆಗಳೂ ಪೂರ್ಣ ಜೀವನ ಶಿಕ್ಷಣದ (ಮೂಲ ಶಿಕ್ಷಣದ) ಕಾಲೇಜುಗಳಾಗಿ ಪರಿಣಮಿಸಲಿವೆ. ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲು ಈ ವರುಷದಿಂದ ಪೂರ್ಣ ಮೂಲ ಶಿಕ್ಷಣದ ಶಾಲೆಯಾಗಿ ಪರಿಣಮಿಸಲಿದೆ.

ಹೊಸ ಅಭ್ಯಾಸಪತ್ರಿಕೆಯ ಮೇರೆಗೆ ಪ್ರತಿ ವಾರಕ್ಕೆ ೪೦ ನಿಮಿಷದ ೫೪ ಅವಧಿಗಳಲ್ಲಿ ಮೂಲಶಿಕ್ಷಣವು ಕೊಡ ಲ್ಪಡುವದು. ಇದು ಮುಂಬೈ ಸರಕಾರವು ಶಿಕ್ಷಣದ ಕ್ಷೇತ್ರದಲ್ಲಿಟ್ಟ ಸಾಹಸಪೂರ್ಣ ಹಾಗೂ ಪ್ರಶಂಸನೀಯ ಹೆಜ್ಜೆಯಾಗಿದೆ. ಇದರಿಂದಾಗಿ ಮುಂಬಯಿ ರಾಜ್ಯದಲ್ಲಿ ಮೂಲ ಶಿಕ್ಷಣದ—ಜೀವನ ಶಿಕ್ಷಣದ—ಪ್ರಗತಿಯು ಭರದಿಂದ ಸಾಗಿ ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಮೂಲ ಶಿಕ್ಷಣದಲ್ಲಿ

ಸಮವಾಯ ಪದ್ಧತಿಯ ಮಹತ್ವ



ಶ್ರೀ. ರಾ. ವಿ. ದೇಸಾಯಿ
ಪ್ರಿನ್ಸಿಪಾಲ, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

★ ★ ★

ಧಾರವಾಡ ಬಾನುಲಿ ಕೇಂದ್ರ-ದಲ್ಲಿ ೨೨—೭—೧೯೫೦ ರಂದು ಮಾಡಿದ ಭಾಷಣ.

ಅಖಿಲಭಾರತದ ಆ ಕಾ ಶ ವಾ ಣಿ, ಧಾರವಾಡ ಸ್ಟೇಶನ್‌ದ ಅಸಿಸ್ಟಂಟ ಡೈರೆಕ್ಟರರ ಅಪ್ಪಣೆ ಪಡೆದು ಪ್ರಕಟಿಸಲಾಗಿದೆ.

ಪ್ರಿಯ ಬಾಂಧವರೆ, ಪೃಥ್ವಿಯ ಮೇಲೆ, ಮಗುವು ಜನಿಸಿದಂದಿನಿಂದ, ಅದರ ದೇಹಕ್ಕೂ, ಮನಸ್ಸಿಗೂ, ಮತ್ತು ಆತ್ಮಕ್ಕೂ, ಒಂದು ಬಗೆಯ ಅವ್ಯಾಹತವಾದ ಸಂಸ್ಕಾರವು ನಡೆದೇ ಇರುತ್ತದೆ. ಇಂಥ ಸತತ ಸಂಸ್ಕಾರದಿಂದಲೇ, ಮಗುವಿನ ಪಶುವೃತ್ತಿಯಳಿದು, ಮಾನವ ವೃತ್ತಿಯು ಬೆಳೆದು, ರೂಪುಗೊಳ್ಳಹತ್ತುತ್ತದೆ. ಈ ತೆರನಾಗಿ ಮಗುವಿನ ಸರ್ವತೋಮುಖವಾದ ವಿಕಾಸವನ್ನುಂಟುಮಾಡುವ ಸಂಸ್ಕಾರವೆ "ಶಿಕ್ಷಣ" ವೆಂದು ಸ್ಥೂಲವಾಗಿ ಹೇಳಬಹುದು.

ಮಗುವಿನ ದೇಹವು, ಅದರ ಅವಯವಗಳ ಚಲನವಲನ ಕ್ರಿಯೆಗಳಿಂದ ಬಲಪಡುತ್ತಿರುವದೆಂಬ ಮಾತು ಎಲ್ಲರಿಗೂ ಅನುಭವದಿಂದ ಗೊತ್ತುಂಟು. ಅದರಂತೆಯೇ ಕ್ರಿಯೆಗಳಿಂದಲೂ, ಅನುಭವದಿಂದಲೂ ಮತ್ತು ವಿಚಾರದಿಂದಲೂ, ಮಗುವಿನ ಬುದ್ಧಿಯು ವಿಕಾಸವಾಗುತ್ತ ಹೋಗುವದೆಂಬುದು ಸಹ, ಸರ್ವರಿಗೂ ವಿದಿತವಾಗಿದ್ದು. ಮಗುವಿನ ಕ್ರಿಯೆ ಮತ್ತು ಬುದ್ಧಿ, ಇವು ಪರಸ್ಪರ ಹೊಂದಿಕೊಂಡು, ಜೀವನೋಪಯೋಗಿ ಕಾರ್ಯದಲ್ಲಿ ತೊಡಗಿದಾಗ, ಆ ಮಗುವಿನ ಆತ್ಮೋನ್ನತಿಗೆ ಪರಿಪೋಷಕವಾದ, ಕೆಲವೊಂದು ರೀತಿ-ನೀತಿಗಳು, ಶೀಲ--ನಡತೆ ಮುಂತಾದವುಗಳು ಕ್ರಮೇಣ ಮಾರ್ಪಡುವವು. ತತ್ ಪರಿಣಾಮವಾಗಿ, ಮಗುವಿನಲ್ಲಿ ಒಂದು ಅಸಾಧಾರಣ ಆತ್ಮಬಲ, ವಿಶಿಷ್ಟ ಕಾಂತಿ, ಉಜ್ವಲ ತೇಜಸ್ಸು, ಮುಂತಾದವುಗಳು ಸಹಜವಾಗಿ ಒಡೆದು ಕಾಣತೊಡಗುವವು. ಇಂಥ ತೇಜೋಮಯವಾದ ಬಾಲಕರನ್ನು ಸಿದ್ಧಗೊಳಿಸುವದಕ್ಕಾಗಿ ಹಲವಾರು ಶಿಕ್ಷಣ ಪದ್ಧತಿಗಳೂ, ಪ್ರಯೋಗಗಳೂ, ತತ್ವಶಾಸ್ತ್ರಗಳೂ ಶಿಕ್ಷಣ ಕ್ಷೇತ್ರದಲ್ಲಿ ಅಗಾಗ್ಗೆ ಕಲೆದೋರುತ್ತಿರುವವು.

ಶಿಕ್ಷಣ ಶಾಸ್ತ್ರವು, ನಾನಾವಿಧದ ಪ್ರಯೋಗಗಳಿಂದಲೇ ಜೀವಂತ ಉಳಿಯಬಲ್ಲದು. ಇದಾದರೂ, ಇತರ ಶಾಸ್ತ್ರಗಳಂತೆ, ಮೇಲಿಂದ ಮೇಲೆ ಹೊಸ ಹೊಸ ಪ್ರಯೋಗಗಳನ್ನು ಮಾಡಿ, ಅವುಗಳನ್ನು ನಿತ್ಯ ಜೀವನದ ಅನುಭವದ ಒರೆಗಲ್ಲಿಗೆ ಹಚ್ಚಿ ಹೊಸ ತತ್ವಗಳನ್ನು ಕಂಡು ಹಿಡಿಯುವದರಿಂದಲೇ ಸಜೀವವಾಗಿ ಉಳಿಯಬಲ್ಲದು. "ಹರಿಗಡಿದ ಹೊಳೆ, ಹೊಳೆಯಲ್ಲ, ಪ್ರಯೋಗ ರಹಿತ ಶಾಸ್ತ್ರ, ಶಾಸ್ತ್ರವಲ್ಲ" ಎಂದು ಮಾನ್ಯ ದಿವಾಕರ ರಂಗರಾಯರು ಹೇಳಿದ್ದು ಯಥಾರ್ಥವಿದೆ.

ಇದಲ್ಲದೆ ಶಿಕ್ಷಣ ಶಾಸ್ತ್ರವೂ ಜೀವನ ಶಾಸ್ತ್ರವೂ, ನಿಕಟವಾಗಿ ಹೊಂದಿಕೊಂಡಿದ್ದು, ಹಾಸುಹೊಕ್ಕಿನಂತೆ, ಒಂದಕ್ಕೊಂದು ಹೆಣೆದುಕೊಂಡಿರುವವು. ಜೀವನವು ವಿಕಾಸವಾಗುತ್ತ ಹೋದಂತೆ, ಶಿಕ್ಷಣವೂ ವಿಕಸಿತವಾಗುತ್ತ ಹೋಗುವದು. ಮನುಷ್ಯನ ಮಾನವತೆಯ ವಿಕಾಸವು ಪೂರ್ಣವಾಗಬೇಕಾದರೆ ಅವನಿಗೆ ಶಿಕ್ಷಣವೂ ಕೂಡ, ಅದೇ ಬಗೆಯಾದದ್ದು ಬೇಕು. ಅವನ ಸರ್ವ ಶಕ್ತಿಗಳ ವಿಕಾಸವು, ಸಮನ್ವಿತವಾಗಿಯೇ ಸಾಗುತ್ತಿರುವದು ಸೂಕ್ತವು. ಆದುದರಿಂದಲೇ " ಶಿಕ್ಷಣವೆಂದರೆ ಜೀವನ. ಜೀವನವೆಂದರೆ ಶಿಕ್ಷಣ " ಎಂಬ ಮಾತು ಇತ್ತೀತ್ತಲಾಗಿ ಹೆಚ್ಚು ರೂಢವಾಗಹತ್ತಿದೆ

ನಮ್ಮ ಇಂದಿನ ಭಾರತೀಯರ ಜೀವನವನ್ನು, ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಲಾಗಿ, ಎಲ್ಲ ಬಗೆಯಿಂದ, ಅದು ತೀರ ಹದಗೆಟ್ಟಿಂತೆ ಕಾಣುವದು. ಯಾಕಂದರೆ, ಹಿಂದಿನ ಇತಿಹಾಸದಲ್ಲಿ ಎಂದೂ ಕಾಣದ, ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಅಧಃಪತನವನ್ನು ಹೊಂದಿದ್ದು ಕಂಡು ಬರುತ್ತದೆ. ಬಹು ದಿವಸಗಳಿಂದ ರೂಢಿಯಲ್ಲಿದ್ದ ಹಾಗೂ ತ್ರಿಕಾಲಾಬಾಧಿತ ತತ್ವಗಳೆಂದೆನಿಸಿಕೊಂಡಿದ್ದ ಸು-ವಿಚಾರಗಳು. ಸಮಾಜದಲ್ಲಿ ಶಾಶ್ವತ ಹಾಗೂ ಸಮಂಜಸವೆಂದು ಗಣಿಸಲಾಗಿದ್ದ, ರೂಢವಾದ ಸಂಪ್ರದಾಯ ಪರಂಪರೆಗಳು, ಪ್ರಾಚೀನ ಕಾಲದಿಂದ ನಡೆದುಬಂದ ಸಂಘ ಸಂಸ್ಥೆಗಳು,—ಇಂದು ಒಂದೊಂದೇ ಮಾಯವಾಗುತ್ತಲಿದ್ದು, ಕೆಲವೊಂದು ಮಿಂಚಿನ ವೇಗದಿಂದ, ಆಮೂಲಾಗ್ರ ಬದಲಾಗುತ್ತ ಮಾರ್ಪಡುತ್ತಲಿವೆ. ಇದೇ ಬಗೆಯಾಗಿ ರಾಜಕೀಯ, ಧಾರ್ಮಿಕ, ಹಾಗೂ ಸಾಮಾಜಿಕ ವಿಚಾರಗಳಲ್ಲಿಯೂ, ಕ್ರಾಂತಿ ಉತ್ಕ್ರಾಂತಿಕಾರಕ ತತ್ವಗಳು, ಪ್ರಬಲವಾಗುತ್ತ ಇಡೀ ಜಾಗತಿಕ ಪರಿಸ್ಥಿತಿಯನ್ನೇ ಹದಗೆಡಿಸಿಬಿಟ್ಟಿರುವವು. ನಮ್ಮ ಶಿಕ್ಷಣ ಪದ್ಧತಿಯಲ್ಲಿಯೂ ಕೂಡ, ಇದೇ ಹಾಡು ಕಂಡು ಬರುವದು.

ಈ ಪ್ರಕಾರ ನಮ್ಮ ಭಾರತದ ಹದಗೆಟ್ಟ ಪರಿಸ್ಥಿತಿಯೇ, ಮಹಾತ್ಮಾಜಿಯವರ ಮನಸ್ಸನ್ನು ಸೆಳೆಯಿತು. ಇಂಥ ಅಧೋಗತಿಗಿಳಿದ ನಮ್ಮ ರಾಷ್ಟ್ರದ ಉದ್ಧಾರಕ್ಕೆ ಮಹಾತ್ಮಾಜಿಯವರ ನೇತೃತ್ವದಲ್ಲಿ, ರಾಷ್ಟ್ರೀಯ ಮನೋವೃತ್ತಿಯುಳ್ಳ ಶಿಕ್ಷಣ ತಜ್ಞರು, ವರ್ಧಾಯೋಜನೆಯ ಶಿಕ್ಷಣ ಪದ್ಧತಿಯನ್ನು ಸಿದ್ಧಗೊಳಿಸಿ ಪ್ರಯೋಗ ರಂಗೆದಲ್ಲಿಳಿಸಿದರು. ಅದು ಈಗ ಪ್ರಯೋಗಾವಸ್ಥೆಯನ್ನು ದಾಟಿ ಯಶಸ್ವಿಯಾಗಿ ಪರಿಣಮಿಸಿದ್ದು, ಸಾರ್ವತ್ರಿಕವಾಗಲು ಕ್ರಮೇಣ ಮುಂದುವರಿಯುತ್ತಲಿದೆ.

ಈ ಹೊಸ ಯೋಜನೆಯಲ್ಲಿ, ಇಲ್ಲಿಯ ವರೆಗೂ, ನಮ್ಮಲ್ಲಿ ರೂಢವಿದ್ದ, ಕೇವಲ ಬೌದ್ಧಿಕ ಶಿಕ್ಷಣಕ್ಕೆ, ತಿದ್ದುಪಡೆಯಂದು, ನಿತ್ಯಜೀವನೋಪಯೋಗಿಯಾದ ಯಾವದೊಂದು ಗ್ರಾಮೋದ್ಯೋಗದ ಮೂಲಕ, ಮಕ್ಕಳಿಗೆ ಜ್ಞಾನವನ್ನು ಕೊಡಬೇಕೆಂದು, ಅವರು ಪ್ರತಿಪಾದಿಸಿದರು. ಮುಂದೆ ಆ ಮಾತು ಅಷ್ಟಕ್ಕೆ ನಿಲ್ಲದೆ, ಶಿಕ್ಷಣವು ಆಮರಣಾಂತ ನಡೆಯಬೇಕು, ಅದು ಸಮಗ್ರವಿರಬೇಕು, ಜೀವನ,ವ್ಯಾಪ್ತಿಯಾಗಿರಬೇಕು. ಅದು ಕೇವಲ,ಮೂಲಕ ಕೊಡಲ್ಪಡದೆ, ವಿದ್ಯಾರ್ಥಿಯ ಸುತ್ತಲಿನ ಪರಿಸ್ಥಿತಿಯ ಮೂಲಕ ಮತ್ತು ಪ್ರತ್ಯಕ್ಷ ಅನುಭವದ ಮೂಲಕ ಸಮವಾಯ ಪದ್ಧತಿಯಿಂದ ಕೊಡಲ್ಪಡಬೇಕು, ಎಂಬ ಸಿದ್ಧಾಂತಕ್ಕೆ ಮಹಾತ್ಮರು ಬಂದರು. ಇದೇ ಅವರ ಜೀವನಶಿಕ್ಷಣದ ಮೂಲಮಂತ್ರವಾಗಿತ್ತೆಂಬುವದು ಸರ್ವಶ್ರುತವಾದ ಮಾತು.

ಈ ನವಜೀವನ ಶಿಕ್ಷಣ ಯೋಜನೆಯಲ್ಲಿ ಮಕ್ಕಳ ದೇಹ, ಮನಸ್ಸು ಮತ್ತು ಆತ್ಮ, ಇವುಗಳ ಬೆಳವಣಿಗೆಗೆ ತುಂಬಾ ಅವಕಾಶವನ್ನುಂಟುಮಾಡಿಕೊಲಾಗಿದೆ. ಈ ಯೋಜನೆಯ ಹೆಗ್ಗುರಿಯು, ಬಾಲಕರಲ್ಲಿ ಹುದುಗಿ ಕೊಂಡಿದ್ದ ಅಂತಃಶಕ್ತಿಗಳನ್ನು ಕುದುರಿಸಿ, ಅವುಗಳ ಉತ್ತಮಾಂಶಗಳನ್ನು ಬಲಪಡಿಸುವದಾಗಿರುವದಲ್ಲದೆ ಮಕ್ಕಳ ಸರ್ವತೋಮುಖವಾದ ವಿಕಾಸವನ್ನು ಸಾಧಿಸುವದಾಗಿರುವದು. ಇದಲ್ಲದೆ ಇವರಲ್ಲಿ, ಮಗುವಿನ ಬುದ್ಧಿಯು, ಪ್ರತ್ಯಕ್ಷ ಜೀವನದ ಕಾರ್ಯಗಳಲ್ಲಿ ತೊಡಗಿ, ಕ್ರಮಕ್ರಮವಾಗಿ ಅರಳುತ್ತ ಹೋಗುವದು. " ಜೀವನದ ಅನುಭವವಿಲ್ಲದ ಶಿಕ್ಷಣವು ಪ್ರಾಣವಿಲ್ಲದ ದೇಹವಿದ್ದಂತೆ. ಜ್ಞಾನೋದಯವಾಗುವದು ಪ್ರತ್ಯಕ್ಷ ಜೀವನದಲ್ಲಿ ಮಾತ್ರ. ಗೀತೆಯಂಥ ಅಕ್ಷಯ ಮತ್ತು ಅದ್ಭುತ ಶಿಕ್ಷಣವನ್ನು ಅರ್ಜುನನು ಪಡೆದುದು ಕುರುಕ್ಷೇತ್ರದಲ್ಲಿಯೇ" ಎಂದು ವಿನೋಬಾಜಿಯರು ನುಡಿದ ಮಾತುಗಳ ರಹಸ್ಯವಾದರೂ ಇದನ್ನೇ ಸೂಚಿಸುತ್ತದೆ.

ಯಾವದೇ ಶಿಕ್ಷಣ ಪದ್ಧತಿಯಲ್ಲಿ, ಅದರ ಸಫಲತೆಯು ಬಹು ಮಟ್ಟಿಗೆ, ಅದರ ನಿತ್ಯ ಶೈಕ್ಷಣಿಕ ಕಾರ್ಯಕ್ರಮ ವನ್ನೇ ಅವಲಂಬಿಸಿರುತ್ತದೆ. ಇದು ವರೆಗೆ ನಡೆಯುತ್ತ ಬಂದ ಶಿಕ್ಷಣವು, ಬಾಳಿನ ಶಿಕ್ಷಣವಾಗಿರದೆ, ಪೊಳ್ಳು ಶಿಕ್ಷಣವೆಂದೆನಿಸಿಕೊಂಡಿದೆಯೆಂಬ ಮಾತು, ಸರ್ವರಿಗೂ ಗೊತ್ತುಂಟು. ಹೀಗಾಗಲು, ಅದರ ದೈನಂದಿನ ಕಾರ್ಯ ಕ್ರಮದ ರಚನಾಕ್ರಮವೂ ಒಂದು ಕಾರಣವಾಗಿದೆ. ಇಂಥ ಕಾರ್ಯಕ್ರಮದಲ್ಲಿ ಆಯಾ ಹಳ್ಳಿಯ ಪರಿಸ್ಥಿತಿ ಯನ್ನು ಅನುಲಕ್ಷಿಸದಿರುವದೇ, ಸದ್ಯದ ಶಿಕ್ಷಣದ ಗುರಿಯು ಕೈಗೂಡದಿರುವದರ ಮುಖ್ಯ ಕಾರಣವು.

ಉದಾಹರಣೆಗಾಗಿ ಒಂದು ಹಳ್ಳಿಯ ಶಾಲೆಯ ವೇಳಾಪತ್ರಿಕೆಯನ್ನು ತೆಗೆದುಕೊಳ್ಳೋಣ. ದಿನಕ್ಕೆ ೬-೭ ಅವಧಿಗಳನ್ನಿಟ್ಟುಕೊಂಡು ಒಂದೊಂದು ಅವಧಿ-ಯಲ್ಲಿ ಒಂದೊಂದು ವಿಷಯವನ್ನು ಸಾಗಿಸುವ ಏರ್ಪಾಡಿ ರುವದು. ಒಂದು ಅವಧಿಯು ಮತ್ತೊಂದಕ್ಕೆ ಸಂಬಂಧ ವಿರುವದಿಲ್ಲ. ಆ ಅವಧಿಯಲ್ಲಿ ಶಿಕ್ಷಕನು ಸಾಗಿಸುತ್ತಿರುವ ವಿಷಯದಲ್ಲಿ ಮಗುವಿಗೆ ಅಭಿರುಚಿ ಇರಲಿ, ಇಲ್ಲವೆ ಇರದೇ ಹೋಗಲಿ; ಮಗುವಿನ ಮನಸ್ಸಿಗೆ ಅದು ಹಿಡಿಯಲಿ, ಅಥವಾ ಬಿಡಲಿ, ಆಯಾ ಶಿಕ್ಷಕನು, ಆಯಾ ಅವಧಿಯಲ್ಲಿ, ನಿಯಮಿ-ಸಿದ ವಿಷಯವನ್ನೇ ಹೇಳಿಕೊಡಬೇಕೆಂದು ನಿರ್ದಿಷ್ಟವಾದ ಕ್ರಮವಿರುತ್ತದೆ. ಇದಲ್ಲದೆ ವೇಳಾಪತ್ರಿಕೆಯು ವಿಷಯ ಪ್ರಾಧಾನ್ಯವಾಗಿದ್ದು, ಹಲವಾರು ವಿಷಯಗಳ ಜ್ಞಾನದ ಕಡೆಗೇ, ಅದರ ಒಲವು ಹೆಚ್ಚುತ್ತ ಹೋಗುವದು. ಇದ ರಿಂದ, ಚಿಕ್ಕಮಕ್ಕಳ ದೇಹ, ಬುದ್ಧಿ, ಮತ್ತು ಆತ್ಮ ಇವುಗಳ ಬೆಳವಣಿಗೆಗೆ, ಅಷ್ಟೊಂದು ಪರಿಪೋಷಕ ವಾಗುವದಿಲ್ಲ. ಎಳೆಮಕ್ಕಳ ಸಹಜ ಪ್ರವೃತ್ತಿಗಳಂತೂ, ಸಂಪೂರ್ಣವಾಗಿ ದುರ್ಲಕ್ಷಿಸಲ್ಪಟ್ಟಿವೆಯೆಂದು ಹೇಳದರೆ, ಪ್ರತಿ ಮಾತು ಬರಲಿಕ್ಕಿಲ್ಲ. ಯಾವದೋ ಒಂದು ದೇಶದ ಇತಿಹಾಸವನ್ನು, ಮನದಲ್ಲಿಟ್ಟುಕೊಂಡು ಒಂದು ವಿಶಿಷ್ಟ ಮನೋವೃತ್ತಿಯನ್ನು ಪ್ರಜೆಗಳಲ್ಲಿ ಉಂಟು ಮಾಡಿ, ತಮ್ಮ ಸಾಮ್ರಾಜ್ಯಪೀಠವು, ಭದ್ರವಾಗಿ ಉಳಿಯುವಂತೆ ರೂಪಿಸಿದ ಶಿಕ್ಷಣಕ್ರಮವು ಸ್ವತಂತ್ರ ಭಾರತದ ಪ್ರಜೆಗಳ ಬುದ್ಧಿ, ಅಂತಃಕರಣ ಮೊದ-ಲಾದವುಗಳ ವಿಕಾಸಕ್ಕೆ ಹೇಗೆ ನೆರವಾದೀತು? ನವ-ನಾಗರಿಕನ ಆತ್ಮವಿಕಾಸಕ್ಕೆ ಸಹಾಯಕವಾಗುವದೆ ನಿಜವಾದ ನವಭಾರತದ—ಶಿಕ್ಷಣದ ಮುಖ್ಯ ಉದ್ದೇ ವಾಗಿರಬೇಕು. ಈ ಉದ್ದೇಶವನ್ನು ಸಫಲಗೊಳಿಸಲು ಸನ್ನಿವೇಶಕ್ಕನುಗುಣವಾದ ಸಮವಾಯ ಪದ್ಧತಿಯೆ ತಕ್ಕ ಯೋಜನೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ

ಮೂಲ ಶಿಕ್ಷಣದಲ್ಲಿಯ ಸಮವಾಯ ಪದ್ಧತಿಯ ಜೀವನ ಶಿಕ್ಷಣದ ಜೀವಾಳ. ಏಕೆಂದರೆ ಈ ಶಿಕ್ಷಣದ ತತ್ವಗಳೆಲ್ಲವೂ ಕಾರ್ಯರೂಪಕ್ಕಿಳಿಯುವದೂ, ಜೀವನ ವ್ಯವಹಾರಗಳಲ್ಲಿ ಸಮರಸವಾಗುವದೂ ಮತ್ತು ಅ ಕ್ಕೊಂದು ರಸವೀಯುವದೂ, ಈ ಕ್ರಮದ ವೈಶಿಷ್ಟ್ಯ ವೆಂದು ಹೇಳಬಹುದು. ಸಮವಾಯ ಪದ್ಧತಿಯ ಮತ್ತೊಂದು ಮಹತ್ವದ ಸಂಗತಿಯೆಂದರೆ, ಅದರಲ್ಲಿ ಒಂದು ಜೀವನೋಪಯೋಗಿ ಕಾರ್ಯವನ್ನು ಬುದ್ಧಿಪೂರ್ವ ಕರವಾಗಿ ಯೋಜಿಸಿ, ಕಾರ್ಯಕ್ಷಮತೆಯಿಂದ ನಿರ್ವಹಿ ಯಶಸ್ವಿಯಾಗಿ ಪೂರ್ತಿಗೊಳಿಸುವ, ಸುವ್ಯವಸ್ಥಿತ ಕಾರ್ಯಕ್ರಮವು ಇರುವದೆಂಬ ಮಾತನ್ನು ಮರೆಯಕೂಡದು ಇದುವೆ ಸಮವಾಯ ಪದ್ಧತಿಯ ರಹಸ್ಯ. ಉದಾಹರಣೆಗಾಗಿ, ಕೆಲವು ಬಾಲಕರು ಕೂಡಿ, ಒಂದು ಚಿಕ್ಕ ನಾಟಕವನ್ನು, ಅಭಿನಯಿಸಿ ತೋರಿಸುವ ಯೋಜನೆಯನ್ನಿಟ್ಟುಕೊಂಡಿರುವರೆಂದು ಕಲ್ಪಿಸುವಾ. ಆ ಅವರು ತಮ್ಮ ತಮ್ಮ ಇಚ್ಛೆ, ಕಾರ್ಯಕ್ಷಮತೆ, ಯೋಗ್ಯತೆ ಗಳಿಗನುಸಾರವಾಗಿ ಪಾತ್ರಗಳನ್ನು ವಹಿಸುವರು; ಅವಶ್ಯಕವಾದ ಸಾಧನಸಾಮಗ್ರಿಗಳನ್ನು, ವೇಷ-ಭೂಷಣ ಗಳನ್ನು ದೊರಕಿಸಿ ಸಂಗ್ರಹಿಸುವರು. ತಮ್ಮ ತಮ್ಮ ಪಾತ್ರಗಳಿಗನುಗುಣವಾದ ಮಾತು, ಹಾಡು ಮುಂತಾದವುಗಳನ್ನು ಕಲಿಯುವರು; ರಂಗತಾಲೀಮು ಹೂಡುವರು; ಕೊನೆಗೆ ಸಮಾಜದಲ್ಲಿ ಉತ್ಸಾಹದಿಂದ ಆ ಅಭಿನಯಿಸಿ ತೋರಿಸುವರು. ಮೇಲೆ ವಿವರಿಸಿದ ಕಾರ್ಯಗಳಲ್ಲಿಯ, ಹಲಕೆಲವು ತೊಂದರೆಗಳನ್ನೂ ಜಟಿಲ ಸಮಸ್ಯೆಗಳನ್ನೂ ಬಾಲಕರು ಒಳ್ಳೇ ಉತ್ಸಾಹದಿಂ ತಮ್ಮಷ್ಟಕ್ಕೆ ತಾವೇ, ವಿಚಾರಶಕ್ತಿಯಿಂದ ಎದುರಿ ಬಿಡಿಸಲೆತ್ನಿಸುವರು. ತಾವು ಕೈಕೊಂಡ ಕಾಯ ವನ್ನು, ಯಶಸ್ವಿಯಾಗಿ ನೆರವೇರಿಸಲು ಸತತವಾಗಿ ಹೆ ಗುವರು. ಇದರ ಪರಿಣಾಮವಾಗಿ ಅವರಲ್ಲಿ ಕಾರ್ಯ

ಕ್ಷಮತೆ, ಕಾರ್ಯಕ್ಕನುಗುಣವಾದ ಜ್ಞಾನಸಾಧನೆ, ಪರಸ್ಪರ ಸಹಕಾರ' ಬೇರೆಯವರೊಡನೆ ನಯವಿನಯದಿಂದ ನಡೆದುಕೊಳ್ಳುವ ರೀತಿ, ಮೊದಲಾದ ಶೀಲ-ಸಂವರ್ಧನೆಯ ಗುಣಗಳು ಅವರಲ್ಲಿ ಒಡಮೂಡುವವು. ಇದಲ್ಲದೆ ಈ ಮೇಲೆ ವಿವರಿಸಿದ ಕಾರ್ಯವನ್ನು ಸೂಕ್ಷ್ಮವಾಗಿ ಪೃಥಕ್ಕರಿಸಿ ನೋಡಲಾಗಿ, ಅದರಲ್ಲಿ ಒಂದಿಲ್ಲೊಂದು ಬಗೆಯ ಚಟುವಟಿಕೆಯೂ, ಅನುಭವವೂ, ಸಮವಾಯ ಜ್ಞಾನದ ಹಲಕೆಲವಂಶಗಳೂ ಅಭಿನ್ನವಾಗಿ ಹೊಂದಿಕೊಂಡಿದ್ದು ಅಖಂಡವಾಗಿ ಇದ್ದಂತೆ ತೋರುವವು.

ಈ ಹೊಸ ಯೋಜನೆಯೆನ್ನಯ, ಪ್ರಾಥಮಿಕ ಶಾಲೆಗಳ ಬಾಲಬಾಲಿಕೆಯರನ್ನು, ಸಮವಾಯ ಪದ್ಧತಿಯ ಸಹಾಯದಿಂದ, ಕಾರ್ಯಕ್ಷಮತೆಯುಳ್ಳವರನ್ನಾಗಿ ಅಣಿಗೊಳಿಸಲಾಗುತ್ತದೆ. ಈ ಕಾರ್ಯದಲ್ಲಿ, ಪ್ರಾಥಮಿಕ ಶಾಲೆಯ ಅಧ್ಯಾಪಕನು ಕೇವಲ ಮಾರ್ಗದರ್ಶಕನಾಗಿರುವನು. ಒರಿಂದ ಗಳ ವರುಷದ ವಯಸ್ಸಿನೊಳಗಿನ ಬಾಲ-ಬಾಲಿಕೆಯರು ಕಲಿಯುವವರು. ಆದ್ದರಿಂದ ಸಮವಾಯ ಪದ್ಧತಿಯ ಕಾರ್ಯಕ್ರಮಗಳು, ಕಲಿಸುವವನ ಮತ್ತು ಕಲಿಯುವವರ ಮಟ್ಟಕ್ಕೆ ಮೀರಿರಕೂಡದು. ಇದಲ್ಲದೆ ನಮ್ಮ ನಾಡು ಹಳ್ಳಿಗಳ ನಾಡು, ನೇಗಿಲಯೋಗಿಗಳ ಬೀಡು; ಆದುದರಿಂದ ಹಳ್ಳಿಯ ಜನಜೀವನ, ನಿಸರ್ಗಸಂಪತ್ತು, ಪ್ರತಿನಿತ್ಯದ ಪರಿಸ್ಥಿತಿ, ಮುಂತಾದವುಗಳಿಗನುಗುಣವಾಗಿ, ಸಮವಾಯ ಪದ್ಧತಿಯ ಕಾರ್ಯಕ್ರಮಗಳೆಲ್ಲವೂ ಸಾಗಬೇಕಾದುದು ಯಥಾಯೋಗ್ಯವು.

ಇದರ ಸೂತ್ರಗಳಂತಿದ್ದ, ಸುಸಂಪನ್ನ, ಉತ್ಸಾಹಭರಿತ, ಶೈಕ್ಷಣಿಕ ಚಟುವಟಿಕೆಗಳನ್ನು ಸಾಧಾರಣವಾಗಿ ನಾಲ್ಕು ಪ್ರಕಾರದವುಗಳನ್ನಾಗಿ ವಿಭಾಗಮಾಡಬಹುದು. ಬೇರೆ ಬೇರೆ ಶರಗತಿಗಳಿಗನುಗುಣವಾಗಿ, ಕಾಲಕಾಲಕ್ಕೆ ಸಾಗಿಸತಕ್ಕ ವೈಯಕ್ತಿಕ ಚಟುವಟಿಕೆಗಳು; ತದನುಸಾರವಾದ ಸಮವಾಯ ಜ್ಞಾನಸಾಧನ ಮುಂತಾದವುಗಳು, ಮೊದಲನೆಯ ಪ್ರಕಾರದವುಗಳೆಂದು ಹೇಳಬಹುದು. ಇದರಲ್ಲಿ ಜ್ಞಾನಕರ್ಮಗಳ ಸಮನ್ವಯ ಉಂಟಾಗಿ, ವ್ಯಕ್ತಿಗತ ವಿಕಾಸವಾಗುತ್ತ ಹೋಗುವದು. ಈ ತೆರನಾದ ಅನುಭವವು ವಿಶೇಷವಾಗಿ ಮೂಲೋದ್ಯೋಗದ ಹಾಗು ಇನ್ನಿತರ ಕೈಕೆಲಸದ ಚಟುವಟಿಕೆಗಳಲ್ಲಿ ಕಂಡುಬರುವದು. ಎರಡನೆಯದಾಗಿ, ವರ್ಗಗಳನ್ನು ಗುಂಪುಗಳನ್ನಾಗಿ ವಿಭಾಗಿಸಿ, ಆ ಆ ಗುಂಪುಗಳ ಸಹಕಾರದಿಂದ, ಅನುಭವ ಪೂರ್ಣತೆಯನ್ನು ಪಡೆಯುತ್ತ, ಕಾರ್ಯನಿರ್ವಹಣೆಯಲ್ಲಿ ತೊಡಗುವದು. ವರ್ಗದ ಕೋಣೆಯ ಸ್ವಚ್ಛತೆ, ಪಂಕ್ತಿ, ಪ್ರವಾಸ, ಮುಂತಾದವುಗಳು ಈ ಪ್ರಕಾರದ ಚಟುವಟಿಕೆಗಳೆಂದು ಎಣಿಸಬಹುದು. ಮೂರನೆಯದಾಗಿ, ಸ್ವಾತಂತ್ರ್ಯೋತ್ಸವ, ವನಮಹೋತ್ಸವ, ಚರಖಾಜಯಂತಿ, ನಾಡಹಬ್ಬದಂಥ ಚಟುವಟಿಕೆಗಳಲ್ಲಿ, ಇಡೀ ಶಾಲೆಯ ಎಲ್ಲ ವರ್ಗದವರನ್ನು ವಿವಿಧ ಕಾರ್ಯಗಳಲ್ಲಿ ತೊಡಗಿಸಿ, ಆ ಆ ಚಟುವಟಿಕೆಗಳಿಂದುಂಟಾಗುವ, ಅನುಭವಕ್ಕನುಗುಣವಾದ ಜ್ಞಾನಸಾಧನೆಯನ್ನು ಮಾಡಿಕೊಳ್ಳಲು ಅಣಿಗೊಳಿಸಬಹುದು.

[ಉದಾ:—ವನಮಹೋತ್ಸವನ್ನು ಚಟುವಟಿಕೆಯನ್ನಾಗಿಟ್ಟುಕೊಂಡಾಗ, ಅದರ ಐತಿಹಾಸಿಕ ಹಿನ್ನೆಲೆ, ಅಧ್ಯಾತ್ಮಿಕ ಮಹತಿ, ಆರ್ಥಿಕ ಲಾಭ ಮುಂತಾದವುಗಳನ್ನು ನೇರವಾಗಿ ವಿವರಿಸಬಹುದಲ್ಲದೆ, ಸಸ್ಯಶಾಸ್ತ್ರವನ್ನು ಕೂಡ ಕಲಿಸಬಹುದಾಗಿದೆ. ಚಿಕ್ಕಮಕ್ಕಳು ಸಸಿ ನೆಡುವ ಸಮಯದಲ್ಲಿ, ಅದರ ಪೂರ್ವ ಪೀಠಿಕೆಯಾಗಿ ತೆಗ್ಗು ತೋಡುವದು, ಸಸಿ ನೆಡುವದು, ನಂತರ ಅದರ ಪಾಲನ ಪೋಷಣೆಗಾಗಿ, ಬೇಲಿ ಹಚ್ಚುವದು, ಗೊಬ್ಬರ ಹಾಕುವದು, ನೀರು ಹನಿಸುವದು, ಮುಂತಾದ ಹಲವಾರು ಕ್ರಿಯೆಗಳನ್ನು ಕ್ರಮವಾಗಿ ಜರುಗಿಸಬೇಕಾಗುವದು. ಈ ಸಂದರ್ಭದಲ್ಲಿ ಗಣಿತ, ವನಸ್ಪತಿಶಾಸ್ತ್ರ, ಸಾಮಾನ್ಯವಿಜ್ಞಾನ, ಮೊದಲಾದ ಹಲವು ವಿಷಯಗಳು ಅನುಷಂಗಿಕವಾಗಿ ಅವರಿಗೆ ಪರಿಚಯವಾಗುವವು.]

ನಾಲ್ಕನೆಯದಾಗಿ, ಇಡೀ ಸಮಾಜಕ್ಕೆ ಉಪಯೋಗ ಬೀಳುವ, ಜಾತ್ರೆ, ಉತ್ಸವ, ಬೀದಿಗಳ ದುರಸ್ತಿ, ಊರ ಸ್ವಚ್ಛತೆ; ಮನರಂಜನೆಯ ಕಾರ್ಯಕ್ರಮ, ಮುಂತಾದ ಯೋಜನಾತ್ಮಕ ಚಟುವಟಿಕೆಗಳನ್ನು ಶಿಕ್ಷಕರು, ಪಾಲಕರು, ಬಾಲಕರು ಕೂಡಿ, ಒಂದೇ ಉದ್ದೇಶ ಪ್ರೇರಿತರಾಗಿ ಹರಿಕರಿಯರೆನ್ನದೆ ಹೊಂದುಗೂಡಿ, ಒಂದಾಗಿ ಕೈಕೊಳ್ಳಬಹುದಾಗಿದೆ. ಮೇಲಿಂದ ಮೇಲೆ ಇಂಥ ಕೆಲಸಗಳನ್ನು ಕೈಕೊಂಡು ನೇರವೇರಿಸುವದರಿಂದ, ಸರ್ವೋದಯ ಸಮಾಜ-ನಿರ್ಮಾಣದಂಥ ಮಹತ್ವದ ಕಾರ್ಯವನ್ನು

ಕೂಡ ಜರುಗಿಸಬಹುದು. ಈ ತೆರನಾಗಿ ಆತ್ಮಪ್ರೇರಣೆಯಿಂದ ಹಾಗೂ ಸಹಕಾರ ಬುದ್ಧಿಯಿಂದ, ದುಡಿದು ಪಡೆದ ಅನುಭವ,ಕಂಡು ಹಿಡಿದ ಅನುಭವ, ಪ್ರಯೋಗ ಮಾಡಿ ನೋಡಿದ ಅನುಭವ, ಹೀಗೆ ಅನುಭವದ ಈ ತ್ರಿವೇಣಿಸಂಗಮದ ಅಮೃತರಸದೂಟದಿಂದ, ಬಾಲಕರು ಪರಿಪೂರ್ಣ ವಿಕಾಸವನ್ನು ಹೊಂದಬಲ್ಲರು. ಇದುವೆ ಮೂಲ ಶಿಕ್ಷಣದಲ್ಲಿಯ ಸಮವಾಯ ಪದ್ಧತಿಯ ಮಹತ್ವ ಹಾಗು ವೈಶಿಷ್ಟ್ಯವೆಂದು ಹೇಳಲಡ್ಡಿಯಿಲ್ಲ.

ಈ ರೀತಿಯಾಗಿ, ಹೊಸ ಶಿಕ್ಷಣದ ಕಾರ್ಯಕ್ರಮಗಳು ಸತತವಾಗಿ ನಮ್ಮ ಶಾಲೆ-ಕಾಲೇಜುಗಳಲ್ಲಿ, ಮನೆಮಠಗಳಲ್ಲಿ, ಸಮೂಹ ಸಮಾಜಗಳಲ್ಲಿ ರೂಢಿಸಾಗುತ್ತ ಸಾಗಿರೆ ಮಾತ್ರ, ನವ ಸಮಾಜದ ನಿರ್ಮಾಣಕಾರ್ಯವು ಸುಲಭವಾಗಿ ಫಲಕಾರಿಯಾಗುವದೆಂಬದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಇದಲ್ಲದೆ, ನಮ್ಮ ಇಂದಿನ ಪೀಳಿಗೆಯ ಬಾಲಕರಲ್ಲಿ, ಇನ್ನೂ ಹೊಸ ಸಮಾಜೋ ಎನ್ನತಿಯ ಕಲ್ಪನೆಗಳು ಒಡಮೂಡಬೇಕಾಗಿವೆ. ಅದಕ್ಕಾಗಿ ಶ್ರಮ ಜೀವನ, ಸ್ವಾವಲಂಬನ, ಸರಲ ಜೀವನ, ಸಮಾಜ ಬುದ್ಧಿ ಮುಂತಾದ ಸದ್ಗುಣಗಳು ಸುದೃಢವಾಗಿ ಬೇರೂರಬೇಕಾಗಿವೆ. ಇವೆಲ್ಲವುಗಳನ್ನು ಅವರು ತಮ್ಮ ನಿತ್ಯ ಜೀವನದ ಕಾರ್ಯಕ್ರಮಗಳಲ್ಲಿ ಬೆರಸಿಕೊಂಡು ಅರಗಿಸಿಕೊಳ್ಳುತ್ತ ಹೋದರೆ ಮಾತ್ರ, ನಿಜವಾದ ಸಮಾಜ ಸೇವಕರಾಗಿ ಪರಿಣಮಿಸಬಲ್ಲರು. ಇಂಥ ಚೈತನ್ಯಮಯ ಹಾಗು ತೇಜೋಮಯವುಳ್ಳ ಬಾಲಕರಿಂದಲೇ ಮಹಾತ್ಮಾಜಿಯವರ ರಾಮರಾಜ್ಯದ ಕನಸು ನನಸಾಗಬಲ್ಲುದು. ಅದಕ್ಕೋಸುಗ ಚೈತನ್ಯಮಯ ಹಾಗು ಉತ್ಸಾಹಭರಿತ ಶಕ್ತಿಯನ್ನು, ನಮ್ಮ ನಾಡಿನ ಎಲ್ಲ ಬಾಲಬಾಲಿಕೆಯರಿಗೆ, ಸಕಾಲಕ್ಕೆ ಒದಗಿಸಿಕೊಟ್ಟು, ಅವರನ್ನು ತೇಜೋಮಯರನ್ನಾಗಿ ಮಾಡಲೆಂದು ದೇವರನ್ನು ಪ್ರಾರ್ಥಿಸುವೆ.

—ಜೈ-ಹಿಂದ

ಹಿಂದುಸ್ತಾನದ ಪಟ್ಟಣಗಳು

ಹಿಂದುಸ್ತಾನ ಮತ್ತು ಪಾಕಿಸ್ತಾನದಲ್ಲಿ ಒಟ್ಟುಗೂಡಿ ೨೭೦೩ ಪಟ್ಟಣಗಳು ಇವೆ.

ಪ್ರಾಂತ ಮತ್ತು ಸಂಸ್ಥಾನವಾರ ಪಟ್ಟಣಗಳು ಕೆಳಗಿನಂತಿವೆ.

೧.	ಸಂಯುಕ್ತಪ್ರಾಂತ ಮತ್ತು ಸಂಸ್ಥಾನಗಳು	೪೫೬	೧೩	ಗ್ವಾಲಿಯರ	೪೬
೨.	ಮದ್ರಾಸ ಮತ್ತು ಸಂಸ್ಥಾನಗಳು	೪೨೦	೧೪.	ಆಸಾಮ ಮತ್ತು ಸಂಸ್ಥಾನಗಳು	೩೨
೩.	ಮುಂಬಯಿ ಮತ್ತು ಸಂಸ್ಥಾನಗಳು	೩೩೨	೧೫.	ಓರಿಸಾ ಮತ್ತು ಸಂಸ್ಥಾನಗಳು	೨೯
೪.	ಪಂಜಾಬ ಮತ್ತು ಸಂಸ್ಥಾನಗಳು	೨೪೬	೧೬.	ಸಿಂಧ	೨೬
೫.	ಬಂಗಾಲ ಮತ್ತು ಸಂಸ್ಥಾನಗಳು	೧೬೬	೧೭.	ಸರಹದ್ ಪ್ರಾಂತ	೨೪
೬.	ಮಧ್ಯಪ್ರಾಂತ ಮತ್ತು ಸಂಸ್ಥಾನಗಳು	೧೩೦	೧೮.	ಜಮ್ಮು ಮತ್ತು ಕಾಶ್ಮೀರ	೨೪
೭.	ಬಿಹಾರ ಮತ್ತು ಸಂಸ್ಥಾನಗಳು	೯೩	೧೯.	ಬಲೂಚಿಸ್ತಾನ ಮತ್ತು ಸಂಸ್ಥಾನಗಳು	೧೭
೮.	ಮೈಸೂರ	೧೦೪	೨೦.	ಅಜಮೀರ ಮತ್ತು ಮೇವಾಡ	೫
೯.	ಹೈದರಾಬಾದ	೧೩೪	೨೧.	ದಿಲ್ಲಿ	೪
೧೦.	ಬರೋಡಾ	೬೪	೨೨.	ಕೊಡಗು	೨
೧೧.	ಮಧ್ಯಭಾರತ	೭೧	೨೩.	ಕೋಚೀನ	೧೫
೧೨.	ಟ್ರಾವಣಕೋರ	೪೬	೨೪.	ರಾಜಪೂತಸ್ತಾನ	೧೫

ಆದರೆ ಹಿಂದುಸ್ತಾನ ಮತ್ತು ಪಾಕಿಸ್ತಾನದಲ್ಲಿ ಒಟ್ಟುಗೂಡಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಜನಸಂಖ್ಯೆಯುಳ್ಳ ಪಟ್ಟಣಗಳು ೫೮ ಮಾತ್ರ. ಒಂದು ಲಕ್ಷ ಮತ್ತು ೫೦ ಸಾವಿರ ಜನಸಂಖ್ಯೆಯೊಳಗಿನ ಪಟ್ಟಣಗಳು ೯೭, ೫೦ ಸಾವಿರ ಮತ್ತು ೨೦ ಸಾವಿರ ಜನಸಂಖ್ಯೆಯೊಳಗಿನವು ೩೦೧, ೨೦ ಸಾವಿರ ಜನಸಂಖ್ಯೆಗಿಂತ ಕಡಿಮೆ ಇರುವ ಪಟ್ಟಣಗಳು ೨೩೪೭.

ಮಾಡರ್ನ್ ರಿವ್ಯೂ ವ್ಯದಲ್ಲಿ

—ಸಂತೋಷಕುಮಾರ ಚಟರ್ಜಿ, ಎಂ. ಎ.

ಸಂಯುಕ್ತ ರಾಷ್ಟ್ರಗಳ ಶೈಕ್ಷಣಿಕ, ವೈಜ್ಞಾನಿಕ ಮತ್ತು-ಸಾಂಸ್ಕೃತಿಕ ಸಂಘ

ಗ್ರೀಸ್ ದೇಶದ ಕಥೆಯು—

ಕೋಲ್ಚಿಸ್ ನಗರದ ನರಪಶು ರಾಕ್ಷಸವು

ಬರೆದವರು:— ಪ್ರೊ. ಜೋಸ್ ಡಿ ಬೆನಿಟೋ

ಕನ್ನಡಿಸಿದವರು:-ಶ್ರೀ ತಟ್ಟಶ್ಯಾಮರಾಯರು, ಬಿ.ಎಸ್ಸಿ.,ಬಿ.ಟಿ.ಪ್ರಿನ್ಸಿಪಾಲ, ಟ್ರೇನಿಂಗ ಕಾಲೇಜ,ನವಲಗುಂದ

ಬಹು ಕಾಲದ ಹಿಂದೆ ನಮ್ಮ ಭೂಮಿಗೆ ಒಂದು ದೊಡ್ಡ ಆವಾಂತರವು ಬಂದೊದಗಿತು. ಉತ್ತರದಿಂದ ಆರಂಭಿಸಿ ಮಧ್ಯ ಏಶಿಯದತ್ತ ಹಿಮನದಿಗಳು ಮುಂದೆ ಮುಂದೆ ಹರಿಯತೊಡಗಿದವು. ಜನರು ಶೀತಕ್ಕೆ ಹೆದರಿ ದಕ್ಷಿಣದ ಹೆಚ್ಚು ಸೌಮ್ಯವಾದ ಪ್ರದೇಶಗಳನ್ನು ಹುಡುಕ-ವದಕ್ಕೆ ಹೊರಟರು.

ಮಾನವರ ಈ ತಂಡವು ಸಾವಧಾನವಾಗಿ ಪಯಣ ಬೆಳಿಸಿತು. ಎತ್ತರದಿಂದ ದೊಡ್ಡ ಬಂಡೆಗಳು ಉರುಳಿ ಬೀಳುವ ದೂರದ ಗರ್ಜನೆಯನ್ನು ದೇವತೆಗಳ ಕೋಪಾ ಟೋಪದ ಅಬ್ಬರವೆಂದು ಭಾವಿಸಲಾದ ಗರ್ಜನೆಯನ್ನು ಒಮ್ಮೊಮ್ಮೆ ಈ ಹಾದಿನಡೆಯುವ ಜನರು ಕೇಳುತ್ತಿದ್ದರು ಗಿಡಮರಗಳಲ್ಲಿ ಸುಂಯಿಗುಟ್ಟುವ ಗಾಳಿಯ ಸಪ್ಪಳವನ್ನೂ ಇಕ್ಕಟ್ಟಾದ ಕಣಿವೆಯ ಮಾರ್ಗದಲ್ಲಿ ಭರದಿಂದ ನುಗ್ಗುವ ಅದರ ಮೊರೆಯನ್ನೂ ಅವರು ಆಗಾಗ್ಗೆ ಕೇಳುತ್ತಿದ್ದರು

ಅವರು ತಾವು ವಾಸಿಸಲಿಚ್ಛಿಸುವ ಹೊಸಭೂಮಿಗೆ ತಲ್ಪಿದ ಮೇಲೆ ತಮಗಿಂತ ಚಿಕ್ಕವರಿಗೂ ಮಾರ್ಗ ಕ್ರಮ ಣದಲ್ಲಿ ಹುಟ್ಟಿದ ಮಕ್ಕಳಿಗೂ ದೇವತೆಗಳಿಂದ ಹೊರ ಹೊಮ್ಮುವ ಈ ದಿವ್ಯ ಅದ್ಭುತ ಧ್ವನಿಗಳ ಸುದ್ದಿಯನ್ನು ಹೇಳುತ್ತಿದ್ದರು.

ಒಂದು ದಿನ ಬಿಲ್ಲುಗಾರನೊಬ್ಬನು ತನ್ನ ಬಿಲ್ಲಿನ ಮಂಡಿಗೆಯ ಮಣಿತವನ್ನು ಹೆಚ್ಚಿಸುವದಕ್ಕೆಂದು ಉಪ-ಯೋಗಿಸಿದ ಗಿಡದ ನಾರಿನ ಟಂಕಾರದಿಂದುಂಟಾದ ಮಂಜುಳನಾದದಿಂದ ಆನಂದಭರಿತನಾದನು. ಸತ್ತ ಪ್ರಾಣಿಯ ಎಲುಬಿನಲ್ಲಿ ಗಾಳಿತುಂಬುವಂತೆ ಊದುವ ದರಿಂದ ಸಿಳ್ಳೆಂಬ ಸಪ್ಪಳವನ್ನು ಮಾಡಬರುವದೆಂದು ಬೇರೊಬ್ಬ ಮನುಷ್ಯನು ಕಂಡುಕೊಂಡನು. ಕೊನೆಗೆ ಎಷ್ಟೋ ಪ್ರಯೋಗಗಳ ಅಂತ್ಯದಲ್ಲಿ ಈ ಆನಂದದ ಪ್ರಕಾರವನ್ನು ಉಪಯೋಗಿಸಿಕೊಳ್ಳುವ ವಿದ್ಯೆಯನ್ನು ಮನುಷ್ಯರು ಕಲಿತುಕೊಂಡರು. ನಡೆದು ನಡೆದು ಹೆಜ್ಜೆ ಇಡುವದು ಅಸ್ತವ್ಯಸ್ತವಾಗಲು, ಹಾದೀ ನಡೆಯುವ ಲಯಗತಿಯನ್ನು ಸ್ಥಿರಪಡಿಸುವದಕ್ಕೆ ತನ್ನ ಕೈಗಳಿಂದ ಚಪ್ಪಳೆಹಾಕಿ ತಾಳಹಿಡಿಯುವ ಯೋಜನೆಯನ್ನು ಯಾರೋ ಕಂಡುಕೊಂಡಿರಬೇಕು. ಇನ್ನೊಂದು ಪ್ರಸಂಗದಲ್ಲಿ ಮನುಷ್ಯನು ಬೇರೆ ಬೇರೆ ಅಳತೆಯ ಬಿಲ್ಲು ಗಳನ್ನು ಒಂದು ಸಾಲಿನಲ್ಲಿಟ್ಟಾಗ ದಾರದ ಮಿಡಿತ ದಿಂದುಂಟಾಗುವ ಧ್ವನಿಗಳು ಆ ದಾರದ ಉದ್ದಳತೆ ಹಾಗು ಬಿಗಿತ, ಇವು ಹೆಚ್ಚುಕಡಿಮೆಯಾದಂತೆ, ಬದಲಾಗುವ ವೆಂದು ತಿಳಿದುಕೊಂಡಿರಲು ಸಾಕು

ಅಂತೂ ಬೇಕಾದಾಗ ಧ್ವನಿಗಳನ್ನು ಹೇಗೆ ಹುಟ್ಟಿಸ ಬೇಕೆಂಬದನ್ನು ಮನುಷ್ಯರು ಕಲಿತುಕೊಂಡಿದ್ದರು. ಇದರಿಂದ ತಮಗಿಂತ ಹಿರಿಯರು ತಮಗೆ ತಿಳಿಸಿದ ರಹ ಸ್ಯದ ಅನುಭವ ಪಡೆಯುವದಕ್ಕೂ ಅವರು ತೋರಿಸಿ-ಕೊಟ್ಟ ಆನಂದವನ್ನು ಉಪಭೋಗಿಸುವದಕ್ಕೂ ಅವರಿಗೆ ಸಾಧ್ಯವಾಯಿತು. ಹೀಗೆ ಸಂಗೀತದ ಉತ್ಪತ್ತಿಯು

ಆಯಿತು. ಗೀತಗಳ ಸಹಾಯದಿಂದಲೂ ಆರಂಭಕಾಲೀನದ ವಾದ್ಯಗಳಾದ ಕೊಳಲು,ಮದ್ದಲೆ, ವೀಣೆಗಳ ಸಹಾಯದಿಂದಲೂ ಮಾನವನು ದೇವತೆಗಳ ಲೋಕದ ಮಟ್ಟಕ್ಕೆ ತನ್ನ ಆನಂದವನ್ನು ಒಯ್ಯಲು ಸಮರ್ಥನಾದನು.

ಹೀಗೆ ಸಂಗೀತವು ಪೂರ್ವಜರು ನಮಗೆ ಬಿಟ್ಟು ಹೋದ ನಾಂಸ್ಕೃತಿಕ ಆಸ್ತಿಯ ಒಂದಂಶವಾಗಿ ಬಂದು ಮನುಷ್ಯನಿಗೆ ತನ್ನ ಪಶುಸಾಮಾನ್ಯಸ್ವಭಾವವನ್ನು ವಿರುವ ಒಂದು ಸಾಧನವನ್ನು ಒದಗಿಸಿಕೊಟ್ಟಿದೆ. ಅದರ ಶಕ್ತಿಯ ಒಂದು ರಮ್ಯವಾದ ಸಂಕೇತದಂತಿರುವ ಉದಾಹರಣೆಯು ಆರ್ಫಿಯಸನ ಗ್ರೀಕ ಕಥೆಯಲ್ಲಿ ಸಿಕ್ಕುವದು. ಅಪೋಲೋನು ಆರ್ಫಿಯಸನಿಗೆ ಒಂದು ವೀಣೆಯನ್ನು ಕೊಟ್ಟನೆಂದೂ ಗಾನದೇವತೆಗಳು ಆತನಿಗೆ ಸಂಗೀತ ಕಲೆಯ ರಹಸ್ಯಗಳನ್ನು ಕಲಿಸಿದರೆಂದೂ ಕಥೆಯಿದೆ.

ಆರ್ಫಿಯಸನು ತನ್ನ ವೀಣೆಯಿಂದ ದೇವತೆಗಳನ್ನೂ ಮನುಷ್ಯರನ್ನೂ ವಶುಗಳನ್ನೂ ಗಿಡಮರಗಳನ್ನೂ ಕಲ್ಲುಗಳನ್ನೂಸಹ ಮುಗ್ಧಗೊಳಿಸುತ್ತಿದ್ದನು. ಫ್ಲಾರೆನ್ಸಿನಲ್ಲಿಯ ಗಿಯೊಟ್ಟೊ ಕಾಂಪಾನಿಲೊ ಎಂಬ ಮಂದಿರದಲ್ಲಿರುವ ಲ್ಯುಕಾಡೆಲಾ ಸ್ಪೊಬ್ಬಿಯೋ ಎಂಬಾತನ ಪ್ರಸಿದ್ಧ ಕೆತ್ತನೆಯಲ್ಲಿ ಆರ್ಫಿಯಸನು ನೆಲದ ಮೇಲೆ ಕೂತು ವೀಣೆಯನ್ನು ಬಾರಿಸುವಂತೆಯೂ ಸುತ್ತಲೂ ಮಂತ್ರ ಮುಗ್ಧವಾದಂತಿರುವ ಸಿಂಹಗಳು, ಆನಂದಪರವಶವಾದ ಪಕ್ಷಿಗಳು, ತಮ್ಮ ರಿಂಬೆಗಳನ್ನು ಆ ವಿಚಿತ್ರ ಅದ್ಭುತ ಸಂಗೀತದೆಡೆಗೆ ಚಾಚಿದಂತಿರುವ ವೃಕ್ಷಗಳು ಚಿತ್ರಿಸಲ್ಪಟ್ಟಿವೆ. ದುರ್ದಮ್ಯ ಕಾಮಕ್ರೋಧಾದಿರಿಪುಗಳನ್ನು, ಅಮಂಗಲದ ದುಷ್ಪಭೂತವನ್ನು, ಕಾಲಾಂತರದಲ್ಲಿ ನಶಿಸುವ ಭೂಮಿಯ ಮೇಲಿನ ವಸ್ತುಗಳ ಕ್ಷಯವನ್ನು ಇವೆಲ್ಲವನ್ನೂ ಜಯಿಸಿನಿಂತ ಸಂಗೀತದ ಪ್ರಭಾವವು ಆರ್ಫಿಯಸನ ಇಡಿಯ ಜೀವನದಲ್ಲಿ ಕಾಣಬರುವದು. ಬಾಕ್ಕಸ್‌ನ ಪೂಜಾರಿಗಳಾದ ಮೇನಾದ್‌ರು ಗತಿಸಿದ ತನ್ನ ಹೆಂಡತಿಯ ಸ್ಮರಣೆಯನ್ನು ಸದಾ ಜಾಗೃತವಾಗಿಟ್ಟುಕೊಂಡ ಆ ವೀರ ಆರ್ಫಿಯಸನ ಅಸೂಯೆಯಿಂದ ಅವನ ಮೃತ್ಯುವಿಗಾಗಿ ತಮ್ಮ ಭಯಂಕರವಾದ ಕೋಪಾಟೋಪವನ್ನು ಹರಿಬಿಟ್ಟರು.

ಆದರೂ ಆರ್ಫಿಯಸನ ಸ್ಮರಣೆಯು ಅಮರವಾಗಿತ್ತು ಎಂಬದು ಸಹಜವಪೆ! ವೈರಿಗಳು ಛಿನ್ನವಿಚ್ಛಿನ್ನವಾಗಿ ಹರಿದು ಹಾಕಿದ ಅವನ ಅಂಗಾಂಗಗಳನ್ನು ಹೆಬ್ಬಸ್ (ಈಗಿನ ಮಾರಿಟ್ಸಾ)ನದಿಯ ಪ್ರವಾಹವು ಮೃದುವಾಗಿ ಸಾಗಿಸಿತು. ಮುಂದೆ ಈಜಿಯನ್ ಸಮುದ್ರದ ತೆರೆಗಳು ಅದನ್ನು ಲೆಸ್‌ಬಾಸ್ ನಡುಗಡ್ಡೆಗೆ ಮುಟ್ಟಿಸಿದವು. ಅಲ್ಲಿ ಗಾನದೇವತೆಗಳು ಅವನ್ನು ಎತ್ತಿಕೊಂಡು ಮೌಂಟ ಅಲಿಂಪಸ್‌ದ ಅಡಿಯಲ್ಲಿ ಲೆಬೈಥ್ರಾ ಎಂಬಲ್ಲಿ ಹುಗಿದರು. ಆ ಸಮಾಧಿಯ ಬಳಿಯ ನೈಟಿಂಗೇಲ್ ಪಕ್ಷಿಗಳ ಗಾನದ ಮೇಲೆ ಆರ್ಫಿಯಸನ ಸಂಗೀತದ ವಿಚಿತ್ರ ಪ್ರಭಾವವು ಬಿದ್ದಿತೆಂದು ಹೇಳುವರು! ಆ ಗಾನದ ಅತಿಶ್ರೇಷ್ಠವಾದ ಸೌಂದರ್ಯವನ್ನು ಸವಿಯಲಿಕ್ಕೆ ಜನರು ದೂರದೂರದಿಂದ ಬರುತ್ತಿದ್ದರು. ಆರ್ಫಿಯಸನ ವೀಣೆಯ ತಂತಿಗಳನ್ನು ಬೇರೆ ಯಾರೂ ಮಿಟಬಾರದೆಂದು ಅದು ಸ್ವರ್ಗಕ್ಕೆ ಒಯ್ಯಲ್ಪಟ್ಟಿತು. ಅದು ಇಂದಿಗೂ ಆಕಾಶದಲ್ಲಿರುವ ಅತಿ ರಮಣೀಯವಾದ ನಕ್ಷತ್ರ ಪುಂಜಗಳಲ್ಲಿ ಒಂದಾದ ಆರ್ಫೆಯಸ್ ಎಂಬ ಗುಂಪಿನಲ್ಲಿ ತೂಗಾಡುತ್ತಿದೆ.

ಆರ್ಫಿಯಸನಿಗೆ ಸಂಬಂಧಿಸಿದ ಕ್ರಿ. ಪೂ. ೬ನೆಯ ಶತಮಾನದ ಸಾಹಿತ್ಯ ಹಾಗು ತತ್ವಜ್ಞಾನಗಳಲ್ಲಿ ಮೂಲ ಗ್ರೀಕ ಕಥೆಯೊಡನೆ ಶ್ರೇಷ್ಠತರವಾದೊಂದು ನೀತಿ ತತ್ವವೂ ಆತ್ಮದ ಅಮರತ್ವದ ನಂಬಿಕೆಗೂ ಕೂಡಿಕೊಂಡಿವೆ. ಈ ಆರ್ಫಿಯಸನ ತತ್ವರಹಸ್ಯಗಳು ಆಗಿನ ಕಾಲದ ಪ್ರಬಲವಾಗಿದ್ದ ಮತವಿಚಾರಗಳಲ್ಲಿ ಸುಧಾರಣೆಯನ್ನು ಮಾಡಲು ಹವಣಿಸಿದವು. ತಮ್ಮ ಹೊಸ ಮತ್ತು ಹೆಚ್ಚು ಕರುಣಾಮಯ ವಿಚಾರಗಳು ಜನರಲ್ಲಿ ನೆಲೆಯೂರುವಂತೆ ಮಾಡಲಿಕ್ಕೆ ಅವುಗಳ ಪ್ರತಿಪಾದಕರು ಆರ್ಫಿಯಸನ ಸಂಗೀತದ ಪ್ರಯೋಜನವನ್ನು ಪಡೆಯಲಿಚ್ಛಿಸಿದರು. ಈ ವಿಚಾರಗಳಲ್ಲಿ ವಿಶ್ವವು ಕುಲ ಮತ್ತು ಪ್ರೇಮ ಇವುಗಳಿಂದ ಸೃಜಿಸಲ್ಪಟ್ಟಿದೆಯೆಂದೂ ವಿಶ್ವೋತ್ಪತ್ತಿಗೆ ಸ್ವಾಮಿಯಾದ ಮತ್ತು ಅಗ್ನಿಯ ಉಗಮವಾದ ಝ್ಯೂಸ್ ದೇವತೆಯು ವಿಶ್ವದಲ್ಲಿ ಎಲ್ಲೆಡೆಯಲ್ಲಿ ವ್ಯಾಪಿಸಿರುವ ಶಕ್ತಿಸ್ವರೂಪವೆಂದೂ ಅತಿಮುಖ್ಯವಾದ ವಿಚಾರವಿರುತ್ತದೆ.

ಗ್ರೀಸದ ಪುರಾಣಕಾಲದಿಂದ ಬೈಬಲಿನ

ಜನರತ್ತ ನಮ್ಮ ಲಕ್ಷವನ್ನು ಹೊರಳಿಸೋಣ. ಅಲ್ಲಿ ಒಬ್ಬನೇ ಒಬ್ಬನಾದ ಡೇವಿಡನ ಮೂರ್ತಿಯು ಕಣ್ಣು-ಮುಂದೆ ನಿಲ್ಲುವದು. ಗೋಲಿಯಥ್ ಎಂಬ ಅಮಾನುಷ ವ್ಯಕ್ತಿಯನ್ನು ಗೆದ್ದವನವನು, ಜೆರೂಸಲೆಮನ್ನು ಸ್ಥಾಪಿಸಿದವನು, ಬೋಧಪರವಾದ ಸೂಕ್ತಗಳ ಕರ್ತನು ಘನಸಂಗೀತಗಾರನು. ಆರ್ಫಿಯಸನ ವೀಣೆಯು ಹಾರ್ಪ ಎಂಬದರ ಸ್ವರೂಪವನ್ನು ತಾಳಿದೆ. (ಹಾರ್ಪ ಎಂಬ ವಾದ್ಯದಲ್ಲಿ ಪ್ರತಿಯೊಂದು ಸ್ವರಕ್ಕೂ ಒಂದು ಬೇರೆ ತಂತಿಯನ್ನು ಮಿಟಬೇಕಾಗುವದು.) ಆಗಿನ ಕಾಲದ ಸೂಕ್ತಗಳನ್ನು ಹಾರ್ಪ್‌ನ್ನು ನುಡಿಸುತ್ತ ಹಾಡುತ್ತಿದ್ದರು. ಸಂಗೀತದ ಶ್ರೇಷ್ಠತೆಯನ್ನು ಕಾಯ್ದು ಕೊಂಡು ಬರುವ ಕೆಲಸವು ಕ್ರೈಸ್ತಧರ್ಮದ ಪಾಲಿಗೆ ಬಂತು. ಎಲ್ಲ ಸಂಗೀತ ವಾದ್ಯಗಳನ್ನು ಅದ್ಭುತ ಚಾತುರ್ಯದಿಂದ ಬಾರಿಸುವಂಥ ಸ್ವರ್ಗೀಯಮೇಳದಲ್ಲಿ ದೇವದೂತರೂ ದಿವ್ಯಗಾಯಕರೂ ಇರುವ ವರ್ಣನೆಯು ಬಾಯಬಲ್ಲಿನಲ್ಲಿ ಬರುವದು.

ಬಹುತರ ಯಾವತ್ತೂ ಧರ್ಮಗಳ ವಿಧಿವಿಧಾನಗಳಲ್ಲಿ ಸಂಗೀತಕ್ಕೆ ಒಂದು ಮಹತ್ವದ ಸ್ಥಾನವಿರುವದೆಂಬ-ದನ್ನು ನಾವೆಲ್ಲರೂ ಬಲ್ಲೆವು; ಹಾಂಡೆಲ ಬಾಕ್ ನೊರ್ಬರ್ಟ್ ಬೀಥೋವೆನ್ ಆರ್ಫ್‌ಸ್ತ್ ಮತ್ತು ಫಾವ್, ಇವರೆಲ್ಲರೂ ಧಾರ್ಮಿಕ ಭಜನೆಯ ಗೀತಗಳನ್ನು ಶ್ರೇಷ್ಠಮಟ್ಟಕ್ಕೆ ತರುವದರಲ್ಲಿಯೇ ತಮ್ಮ ಬುದ್ಧಿ ಕುಶಲತೆಗಳನ್ನು ಉಪಯೋಗಿಸಿದರು. ಅನೇಕ ಶತಮಾನಗಳ ಇತಿಹಾಸವನ್ನು ನಾವು ಅವಲೋಕಿಸಿದರೂ ಈ ಸಂಗತಿಯು ಕಂಡುಬರುವದು. ನಿಗ್ರೋ ಜನರ ಪ್ರಾರ್ಥನಾ ಗೀತೆಗಳಲ್ಲಿ ಅತ್ಯುತ್ತಮವಾದವು ಗಳಿಂದ ಆರಂಭಿಸಿ ಕ್ರಿಸ್ತಮಸ್ ಗೀತೆಗಳವರೆಗೆ, ಧಾರ್ಮಿಕ ವಿಧಿಯಲ್ಲಿ ಅಂತರ್ಭೂತವಾದ ಗಂಭೀರ—ನೃತ್ಯದಿಂದ ಜಾತ್ರೆಗಳಲ್ಲಿ ನಡೆಯುವ ಉಲ್ಲಾಸದ ಉತ್ಸವಗಳವರೆಗೂ ಸಂಗೀತದ ಸಪ್ತಸ್ವರಗಳು ಒಂದು ವಿಚಿತ್ರ ಅದ್ಭುತವನ್ನು ಸಾಧಿಸಿವೆ. ಅವು ಮನುಷ್ಯನ ಹೃದಯಕ್ಕೆ ಹೊಸ ಹುರುಪನ್ನು ಕೊಟ್ಟಿವೆ, ಅವನ ದುಃಖಶೋಕಗಳನ್ನು ದೂರಮಾಡಿವೆ, ಚಿಂತೆಗಳ ಭೂತ ಛಾಯೆಯಿಂದ ಅವನನ್ನು ಮುಕ್ತಮಾಡಿವೆ.

ಸಂಗೀತವು ಕಾಡುಮೃಗಗಳನ್ನು ಸಾದುಮಾಡ ಬಲ್ಲದು ಎಂದಮೇಲೆ ತನ್ನ ಸಹೋದರರನ್ನು ಭಕ್ಷಿಸಿ ಉಪಜೀವಿಸುತ್ತಿದ್ದ ಆದಮ್‌ನ ಅಸಂಸ್ಕೃತ ಭಾವದಿಂದ ಮನುಷ್ಯನಲ್ಲಿರುವ ಪಶುವೃತ್ತಿಯು ತಲೆಯೆತ್ತಿ ಭಾತೃ ಭಾವವು ಮರೆಯಾದಾಗ ಸಂಗೀತವು ಅವನ ಆ ಪಶು-ವೃತ್ತಿಯನ್ನು ಅಡಗಿಸಬಲ್ಲದೆಂಬ ಮಾತು ಅಚ್ಚರಿ-ಯನ್ನುಂಟುಮಾಡದು.

ಆರ್ಫಿಯಸನ ವೀಣೆಯು ಸುವರ್ಣಮಯ ಎಣ್ಣೆ-ಯನ್ನು ಕಾಯುತ್ತಿದ್ದ ಕೋಲ್ಚಿಸದ ರಾಕ್ಷಸನನ್ನು ನಿದ್ದೆ-ಹೋಗುವಂತೆ ಮಾಡಬಲ್ಲುದಾದರೆ (ಸುವರ್ಣಮಯ ಎಣ್ಣೆಯು ಬಾಳುವೆಯ ಸೌಖ್ಯದ ಸಂಕೇತ! ಇದನ್ನು ಹುಡುಕುವದಕ್ಕೆ ಜೇಸನ್ನನ ನೇತೃತ್ವದಲ್ಲಿ ಅರ್ಗೋ-ನಾಟರು ಹೊರಟಿದ್ದರೆಂದು ಕತೆ) ಅರ್ಗೊ ಎಂಬ ಹಡಗದಲ್ಲಿ ಇವರು ಪರ್ಯಟನ ಮಾಡುತ್ತಿದ್ದಾಗ ದೊಡ್ಡ ಬಿರುಗಾಳಿಯು ಬೀಸಿ ಸಮುದ್ರದಲ್ಲಿ ಪರ್ವತ ಪ್ರಾಯವಾಗಿ ತೆರೆಗಳು ಏಳಲು ಹಡಗದಲ್ಲಿದ್ದ ಆರ್ಫಿ-ಯಸನು ತನ್ನ ವೀಣೆಯ ಮಿಡಿತದೊಂದಿಗೆ ಹಾಡಿದ ಕೂಡಲೆ ಹಡಗದ ಮುಂದಿನ ಕ್ರೂರತೆರೆಗಳ ಅಬ್ಬರ ನಡಗಬಲ್ಲದಾದರೆ, ಆರ್ಫಿಯಸನು ತನ್ನ ಹೆಂಡತಿಯಾದ ಯುರಿಡಿಸಳು ಹಾವುಕಡಿತದಿಂದ ಸತ್ತಾಗ ಪಾತಾಳಕ್ಕೆ ಹೋಗಿ ತನ್ನ ವಿದ್ಯೆಯ ಪ್ರಭಾವದಿಂದ ಅಲ್ಲಿಯ ಪ್ರಭು-ವಾದ ಪ್ಲೂಟೋನ ಮನಸ್ಸಿನಲ್ಲಿ ಅಂತಃಕರಣವು ಹುಟ್ಟುವಂತೆ ಮಾಡಿ ಬದುಕಿದ ತನ್ನ ಕೋಮಲ ಸ್ವಭಾವನ ಹೆಂಡತಿಯನ್ನು ಕರೆದುಕೊಂಡು ಪುನ: ಭೂಮಿಗೆ ಮರಳಬಲ್ಲನಾದರೆ, ಅಂತೂ ಸಂಗೀತದ ಅದ್ಭುತಚಮತ್ಕಾರವು ಅಭದ್ರಸಂಕಲ್ಪವನ್ನು ತಡೆಯ-ಬಲ್ಲದಾದರೆ, ಭುಗಿಲೆಂದು ಎದ್ದ ಹೃದಯದ ಉದ್ವೇಗ ವನ್ನು ಶಾಂತಗೊಳಿಸಬಲ್ಲದಾದರೆ ಮತ್ತು ಮಾನವನ ದುರ್ಮಾರ್ಗಕ್ಕೆಳಸಿದ ಸಹಜಪ್ರವೃತ್ತಿಗಳನ್ನು ದಮನ ಮಾಡಬಲ್ಲದಾದರೆ ಸಂಗೀತವು ಮನುಷ್ಯಮನುಷ್ಯರಲ್ಲಿ ಸರಿಯಾದ ತಿಳುವಳಿಕೆಯನ್ನು ಉಂಟುಮಾಡಬಲ್ಲ-ದೆಂದೂ, ಶಾಂತಿಯುತವಾದ ಪ್ರಪಂಚವನ್ನು ರೂಪ-ಗೊಳಿಸಲಿಕ್ಕೆ ಸಂಗೀತವು ಬಲವಾದ ಸಾಧನವಾಗಬಹು ದೆಂದೂ ನಾವು ಧಾರಳವಾಗಿ ಯಾಕೆ ಹೇಳಬಾರದು?

ಉಪಯುಕ್ತವಾದುದನ್ನೇ ಸದಾ ಮುಂದಿಟ್ಟು-ಕೊಳ್ಳುವ ಆಧುನಿಕ ಜೀವನ ರೀತಿಯು ಎಷ್ಟೋ ಜನರ

ಮನಸಿನಲ್ಲಿ ಹೊಸ ಕಲ್ಪನೆಯೊಂದನ್ನು ರೂಪಿಸಿದೆ— ಅದಾವುದೆಂದರೆ ಸಂಗೀತವು ಅಗತ್ಯವಿಲ್ಲದ ನಾಗರಿಕ ಸಂಸ್ಕಾರವೆಂದೂ ಸಂಗೀತ ಶಿಕ್ಷಣವು ಅನಾವಶ್ಯಕವಾದ ಒಂದು ಐಷ ಆರಾಮಿನ ವಿಷಯವೆಂದೂ ಜನರೆಷ್ಟೋ ಭಾವಿಸತೊಡಗಿದ್ದಾರೆ. ಇದರ ಪರಿಣಾಮವೇನಾಗಿದೆ ಎಂದರೆ ಚಿಂತೆಗಳು ಮನುಷ್ಯರ ಮನಸನ್ನು ಕೊರೆದು ಕೊರೆದು ಅವುಗಳಿಂದ ಪಾರಾಗುವದೇ ಅಸಾಧ್ಯವೆಂದೆನಿಸಿದಾಗ ಲಕ್ಷಾವಧಿ ಜನರು ಹಾಡುಗಳನ್ನು ಮಾಡಿ, ಹಾಡಿ, ವಾದ್ಯಗಳನ್ನು ಬಾರಿಸಿ ಇಲ್ಲವೆ ಸುಮ್ಮನೆ ಸಂಗೀತವನ್ನು ಕೇಳಿಯಾದರೂ ತಮ್ಮ ಚಿಂತೆಗಳನ್ನು ದೂರಮಾಡಿಕೊಳ್ಳಬಹುದಾಗಿತ್ತು. ತಮ್ಮ ಮನಸನ್ನು ಭೂತ ವಸ್ತುಸಂಪರ್ಕದಿಂದ ವಿರಲತಮವಾದ ಕಲೆಯೊಂದರಲ್ಲಿ ಪವಿತ್ರತಮವಾದ ಸುಖಾನುಭವದಲ್ಲಿ ಉನ್ನತಗೊಳಿಸಬಹುದಾಗಿತ್ತು. ಆದರೆ ಅದರ ಮೇಲಿನ ಮೂಢ ಭಾವನೆಯಿಂದ ಉಪಯೋಗಕ್ಕೆ ಅವರು ಎರವಾಗಿದ್ದಾರೆ.

ಹೀಗಿದ್ದದರಿಂದ ಸಂಗೀತದ ಅಧ್ಯಾಪನ, ಸಂಗೀತ ಶಿಕ್ಷಣದ ಪ್ರಶ್ನೆಗಳು ಮುಂದೆ ಬಂದಿವೆ. ಇದಕ್ಕಾಗಿ ಯುನೆಸ್ಕೋ (ಯುನೈಟೆಡ್ ನೇಷನ್ಸ್ ಎಜ್ಯುಕೇಶನಲ್ ಸಾ ಇಂಟಿಫಿಕ್ ಆ್ಯಂಡ ಕಲ್ಚರಲ್ ಆರ್ಗನೈಝೇಶನ್) ಎಂದರೆ ಪ್ರಪಂಚಕ್ಕ ಶಾಂತಿಯ ಶಿಕ್ಷಣವನ್ನು ಕೊಡುವ ಗುರಿಯನ್ನಿಟ್ಟುಕೊಂಡ ಸಂಘವು ತನ್ನ ಸಾಂಸ್ಕೃತಿಕ ಚಟುವಟಿಕೆಗಳ ಖಾತೆಯಲ್ಲಿ ಸಂಗೀತ ವಿಷಯಕ ಪ್ರಶ್ನೆಗಳ ಅಭ್ಯಾಸಕ್ಕೆಂದು ಒಂದು ವಿಭಾಗವನ್ನು ಮಾಡಿಕೊಂಡಿದೆ. ಅಲ್ಲದೆ ಅಂತರರಾಷ್ಟ್ರೀಯ ಸಂಗೀತಸಭೆಯೊಂದರ ಸ್ಥಾಪನೆಗೆ ಅನುಕೂಲ ವಾತಾವರಣವನ್ನು ನಿರ್ಮಿಸಿ, ಅದನ್ನು ನಡೆಸಿಕೊಂಡು ಬಂದಿದೆ. ಇದರ ಮೊದಲನೆಯ ಸಾಮಾನ್ಯಸದಸ್ಯರ ಸಭೆಯು ಇತ್ತೀಚೆಗೆ ಪ್ಯಾರಿಸಿನಲ್ಲಿ ಕೂಡಿತ್ತು.

ಈ ಸಭೆಯ ಕಾರ್ಯಕ್ರಮವನ್ನು ಇದೀಗ ನಾನು ಓದುತ್ತಲಿದ್ದೇನೆ. ೧೯೪೭ರಲ್ಲಿ ಮೆಕ್ಸಿಕೋಪಟ್ಟಣದಲ್ಲಿ ಯುನೆಸ್ಕೋದ ಸಾಮಾನ್ಯ ಪರಿಷತ್ತಿನ ಎರಡನೆಯ ಅಧಿವೇಶನವು ಕೂಡಿತ್ತು. ಅಲ್ಲಿ ಈ ಅಂತರರಾಷ್ಟ್ರೀಯ ಸಂಗೀತ ಸಭೆಯ ಮಾತು ಮೊದಲು ಬಂದಿತು. ಈ ಕಾರ್ಯಕ್ರಮದ ಸಾಮಾನ್ಯವಿಭಾಗದಲ್ಲಿ ದೂರದ ಗುರಿಯನ್ನಿಟ್ಟುಕೊಂಡು ಮಾಡಬೇಕಾಗಿರುವ ಕಾರ್ಯವು ಯೋಜಿಸಲ್ಪಟ್ಟಿದೆ. ಆದರೆ ಎಲ್ಲಕ್ಕೂ ಮೊದಲು ಕೈಕೊಳ್ಳಬೇಕಾದ ಕಾರ್ಯಕ್ರಮದ ವಿಭಾಗವದೆ. ಇದರ ಮೂರನೆಯ ಪರಿಚ್ಛೇದದಲ್ಲಿ ನಮ್ಮ ಮುಂದಿರುವ ಸಂಗೀತಶಿಕ್ಷಣದ ಪ್ರಶ್ನೆಯೇ ಎತ್ತಿಕೊಳ್ಳಲ್ಪಟ್ಟಿದೆ. ಪ್ರಥಮತಃ ಅದರಲ್ಲಿ ಒಂದು ಸೂಚನೆಯು ಹೀಗಿದೆ: ಸಾಮಾನ್ಯ ಶಿಕ್ಷಣದ ಅಂಗವಾಗಿ ಸಂಗೀತದ ಅಭ್ಯಾಸ, ಅಧ್ಯಾಪನ, ಸಂಸ್ಕೃತಿ ಇವುಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಚರ್ಚೆಗಾಗಿ ೧೯೫೨ರಲ್ಲಿ ಒಂದು ಪರಿಷತ್ತನ್ನು ಕರೆಯುವ ವಿಚಾರವನ್ನು ಮುಂದುವರಿಸುವದು. ಈಗ ಸಂಗೀತ ಕಲೆಯ ಉಪೇಕ್ಷೆಗೆ ಯಾವದು ಮದ್ದು ಎಂಬ ಪ್ರಶ್ನೆಯ ಉತ್ತರವನ್ನು ಈ ಸಭೆಯು ಕೊಡಬಹುದೆಂದು ಸಾಮಾನ್ಯ ಶಿಕ್ಷಣದಲ್ಲಿ ಅದನ್ನು ಹೇಗೆ ಹೊಂದಿಸಬೇಕೆಂಬದನ್ನೂ ಅದು ಸೂಚಿಸಿಬಹುದೆಂದು ನನಗನಿಸುತ್ತದೆ.

೧೭ನೆಯ, ೧೮ನೆಯ ಶತಮಾನಗಳಲ್ಲಿ ಎಷ್ಟೋ ದೇಶಗಳಲ್ಲಿ ಪುರಪಂಚಾಯತಗಳ ಮೇಲೆವಿದ್ಯಾಭ್ಯಾಸದ ಹೊಣೆ ಇತ್ತು. ಆಗ ಶಿಕ್ಷಣದಲ್ಲಿ ಮೂಲಭೂತವಿಷಯಗಳಷ್ಟೇ ಅಲ್ಲದೆ, ಧಾರ್ಮಿಕ ವಿಧಿವಿಧಾನಗಳಲ್ಲಿ ಬೇಕಾಗುವ ಸಂಗೀತ ಶಿಕ್ಷಣವೂ ಅಡಕವಾಗಿತ್ತು. ಆದ್ದರಿಂದ ಕ್ರೈಸ್ತಾಲಯಗಳಲ್ಲಿ ಕೆಲಸಗಾರರನ್ನು ನೇಮಿಸುವಾಗ ಮೇಲಿನ ಅಧಿಕಾರಿಗಳು ಅವರನ್ನು ಸ್ವಲ್ಪ ಆರಿಸಿಕೊಳ್ಳಬೇಕಾಗುತ್ತಿತ್ತು. (ಲೈಪ್‌ಝಿಗ್‌ದಲ್ಲಿ ಈ ಅಧಿಕಾರದ ಸ್ಥಳವು ಬಾಕ್ ಎಂಬ ಪ್ರಸಿದ್ಧ ಸಂಗೀತಕಾರನಿಗೆ ಸಿಕ್ಕಿತ್ತು ಆದರೂ ಯಾರನ್ನೂ ಬೇಕೆಂದು ಅಯೋಗ್ಯರೆಂದು ಎಣಿಸಲಾಗುತ್ತಿರಲಿಲ್ಲ. ೧೯ನೆಯ ಶತಮಾನದಲ್ಲಿ ಬುದ್ಧಿವಾದದ ಸಿದ್ಧಾಂತಗಳು ಜನರ ಮನಸ್ಸನ್ನು ಆಕರ್ಷಿಸಿದವು. ಇದರಿಂದ ಧರ್ಮ ವಿಧಿಗಳ ಕಟ್ಟಿನಲ್ಲಿದ್ದ ಸಂಗೀತಕ್ಕೆ ಅರ್ಥಾತ್ ಇಳಿಮುಖವಾಯಿತು. ಧಾರ್ಮಿಕ ಶಿಕ್ಷಣವು ಲೌಕಿಕ ಶಿಕ್ಷಣದಿಂದ ಬೇರೆ ಮಾಡಲ್ಪಟ್ಟಿತು. ಶ್ರೇಷ್ಠ ಕಲಾಕೋವಿದರ ಕೀರ್ತಿಯವರ್ಚಸ್ಸು ಮೊದಲು ಅಭ್ಯಾಸದ ಸಾಮಾನ್ಯ ವಿಷಯಗಳಲ್ಲೊಂದಾದ ಸಂಗೀತವನ್ನು ವಿಶಿಷ್ಟ ಕುಶಲತೆಯನ್ನಾಗಿ ಮಾರ್ಪಡಿಸಿತು. ಇದರ ಪರಿಣಾಮವಾಗಿ ಸಂಗೀತ ಶಿಕ್ಷಣವು ವಿಲಾಸದ ವಿಷಯವೆಂದು ಎಣಿಸಲ್ಪಟ್ಟಿತು. ಹೀಗಾಗಿ ಸಂಗೀತವನ್ನು ನಿರ್ಮಿಸುವದರಲ್ಲಿ ಇಲ್ಲವೆ ಹಾಡಿ ಬಾರಿಸಿತೋರಿಸುವದರಲ್ಲಿ ಜನರಿಗಿರುವ

ಅವಕಾಶವು ಅಲ್ಪನಾಯಿತು. ಅಂತರ ರಾಷ್ಟ್ರೀಯ ಸಂಗೀತಸಭೆಯು ಮೇಲೆ ಹೇಳಿದ ಕಾರ್ಯಕ್ರಮದ ಅಂಶವು ಈ ಬಿಕ್ಕಟ್ಟನ್ನು ಬಿಡಿಸುವದಕ್ಕಾಗಿಯೇ ಯೋಜಿಸಲ್ಪಟ್ಟಿದೆ.

ರಾಷ್ಟ್ರ ರಾಷ್ಟ್ರಗಳಲ್ಲಿರುವ ಘರ್ಷಣೆಯನ್ನು ಸೂಕ್ಷ್ಮವಾಗಿ ನಾವು ನಿರೀಕ್ಷಿಸಿ ಅದನ್ನು ಕಡಿಮೆಮಾಡಲಿಕ್ಕೆ ಪ್ರಯತ್ನಿಸಾದಿದ್ದರೆ ಅದರ ಪರ್ಯವಸನವು ಪ್ರಕಟವಾದ ಹೋರಾಟದಲ್ಲಿ ಆಗುವದು. ಈ ಘರ್ಷಣೆಯು ಪ್ರಾಚೀನ ಯುಗದಲ್ಲಿ ಕೋಲಚಿಸದ ನರಸಶುವು ಕಾಯುತ್ತ ನಿಂತ ಸ್ಥಳದಲ್ಲಿ ಇಂದಿಗೆ ಜನಜನಾಂಗಗಳ ನಡುವೆ ನಿಂತಿರುವ ದೆಂದು ಹೇಳಬಹುದು. ಬಂಗಾರದ ಉಣ್ಣೆಯ— ಅರ್ಥಾತ್ ಬಾಳುವೆಯ ಸೌಖ್ಯದ-ಶೋಧಕ್ಕಾಗಿ ಹೊರಟ ಅರ್ಗೊನಾಟರ ಮಾರ್ಗವನ್ನು ಅಡ್ಡಗಟ್ಟಿರುವದೀ ನೂತನ ರಾಕ್ಷಸವು. ಈ ರಾಕ್ಷಸನು ನಿದ್ರೆ ಹೋಗುವಂತೆ ಆರ್ಫಿಯಸನು ಮಾಡಬಲ್ಲವನಾಗಿದ್ದನು— ಎಂದರೆ ಜನರ ಜೀವನ ಸೌಭಾಗ್ಯಕ್ಕೆ ಬಂದಿರುವ ವಿಘ್ನವನ್ನು ನಿವಾರಿಸಿಬಲ್ಲವನಾಗಿದ್ದನು. ನಾವೂ ಹಾಗೆಯೇ ನಮ್ಮ ಶಿಕ್ಷಣದ ಯೋಜನೆಗಳಲ್ಲಿ ಯಾವ ಶಾಂತಿಗಾಗಿ ನಾವೆಲ್ಲರೂ ಹಂಬಲಿಸುವೆವೋ ಮತ್ತು ಯಾವ ಶಾಂತಿಗಾಗಿ ನಾವು ಪ್ರತ್ಯಕ್ಷವಾಗಿ ಮಾಡುತ್ತಿರುವ ಕಾರ್ಯವು ಅತ್ಯಲ್ಪವಾಗಿದೆಯೋ ಅಂತಹ ಶಾಂತಿಯನ್ನು ಪುನಃ ಜಗತ್ತಿಗೆ ತಂದು ಕೊಡವ ಒಂದು ಸರ್ವೋತ್ಕೃಷ್ಟ ಸಾಧನವಾಗಿರುವ ವಿಷಯವನ್ನು ಭದ್ರಗೊಳಿಸಲಿಕ್ಕೆ ನಾವು ಅಲಕ್ಷ ಮಾಡಬಾರದು

(ಯುನೆಸ್ಕೋ)

● **ಆರ್ಥಿಕ ಧೋರಣೆಯ ತಳಹದಿ**

ಯಾವದೇ ಸರಕಾರವಿರಲಿ, ಅದರ ಆರ್ಥಿಕ ಧೋರಣೆಯು ನೀತಿಯ ತತ್ತ್ವಗಳ ತಳಹದಿಯ ಮೇಲೆ ನಿಂತಿರಲೇಬೇಕು.

—ಜಾನ್ ಬರ್ನಬಸ್

● **ಮಾನವನಿಗೆ ಮಹತ್ವವಾದುದೇನು ?**

ಮಾನವನಿಗೆ ಮಾನವನಿಗಿಂತ ಶ್ರೇಷ್ಠವಾದುದು—ಮಹತ್ವವಾದು ಬೇರಾವುದೂ ಇಲ್ಲ.

—ವಿಜ್ಞಾನಿ ಪ್ರೊ. ಐನಸ್ಟೀನ

ಮನಃಶಾಸ್ತ್ರವೂ ಶಿಕ್ಷಣವೂ

(ಎಡ್ವರ್ಡ ಗ್ಲೋವ್ಹರವರ ಮನನೀಯ ವಿಚಾರತರಂಗಗಳು)

ಕನ್ನಡಿಸಿದವರು :–ಶ್ರೀ **ಬ. ಮು. ಶಿಂತ್ರಿ** ಬಿ. ಏ. ಬಿ. ಟಿ.
ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ, ಧಾರವಾಡ

ಮೊದಮೊದಲು ಶಿಕ್ಷಣವೆಂದರೆ ಹಣವನ್ನು ಇಲ್ಲವೆ ಸಂಪತ್ತನ್ನು ಗಳಿಸುವ ಉದ್ದೇಶವನಿಟ್ಟುಕೊಂಡು ಕಲಿಯುವದಾಗಿತ್ತು. ಆ ಕಾಲಕ್ಕೆ ಈ ಖಾತೆಯ ಅಧಿಕಾರಿಗಳು ಪಡೆದ ಪ್ರಾಮುಖ್ಯವಾದ ಯೋಗ್ಯತೆ. (degree) ಯಂದರೆ ದಂಡಿನ ಖಾತೆಯ ತರಬೇತಿಯು ಇದ್ದುದು ಸಹ ಹಲವು ಪ್ರಸಂಗಗಳಲ್ಲಿ ಕಂಡು ಬರುತ್ತಿತ್ತು. ಅಂದಿನಿಂದ ಇಂದಿನ ವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಅವ್ಯಾಹತವಾಗಿ ಎಷ್ಟೋ ಮಾರ್ಪಾಟುಗಳಾಗುತ್ತ ಬಂದಿವೆ. ಅವುಗಳ ಮಹತ್ವವು ಅಷ್ಟಿಷ್ಟಲ್ಲ. ಕಳೆದ ಐವತ್ತು ವರ್ಷಗಳಿಂದೀಚೆಗೆ ಜರುಗಿದ ಬದಲಾವಣೆಗಳಲ್ಲಿ ಹೆಚ್ಚು ಮಹತ್ವದ ಬದಲಾವಣೆಗಳು ಜರುಗಿದ್ದುದು ಮನಃಶಾಸ್ತ್ರ ಮತ್ತು ಶಿಕ್ಷಣಕಲೆ ಇವೆರಡರಲ್ಲಿ ನೆಲಸುತ್ತ ಬಂದ ನಿಕಟ ಸಂಬಂಧದ ಪರಿಣಾಮವೆಂದೇ ನನ್ನ ಖಂಡಿತ ಮತ. ದುರ್ದೈವದಿಂದ ಮನಃಶಾಸ್ತ್ರವು ನಮ್ಮ ದೇಶದಲ್ಲಿ ಎಷ್ಟೋ ಭಾಷೆಗಳಲ್ಲಿ ಹೇಳಲ್ಪಡಬೇಕಾಗಿದೆ ಮತ್ತು ಬರೆಯಲ್ಪಡಬೇಕಾಗಿದೆ. ಆದ್ದರಿಂದ ಆ ನಿಕಟಾನುವರ್ತಿಯಾದ ಸಂಬಂಧವು ಯಶಸ್ವೀಯಾಗಬೇಕೆಂದು ನಾವು ಇಚ್ಛಿಸುವದಾದರೆ ನಾವೆಲ್ಲರೂ ಹೇಗಾದರೂ ಮಾಡಿ ಒಂದೇ ಭಾಷೆಯನ್ನು ಮಾತಾಡಲು ಕಲಿಯುತಕ್ಕದ್ದು. ಶಿಕ್ಷಣದ ವಿಷಯವಾಗಿದ್ದ ನನ್ನ ಅಭಿಪ್ರಾಯಗಳ ತಳಹದಿಯಂದರೆ ಸಂಪೂರ್ಣವಾಗಿ ಫ್ರಾಡ (ಒಬ್ಬ ಪಾಶ್ಚಿನಾತ್ಯ ಶಿಕ್ಷಣತಜ್ಞ)ರ ತತ್ವಗಳೇ ಎಂಬ ಮಾತನ್ನು ನಾನು ಪ್ರಾಂಜಲ ಮನಸಿನಿಂದ ಒಪ್ಪಿಕೊಳ್ಳಲೆಬೇಕು. ಭಾಷೆಗಳ ಏಕೀಕರಣವ ವಿಷಯಕ್ಕೆ ಬಂದು ಪ್ರತ್ಯೇಕ ಲೇಖನವನ್ನು ನಾನು ಬರೆಯಬಹುದಾಗಿದೆ.

ಶೈಕ್ಷಣಿಕ ಸಮಸ್ಯೆಗಳಲ್ಲೆಲ್ಲ ಮೂರು ಮುಖ್ಯ ಬೀಜಮಾತುಗಳು ಒಡಮೂಡಿರುವೆಂದು ನನಗೆ ತೋಚುತ್ತದೆ:— (೧)ಅಜಾಗ್ರತಾವಸ್ಥೆಯ ಮನದ (The unconscious) ಕ್ರಿಯೆಗಳು ಮತ್ತು ಜಾಗ್ರತಾವಸ್ಥೆಯ ಮನದ (The conscious) ಕ್ರಿಯೆಗಳು ಬೇರೆಬೇರೆಯಾಗಿವೆ. (೨) ಅಜಾಗೃತಾವಸ್ಥೆಯ ಮನದ ಕ್ರಿಯೆಗಳು ಇಲ್ಲವೆ ನಿಯಮಾವಳಿಗಳು ಮನಸಿನ ಪ್ರವೃತ್ತಿಗಳನ್ನು ನಿರ್ಬಂಧಿಸುತ್ತವೆ ಮತ್ತು ಹಲವು ವೇಳೆ ವಿಲಕ್ಷಣ ರೀತಿಯಲ್ಲಿ ಆಚರಿಸುತ್ತವೆ. (೩) ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯ ಮೇಲೆ ಘಟಿಸುವ ಶೈಶವಾವಸ್ಥೆಯ ಮೊದಲಿನ ಐಯ್ದು ವರ್ಷಗಳ ಅತ್ಯಧಿಕ ಮಹತ್ವ.

ಮಗುವು ಶಾಂತಿಗೆ ಬರುವ ಮುನ್ನ ಹೊಂದಿದ ಶಿಕ್ಷಣದ ತಿಳಿವಳಿಕೆಯು ಶಿಕ್ಷಕನಿಗೆ (ಶಿಕ್ಷಕಿಗೆ) ಶಾಲೆಯಲ್ಲುಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ನೆರವಾಗುವದೆಂಬ ಮಾತು ನಿಜವಿದೆ. ಆದರೂ ಎಲ್ಲ ಸಮಸ್ಯೆಗಳು ಪರಿಹಾರವಾಗುವವೆಂಬರ್ಥವಲ್ಲ. ಆ ಐಯ್ದು ವರ್ಷಗಳ ಕಾಲಾವಧಿಯಲ್ಲಿ ಮಗುವು ಎಷ್ಟೋ ಭಾವೋದ್ರೇಕಗಳಿಗೆ ತುತ್ತಾಗಿ ಅವುಗಳ ಪರಿಣಾಮವು ಅದರ ಶೀಲ ಮತ್ತು ನಡತೆಯ ಮೇಲೆ ಆಗದೆ ಹೋಗುವದಿಲ್ಲ ಅಜಾಗ್ರತಾವಸ್ಥೆಯ ಮನದಕ್ರಿಯೆಗಳು ಹೇಗೆ ಹೊಂದಿಕೊಂಡು ಹೋಗಬೇಕೆಂಬದನ್ನು ಕಲಿಯಲು ಪ್ರೋತ್ಸಾಹಿಸುತ್ತವೆ. ಈ ಕ್ರಿಯೆಗಳ ಮಹತ್ವವನ್ನು ಗಣನೆಗೆ ತರದೆ ಶಿಕ್ಷಣಕ್ರಮವನ್ನು ರಚಿಸಲು

ಎಂದಾದರೂ ಶಕ್ಯವಾದಿತೇ? ಗೃಹಶಿಕ್ಷಣದ ಮಹತ್ವವು ಅಷ್ಟಿಷ್ಟಲ್ಲ. ಅದುವೇ ಶಿಕ್ಷಣದ ನಿಜವಾದ ತಳಹದಿಯು. ಅದನ್ನು ಕಡಗಣಿಸಿಬಿಟ್ಟರೆ ಶಿಕ್ಷಣಕ್ರಮವು ಎಂದಿಗೂ ಪೂರ್ತಿಯಾಗಲಾರದು.

ಶಿಕ್ಷಣದ ಮುಖ್ಯ ಉದ್ದೇಶವು ಸಮಷ್ಟಿ ಇಲ್ಲವೆ ಸಮನ್ವಯವೆಂದು ನಾವು ತಿಳಕೊಳ್ಳಬೇಕು. ಸಮಷ್ಟಿ ಅಥವಾ ಸಮನ್ವಯವೆಂದರೆ ಸುತ್ತುಮುತ್ತಲಿನ ಪರಿಸ್ಥಿತಿಗೆ ಅನುರೂಪವಾಗುವಂತೆ ಹೊಂದಿಕೊಂಡು ಹೋಗುವದು. ಇದನ್ನು ಮಗುವು ತಾನು ಇಚ್ಛಿಸಿವಂತೆ ತನಗೆ ಬೇಕಾದ ರೀತಿಯಲ್ಲಿ ಕಲಿಯಬಹುದು. ಹುಟ್ಟಿದಾಕ್ಷಣದಿಂದ ಶಾಲೆಗೆ ಬರುವ ವರೆಗಿನ ಅವಧಿಯಲ್ಲಿ ಮಗುವಿನ ಒಂದೇ ಒಂದು ಸಮಸ್ಯೆಯೆಂದರೆ ಹುಟ್ಟುಗುಣಗಳನ್ನು ಇಲ್ಲವೆ ಸಹಜಪ್ರವೃತ್ತಿಗಳನ್ನು (Instincts) ಅಂಕಿತದಲ್ಲಿ ಹೇಗೆ ಇಟ್ಟುಕೊಳ್ಳಬೇಕೆಂಬದನ್ನು ಕಲಿಯುವದಾಗಿದೆ. ಆದದರಿಂದ ಶಾಲೆಗೆ ಬರುವ ಮುನ್ನ ಪ್ರತಿಯೊಂದು ಚಿಕ್ಕಮಗುವಿನಲ್ಲಿ ಸಹಜಪ್ರವೃತ್ತಿಗಳನ್ನು ಅಂಕಿತದಲ್ಲಿಟ್ಟುಕೊಂಡ ಬಗ್ಗೆ ನೆಲಸಿದ ಕ್ರಿಯೆಗಳ ಮತ್ತು ಪ್ರತಿಕ್ರಿಯೆಗಳ ವಿಧಾನಗಳ ಸಮೂಹಗಳೇ ಕಂಡು ಬರುವವು. ಅವುಗಳ ಅರ್ಥವು ಮಾತ್ರ ಮಗುವಿಗೆ ತಿಳಿಕೊಳೆದಿರುವದಿಲ್ಲ. ಇಂಥ ಪ್ರತಿಯೊಂದು ಚಿಕ್ಕಮಗುವು ತನ್ನಲ್ಲಿ ಮನೆಮಾಡಿಕೊಂಡ ಕ್ರಿಯೆಗಳ ಮತ್ತು ಪ್ರತಿಕ್ರಿಯೆಗಳ ವಿಧಾನಗಳ ಬಂಡವಲವನ್ನು ತುಂಬಿಕೊಂಡು ಪಕ್ವಾ ಮಾಲು (Finished Product) ಆಗಿ ಶಿಕ್ಷಕನ (ಶಿಕ್ಷಕಿಯ) ಕಡೆಗೆ ಶಾಲೆಯಲ್ಲಿ ಬರುತ್ತದೆ. ಮಗುವಿನಲ್ಲಿ ಹುದುಗಿಕೊಂಡ ಈ ಸಾಮರ್ಥ್ಯಗಳನ್ನು ಇಲ್ಲವೆ ಶಕ್ತಿಗಳನ್ನು ಹುಡುಕಿ ಹೊರತೆಗೆಯುವದು ಮತ್ತು ಪ್ರೋತ್ಸಾಹಿಸಿ ಅವುಗಳನ್ನು ಶಕ್ಯವಿದ್ದಷ್ಟು ಹೆಚ್ಚೆಚ್ಚಾಗಿ ಬೆಳಿಸುವದು ಶಿಕ್ಷಕನ (ಶಿಕ್ಷಕಿಯ) ಆದ್ಯ ಕರ್ತವ್ಯವಾಗಿದೆ. ಶಾಲೆಗೆ ಬಂದ ಪ್ರತಿಯೊಂದು ಚಿಕ್ಕಮಗುವು ಶಿಕ್ಷಕನಿಗೆ (ಶಿಕ್ಷಕಿಗೆ) ಕೋಧಮಾಡಿ ನೋಡಲು ತಕ್ಕುದಾದ ಒಂದು ಹೊಸ ವಸ್ತು ಅಥವಾ ಕ್ಷೇತ್ರವೆಂದು ತಿಳಿಯಬೇಕು. ಯಾಕಂದರೆ, ಆ ಮಗುವಿನಲ್ಲಿ ಹಿಂದೆ ಎಂದೂ ಕಾಣದ ಹೊಸ ಸಮಸ್ಯೆಗಳು ಉದ್ಭವಿಸಿದ್ದುದು ಕಂಡು ಬರಬಹುದು. ಅಂಥ ಸಮಸ್ಯೆಗಳನ್ನು ಮಗುವು ತನ್ನಷ್ಟಕ್ಕೆ ತಾನೇ ಪರಿಹರಿಸಿಕೊಳ್ಳಲು ಪ್ರಯತ್ನಪಡಬಹುದು. ಆದರೂ ಶಿಕ್ಷಕನು (ಶಿಕ್ಷಕಿಯು) ಇಂಥ ಪ್ರಸಂಗಗಳಲ್ಲಿ ಮಗುವಿಗೆ ಕೈಕೊಡುವದೊಳಿತು.

ಡಾಕ್ಟರರು ರೋಗಿಯ ರೋಗವನ್ನು ಕಂಡು ಹಿಡಿದು ಅದರ ಚಿಕಿತ್ಸೆಯನ್ನು ಕೈಕೊಳ್ಳುವಂತೆ ಶಾಲೆಗೆ ಬಂದ ಮಗುವಿನ ಕುಂದುಕೊರತೆಗಳನ್ನು ಮತ್ತು ● ಅದು ಶಾಲೆಯಲ್ಲಿ ಎದುರಿಸಬಹುದಾದ ಅಡ್ಡಿ ಆತಂಕಗಳನ್ನು ಇಲ್ಲವೆ ಸಮಸ್ಯೆಗಳನ್ನೂ ಸೂಕ್ಷ್ಮರೀತಿಯಿಂದ ಗೊತ್ತು ಹಚ್ಚಿಕೊಂಡು ಅವುಗಳ ನಿವಾರಣೋಪಾಯಗಳನ್ನು ಅಥವಾ ಪರಿಹಾರೋಪಾಯಗಳನ್ನು ಕೈಕೊಳ್ಳುವದು ಶಿಕ್ಷಕನ (ಶಿಕ್ಷಕಿಯ) ಎರಡನೆಯ ಕೆಲಸವಾಗಿದೆ. ಮಗುವಿನಲ್ಲಿ ಈ ಪರಿಗಿದ್ದ ಮನೋವ್ಯೂಹವನ್ನೇ ಪಲ್ಲಟ ಮಾಡಿ ಅದು ಹಿಂದೆ ಅನುಭವಿಸಿದ ಮತ್ತು ಈಗ ಶಾಲೆಯಲ್ಲಿ ಅನುಭವಿಸುವ ಸಮಸ್ಯೆಗಳನ್ನು ಪರಿಹರಿಸಲು ತಕ್ಕುದಾದ ಹೊಸ ಮನೋವ್ಯೂಹವನ್ನೇ ರಚಿಸಿಕೊಳ್ಳಲು ಮಗುವಿಗೆ ಸಹಾಯವನ್ನು, ಅವಶ್ಯಕತೆ ಬಿದ್ದಾಗೆಲ್ಲ, ನೀಡುತ್ತ ಹೋಗಬೇಕು. ಮನೆಯಲ್ಲಿ ತಂದೆತಾಯಿಗಳು ಅಥವಾ ಪಾಲಕರು ತಮ್ಮ ಮನಸಿಗೆ ಬಂದ ಹಾಗೆ ಮಗುವನ್ನು ಕಠೋರತನದಿಂದ ಕಟ್ಟಿದಿರುವದರಿಂದ ಹೊಸ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಸಾಮರ್ಥ್ಯವು ಆ ಮಗುವಿನಲ್ಲಿ ಎಷ್ಟೇ ಇದ್ದರೂ ಸಹ ಶಾಲೆಗೆ ಬಂದ ಕೂಡಲೆ ಅದು ಸಂಕಟದಲ್ಲಿ ಬೀಳುವದು. ಸ್ವಾಭಾವಿಕ ಇಂಥ ಪ್ರಸಂಗಗಳಲ್ಲಿ ಶಿಕ್ಷಕನು (ಶಿಕ್ಷಕಿಯು) ಮಗುವಿನ ವಿಷಯಕ್ಕೆ ತಪ್ಪು ಕಲ್ಪನೆಯನ್ನು ಮಾಡಿಕೊಳ್ಳಕೂಡದು. "ಇಂಥ ದಡ್ಡ ಮಗುವನ್ನು ನಾನು ಹೇಗೆ ತಿದ್ದಬೇಕು? ಇದು ನನ್ನಿಂದ ಸರ್ವಥಾ ಆಗದ ಕೆಲಸ! ಈ ಮಗುವನ್ನು ಒಬ್ಬ ಮನಃಶಾಸ್ತ್ರದ ತಜ್ಞನ ಬಳಿಗೆ ಕಳಿಸುವದೊಳಿತು!" ಎಂದು ನಿಟ್ಟುಸಿರು ಬಿಡುತ್ತ ಕೂಡ್ರಬಾರದು. ಇಂಥ ಮಕ್ಕಳಿಲ್ಲದ ಶಾಲೆಯು ನಿಜವಾಗಿ ಚಲೋ ಶಾಲೆಯಲ್ಲ. ಆದುದರಿಂದ ಶಿಕ್ಷಕನು (ಶಿಕ್ಷಕಿಯು) ಧೈರ್ಯಗೆಡದೆ ಅಂಥ ಮಗುವನ್ನು ತಿದ್ದೇ ತೀರುವೆನೆಂಬ ಆತ್ಮವಿಶ್ವಾಸವನ್ನು ತಳೆದು ತನ್ನ ಮನಸಿಗೆ ತೋಚಿದ ಯುಕ್ತಿಪ್ರಯುಕ್ತಿಗಳಿಂದ ಆ ಮಗುವನ್ನು ಸುಧಾರಿಸಲು ತ್ರಿಕರಣಪೂರ್ವಕವಾಗಿ ಪ್ರಯತ್ನಿ-

ಸಬೇಕು. ಇಂಥ ಪ್ರಾಮಾಣಿಕ ಪ್ರಯತ್ನಗಳಿಗೆ ಯಶವು ಕಟ್ಟಿಟ್ಟದ್ದೇ.

ಶಾಲೆಯಲ್ಲಿ ಮಗುವು ಶಾಲೆಯ ಅಧಿಕಾರಿ ವರ್ಗದ ಕೂಡ ಒಂದು ವಿಶಿಷ್ಟ ಸಂಪರ್ಕವನ್ನು ಬೆಳೆಯಿಸಿ ಕೊಳ್ಳಬೇಕಾಗುತ್ತದೆಂಬ ಮಾತು ಶಿಕ್ಷಕ ವೃತ್ತಿಯಲ್ಲಿ ರುವವರಿಗೆಲ್ಲ ಗೊತ್ತಿರಲೂ ಸಾಕು. ಮನೋವಿಶ್ಲೇಷಣಜ್ಞರು (Psycho-analysts) ಮಗುವಿನ ಈ ಹೊಸ ಸಂಪರ್ಕಕ್ಕೆ ಒಂದು ವಿಶಿಷ್ಟ ಹೆಸರನ್ನಿಟ್ಟಿದ್ದಾರೆ. ಅದನ್ನು ಅವರು ಶಿಕ್ಷಣದ ವರ್ಗಾಂತರ (Transference) ವೆಂದು ಕರೆಯುತ್ತಾರೆ. ಮನೆಯಲ್ಲಿ ತಂದೆತಾಯಿಗಳು ಇಲ್ಲವೆ ಪಾಲಕರು ಅಧಿಕಾರಿಗಳಾಗಿರುತ್ತಾರೆ; ಶಾಲೆಯಲ್ಲಿ ಪ್ರವೇಶಿಸಿದ ಕೂಡಲೆ ಮಾಸ್ತರರು (ಮಿಸ್ಟೈಸ್‌ರು) ಮತ್ತು ಹೆಡ್‌ಮಾಸ್ತರರು (ಹೆಡ್‌ಮಿಸ್ಟೈಸರು) ಅಧಿಕಾರಿಗಳಾಗುವರು. ಒಂದು ವಾತಾವರಣದ ಅಧಿಕಾರಿವರ್ಗವು ಹೋಗಿ ಬೇರೊಂದು ವಾತಾವರಣದ ಅಧಿಕಾರವರ್ಗವು ಬರುವದಕ್ಕೆ ಶಿಕ್ಷಣ ಶಾಸ್ತ್ರದಲ್ಲಿ ವರ್ಗಾಂತರ (Transference) ವೆಂದು ಹೆಸರು. ಈ ವರ್ಗಾಂತರದ ಕ್ರಮವು ಮಗುವಿಗೆ ಗೊತಾಗದಂತೆ. ಅಜಾಗೃತಾವಸ್ಥೆಯ ಮನದ ಕ್ರಿಯೆಗಳೆ ಮುಖಾಂತರವಾಗಿಯೇ ನಡೆದು ಹೋಗುವದು. ಇದರಿಂದುಂಟಾಗುವ ಮುಖ್ಯ ಪರಿಣಾಮಗಳೆಂದರೆ ಮಗುವಿನಲ್ಲಿ ಮಿತ್ರತ್ವದ ಮತ್ತು ವಿಧೇಯತನದ ಭಾವನೆಗಳೂ ಒಡಮೂಡಬಹುದು ಇಲ್ಲವೆ ವೈರತ್ವದ ಮತ್ತು ಅವಿಧೇಯತನದ ಪ್ರತಿಕ್ರಿಯೆಗಳೂ ತಲೆದೋರಬಹುದು. ಯಾವದೇ ಪ್ರತಿಕ್ರಿಯೆಗಳು ಉದ್ಭವಿಸಿದರೂ ಶಿಕ್ಷಕನು (ಶಿಕ್ಷಕಿಯು) ಚಿಂತಿಸುವ ಕಾರಣವಿಲ್ಲ. ವರ್ಗಾಂತರದ ಕ್ರಮವು ಸಂಪೂರ್ಣವಾಗಿ ನಿಸರ್ಗಕ್ಕೆ ಅನುಸರಿಸಿಯೇ ಘಟಿಸುವದರಿಂದ ಶಿಕ್ಷಕನು (ಶಿಕ್ಷಕಿಯು) ಮಗುವಿನಲ್ಲಿ ಸದ್ಭಾವನೆಗಳು ಉಂಟಾಗುವಂತೆಯೂ ಅಪರಾಧ, ಧರ್ಮಲಂಡತನ ವೈರತ್ವ ಸಮಾಜಘಾತಕವೃತ್ತಿ ಮೊದಲಾದ ದುಷ್ಟಭಾವನೆಗಳು ಹುಟ್ಟದಂತೆಯೂ ಎಚ್ಚರಪಡಕ್ಕದ್ದು. ಒಂದು ವೇಳೆ ಶಿಕ್ಷಕನು (ಶಿಕ್ಷಕಿಯು) ಮಗುವಿನಲ್ಲಿ ಚಲೋ ಭಾವನೆಗಳನ್ನು ಉಂಟುಮಾಡಲಿಲ್ಲ ಅಲಕ್ಷ್ಯ ಮಾಡಿದರೂ ಸಹ ಮಗುವು ಈ ವರ್ಗಾಂತರ ಕ್ರಮದಲ್ಲಿ ತನ್ನನ್ನು ತಾನೇ ಸುಧಾರಿಸಿಕೊಳ್ಳಬಹುದು. ಇಂಥ ಉದಾಹರಣೆಗಳು ಶಿಕ್ಷಕನ (ಶಿಕ್ಷಕಿಯ) ಗಮನಕ್ಕೆ ಎಷ್ಟೋ ಬಂದಿರಬಹುದು. ಆದುದರಿಂದ ಶಿಕ್ಷಕನು (ಶಿಕ್ಷಕಿಯು) ಮಗುವನ್ನು ಸುಧಾರಿಸಲು ತಾನು ಎಷ್ಟು ಸಹಾಯ ಮಾಡಿದೆನೆಂಬುದನ್ನೂ ಮತ್ತು ಮಗುವು ತನ್ನಷ್ಟಕ್ಕೆ ತಾನೇ ಎಷ್ಟು ಮಾಡಿಕೊಂಡಿತೆಂಬುದನ್ನೂ ಕಂಡು ಹಿಡಿದಿಡುವದು ಲೇಸು. ಮಗುವು ತನ್ನ ಪ್ರಗತಿಯನ್ನು ತಾನೇ ಮಾಡಿಕೊಂಡಲ್ಲಿ ಶಿಕ್ಷಕನು (ಶಿಕ್ಷಕಿಯು) ಅದರ ಪೂರ್ಣ ಯಶಸ್ಸನ್ನು ಮಗುವಿಗೇ ಕೊಟ್ಟುಬಿಡತಕ್ಕದ್ದು. ಮಗುವನ್ನು ತಿದ್ದುವದು ಇಲ್ಲವೆ ತೀಡುವದು ತನ್ನ ಮನಸಿನ ಸಂಕೇತದಂತಲ್ಲ; ಆದರೆ ತನ್ನನ್ನು ತಾನೇ ತಿದ್ದಿಕೊಳ್ಳಲು ಮಗುವಿಗೆ ಪ್ರೇರೇಪಿಸುವದು ಶಿಕ್ಷಕನ (ಶಿಕ್ಷಕಿಯ) ಕರ್ತವ್ಯವು. ಮಗುವಿನ ಈ ಪ್ರಯತ್ನದಲ್ಲಿ ಅಡೆತಡೆಗಳುಂಟಾದಲ್ಲಿ ಮಾತ್ರ ಅವುಗಳನ್ನು ನಿವಾರಿಸಲು ಶಿಕ್ಷಕನು (ಶಿಕ್ಷಕಿಯು) ಸಹಾಯ ನೀಡಬೇಕು. ಮಗುವಿನಲ್ಲಿ ಮನಸಿನ ಹೋರಾಟವು ನಡೆದದ್ದು ಎಲ್ಲಿಯ ವರೆಗೆ ಕಂಡುಬರುವದಿಲ್ಲವೋ ಅಲ್ಲಿಯ ವರೆಗೆ ತನ್ನ ಪ್ರಗತಿಯನ್ನು ತಾನೇ ಮಾಡಿಕೊಳ್ಳುವಷ್ಟು ಸಾಮರ್ಥ್ಯವು ಅದರಲ್ಲಿದೆ ಎಂಬ ಮಾತು ಸುಸ್ಪಷ್ಟವೇ ಇದೆ. ನಾವು ನಮ್ಮ ನಿತ್ಯ ಜೀವನದಲ್ಲಿ ಎಷ್ಟೋ ತಪ್ಪು ತಡೆಗಳನ್ನು ಮಾಡುವದುಂಟು. ಅದರಂತೆ ಮಗುವಿಗಾದರೂ ತನ್ನ ಶಾಲೆಯ ಜೀವನದಲ್ಲಿ ತಪ್ಪು ತಡೆಗಳನ್ನು ಮಾಡುವ ಅಧಿಕಾರವಿದೆಯೆಂಬ ಮಾತನ್ನು ನಾವು ಬೇಗನೆ ತಿಳಕೊಂಡಷ್ಟು ಒಳಿತು. ತಪ್ಪುತಡೆಗಳಾಗುವದು ಚಲೋ ಶಿಕ್ಷಣದ ಲಕ್ಷಣವಲ್ಲ ವೆಂಬ ಮಾತು ಪ್ರಾಚೀನ ಕಾಲದ ಶಿಕ್ಷಣ ಪದ್ಧತಿಯಲ್ಲಿ ನೆಲಗೊಂಡಿತ್ತು. ಆದರೆ ಈಗ ಅದುವೇ ಉತ್ತಮ ಶಿಕ್ಷಣದ ಲಕ್ಷಣವಾಗಿ ಪರಿಣಮಿಸಿಬಿಟ್ಟಿದೆ! ಮಗುವಿಗೆ ತಪ್ಪು ತಡೆಗಳನ್ನು ಮಾಡುವ ಹಕ್ಕು ಜನ್ಮಸಿದ್ಧವಿದೆ.

ಶಿಕ್ಷಣವು ಬಹಳಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ಪ್ರತಿಯೊಂದು ಸಮಸ್ಯೆಯ ಪರಿಹಾರಕ್ಕೆ ಒಂದು ದೊಡ್ಡ ಸಮ್ಮೇಲನವನ್ನೇ ಕರೆಯಬೇಕಾಗುವದು. ಈ ಮಾತನ್ನು ವಿಶೇಷತಃ ಶಿಕ್ಷಣದ ತತ್ವಗಳ ವಿಷಯವಾಗಿ ಅಂದದ್ದಾಗಿದೆ. ಮನಃಶಾಸ್ತ್ರಕ್ಕೂ ಶಿಕ್ಷಣಕ್ಕೂ ಇರುವ ನಿಕಟ ಸಂಬಂಧವನ್ನು

ನಾನು ಒಪ್ಪುವೆನಾದರೂ ಪ್ರತಿಯೊಬ್ಬ ಶಿಕ್ಷಣತಜ್ಞನು ಮನೋರೋಗಗಳನ್ನು ಚಿಕಿತ್ಸೆ ಮಾಡುವ ತಜ್ಞ ಡಾಕ್ಟರ (Psychiatrist) ನಾಗಬಾರದು. ಒಂದು ನೇಳೆ ಹಾಗಾದಲ್ಲಿ ಅದರ ಕಠೋರ ಪರಿಣಾಮವು ಮಗುವಿನ ಮೇಲೆ ಆಗದೆ ಹೋಗಲಿಕ್ಕಿಲ್ಲೆಂಬ ಭಯವಿದೆ. ಮನಃಶಾಸ್ತ್ರಜ್ಞನ ಮತ್ತು ಶಿಕ್ಷಣಶಾಸ್ತ್ರಜ್ಞನ ಮತಗಳು ಎಷ್ಟೋ ಸಾರಿ ಬೇರೆಬೇರೆಯಾಗುವ ಸಂಭವವಿದೆ. ಅವರೀರ್ವರಲ್ಲಿ ಪ್ರತಿಯೊಬ್ಬನಿಗೂ ಹೊಸ ತತ್ವಗಳನ್ನು ನಿರ್ಮಿಸಲು ಸಮಾನ ಅಧಿಕಾರವಿದೆ. ಅಸಂಬದ್ಧವಾದ ತತ್ವಗಳನ್ನು ಮಾತ್ರ ಪ್ರಸ್ಥಾಪಿಸಕೂಡದು. ಶಿಕ್ಷಕನು (ಶಿಕ್ಷಕಿಯು) ಕೈಕೊಂಡ ಕೆಲಸದಲ್ಲಿ ಇಲ್ಲವೆ ಪ್ರಯೋಗದಲ್ಲಿ ತನ್ನ ಸ್ವಂತ ನಿರೀಕ್ಷಣೆಗೂ ಮತ್ತು ಅನುಭವಕ್ಕೂ ನಿಲುಕಿದ ಸಂಗತಿಗಳನ್ನೆಲ್ಲ ಸುಸಂಬದ್ಧವಾಗಿ ಕ್ರೋಢೀಕರಿಸಿ ಅವುಗಳ ಆಧಾರದ ಮೇಲೆ ತತ್ವಗಳನ್ನು ರಚಿಸುವದೊಳ್ಳೆಯದು. ಶಿಕ್ಷಣಶಾಸ್ತ್ರದಲ್ಲಿ ನಿಶ್ಚಿತವಾಗಿ ಕೆಲವೇ ತತ್ವಗಳಿರುವವೆಂದು ಹೇಳಲಿಕ್ಕೆ ಬರಲಾರದು. ಹೊಸದಾಗಿ ರಚಿಸಿದ ತತ್ವವನ್ನು ಸಾರಾಸಾರ ವಿಚಾರ ಮಾಡಿ ಚರ್ಚಿಸಬೇಕು ಮತ್ತು ಯೋಗ್ಯವೆಂದು ಕಂಡು ಬಂದ ಮೇಲೆ ಅದನ್ನು ಕೃತಿಯಲ್ಲಿಳಸಬೇಕು. ಇದುವೆ ಈಗ ಎಲ್ಲರೂ ಅನುಸರಿಸಲಿರುವ ಅತ್ಯುತ್ತಮ ರೂಢಿಯು.

— The New Era, February 1950

ಹೊಸ ಶಿಕ್ಷಣ ಮತ್ತು ಹೊಸ ಸಮಾಜ

ಶ್ರೀ. ಬಬಲಭಾಯಿ ಮೆಹತಾ ಅವರು 'ನಯಿ ತಾಲೀಮ' ಮತ್ತು ನವ ಸಮಾಜವನ್ನು ಕುರಿತು ಹೀಗೆ ಬರೆದಿದ್ದಾರೆ—

ಓದಲು, ಬರೆಯಲು ಮತ್ತು ಎಣಿಸಲು ಕಲಿಯುವದು ಶಿಕ್ಷಣ ಪಡೆಯ ಸಾಧನ, ಆದರೆ ಇವು ಸಂಪೂರ್ಣವಾಗಿ ಶಿಕ್ಷಣವಲ್ಲ. ಮಾನವನು ತನ್ನ ಮತ್ತು ತನ್ನ ಸಮಾಜದ ಸರ್ವಾಂಗಸುಂದರ ವಿಕಾಸಕ್ಕಾಗಿ ಶಿಕ್ಷಣ ಪಡೆಯಬೇಕು. ಮನುಷ್ಯನ ನಿಜವಾದ ಶಿಕ್ಷಣದ ತಳಹದಿಯೆಂದರೆ ಚಾರಿತ್ರ್ಯ. ಚಾರಿತ್ರ್ಯವೆಂದರೆ ಮಿದುಳಿನಲ್ಲಿ ವಿಷಯ ಸಂಗ್ರಹ ಮಾಡುವದಲ್ಲ ಇದಕ್ಕಾಗಿ ಶರೀರ, ಮನಸ್ಸು, ಬುದ್ಧಿ ಹಾಗು ಆತ್ಮದ ವಿಕಾಸವಾಗುವಂತೆ ಪ್ರವೃತ್ತಿ—ಉದ್ಯೋಗಗಳನ್ನು ಯೋಜಿಸಬೇಕು. ಹೊಣೆಯನ್ನು ಹೊರುವ ಆತ್ಮವಿಶ್ವಾಸವು ಬೆಳೆಯುವಂತೆ ಕೈಕೊಂಡ ಕಾರ್ಯಕರನ್ನು ಸಾಧ್ಯವಿದ್ದಷ್ಟು ಅತ್ಯುತ್ತಮವಾಗಿ ನಿರ್ವಹಿಸುವ ಅಭಿರುಚಿಯನ್ನು ಹುಟ್ಟಿಸುವಂತೆ ಮತ್ತು ಬಾಲಕನ ಸದ್ಗುಣಗಳು ಉತ್ಕರ್ಷೆಯನ್ನು ಪಡೆಯುವಂತೆ ಕಲಿಸುವದೇ ಮಾನವನ ನಿಜವಾದ ಶಿಕ್ಷಣ. ಇಂಥ ಶಿಕ್ಷಣಕ್ಕೇ 'ನಯಿ ತಾಲೀಮ' ಎಂದು ಮತ್ತೊಂದು ಹೆಸರು ಈ ಹೊಸ ಶಿಕ್ಷಣವನ್ನು ಕೊಟ್ಟಾಗಲೇ ನಮ್ಮ ಕಲ್ಪನೆಯಲ್ಲಿರುವ ಹೊಸ ಸಮಾಜವು ಉದ್ಭವಿತವಾಗುವದು.

—ಗುಜರಾತ ಶಾಲಾಪತ್ರ

ಮಂದಗಾಮಿ ಶಿಶು-೧

ಬರಹಗಾರ್ತಿ :- **ಪೊಪ್ಪರ ಖನಾ**

◆

ಅನೇಕ ಶಿಶು-ವರ್ಗದ ಶಿಕ್ಷಕಿಯರಂತೆ ಹದಿನೈದುಇಪ್ಪತ್ತು ಐದು ವರ್ಷದ ಮಕ್ಕಳುಗಳು ಸಣ್ಣ ಸಣ್ಣ ವರ್ಗಗಳುಳ್ಳ ಶಾಲೆಗಳನ್ನೇ ನಾನಾಡರೂ ಕನಸುಕಾಣುತ್ತಿದ್ದೆ. ಅಂತಹ ಶಾಲೆಗಳಲ್ಲಿ, ಶಾಲೆಯ ಒಳಗಾಗಲೀ ಹೊರಗಾಗಲೀ ಮಕ್ಕಳಲ್ಲಿ ಹೊರಹೊಮ್ಮುವ ಯಾವುದೇ ಉತ್ತೇಜಕ ಅಭಿರುಚಿಗಳನ್ನನುಸರಿಸಿ ಮಕ್ಕಳಿಪೇಕ್ಷಿಸಿದಾಗಲೇ ಸಾಂಪ್ರದಾಯಿಕ ಶಿಕ್ಷಣವನ್ನು ವ್ಯೆಯಕ್ತಿಕವಾಗಿಯಾಗಲೀ ಸಣ್ಣಗುಂಪಿನಲ್ಲಾಗಲೀ ಕೊಡಬಹುದೆಂದು ಅನಿಸುತ್ತಿತ್ತು. ಏನೇ ಆದರೂ ನಿಜಸ್ಥಿತಿಯಂದರೆ ನಮ್ಮ ಶಿಶು-ಶಾಲೆಯು ಪ್ರತಿಷ್ಠಾಣ್ಯಾಸಿಕದ ಸುರುವಿಗೆ ನಾಲ್ವತ್ತಾಗಲೀ ಅದಕ್ಕೂ ಹೆಚ್ಚಾಗಲೀ ವ್ಯಂಗ್ಯ ಮಕ್ಕಳನ್ನು ಸೇರಿಸಿಕೊಳ್ಳಬೇಕಾಗುತ್ತಿತ್ತು. ಆಗ ಅವರಿಗೆ ಸಾಕಷ್ಟು ದೊಡ್ಡದಾದ ಹಸರು ಆಡುಂಬೊಲವ (ಆಟದ ಬಯಲು)ನ್ನಾಗಲೀ ವ್ಯೆಯಕ್ತಿಕ ಕೆಲಸಕ್ಕೆ ಬೇಕಾಗುವ ಆಟಿಗೆ ಅಥವಾ ಉಪಕರಣಗಳನ್ನಾಗಲೀ ಒದಗಿಸಲಾರದೆ ಒಂದೇ ವರ್ಗದಲ್ಲಿ ಕುಳ್ಳಿರಿಸಬೇಕಾಗುತ್ತಿತ್ತು. ಆಟಿಗೆ-ಮೂಲಸಾಹಿತ್ಯಗಳಿಲ್ಲದ ಇಂತಹ ಸಣ್ಣ ಸಣ್ಣ ವರ್ಗಗಳಲ್ಲಿ ಚಟುವಟಿಕೆಗಾಗಿ ಹಂಬಲಿಸುವ ನಾಲ್ವತ್ತು ಮಕ್ಕಳನ್ನು ಸಾಕಷ್ಟು ಸುವ್ಯವಸ್ಥಿತವಾಗಿಯೂ ಉಲ್ಲಸಿತವಾಗಿಯ ಇಡುವ ಸಮಸ್ಯೆಯನ್ನು ನಾವು–ಶಿಶುವರ್ಗದ ಶಿಕ್ಷಕಿಯರು ಎದುರಿಸಬೇಕಾಗಿತ್ತು. ಅಲ್ಲದೆ ಪಕ್ಕದಲ್ಲಿಯೇ ಹಿರಿಯ ವರ್ಗಗಳ ಶಿಕ್ಷಕಿಯರು ತಮ್ಮ ವರ್ಗಗಳಿಗೆ ನ್ಯಾಯವಾದ-ಶಾಂತಿಯನ್ನಪೇಕ್ಷಿಸುವಂತಹವರು. ಆಡುಂಬೊಲಕ್ಕೋ ನಮ್ಮಂತೆ ಯೋಗ್ಯವಾಗಿಯೇ ಭಾಗೀದಾರರಾಗಿದ್ದ ನೂರಾರು ಮಕ್ಕಳು! ಇಂತಹ ಸ್ಥಿತಿಯಲ್ಲಿಯೂ ನಾವು ಎಷ್ಟೊಂದು ಸ್ವತಂತ್ರ ಚಟುವಟಿಕೆಗಳನ್ನು ಒದಗಿಸಲು ಸಾಧ್ಯವಿತ್ತು ! ಬೇಕಾದಷ್ಟು! ನಾವು ಇಟ್ಟಂಗಿ, ಮಣಿ, ಗೊಂಬೆ, ರಥಗಳು ಮತ್ತು ಒಗಟುಗಳೊಡನೆ ಆಡುತ್ತಿದ್ದೆವು. ಚಿತ್ರ ತೆಗೆಯುವದು, ಪೂರ್ಯಕೆ-ನುಗುಣವಾಗಿ ಬಣ್ಣ ತುಂಬುವದು! ವಾದರಿ ತಯಾರಿಸುವದು, ನೇಯುವದು. ಹೊಲಿಯುವದು. ಕತ್ತರಿಸುವದು! ಹಾಡುವದು, ಕುಣಿಯುವದು, ವಾತನಾಡುವದು, ಅಭಿನಯಿಸುವದು, ಪದ್ಯಗಳನ್ನನ್ನುವದು! ನಿರ್ದಿಷ್ಟವೇಕೆಯಲ್ಲಾದರೂ ಓಡುವದು, ಜಿಗಿಯುವದು, ಹಗ್ಗದಾಟವಾಡುವದು, ಏರುವದು, ಚಂಡಿನಾಟವಾಡುವದು, ಹಗ್ಗ

ಇವರು ಇಂಗ್ಲೆಂಡಿನ ಪಶ್ಚಿಮ ಸಸೆಕ್ಸ್ ಜಿಲ್ಲೆಯ "ಶಿಶು ಮಾರ್ಗದರ್ಶಿ ಸೇವಾ ಪಥಕ"ದ ಶಿಕ್ಷಕಿ.



(ಹೆಣ್ಣು ಮಕ್ಕಳ ಸರಕಾರಿ ಟ್ರೈನಿಂಗ ಕಾಲೇಜ ಧಾರವಾಡ,ಅವರಿಂದ ಬರೆದು ಬಂದುದು)

ಜಗ್ಗುವದು, ಅಡವಿಯ ಆಟನಾಡುವದು, ನಿಚ್ಚಣಿಕೆ—ಹಲಗೆಗಳನ್ನೇರುವದು, ಜೀಕು-ಬಾಕು ಆಟವಾಡುವದು ಮುಂತಾದವುಗಳಲ್ಲಿ ಸಂತೋಷಗೊಳ್ಳುತ್ತಿದ್ದೆವು.

ಆದರೆ ಮಕ್ಕಳ ಬೌದ್ಧಿಕ-ಅಭಿರುಚಿಗಳಿಗೆ ವೈಯಕ್ತಿಕವಾಗಿ ಲಕ್ಷ್ಯಕೊಡುವ ಅವಕಾಶ ನಮಗೆ ಸಿಗುತ್ತಿರಲಿಲ್ಲ. ಏಕೆಂದರೆ ಆಟದಲ್ಲಿದ್ದ ನಾಲ್ವತ್ತು ಮಕ್ಕಳ ಮೇಲ್ವಿಚಾರಣೆಯಕೂಡ ಅವುಗಳಲ್ಲಿಯ ಐದು ಮಕ್ಕಳಿಗಾದರೂ ಓದು-ಅಂಕಿಗಳನ್ನು ಕಲಿಸುವದು ನಮಗೆ ಅಶಕ್ಯವಾಗಿತ್ತು. ಅನೇಕ ಮಕ್ಕಳ ಬೆಳೆಯುತ್ತಿರುವ ಅವಶ್ಯಕತೆಗಳಿಗೂ ಶಾಲೆಯ ಉಳಿದ ಮಕ್ಕಳ ಹಿಕ್ಕೈಷಣೆಗೂ ಅನುವುಗೊಡುವಂತೆ ಸುರುವಾತಿಗೆ ಕೆಲವಷ್ಟಾದರೂ ಸಾಂಪ್ರದಾಯಿಕ ಶಿಕ್ಷಣವನ್ನು ಬಳಸುವದು ಇದಕ್ಕೊಂದು ಉಪಾಯವಾಗಿತ್ತು. ಆರನೇ ವಯಸ್ಸಿನ ಮೊದಲು ಸಾಂಪ್ರದಾಯಿಕ ಶಿಕ್ಷಣವು ಮನ್ನಣೆಹೊಂದದಿದ್ದರೂ ಪರಿಸ್ಥಿತಿಯು ಅನೇಕವೇಳೆ ಇದಕ್ಕೂ ಮೊದಲೇ ಅದನ್ನನುಸರಿಸಲು ಒತ್ತಾಯಪಡಿಸುತ್ತಿತ್ತು. ಏಕೆಂದರೆ ನಮ್ಮ ಜಿಲ್ಲೆಯ ಮಕ್ಕಳು ಅದಕ್ಕೆ ಸಿದ್ಧರಾಗಿ ಕಾಣುತ್ತಿದ್ದುದೇ ಒಂದು ಕಾರಣ. ಅಲ್ಲದೆ ಕಿಕ್ಕಿರಿದು ತುಂಬಿದ ವರ್ಗಗಳ ಪರಿಸ್ಥಿತಿ ಹಾಗೂ ಒಳ-ಹೊರಗಣ ಸೌಕರ್ಯಗಳಿಲ್ಲದಿರುವದು ಮತ್ತೊಂದು ಕಾರಣವಾಗಿತ್ತು.

ಸಾಂಪ್ರದಾಯಿಕ ಶಿಕ್ಷಣದ ಸುರುವಿ ಮಾತ್ರ ಮಂದವಾಗಿ ಸಾಗುತ್ತಿದ್ದುದೇನೋ ಖಂಡಿತ ಆಗ ಶಿಕ್ಷಣವನ್ನ ಆಟದೊಡನೆ ನಿಕಟವಾಗಿ ಜೋಡಿಸಿದ್ದೆವು. ತುಸು ವೇಳೆ ಕಲಿಸಿ ಕೂಡಲೆ ಬಹಳಷ್ಟು ವೇಳೆ ಸ್ವತಂತ್ರ ಚಟುವಟಿಕೆಗಳನ್ನೊದಗಿಸುತ್ತಿದ್ದೆವು. ಹಾಗೂ ವರ್ಗಗಳು ದೊಡ್ಡವಿದ್ದರೂ ಶಿಶುವಿನ ವ್ಯಕ್ತಿ-ನಿಷ್ಠ ವಿಷಯ ಗ್ರಹಣಕ್ಕೂ ಮನಸ್ಸಿನ ಒಲವಿಗೂ ವೈಯಕ್ತಿಕವಾಗಿ ಹೆಚ್ಚು ಲಕ್ಷ್ಯ ಪೂರೈಸುತ್ತಿದ್ದೆವು. ಹೀಗೆ ಅಲ್ಪಕಾಲದಲ್ಲಿಯೇ ಪ್ರತಿಯೊಂದು ಮಗುವಿನೊಡನೆ ನಿಕಟ ಸಂಬಂಧವನ್ನು ನೆಲಗೊಳಿಸಿಕೊಳ್ಳುತ್ತಿದ್ದೆವು ಹೀಗಿದ್ದರೂ ಮೊದಲಿನ ವರ್ಷದ ಕೊನೆಗೆ ಪ್ರತಿಯೊಂದು ವರ್ಗದಲ್ಲಿ ಮಕ್ಕಳು ಓದು-ಬರೆಹ-ಲೆಕ್ಕಗಳಲ್ಲಿ ಮುಂದಾಗಿಮಿಗಳಾಗಿ ಉಳಿದಿರುವದೂ ಮತ್ತೆ ಕೆಲವು ಮಕ್ಕಳಿಗೆ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ವಿಶಿಷ್ಟ ತೊಂದರೆಗಳಿರುವದೂ ಶಿಕ್ಷಕಿಗೆ ಕಾಣಬರುತ್ತಿತ್ತು.

ಶಾಲೆಯ ಮೊದಲನೆಯ ವರ್ಷದಲ್ಲಿ ವರ್ಗಗಳಿಗಾಗಿ ನಿರ್ಧರಿಸಿದ ಬರೆಹ-ಅಂಕಿಗಳ ಅಭ್ಯಾಸ ಪ್ರಮಾಣಗಳನ್ನು ಸಾಮಾನ್ಯವಾಗಿ ಎಲ್ಲರೂ ಉತ್ತಮವಾಗಿಯೇ ಹೊಂದುತ್ತಿದ್ದರು. ಇಂತಹ ಚಟುವಟಿಕೆಗಳಲ್ಲಿಯ ಮಟ್ಟಗಳು ಅಲ್ಪವೆಂದಾಗಲೀ ಅಥವಾ ಅನೇಕ ಮಕ್ಕಳಿಗೆ ಸುರುವಿನ ಬರೆಹ-ಅಂಕಿಗಳು ಸುಲಭವಾಗಿ ಬರುವದೆಂಬುದೇ ಹೀಗಾಗುತ್ತಿದ್ದುದಕ್ಕೆ ಕಾರಣವಿರಬಹುದು. ಇದೂ ನಿಜವೇ. ಇಂತಹ ವಯಸ್ಸಿಗೂ ಒಬ್ಬಿಬ್ಬ ಎಳೆಯರು ಅಂಕಿ ಜ್ಞಾನವಿಲ್ಲದವರಾಗಿಯೂ ಅಕ್ಷರಗಳನ್ನು ಸರಿಯಾದ ರೀತಿಯಲ್ಲಿ ಬರೆಯಬಾರದವರಾಗಿರುವವರಾಗಿಯೂ ಕಾಣಬರುತ್ತಲೇ ಇದ್ದರು. ದುರ್ಬಲವಾದ ನ್ಯಾಯು ನಿಯಂತ್ರಣವುಳ್ಳ (Motor-Control) ಹಾಗೂ ಕಣ್ಣು ಕೈಗಳ ಸಹಕಾರ್ಯವಿಲ್ಲದ-ಅಂದರೆ:- ಅವರ ಕಣ್ಬೊಲದಲ್ಲಿ ಬಲಗಣ್ಣು ಪ್ರಧಾನವಾಗಿದ್ದರೆ ನ್ಯಾಯು ನಿಯಂತ್ರಣ ಚಟುವಟಿಕೆಗಳಲ್ಲಿ ಎಡಗೈ ಮುಂದು; ಅಥವಾ ಇದಕ್ಕೆ ಅದಲು ಬದಲು ಸ್ಥಿತಿ ಇರುವ ಮಕ್ಕಳಲ್ಲಿ ಮಾತ್ರ ನಾನು ಕೊನೆಗೆ ಹೇಳಿದ ತೊಂದರೆಯನ್ನು ಕಾಣುತ್ತಿದ್ದೆ, ಸಾವಧಾನದ ರೂಢಿಯಿಂದಲೂ ಸಮನ್ವಯ-ತಾರತಮ್ಯ ಭಾವಗಳು ನ್ಯಾಯುಗತವಾಗುವಂತಹ ಉಳಿದ ಚಟುವಟಿಕೆಗಳನ್ನು ರೂಢಿಸುವದರಿಂದಲೂ ಇಂತಹ ಅಡ್ಡಿಗಳನ್ನು ದಾಟಬಹುದಿತ್ತು. ಅವೆಂದರೆ ಉದಾಹರಣೆಗೆ:-ತಿದ್ದಿ ಸುಲಭ ರೂಪಕ್ಕೆ ಇಳಿಸಿದ ಮೆರಿಯನ್ ರಿಚರ್ಡಸನ್ನನ ಬರಹಪಡಿಕಟ್ಟುಗಳ ಚಟುವಟಿಕೆಗಳು ಮತ್ತು ಕತ್ತರಿಯಿಂದ ಕತ್ತರಿಸುವ ಸರಳ ಮಾದರಿಗಳು; ಅದೇ ಮಾದರಿಯ ಓದುವ ವಿಶಿಷ್ಟ ಅಡ್ಡಿಗಳನ್ನಾಧರಿಸಿದ ಬರಹವಲ್ಲಿಯ ಹತ್ತಿರವಹ ಹೋಲಿಕೆಯುಳ್ಳ ಅಕ್ಷರಗಳ ತೊಂದರೆಗಳು ಉದಾ:-b ಹಾಗೂ d; h, m ಮತ್ತು n. ಮುಂತಾದವು ವರ್ಗಗಳಲ್ಲಿ ಬಹಳವಾಗಿ ತಲೆಯೆತ್ತುತ್ತಿದ್ದವು. ಮೊದಲಿನ ವರ್ಷ ಇವುಗಳನ್ನು ನಾವು ಅಷ್ಟೊಂದು ಗಂಭೀರವಾಗಿ ಗಮನಿಸುತ್ತಿರಲಿಲ್ಲ. ಅಂಕಿಗಳನ್ನು ಕಲಿಸಲು ಡೊಮಿನೊ ಪದ್ಧತಿಯಿಂದ ಕಲಿಸುವಾಗ [ಇದೊಂದು ಅಂಕಿಗಳನ್ನು ಕಲಿಸುವ ಆಟ. ದೀರ್ಘ

ಕಾರದ ೨೮ ಕಟ್ಟಗೆಯ ತುಂಡುಗಳನ್ನು ಎರಡು ಭಾಗಗಳಲ್ಲಿ ಹಂಚಿ-ಡುವರು. ಅದರಲ್ಲಿ ಪ್ರತಿಯೊಂದು ತುಂಡು ಬರಿಪಾದ ಇಲ್ಲವೆ ಒಂದರಿಂದ ಆರು(೬) ಕಲೆಗಳುಳ್ಳದ್ದು ಇರುವದು] ಇಂತಹದೇ ಅಡ್ಡಿಯನ್ನು ಎಬರಿಸಬೇಕಾಯ್ತು. ದೃಷ್ಟಿ-ವರ್ಗೀಕರಣದಲ್ಲಿ ಕೆಲವೊಂದು ಮಕ್ಕಳು ವಿಲಕ್ಷಣವಾದ ದುರ್ಬಲತೆಯನ್ನೆ ತೋರಿಸುತ್ತಿದ್ದರು. ಇದು ಹೇಗೂ ಇರಲಿ. ಮೊದಲಿನ ವರ್ಷ ಅಂಕ-ಜ್ಞಾನವು ಅಷ್ಟೊಂದು ಮಹತ್ವದ ಪಾತ್ರವನ್ನು ವಹಿಸುವದಿಲ್ಲವಾದ್ದರಿಂದ ಈ ಸಮಸ್ಯೆಯನ್ನು ಇಲ್ಲಿಗೇ ಬಿಡುವಾ. ಮಕ್ಕಳು ಎಲ್ಲಕ್ಕಿಂತಲೂ ಹೆಚ್ಚಾಗಿ ಮುಗ್ಗರಿಸುವ ಎಡರೆಂದರೆ-ಓದುವದು—ಅವರೆಡೆಗೆ ಹೊರಳುವಾ. ಹೆಚ್ಚು ಮುಂದಮತಿಗಳಾದ ಮಕ್ಕಳೂ ಕೂಡ "ನೋಡಿ ಹೇಳು" (Look and Say)—ಈ ಪದ್ಧತಿಯಿಂದ ಸುಲಭವಾಗಿ ತಿಳಿಯಬಲ್ಲವರಾದರೂ ಕಾರಿಯಾಗುವದಿಲ್ಲವೆಂಬು ನನ್ನ ಅನುಭವಕ್ಕೆ ಕಂಡು ಬಂದದ್ದರಿಂದ ನಾವು ಈ ಪದ್ಧತಿಯನ್ನು ಸ್ವರ ಸಂವಿಧಾನ ಪದ್ಧತಿಯೊಡನೆ ಜೋಡಿಸಿದೆವು. ಈ ಪದ್ಧತಿಯು ಅಪೌಲ್ಯವಾಗಿದ್ದರೂ ಹೆಜ್ಜೆ ಹೆಜ್ಜೆಗೆ ಅಡ್ಡಿಯನ್ನೊಡ್ಡುತ್ತಿತ್ತು. ತಿಳಿದುಕೊಳ್ಳುವಾಗ ಬೇರೆ ಬೇರೆ ಅಕ್ಷರಗಳು ಅದಲು-ಬದಲಾಗುತ್ತಿದ್ದವು. ಕೊನೆಗೆ ಹೇಳಿದ ಸಾದಾ ಶಬ್ದಗಳ ಸಂಯೋಗೀಕರಣವೂ ಕೂಡ ಕೆಲವು ಮಕ್ಕಳಿಗೆ ಕಠಿಣವೆನಿಸುತ್ತಿತ್ತು. ಮೇಲಿನ ವರ್ಗಗಳಲ್ಲಿಯೂ ಕೂಡ b.d,P ಗಳನ್ನು ತಪ್ಪು ತಿಳಿದುಕೊಳ್ಳುತ್ತಿದ್ದರು h,m,n ಹಾಗೂ p ಈ ಅಕ್ಷರಗಳನ್ನಂತೂ ಪ್ರತಿನಿತ್ಯ ರೂಢಿಸಿ ಗೋಡೆಯ ಮೇಲೆ ದೊಡ್ಡ ಕಾಗದಗಳ ಮೇಲೆ ಬರೆದು ನೇತು ಹಾಕಬೇಕಾಗುತ್ತಿತ್ತು. C,O ಹಾಗೂ a ಇವುಗಳನ್ನರಿಯಲು ಮಕ್ಕಳು ಶ್ರಮಪಡಬೇಕಾಗುತ್ತಿತ್ತು. ಇದಲ್ಲದೆ ವಿಶಿಷ್ಟ ನ್ಯೂನತೆಗಳುಳ್ಳ ಅನೇಕ ಮಕ್ಕಳಿದ್ದರು. ಉದಾಹರಣೆಗಾಗಿ (೧)ಕೆಲವು ಮಕ್ಕಳಿಗೆ ವಿಶಿಷ್ಟ ಅಕ್ಷರವನ್ನು ನೆನಪಿಡುವದು ಅಶಕ್ಯವೇ ಆಗುತ್ತಿತ್ತು. (೨) he ಮತ್ತು 'She' ಅಥವಾ this ಮತ್ತು that ಈ ಶಬ್ದಗಳ ತಾರತಮ್ಯ ತಿಳಿದುಕೊಳ್ಳುವಲ್ಲಿ ಇನ್ನು ಕೆಲವರು ಗೊಂದಲದಲ್ಲಿ ಬೀಳುತ್ತಿದ್ದರು-

ಇಂತಹ ಸಮಸ್ಯೆಗಳನ್ನು ಶಿಕ್ಷಕಿಯು ಹೇಗೆ ಎದುರಿಸಬೇಕು? ಅನೇಕ ಶಿಶು ವರ್ಗದ-ಶಿಕ್ಷಕಿಯರಂತೆ ನನ್ನ ವೇಳಾಪತ್ರಿಕೆಯನ್ನು ನಾನು ಹೀಗೆ ಹೊಂದಿಸಿಕೊಳ್ಳುತ್ತಿದ್ದೆನು. ಪ್ರತಿನಿತ್ಯ ಉಳಿದವರನ್ನು ಆಟಕ್ಕೆ ಬಿಟ್ಟು, ಬೇಕಾದ ಕೆಲವೇ ಮಕ್ಕಳೊಡನೆ ವೈಯಕ್ತಿಕ ಕೆಲಸಕ್ಕಾಗಿ ಸ್ವಲ್ಪ ವೇಳೆಯನ್ನು ವಿನಿಯೋಗಿಸಿಕೊಳ್ಳುತ್ತಿದ್ದೆನು. ಪ್ರತಿವಾರ ಐದು ನಿಮಿಷಗಳಿಂದ ೧೫ ನಿಮಿಷಗಳ ವರೆಗೆ ವೈಯಕ್ತಿಕವಾಗಿಯೆ ಇಂತಹ ಮಕ್ಕಳನ್ನು ನಾನು ಅನೇಕ ಸಲ ಕಾಣುತ್ತಿದ್ದೆನು. ಈ ಪ್ರಕಾರ ಬಿಟ್ಟೂ ಬಿಡದೆ ಮಾಡುವದರಿಂದ ಸುರುವಿನ ಎಷ್ಟೋ ಅಡ್ಡಿಗಳು ಮಾಯವಾಗುತ್ತಿದ್ದವು. ಮಗುವು ತನ್ನ ಸಹಪಾಠಿಗಳ ಮಟ್ಟಕ್ಕೆ ಬರಲು ಹೆಚ್ಚು ವೇಳೆ ಕಲಿಯಬೇಕಾಗುತ್ತಿತ್ತೆಂಬುದೇನೂ ಈ ಯಶಸ್ಸಿಗೆ ಕಾರಣವಲ್ಲ. ಈ ಸಂನ್ನಿವೇಶದಲ್ಲಿ ಭಾವನಾಂಶವೊಂದು ಒಳಗೊಂಡಿರುವದು. ಅನೇಕ ವೇಳೆ ಮಗುವಿಗೆ ದೊರಕುವ ಈ ಹೆಚ್ಚಿನ ಲಕ್ಷ್ಯ ಹಾಗೂ ಪ್ರೇಮ-ಇವು ಆ ಮಗುವಿಗೆ ಆತ್ಮವಿಶ್ವಾಸವನ್ನು ತಂದು ನೀಡುತ್ತವೆ. ಉತ್ತಮ ಶಿಕ್ಷಕಿ ಹಾಗೂ ವಿಶಿಷ್ಟ ಮಗು—ಇವರ ನಡುವೆ ಒದಗುವ ಈ ವೈಯಕ್ತಿಕ ಪಾಠಾಂಶಗಳಲ್ಲಿ (Sessions)-ಶಿಕ್ಷಕಿಯೂ ಸಂಪೂರ್ಣವಾಗಿ ತನ್ನ ಕಾಳಜಿಯನ್ನೇ ಮಾಡುತ್ತಿರುವ ಈ ಸಂದರ್ಭದಲ್ಲಿ ಅಕ್ಷರ-ಹಾಗೂ ಶಾಲೆ ಇವುಗಳೊಡನೆ ಮಗುವಿನ ಒಂದು ಹೊಸ ಸಂಬಂಧವು ಉಂಟಾಗುತ್ತದೆ. ಪ್ರೇಮಮಯ ವ್ಯಕ್ತಿಗಳ ಮುಖಾಂತರವೇ ೫ ಅಥವಾ ೬ ವಯಸ್ಸಿನ ಅನೇಕ ಮಕ್ಕಳು ಕೆಲವೆಂದು ಬೌದ್ಧಿಕ ಅಭಿರುಚಿಗಳನ್ನು ತೋರಿಸುತ್ತವೆ. ಇಂತಹ ನಿಕಟ ಸ್ನೇಹ-ಸಂಬಂಧವನ್ನು ನೆಲೆಗೊಳಿಸಲು ಮನೆಯಲ್ಲಿಗಿಂತ ಶಾಲೆಯಲ್ಲಿ ಸಂದರ್ಭಗಳು ಕಡಿಮೆ. ಇಲ್ಲಿಯ ವರೆಗೆ ಮನೆಯ ಮುಖಾಂತರವೇ ಭೌತಿಕ-ಹಾಗೂ ಬಾದ್ಧಿಕ ಜಗತ್ತಿನ ಪರಿಚಯವಾಗುತ್ತಿತ್ತು. ಆದ್ದರಿಂದಲೇ ಭಾವನಾತ್ಮಕ ತಳಹದಿಯಿಲ್ಲದೆ ಅನೇಕ ಮಕ್ಕಳು ಕಲಿಯುವಾಗ ತಡವರಿಸುವವು. ಒಂದು ವೇಳೆ ಶಿಕ್ಷಕಿಯು, ಅಲ್ಪವಾದರೂ ಇಷ್ಟೊಂದು ವೈಯಕ್ತಿಕ ಸಂಬಂಧವನ್ನು ಹಚ್ಚಿಕೊಂಡಲ್ಲಿ ಅದು ಮಕ್ಕಳ ಅಭಿರುಚಿ, ಆತುರತೆಗಳನ್ನು ಬಡಿದೆಬ್ಬಿಸುವದು. ಕಲಿಸುವಾಗ ಇಂತಹ ಆತ್ಮೀಯ ಸಂಬಂಧವನ್ನು ನೆಲೆಗೊಳಿಸುವ ಸುಸಂಧಿಯನ್ನು ನಾವು ಕಳೆದುಕೊಂಡರೆ, ಹಿರಿಯರ ಸಂಬಂಧದಿಂದ ಮಾಸಿದ ವಸ್ತು

ನಿಷ್ಠ ದೃಷ್ಟಿಯೊಂದು ಮಗುವಿನ ಮನದಲ್ಲಿ ನೆಲೆಯೂರ ವವರೆಗೆ ಮಕ್ಕಳ ತೊಂದರೆಗಳು ಮತ್ತಷ್ಟು ಆಳವಾಗಿ ಬೇರೂರುತ್ತ, ಅನೇಕ ವರ್ಷ ಅವನ್ನು (ಮಕ್ಕಳನ್ನು) ತೀಕಿಸುವವು. ಶಿಶು ವರ್ಗದ ಶಿಕ್ಷಕಿಯರು ಎಳೆಯ ಮಕ್ಕಳ ಈ ಕೋಮಲ ಸ್ವಭಾವವನ್ನೂ ಹಾಗೂ ಅವು ತೀವ್ರವಾಗಿಯೂ ಸ್ಪಷ್ಟವಾಗಿಯೂ ವರ್ಗದಲ್ಲಿಯ ತಮ್ಮ ಸ್ಥಾನವನ್ನರಿತು ತಮ್ಮ ನ್ಯೂನತೆಗಳನ್ನು ಕಂಡು ಕೊಳ್ಳುವದನ್ನೂ ಎಂದೂ ಅಲಕ್ಷ್ಯಮಾಡಲಾಗದು. ಒಂದು ವೇಳೆ ಸಾವಧಾನವಾಗಿ ಪ್ರೇಮಮಯ ರೀತಿಯಿಂದ ಸುರುವಿಗೇ ಸಹಾಯವನ್ನು ನಾವು ಸಲ್ಲಿಸಿದಲ್ಲಿ ಮುಂದು ತಲೆಯೆತ್ತಬಹುದಾದ ಚಂಡಿತನ, ಪ್ರತಿ ಭಟನಾ ಸ್ವಭಾವದಲ್ಲಿ ಪರ್ಯವಸಾನ ಹೊಂದುವ ಹೀನಗಂಡವೃತ್ತಿ (Inferiority Complex) ಸಾಲೆಯ ವಿಷಯಕ್ಕೆ ಉದಾಸೀನ ಭಾವ, ಇವುಗಳನ್ನು ತಡೆಗಟ್ಟಿದಂತಾಗುವದು. ಶಿಶು-ಶಾಲೆಯಲ್ಲಿ ಎರಡನೇ ವರ್ಷವಂತೂ ಮಕ್ಕಳ ವೈಯಕ್ತಿಕ ಕೆಲಸಕ್ಕಾಗಿ ವೇಳೆಯನ್ನೊದಗಿಸುವದು ಶಿಕ್ಷಕಿಗೆ ಇನ್ನಷ್ಟು ಕಠಿಣವಾದ ಕೆಲಸ. ವರ್ಗಗಳೋ ಮೇಲಿಸವು. ಪಾಠಗಳಿಗೆ ಹೆಚ್ಚು ಏಕಾಗ್ರತೆ, ತಾಳ್ಮೆಗಳು ಬೇಕು. ಮೊದಲಿನ ವರ್ಷಕ್ಕಿಂತಲೂ ಬದಲಾವಣೆ ಸಾವಧಾನವಾಗಿದ್ದು ಸಾಧಾರಣ ಮಗುವಿನ ಶಕ್ತಿಗನುಗುಣವಾಗಿದ್ದರೂ ಆಟ, ಸ್ವತಂತ್ರ ಚಟುವಟಿಕೆಗಳಿಗೆ ಅವಕಾಶವು ಸಂಕುಚಿತವಾಗುವದು. ಆದರೂ ಸಾಮಾನ್ಯವಾಗಿ ಎರಡನೇ ವರ್ಷವೇ ಹೆಚ್ಚು ಕಠಿಣವೆಂದೆನಿಸುವದು. ಈ ವರುಷದಲ್ಲಿ ವೈಯಕ್ತಿಕ ಸಹಾಯವು ನಿಯಂತ್ರಿತವೂ ಅಪೂರ್ಣವೂ ಆಗುವದು. ನಮ್ಮ ಶಾಲೆಯಲ್ಲಿ ಇಂತಹ ಪರಿಸ್ಥಿತಿಯನ್ನೆದುರಿಸಲು ಹೂರು ವಿಧವಾದ ಉಪಾಯಗಳನ್ನು ಯೋಜಿಸಿದೆವು:—

೧. ತನ್ನ ಹೊಂದಿಕೆಗಳನ್ನು ತಾನೇ ಸರಿ ಪಡಿಸಿಕೊಳ್ಳುವಂತೆ ಸಾಂಪ್ರದಾಯಿಕ ಶಿಕ್ಷಣದ ವಿಷಯಕ್ಕೆ ಹೆಚ್ಚು ಅನುಭವಿಕ ವೃತ್ತಿಯನ್ನು ಬೆಳೆಸಿಕೊಳ್ಳುವಂತೆ ಮತ್ತು ಉಳಿದ ಬಹುಜನ ಸಹಪಾಠಿಗಳೊಡನೆ ಕ್ರಮೇಣ ತಾನೂ ಹೊಂದಿಕೊಳ್ಳುವೆನೆಂಬ ವಿಶ್ವಾಸವನ್ನು ತಾಳುವಂತೆ ಮಗುವನ್ನು ಅಣಿವಡಿಸುವದು. ಕೆಲವು ಸಲ ಈ ಪದ್ಧತಿಯು ಸರಿಯುಂದೇ ಕಾಣಬರುವದು—ಅಥವಾ ಸಿದ್ಧವಾಗುವದು. ಬೆಳವಣಿಗೆಯು ಪ್ರಗತಿಯು ಸಾವಕಾಶವಾಗಿಯೂ ಅವಿರತವಾಗಿಯೂ ಇದ್ದರೂ ೭ ಅಥವಾ ೮ನೇ ವರ್ಷ ಸುಮಾರಿಗೆ ಫ್ರೌಢರಿಂದ ಸ್ವತಂತ್ರರಾಗಲು ಮಕ್ಕಳು ಅತಿ ದೊಡ್ಡ ಹೆಜ್ಜೆಯನ್ನೊಂದು ನಿಶ್ಚಯವಾಗಿಯೂ ಇಡುವವು. ನಮ್ಮ ವಿಷಯಕ್ಕೆರುವ ಅವರ ಜಾಗ್ರತ ಅಭಾಸಗಳು ಹೆಚ್ಚಾಗಿ ಗೌಣಸ್ಥಾನವನ್ನು ಹೊಂದುವವು. ಆದ್ದರಿಂದ ಕಲಿಯುವ ವಿಷಯಕ್ಕೆರುವ ಅವರ ವೃತ್ತಿಯು ಹೆಚ್ಚು ವಸ್ತು ನಿಷ್ಠವಾಗುವದು, ಅವರ ಬೌದ್ಧಿಕ ಅಭಿರುಚಿಗಳು ಹೊರ ಹೊಮ್ಮಿ ತಮ್ಮದೇ ಆದ ಅಧಿಕಾರದಿಂದ ಆತ್ಮತೃಪ್ತಿಗಾಗಿ ಹಂಬಲಿಸುವವು. ಹೀಗಾಗಿಯೇ ಯಾವಾಗಲೂ ಕೆಲಸಮಾಡಲೂ ಮನಸ್ಸಿಲ್ಲದ ಜಾನಿಯು (ಮಗುವು) ಒಮ್ಮೆಲೇ ಓದಲೂ ಲೆಕ್ಕಮಾಡಲೂ ಸುರುವು ಮಾಡುವನು. ಶ್ರಮಪಟ್ಟು ಅಭ್ಯಸಿಸಿ ಅಲ್ಪ ಕಾಲದಲ್ಲಿಯೇ ಉಳಿದವರನ್ನು ಕೂಡಿಕೊಳ್ಳುವನು.

೨. ಮಂದಗಾಮಿಯಾದ ಶಿಶುವಿಗೆ ಕಲಿಸುವ ಎರಡನೇ ಹಾದಿಯಂದರೆ ಆ ಮಗುವಿಗೆ ವಿಶೇಷ ವರ್ಗದಲ್ಲಿ ಕೂಡಲು ಹೇಳುವದು. ಅಥವಾ ಪ್ರತಿನಿತ್ಯ ಅರ್ಧತಾಸಿನಂತೆವೈಯಕ್ತಿಕವಾಗಿ ಅವನಿಗೆ ಕಲಿಸುವದು. ಇಂತಹ ಸಂದರ್ಭದಲ್ಲಿ ತನ್ನ ವೇಳೆಯ, ಬಹುಭಾಗವನ್ನು ವ್ಯಕ್ತಿಗತವಾಗಲೀ ಸಣ್ಣ ಸಣ್ಣ ಗುಂಪುಗಳಾಗಲೀ ಪಾಠಕಲಿಸಲು ವೆಚ್ಚಮಾಡುವ ಶಿಕ್ಷಕಿಯೊಬ್ಬಳು ಬೇಕಾಗುವಳು. ಮಗುವು ತನ್ನ ವರ್ಗದವನಾಗಿಯೆ ಉಳಿದು ಎಲ್ಲ ಸಾಮೂಹಿಕ ಉತ್ಸವ ಹಾಗೂ ಹೊಣೆಗಾರಿಕೆಯ ಚಟುವಟಿಕೆಗಳಲ್ಲಿ ಸಂಪೂರ್ಣ ಭಾಗವಹಿಸುವನು. ವರ್ಗದವನಾಗಿದ್ದೇ ಓದು-ಅಂಕಗಣಿತದ ಪಾಠಗಳಿಗಾಗಿ ತನ್ನ ವಿಶೇಷ ವರ್ಗಕ್ಕೆ ಹೋಗುವನು.

ಇಂತಹ ಪದ್ಧತಿಯಲ್ಲಿ ಗುಣದೋಷಗಳೆರಡೂ ಉಂಟು; ಅಲ್ಲದೆ ಸಂಬಂಧಿಸಿದ ಇಬ್ಬರೂ ಶಿಕ್ಷಕಿಯರಲ್ಲಿಯೂ, ಸಾಮಾನ್ಯವಾದ ಇಂತಹ ವ್ಯವಸ್ಥೆಯಲ್ಲಿಯೂ ವಿಶಿಷ್ಟವಾದ ಸಹಕಾರ ಭಾವವು ಇದ್ದೇ ತೀರಬೇಕಾಗುತ್ತದೆ.

ಗುಣಗಳೆಂದರೆ—

ಮೊದಲನೆಯದಾಗಿ— ವೈಯಕ್ತಿಕಬೇಡಿಕೆಗಳಿಗನು, ಗುಣವಾದ ವಿಶೇಷ ಶಿಕ್ಷಣವನ್ನು ಮಗುವಿಗೆ ಒದಗಿಸಿ-

ಕೊಡುವದು ಮತ್ತು ಒಬ್ಬ ಶಿಕ್ಷಕಿಯೊಡನೆ ಪ್ರತ್ಯೇಕವಾದ ಸಂಬಂಧವು ನೆಲಗೊಳ್ಳಲು ಶಕ್ಯವಾಗುವಂತೆ ಮಾಡುವದು. ಇಷ್ಟೊಂದು ಮಾತ್ರ ಯಾವಾಗಲೂ ಲಕ್ಷಿಸತಕ್ಕ ಸಂಗತಿ! ಶಿಶು-ಶಾಲೆಯಲ್ಲಿಯಂತೂ ಮಗುವಿಗೆ ವಿಶಿಷ್ಟವಾದ ಅಡ್ಡಿಗಳಿದ್ದ ಮೂಲಕ ಆ ಮಗುವು ಪ್ರೇಮ ಹಾಗೂ ಕಲಿಯುವಿಕೆಗಳನ್ನು ಯಾವಾಗಲೂ ಬೇರ್ಪಡಿಸಲಾರದು. ವರ್ಗದ ಉಳಿದ ಮಕ್ಕಳೊಡನೆ ಹೆಜ್ಜೆ ಹಾಕಲುಬಾರದ ಮಂದಮತಿಗಳಿಗೂ ಕೂಡ ಈ ಆತಂಕಗಳನ್ನು ಹೆಚ್ಚಿಸುವದು. ತನ್ನ ಕೆಲಸದಲ್ಲಿಯ ಯಶಸ್ಸಿಗಾಗಿ ಇಂತಹ ಆತ್ಮೀಯ ಸಂಬಂಧವೊಂದನ್ನು ಮುಂದಗಾಮಿಯಾದ ಮಗುವೇ ಹೆಚ್ಚಾಗಿ ಅವಲಂಬಿಸುತ್ತದೆ. ಆದರೆ ಬುದ್ಧಿವಂತ ಮತ್ತು ಸಾಮಾನ್ಯ ಮಟ್ಟದ ಮಕ್ಕಳೂ ಕೂಡ ಈ ವಯಸ್ಸಿಗೆ ಇಂತಹ ಸ್ನೇಹಮಯ, ಆತ್ಮೀಯ ಸಂಬಂಧದ ಹಿನ್ನೆಲೆಯನ್ನು ಪೇಕ್ಷಿಸುತ್ತವೆ. ಅದು ದೊರಕಿದಲ್ಲಿ ಕಲಿಯುವದರಲ್ಲಿ ಇದಕ್ಕೂ ಹೆಚ್ಚಿನ ಪ್ರಗತಿಯನ್ನು ಹೊಂದಬಲ್ಲರು. ಪ್ರತ್ಯೇಕ ಶಿಕ್ಷಕಿಯಲ್ಲಿ ಪ್ರೇಮ ವಸ್ತುವೊಂದನ್ನೂ ಹೆಚ್ಚು ಶಿಕ್ಷಣವೊದಗಿಸುವ ವ್ಯಕ್ತಿಯೊಂದನ್ನೂ ಕಾಣುವದು. ಇಬ್ಬಗೆಯ ಈ ಪರಿಣಾಮವು ಒಳ್ಳೆಯ ಫಲಕಾರಿಯಾದುದಾಗಿದೆ.

ಇನ್ನು ಅನಿಷ್ಟಗಳು — ಸುರುವಾತಿಗೆ ವ್ಯವಹಾರಿಕ ಸ್ವರೂಪದವಾಗಿವೆ. ಈ ಉದ್ದೇಶಕ್ಕಾಗಿ ಪ್ರತ್ಯೇಕ ಶಿಕ್ಷಣವೊದಗಿಸುವ ವಿಶಿಷ್ಟ ಶಿಕ್ಷಕಿಯೊಬ್ಬಳನ್ನು ದೊರಕಿಸುವದು ಕಷ್ಟ. ಹಾಗೂ ಸಾಲೆಯು ನಿತ್ಯದ ಕಾರ್ಯಕ್ರಮಕ್ಕೆ ಬಹಳ ಕಡಿಮೆ ಅಡ್ಡಬರುವಂತೆ ವೇಳಾಪತ್ರಿಕೆಯನ್ನು ಹೊಂದಿಸಿಕೊಳ್ಳುವದು ಮತ್ತಷ್ಟು ಕಷ್ಟ. ವೈಯಕ್ತಿಕ ಸ್ವರೂಪದ ಕೆಲವು ನಷ್ಟಗಳೂ ಉಂಟು — ತುಸುಮಟ್ಟಿಗಾದರೂ ಶಿಶುವು ವರ್ಗದ ವಾತಾವರಣದಿಂದ ಹೊರಹೋದಂತಾಗಿ ತನ್ನ ಸಹಪಾಠಿಗಳಲ್ಲಿ ತಾನು ಒಬ್ಬಂಟಿಗನೆಂಬ ಭಾವನೆಯನ್ನು ತಾಳುತ್ತದೆ. ವರ್ಗದ ಶಿಕ್ಷಕಿ ವಿಶೇಷ ವರ್ಗದ ಶಿಕ್ಷಕಿಯರಿಬ್ಬರಲ್ಲಿಯೂ ಮಗುವಿನ ನಿಷ್ಠೆಯು ಕವಲೊಡೆದು ಇಂತಹ ಭಾವನಾ-ಮಸ ದಾಟವು ತಲೆ ಎತ್ತುವದು ಎಷ್ಟೋ ಮಕ್ಕಳಿಗೆ ಬಹಳ ಜಡಹೋಗುವದು. ವರ್ಗದ ಶಿಕ್ಷಕಿಯೊಡನಿರುವ ಅಪರ ಹಿತಸಂಬಂಧವು ವಿಶೇಷ-ವರ್ಗದ ಶಿಕ್ಷಕಿಯೊಡನೆ ಸಂಪರ್ಕ ಬೆಳೆಸುವಲ್ಲಿ ಅಡ್ಡಿಯಾಗಿ ದುರ್ಬಲವಾಗುವದು. ಇದು ಸುರುವಿನ ಪ್ರಗತಿಯನ್ನು ತಡೆಗಟ್ಟುವದು. ವರ್ಗದ ಶಿಕ್ಷಕಿಯೊಡನೆ ಸಂಪರ್ಕವು ಕಡಿಮೆಯಾದರೆ ವಿಶೇಷ ವರ್ಗದ ಶಿಕ್ಷಕಿಯೊಡನಿರುವದಕ್ಕೂ ಪಾಠಗಳಲ್ಲಿ ಅತಿ ಹೆಚ್ಚಿನ ಲಾಭ ಪಡೆಯುವದಕ್ಕೂ ಹೆಚ್ಚು ಅವಕಾಶವೇನೋ ಸಿಗುವದು. ಆದರೆ ಅದೇ ವೇಳೆಗೆ ಮಗುವಿನಲ್ಲಿ ತಾನು ವರ್ಗಕ್ಕೆ ಹೊಸಬನೆಂಬ ವಿಚಾರವೂ ದಟ್ಟವಾಗಿ, ಭಾಗವಹಿಸಬಹುದಾದ ವರ್ಗದ ಎಲ್ಲ ಚಟುವಟಿಕೆಗಳನ್ನೆ ಉದಾಸೀನಮಾಡಿ ಬಿಡುವದು. ಈ ತೆರನಾದ ಭಾವನಾಂಶವು ಉಳಿದವರಿಗಿಂತ ಕೆಲವು ಮಕ್ಕಳ ಮೇಲಂತೂ ವಿಶೇಷವಾಗಿ ಪರಿಣಾಮವನ್ನು ಉಂಟು ಮಾಡುವದು. ಏನೆ ಆಗಲಿ. ಈ ಇಬ್ಬರು ಶಿಕ್ಷಕಿಯರಲ್ಲಿಯ ನಿಕಟ ಸಹಕಾರ್ಯವು ಎಷ್ಟೋ ಸಹಾಯ ನೀಡಬಲ್ಲದು ವಿಶೇಷ ವರ್ಗದ ಶಿಕ್ಷಕಿಯಾಗಿ ವರ್ಗದಲ್ಲಿ ನಾನು ಸಹಾಯ ಸಲ್ಲಿಸಿದೆನು ಹಾಗೂ ವರ್ಗದ ಶಿಕ್ಷಕಿಯೊಡನೆ ಒಳ್ಳೇ ಮೈತ್ರಿಯಿಂದಿದ್ದು ಅವಳಿಗೆ ನೆರವಾದೆನು. ಈ ರೀತಿ ವರ್ಗದ ಎಲ್ಲ ಮಕ್ಕಳನ್ನೂ ನಾನು ಪರಿಚಯಮಾಡಿಕೊಂಡೆನು. ವರ್ಗದ-ಶಿಕ್ಷಕಿ ಹಾಗೂ ನಾನು ಒಂದೇ ತೆರನಾಗಿ ಸಾಗಿರುವೆವೆಂಬುದನ್ನು ಮಕ್ಕಳೂ ಮನಗಂಡರು. ನನ್ನನ್ನು ಬರಮಾಡಿಕೊಳ್ಳಲು ಹಾಗೂ ನನಗೆ ತೋರಿಸುವ ಪ್ರೇಮವನ್ನು ವರ್ಗದ ಶಿಕ್ಷಕಿಯ ಪ್ರೇಮಕ್ಕೆ ಅಧೀನವಾಗಿಡಲು ಆ ಮಕ್ಕಳಿಗೆ ಬಹಳೇ ಹಗುರೆನಿಸಿತು. ಬೇರೆ ಶಬ್ದಗಳಲ್ಲಿ ಹೇಳಬೇಕೆಂದರೆ ವರ್ಗದ ಶಿಕ್ಷಕಿಯಲ್ಲಿರುವ ತಮ್ಮ ಸ್ನೇಹದ ಸ್ವಾಭಾವಿಕ ಪ್ರತಿಕ್ರಿಯೆಯೆಂದರೆ ನನಗಾಗಿ ಹಂಬಲಿಸುವದು. ಈ ಭೆಟ್ಟಿಗಳಲ್ಲಿ ನನ್ನ ವರ್ಗಕ್ಕೆ ಮುಂದೆ ಬರಲಿರುವ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ವಿಶೇಷ ಲಕ್ಷ್ಯ ಪೂರೈಸಿದೆನು. ಅವರ ವ್ಯಕ್ತಿತ್ವವಿಶಿಷ್ಟ ಅಭಿರುಚಿ ಹಾಗೂ ಕೊರತೆಗಳನ್ನು ಚನ್ನಾಗಿ ಅಭ್ಯಸಿಸಿ ಕೆಲವೊಂದು ಟಿಪ್ಪಣಿ ಮಾಡಿಟ್ಟುಕೊಂಡೆನು. ಕೊನೆಕೊನೆಗೆ ವರ್ಗದ ಶಿಕ್ಷಕಿಯು ನನ್ನೊಡನೆ ನನ್ನ ಕೋಣೆಗೆ ಕೆಲಕಾಲ ಅಭ್ಯಾಸ ಮಾಡಲು ತನ್ನ ವರ್ಗದ ಮಕ್ಕಳಿಗೆ ಸೂಚಿಸಿದಳು. ಬೇರೆಯವುಗೆ ಇದೊಂದು ವಿಶಿಷ್ಟ ಉಪಕಾರವೆಂದೂ

ತಿಳಿಹೇಳಿದಳು. ಹೀಗೆ ಸಾವಕಾಶವಾಗಿ ಮಂದಗಾಮಿ ಮಕ್ಕಳೊಡನೆ ಕೂಡಿ ಕೆಲಸಮಾಡಲು ಸುರುವು ಮಾಡಿದೆನು. ಆದೇ ವೇಳೆಗೆ ಸಾಮಾನ್ಯವಾಗಿ ವಿಶೇಷ ಕರೆ ಬಂದಾಗ ಕೆಲವು ಸಲ ಉಳಿದ ಮಕ್ಕಳಿಗೂ ಗಮನ ಕೊಡುತ್ತಿದ್ದೆನು. ಕೊನೆಗೆ ಉಳಿದ ಮಂದಗಾಮಿ ಗೆಳೆಯರಿಗೆ ಹೆಚ್ಚಾದ ಸಹಾಯವು ಅವಶ್ಯವಿರುವದೆಂಬುದನ್ನು ಮಕ್ಕಳಿಗೆ ಮನಗಾಣಿಸಿಕೊಟ್ಟು ಜಾಣ ಅಥವಾ ಸಾಧಾರಣ ಮಕ್ಕಳಿಂದ ಬರುವ ವಿಶೇಷ ಬೇಡಿಕೆಗಳನ್ನು ವರ್ಗದ ಶಿಕ್ಷಕಿಯು (ಆ ಬೇಡಿಕೆಗಳನ್ನು) ನಿರಾಕರಿಸಿಬಿಡುತ್ತಿದ್ದಳು. ಹೀಗೆ ಮಂದಗಾಮೀ ಮಕ್ಕಳಷ್ಟೇ ನನ್ನ ವರ್ಗಕ್ಕೆ ನಿಶ್ಚಿತ ವೇಳೆಗೆ ಬರುವ ಪರಿಪಾಠವೇ ಬಿದ್ದು ಬಿಟ್ಟಿತು. ವರ್ಗ ಶಿಕ್ಷಕಿ ಹಾಗೂ ಉಳಿದ ಮಕ್ಕಳೊಡನಿರುವ ನನ್ನ ಸ್ನೇಹ ಸಂಬಂಧವು ಎಂದಿನಂತೆ ಅಚ್ಚಳಿಯದಿರುವದೆಂಬುದನ್ನು ಸಿದ್ಧ ಮಾಡಿತೋರಿಸಲು ನಾನು ಮಾತ್ರ ವರ್ಗಕ್ಕೆ ಹೋಗುತ್ತಲೇ ಇರುತ್ತಿದ್ದೆನು. ಎಲ್ಲ ಕೆಲಸಗಳಿಗೂ ತಳಹದಿಯಾದ ಸ್ನೇಹ ಸಂಬಂಧವನ್ನು ನನ್ನ ವಿಶೇಷ ವರ್ಗದ ಮಕ್ಕಳಲ್ಲಿ ನಾನು ಮೊದಲು ನೆಲೆಗೊಳಿಸಿದೆನು. ಆದೇ ವೇಳೆಗೆ ವರ್ಗದ ಶಿಕ್ಷಕಿಯನ್ನು ವಿಶೇಷ ಸಂದರ್ಭಗಳಲ್ಲಿ ದೂರಕಳಿಸಿಯಾಗಲೀ ಅಥವಾ ತಾವು ಕಲಿತಿದ್ದನ್ನು ವರ್ಗ ಶಿಕ್ಷಕಿಗೆ ಹೇಳಿತೋರಿಸಿರೆಂದು ಮಕ್ಕಳನ್ನು ಪ್ರೋತ್ಸಾಹಿಸಿ ಮಾಗಲಿವರ್ಗದ ಹಾಗೂ ವರ್ಗದ ಶಿಕ್ಷಕಿಯೊಡನಿರುವ ತಮ್ಮ ಸಂಪರ್ಕವನ್ನು ನಿತಂತರವಾಗಿ ಪರಿಪೋಷಿಸುತ್ತಿದ್ದೆನು. (ಹಸನವಾಗಿಡುತ್ತಿದ್ದನು). ಮಕ್ಕಳು ನನ್ನನ್ನು ಮೇಲಿಂದಮೇಲೆ ಕೇಳುತ್ತಿದ್ದರು. " ನಾನು ಇದನ್ನು 'ಅ' ಶಿಕ್ಷಕಿಯೆಡೆಗೆ ಒಯ್ಯಬಹುದೊ ? —ಅಥವಾ ನಾನು ಈ ಪುಟವನ್ನೋದಿದರೆ 'ಬ' ಶಿಕ್ಷಕಿಯು ಸಂತೋಷಪಡುವಳಿಲ್ಲವೆ ? " " ಈಗ ನಾನು ಈ ಕೆಲಸವನ್ನು ಮಾಡಬಲ್ಲನೆಂದು ಹೇಳಿದರೆ 'ಕ' ಶಿಕ್ಷಕಿಯು ಆಶ್ಚರ್ಯಪಡುವದಿಲ್ಲವೇ ?—" ಹೀಗೆ ಪಾಠಮುಗಿದೊಡನೆ ಉತ್ಸಾಹ ಭರಿತರಾಗಿ ವರ್ಗದ ಶಿಕ್ಷಕಿಯ ಕಡೆಗೆ ಮಕ್ಕಳು ಓಡುತ್ತ ಓಡುತ್ತ ಹೋಗುವರು. ಅವರು ಹೇಳುವದನ್ನು ಕೇಳುವದು,—ಬರೆದದ್ದನ್ನು ನೋಡುವದು ಇವುಗಳಲ್ಲಿ ಶಿಕ್ಷಕಿಯು ಸಂತೋಷಪಡುವಳು. ಹೀಗೆ ನನ್ನ ವರ್ಗದಲ್ಲಿ ನಡೆಯುತ್ತಿರುವ ಎಲ್ಲ ಚಟುವಟಿಕೆಗಳೊಡನೆಯೂ ಅವಳ ಸಂಬಂಧ ಬರುತ್ತಿತ್ತು. ಮಕ್ಕಳ ಕೆಲಸದ ವಿಷಯಕ್ಕೆ ಮೇಲಿಂದಮೇಲೆ ನಾನು ಹಾಗೂ ವರ್ಗದ ಶಿಕ್ಷಕಿ ಇಬ್ಬರು ಕೂಡಿ ಚರ್ಚಿಸುತ್ತಲೇ ಇರುತ್ತಿದ್ದೆವೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ.

೩. ಮೂರನೆಯದಾಗಿ ವಿಶಿಷ್ಟ ವರ್ಗದ ವಿದ್ಯಾರ್ಥಿ ಎರಡನೇ ವರುಷದಲ್ಲಿ ತಮ್ಮ ವರ್ಗದೊಡನೆ ಕೂಡಿ ಸಾಗದ ಮಂದಗಾಮಿಗಳು ಬಹಳ ಕಡಿಮೆಯಿದ್ದುದರಿಂದ, ಎಲ್ಲ ವರ್ಗಗಳಿಂದಾರಿಸಿ ೧೫ ಮಕ್ಕಳ ಒಂದು ಪ್ರತ್ಯೇಕ ವರ್ಗವನ್ನು ತೆಗೆಯಲು ಮುಖ್ಯಾಧ್ಯಾಪಿಕೆಯು ನಿರ್ಧರಿಸಿದಳು. ಅಲ್ಲಿ ಎಲ್ಲ ಮಕ್ಕಳಿಗೂ ಸುಮಾರು ಒಂದು ಷಾಣ್ಮಾಸಿಕ ಕಾಲ ಕೆಲವು ವಿಷಯಗಳಲ್ಲಿ ವಿಶೇಷ ಶಿಕ್ಷಣವನ್ನೊದಗಿಸುವ ಯೋಜನೆ ಮಾಡಿದರು. ಮುಖ್ಯ ಅಧ್ಯಾಪಿಕೆ, ವರ್ಗದ ಶಿಕ್ಷಕಿಯರು ಹಾಗೂ ನಾನು ಈ ಮೂರಲ್ಲಿರುವ ಸಂಪೂರ್ಣ ಸಹಕಾರವು ಹಳೆಯ ವರ್ಗದಿಂದ ಮಕ್ಕಳನ್ನು ಹೊಸವರ್ಗಕ್ಕೆ ಸರಾಗವಾಗಿ ಸಾಗಿಸಿತು. ವರ್ಗಗಳಿಗೆ ನಾನು ಭೆಟ್ಟಿಯನ್ನಿತ್ತಾಗ ಮಕ್ಕಳಿಗೆ ನನ್ನ ಪರಿಚಯವಾಗಿತ್ತು; ಅಲ್ಲದೆ ಅನೇಕ ಮಕ್ಕಳೊಡನೆ ನಾನು ನಿಕಟ ಸಂಬಂಧವನ್ನು ಬೆಳೆಸಿಕೊಂಡಿದ್ದೆನು. ಕೊನೆಗೂ ಅವರು ತಮ್ಮ ವರ್ಗಗಳಿಗೇ ಮರಳಿ ಹೋಬೇಕಾದ್ದರಿಂದ (ಬೇಕಾಗುವ ದೃಷ್ಟಿಯಿಂದ) ಮೊದಲಿನ ಶಿಕ್ಷಕ ಶಿಕ್ಷಕಿಯರೊಡನೆ ಇರುವ ಅವರ ಸಂಬಂಧವು ಸಾಧ್ಯವಿದ್ದಷ್ಟು ಸೌಹಾರ್ದಮಯವಾಗಿಯೂ ಆಳವಾಗಿಯೂ ಉಳಿಯುವಂತೆ ನಾನು ಬಹಳೇ ಶ್ರಮಪಟ್ಟೆನು. ಮೇಲಿಂದ ಮೇಲೆ ತಮ್ಮ ವರ್ಗಗಳಿಗೆ ಮಗುಗಳ ಹೋಗುತ್ತಿದ್ದವು. ಮೊದಲಿನ ಶಿಕ್ಷಕಿಯರಿಗೆ ತಮ್ಮ ಬರಹ ಮತ್ತು ಚಿತ್ರಗಳನ್ನು ತೋರಿಸುತ್ತಿದ್ದರು. ಪೂರ್ವ ಸಹಪಾಠಿಗಳೊಡನೆ ಆಡುಂಬೊಲದಲ್ಲಿ ಆಡುತ್ತಿದ್ದರು. ನಾನು ದಿವಲ್ಲಿ ಬಂದು ಮಕ್ಕಳ ಕೆಲಸಗಳಲ್ಲೆಲ್ಲ ಉತ್ಕಟ ಅಭಿರುಚಿ ತೋರಿಸುತ್ತ ಪ್ರಗತಿ-ಪರ ಮಕ್ಕಳ ಬೆನ್ನುತಟ್ಟುತ್ತ ಬೇಗನೇ ತಮ್ಮ ತಮ್ಮ ವರ್ಗಗಳಿಗೆ ಮಕ್ಕಳನ್ನು ಕರೆದೊಯ್ಯಲು ಆತುರರಾಗಿರುವರೆಂಬುದನ್ನು ಆ ವರ್ಗದ ಶಿಕ್ಷಕಿಯರು ವ್ಯಕ್ತಮಾಡುತ್ತಿದ್ದರು. ತಮ್ಮನ್ನು ಉಳಿದ ಮಕ್ಕಳಂತೆಯೇ ಎಲ್ಲರೂ ಪ್ರೀತಿಸುವರೆಂದೂ ತಮ್ಮ ಚಟುವಟಿಕೆಗಳಲ್ಲಿ ಎಲ್ಲರೂ ಅಭಿರುಚಿಯುಳ್ಳವರಾಗಿರುವರೆಂದೂ ಮಕ್ಕಳಿಗೆ ಅನಿಸುವಂತೆ ಎಲ್ಲಕ್ಕೂ ಹೆಚ್ಚಾ

ಹಿರಿಯ ಶಿಕ್ಷಕಿಯು ಪ್ರಯತ್ನಿಸುತ್ತಿದ್ದಳು ಶಾಲೆಯ ಉಳಿದ ಮಕ್ಕಳಿಗೂ ನನ್ನ ವರ್ಗದ ಮಕ್ಕಳಿಗೂ ನಿಕಟ-ಸಂಬಂಧವು ಸ್ವಾಭಾವಿಕವಾಗಿಯೇ ಮುಂದುವರಿಯುವಂತೆ ತನ್ನ ಭಾಷಣಗಳಿಂದ ಮುಖ್ಯಾಧ್ಯಾಪಿಕೆಯು ಸಹಾಯಪಲ್ಲಿಸುತ್ತಿದ್ದಳು. ಈ ತೆರನಾದ ತಿಳುವಳಿಕೆ ಸಹಕಾರದಿಂದಲೇ ಈ ಪ್ರಯೋಗವು ಸರಾಗವಾಗಿ ಸಾಗಿತು. ಹಾಗೂ ಇಂತಹ ಪರಿಸ್ಥಿತಿಯಲ್ಲಿ ತಲೆಯೆತ್ತ ಬಹುದಾದ ಯಾವುದೇ ತಿಕ್ಕಾಟವನ್ನು ಈ ಸಹಕಾರ ಭಾವವೇ ಮುನ್ನಿರೀಕ್ಷಿಸುತ್ತಿತ್ತು. ಶಿಶು ವರ್ಗದ ಶಾಲೆಯಲ್ಲಿಯ (ತಾತ್ಪರ್ತಿಕವಾಗಿ) ಏರ್ಪಾಡಾದ ನನ್ನ ವರ್ಗಕ್ಕಷ್ಟೇ ಈ ರೀತಿಯ ಸಹಕಾರವು ಅವಶ್ಯಕವಾಗದೆ ಮುಂಬರುವ ಯಾವದೇ ಶಾಶ್ವತ ವಿಶೇಷ–ವರ್ಗದ ಯೋಜನೆಗಳಿಗೂ ಮಹತ್ವದ್ದಾಗಿ ಪರಿಣಮಿಸುವದು. ಒಳ್ಳೆಯ ಆತ್ಮೀಯ ಸಂಭಂಧ ಮತ್ತು ವಿಶೇಷ ನಿರೀಕ್ಷಣೆ ಇವು ಇಂತಹ ವರ್ಗದ ತಳಹಡಿಗಳು. ವಿಶಿಷ್ಟ ಯೋಜನೆಗಳಾಗಲಿ ಹೊಸದಾದ ರೀತಿಯಲ್ಲಿ ಸಂಯೋಜಿಸಿದ ಶಿಕ್ಷಣ ಸಾಹಿತ್ಯ ಸಲಕರಣೆಗಳಾಗಲಿ ಅರ್ಧಕಿಂತ ಹೆಚ್ಚು ಮಕ್ಕಳಿಗೆ ಬೇಕಾಗಿಲ್ಲವೆಂಬುದನ್ನು ಕಂಡು ನನಗೆ ಆತ್ಯಾಶ್ಚರ್ಯವಾಯಿತು. ಸಮಾಧಾನಕರವಾದ ಭಾವನಾಮಯ ಹಿನ್ನೆಲೆ ಹಾಗೂ ಸ್ನೇಹಮಯ ಸಂಬಂಧದ ಮುಖಾಂತರ ಕಲಿಯುವ ಸುಸಂಧಿ ಇವು, ಇಲ್ಲಿಯವರೆಗೆ ಸುವ್ಯವಸ್ಥೆಯಲ್ಲಿರುವ ಮಕ್ಕಳ ಶಕ್ತಿಗಳನ್ನು ಬಡಿದೆಬ್ಬಿಸಿ, ಅವರನ್ನು ಬೌದ್ಧಿಕ ಅಭಿರುಚಿಗಳತ್ತ ಪ್ರೇರೇಪಿಸಿತು. ಎರಡೇ ತಿಂಗಳುಗಳಲ್ಲಿ ವಯೋಮಾನ ವರ್ಗದ ತಮ್ಮ ಪಂಗಡದೊಡನೆ ಬೆರೆತು, ಕಲಿಯುವ ವಿಷಯದಲ್ಲಿ ತಮ್ಮ ಅಭಿರುಚಿಯನ್ನು ಬಲಿಸಿಕೊಂಡು, ಶಾಲೆಯ ವಿಷಯಕ್ಕೆ ಹೆಚ್ಚು ಪರಿಪಕ್ವವಾದ ಮನೋವೃತ್ತಿಯನ್ನು ಮಕ್ಕಳು ತಾಳಿದರು.

ಮನೆಯ ಮುಖ್ಯ ಲಕ್ಷಣವಾದ ಆತ್ಮೀಯ ಸಂಬಂಧವನ್ನು ಶಾಲೆಯಲ್ಲಳವಡಿಸುತ್ತ ಮನೆ-ಶಾಲೆಗಳ ನಡುವಿನ ಅಂತರವು ಈ ಮಕ್ಕಳಿಗೆ ಕ್ರಮೇಣ ಒಗ್ಗುವಂತೆ ಮಾಡಿದುದೇ ನಾವು ಮಾಡಿದ ಮುಖ್ಯ ಕೆಲಸ. ಈ ದ್ವಿಪದೀ ಸ್ತ್ರೀಯ ಮಗುವಿನ ಜ್ಞಾನ ಸಂಪಾದನೆಯ ಪ್ರಯತ್ನಕ್ಕೆ ಅಡ್ಡಬಾರದಿರಲೆಂದು ಮಕ್ಕಳು ಒಬ್ಬಳನ್ನು ಮತ್ತೊಬ್ಬಳು ವಿರುದ್ಧ ಮಾಡಿ ಆಡುವದನ್ನು ತಪ್ಪಿಸಲು ಸುಸಂಸ್ಕೃತ ತಂದೆ-ತಾಯಿಗಳು ಕೈಕೊಳ್ಳುವ ಮಾರ್ಗಗಳನ್ನೇ ನಾವು ಶಾಲೆಯಲ್ಲಿ ತಂದೆವಲ್ಲದೆ ನಮ್ಮೀರ್ವರಲ್ಲಿರುವ ಗುರಿಯ ಏಕ್ಯತೆಯನ್ನು ಅವರಿಗೆ ಮನಗಾಣಿಸಿ ಕೊಡುತ್ತಿದ್ದೆವು. ಮಂದಗಾಮೀ ಮಕ್ಕಳ ವಿಷಯದಲ್ಲಿಯ ಕೆಲವೊಂದರ ವಿಶಿಷ್ಟ ಪ್ರಯೋಗಗಳ ಚರ್ಚೆಯನ್ನು ಮುಂದಿನ ಒಂದು ಲೇಖನಕ್ಕಾಗಿ ಮೀಸಲಾಗಿಸಿಟ್ಟಿದ್ದೇನೆ. ಶಿಶು–ಶಾಲೆಗಳಲ್ಲಿ ಪ್ರತ್ಯೇಕ ಶಿಕ್ಷಣವು ಅವಶ್ಯವೂ ಯಶಸ್ವಿಯೂ ಆಗುವಂತ ಮಾಡುವ ಕೆಲವು ಅಂಶಗಳನ್ನು ಎತ್ತಿ ತೋರಿಸುವದಷ್ಟೇ ಇಲ್ಲಿ ನನ್ನ ಉದ್ದೇಶವಾಗಿದೆ. ಭಾವನಾಂಶಗಳು ಬಹಳ ಮಹತ್ವವುಳ್ಳವಿವೆಯೆಂಬುದನ್ನು ಅನುಭವದಿಂದ ಕಂಡುಕೊಂಡಿದ್ದೇವೆ. ೫ ರಿಂದ ೭ ಅಥವಾ ಅವರ್ಷ ವಯಸ್ಸಿನ ಮಕ್ಕಳ ಶಿಕ್ಷಣಪದ್ಧತಿಯಲ್ಲಿ ಇವುಗಳನ್ನು ನೇರವಾಗಿ ಅಳವಡಿಸಬೇಕಾಗಿ ಬರುವದು ಈ ವಯೋಮಟ್ಟದ ಪ್ರತ್ಯೇಕ-ಶಿಕ್ಷಣದ ಹಿನ್ನೆಲೆಯ ಪ್ರೇರಕ ಶಕ್ತಿಗಳೇ ಇವು. ತೊಂದರೆಗಳನ್ನು ನಿವಾರಿಸಲು ಇವೇ ಆಧಾರಗಳು ಪ್ರತ್ಯೇಕಪಾಠ ಹಾಗೂ ಪ್ರತ್ಯೇಕ ವರ್ಗಗಳ ಯೋಜನೆಗಳನ್ನು ಮಾಡುವಾಗ ಇವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇಬೇಕು. ತಾತ್ಪರ್ತಿಕ ವರ್ಗದ ಎಲ್ಲ ಬೌದ್ಧಿಕ ಕೆಲಸಗಳ ಬುಡಕಟ್ಟುಗಳೇ ಇವಾಗಿವೆ.

ಶಿಕ್ಷಣದಿಂದ ಗ್ರಾಮಗಳ ಪುನರ್ಘಟನೆ

ಲೇಖಕರು:—ಡಾ|| ಚಿತ್ರಾ ನಾಯಿಕ ಪಿ. ಎಚ್. ಡಿ.

ಭಾರತದ ಆತ್ಮವು ಹಳ್ಳಿಗಳಲ್ಲಿದೆ ಎಂಬ ಮಾತು ಈದಿನದಲ್ಲಿ ಹೊಸದೆನಿಸಲಿಕ್ಕಿಲ್ಲ. ಏಕೆಂದರೆ ಅದರ ಸತ್ಯತೆಯನ್ನು ಜನರು ಈಗ ತಂದುಕೊಂಡಿದ್ದಾರೆ. ಆದರೆ ಈ ಜಾಗ್ರತಿಯು ಇತ್ತೀಚಿನದು. ಅನೇಕ ಶತಮಾನಗಳ ತಾತ್ಸಾರದಿಂದ ಹಳ್ಳಿಗರು ಒಂದು ಕೊಳೆಯ ಅರ್ಧನಿದ್ರೆಯಲ್ಲಿ ಬಿದ್ದಿದ್ದರು. ಆವರನ್ನು ಆ ನಿದ್ರೆಯಿಂದ ಎಚ್ಚರಿಸುವ ಕೆಲಸವನ್ನು ಮುಖ್ಯವಾಗಿ ಗಾಂಧಿಯವರು ತಮ್ಮ ಅವಿಶ್ರಾಂತ ಪರಿಶ್ರಮದಿಂದ ಸಾಧಿಸಿದ್ದಾರೆ. ಅವರ ಶಿಷ್ಯರಲ್ಲನೇಕರು ಅವರ ಜೀವಿತ ಕಾಲದಲ್ಲಿಯೇ ಹಳ್ಳಿಗಳ ಸುಧಾರಣೆಯ ವ್ರತವನ್ನು ಹಿಡಿದು ಚಳವಳಿಯನ್ನು ಕೈಕೊಂಡರು. ಗಾಂಧಿಯವರು ಆರಂಭಿಸಿದ ಕಾರ್ಯವನ್ನು ಅವರ ಅನುಯಾಯಿಗಳನೇಕರು ಅವೇಕ್ಷೆಯಂತೆ ಪೂರ್ಣಮಾಡುವ ಉದ್ದೇಶದಿಂದ ಈ ಚಳವಳಿಗೆ ಹೆಚ್ಚು ಕಸುವು ಬಂದಿದೆ.

ಗಾಂಧೀಜಯಂತಿ (ಜನ್ಮದಿನದ) ವಾರದಲ್ಲಿ ದೇಶವ್ಯಾಪ್ತ ಸಂಘಟಿಸಲ್ಪಟ್ಟ ಗ್ರಾಮಸುಧಾರಣಾ ಸಪ್ತಾಹದಲ್ಲಿ ಜನರಿಗೆ ಈ ಕೆಲಸದಲ್ಲಿರುವ ಉತ್ಸಾಹವು ಪ್ರಕಟವಾಯಿತು. ಗಾಂಧೀಯವರ ಹಾಗು ಅವರು ಮಾಡಿಪ ಮಹತ್ಕಾರ್ಯದ ಪುಣ್ಯಸ್ಮರಣೆಗೆ ಗ್ರಾಮಸೇವೆಯ ಸಂಘಟಿತವಾದ ಕಾರ್ಯವನ್ನು ಕೈಕೊಳ್ಳಬೇಕೆಂಬ ಜನರ ನಿರ್ಧಾರಕ್ಕಿಂತ ಹೆಚ್ಚು ಯೋಗ್ಯವಾದ ಕಾಣಿಕೆಯು ಬೇರಾವುದೂ ಆಗಲಾರದು. ಹಳ್ಳಿಗಳನ್ನು ಸಂದರ್ಶಿಸಿ ಅವುಗಳ ಪುನರ್ರಚನೆಯ ಕೆಲಸದಲ್ಲಿ ಹಳ್ಳಿಗರಿಗೆ ನೆರವಾಗುವ ಕಾರ್ಯವು ಇತರ ಸಾಮಾಜಿಕ ಕಾರ್ಯಕರ್ತರ ಸಹಕಾರದಿಂದ ಅನೇಕಾನೇಕ ಶಾಲೆಗಳಿಂದ ಕೈಕೊಳ್ಳಲ್ಪಟ್ಟಿತು. ಆ ವಾರದಲ್ಲಿ ಸಾಧಿಸಿದ ಕೆಲಸವು ಸಮಾಜಸೇವೆಯ ರುಚಿಯನ್ನು ಸಂಗ್ರಹಿಸಿದ ತರುಣ ಕಾರ್ಯಕರಿಗೂ ಹಳ್ಳಿಗರಿಗೂ ಕೂಡ ಬಹು ಉತ್ಸಾಹಜನಕವಾಗಿತ್ತು. ಹಳ್ಳಿಗೆ ಸಂದರ್ಶನವಿತ್ತ ಜನರು ಹಳ್ಳಿಗಳಲ್ಲಿ ಮಾಡಿದ ಕೆಲಸದಲ್ಲಿಯೂ ಹಳ್ಳಿಗರ ಸುಸ್ಥಿತಿಗಾಗಿ ಮನಃಪೂರ್ವಕವಾಗಿ ಹೆಣಗುವ ಅವರ ಮನಸ್ಸಿನ ವೃತ್ತಿಯಲ್ಲಿಯೂ ಹಳ್ಳಿಗರಿಗೆ ನವಜೀವನದ ಆಶಾಕಿರಣವೊಂದು, ನವಯುಗದ ಮುಂಬೆಳಕೊಂದು ಕಾಣಿಸಿಕೊಂಡಿತು ಎನ್ನಬಹುದು.

ಕೆಲಕೆಲವು ಸಂದರ್ಭಗಳಲ್ಲಿ ಸುದೈವದಿಂದ ಈ ತರುಣ ಕಾರ್ಯಕರ್ತರಿಗೆ ಸರಕಾರದಿಂದ ಹಾಗು ಸರಕಾರಿ ಅಧಿಕಾರಿಗಳಿಂದ ವಿಶೇಷ ಸಹಾಯವು ಸಿಕ್ಕಿತು. ಉಳಿದ ಕೇವೆಡೆಗಳಲ್ಲಿ ಬೇರೊಬ್ಬರ ಸಹಾಯವಿಲ್ಲದೆ ತಾವೇ ತಮ್ಮ ಶಿಕ್ಷಕತ ನೆರವಿನಿಂದ ಕಾರ್ಯಕ್ರಮವನ್ನು ಪೂರ್ತಿಗೊಳಿಸಿದರು. ಎಷ್ಟೋ ಉದಾಹರಣೆಗಳನ್ನು ನೋಡಿದರೆ ಗ್ರಾಮಸುಧಾರಣೆಯ ಕೆಲಸದಲ್ಲಿ ಒಂದು ವಾರದ ಅನುಭವದಿಂದ ಉಂಟಾದ ಈ ಆಸ್ಥೆಯು ಇನ್ನೂ ಉಳಿದಿದೆ. ಅನೇಕ ಗ್ರಾಮಸ್ಥರೊಡನೆ ಸಂಬಂಧವನ್ನು ಬೆಳಸಿಕೊಳ್ಳುವ ಹಾಗು ಅವರ ನಿತ್ಯಜೀವನದಲ್ಲಿ ನೆರವಾಗುವ ಇಚ್ಛೆಯೆ ಹಳ್ಳಿಯ ಸುಧಾರಣೆಗಾಗಿ ಹೊಸ ಯೋಜನೆಗಳನ್ನು ಮಾಡಿ ಅವುಗಳನ್ನು ಮುಂದರಿಸುವ ಮಾರ್ಗಗಳನ್ನು ಸಾಧನಗಳನ್ನು ಅದು ಕಂಡುಕೊಂಡಿದೆ ಎಂದು ತಿಳಿಯುವದು. ಜಯಂತಿ ಸಪ್ತಾಹದಲ್ಲಿ ಯೋಜನೆಯ ಅನುಸಾರವಾಗಿ ಕೈಕೊಂಡ ಕಾರ್ಯವನ್ನಲ್ಲದೆ ಎಷ್ಟೊ

ಶಾಲೆಯ ಹುಡುಗರು ಹಳ್ಳಿಗಳಲ್ಲಿ ಸುಧಾರಣೆಯ ಕಾರ್ಯವನ್ನು ತಾವಾಗಿ ಆರಂಭಿಸಿದ್ದಾರೆ. ಈ ಕೆಲಸದಲ್ಲಿ ಅವರು ಮಾಡಿದ ಸುವ್ಯವಸ್ಥಿತವಾದ ಆರಂಭದಲ್ಲಿ ಮುಂದೆ ಅವರು ಹಳ್ಳಿಗರಿಗೆ ಶಾಶ್ವತವಾದ ಪ್ರಯೋಜನವನ್ನು ಎಸಗಬಹುದೆಂಬ ಭರವಸೆ ಇದೆ.

ನಮ್ಮ ಆಮಂತ್ರಣದ ಮೇರೆಗೆ ಗ್ರಾಮಸುಧಾರಣಾ ಸಪ್ತಾಹದ ಚಟುವಟಿಕೆಗಳಲ್ಲಿ ಭಾಗವಹಿಸಿದ ಸಂಸ್ಥೆಗಳು ತಮ್ಮ ಕೆಲಸದ ವಿಸ್ತೃತವಾದ ಹಾಗು ವಿವರವಾದ ವರದಿಯನ್ನು ಕಳಿಸಿವೆ. ಇಡಿಯ ರಾಜ್ಯದಲ್ಲಿ ದೂರ-ದೂರ ಇರುವ ಬೇರೆ ಬೇರೆ ಕಡೆಗಳಲ್ಲಿ ಯಾವ ಪ್ರಕಾರದ ಕೆಲಸ ನಡೆಯಿತೆಂಬದನ್ನು ತೋರಿಸುವದಕ್ಕಾಗಿ ಮೇಲಿನ ಕೆಲವು ವರದಿಗಳಲ್ಲಿಯ ಭಾಗಗಳನ್ನು ಇಲ್ಲಿ ಕೂಡಿಸಿ ಕೊಟ್ಟಿದ್ದೇವೆ.

ಕೆಲಸಕ್ಕೆ ಬೇಕಾಗುವ ತರಬೇತಿ—

ಸಪ್ತಾಹವಲ್ಲಿ ಧಾರವಾಡದಿಂದ ಮೂರುಮೈಲಿನ ಮೇಲೆ ಇರುವ ನವಲೂರು ಒಂದು ಶಾಲೆಯ ಪಾಲಿಗೆ ಗ್ರಾಮಸುಧಾರಣೆಯ ಕಾರ್ಯಕ್ಕಾಗಿ ಬಂದಿತ್ತು. ಶಾಲೆಯ ಹಾಜರಿಯ ಮೇಲಿರುವ ೯೩೦ ವಿದ್ಯಾರ್ಥಿಗಳಲ್ಲಿ ೨೮೦ ಜನರು ಕೆಲಸಕ್ಕಾಗಿ ತಾವಾಗಿ ಮುಂದೆ ಬಂದರು. ಇವರಲ್ಲಿ ೪೦ ಹುಡುಗರ ೭ ಗುಂಪುಗಳನ್ನು ಮಾಡಲಾಗಿತ್ತು. ಪ್ರತಿಯೊಂದು ಗುಂಪಿನಲ್ಲಿ ೫ ಬಾಲವೀರರು (ಸ್ಕೌಟರು) ಇದ್ದರು. ಈ ಯೋಜನೆಯ ಸಿದ್ಧತೆಯು ಹುಡುಗರು ಎಂದೂ ಮಾಡದೆ ಇದ್ದ ಒಂದು ಕೆಲಸಕ್ಕಾಗಿ ಬೇಕಾಗುವ ತರಬೇತಿಯಿಂದ ಆರಂಭವಾಯಿತು. ಆ ಕೆಲಸವೆಂದರೆ ಶಗಣಿಗೊಬ್ಬರದ ಕುಣಿಗಳನ್ನು ತುಂಬುವದು, ಕಳೇ ತೆಗೆಯುವದು, ಸೇಂಗಾದ ಬೆಳೆಯನ್ನು ಅರಿಸಿ ಕೂಡಿಸುವದು, ಹಳ್ಳಿಯ ಮಾರ್ಗಗಳನ್ನು ಸ್ವಚ್ಛಮಾಡಿ ದುರಸ್ತಿಮಾಡುವದು, ಕೆರೆಭಾವಿಗಳಲ್ಲಿಯ ರಾಡಿಯನ್ನು ಬಳಿದು ಅವುಗಳ ಸುತ್ತಲಿನ ಜಾಗೆಯನ್ನು ಸ್ವಚ್ಛಮಾಡುವದು ಇತ್ಯಾದಿ. ಮೊದಲು ಗೊಬ್ಬರದ ಕುಣಿಗಳನ್ನು ತುಂಬುವದನ್ನು ಕಲಿಯಬೇಕಾಗಿತ್ತು. ಅದಕ್ಕಾಗಿ ಜಿಲ್ಲಾ ಶೇತಕೀ ಅಧಿಕಾರಿಯಿಂದ ತೋರಿಸಲ್ಪಟ್ಟ ಒಂದು ನಿದರ್ಶನವನ್ನು ನೋಡಿ ಬರಲಿಕ್ಕೆಂದು ಏಳು ಮಂದಿ ಶಿಕ್ಷಕರನ್ನೂ ೧೫ ವಿದ್ಯಾರ್ಥಿಗಳನ್ನೂ ಕಳಿಸಲಾಯಿತು. ವಿದ್ಯಾರ್ಥಿಗಳ ತಂಡಗಳು ಹಳ್ಳಿಗೆ ಹೋದಾಗ ಅವರ ಜತೆಯಲ್ಲಿ ಒಂದೊಂದು ತಂಡವೊಡನೆ ಕಲಿತು ಬಂದ ಒಬ್ಬ ಶಿಕ್ಷಕ ಇಬ್ಬರು ಸ್ವಯಂಸೇವಕರು ಹೋದರು. ಇವರು ೧೨ ಫೂ × ೫ ಫೂ × ೩ ಫೂಟು ಅಳತೆಯ ೫ ಗೊಬ್ಬರದ ಕುಣಿಗಳನ್ನು ತೋಡಿ ಅವುಗಳನ್ನು ಶಾಸ್ತ್ರೋಕ್ತವಾಗಿ ತುಂಬಿ ಮುಚ್ಚಿದರು; ೨ ಎಕರೆ ಭೂಮಿಯಲ್ಲಿ ಕಳೆತೆಗೆದರು. ೭ ಎಕರೆ ಭೂಮಿಯಲ್ಲಿಯ ಸೇಂಗಾ ಬೆಳೆಯನ್ನು ತೆಗೆದು ಕೂಡಿಸಿದರು. ಹಳ್ಳಿಯೊಳಗಿನ ಎಲ್ಲ ಹಾದಿಗಳನ್ನು ಸ್ವಚ್ಛವಾಗಿ ಬಳಿದರು. ಕಸವನ್ನೂ ಕೊಳಚೆಯನ್ನೂ ಗೊಬ್ಬರದ ಕುಣಿಗಳಲ್ಲಿ ಹಾಕಿದರು. ಹೊರಗಿನಿಂದ ಹಳ್ಳಿಗೆ ಬರುವ ೨ ಫರ್ಲಾಂಗ ರಸ್ತೆಯನ್ನು ದುರಸ್ತುಮಾಡಿದರು ಹಾಗೂ ಹಳ್ಳಿಯ ಕೆರೆಯ ಕೆಳಗೆ ಕೂತ ರಾಡಿಯನ್ನು ಬಳಿದು ಜಿಲ್ಲಿದರು.

ಈ ಕಾರ್ಯ ಯೋಜನೆಯಲ್ಲಿ ಭಾಗ ತೆಗೆದುಕೊಂಡ ಪ್ರತಿಯೊಬ್ಬನೂ ತನಗೆ ಒಪ್ಪಿಸಿದ ಕೆಲಸದಲ್ಲಿ ಒಳ್ಳೆಯ ಆಸ್ಥೆಯನ್ನು ತೋರಿಸಿದನೆಂದೂ ಇಡಿಯ ಗುಂಪಿನವರು ತುಂಬ ಸಹಕಾರದ ಭಾವನೆಯಿಂದ ದುಡಿದರೆಂದೂ ಮುಖ್ಯಾಧ್ಯಾಪಕರು ವರದಿ ಮಾಡಿದ್ದಾರೆ. ಪ್ರತಿಯೊಬ್ಬ ಸ್ವಯಂಸೇವಕನೂ ಹಳ್ಳಿಗರಿಗೂ ಒಕ್ಕಲಿಗರಿಗೂ ತನ್ನಿಂದ ಕೈಲಾದಷ್ಟು ಹೆಚ್ಚು ಉಪಯೋಗವಾಗುವಂತೆ ಎಲ್ಲ ರೀತಿಯಿಂದ ಪ್ರಯತ್ನಿಸಿದನು. ಹಳ್ಳಿಯ ಅಧಿಕಾರಿಗಳು ಹುಡುಗರಿಗೆ ಸಹಕಾರವನ್ನೂ ಆದರಾತಿಥ್ಯವನ್ನೂ ನೀಡಿದರು. ಆದರೆ ಆನಿರೀಕ್ಷಿತವಾದ ಒಂದು ಕಡೆಯಿಂದ ಅವರ ಉತ್ಸಾಹಕ್ಕೆ ಹಿಪ್ಪೆಮ್ಟ್ಟಾಯಿತು. ಅದು ಹಳ್ಳಿಗರಿಂದಲೇ. ವರ್ಷಾನುವರ್ಷ ನಗರವಾಸಿಗಳ ಸಂಪರ್ಕದಿಂದ ಪ್ರತ್ಯೇಕವಾಗಿದ್ದುದರಿಂದಲೂ ಅವರಿಂದ ನೇಮದಿಂದ ಅಲಕ್ಷಿಸಲ್ಪಟ್ಟುದರಿಂದಲೂ ಅದರಲ್ಲಿ ತಮ್ಮವಿಷಯದಲ್ಲಿ ಏಕಾಏಕಿ ಇಷ್ಟೊಂದು ಸ್ನೇಹವೂ ಸೇವಾಬುದ್ಧಿಯೂ ಉದಯಿಸಿದುದು ಅವರಿಗೆ ಆಶ್ಚರ್ಯವನ್ನುಂಟುಮಾಡಿತಲ್ಲದೆ ಈ ಪ್ರೇಮದ ನಿದರ್ಶನದ ಹಿಂದೆ ಯಾವ ಹೇತುವಿರಬಹುದು ಎಂದು ಆಪರಿಚಿತರಲ್ಲನೇಕರು ಸಾಶಂಕರಾಗಿ ಸ್ವಯಂಸೇವಕರೊಂದಿಗೆ ಹೆಗಲಿಗೆ ಹೆಗಲು ಹಚ್ಚಿ ದುಡಿಯಲಿಕ್ಕೂ ಅವರಿಗೆ ಹೋದಲ್ಲಿ

ಕೆಲಸಕ್ಕೆ ಬೇಕಾಗುವ ಸಾಧನ ಸಲಕರಣೆಗಳನ್ನು ಕೊಡ ಲಿಕ್ಕೂ ಅನುವಾನಿಸಿದರು. ಆದರೆ ಅನೇಕ ಇತರ ಕಡೆ ಗಳಿಂದ ಬಂದ ವರದಿಗಳ ಮೇಲಿಂದ ತಿಳಿಯುವದೇ ನಂದರೆ ಈ ಪ್ರತ್ಯೇಕತೆಯೂ ಹಾಗೂ ಸಂಶಯವು ಸ್ವಲ್ಪ ದಿನಗಳಲ್ಲಿ ಮಾಯವಾಗುವದು. ಏಕೆಂದರೆ ತಮಗೆ ಸಹಾಯವನ್ನು ನೀಡಬಂದ ವಿದ್ಯಾರ್ಥಿಗಳೊಡನೆ ಸಹಕರಿ ಸುವ ಸಿದ್ಧತೆಯನ್ನು ಗ್ರಾಮಸ್ಥರು ತೋರಿಸಿದ ಹಲವು ಉದಾಹರಣೆಗಳುಂಟು. ಗೋಧ್ರಾದೊಳಗಿನ ಒಂದು ಶೇತಕಿ ಶಾಲೆಯ ವಿದ್ಯಾರ್ಥಿಗಳು ಹೊಲದಲ್ಲಿ ಕಳೆ ಕೀಳು ವದರಲ್ಲಿ ನೆರವಾಗಲು ಮುಂದೆ ಬಂದಾಗ ಹಳ್ಳಿಗರಿಂದ ಅವರಿಗೆ ಉತ್ಸಾಹಭರಿತವಾದ ಸ್ವಾಗವು ಸಿಕ್ಕಿತು. ನಾಸಿಕದ ಒಂದು ಶಾಲೆಯ ಹುಡುಗರು ನದಿಯನ್ನು ದಾಟಬೇಕಾಗುವ ಒಂದು ಹಳ್ಳಿಗೆ ಹೋದಾಗ ಹಳ್ಳಿಗರು ಸಣ್ಣ ಸಣ್ಣ ಡೋಣಿಗಳನ್ನು ತಂದು ಹುಡುಗರನ್ನು ನದಿಯ ಆಚೆಗೆ ದಾಟಿಸಲಿಕ್ಕೆ ಬಂದರು. ಈ ತರುಣ ಕಾರ್ಯಕರ್ತರು ನಾಸಿಕದ ಸವಿನೆನಪುಗಳಿಂದ ಉಲ್ಲಾಸ ಗೊಂಡು ಪ್ರತಿ ತಿಂಗಳ ಏನೆಯ ದಿನವನ್ನು "ಗ್ರಾಮ-ದಿನ" ಎಂದು ಮೀಸಲಿಟ್ಟು, ಆ ಇಡಿಯ ದಿನವನ್ನು ತರಿಸಿಕೊಂಡ ಒಂದು ಗ್ರಾಮದಲ್ಲಿ ಹಳ್ಳಿಗರಿಗೆ ಅವರ ಕೆಲಸದಲ್ಲಿ ನೆರವಾಗಿ ಕಳೆಯಬೇಕೆಂದು ನಿರ್ಧರಿಸಿದ್ದಾರೆ.

ಸೇವಾ ಭಾವನೆ—

ಅಹಮ್ಮದಾಬಾದಿನ ಹೆಣ್ಣುಮಕ್ಕಳ ಟ್ರೇನಿಂಗ್‌ಕಾಲೇ ಜಿನ ಕೆಲಸವು ಗಾಂಧೀಜಯಂತಿಯ ವಾರದಲ್ಲಿ ಕಂಡು ಬಂದ ಸೇವಾಭಾವನೆಯು ಒಂದು ಸ್ಫೂರ್ತಿದಾಯಕವಾದ ಉದಾಹರಣೆಯಾಗಿದೆ. ತಮ್ಮ ಯೋಜನೆಗೆ ಪೂರ್ಣ ಮನಸ್ಸು ಸಿಗುವಂತೆಯೇ ಅವರು ತಮ್ಮ ಧೋರಣೆ ಯನ್ನು ಇಟ್ಟುಕೊಂಡಿದ್ದರು. ವಾಹನದ ಸೌಕರ್ಯವಿರ ಲಿಲ್ಲ. ಆಹಾರಧಾನ್ಯದ ಕೊರತೆ ಇದ್ದಿತು. ಶಿಬಿರ ಹಾಕಲಿಕ್ಕೆ ಸ್ಥಳವು ಬೇಕಾಗಿದ್ದಿತು. ಎಲ್ಲಕ್ಕಿಂತಲೂ ಹೆಚ್ಚು ಇವರ ಕೆಲಸಕ್ಕೆ ಅಲ್ಲಿಯ ಸ್ಥಳಿಕರ ಅದರಲ್ಲೂ ಹರಿಜನರ ವಿರೋಧ, ಈ ಎಲ್ಲ ತೊಂದರೆಗಳನ್ನು ಜೀಗನೆ ಎದಿಗಿಸಿಕೊಂಡು ಅವರು ಕೆಲಸಕ್ಕೆ ತೊಡಗಿದರು. ಸಾಲ್ತೇಜ ಎಂಬ ಹಳ್ಳಿಯ ಕಾರ್ಯಕ್ರಮವನ್ನು ಕೈಕೊಳ್ಳುವ ನಿಶ್ಚಯವಾಗಿತ್ತು. ಅವರ ಮಂಡಳವು ಹಳ್ಳಿಯನ್ನು ನೋಡಲಿಕ್ಕೆ ಹೋದಾಗ ಅವರಿಗೆ "ನಿಮ್ಮ ಕಾರ್ಯದಲ್ಲಿ ಹರಿಜನರೊಡನೆ ಸಂಪರ್ಕ ಬೆಳಿಸುವದಿದ್ದರೆ ನಿಮಗೆ ಹಳ್ಳಿಗರಿಂದ ಯಾವ ವಿಧದಿಂದಲೂ ನೆರವು ಸಿಕ್ಕ ಲಾರದು" ಎಂದು ನಿಷ್ಠುರವಾಗಿ ಎಚ್ಚರ ಕೊಡ ಲಾಗಿತ್ತು. ಆದ್ದರಿಂದ ಕಾರ್ಯಕರ್ತರು ಮೊದಲು ಹಳ್ಳಿ-ಗರ ಸ್ನೇಹವನ್ನು ಪಡೆಯುವದರ ಕಡೆಗೆ ತಮ್ಮ ಲಕ್ಷ್ಯ ವನ್ನು ಹೊರಳಿಸಿದರು ಅವರ ಮುಂದಿನ ಧೋರಣವು ಮಾತ್ರ ಹರಿಜನೋದ್ಧಾರದ ಕಾರ್ಯವಾಗಿತ್ತು. ಅವರು ತಮ್ಮ ಸಂಗಡ ಹಳ್ಳಿಗರಿಗಾಗಿ ಅನೇಕ ಕಾಣಿಕೆಗಳನ್ನು— ಬಟ್ಟೆಗಳು, ಪಾದರಕ್ಷೆಗಳು, ಬಟ್ಟೆಗಳಿಗೆ ಹಚ್ಚುವ ಸಾಬೂನು ಮೈಗೆ ಹಚ್ಚುವ ಸಾಬೂನು, ಹಣೆಗೆಗಳು, ತಲೆಗೂದಲಿಗೆ ಹಚ್ಚುವ ಎಣ್ಣೆ ಮುಂತಾದುವನ್ನು ತಂದಿ ದ್ದರು ಇವುಗಳನ್ನು ಪ್ರ್ಯಾಕ್ಟಿಸಿಂಗ್‌ಸ್ಕೂಲಿನ ಮಕ್ಕಳು ಸ್ವಸಂತೋಷದಿಂದ ಕೂಡಿಸಿ ಕೊಟ್ಟಿದ್ದರು. ಹಳ್ಳಿಯ ಜನರು ಇವುಗಳನ್ನು ನೋಡಿ ಆನಂದಭರಿತರಾದರು. ಹರಿಜನರ ಮಕ್ಕಳೂ ವಾಘ್ರೇಜನರ ಮಕ್ಕಳೂ ಬರಿ-ಮೈಯಿಂದ ಇಲ್ಲವೆ ಹರಕು ಚಿಂದಿಗಳನ್ನು ಹಾಕಿ ಕೊಂಡು ನಾಲೆಗೆ ಹೋಗುತ್ತಿದ್ದರು; ಅವರಿಗೆ ಬಟ್ಟೆಬರೆ ಗಳು ಬಹಳ ಉಪಯೋಗಬಿದ್ದವು. ಏಕೆಂದರೆ ಒಳ್ಳೆಯ ಬಟ್ಟೆಗಳನ್ನು ಕೊಳ್ಳುವಷ್ಟು ಅವರಿಗೆ ತ್ರಾಣವಿರಲಿಲ್ಲ. ಸಫಾಯಿ ಕಾರ್ಯಕ್ರಮವು ಹಳ್ಳಿಗರ ಅಂತಃಕರಣವನ್ನು ತಟ್ಟಿತು. ಸ್ವಯಂಸೇವಕರು ತಕ್ಕಮಟ್ಟಿಗೆ ಔಷಧೋಪ ಚಾರದ ಕಾರ್ಯಕ್ರಮವನ್ನು ಸಹ ಇಟ್ಟುಕೊಂಡಿದ್ದರು. ಶಿಬಿರದಲ್ಲಿ ಒಂದು ಸಣ್ಣ ಆಸ್ಪತ್ರೆಯನ್ನು ತೆರೆಯ ಲಾಗಿತ್ತು. ಅದರಲ್ಲಿ ಕಣ್ಣು ಬೇನೆಗೆ, ಚರ್ಮರೋಗಗಳಿಗೆ ಚಳಿಜ್ವರಕ್ಕೆ ಬೇಕಾದವರು ಬಂದು ಪುಕ್ಕಟೆಯಾಗಿ ಚಿಕಿತ್ಸೆಮಾಡಿಸಿಕೊಂಡು ಹೋಗಬಹುದಾಗಿತ್ತು. ಈ ಉಚಿತವಾಗಿ ಕೊಟ್ಟ ಔಷಧೋಪಚಾರದಿಂದ ಜನರಿಗೆ ವಿಶೇಷತಃ ಸಣ್ಣಸುಕ್ಕಳಿಗೆ ಪ್ರಕೃತಿಗೆ ಆರಾಮು ಎನಿ ಸಿತು. ಇದರಿಂದ ಹಳ್ಳಿಗರ ಮನಸ್ಸು ಕರಗಿತು. ಸಫಾಯಿ ಕಾರ್ಯವನ್ನಂತೂ ಹಳ್ಳಿಗರು ಮೊದಲು ಅವಹೇಳನ ಮಾಡಿದ್ದರು. ಆದರೆ ಅದರಿಂದ ತಮ್ಮ ಬಾವಿಗಳ ಹಾಗೂ ರಸ್ತೆಗಳ ಅಕ್ಕಸುಕ್ಕದ ನೆಲವು ಸ್ವಚ್ಛವಾಯಿತು. ಹೊಲಸು ಮೈಯ ಹುಡುಗರಿಗೆ ಸಬಕಾರ ಹಚ್ಚಿ ಸ್ವಚ್ಛ ಜಳಕಮಾಡಿಸಿ ಕೂದಲನ್ನು ಚನ್ನಾಗಿ ಹಿಕ್ಕಿ ಕಟ್ಟಿದ್ದ

ಾಲೆಯ ಹುಡುಗರು ಹಳ್ಳಿಗಳಲ್ಲಿ ಸುಧಾರಣೆಯ ಕಾರ್ಯ
ನ್ನು ತಾವಾಗಿ ಆರಂಭಿಸಿದ್ದಾರೆ. ಈ ಕೆಲಸದಲ್ಲಿ ಅವರು
ಾಡಿದ ಸುವ್ಯವಸ್ಥಿತವಾದ ಆರಂಭದಲ್ಲಿ ಮುಂದೆ
ವರು ಹಳ್ಳಿಗರಿಗೆ ಶಾಶ್ವತವಾದ ಪ್ರಯೋಜನವನ್ನು
ಸಗಬಹುದೆಂಬ ಭರವಸೆ ಇದೆ.

ನಮ್ಮ ಆಮಂತ್ರಣದ ಮೇರೆಗೆ ಗ್ರಾಮಸುಧಾರಣ
ಪ್ತಾಹದ ಚಟುವಟಿಕೆಗಳಲ್ಲಿ ಭಾಗವಹಿಸಿದ ಸಂಸ್ಥೆಗಳು
ನ್ಮ ಕೆಲಸದ ವಿಸ್ತೃತವಾದ ಹಾಗು ವಿವರವಾದ
ರದಿಯನ್ನು ಕಳಿಸಿವೆ. ಇಡಿಯ ರಾಜ್ಯದಲ್ಲಿ ದೂರ-
ೂರ ಇರುವ ಬೇರೆ ಬೇರೆ ಕಡೆಗಳಲ್ಲಿ ಯಾವ ಪ್ರಕಾರದ
ಲಸ ನಡೆಯಿತೆಂಬದನ್ನು ತೋರಿಸುವದಕ್ಕಾಗಿ ಮೇಲಿನ
ಲನ್ನು ವರದಿಗಳಲ್ಲಿಯ ಭಾಗಗಳನ್ನು ಇಲ್ಲಿ ಕೂಡಿಸಿ
ಾಟ್ಟಿದ್ದೇವೆ.

ಲಸಕ್ಕೆ ಬೇಕಾಗುವ ತರಬೇತಿ—

ಸಪ್ತಾಹವಲ್ಲಿ ಧಾರವಾಡದಿಂದ ಮೂರುಮೈಲಿನ
ೀಲೆ ಇರುವ ನವಲೂರು ಒಂದು ಶಾಲೆಯು ಪಾಲಿಗೆ
ಗ್ರಾಮಸುಧಾರಣೆಯ ಕಾರ್ಯಕ್ಕಾಗಿ ಬಂದಿತ್ತು. ಶಾಲೆಯ
ಾಜರಿಯ ಮೇಲಿರುವ ೯೦ ವಿದ್ಯಾರ್ಥಿಗಳಲ್ಲಿ ೨೯೦
ನರು ಕೆಲಸಕ್ಕಾಗಿ ತಾವಾಗಿ ಮುಂದೆ ಬಂದರು. ಇವ
ಲ್ಲಿ ೪೦ ಹುಡುಗರ ೭ ಗುಂಪುಗಳನ್ನು ಮಾಡಲಾಗಿತ್ತು.
ತಿಯೊಂದು ಗುಂಪಿನಲ್ಲಿ ೫ ಬಾಲವೀರರು (ಸ್ಕೌಟರು)
ದ್ದರು. ಈ ಯೋಜನೆಯ ಸಿದ್ಧತೆಯು ಹುಡುಗರು
ಂದೂ ಮಾಡದೆ ಇದ್ದ ಒಂದು ಕೆಲಸಕ್ಕಾಗಿ ಬೇಕಾ
ುವ ತರಬೇತಿಯಿಂದ ಆರಂಭವಾಯಿತು. ಆ ಕೆಲಸ
ಂದರೆ ಶಗಣಿಗೊಬ್ಬರದ ಕುಣಿಗಳನ್ನು ತುಂಬುವದು,
ಳೇ ತೆಗೆಯುವದು, ಸೇಂಗಾದ ಬೆಳೆಯನ್ನು ಅರಿಸಿ
ಾಡಿಸುವದು, ಹಳ್ಳಿಯ ಮಾರ್ಗಗಳನ್ನು ಸ್ವಚ್ಛಮಾಡಿ
ುರಸ್ತುಮಾಡುವದು, ಕೆರೆಭಾವಿಗಳಲ್ಲಿಯ ರಾಡಿಯನ್ನು
ಳಿದು ಅವುಗಳ ಸುತ್ತಲಿನ ಜಾಗೆಯನ್ನು ಸ್ವಚ್ಛ
ಾಡುವದು ಇತ್ಯಾದಿ. ಮೊದಲು ಗೊಬ್ಬರದ ಕುಣಿ
ಳನ್ನು ತುಂಬುವದನ್ನು ಕಲಿಯಬೇಕಾಗಿತ್ತು. ಈ ವ
ಾಗಿ ಜಿಲ್ಲಾ ಶೇತಕೀ ಅಧಿಕಾರಿಯಿಂದ ತೋರಿಸಲ್ಪಟ್ಟ
ಂದು ನಿದರ್ಶನವನ್ನು ನೋಡಿ ಬರಲಿಕ್ಕೆಂದು ಏಳು
ುಂದಿ ಶಿಕ್ಷಕರನ್ನೂ ೧೫ ವಿದ್ಯಾರ್ಥಿಗಳನ್ನೂ ಕಳಿಸ
ಲಾಯಿತು. ವಿದ್ಯಾರ್ಥಿಗಳ ತಂಡಗಳು ಹಳ್ಳಿಗೆ ಹೋದಾಗ
ಅವರ ಜತೆಯಲ್ಲಿ ಒಂದೊಂದು ತಂಡದೊಡನೆ ಕಲಿತು
ಬಂದ ಒಬ್ಬ ಶಿಕ್ಷಕ ಇಬ್ಬರು ಸ್ವಯಂಸೇವಕರು
ಹೋದರು ಇವರು ೧೨ ಫೂ × ೫ ಫೂ × ೩ ಫೂಟು
ಅಳತೆಯ ೫ ಗೊಬ್ಬರದ ಕುಣಿಗಳನ್ನು ತೋಡಿ ಆವು
ಗಳನ್ನು ಶಾಸ್ತ್ರೋಕ್ತವಾಗಿ ತುಂಬಿ ಮುಚ್ಚಿದರು; ೨
ಎಕರೆ ಭೂಮಿಯಲ್ಲಿ ಕಳೆತೆಗೆದರು. ೭ ಎಕರೆ ಭೂಮಿ
ಯಲ್ಲಿಯ ಸೇಂಗಾ ಬೆಳೆಯನ್ನು ತೆಗೆದು ಕೂಡಿಸಿದರು.
ಹಳ್ಳಿಯೊಳಗಿನ ಎಲ್ಲ ಹಾದಿಗಳನ್ನು ಸ್ವಚ್ಛವಾಗಿ ಬಳಿ
ದರು. ಕಸವನ್ನೂ ಕೊಳಚೆಯನ್ನೂ ಗೊಬ್ಬರದ ಕುಣಿ
ಗಳಲ್ಲಿ ಹಾಕಿದರು. ಹೊರಗಿನಿಂದ ಹಳ್ಳಿಗೆ ಬರುವ
೨ ಫರ್ಲಾಂಗ ರಸ್ತೆಯನ್ನು ದುರಸ್ತುಮಾಡಿದರು ಹಾಗೂ
ಹಳ್ಳಿಯ ಕೆರೆಯ ಕೆಳಗೆ ಕೂತ ರಾಡಿಯನ್ನು ಬಳಿದು
ಜೆಲ್ಲಿದರು.

ಈ ಕಾರ್ಯ ಯೋಜನೆಯಲ್ಲಿ ಭಾಗ ತೆಗೆದುಕೊಂಡ
ಪ್ರತಿಯೊಬ್ಬನೂ ತನಗೆ ಒಪ್ಪಿಸಿದ ಕೆಲಸದಲ್ಲಿ ಒಳ್ಳೆಯ
ಆಸ್ಥೆಯನ್ನು ತೋರಿಸಿದನೆಂದೂ ಇಡಿಯ ಗುಂಪಿನವರು
ತುಂಬ ಸಹಕಾರದ ಭಾವನೆಯಿಂದ ದುಡಿದರೆಂದೂ
ಮುಖ್ಯಾಧ್ಯಾಪಕರು ವರದಿ ಮಾಡಿದ್ದಾರೆ. ಪ್ರತಿಯೊಬ್ಬ
ಸ್ವಯಂಸೇವಕನೂ ಹಳ್ಳಿಗರಿಗೂ ಒಕ್ಕಲಿಗರಿಗೂ
ತನ್ನಿಂದ ಕೈಲಾದಷ್ಟು ಹೆಚ್ಚು ಉಪಯೋಗವಾಗುವಂತೆ
ಎಲ್ಲ ರೀತಿಯಿಂದ ಪ್ರಯತ್ನಿಸಿದನು. ಹಳ್ಳಿಯ ಅಧಿ-
ಕಾರಿಗಳು ಹುಡುಗರಿಗೆ ಸಹಕಾರವನ್ನೂ ಆದರಾತಿಥ್ಯ
ವನ್ನೂ ನೀಡಿದರು. ಆದರೆ ಅನಿರೀಕ್ಷಿತವಾದ ಒಂದು
ಕಡೆಯಿಂದ ಅವರ ಉತ್ಸಾಹಕ್ಕೆ ಹಿಮ್ಮೆಟ್ಟಾಯಿತು.
ಅದು ಹಳ್ಳಿಗರಿಂದಲೇ. ವರ್ಷಾನುವರ್ಷ ನಗರವಾಸಿ
ಗಳ ಸಂಪರ್ಕದಿಂದ ಪ್ರತ್ಯೇಕವಾಗಿದ್ದುದರಿಂದಲೂ ಅವ
ರಿಂದ ನೇಮದಿಂದ ಅಲಕ್ಷಿಸಲ್ಪಟ್ಟುದರಿಂದಲೂ ಅದ
ರಲ್ಲಿ ತಮ್ಮ ವಿಷಯದಲ್ಲಿ ಏಕಾಏಕಿ ಇಷ್ಟೊಂದು ಸ್ನೇಹವೂ
ಸೇವಾಬುದ್ಧಿಯೂ ಉದಯಿಸಿದುದು ಅವರಿಗೆ ಆಶ್ಚರ್ಯ
ವನ್ನುಂಟುಮಾಡಿತಲ್ಲದೆ ಈ ಪ್ರೇಮದ ನಿದರ್ಶನದ
ಹಿಂದೆ ಯಾವ ಹೇತುವಿರಬಹುದು ಎಂದು ಅವರಲ್ಲನೇ-
ಕರು ಸಾಶಂಕರಾಗಿ ಸ್ವಯಂಸೇವಕರೊಂದಿಗೆ ಹೆಗಲಿಗೆ
ಹೆಗಲು ಹಚ್ಚಿ ದುಡಿಯಲಿಕ್ಕೂ ಅವರಿಗೆ ಹೋದಲ್ಲಿ

ಕೆಲಸಕ್ಕೆ ಬೇಕಾಗುವ ಸಾಧನ ಸಲಕರಣೆಗಳನ್ನು ಕೊಡಲಿಕ್ಕೂ ಅನುಮಾನಿಸಿದರು. ಆದರೆ ಅನೇಕ ಇತರ ಕಡೆಗಳಿಂದ ಬಂದ ವರದಿಗಳ ಮೇಲಿಂದ ತಿಳಿಯುವದೇನಂದರೆ ಈ ಪ್ರತ್ಯೇಕತೆಯೂ ಹಾಗೂ ಸಂಶಯವು ಸ್ವಲ್ಪ ದಿನಗಳಲ್ಲಿ ಮಾಯವಾಗುವದು. ಏಕೆಂದರೆ ತಮಗೆ ಸಹಾಯವನ್ನು ನೀಡಬಂದ ವಿದ್ಯಾರ್ಥಿಗಳೊಡನೆ ಸಹಕರಿಸುವ ಸಿದ್ಧತೆಯನ್ನು ಗ್ರಾಮಸ್ಥರು ತೋರಿಸಿದ ಹಲವು ಉದಾಹರಣೆಗಳುಂಟು. ಗೋಧ್ರಾದೊಳಗಿನ ಒಂದು ಶೇತಕಿ ಶಾಲೆಯ ವಿದ್ಯಾರ್ಥಿಗಳು ಹೊಲದಲ್ಲಿ ಕಳೆ ಕೀಳುವದರಲ್ಲಿ ನೆರವಾಗಲು ಮುಂದೆ ಬಂದಾಗ ಹಳ್ಳಿಗರಿಂದ ಅವರಿಗೆ ಉತ್ಸಾಹಭರಿತವಾದ ಸ್ವಾಗವು ಸಿಕ್ಕಿತು. ನಾಸಿಕದ ಒಂದು ಶಾಲೆಯ ಹುಡುಗರು ನದಿಯನ್ನು ದಾಟಬೇಕಾಗುವ ಒಂದು ಹಳ್ಳಿಗೆ ಹೋದಾಗ ಹಳ್ಳಿಗರು ಸಣ್ಣ ಸಣ್ಣ ಡೋಣಿಗಳನ್ನು ತಂದು ಹುಡುಗರನ್ನು ನದಿಯ ಆಚೆಗೆ ದಾಟಿಸಲಿಕ್ಕೆ ಬಂದರು. ಈ ತರುಣ ಕಾರ್ಯಕರ್ತರು ನಾಸಿಕದ ಸವಿನೆನಪುಗಳಿಂದ ಉಲ್ಲಾಸಗೊಂಡು ಪ್ರತಿ ತಿಂಗಳ ೨೩ನೆಯ ದಿನವನ್ನು "ಗ್ರಾಮದಿನ" ಎಂದು ಮೀಸಲಿಟ್ಟು, ಆ ಇಡಿಯ ದಿನವನ್ನು ಅರಿಸಿಕೊಂಡ ಒಂದು ಗ್ರಾಮದಲ್ಲಿ ಹಳ್ಳಿಗರಿಗೆ ಅವರ ಕೆಲಸದಲ್ಲಿ ನೆರವಾಗಿ ಕಳೆಯಬೇಕೆಂದು ನಿರ್ಧರಿಸಿದ್ದಾರೆ.

ಸೇವಾ ಭಾವನೆ—

ಅಹಮ್ಮದಾಬಾದಿನ ಹೆಣ್ಣುಮಕ್ಕಳ ಟ್ರೇನಿಂಗಕಾಲೇಜಿನ ಕೆಲಸವು ಗಾಂಧೀಜಯಂತಿಯ ವಾರದಲ್ಲಿ ಕಂಡುಬಂದ ಸೇವಾಭಾವನೆಯು ಒಂದು ಸ್ಫೂರ್ತಿದಾಯಕವಾದ ಉದಾಹರಣೆಯಾಗಿದೆ. ತಮ್ಮ ಯೋಜನೆಗೆ ಪೂರ್ಣ ಯಶಸ್ಸು ಸಿಗುವಂತೆಯೇ ಅವರು ತಮ್ಮ ಶ್ರೋತೃಣೆಯನ್ನು ಇಟ್ಟುಕೊಂಡಿದ್ದರು. ವಾಪನದ ಸೌಕರ್ಯವಿರಲಿಲ್ಲ. ಆಹಾರಧಾನ್ಯದ ಕೊರತೆ ಇದ್ದಿತು. ಶಿಬಿರ ಹಾಕಲಿಕ್ಕೆ ಸ್ಥಳವು ಬೇಕಾಗಿದ್ದಿತು. ಎಲ್ಲಕ್ಕಿಂತಲೂ ಹೆಚ್ಚು ಇವರ ಕೆಲಸಕ್ಕೆ ಅಲ್ಲಿಯ ಸ್ಥಳಿಕರ ಅದರಲ್ಲೂ ಹರಿಜನರ ವಿರೋಧ, ಈ ಎಲ್ಲ ತೊಂದರೆಗಳನ್ನು ಜೇಗನೆ ನೀಗಿಸಿಕೊಂಡು ಅವರು ಕೆಲಸಕ್ಕೆ ತೊಡಗಿದರು. ಧಾಲ್ತೇಜ ಎಂಬ ಹಳ್ಳಿಯ ಕಾರ್ಯಕ್ರಮವನ್ನು ಕೈಕೊಳ್ಳುವ ನಿಶ್ಚಯವಾಗಿತ್ತು. ಅವರ ಮಂಡಳವು ಹಳ್ಳಿಯನ್ನು ನೋಡಲಿಕ್ಕೆ ಹೋದಾಗ ಅವರಿಗೆ "ನಿಮ್ಮ ಕಾರ್ಯದಲ್ಲಿ ಹರಿಜನರೊಷನೆ ಸಂಪರ್ಕ ಬೆಳಿಸುವದಿದ್ದರೆ ನಿಮಗೆ ಹಳ್ಳಿಗರಿಂದ ಯಾವ ವಿಧದಿಂದಲೂ ನೆರವು ಸಿಕ್ಕಲಾರದು" ಎಂದು ನಿಷ್ಠುರವಾಗಿ ಎಚ್ಚರ ಕೊಡಲಾಗಿತ್ತು. ಆದ್ದರಿಂದ ಕಾರ್ಯಕರ್ತರು ಮೊದಲು ಹಳ್ಳಿಗರ ಸ್ನೇಹವನ್ನು ಪಡೆಯುವದರ ಕಡೆಗೆ ತಮ್ಮ ಲಕ್ಷ್ಯವನ್ನು ಹೊರಳಿಸಿದರು. ಅವರ ಮುಂದಿನ ಶ್ರೋತೃಣವು ಮಾತ್ರ ಹರಿಜನೋದ್ಧಾರದ ಕಾರ್ಯವಾಗಿತ್ತು. ಅವರು ತಮ್ಮ ಸಂಗಡ ಹಳ್ಳಿಗರಿಗಾಗಿ ಅನೇಕ ಕಾಣಿಕೆಗಳನ್ನು—ಬಟ್ಟೆಗಳು, ಪಾದರಕ್ಷೆಗಳು, ಬಟ್ಟೆಗಳಿಗೆ ಹಚ್ಚುವ ಸಾಬೂನು ಮೈಗೆ ಹಚ್ಚುವ ಸಾಬೂನು, ಹಣಿಗೆಗಳು, ತಲೆಗೂದಲಿಗೆ ಹಚ್ಚುವ ಎಣ್ಣೆ ಮುಂತಾದುವನ್ನು ತಂದಿದ್ದರು. ಇವುಗಳನ್ನು ಪ್ರ್ಯಾಕ್ಟೆಸಿಂಗ್‌ಸ್ಕೂಲಿನ ಮಕ್ಕಳು ಸ್ವಸಂತೋಷದಿಂದ ಕೂಡಿಸಿ ಕೊಟ್ಟಿದ್ದರು. ಹಳ್ಳಿಯ ಜನರು ಇವುಗಳನ್ನು ನೋಡಿ ಆನಂದಭರಿತರಾದರು. ಹರಿಜನರ ಮಕ್ಕಳೂ ವಾಷ್ಮೀಜನರ ಮಕ್ಕಳೂ ಬರಿಮೈಯಿಂದ ಇಲ್ಲವೆ ಹರಕು ಚಿಂದಿಗಳನ್ನು ಹಾಕಿಕೊಂಡು ಶಾಲೆಗೆ ಹೋಗುತ್ತಿದ್ದರು; ಅವರಿಗೆ ಬಟ್ಟೆಬರೆಗಳು ಬಹಳ ಉಪಯೋಗಬಿದ್ದವು. ಏಕೆಂದರೆ ಒಕ್ಕೆಯ ಬಟ್ಟೆಗಳನ್ನು ಕೊಳ್ಳುವಷ್ಟು, ಅವರಿಗೆ ತ್ರಾಣವಿರಲಿಲ್ಲ. ಸಫಾಯಿ ಕಾರ್ಯಕ್ರಮವು ಹಳ್ಳಿಗರ ಅಂತಃಕರಣವನ್ನು ತಟ್ಟಿತು. ಸ್ವಯಂಸೇವಕರು ತಕ್ಕಮಟ್ಟಿಗೆ ಔಷಧೋಪಚಾರದ ಕಾರ್ಯಕ್ರಮವನ್ನು ಸಹ ಇಟ್ಟುಕೊಂಡಿದ್ದರು. ಶಿಬಿರದಲ್ಲಿ ಒಂದು ಸಣ್ಣ ಆಸ್ಪತ್ರೆಯನ್ನು ತೆರೆಯಲಾಗಿತ್ತು. ಅದರಲ್ಲಿ ಕಣ್ಣುಬೇನೆಗೆ, ಚರ್ಮರೋಗಗಳಿಗೆ ಚಳಿಜ್ವರಕ್ಕೆ ಬೇಕಾದವರು ಬಂದು ಪುಕ್ಕಟೆಯಾಗಿ ಚಿಕಿತ್ಸೆಮಾಡಿಸಿಕೊಂಡು ಹೋಗಬಹುದಾಗಿತ್ತು. ಈ ಉಚಿತವಾಗಿ ಕೊಟ್ಟ ಔಷಧೋಪಚಾರದಿಂದ ಜನರಿಗೆ ವಿಶೇಷತಃ ಸಣ್ಣಮಕ್ಕಳಿಗೆ ಪ್ರಕೃತಿಗೆ ಆರಾಮು ಎನಿಸಿತು. ಇದರಿಂದ ಹಳ್ಳಿಗರ ಮನಸ್ಸು ಕರಗಿತು. ಸಫಾಯಿ ಕಾರ್ಯವನ್ನೆಂತೂ ಹಳ್ಳಿಗರು ಮೊದಲು ಅವಹೇಳನ ಮಾಡಿದ್ದರು. ಆದರೆ ಅದರಿಂದ ತಮ್ಮ ಬಾವಿಗಳ ಹಾಗೂ ರಸ್ತೆಗಳ ಅಕ್ಕಪಕ್ಕದ ನೆಲವು ಸ್ವಚ್ಛವಾಯಿತು. ಹೊಲಸು ಮೈಯ ಹುಡುಗರಿಗೆ ಸಬಕಾರ ಹಚ್ಚಿ ಸ್ವಚ್ಛ ಜಳಕಮಾಡಿಸಿ ಕೂದಲನ್ನು ಚನ್ನಾಗಿ ಹಿಕ್ಕಿ ಕಟ್ಟಿದ್ದನ್ನು

ರಿಂದ ಅವರು ನೋಡಲಿಕ್ಕೆ ಶ್ಲಾಘ್ಯವಾಗಿ ಕಾಣುವಂತಾದರು.

ಇಷ್ಟಾದ ಮೇಲೆ ಹಳ್ಳಿಗರಲ್ಲಿ ಸಹಕಾರದ ಭಾವನೆಯು ಸ್ವಾಭಾವಿಕವಾಗಿ ಹುಟ್ಟಿತು. ಅದರಿಂದ ಕಾರ್ಯಯೋಜನೆಯು ಯಶಸ್ವಿಯಾಯಿತು. ಯಾವ ತಾಯಂದಿರಿಗೆ ಮೊದಲು ತಮ್ಮ ನಿತ್ಯ ಹೊಲಸು ಮೈಯಿಂದಿರುವ ಹುಡುಗರಿಗೆ ಸಬಕಾರ ಹಚ್ಚಿ ಜಳಕಮಾಡಿಸುವದು ಒಗೆದ ಬಟ್ಟೆಗಳನ್ನು ಹಾಕುವದು ಬೇಡವಾಗಿತ್ತೋ ಅವರ ಮನಸ್ಸೇ ಈಗ ಬದಲಾಗಿ ತಮ್ಮ ಮಕ್ಕಳನ್ನು ಈಗ ಈ ವಿದ್ಯಾರ್ಥಿಗಳ ಕೈಯ್ಯಲ್ಲಿ ಕೊಡಹತ್ತಿದರು ಈ ಕಾರ್ಯದಲ್ಲಿ ಹೊಲಸು ಅಸಡ್ಡೆ ಬರುವ ಮಕ್ಕಳನ್ನು ಸಾಬೂನು ಹಣಿಗೆಗಳ ಸಹಾಯದಿಂದ ಸ್ವಚ್ಛವಾದ ಮುದ್ದು ಬರುವ ಮಕ್ಕಳನ್ನಾಗಿ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿಗಳು ಪ್ರವೀಣರಾಗಿದ್ದರು. ಬೆಳಿಗ್ಗೆ ೬-೩೦ ಗಂಟೆಯಿಂದ ೯-೩೦ ಗಂಟೆ ವರೆಗೆ ಹಳ್ಳಿಯ ಮಕ್ಕಳನ್ನು ಸ್ವಚ್ಛವಾಗಿ ಓರಣವಿಂದ ಇಡುವದಕ್ಕೆಂದು ವಿದ್ಯಾರ್ಥಿಗಳು ಎಣ್ಣೆ, ಸಾಬೂನು, ಟಾವೆಲ್, ಹಣಿಗೆಗಳನ್ನು ತಕ್ಕೊಂಡು ಮನೆ ಮನೆ ತಿರುಗುತ್ತಿದ್ದರು. ಹಳ್ಳಿಯನ್ನು ಸ್ವಚ್ಛಮಾಡಲಿಕ್ಕೆಂದು ಅವರು ತಮ್ಮ ಜೊತೆಯಲ್ಲಿ ಕೊಡಲಿ, ಗುದ್ದಲಿ, ಸಲಕೆ, ಕಸಬರಿಗೆ, ಬುಟ್ಟಿಗಳನ್ನು ಒಯ್ದಿದ್ದರು. ಇಷ್ಟು ಕಷ್ಟಗಳನ್ನು ಸಹಿಸಿ ತಾಳ್ಮೆಯಿಂದ ಮಾಡಿದ ಕೆಲಸಕ್ಕೆ ಒಂದು ವಾರ ಕಳೆಯುವದರೊಳಗಾಗಿಯೇ ಧಲತೇಜದ ಜನರು ಈ ವಿದ್ಯಾರ್ಥಿಗಳ ಉಪಕಾರವನ್ನು ನೆನಿಸಹತ್ತಿದರು. ವಿದ್ಯಾರ್ಥಿಗಳು ಹಳ್ಳಿಯನ್ನು ಬಿಟ್ಟು ಹೋಗುವ ಹೊತ್ತಿಗೆ ಹಳ್ಳಿಗರಿಗೆ ಕಾಲುವೆಯ ಸಾಯಖಾನೆಗಳನ್ನು ತೆಗೆದು ಹೇಗೆ ಉಪಯೋಗಿಸಬೇಕೆಂಬುದನ್ನು ತಿಳಿಸಿ ಕೊಟ್ಟಿದ್ದರು. ಅಹಮ್ಮದಾಬಾದದಿಂದ ಏಳೇ ಮೈಲು ಅಂತರದ ಮೇಲಿದ್ದರೂ ಅವರಿಗೆ ಪಾಯಖಾನೆಗಳ ಅನುಕೂಲತೆಯು ಭಾಸವಾಗಿದ್ದಿಲ್ಲ. ಹಳ್ಳಿಯ ಬಾವಿಯ ಸುತ್ತಲೂ ಕೆಸರು ಕೊಳಚೆಯನ್ನು ಆಗಿದು ಬಳದು ಜೆಲ್ಲಿ, ಅದರಲ್ಲಿ ಒಣಮಣ್ಣು ಉಸುಕನ್ನು ಹಾಕಿ ಮುಚ್ಚಿದ್ದರು. ಅಲ್ಲದೆ ಮೇಲೆ ಬಿದ್ದ ನೀರು ಹರಿದುಹೋಗುವಂತೆ ಒಂದು ಹರಿಯನ್ನು ತೋಡಿಕೊಟ್ಟಿದ್ದರು: ಗ್ರಾಮಕ್ಕೆ ಬರುವ ಮಾರ್ಗದ ಸುಮಾರು ೫೦ ಯಾರ್ಡು ಹಾದಿಯನ್ನು ದುರಸ್ತು ಮಾಡಿದ್ದರು. ತಮ್ಮ ಉತ್ಸಾಹವು ಹಳ್ಳಿಗರಿಗೂ ವ್ಯಾಪಿಸಿದನ್ನು ನೋಡಿ, ತಮ್ಮ ಮನೆಯ ಮುಂದಿನ ರಸ್ತೆಯನ್ನು ಉಡುಗುವದಕ್ಕೆ ಹೆಂಗಸರೂ ಗಂಡಸರೂ ಪ್ರತಿನಿತ್ಯ ನೇಮದಿಂದ ಬೆಳಗಿನಲ್ಲಿ ಎದ್ದು ಬರುವದನ್ನು ನೋಡಿ ತನ್ನ ಸಫಾಯಿ ಕಾರ್ಯಕ್ರಮವನ್ನು ಹೆಚ್ಚು ಜೋರಿನಿಂದ ಅವರು ಮಾಡತೊಡಗಿದ್ದನ್ನು ನೋಡಿ ಸ್ವಯಂಸೇವಕರಿಗೆ ಹರ್ಷವಾಯಿತು.

ಮನರಂಜನೆಯ ಕಾರ್ಯಕ್ರಮಗಳು—

ಮನರಂಜನೆಯ ಕಾರ್ಯಕ್ರಮಗಳ ಉಪಯೋಗವು ಹಳ್ಳಿಯೊಳಗಿನ ಬೇರೆ ಬೇರೆ ಪಂಗಡಗಳನ್ನು ಒಂದು ಕಡೆ ತರಲಿಕ್ಕೆ ಆಗುತ್ತಿತ್ತು. ಪ್ರತಿನಿತ್ಯ ಸಾಯಂಕಾಲ ಸ್ವಯಂಸೇವಕರು ತಮ್ಮ ಶಿಬಿರದಿಂದ ಭಜನೆಮಾಡುತ್ತ ಮಾರ್ಚಿಂಗ್ ಮಾಡುತ್ತ ಮೆರವಣಿಗೆಯನ್ನು ಹೊರಡಿಸುತ್ತಿದ್ದರು. ಹೊರಟು ಹಳ್ಳಿಯ ನಡುವಿನ ಚೌಕಿಗೆ ಬಂದು ಅಲ್ಲಿ ಮನರಂಜನೆಯ ಕಾರ್ಯಕ್ರಮವನ್ನು ತಾವು ಕೈಕೊಂಡು ಊರ ಜನರನ್ನು ಅದರಲ್ಲಿ ಭಾಗವಹಿಸಲಿಕ್ಕೆ ಕರೆಯುತ್ತಿದ್ದರು. ಗುಜರಾಥದ ಪ್ರಾಚೀನ ಜಾನಪದ ನೃತ್ಯಗಳಾದ ಗರ್ಬಾ ಮತ್ತು ರಾಸ ಎಂಬ ನೃತ್ಯಗಳನ್ನು ಶಹರದಲ್ಲಿ ಕಲಿತವರು ಒಳ್ಳೆಯ ರಸಭಾವ ಭಂಗಿಯಿಂದಲೂ ಲಯಗತಿಯಿಂದಲೂ ಕುಣಿಯುತ್ತಿದ್ದರು. ಹಳ್ಳಿಗರೂ ಅದೇ ಶೈಲಿಯ ತಮ್ಮ ಗ್ರಾಮಜಾತಿಯ ಓಜಸ್ಸಿನ ಕುಣಿತಗಳನ್ನು ಕುಣಿದು ಮನರಂಜನೆಯಲ್ಲಿ ಭಾಗವಹಿಸುತ್ತಿದ್ದರು. ಎಲ್ಲರೂ ಭಜನೆಗಳನ್ನು ಹಾಡುಗಳನ್ನು ಹಾಡುತ್ತಿದ್ದರು. ವಿಶೇಷ ಶೈಕ್ಷಣಿಕ ಪ್ರಯೋಜನದಿಂದ ಕೂಡಿದ, ಸ್ವಯಂಸೇವಕರು ನಡೆಸುವ ಸಂಭಾಷಣೆಗಳೂ ಹಾಸ್ಯಗಳೂ ಜನರ ಮನಸ್ಸಿಗೆ ಬಹುವಾಗಿ ಹಿಡಿಯುತ್ತಿದ್ದವು. ವಿದ್ಯಾರ್ಥಿಗಳು ಧಲತೇಜದಿಂದ ತಿರುಗಿ ಹೊರಡಲು ಸಿದ್ಧರಾದಾಗ ಹಳ್ಳಿಯಲ್ಲಿಯೇ ಒಂದು ಸಭೆಯು ಕೂಡಿ, ಅಲ್ಲಿಯ ಗೌಡರ ಮಗನು, ಹಳ್ಳಿಗರಿಗೆ ದುಡಿತದ ಒಂದು ಭಾವನೆಯನ್ನೂ ಚನ್ನಾಗಿ ದುಡಿಯುವ ಹಾಗು ಚನ್ನಾಗಿ ಬಾಳುವ ಒಂದು ಹೊಸ ಹಿಗ್ಗನ್ನೂ ತಂದು ಕೊಟ್ಟಂತಹ ವಿದ್ಯಾರ್ಥಿ ಸ್ವಯಂಸೇವಕರ ಉಪಕಾರವನ್ನು ಸ್ಮರಿಸಿದನು. ಸ್ವಯಂಸೇವಕರು ನಿಂತು ತೋರಿಸಿಕೊಟ್ಟ ಹಾದಿಯಿಂದ ತಮ್ಮ ಹಳ್ಳಿಯನ್ನು ಸುಧಾರಿಸಲಿಕ್ಕೆ ತಮ್ಮ ಕೈಲಾದ ಮಟ್ಟಿಗೆ ಪ್ರಯತ್ನಿಸುವೆವೆಂದೂ ಆಶ್ವಾಸನವನ್ನಿತ್ತನು. ವಿದ್ಯಾರ್ಥಿ

ಗಳಿಗೆ ಹಾಗೂ ಅವರು ಮಾಡಿದ ಸಮಾಜಸೇವೆಯ ಕಾರ್ಯಕ್ಕೆ ಇದಕ್ಕಿಂತಲೂ ಹೆಚ್ಚಿನ ಅಭಿನಂದನೆಯು ಯಾವದು ?

ಸಾತಾರೆ ಜಿಲ್ಲೆಯ ಕರಾಡದಲ್ಲಿ ಶಾಲೆಯ ಹುಡುಗರು ಊರೊಳಗಿನ ಹರಿಜನ ಕೇರಿಯಲ್ಲಿ ಸಫಾಯಿ ಕೆಲಸವನ್ನು ಮಾಡುತ್ತಿರುತ್ತಾರೆ. ಇದು ಅವರ ಪೌರನೀತಿಯ ಕಾರ್ಯದಲ್ಲಿ ತರಬೇತಿಯ ಒಂದು ಅಂಶವಾಗಿರುತ್ತದೆ. ಇವರು ಗಾಂಧೀಜಯಂತಿ ಸಪ್ತಾಹದಲ್ಲಿ ಕಾರವಾ ಎಂಬ ಹಳ್ಳಿಯಲ್ಲಿ ತಮ್ಮ ಕೆಲಸವನ್ನು ಮಾಡಬೇಕೆಂದು ನಿಶ್ಚಯಿಸಿದರು. ೭೦ ಹುಡುಗರ ಒಂದು ತಂಡವು ಅಲ್ಲಿ ಎರಡು ದಿನಗಳ ವರೆಗೆ ಶಿಬಿರವನ್ನು ಹಾಕಿತು. ಸಫಾಯಿ ಕೆಲಸವೊಂದೇ ಅಲ್ಲದೆ ಶಾರೀರಿಕ ಶಿಕ್ಷಣದ ಒಂದು ನಮೂನೆಯನ್ನೂ ಆನಂತರ ವಿವಿಧ ವಿನೋದಾವಳಿಯ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಇವರು ಹಳ್ಳಿಗರೊಡನೆ ನಿಕಟ ಸಂಬಂಧವನ್ನು ಬೆಳಸಿಕೊಂಡಿದ್ದರಿಂದ ಜಾತಿ-ಗೋತಿಗಳಭೇದವನ್ನರಿಯದ, ಸಹಾನುಭೂತಿಯ ಸಮಾಜಸೇವೆಯ ಉತ್ತಮ ಅನುಭವಗಳನ್ನು ಶಿಬಿರದಿಂದ ತಾವೂ ಪಡೆದರು. ಹಳ್ಳಿಗರಿಗೂ ಸಹ ಉತ್ಸಾಹವನ್ನು ತಂದುಕೊಟ್ಟರು.

ಬೆಳಗಾವಿಯಲ್ಲಿಯ ಒಂದು ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ವರದಿಯು ಇದೇ ಬಗೆಯದಾಗಿದೆ. ಗ್ರಾಮ ಸುಧಾರಣೆಯ ಕಾರ್ಯಕ್ರಮವನ್ನು ಗಾಂಧಿಸಪ್ತಾಹದಲ್ಲಿ ಪೂರ್ಣವಾಗಿ ಆಚರಿಸಿದರು. ಅವರ ಕಾರ್ಯದಲ್ಲಿ ಒಡೆದು ಕಾಣುವ ಒಂದು ಗುಣವೆಂದರೆ ನಾಟಕದ ಮುಖಾಂತರ ಹಳ್ಳಿಯ ಜನರಿಗೆ ಶಿಕ್ಷಣದ ಸಂಸ್ಕಾರವನ್ನುಂಟುಮಾಡುವದಾಗಿತ್ತು. " ಮಾಝೀ ಜಮೀನ " (ನನ್ನ ಭೂಮಿ) ಎಂಬ ನಾಟಕವನ್ನು ಹಲವಾರು ಹಳ್ಳಿಗಳಲ್ಲಿ ಆಡಿ ಸಮಾಜ ಜಾಗೃತಿಯನ್ನುಂಟುಮಾಡಲು ಹವಣಿಸಿದರು.

ಗ್ರಾಮ ಪುನರ್ರಚನೆ—

ಈ ಸಪ್ತಾಹದಲ್ಲಿ ಎಲ್ಲೆಲ್ಲಿಯೂ ಗ್ರಾಮಸುಧಾರಣೆಯ ಕಾರ್ಯಕ್ರಮವು ನಾ ಮುಂದು ನೀಮುಂದು ಎಂಬ ಆಸ್ಥೆಯಿಂದ ಕೈಕೊಳ್ಳಲ್ಪಟ್ಟದ್ದಲ್ಲದೆ ಎಷ್ಟೋ ಸಂಸ್ಥೆಗಳು ತಮ್ಮ ಅಭ್ಯಾಸೇತರ ಚಟುವಟಿಕೆಗಳಲ್ಲಿ ಇದನ್ನೊಂದು ಕಾಯಮು ಆಗಿ ಸೇರಿಸಿಬಿಟ್ಟವೆ. ಅವು ನಿಧಾನವಾಗಿ ಬಿಟ್ಟುಬಿಡದೆ ಅದೇ ಗುರಿಯ ಕಡೆಗೆ ಸಾಗಿವೆ. ಸುರತದಲ್ಲಿಯ ಒಂದು ಪ್ರಾಥಮಿಕ ಶಿಕ್ಷಣಾಲಯದ ವಿದ್ಯಾರ್ಥಿ ಶಿಕ್ಷಕರು ಸಮಾಜಸೇವೆಯ ಪ್ರಯೋಗ ಕ್ಷೇತ್ರವೆಂದು ಪುನಾ (ಕುಂಭಾರಿಯಾ) ಎಂಬ ಹಳ್ಳಿಯನ್ನು ಆರಿಸಿದ್ದಾರೆ. ಯೋಜನೆಯ ಯಥಾಸಾಂಗವಾದ ಪೂರ್ತಿಗೆ ಸಮಾಜಸೇವಾಸಮಿತಿಯೊಂದನ್ನು ಸ್ಥಾಪಿಸಿಕೊಂಡಿದ್ದಾರೆ. ಗ್ರಾಮಸ್ಥರ ಹಿತವು ಯಾವ ದಿಶೆಯಲ್ಲಿ ಆಗಬೇಕಾಗಿದೆ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಅವರು ಮೊದಲಿಗೆ ಹಳ್ಳಿಯ ಒಂದು ಖಾನೇಸುಮಾರಿಯನ್ನು ಮಾಡಿದ್ದಾರೆ. ಮಾಡಿ ಬೇರೆ ಬೇರೆ ಕಾರ್ಯಗಳನ್ನು ಕೈಕೊಳ್ಳಲಿಕ್ಕೆ ಬೇರೆ ಬೇರೆ ಉಪಸಮಿತಿಗಳನ್ನು ರಚಿಸಿಕೊಂಡಿದ್ದಾರೆ. ಅವು ಇಂತಿವೆ. ಸಫಾಯಿದಲ (ಸ್ವಚ್ಛತೆಯ ಮಂಡಲ) ಸಾಮಾಜಿಕ ಶಿಕ್ಷಣಸಮಿತಿ, ರಕ್ಷಕದಲ (ಶಾಂತಿಸಂರಕ್ಷಣೆಯ ಮಂಡಲ) ವಿದ್ಯಾರಸಿಕಮಂಡಲ (ಸಾಂಸ್ಕೃತಿಕ ಮಂಡಲ) ಗ್ರಾಮೋದ್ಯೋಗಪ್ರಚಾರಕ ಮಂಡಲ, ಈ ಎಲ್ಲ ಸಮಿತಿಗಳಲ್ಲಿ ಸದಸ್ಯತ್ವವು ಬಾರಿ-ಬಾರಿಯಿಂದ ಬದಲಾಗುವದು. ಹೀಗಾಗಿ ಪ್ರಯೊಬ್ಬರಿಗೆ ಸಮಾಜ ಪುನರ್ಘಟನೆಯ ಎಲ್ಲ ಅಂಗೋಪಾಂಗಗಳಲ್ಲಿ ಶಿಕ್ಷಣವು ದೊರಕುವಂತಾಗುವದು. ಪ್ರತಿಯೊಬ್ಬ ಕಾರ್ಯಕರ್ತನು ಒಂದು ದಿನಚರಿಯ ವಹಿಯಲ್ಲಿ. ತಾನು ಆ ದಿನ ಮಾಡಿದ ಕೆಲಸವನ್ನು ಬರೆದಿಡಬೇಕು ಸಮಾಜ ಶಿಕ್ಷಣಸಮಿತಿಯು ಕೂಡಿದಾಗೊಮ್ಮೆ ಅವರ ಲೆಕ್ಕಪತ್ರಗಳೂ ಅನುಭಗಳೂ ಚರ್ಚಿಸಲ್ಪಟ್ಟು ಆದ ಕಾರ್ಯದ ವಿಮರ್ಶಮಾಡಿ ಮುಂದಿನ ಕಾರ್ಯ ಪುನಃ ಯೋಜಿಸಲ್ಪಡುವದು. ಸಂಸ್ಥೆಯ ನಿತ್ಯನೇಮದ ಕೆಲಸಗಳಲ್ಲಿ ನಾಕಷ್ಟು, ವೇಳೆಯು ಈ ಕಾರ್ಯಕ್ಕಾಗಿ ದೊರೆಯದಿರುವದು, ಹಾಗು ನಗರದಿಂದ ಹಳ್ಳಿಗೆ,ಹಳ್ಳಿಯಿಂದ ತಿರುಗಿ ನಗರಕ್ಕೆಹೋಗಿ ಬರುವ ಖರ್ಚಿಗೆ ಹಣದ ಕೊರತೆ ಇವೇ ಈ ಕಾರ್ಯಕರ್ತರನ್ನು ಎದುರಿಸುವ ಮುಖ್ಯ ಸಮಸ್ಯೆಗಳಾಗಿವೆ. ಆದರೆ ಅವರು ಯೋಜನೆಗಳನ್ನು ಮಾಡುತ್ತಲೇ ಇದ್ದಾರೆ. ಆಶೆಯನ್ನು ಬಿಟ್ಟಿಲ್ಲ. ಅವರಿಗೆ ಬಂದಿರುವ ತೊಂದರೆಗಳನ್ನು ಮೀರಿ ನಿಲ್ಲುವಷ್ಟು ಅವರ ಉತ್ಸಾಹವು ಕಾಣುವದು

ನಾಸಿಕದೊಳಗಿನ ಒಂದು ಹೆಣ್ಣುಮಕ್ಕಳ ಶಾಲೆಯಿಂದ ಬಂದ ವರದಿಯಿಂದ ೨೪ ಹುಡಿಗೆಯರು ಶಹರದಿಂದ ೩

ಮೈಲು ದೂರವಿರುವ ಒಂದು ಹಳ್ಳಿಯೊಡನೆ ಸಂಪರ್ಕ ಬೆಳಿಸಬೇಕೆಂದು ಮಾಡಿದ್ದಾರೆಂದು ತಿಳಿದಿದೆ. ಒಮ್ಮೆ ಅಲ್ಲಿಗೆ ಪ್ರವಾಸಕ್ಕೆ ಹೋದಾಗ ಅಲ್ಲಿ ತಾವು ಮಾಡ ಬಹುದಾದ ಗ್ರಾಮೋದ್ಧಾರದ ಕೆಲಸಕ್ಕೆ ಹೆಚ್ಚಾದ ಅವ ಕಾಶವಿದೆ ಎಂದು ತಿಳಿದು ಬಂದಿತ್ತು. ಮೊದಲನೆಯ ಸಾರಿ ಅಲ್ಲಿ ಕಾರ್ಯಕ್ರಮವನ್ನು ಇಟ್ಟುಕೊಂಡಾಗ ಅಲ್ಲಿಯ ಹುಡುಗರನ್ನೆಲ್ಲ ತಮ್ಮ ಸುತ್ತಲೂ ನೆರೆಯುವಂತೆ ಮಾಡಿ ಅವರೊಡನೆ ಆಡಿ ಅವರಿಗೆ ಆಟಗಳನ್ನೂ ಹಾಡುಗಳನ್ನೂ ಕಲಿಸಿ ಅವರು ಸ್ವಚ್ಛವಾಗಿರುವಂತೆ ನೋಡಿಕೊಂಡರು. ಕೆಲವು ಹುಡಿಗೆಯರು ಮನೆ ಮನೆಗೆ ಹೋಗಿ ಮನೆಯ ಹೆಣ್ಣುಮಕ್ಕಳನ್ನು ಮಾತನಾಡಿಸಿ ಸ್ವಚ್ಛತೆಯ ಅಗತ್ಯ ವನ್ನೂ ಅದರ ಮಹತ್ವವನ್ನೂ ತಿಳಿಸಿಹೇಳಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ತಪ್ಪದೆ ಕಳಿಸುವಂತೆ ಬೇಡಿಕೊಂಡರು. ಇನ್ನೂ ಹೆಚ್ಚು ಶ್ರಮವಹಿಸಿ ಈ ಕಾರ್ಯವನ್ನು ಮುಂದು ವರಿಸಿದರೆ ಹಳ್ಳಿಗರ ಗಮನವನ್ನು ಇದ್ದುದಕಿಂತಲೂ ಸೊಗಸಾದ ಜೀವನದತ್ತ ಎಳೆಯಬಹುದೆಂದೂ ಹಳ್ಳಿಯ ಜೀವನವನ್ನು ಹೇಗೆ ಮಾರ್ಪಡಿಸಬೇಕೆಂಬದನ್ನೂ ಅವರಿಗೆ ತಿಳಿಸಿ ಹೇಳಬಹುದೆಂದೂ ಅವರಿಗೆ ಖಚಿತವಾಗಿ ಅನಿ ಸಿತು. ಅದಕ್ಕಾಗಿ ಪ್ರತಿವಾರ ಅಲ್ಲಿಗೆ ಹೋಗಿಬರುವಂತೆ ಅವರು ನಿಶ್ಚಯಿಸಿದ್ದಾರೆ. ಸಾಧ್ಯವಾದರೆ ಆದಿತ್ಯವಾರ ಹಾಗೂ ಬಿಡುವಿನ ದಿನಗಳಲ್ಲಿ ಅಲ್ಲಿಯ ಗ್ರಾಮ ಸುಧಾರ ಣೆಯ ಕೆಲಸವನ್ನು ಒಂದು ನಿಶ್ಚಿತವಾದ ಯೋಜನೆಯಂತೆ ಮುಂದುವರಿಸಬೇಕೆಂದು ನಿಶ್ಚಯಿಸಿದ್ದಾರೆ

ಅಹಮ್ಮದಾಬಾದದ ಒಂದು ಶಾಲೆಯ ಹತ್ತನೆಯ ಹಾಗೂ ಹನ್ನೊಂದನೆಯ ಇಯತ್ತೆಯ ಹುಡಿಗೆಯರ ಇಂತಹದೇ ಸೇವಾಬುದ್ಧಿಯ ಪ್ರೇರಣೆಯಿಂದ ಹತ್ತಿರಿರುವ ಗ್ರಾಮಕ್ಕೆ ಹೋಗಿದ್ದರು. ಅವರು ಅಲ್ಲಿ ಮಾಡಿದ ಕೆಲ ಸವು ಮುಂದೆ ಬಂದವರಿಗೆ ಸಮಾಜಸೇವೆಯ ಚಟುವಟಿ ಕೆಗಳ ಅಸ್ತಿವಾರವನ್ನು ಹಾಕಿಕೊಟ್ಟಿತು. ಆರಿಸಿದ ಹಳ್ಳಿಯಲ್ಲಿಯ ಪ್ರತಿಯೊಂದು ಮನೆಗೆ ಭೆಟ್ಟಿಕೊಟ್ಟು ಅಲ್ಲಿಯ ಜನರ ಜೀವನದ ಅಗುಹೋಗುಗಳನ್ನು ಅರಿತು ಕೊಳ್ಳಲಿಕ್ಕೆ ಪ್ರಯತ್ನ ಮಾಡಿದರು. ಹಳ್ಳಿಗರನ್ನು ಪ್ರೋ ತ್ಸಾಹಿಸಲಿಕ್ಕೆ ಸಾಯಂಕಾಲ ಒಂದು ಸಭೆಯನ್ನು ಕರೆದು ಹಳ್ಳಿಯೊಳಗಿನ ಅತ್ಯುತ್ತಮ ಕೂಸಿಗೊಂದು, ಹಳ್ಳಿ ಯೊಳಗಿನ ಎಲ್ಲಕ್ಕೂ ಸ್ವಚ್ಛವಾಗಿದ್ದ ಮನೆಗೊಂದು ಹೀಗೆ ಎರಡು ಬಹುಮಾನಗಳನ್ನಿತ್ತರು. ಇನ್ನೊಂದು ಹಳ್ಳಿಗೆ ಭೆಟ್ಟಿಯಿತ್ತಾಗ ೮ವರ್ಷದ ಒಬ್ಬ ಮುಸ್ಲಿನ ಮುದುಕನನ್ನು ನೋಡಿ ಅಂತಃಕರುಣವು ಬಹು ಕಲ ಕಿತು. ಒಂದು ಬಿರುಗಾಳಿಯ ಹೊಡತದಲ್ಲಿ ಈ ಮುದು ಕನ ಮನೆಯು ಬಿದ್ದುಹೋಗಿತ್ತು. ಆದ್ದರಿಂದ ಪ್ರತಿತಿಂಗಳ ಅವನ ಸಹಾಯಾರ್ಥವಾಗಿ ಕೈಲಾದಷ್ಟು ವರ್ಗಣಿ ಕೂಡಿ ಸುತ್ತಿದ್ದರಲ್ಲದೆ ಹೀಗೆ ಅವನ ಮರಣದವರೆಗೆ ಸೇವೆ ಯನ್ನು ಸಲ್ಲಿಸುತ್ತ ಬಂದರು.

ಜಾತ್ರೆಯಲ್ಲಿ ಜನರಿಗೆ ಸಹಾಯ—

ವಿದ್ಯಾರ್ಥಿಗಳು ಸಮಾಜಸೇವೆಯನ್ನು ಮಾಡಿದ ಇನ್ನೊಂದು ವರದಿಯು ಠಾಣಾ ಜಿಲ್ಲೆಯ ಡಹಣೂ ಶಾಲೆ ಯಿಂದ ಬಂದಿದೆ. ಡಹಣುನಿಂದ ೧೬ಮೈಲು ದೂರದಲ್ಲಿ ರುವ ಮಹಾಲಸ್ಪೇ ಎಂಬ ಹಳ್ಳಿಯಲ್ಲಿ ಪ್ರತಿವರ್ಷ ಆದಿವಾಸಿಗಳು (ಮೂಲನಿವಾಸಿಗಳು) ವಾಸಿಸುವ ಒಂದು ಅರಣ್ಯ ಮಧ್ಯದಲ್ಲಿ ಒಂದು ಜಾತ್ರೆ ಆಗುವದು. ಅಲ್ಲಿ ಸುಮಾರು ೫೦ಸಾವಿರ ಆದಿವಾಸಿಗಳು ಪೂಜೆಗಾಗಿ ಸೇರು ತ್ತಾರೆ. ಈ ಜಾತ್ರೆಯಲ್ಲಿ ಬಹಳ ಜನರು ಕಲೆತಿರುವಲ್ಲಿ ಶಿಸ್ತಿನ ಅಭಾವದ ಮೂಲಕ ಜಗಳಗಳು ಹೊಡೆದಾಟ ಗಳು ಆಗೇ ಆಗುವವು. ಇವಲ್ಲದೆ ಆರೋಗ್ಯ ರಕ್ಷಣೆಯ ಅನಕೂಲತೆಗಳು ಇಲ್ಲದಿರುವದರಿಂದ ಆ ಸ್ಥಳದಲ್ಲಿ ಜಾತ್ರೆ ಯ ಕಾಲಕ್ಕೆ ಅಲ್ಲಿ ಇರಿಸಿದ ಪೋಲೀಸರೂ ಆ ಅವ್ಯವಸ್ಥೆ ಯನ್ನು ವಿಪರೀತ ಗೊಂದಲದ ಮೂಲಕ ತಡೆಯಲು ಅಸ ಮರ್ಥರಾದರು ಇತ್ತೀಚೆಗೆ ಈ ಪೋಲೀಸರಿಗೆ ಗೃಹರಕ್ಷಕ ದಲದವರು ನೆರವಾಗುತ್ತಿದ್ದಾರೆ. ಇವರು ಗುಡಿಗುಂಡಾರ ಗಳಲ್ಲಿ ಜನರನ್ನು ತಮ್ಮ ಸಾರತಿ ಬರುವವರೆಗೆ ಸಾಲಾಗಿ ನಿಲ್ಲುವಂತೆಯೂ ಶಾಂತತೆಯು ಉಳಿಯುವಂತೆಯೂ ಪ್ರಯತ್ನಿಸುತ್ತಾರೆ. ಇಷ್ಟಾದರೂ ಜಾತ್ರೆಯಲ್ಲಿ ಸ್ವಯಂ ಸ್ಫೂರ್ತಿಯಿಂದ ಬಂದ ಜನರ ಸೇವೆಯ ಅಗತ್ಯವಾಗಿದೆ. ಆದ್ದರಿಂದ ಮೇಲಿನ ಶಾಲೆಯ ಪ್ರಿನ್ಸಿಪಾಲರು ೬೦ಹುಡು ಗರನ್ನು ಈ ಕೆಲಸವನ್ನು ನಹಿಸಿಕೊಳ್ಳಲಿಕ್ಕೆ ಹುರಿ ಮುಂಬಿಸಿದರು. ಹಳ್ಳಿಯ ಹೊರಭಾಗದ ಒಂದು ಮರ ದಡಿಯಲ್ಲಿ ಈ ಸ್ವಯಂಸೇವಕರು ಠಾಣ್ಯ ಹಾಕಿದರು. ತಾವು ಅಡಿಗೆಮಾಡಿಕೊಂಡು ಉಂಡು ಜಾತ್ರೆಯಲ್ಲಿಯ

ತಮ್ಮ ಕೆಲಸಕ್ಕಾಗಿ ಸಿದ್ಧವಾಗುತ್ತಿದ್ದರು. ಆದಿವಾಸಿಗಳಿಗೆ ಕಾಯಿದೆ ಗೊತ್ತಿಲ್ಲದ್ದರಿಂದ ಮಾರ್ಗದರ್ಶಕದಿಲ್ಲದಿರುವದರಿಂದ ಅನೇಕ ಸಲ ತೊಂದರೆಗೀಡಾಗುವ ಪ್ರಸಂಗ ಬರುತ್ತಲಿತ್ತು. ಆಗ ಈ ಸ್ವಯಂಸೇವಕರು ಸಹಾಯ ಮಾಡುತ್ತಿದ್ದರು. ಈ ಸೇವೆಯಲ್ಲದೆ ಅವರು ಒಂದು "ಕಲಾಪಥಕ" ವೆಂಬ ಪಥಕವನ್ನ ಮಾಡಿಕೊಂಡಿದ್ದಾರೆ ಈ ಸಂಸ್ಕೃತಿ ಮಂಡಲವು ಹಳ್ಳಿಯಿಂದ ಹಳ್ಳಿಗೆ ಹೋಗಿ ಆದಿವಾಸಿಗಳಿಗೆ ಮನರಂಜನೆಯಾಗುವ ಕಾರ್ಯಕ್ರಮವನ್ನು ಇಟ್ಟುಕೊಳುವರು. ಹಾಡು ಭಾಷಣ ಮೊದಲಾದ ಕಾರ್ಯಕ್ರಮಗಳಿಂದ ಮದ್ಯಪಾನದ ಕೇಡು, ಶಿಕ್ಷಣದ ಮಹತ್ವ, ಸಂಘಟಿತವಾದ ಮತ್ತು ಶಿಸ್ತಿನ ಬಾಳುವೆಯ ಅಗತ್ಯ ಇಂಥ ಕೆಲಸವನ್ನು ಬಣ್ಣಿಸಿ ಭೂಮಿಯಲ್ಲಿ ಮತ್ತು ಸುತ್ತುಮುತ್ತಿನ ಜನಜೀವನದಲ್ಲಿ ಹೆಚ್ಚು ಆಸ್ಥೆ ವಹಿಸ ಬೇಕೆಂಬ ಮಾತನ್ನು ಆದಿವಾಸಿಗಳಿಗೆ ಕಲಿಸುತ್ತಾರೆ. ಈ ಕಾರ್ಯವನ್ನು ಸರಿಯಾಗಿ ಸಂಘಟಿಸಲಿಕ್ಕೆ ಆರು ಮಂದಿ ಶಿಕ್ಷಕರು ಅವರಿಗೆ ನೆರವಿಗಿರುತ್ತಾರೆ. ಅವರ ನೇತೃತ್ವದಲ್ಲಿ ಈ ಪಥಕವು ಅರಣ್ಯಮಧ್ಯದಲ್ಲಿರುವ ದೂರ ದೂರದ ಹಳ್ಳಿಗಳಿಗೆ ಮತ್ತು ಸದ್ಯ:ಕಾಲೀನ ಸಂಸ್ಕೃತಿಯಿಂದ ಸಿಡಿದುಹೋಗಿ ದೂರನಿಂತಿರುವ ಈ ಜನರಿಗೆ ಸುಸಂಸ್ಕೃತ ಜೀವನದ ಸಂದೇಶವನ್ನು ಮುಟ್ಟಿಸುವ ಕೆಲಸವನ್ನು ಮಾಡುವದು.

ಇತ್ತೀಚೆಗೆ ಈ ರಾಜ್ಯದೊಳಗಿನ ವಿದ್ಯಾರ್ಥಿವರ್ಗದಿಂದ ಹಳ್ಳಿಗಳ ಸೇವೆಯನ್ನು ಮಾಡುವ ಪ್ರಯತ್ನಗಳು ನಡೆದಿರುತ್ತವೆ. ಹೊಸತನದ ಜೀವನವನ್ನು ಸಾಗಿಸುವದಕ್ಕೆ ಅವರಿಗೆ ಪ್ರೋತ್ಸಾಹನೆಯನ್ನು ಕೊಡಲಾಗುತ್ತಿದೆ. ಇಂಥ ಪ್ರಯತ್ನಗಳು ಇನ್ನೂ ದೊಡ್ಡ ಪ್ರಮಾಣದಿಂದಲೂ ಹೆಚ್ಚು ವ್ಯಾಪಕದೃಷ್ಟಿಯಿಂದಲೂ ನಡೆಯ ಬೇಕಾದ ಅಗತ್ಯವದೆ. ಈ ಪ್ರಯತ್ನಗಳ ಫಲವಾಗಿ ವಿದ್ಯಾರ್ಥಿಗಳಲ್ಲಯೂ ಜನರಲ್ಲಿಯೂ ವಿದ್ಯಾಭ್ಯಾಸದ ಅರ್ಥವು ಬಾಳುವೆಯೊಡನೆ ನಿಕಟಸಂಪರ್ಕವುಳ್ಳುದು ಎಂಬ ಭಾವನೆಯು ಹುಟ್ಟಿ ಬರಬೇಕು. ಇಲ್ಲಿ ವಿವರಿಸಿದ ಕಾರ್ಯ ಯೋಜನೆಗಳು ಬೇರೆ ಶಾಲೆಗಳಲ್ಲಿಯೂ ಇಂಥ ಯೋಜನೆಗಳನ್ನು ಹೇಗೆ ಮಾಡಿ ಫಲಕಾರಿಯಾಗಿರ ಬೇಕೆಂಬುದಕ್ಕೆದಿಗ್ದರ್ಶನವಾಗಿರುತ್ತವೆ. ಅದಕ್ಕೆ ಬೇಕಾದ ಬಂಡವಾಳವು ಸಾಮಾನ್ಯ ವ್ಯವಹಾರಜ್ಞಾನ ಹಾಗೂ ಸೇವೆಯನ್ನು ಸಲ್ಲಿಸುವ ಶುದ್ಧಾಂತಃಕರಣ ಇವೇ ಆಗಿರುತ್ತದೆ.

● ವಿದ್ಯೆಯ ದಾನವೇ ಹೊರತು ಮಾರಾಟವಲ್ಲ

ಜಗತ್ತಿನಲ್ಲಿ ಪ್ರತಿಯೊಂದು ದೇಶದಲ್ಲಿ ಅನೇಕ ಪ್ರಣಾಲಿಗಳು—ಪದ್ಧತಿಗಳು ನಡೆದಿವೆ. ಆದರೆ, ಭಾರತದಲ್ಲಿಯೂ ಒಂದು ಪ್ರಣಾಲಿ ಇದೆ. ಭಾರತದಲ್ಲಿ ವಿದ್ಯಾದಾನವಾಗುತ್ತದೆ, ಅದು ಪವಿತ್ರವೆನಿಸುತ್ತದೆ. ವಿದ್ಯೆಯ ವ್ಯಾಪಾರವು ಭಾರತದಲ್ಲಿ ಆಗುವುದಿಲ್ಲ. ವಿದ್ಯೆಯ ಮಾರಾಟವು ಆಗುವದಿಲ್ಲ. ಆದರೆ, ಇಂದು ಪರಿಸ್ಥಿತಿ ಬದಲಾಗಿದೆ.

ಇಂದಿನ ಕಾಲದಲ್ಲಿ ಪ್ರತಿಯೊಬ್ಬ ಮಾನವನು ತಾನು ಪಡೆದಷ್ಟು ಶಿಕ್ಷಣವನ್ನು ಇತರರಿಗೂ ಕೊಡಬೇಕು ಎಂಬ ಭಾವನೆಯನ್ನು ಜಾಗ್ರತಗೊಳಿಸಬೇಕು.

—ಶೇ. ನಾನಾಭಾಯಿ ಭಟ್ಟ

ದುಡಿಮೆ

ಲೇಖಕರು :
ಶ್ರೀ. ಕೆ. ಬಿ. ತೇರಗಾಂವಕರ
ಪ್ರಿನ್ಸಿಪಾಲ, ಸ್ವಾತಂತ್ರ್ಯ ಜೀವನ
ಶಿಕ್ಷಣ ಕೇಂದ್ರ, ಧಾರವಾಡ

ಒಂದು ರಾಷ್ಟ್ರದ ಅಭ್ಯುದಯವು ಆ ರಾಷ್ಟ್ರದ ಹುಟ್ಟುವಳಿಯ ಮೇಲೆ ಅವಲಂಬಿಸಿರುವದೆನ್ನುವ ಮಾತು ಎಲ್ಲರಿಗೂ ಗೊತ್ತಿದೆಯಷ್ಟೇ ! ಆದರೆ ಆ ಬಗ್ಗೆ ಏನಾದರೂ ಮಾಡುವಂತೆ ಜನರನ್ನು ಮನವೊಲಿಸುವದರಲ್ಲಿ ಅಷ್ಟೊಂದು ಯಶಸ್ಸು ಸಿಗುತ್ತಿರುವದಿಲ್ಲವೆಂದು ದುರ್ದೈವದಿಂದ ಹೇಳಬೇಕಾಗುತ್ತದೆ. ಪ್ರತಿಯೊಬ್ಬನು ಆಬಗ್ಗೆ ವಿಶೇಷ ಆಸ್ಥೆ ತೋರಿಸುತ್ತಿರುವವನಂತೆ ನಟಿಸುತ್ತಾನೆ ಮತ್ತು ಪ್ರತ್ಯಕ್ಷ ಕೆಲಸವನ್ನು ಬೇರೆಯವನು ಕೈಕೊಳ್ಳಬೇಕೆಂದು ಅಪೇಕ್ಷಿಸುತ್ತಾನೆ. ಎಲ್ಲ ಸಂದರ್ಭಗಳಲ್ಲಿ ಹೆಚ್ಚಿನ ಕೆಲಸವನ್ನು ಎರಡನೆಯವನ ಮೇಲೆ ಹೊರಿಸಿ ಅವನು ಮಾಡಬೇಕೆನ್ನುವದರಲ್ಲಿ ಸರ್ವಾನುಮತವಿದ್ದುದು ಕಂಡು ಬರುತ್ತದೆ.

ಈ ಪ್ರಸಂಗದಲ್ಲಿ ಶಿಕ್ಷಕರಿಗೆ ದ್ವಿವಿಧ ಆಸ್ಥೆಯಿದೆ. ಎಲ್ಲ ಸಾಮಾಜಿಕ ಕಾರ್ಯಗಳು ಒಕ್ಕಲುತನ ಹಾಗು ಉದ್ಯೋಗಗಳನ್ನು ಅವಲಂಬಿಸಿರುವವು, ಕಟ್ಟಬಹುದಾದ ಸಾಲೆಗಳ ಕಟ್ಟಡಗಳ ಸಂಖ್ಯೆ ಅವುಗಳಿಗೆ ಒದಗಿಸಬಹುದಾದ ಸಲಕರಣೆ ಉಪಕರಣಗಳು ರಾಷ್ಟ್ರದ ಉರ್ಜಿತಾವಸ್ಥೆಯನ್ನು ಅವಲಂಬಿಸಿರುವವು. ಪುಸ್ತಕ ಹಾಗೂ ಇನ್ನಿತರ ಶಾಲೋಪಯೋಗಿ ಸಾಮಾನುಗಳಿಗಾಗಿ ಕೊಡಬೇಕಾದ ಸಾದಿಲವಾರದ ಹಣದ ಪ್ರಮಾಣವನ್ನು ಹೆಚ್ಚಿಸಲು ಹಣದ ಪೂರೈಕೆ ಇದ್ದರೆ ಮಾತ್ರ ಸಾಧ್ಯವಲ್ಲವೇ ? ನಮ್ಮದೇಶದ ಒಕ್ಕಲಿಗರು, ಕಾರಖಾನೆಗಳಲ್ಲಿ ಕೆಲಸಮಾಡುವವರು ಹಾಗು ಕಣಿಗಳಲ್ಲಿ ಕೆಲಸ ಮಾಡುವವರು. ಇವರೆಲ್ಲರ ಪರಿಶ್ರಮದ ಮುಖಾಂತರ ಆ ಹೆಚ್ಚಿನ ಹಣವು ಉಪಲಬ್ಧವಾಗುತ್ತದೆಯಲ್ಲದೆ ಶಿಕ್ಷಣದ ದುಡಿತದಿಂದಲ್ಲ. ಪ್ರತಿಯೊಬ್ಬ ಶಿಕ್ಷಕನಿಗೆ ಕೊಡಬೇಕಾದ ವಾರ್ಷಿಕ ಬಡತಿಯನ್ನು ಕೊಡಬೇಕಾದರೆ ಆ ಬಗ್ಗೆ ಬೇಕಾಗುವ ಹಣಕ್ಕಾಗಿ ಅನೇಕ ದುಡಿಮೆಗಾರರು ಹೆಚ್ಚು ಶ್ರಮಹಾಕಿ ತಮ್ಮ ತಮ್ಮ ಕೆಲಸವನ್ನು ಮಾಡಬೇಕಾಗುತ್ತದೆ. ನಮ್ಮ ಕಲ್ಯಾಣವು ನಿಜವಾಗಿ ಉತ್ಪಾದನೆ ಹೆಚ್ಚಾಗುವಂತೆ ಕೈಕೊಂಡ ಪ್ರಯತ್ನಗಳ ಯಶಸ್ಸಿನ ಮೇಲೆ ಇರುವದು; ಅದರಂತೆ ಸಾಲೆಗಳಲ್ಲಿ ಮಕ್ಕಳ ಕಲ್ಯಾಣಾಭಿವೃದ್ಧಿಗಳು ಕೂಡ ಆ ಪ್ರಯತ್ನಗಳನ್ನೇ ಅವಲಂಬಿಸಿರುವವು.

ರಾಷ್ಟ್ರದ ಉತ್ಪನ್ನವು ಹೆಚ್ಚುವದರ ಮೂಲಕ ಸಿಗುವ ಲಾಭವನ್ನು ದೊರಕಿಸುವಲ್ಲಿ ಶಿಕ್ಷಕನ ಸ್ಥಾನವು ಕೊನೆಯದಿದ್ದಾಗ್ಯೂ ಕೂಡ ರಾಷ್ಟ್ರದ ಸಂಪತ್ತಿನ ಕೀಲಿಕೈಯು ಅವನ ಕೈಯಲ್ಲಿಯೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಹಣದ ಬಗ್ಗೆ ಆಸೆ, ಉಪವಾಸಬೀಳಬಹದೆಂಬ ಅಂಜಿಕೆ, ದುಡಿತದಲ್ಲಿ ನಿಜವಾದ ಪ್ರೇಮ ಮತ್ತು ದುಡಿಯುವ ಚಟ ಇಲ್ಲವೆ ರೂಢಿ ಈ ನಾಲ್ಕು ಸಂಗತಿಗಳು ಜನರನ್ನು ಸತತ ಉದ್ಯೋಗದಲ್ಲಿ ತೊಡಗಿಸುವದಕ್ಕಾಗಿ ಪ್ರೋತ್ಸಾಹಕ ಪ್ರೇರಗಳಂತಿರುವವು. ನಿರ್ದಿಷ್ಟ ಕೂಲಿಯ ಪ್ರಮಾಣ ಹಾಗೂ ಪಗಾರದಲ್ಲಿ ನಿಶ್ಚಿತ ಸ್ಥೈರ್ಯಗಳಿರುವದರಿಂದ ಮೊದಲನೆಯ ಸಂಗತಿಯು ಮಾಯವಾಗುತ್ತದೆ. ಸಾಮಾಜಿಕ ಸಂರಕ್ಷಣೆಯನ್ನು ಕಾಯುವದು, ಉಪವಾಸದಿಂದ ಪ್ರಜೆಗಳು ಬಳಲದಂತೆ ಉಪಾಯಗಳನ್ನು ಕೈಕೊಳ್ಳುವದು ಪ್ರತಿಯೊಂದು ರಾಷ್ಟ್ರದ ಹಾಗೂ ಸಮಾಜದ ಕರ್ತವ್ಯವಿರುವದರಿಂದ ಉಪವಾಸದ ಅಂಜಿಕೆ ಕೂಡ ತುಸು ದೂರವೇ ಸರಿ. ಮಾಡಿದ್ದನ್ನೇ ಯಾವಾಗಲು ಮಾಡುತ್ತಲಿರಬೇಕಾದ ಔದ್ಯೋಗಿಕ ಕೆಲಸಗಳಲ್ಲಿ ಸಾಮಾನ್ಯವಾಗಿ ಯಾರಿಗೂ ಆ ಕೆಲಸಗಳ

ಬಗ್ಗೆ ಪ್ರೇಮವಿರಲಾರದು. ಹಾಗಾದರೆ ದುಡಿತವು ಒಂದು ಚಟ ಇಲ್ಲವೆ ರೂಢಿಯಾಗಿ ಮಾಡಿಕೊಂಡು ಹೆಚ್ಚು ಶ್ರಮವಹಿಸಿ ಕೆಲಸಮಾಡುವದರಿಂದಲೇ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿದೆ. ಮೂರು ವರ್ಷದ ಬುದ್ಧಿ ನೂರು ವರ್ಷಗಳವರೆಗೆ ಎಂಬ ನಾಣ್ಣುಡಿಯಂತೆ ಎಳೆಮಕ್ಕಳಲ್ಲಿ ಶ್ರಮವಹಿಸಿ ಕೆಲಸಮಾಡುವ ಚಟಗಳು ನೆಲೆಗೊಳ್ಳುವಂತೆ ಅವರಿಗೆ ಯೋಗ್ಯವಾದ ತರಬೇತಿಯನ್ನು ಕೊಡಬೇಕು ಈ ದೃಷ್ಟಿಯಿಂದ ಉತ್ಪಾದನೆಯು ಹೆಚ್ಚಾಗುವಂತೆ ಪ್ರಯತ್ನಗಳು ಶಾಲೆಗಳಲ್ಲಿ ಭರದಿಂದ ಸಾಗಬೇಕು. ಸೋಮಾರಿಗಳಾದ ಪ್ರೌಢರು ಕೆಲಸಕ್ಕೆ ಅಣಿಯಾಗುವಂತೆ ಅವರನ್ನು ಎಷ್ಟೇ ಹುರಿದುಂಬಿಸಿದರೂ ಆ ಪ್ರಯತ್ನಗಳು ಶಾಲೆಯಲ್ಲಿ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಆ ಬಗ್ಗೆ ಬೋಧಿಸುವ ಕ್ರಮಗಳನ್ನು ಸರಿಗಟ್ಟಲಾರವು. ಆ ಪ್ರಯತ್ನಗಳ ಫಲಗಳು ದೀರ್ಘಕಾಲೀನ ಮತ್ತು ಶಾಶ್ವತ ಹಾಗೂ ನಿಶ್ಚಿತ ರೂಪದವಿರುವದರಿಂದ ಶಾಲೆಗಳಲ್ಲಿ ನಡೆಯುವತ್ತಿರುವ ಬೋಧನಕ್ರಮಗಳಲ್ಲಿಯೇ ಆ ಪ್ರಕಾರದ ಮಾರ್ಪಾಟು ಅವಶ್ಯವೆಂದು ಬೇರೆ ಹೇಳಬೇಕಿಲ್ಲ.

ದುಡಿತದಲ್ಲಿ ಆಸ್ಥೆ ಅವಶ್ಯ—

ಶಾಲೆಗಳಲ್ಲಿ ಕಠೋರವಾದ ಹಳೇ ಪ್ರಕಾರದ ಶಿಸ್ತು ಹೋಗಿಬಿಟ್ಟಿದೆ; ಮಕ್ಕಳೂ ಸಾರಾಸಾರ ವಿಚಾರವಂತರೆಂದು ನಾವು ಈಗ ತಿಳಿಯುತ್ತಿರುವೆವು. ರೂಢಿ—ಯಾಂತ್ರಿಕ ರೀತಿಯಿಂದ ಸಾಗುತ್ತಿದ್ದ ರೂಢಿ—ಆವರ್ತನೆಗಳು ಹಾಗು ಯಾಂತ್ರಿಕವಾಗಿ ಸಾಗುತ್ತಿದ್ದ ಹಳೇ ಪದ್ಧತಿಯ ಬೋಧನಕ್ರಮಗಳು ಈಗಿನ ಶಿಕ್ಷಣಪ್ರಪಂಚದಲ್ಲಿ ಓಬಿರಾಯನ ಕಾಲದವುಗಳೆಂದು ಗಣಿಸಲಾಗಿ ತ್ಯಾಜ್ಯವಾಗಿರುವವು. ಮಕ್ಕಳಿಗೆ ಆಸ್ಥೆಯಿದ್ದರೆ ಮಾತ್ರ ಅವರು ಉತ್ತಮ ಕೆಲಸಮಾಡಬಲ್ಲರೆಂಬುದನ್ನು ಈಗ ನಾವು ಕಂಡುಕೊಂಡಿದ್ದೇವೆ. ಆದರೆ ಧ್ಯೇಯ ಹಾಗು ಅವುಗಳನ್ನು ಸಾಧಿಸಲು ಉಪಯೋಗಿಸಬಹುದಾದ ಸಾಧನಗಳ ಬಗ್ಗೆ ತಪ್ಪುತಿಳುವಳಿಕೆಯನ್ನು ಮಾಡಿಕೊಳ್ಳಕೂಡದು. ಮಕ್ಕಳು ಶ್ರಮವಹಿಸಿ ಕೆಲಸಮಾಡುವಂತೆ ಕೆಲಸದಲ್ಲಿ ಆಸ್ಥೆಯನ್ನು ಹುಟ್ಟಿಸಬೇಕಲ್ಲದೆ ಅವರು ತಮ್ಮ ಮನರಂಜನೆಗಾಗಿ ಅದರಲ್ಲಿ ವೇಳೆಯನ್ನು ತೊಡಗಿಸಿ ಆನಂದಪಡಬಲ್ಲರೆನ್ನುವದಕ್ಕಾಗಿ ಅಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಚಲಿತವಿರುವ ಆಧುನಿಕ ಬೋಧನಕ್ರಮದಲ್ಲಿ ಮಕ್ಕಳ ಆಸ್ಥೆಯ ಬಗ್ಗೆ ವಿಶೇಷ ಗಮನವನ್ನು ಕೊಡಲಾಗುತ್ತಿದೆ. ಬೋಧನ ಕ್ರಮದಲ್ಲಿ ಅನೇಕ ಮಾರ್ಪಾಡುಗಳು ಅವರ ಮನರಂಜನೆ ಹಾಗು ಆಸ್ಥೆ ಅಭಿರುಚಿಗಳ ಕೇಂದ್ರಗಳಿಗನುಸರಿಸಿ ಆಗುತ್ತಲಿರುವವು. ಈ ತರದ ಮಾರ್ಪಾಡುಗಳಿಗೂ ಗಾಂಧೀಜಿಯವರು ತಮ್ಮ ಜೀವನಶಿಕ್ಷಣದಲ್ಲಿ ಹಾಕಿಕೊಟ್ಟ ದುಡಿಮೆಯ ಮುಖಾಂತರ ಶಿಕ್ಷಣದ ಬೋಧನಕ್ರಮಕ್ಕೂ ಇರುವ ವ್ಯತ್ಯಾಸವನ್ನು ನಾವು ಕಾಣಬಹುದು. ಜೀವನಶಿಕ್ಷಣ ಶಾಲೆಗಳಲ್ಲಿ ದುಡಿತಕ್ಕೆ ಕೊಟ್ಟ ಮಹತ್ವವನ್ನು ರಾಷ್ಟ್ರದ ಏಳಿಗೆಯ ದೃಷ್ಟಿಯಿಂದ ಕಂಡುಕೊಳ್ಳಬಹುದು. ...

ಪ್ರತಿಯೊಂದು ಉದ್ಯೋಗದ ಕೆಲವೊಂದು ಭಾಗದಲ್ಲಿ ಶ್ರಮದಾಯಕ ದುಡಿಮೆಯು ಇದ್ದೇ ಇರುತ್ತದೆ. ಆಸ್ಥೆಯು ಯಾವಾಗಲು ಕೆಲಸಕ್ಕೆ ಉತ್ತೇಜಕವಾಗುತ್ತಿರುವದು ಕೂಡ ತಪ್ಪುವ ಸಮಯಗಳೂ ಬರುವದುಂಟು. ಪ್ರತಿಯೊಂದು ಹೊಸ ಕೆಲಸದ ಫಲದ ಪೂರ್ಣ ಪ್ರಾಪ್ತಿಗಾಗಿ ಕೆಲವೊಂದು ಸಮಯ ಶ್ರಮದಾಯಕ ದುಡಿಮೆಯನ್ನು ಮಾಡಲೇಬೇಕಾಗುವದು. ಅದೊಂದು ಅವಶ್ಯಕ ಕರ್ಮವೆಂದೇ ತಿಳಿಯಬೇಕಾಗುವದು. ಆರಂಭದ ಅವಶ್ಯಕ ತಾಂತ್ರಿಕ ಕೌಶಲ್ಯಗಳನ್ನು ಕಲಿತುಕೊಳ್ಳದಿದ್ದರೆ ಬೇಕಾದಷ್ಟು ಆಸ್ಥೆಯಿದ್ದರೂ ಆ ಕೆಲಸವನ್ನು ಯಶಸ್ವಿಯಾಗಿ ಸಾಗಿಸಲಿಕ್ಕಾಗುವದಿಲ್ಲ. ಅಂಥ ಪ್ರಸಂಗಗಳಲ್ಲಿ ಹೆಚ್ಚು ಶ್ರಮವಹಿಸಿ ಅದರ ಬೆನ್ನುಬಿಡದೆ ಕೆಲಸ ಮಾಡುವದರಿಂದ ಫಲಪ್ರಾಪ್ತಿಯಾಗುವದು. ಕೆಲವು ಬಾಲಕರು ಸ್ವಾಭಾವಿಕವಾಗಿ ಕಷ್ಟವಹಿಸಿ ಕೆಲಸ ಮಾಡುತ್ತ ಹೋಗುವರು ಹಾಗು ತಮ್ಮ ತೊಂದರೆಗಳನ್ನೂ ಬಂದ ಸಮಸ್ಯೆಗಳನ್ನೂ ಬಿಡಿಸಿಕೊಳ್ಳುವರು. ಅನೇಕಸಾರಿ ಆ ಕೆಲಸದಲ್ಲಿ ಕಷ್ಟಸಹಿಷ್ಣುತೆ ತಾಳ್ಮೆಗಳು ಬೆಳೆದುಬರುವಂತೆ ಹೊರಗಿನಿಂದ ಮಕ್ಕಳನ್ನು ಪ್ರೇರಿಸಬೇಕಾಗುತ್ತದೆ. ಆಧುನಿಕ ಬೋಧನಕ್ರಮದಲ್ಲಿ ಕೂಡ ಮಕ್ಕಳು ಕೆಲವು ವಿಶಿಷ್ಟ ಕೆಲಸಗಳನ್ನು ಮಾಡಲೇಬೇಕೆನ್ನುವ ಪ್ರಸಂಗಗಳೂ ಇರುವವು. ಅವುಗಳ ಅಗತ್ಯವನ್ನು ಅವರಿಗೆ ತಿಳಿಯಗೊಡದಿದ್ದರೆ ಕೇವಲ ಆಸ್ಥೆಯ

ಮೂಲಕ ಕೆಲಸಮಾಡುವವರು ಕೆಲಸಮಾಡುತ್ತಿರುವಾಗ ಏನಾದರೊಂದು ಸಮಸ್ಯೆ ಉದ್ಭವಿಸಿದ ಕೂಡಲೆ ಆ ಕೆಲಸದಲ್ಲಿ ಆಸ್ಥೆಯನ್ನು ಕಳೆದುಕೊಳ್ಳುವರು. ಈ ರೀತಿ ತರಬೇತಿಹೊಂದಿದ ಪೀಳಿಗೆಯು ಸಮಾಜದ ಹಿತದ ದೃಷ್ಟಿಯಿಂದ ನಿಷ್ಪ್ರಯೋಜಕವಾಗುವುದು.

ಆದ್ದರಿಂದ ಶಿಕ್ಷಕರ ಹೊಣೆಗಾರಿಕೆಯು ಬಲು ಹೆಚ್ಚಿನದಿದೆ. ವೈಯಕ್ತಿಕವಾಗಿ ಪ್ರತಿಯೊಬ್ಬ ಶಿಕ್ಷಕರಿಗೆ ತಮಗೆ ಬೇಕಾದ ಹಾಗು ಸರಿಯಾದ ಶೈಕ್ಷಣಿಕ ಉಪಕರಣ ಸಾಧನಗಳನ್ನು ಆರಿಸಿಕೊಳ್ಳುವ ಅನುಕೂಲತೆಗಳಿವೆ. ಅದರಂತೆ ತಮಗೆ ಸರಿಕಂಡಂತೆ ಬೋಧನಕ್ರಮಗಳನ್ನೂ ಅನುಸರಿಸಬಲ್ಲರು. ಈ ದೃಷ್ಟಿಯಿಂದ ಶಿಕ್ಷಕರಿಗೆ ಸ್ವಾತಂತ್ರ್ಯವಿದೆ. ಆದರೆ ಆ ಸ್ವಾತಂತ್ರ್ಯವನ್ನು ರಾಷ್ಟ್ರಕ್ಕೆ ಪೋಷಕವಾಗುವ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ದೇಶದಲ್ಲಿ ನಡೆಯುತ್ತಿರುವ 'ಹೆಚ್ಚು ಆಹಾರಧಾನ್ಯ ಬೆಳೆಯಿರಿ,' 'ರಾಷ್ಟ್ರದ ಉತ್ಪಾದನೆಯನ್ನು ಹೆಚ್ಚಿಸಿರಿ' ಮುಂತಾಗಿ ಸಾಗುತ್ತಿರುವ ಚಳುವಳಿಯಗೂಡ ಸಾಲೆಗಳಲ್ಲಿ ಹೆಚ್ಚಾಗಿ ಶ್ರಮವಹಿಸಿ ಉತ್ಪಾದಕ ಉದ್ಯೋಗದಲ್ಲಿ ದುಡಿಯಿರಿ, ರಾಷ್ಟ್ರದ ಉತ್ಪಾದನೆಗೆ ಸಕ್ರಿಯ ಸಹಾಯ ಸಲ್ಲಿಸಿರಿ, ಎನ್ನುವದೂ ಶಿಕ್ಷಣತಜ್ಞರ, ಶಿಕ್ಷಕರ ಹಾಗೂ ರಾಷ್ಟ್ರದ ಮುಂದಾಳುಗಳ ಮೊದಲ ಮಾತಾಗಬೇಕು. ಇಂದಿನ ಮಕ್ಕಳು ಮುಂದಿನ ಜನಾಂಗವೆನ್ನುವದನ್ನು ಮರೆಯಲಾಗದು. ಆದ್ದರಿಂದ ಎಳೆ ಮಕ್ಕಳಲ್ಲಿ ದುಡಿಮೆಯ ರೂಢಿಗಳು ಚೆನ್ನಾಗಿ ನೆಲೆಗೊಳ್ಳುವಂತೆ ಹಾಗು ಉತ್ಪಾದಕ ಉದ್ಯೋಗಗಳಲ್ಲಿ ಆಸ್ಥೆವಹಿಸಿ ಅದರಲ್ಲಿ ತೊಡಗುವಂತೆ ಸಾಲೆಯ ಕಾರ್ಯಕ್ರಮಗಳನ್ನು ರಚಿಸಬೇಕು.

● ● ● **ಉದ್ಯೋಗದ ಮುಖಾಂತರ ಶಿಕ್ಷಕನು ಕಲಾಕಾರನು.**

ಉದ್ಯೋಗದ ಮುಖಾಂತರ ನಡೆಯುವ ಶಾಲೆಯು ಬಾಲಕನ ಸ್ವ-ಪ್ರವೃತ್ತಿಯನ್ನು ಶಿಕ್ಷಣದ ಮೂಲ ಸಿದ್ಧಾಂತವನ್ನಾಗಿ ಒಪ್ಪುತ್ತದೆ. ಇದರಿಂದ ಶಿಕ್ಷಣಶಾಸ್ತ್ರದ ವೈಜ್ಞಾನಿಕ ಭೂಮಿಕೆಯ ಮೂಲ್ಯವು ಸ್ವಲ್ಪ ಅಂಶದಲ್ಲಿ ಘಟಿಸುವದು (ದೊರೆಯುವುದು) ಎಂಬದು ನಿಜ. ಆದರೆ ಈ ಹೊಸ ಯೋಜನೆಯಲ್ಲಿ ಶಿಕ್ಷಕನು ಕಲಾಕಾರನಿರದಿದ್ದರೂ ನಡೆಯುವುದೆಂಬ ಮಾತನ್ನು ಒಪ್ಪಿಕೊಂಡರೂ ಇವನು ಈ ಯೋಜನೆಯಲ್ಲಿ ಹೆಚ್ಚು ಕಲಾಕಾರನಾಗುವದು ಅವಶ್ಯವಿದೆ. ಬಾಲಕರಿಗೆ ತಿಳಿಯದಂತೆ--ಅವರ ಮೇಲೆ ಪ್ರಭಾವವನ್ನು ಹಾಕಬೇಕಾಗುತ್ತದೆ. ಈ ಯೋಜನೆಯಲ್ಲಿ ಶಿಕ್ಷಕನು ಯಾವ ಭಾಗವನ್ನು ವಹಿಸುತ್ತಾನೆಂಬುದರ ಕಲ್ಪನೆ ಕೂಡ ಬಾಲಕರಿಗೆ ಬರದಂತೆ ನಡೆಯಬೇಕಾಗುತ್ತದೆ. ಅದಕ್ಕಾಗಿ ಅವನು ಉಚ್ಚ ಕೋಟಿಯ ಕಲಾಕಾರನಾಗಬೇಕು.

—ಗಸ್ಪಾವಸ್ಕೋ ಎನಶನ್.

ಪುಸ್ತಕ ವಿಮರ್ಶೆ

೧. ತಕಲಿಯಿಂದ ನೂಲುವದೆಂತು

ಲೇಖಕರು: **ಸತ್ಯನ್**
ಅನುವಾದಕರು: **ಶ್ರೀ. ರಾ. ಸಾವಕಾರ**

ಪುಟ ೩೬ ಬೆಲೆ ೦—೬—೦

'ಮೂರ್ತಿ ಕಿರಿದಾದರೂ ಕೀರ್ತಿ ಹಿರಿದು' ಎಂಬ ಮಾತು ಈ ಕಿರಿಹೊತ್ತಿಗೆಗೆ ಅನ್ವಯಿಸುತ್ತದೆ. ಚೆನ್ನಾಗಿಯೂ ವೇಗವಾಗಿಯೂ ತಕಲಿಯಿಂದ ನೂಲಬೇಕೆನ್ನುವವರಿಗೆ ಇದು ಮಾರ್ಗದರ್ಶಿಯಾಗಿದೆ. ನೂಲುವ ನೇಯುವ ಶಿಕ್ಷಣದಲ್ಲಿ ತೊಡಗಿಸಿದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಈ ಪುಸ್ತಿಕೆಯು ಕುಂಬಾ ಉಪಯುಕ್ತವಿದೆ.

ಶ್ರೀ. ಸಾವಕಾರರು ಉತ್ತಮ ಅನುವಾದಕರೆನ್ನಲು ಈ ಚಿಕ್ಕ ಕೃತಿಯೇ ಸಾಕ್ಷಿ.

ಸಾಲೆ-ಕಾಲೇಜುಗಳ ವಾಚನಾಲಯಗಳಿಗೆ ಈ ಪುಸ್ತಿಕೆಯನ್ನು ಉಪಯೋಗಿಸಬಹುದೆಂದು ಸಿಫಾರಸು ಮಾಡುತ್ತೇನೆ.

* * *

೨. ವಸ್ತ್ರಸ್ವಾವಲಂಬನ ಕೈಪಿಡಿ

ಲೇಖಕರು: **ಕೃಷ್ಣದಾಸ ಗಾಂಧಿ**
ಅನುವಾದಕರು: **ಶ್ರೀ. ರಾ. ಸಾವಕಾರ**

ಪುಟ ೧೦೨ ಬೆಲೆ: ೧—೪—೦

ಈ ಪುಸ್ತಕದಲ್ಲಿ ಹತ್ತಿಯಿಂದ ಬಟ್ಟೆಯ ವರೆಗೆ ಅಡಕವಾದ ಎಲ್ಲ ಉಸಚಟುವಟಿಕೆಗಳ ಸಾಮಾನ್ಯ ಪರಿಚಯವನ್ನು ಪ್ರಶ್ನೋತ್ತರಗಳ ರೂಪದಲ್ಲಿ ಕೊಡಲಾಗಿದೆ. ಉತ್ತರಗಳು ಸಶಾಸ್ತ್ರೀಯವಾಗಿದ್ದು ಓದುಗರಲ್ಲಿ ವೈಜ್ಞಾನಿಕ ದೃಷ್ಟಿ ಬರುವಂತೆ ಪ್ರಯತ್ನಿಸಲಾಗಿದೆ.

ಪುಸ್ತಕವು ಇನ್ನೂ ಹೆಚ್ಚು ಆಕರ್ಷಕಗಳಿಂದೊಡಗೂಡಿದ್ದು 'ಗಾಯಿಡ' (Guide) ರೂಪದಿಂದಿರದಿದ್ದರೆ ನೂಲುವ ಹಾಗೂ ನೇಯುವ ಶಿಕ್ಷಣ ಕಾರ್ಯದಲ್ಲಿ ತೊಡಗಿದವರಿಗೆ ಹೆಚ್ಚು ಉಪಯುಕ್ತವಾಗುತ್ತಿತ್ತು. ನಾಚನಾಲಯಗಳಲ್ಲಿ ಈ ಪುಸ್ತಕವನ್ನು ಉಪಯೋಗಿಸಲಡ್ಡಿಯಿಲ್ಲ.

೩. ನೂಲುವ ಗಣಿತ

ಲೇಖಕರು: **ಕೃಷ್ಣದಾಸ ಗಾಂಧಿ**
ಅನುವಾದಕರು: **ಶ್ರೀ. ರಾ. ಸಾವಕಾರ**

ಪುಟ ೭೨ ಬೆಲೆ: ೧—೦—೦

ಮೂಲೋದ್ಯೋಗದ ಮುಖಾಂತರ ಸಮುನಾಯ ಗಣಿತಜ್ಞಾನವನ್ನು ಹೇಗೆ ಕೊಡಹುದೆಂಬುದನ್ನು ಈ ಪುಸ್ತಕದಿಂದ ಕಂಡುಕೊಳ್ಳಬಹುದು.

ಪರಿಶಿಷ್ಟದಲ್ಲಿ ಕೊಟ್ಟ ಸೂತ್ರಗಳು ಸಮೀಕರಣ ರೂಪದಲ್ಲಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಈ ದಿಶೆಯಲ್ಲಿ ಡಾ. ಪಟ್ಟಾಭಿ ಸೀತಾರಾಮಯ್ಯನವರು ಬರೆದ "I too have spun" ಎಂಬ ಗ್ರಂಥವು ಮಾರ್ದರ್ಶಿಯಾಗಿದೆ.

ಮೂಲಶಿಕ್ಷಣ ಸಾಲೆಗಳಲ್ಲಿ ಕೆಲಸಮಾಡುವ ಶಿಕ್ಷಕರಿಗೆ ಇದು ಉಪಯುಕ್ತವೆನಿಸಬಹುದು. ವಾಚನಾಲಯಗಳಿಗೆ ಈ ಪುಸ್ತಕವನ್ನು ಉಪಯೋಗಿಸಬಹುದು.

* *

೪. ವಸ್ತ್ರಸ್ವಾವಲಂಬನ ಮಾರ್ಗದರ್ಶಿಕೆ

ಲೇಖಕರು: **ಕೃಷ್ಣದಾಸ ಗಾಂಧಿ**
ಅನುವಾದಕರು: **ಶ್ರೀ. ರಾ. ಸಾವಕಾರ**

ಪುಟ ೬೦ ಬೆಲೆ ೦—೧೦—೦

ನೂಲುವ ಕ್ರಿಯೆಗಳಲ್ಲಿ ಅಡಕವಾದ ಎಲ್ಲ ಉಪಚಟುವಟಿಕೆಗಳ ಹಾಗೂ ಗಂಜಿಯೂಡುವದು, ಹುರಿ ಹಾಕುವದು ಮೊದಲಾದವುಗಳ ಬಗ್ಗೆ ಚರ್ಚಿಸಲಾಗಿದೆ. ಅನುವಾದದಲ್ಲಿ ಪಳಗಿದ ಕೈ ಶ್ರೀ. ಸಾವಕಾರರದು. ನೂಲುವ ನೇಯುವ ಕೇಂದ್ರಗಳಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಇದು ಉಪಯುಕ್ತವಾಗಿರುತ್ತದೆ.

ವಾಚನಾಲಯಗಳಿಗೆ ಈ ಪುಸ್ತಕವನ್ನು ಉಪಯೋಗಿಸಬಹುದು.

೫. ಚರಖಾ ಸಂಘದ ಕಾರ್ಯಕ್ರಮ

ಲೇಖಕರು: **ಕೃಷ್ಣದಾಸ ಗಾಂಧಿ**
ಪ್ರಕಾಶಕರು: **ರಾ. ವೆ. ವಡವಿ**

ಪುಟ ೪೨ **ಬೆಲೆ: ೦—೭—೦**

ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳಲ್ಲಿ ಖಾದಿಗೆ ಮಹತ್ವವಾದ ಸ್ಥಾನವಿದೆ. ಬಾಪೂ ಅವರ ಈ ರಚನಾತ್ಮಕ ಕಾರ್ಯವನ್ನು ಕೃತಿಗಿಳಿಸಿದ ಶ್ರೇಯಸ್ಸು ಚರಖಾ ಸಂಘದ್ದೂ, ಚರಖಾ ಸಂಘದ ವಿವರವಾದ ಕಾರ್ಯಕ್ರಮವನ್ನು, ಕಾರ್ಯಕ್ಷೇತ್ರವನ್ನು ಇದರಲ್ಲಿ ಕೊಡ ಲಾಗಿದೆ. ಮೂಲಶಿಕ್ಷಣಕ್ಕೆ "ಗಾಂಧಿಜೀಯವರ ಮುದಿ ಹುಚ್ಚು" ಎಂದು ಉಪವಾಸ ಮಾಡಿದಂತೆ ಖಾದಿಗೂ ಅದೇ ಉಡುಗರೇ ಕೊಡುವ ಮಹನೀಯರು ಇಂದಿಗೂ ಇದ್ದಾರೆ. ಅಂಥವರು ಅವಶ್ಯವಾಗಿ ಈ ಪುಸ್ತಿಕೆ ಯನ್ನೋದಿ ಚರಖಾ ಸಂಘ ಹಾಗೂ ಖಾದಿಗಳ ಬಗ್ಗೆ ತಮಗಿದ್ದ ಭ್ರಮೆಯನ್ನು ನಿರಸನ ಮಾಡಿಕೊಳ್ಳಲಿ.

ವಾಚನಾಲಯಗಳಿಗೆ ಈ ಪುಸ್ತಕವನ್ನು ಮಂಜೂರಿ ಮಾಡಬಹುದು.

* * * * *

೬. ನೇಕಾರಿಕೆ

ಲೇಖಕರು: **ದತ್ತೋಬಾ ದಾಸ್ತಾನೆ**
ಅನುವಾದಕರು: **ಶ್ರೀ. ರಾ. ಸಾವಕಾರ**

ಪುಟ ೪೯೯ **ಬೆಲೆ: ೫—೦—೦**

ನೇಯ್ಗೆಯ ಬಗ್ಗೆ ಕನ್ನಡದಲ್ಲಿ ಇಂತಹದೊಂದು ಪುಸ್ತಕದ ಅವಶ್ಯಕತೆ ತುಂಬಾ ಇತ್ತು. ಪೂಜ್ಯ ಬಾಪೂ ಅವರ ಪಟ್ಟ ಶಿಷ್ಯರಾದ ವಿನೋಬಾ ಅವರು ಪ್ರಸ್ತಾವನೆ ಯಲ್ಲಿ ಹೇಳಿದಂತೆ ದೇಶೀಯ ಭಾಷೆಗಳಲ್ಲಿ ಈ ಪುಸ್ತ ಕವು ಮೊದಲಿನದಿದ್ದಂತೆ ಅಂತಹ ಪರಿಸ್ಥಿತಿಯಲ್ಲಿ ಕರ್ನಾ-ಟಕ ಚರಖಾಸಂಘವು ಅದನ್ನು ಕನ್ನಡದಲ್ಲಿ ಪರಿವರ್ತಿಸಿ ಕನ್ನಡಸಾಹಿತ್ಯಕ್ಕೆ ಮಹದುಪಕಾರಮಾಡಿದೆ.

ಇವರ ಬೆನ್ನ ಹಿಂದೆಯೇ ಶ್ರೀ. ಮೇಲಗಿರಿಯವರ 'ಕೈನೇಕಾರಿಕೆ' ಎಂಬ ಸ್ವತಂತ್ರ ಗ್ರಂಥವು ಬೆಳಕಿಗೆ ಬಂದದ್ದು ಈ ದಿಶೆಯಲ್ಲಿ ಕನ್ನಡಿಗರೂ ಮುಂದಡಿಯಿಡು-ತ್ತಿದ್ದಾರೆಂದು ಅಭಿಮಾನದಿಂದ ಹೇಳಬಹುದು.

ಈ ಪುಸ್ತಕದ ಪ್ರಾರಂಭದಲ್ಲಿ ಶ್ರೀ ವಡವಿಯವರ ಹೇಳಿದಂತೆ ನೇಕಾರಿಕೆಯ ಶಾಸ್ತ್ರಕ್ಕೆ ಸಂಬಧಿಸಿದೆ ಶಬ್ದ ಗಳಲ್ಲಿ ಏಕಸೂತ್ರತೆಯನ್ನು ತರುವದು ತೀರ ಅವಶ್ಯವಿದೆ.

ಕನ್ನಡ ತರಬೇತಿ ಸಂಸ್ಥೆಗಳಲ್ಲಿ ಶಿಕ್ಷಣಪಡೆಯುತ್ತಿರುವ ಶಿಕ್ಷಕ ವಿದ್ಯಾರ್ಥಿಗಳಿಗೂ, ವಸ್ತ್ರಸ್ವಾವಲಂಬಿಗಳಿಗೂ ಉದ್ಯಮ ಶಿಕ್ಷಕರಿಗೂ ಈ ಪುಸ್ತಕವು ಉಪಯುಕ್ತವಾಗಿದೆ.

ಇದನ್ನು ವಾಚನಾಲಯಗಳಿಗೆ ಮಂಜೂರಿಮಾಡ ಬಹುದು.

* * * * *

೭. ಖಾದಿದರ್ಶನ

ಬರೆದವರು:— **ರಾ. ವೆ. ವಡವಿ**

ಪುಟ—೬೦ **ಬೆಲೆ: ೦—೧೨—೦**

ಲೇಖಕರು ವಿಷಯ ಪ್ರವೇಶದಲ್ಲಿ ಹೇಳಿದಂತೆ ಈ ಪುಸ್ತಕದಲ್ಲಿ ಹತ್ತಿಯ ಹುಟ್ಟುಪಳಿಯಿಂದ ಮೊದಲು ಮಾಡಿ ನೂಲುವ ಕ್ರಿಯೆಗಳು ಪೂರ್ಣವಾಗುವ ವರೆಗೆ ಎಲ್ಲ ಕ್ರಿಯೆಗಳ ಮಾಹಿತಿಯನ್ನು ಕೊಟ್ಟಿದ್ದಾರೆ. ಈ ಮಾಹಿತಿಯು ವಿವರವಾಗಿರದೆ ಸೂತ್ರರೂಪವಾಗಿದೆ.

ಶ್ರೀ. ವಡವಿಯವರು ಖಾದಿವಿದ್ಯಾಲಯದಲ್ಲಿ ಅಧ್ಯಾ ಪಕರಾಗಿ ದುಡಿದವರು. ಆ ಸ್ವಾನುಭವವೇ ಈ ಹೊತ್ತಿ ಗೆಯ ರೂಪದಿಂದ ಹೊರಬಂದಿದೆ. ಆದುದರಿಂದ ಈ ಪುಸ್ತಕವು ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗು ವದರಲ್ಲಿ ಸಂಶಯವಿಲ್ಲ.

ಪುಸ್ತಕದಲ್ಲಿ ಆಕೃತಿಗಳನ್ನು ಕೊಟ್ಟಿದ್ದರೆ ವಿಷಯ ನಿರೂಪಣೆಗೆ ಹೆಚ್ಚು ಸಹಕಾರಿಯಾಗುತ್ತಿತ್ತು.

ಪುಸ್ತಕದಲ್ಲಿ ಅನೇಕ ಅಚ್ಚಿನ ದೋಷಗಳು, ತಪ್ಪು ಶಬ್ದ ಉಪಯೋಗಗಳು, ಅರ್ಥಗೊಂದಲವಾಗುವ ಪ್ರಸಂಗ ಗಳು ಇವೆ.

ಉದಾ:—

೧ ಪುಟ–೫ ಸ್ವಲ್ಪ ಹೊತ್ತು ಹಾಕಬೇಕು; ಸಣ್ಣ ನೂಲು

೨ ಪುಟ–೬ ಎತ್ತರವಾಗಿಯಾಗಲಿ ಕೆರಿದಾಗಿಯಾಗಲಿ

೩ ಪುಟ–೭ ಇವುಗಳಲ್ಲಿ.....ಆದರೆ ಕೆಲಸವು ಕಡಿಮೆಯಾಗುತ್ತದೆ.

ಳ ಪುಟ–೨೨ ಸುತ್ತಳವು— ಇದು ಒಂದು ಘೂಟು ಉದ್ದ,

ಶ ಪುಟ–೩೦ ಕೋಷ್ಟಕ; ಕೊಟ್ಟದ್ದು ಕೊಷ್ಟಕವಲ್ಲ, (Table) ಸೂತ್ರವಾಗಿರುತ್ತದೆ (formula)

ಲೇಖಕರು ಪಾರಿಭಾಷಿಕ ಶಬ್ದಗಳ ಬಗ್ಗೆ ತುಂಬಾ ಶ್ರಮಿಸಿದ್ದು ಶಬ್ದಗಳ ಆಯ್ಕೆಯಲ್ಲಿ ಕನ್ನಡತನ ಕಂಡು ಬರುತ್ತದೆ.

ಬೇರೆ ಬೇರೆ ಪುಸ್ತಗಳಿಂದ ಕಲೆಹಾಕಿದ ಅಂಕೆ ಸಂಖ್ಯೆಗಳು ತೀರಾ ಉಪಯುಕ್ತವಿದ್ದು ಅವರಿಂದ ಇಂಥ ಅನೇಕ ಹೊತ್ತಿಗೆಗಳು ಬೆಳಕಿಗೆ ಬರಲೆಂದು ಹಾರೈಸುವೆ.

ವಾಚನಾಲಯಗಳಲ್ಲಿ ಈ ಪುಸ್ತಕವನ್ನು ಪ್ರಯೋಗಿಬಹುದು.

ಚರಖಾ ಸಂಘದ ಹೊಸರೂಪು

ಲೇಖಕರು: **ಕೃಷ್ಣದಾಸ ಜಾಜೂ**

ಅನುವಾದಕರು: **ಶ್ರೀ. ರಾ. ಸಾವಕಾರ**

ಪುಟ ೧೭೩ **ಬೆಲೆ: ೧—೪—೦**

ಮಾ|| ಗಾಂಧಿಯವರು ಆಗಾಖಾನರ ಅರಮನೆಯಿಂದ ಬಿಡುಗಡೆಹೊಂದಿ ಹೊರಬಂದ ಬಳಿಕ ಚರಖಾಸಂಘದ ಕಾರ್ಯಕರ್ತರೊಡನೆ ಒಂದು ವಾರದ ವರೆಗೆ ನಡೆಸಿದ ಚರ್ಚೆಯ ಪರಿಣಾಮವಾಗಿ ಅವರು ಖಾದಿಗೆ ಕೊಟ್ಟ ಹೊಸ ಪರಿಷ್ಕರಣವು ಈ ಪುಸ್ತಕದಲ್ಲಿ ಹುದುಗಿಕೊಂಡಿದೆ.

ಈ ಪುಸ್ತಕವನ್ನೋದುವದರಿಂದ ಓದುಗರಿಗೆ ಚರಖಾ ಸಂಘದ ಗುರಿ ಹಾಗೂ ಹೊಸಕಾರ್ಯ ಪದ್ಧತಿಗಳ ಸಂಪೂರ್ಣ ಪರಿಚಯವಾಗುವದು.

ವಾಚನಾಲಯಗಳ ಉಪಯೋಗಕ್ಕೆ ಈ ಪುಸ್ತಕವನ್ನು ಉಪಯೋಗಿಸಬಹುದು.

—ಮಾನೇಶ್ವರ ನಾಯಿಕ

● ● ● ಶಿಕ್ಷಕನ ಸ್ಥಾನಮಾನ.

ಸದ್ಯಕ್ಕೆ ಶಿಕ್ಷಕನ ಸ್ಥಾನ–ಮಾನಗಳು ಸಮಾಜದಲ್ಲಿ ಸರಿಯಾಗಿ ಇರುವದಿಲ್ಲ. ಇವರಲ್ಲಿ ಪರಿವರ್ತನೆಯು ಅವಶ್ಯವಾದುದು. ಈ ಅವಶ್ಯ ಪರಿವರ್ತನೆಯಾದಾಗಲೇ ಶಿಕ್ಷಕನು ಸಮಾಜದಲ್ಲಿ ಪವಿತ್ರ ಮತ್ತು ಉಚ್ಚಸ್ಥಾನಕ್ಕೆ ಯೋಗ್ಯನಾಗಿ ಸರ್ವರ ವಂದನೆಗೆ ಪಾತ್ರನಾಗುವನು. ಭಾರತದ ಹಳ್ಳಿಗಳಲ್ಲಿ ಕ್ರಾಂತಿಯನ್ನು ಉಂಟುಮಾಡಿ, ಅವು ಆದರ್ಶವಾಗುವಂತೆ ಮಾಡಿದಲ್ಲಿ ಮಾತ್ರ ಶಿಕ್ಷಕನು ಭಾರತ ಪ್ರಜೆಗಳ ನಿಜವಾದ ವಿಭೂತಿಯಾಗುವನು. ನಿಜವಾದ ಭಾರತದ ಪ್ರಕಟನೆಯು ಇದರಲ್ಲಿಯೇ ಇದೆ, ಭಾರತದ ಬೆಳಕು ಶಿಕ್ಷಕನನ್ನು ಅವಲಂಬಿಸಿದೆ.

—ಶಂಕರಲಾಲ ರಾವಳ

ಸಂಶೋಧನ ಕಾರ್ಯದಲ್ಲಿ ತೊಡಗಿದ ಶಿಕ್ಷಕ-ಶಿಕ್ಷಕಿಯರು

ನಾನು ಅತ್ತಿತ್ತ ಪ್ರವಾಸವನ್ನೂ ಕೈಕೊಂಡಾಗಲೆಲ್ಲ ವಿಶಾಲವಾದ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನದಲ್ಲಿ ಮಗರಾದ ಶಿಕ್ಷಕ ಶಿಕ್ಷಕಿಯರ ಕಡೆಗೇ ನನ್ನ ಲಕ್ಷವು ಹೋಗುತ್ತದೆ. ಇಂಥ ಶಿಕ್ಷಕಶಿಕ್ಷಕಿಯರು ಕ್ಲಾಸಿನಲ್ಲಿ ಕಲಿಸುತ್ತಿರುವ ಪದ್ಧತಿಗಳ ಇಲ್ಲವೆ ರೂಢಿಗಳ ಗುಣಾವಗುಣಗಳನ್ನು ಪ್ರಮಾಣಿಸಿ ನೋಡಿ ಬೇಡವೆಂದು ಕಂಡು ಬಂದಲ್ಲಿ ಆಂಥವುಗಳನ್ನು ಬದಲಾಯಿಸಿಯೇ ಬಿಡುತ್ತಾರೆ ಇಂಥವರ ಕೂಡ ಸಂಭಾಷಣ ಮಾಡುವದರಿಂದಲೂ ಕೆಲಸಮಾಡುವದರಿಂದಲೂ ನನಗೆ ಒಳ್ಳೇ ಉತ್ಸಾಹವು ಬರುತ್ತದೆ ಇವರು ನಿಜವಾಗಿ ಉತ್ಪಾದಕ ಶಕ್ತಿಯೆನ್ನಬಹುದು ಶಾಸ್ತ್ರಬದ್ಧವಾಗಿ ಕೆಲಸಮಾಡುವವರೂ ಇರುವರೆಂದು ನನಗೆ ಹೆಳಿಯುವದೆ ಹೇಗುವದಿಲ್ಲ. ಅವರಲ್ಲಿ ಹುದುಗಿಕೊಂಡಿರುವ ಉತ್ಪಾದಕಶಕ್ತಿಯು ಅವರನ್ನು ಹೊಸ ಹೊಸ ವಿಚಾರಗಳತ್ತ ಎಳೆಯುತ್ತದೆ ಮತ್ತು ಇವರಲ್ಲಿ ನೆಲಸಿದ ತರ್ಕಶುದ್ಧ ಸಂಶೋಧನ ವೃತ್ತಿಯು ಆ ಹೊಸ ವಿಚಾರಗಳನ್ನು ಗಟ್ಟಿಗೆ ಹಚ್ಚುತ್ತದೆ.

ಇದರ ಸ್ಪಷ್ಟೀಕರಣದ ಬಗೆಗೆ ಒಂದು ಉದಾಹರಣೆಯನ್ನು ಇಲ್ಲಿ ಕೂಡ ಬಯಸುತ್ತೇನೆ. ಈಗ ನಾನು ಮಿಚಿಗಾನ ಪಟ್ಟಣದಲ್ಲಿರುವ ಮಾಧ್ಯಮಿಕ ಶಾಲೆಗಳಲ್ಲಿ ಸಾಮಾಜಿಕ ವಿಷಯಗಳನ್ನು ಕಲಿಸುವ ಶಿಕ್ಷಕ-ಶಿಕ್ಷಕಿಯರಿಗೂಡ ಕೆಲಸ ಮಾಡುತ್ತಿದ್ದೇನೆ. ಅನ್ಯಮಾರ್ಗಗಳಿಂದಲ್ಲವೆ ಐತಿಹಾಸಿಕ ಪುರುಷರ ಚರಿತ್ರೆಗಳ ಮುಖಾಂತರವೇ ಇತಿಹಾಸ ವಿಷಯವನ್ನು ಕಲಿಸುತ್ತ ಹೋದರೆ ಅಮೇರಿಕದ ಇತಿಹಾಸವು ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನೈತಿಕ ಸುಟ್ಟವನ್ನು ಎತ್ತರಿಸುವದೆಂದು ಶಿಕ್ಷಕಶಿಕ್ಷಕಿಯರೆಲ್ಲರ ಗ್ರಹಿಕೆಯಾಗಿತ್ತು. ಜಾರ್ಜ ವಾಶಿಂಗ್ಟನ್ನನಂಥವರ ಚರಿತ್ರವನ್ನು ಮಕ್ಕಳು ಕಲಿತರೆ ಅವನಂತೆ ತಾವೂ ಆಗಲಿಕ್ಕೆ ಪ್ರಯತ್ನಿಸುವದೇ ಅವರ ಮತ. ಅವರು ತಮ್ಮಗೂಡ ಈ ಪ್ರಯೋಗವಲ್ಲಿ ಕೆಲಸ ಮಾಡಿ ನೋಡಲು ನನ್ನ ಸಹಕಾರವನ್ನು ಕೋರಿದರು. ಯಾಕಂದರೆ ಮಕ್ಕಳು ಅಮೇರಿಕದ ಐತಿಹಾಸಿಕ ಪುರುಷರ ವಿಷಯಕ್ಕೆ ಕಲಿಯುವರು ಮತ್ತು ತಾವೂ ಅವರಂತೆ ವರ್ತಿಸುವಮ ಇವೆರಡರಲ್ಲಿರುವ ಪರಸ್ಪರ ಸಂಬಂಧದ ಬಗೆಗೆ ಪ್ರತ್ಯಕ್ಷ ಆಧಾರಗಳು ಇಲ್ಲವೆ ಪ್ರಯಾಣಗಳು ಸಿಗಬಹುದೋ ಹೇಗೆ ಎಂಬದನ್ನು ಕೂಲಂಕಷವಾಗಿ ನೋಡುವದೇ ಅವರ ನಿರ್ಧಾರವಾಗಿತ್ತು.

ಈ ನಿರ್ಧಾರದ ಪರಿಣಾಮದಿಂದಾಗಿ ಅದೆಷ್ಟೋ ಪುಸ್ತಕಗಳನ್ನು ಓದಬೇಕಾಗಿದೆ ಮತ್ತು ಎಷ್ಟೋ ಸಂಶೋಧನಗಳನ್ನು ಕೈಕೊಳ್ಳಬೇಕಾಗಿದೆ. ಅಮೇರಿಕದ ಸುಪ್ರಸಿದ್ಧ ಪುರುಷರ ಚರಿತ್ರಗಳು ಎಷ್ಟರ ಮಟ್ಟಿಗೆ ಮಕ್ಕಳ ಮನಸಿನ ಮೇಲೆ

(ಕೋಲಂಬಿಯಾ ವಿಶ್ವವಿದ್ಯಾಲಯಕ್ಕೆ ಹೊಂದಿದ ಶಿಕ್ಷಕಶಿಕ್ಷಕಿಯರ ಟ್ರೇನಿಂಗ ಕಾಲೇಜದ ಒಂದುಆಂಗವಾಗಿದ್ದ "ಹೊರೇಸ ಮ್ಯಾನ್ನ ಲಿಂಕನ್" ಎಂಬ ಶೈಕ್ಷಣಿಕ ಪ್ರಯೋಗಾಲಯದ ಒಬ್ಬ ಸುಪ್ರಸಿದ್ಧ ಮೆಂಬರರು ಇವರಾಗಿದ್ದಾರೆ. ಇವರು ಈ ಲೇಖನದಲ್ಲಿ ಆ ಪ್ರಯೋಗ ಶಾಲೆಯಲ್ಲಿ ಶಿಕ್ಷಕಶಿಕ್ಷಕಿಯರು ತಮ್ಮ ವಿಚಾರಗಳನ್ನು ತರ್ಕಬದ್ಧವಾಗಿ ಪ್ರಯೋಗ ಮಾಡಿ ಹೇಗೆ ನೂತನ ಹೊಸ ತತ್ವಗಳನ್ನು ಬೆಳಕಿಗೆ ತರುವರೆಂಬ ಬಗೆಗೆ ಬರೆದದ್ದಾಗಿದೆ.)

ಬರೆದವರು:
ಸ್ಟೀಫನ್ ಎಮ್. ಕೋರೇ

ಕನ್ನಡಿಸಿದವರು:
ಶ್ರೀ. ಬ. ಮು. ಶಿಂತ್ರಿ
ರಿಟಾಯರ್ಡ ಅಸಿಸ್ಟಂಟಎಜ್ಯುಕೇಶನಲ್ ಇನಸ್ಪೆಕ್ಟರ. ದಕ್ಷಿಣ ಭಾಗ. ಧಾರವಾಡ.

ಪರಿಣಾಮವಾಗಿದವು ಮತ್ತು ಎಷ್ಟರ ಮಟ್ಟಿಗೆ ಅವರಲ್ಲಿ ಅದರ ಭಾವನೆಯನ್ನು ಒಡಮೂಡಿಸಿದವೆಂಬದರ ಬಗೆಗೆ ಒಂದು ಅಳತೆಗೋಲನ್ನು ನಿರ್ಧರಿಸಬೇಕಾಗಿ ಬಂದಿತು. ಮಕ್ಕಳಲ್ಲಿ ಒಡಮೂಡಿದ ಅದರ ಭಾವನೆಯು ಎಂತಹದಿರಬೇಕು. ಅದರ ವ್ಯಾಪಕವೇನು, ಅದು ಯಾವ ಯಾವ ಗುಣಗಳ ಇಲ್ಲವೆ ಕೃತಿಗಳ ಬಗೆಗೆ ಉಂಟಾಗಿರಬೇಕು, ಮುಂತಾದ ಎಲ್ಲ ಸಂಗತಿಗಳನ್ನು ಬರೆದಿಡಬೇಕಾಯಿತು. ಐತಿಹಾಸಿಕ ಪುರುಷರ ಚರಿತ್ರವನ್ನು ಅಭ್ಯಾಸ ಮಾಡುವದರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಶೀಲದಲ್ಲಿ ಏನಾದರೂ ಹೆಚ್ಚುಕಡಿಮೆಯಾಯಿತೋ ಹೇಗೆಂಬುದನ್ನು ಕಂಡುಹಿಡಿದರು. ಒಂದು ಮಾಪನದ ಆವಶ್ಯಕತೆಯೂ ಅವರಿಗೆ ಅನಿಸಲಿಕ್ಕೆ ಹತ್ತಿತು.

ಇಂಥ ಒಂದು ಸಂಶೋಧನವು ಈಗ ಕಾರ್ಯರೂಪಕ್ಕೆಳಿದಿದೆ. ಅದು ಕೆಲಕಾಲದ ವರೆಗೆ ನಡೆಯಬಹುದು. ಬಾವೀ ತೋಡಿದ ಹಾಗೆಲ್ಲ ರಾಡಿಯು ಹೊರಡುವಂತೆ ಒಂದು ಸಂಶೋಧನದಲ್ಲಿ ಬಹಳಷ್ಟು ಸಮಸ್ಯೆಗಳು ಉಬ್ಬವಿಸುವದು ಸ್ವಾಭಾವಿಕ ಒಂದು ಸಮಸ್ಯೆಯನ್ನು ಬಿಡಿಸವಷ್ಟರಲ್ಲಿ ಮತ್ತೊಂದು ಸಮಸ್ಯೆಯು ಆಗಲೇ ತಲೆದೋರುತ್ತದೆ. ಇಂಥ ಸಂಶೋಧನದ ಪರಿಣಾಮಗಳ ಕಡೆಗೆ ನಮ್ಮ ಅಭಿಲಾಷೆಯು ಅಷ್ಟೇನು ಇರುವದಿಲ್ಲ. ಆದರೆ ಎಷ್ಟೋ ವರುಷಗಳಿಂದ ನಡೆದು ಬಂದ ಕಲಿಸುವ ಮೂಢಿಗಳನ್ನು ಇಲ್ಲವೆ ಪದ್ಧತಿಗಳನ್ನು ಸಂಶೋಧನದ ಒರೆಗಲ್ಲಿಗೆ ಹಚ್ಚಿ ಪ್ರಮಾಣಿಸಿ ನೋಡಬೇಕೆಂಬ ಮನಸಿನ ಪ್ರವೃತ್ತಿಗ ನಾನು ಮಹತ್ವವನ್ನು ಕೊಡುತ್ತೇನೆ.

ಸಂಶೋಧನ ಪ್ರವೃತ್ತಿ ಮತ್ತು ಸಂಶೋಧನಕ್ಕೆ ತಗಲುವ ಸಾಕಷ್ಟು ಆಧಾರಗಳನ್ನು ಇಲ್ಲವೆ ಪ್ರಮಾಣಗಳನ್ನು ಹುಡುಕಿ ತೆಗೆಯುವ ಲವಲವಿಕೆ ಇವು ಅಷ್ಟೇನು ಹೊಸ ಮಾತುಗಳಲ್ಲ; ಆದರೆ ಇಂಥ ಸಂಶೋಧನದಲ್ಲಿ ಚನಾಗಿ ಮನಸ್ಸು ಹಾಕಿ ಕೆಲಸ ಮಾಡುವ ಶಿಕ್ಷಕ ಶಿಕ್ಷಕಿಯರ ಸಂಖ್ಯೆಯು ಮಾತ್ರ ಹೇಳಿಕೊಳ್ಳುವಷ್ಟು ಇಲ್ಲೆಂಬದು ಕಂಡು ಬರುತ್ತದೆ. ಇದಕ್ಕೆ ಕಾರಣಗಳು ಇಲ್ಲವೆಂದಲ್ಲ. ಶಿಕ್ಷಕ-ಶಿಕ್ಷಕಿಯರು ಶಾಲೆಯಲ್ಲಿ ಅವಶ್ಯವಾಗಿ ಮಾಡಬೇಕಾದ ಕೆಲಸವು ಅಪಾರವಾಗಿರುವದರಿಂದ ಅದರಲ್ಲಿಯೇ ಅವರು ಇಡೀ ದಿವಸ ಮಗ್ನರಾಗಿ ಬಿಡುತ್ತಾರೆ; ಹೀಗಾಗಿ ಸಂಶೋಧನದತ್ತ ಮನಸ್ಸು ಹಾಕಲು ಅವರಲ್ಲಿ ಹುರುಪು ಇಲ್ಲವೆ ಶಕ್ತಿಯು ಉಳಿಯುವದಿಲ್ಲ; ವೇಳೆಯ ಅಭಾವವೂ ಒಂದು ಸಬಲ ಕಾರಣವಾಗಿದೆ; ಶಿಕ್ಷಕವೃತ್ತಿಗೆ ಸಂಶೋಧನವು ಅವಶ್ಯವಿದೆ ಎಂಬ ವಿಚಾರವು ಸ್ವಲ್ಪೇ ಶಿಕ್ಷಣಾಧಿಕಾರಿಗಳಿಗೆ ಹೊಳೆದಿದೆ ಎಂಬ ಮಾತೂ ಒಂದು ಕಾರಣವಿದೆ.

ಅದು ಏನೇ ಇರಲಿ, ಹೆಚ್ಚು ಹೆಚ್ಚು ಶಿಕ್ಷಕ-ಶಿಕ್ಷಕಿಯರು ಸಂಶೋಧನದತ್ತ ಲಕ್ಷವನ್ನು ಹಾಕುವದು ಲೇಸು. ಒಂದೊಂದು ಸಂಶೋಧನಕ್ಕೆ ಬಹಳಷ್ಟು ಕಾಲಾವಧಿಯು ಬೇಕೆಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡೇ ಅದಕ್ಕೆ ಕೈಹಾಕತಕ್ಕದ್ದು. ಶಿಕ್ಷಕಶಿಕ್ಷಕಿಯರು ಶಾಲೆಯಲ್ಲಿ ತಾವು ಮಾಡತಕ್ಕ ಕೆಲಸವನ್ನೆಲ್ಲ ಮಾಡಿಕೊಂಡು ಮತ್ತೆ ಹೆಚ್ಚಿನ ಕೆಲಸವಾಗಲಿರುವ ಸಂಶೋಧನವನ್ನು ಮಾತ್ರ ಮಾಡಲಾರರು. ನೇಲ್ಸ್ಕಾಣಿಸಿದ ಮಿಚಿಗಾನ ಪಟ್ಟಣದಲ್ಲಿರುವ ಮಾಧ್ಯಮಿಕ ಶಾಲೆಗಳಲ್ಲಿ ಸಾಮಾಜಿಕ ವಿಷಯಗಳನ್ನು ಕಲಿಸುವ ಶಿಕ್ಷಕಶಿಕ್ಷಕಿಯರಿಗೆ ಅವರು ಕೈಕೊಂಡ ಸಂಶೋಧನಾರ್ಥವಾಗಿ ಪ್ರತಿವಾರ ಅರ್ಧ ದಿವಸಕ್ಕಿಂತ ಹೆಚ್ಚು ಬಿಡುವು ಇರುತ್ತದೆ.

ಪ್ರತಿದಿನ ಶಾಲೆಯು ನಡೆಯುವ ಅವಧಿಯಲ್ಲಿಯೇ ಕೆಲವು ವೇಳೆಯನ್ನು ಸಂಶೋಧನದ ಸಲುವಾಗಿ ಕಾಯ್ದಿಟ್ಟರೆ, ಅದು ಸಾಕಷ್ಟಾಗಲಾರದು. ಶಿಕ್ಷಕ-ಶಿಕ್ಷಿಕೆಯರಲ್ಲಿ ಸಂಶೋಧನ ಪ್ರವೃತ್ತಿಯು ಉಬ್ಬವಿಸಬೇಕಾದರೆ, ಅವರು ತಮಗೆ ಸಂಶೋಧನ ಕಾರ್ಯದಲ್ಲಿ ಅಡ್ಡಬರುವ ಪ್ರತಿಬಂಧಕಗಳನ್ನೂ ಅಡಚಣೆಗಳನ್ನೂ ಬಿಚ್ಚುಮನಸ್ಸಿನಿಂದ ಹೇಳಲಿಕ್ಕೂ ಉಳಿದವರಗೂಡ ಚರ್ಚಿಸಲಿಕ್ಕೂ ವಾತಾವರಣವು ತಕ್ಕುದಾಗಿರಬೇಕು. ಆದೆಷ್ಟೋ ಶಾಲೆಗಳಲ್ಲಿ ಶಿಕ್ಷಕ-ಶಿಕ್ಷಿಕೆಯರು ತಾವು ಅನುಸರಿಸುವ ಪದ್ಧತಿಯಲ್ಲಿ ಇಲ್ಲವೆ ರೂಢಿಯಲ್ಲಿ ಎದುರಿಸಲಿರುವ ಸಮಸ್ಯೆಗಳ ಬಗೆಗೆ ಅವರು ಉಲ್ಲೇಖ ಮಾಡಿದ್ದು ಎಲ್ಲಿಯೂ ಕಂಡು ಬರುವದಿಲ್ಲ. ಆ ಸಮಸ್ಯೆಗಳ ಉಲ್ಲೇಖದಿಂದಲೇ ಮುಂದಿನ ಸಂಶೋಧನದ ಕಾರ್ಯವು ಸುಗಮವಾಗಿಯೂ ಚಿತ್ತಾಕರ್ಷಕವಾಗಿಯೂ, ಫಲಕಾರಿಯಾಗಿಯೂ, ಸಾಗುವದು. ಸಂಶೋಧನಕಾರ್ಯಕ್ಕೆ ಅವಶ್ಯವಾಗಿ ಬೇಕಾಗುವ ಮತ್ತೊಂದು ಸಂಗತಿಯೆಂದರೆ ಶಿಕ್ಷಕಶಿಕ್ಷಕಿಯರು ಅವಶ್ಯವೆನಿಸಿದಾಗಲ್ಲಿ ಪರಸ್ಪರರನ್ನು ಭೆಟ್ಟಿಯಾಗಲು ಮತ್ತು ಬಿಚ್ಚು ಮನಸಿನಿಂದ ಅನಿರ್ಬಂಧವಾದ ಚರ್ಚೆ

ಯನ್ನು ಮಾಡಲು ಸಾಕಷ್ಟು ಪ್ರಸಂಗಗಳನ್ನು ಒದಗಿಸಕೊಡಬೇಕು. ಹೀಗೆ ಮಾಡುವದರಿಂದ ಶಿಕ್ಷಕ ಶಿಕ್ಷಕಿಯರಲ್ಲಿ ಉತ್ಪಾದಕ ಶಕ್ತಿಯನ್ನು ಹೆಚ್ಚಿಸಿ ಹೊಸ ಹೊಸ ಪದ್ಧತಿಗಳನ್ನು ಹುಡುಕಿ ತೆಗೆಯಲು ಪ್ರೇರೇಪಿಸಿದಂತಾಗುತ್ತದೆ.

ಕೆಲವು ಶಾಲೆಗಳಲ್ಲಿ ಶಿಕ್ಷಕ ಶಿಕ್ಷಕಿಯರು ತಾವು ಅನುಸರಿಸಿರುವ ಪದ್ಧತಿಯಲ್ಲಿ ಎದುರಿಸಲಿರುವ ಸಮಸ್ಯೆಗಳನ್ನು ಬಿಚ್ಚು ಮನಸಿನಿಂದ ಹೇಳುವದುಂಟು. ಮತ್ತು ಸಾಕಷ್ಟು ಚರ್ಚೆಮಾಡಿ ಯೋಗ್ಯವೆಂದು ಕಂಡು ಬಂದ ಹೊಸ ಪದ್ಧತಿಗಳನ್ನೂ ಅನುಸರಿಸಲು ಬೇಕಾದಷ್ಟು ಪ್ರಸಂಗಗಳನ್ನೂ ಒದಗಿಸಿಕೊಟ್ಟದ್ದೂ ಉಂಟು. ಆದರೂ ಪುರಾಣಮತವಾದಿಗಳಂತೆ ತಾವು ಅನುಸರಿಸಲಿರುವ ಹಳೇ ಪದ್ಧತಿಯನ್ನು ಬಿಟ್ಟು ಹೊಸದನ್ನು ಸ್ವೀಕರಿಸಲು ಅವರಿಗೆ ಮನಸ್ಸಿಲ್ಲದಾಗಿದೆ. ಹೊಸದೆಂಬುದು ಅನೇಕರಿಗೆ ಅದೊಂದು ಭೂತವೇ ಅಗಿಬಿಡುವದುಂಟು. ಕಲಿಸುವ ಪದ್ಧತಿಯನ್ನೂ ಸುಧಾರಿಸಬೇಕೆಂಬ ಉದ್ದೇಶದಿಂದ ಸಂಶೋಧನವನ್ನು ಕೈಕೊಂಡದ್ದಾದರೆ, ಆ ಪದ್ಧತಿಯು ಬದಲಾವಣೆಯನ್ನು ಹೊಂದಲೇಬೇಕಾಗುವದು; ಒಲ್ಲೆನೆಂದರೆ ನಡೆಯದು. ಫಲಕಾರಿಯೆಂದು ಅನಿಸುವ ಹೊಸ ಬದಲಾವಣೆಗಳನ್ನು ತರ್ಕಬದ್ಧವಾಗಿ ಪ್ರಯೋಗ ಮಾಡಿ ನೋಡುವವರಿಗೆ ಸಾಕಷ್ಟು ಉತ್ತೇಜನವನ್ನು ಕೊಡುವದು ಲೇಸು. ಉತ್ತೇಜನವನ್ನು ಕೊಡದಿದ್ದರೆ ಪ್ರಯೋಗದಲ್ಲಿ ತೊಡಗಿದವರ ಹುರುಪನ್ನೂ ಹುಮ್ಮಸನ್ನೂ ಹಿಮ್ಮೆಟ್ಟಿದಂತಾಗುತ್ತದೆ.

ದೊಡ್ಡ ಪ್ರಮಾಣದ ಮೇಲೆ ಸಂಶೋಧನಗಳನ್ನು ಸಾಗಿಸುವ ಶಾಲೆಗಳಲ್ಲಿ ಕಂಡು ಬರುವ ಒಂದು ಅತಿ-ಮ-ಹತ್ವದ ಲಕ್ಷಣವೆಂದರೆ ಪ್ರತಿಯೊಂದು ಸಂಶೋಧನಕ್ಕೂ ಕೆಲದಾದರೂ ಆಧಾರಗಳು ಇಲ್ಲವೆ ಪ್ರಮಾಣಗಳು ಇರಲಿಕ್ಕೇ ಬೇಕು. ಪ್ರಯೋಗವು ಯಶಸ್ವಿಯಾಗದಿದ್ದರೆ, ಅದರಲ್ಲಿ ಕೆಲಸ ಮಾಡುವವರಲ್ಲಿ ಒಬ್ಬರಿಗಾದರೂ ಕಡೆಗೆ ಹಾನಿ ತಟ್ಟದೇ ಬಿಡಲಿಕ್ಕಿಲ್ಲೆಂಬ ಅಂಜಿಕೆಯಿಂದ ಎಷ್ಟೋ ಪ್ರಯೋಗಗಳನ್ನು ಕೈಕೊಂಡದ್ದು ಕಂಡು ಬಂದಿದೆ. ಪ್ರತಿಯೊಂದು ಪ್ರಯೋಗವು ಯಶಸ್ವೀಯಾಗಲೇ ಬೇಕೆಂದೆಣಿಸಿದರೆ, ಅದಕ್ಕೆ ಪ್ರಯೋಗವೆಂಬ ಹೆಸರೇ ಸಲ್ಲದು. ಹೊಸಪದ್ಧತಿಗಳು ಯಶಸ್ವೀಯಾಗಲು ಇಲ್ಲವೆ ಅಯಶಸ್ವೀಯಾಗಲು ಕಾರಣಗಳಾದ ಸಬಲ ಆಧಾರಗಳನ್ನು ಅಥವಾ ಪ್ರಮಾಣಗಳನ್ನು ಹುಡುಕಿ ತೆಗೆಯುವ ಮನೋವೃತ್ತಿಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ.

ಸಂಶೋಧನ ಪ್ರವೃತ್ತಿಯುಳ್ಳ ಶಿಕ್ಷಕ-ಶಿಕ್ಷಕಿಯರಲ್ಲಿ ನನ್ನ ಆಸಕ್ತಿ ಅಷ್ಟಿಷ್ಟಲ್ಲ; ನನ್ನ ಅಭಿಪ್ರಾಯದ ಮೇರೆಗೆ ಪ್ರಗತಿ-ಪರ ಮತ್ತು ಉತ್ಸಾಹದಿಂದ ಕೆಲಸ ಮಾಡುವ ಶಾಲೆಯ ಮುಖ್ಯ ಲಕ್ಷಣವೆಂದರೆ ಶಿಕ್ಷಕ-ಶಿಕ್ಷಕಿಯರು ವೈಯಕ್ತಿಕವಾಗಿಯಾಗಲಿ ಇಲ್ಲವೆ ಸಾಂಘಿಕವಾಗಿಯಾಗಲಿ ಕೈಕೊಂಡ ಕ್ರಮಬದ್ಧವಾದ ಸಂಶೋಧನಗಳ ಸಂಖ್ಯೆಯು ಹೆಚ್ಚಿದ್ದಷ್ಟು ಒಳಿತು. ಸಂಶೋಧನದಿಂದ ಕ್ಲಾಸಿನಲ್ಲಿ ಕಲಿಸುವ ಪದ್ಧತಿಗಳನ್ನು ಸುಧಾರಿಸಿಕೊಳ್ಳುವದು ಶಿಕ್ಷಕ ಶಿಕ್ಷಕಿಯರಿಗೆ ಸುಲಭವಾದ ಕೆಲಸವಲ್ಲ. ಆದರೂ ಇತ್ತಿತ್ತಲಾಗಿ ಶಿಕ್ಷಕ ಶಿಕ್ಷಕಿಯರ ಒಲವು ಹೆಚ್ಚೆಚ್ಚಾಗಿ ಪ್ರಯೋಗಗಳತ್ತ ಮತ್ತು ಸಂಶೋಧನಗಳತ್ತ ಹೊರಳಿದ್ದುದು ಶೈಕ್ಷಣಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಹೆಗ್ಗುರುತಾಗಿದೆಂದು ನನ್ನ ನಂಬುಗೆ.

("ಪ್ರೊಗ್ರೆಸಿವ್ ಎಜ್ಯುಕೇಶನ್" ಎಂಬ ಪತ್ರಿಕೆಯ ೧೯೩೦ನೆಯ ಇಸವಿಯ ಫೆಬ್ರುವರಿ ಅಂಕಿನಿಂದ ಎತ್ತಿ ತಕ್ಕೊಂಡದ್ದಾಗಿದೆ.)

★ ★ ಮಧು-ಸಂಚಯ ★ ★

●

ನ್ಯೂಯಾರ್ಕ ಸಾರ್ವಜನಿಕ ವಾಚನಾಲಯ

ಈ ವಾಚನಾಲಯವು ಜಗತ್ತಿನಲ್ಲಿ ದೊಡ್ಡದು ಮತ್ತು ಪುರಾತನವಾದುದು. ಹೋದ ವರುಷ ಇದರ ಒಂದು ನೂರು ವರುಷದ ಹುಟ್ಟು ಹಬ್ಬವು ಆಚರಿಸಲ್ಪಟ್ಟಿತು.

ಈ ವಾಚನಾಲಯದಲ್ಲಿ ೫೦೦೦೦೦೦ ಪುಸ್ತಕಗಳು ಏಳು ಅಂತಸ್ತುಗಳಲ್ಲಿ ೮೦ ಮೈಲು ಉದ್ದ ಶೆಲ್ಫುಗಳಲ್ಲಿ ಸುರಕ್ಷಿತವಾಗಿ ಇಡಲ್ಪಟ್ಟಿವೆ. ಚಿತ್ರಗಳ ವಿಭಾಗದಲ್ಲಿ ೬೦೦೦೦೦೦ ಚಿತ್ರಗಳು ಸಂಗ್ರಹಿಸಿ ಇಡಲ್ಪಟ್ಟಿವೆ. ೨೦೦೦೦೦೦ ನಕಾಶೆಗಳು ಇವೆ. ೩೦೦೦೦ ಸಂಗೀತ ವಿಷಯಕ ಸಾಮಗ್ರಿ ಇದೆ. ೪೦೦೦೦ ವೃತ್ತಪತ್ರ ಮತ್ತು ಮಾಸಪತ್ರಿಕೆಗಳ ಫೈಲುಗಳು ಇವೆ. ಎಣಿಸಲು ಬಾರದಷ್ಟು ಪತ್ರಗಳ ಸಂಗ್ರಹ, ಇತರ ಜ್ಞಾನವಿಷಯಕ ಸಾಧನ ಸಂಗ್ರಹ ಇದೆ. ಇಲ್ಲಿ ೩೦೦೦ ಭಾಷೆಗಳಲ್ಲಿಯ ಸಾಹಿತ್ಯಸಂಗ್ರಹವಿದೆ. ದಿನಾಲು ಸುಮಾರು ೯೦೦೦ ಜನರು ಈ ವಾಚನಾಲಯಕ್ಕೆ ಬಂದು ಜ್ಞಾನಸಂಗ್ರಹ ಮಾಡಿಕೊಳ್ಳುತ್ತಾರೆ. ಚಿಕ್ಕಮಕ್ಕಳ ಸಲುವಾಗಿ ಒಂದು ಕೋಣೆ ಇದೆ. ಅಲ್ಲಿ ಅವರಿಗಾಗಿ ಚಿಕ್ಕ ಬೆಂಚು, ಡೆಸ್ಕು ಇವೆ. ಅಲ್ಲಿ ಮಕ್ಕಳು ಚಿತ್ರದ ಪುಸ್ತಕ ನೋಡಿ ಚಿತ್ರ ಸಹ ತೆಗೆಯುತ್ತವೆ. ಮತ್ತೊಂದು ಮಕ್ಕಳಿಗೆ ಕತೆ ಹೇಳುವ ಕೋಣೆ ಇದೆ. ಅಲ್ಲಿ ಅವರು ಪ್ರಾಚೀನ ಕಾಲದ ಪ್ರಸಿದ್ಧ ಲೇಖಕರ ಕತೆಗಳನ್ನು ಕೇಳುತ್ತಾರೆ. ವಾಚನಾಲಯದವರೇ ಈ ವ್ಯವಸ್ಥೆಯನ್ನು ಮಾಡಿದ್ದಾರೆ.

—ವ್ಹೋಗ (Vogue) ದಿಂದ ಆಗಸ್ಟ ೪೯

* * * * * *

ಜಗತ್ತಿನಲ್ಲಿ ಸಾಗುವಳಿಯಾಗುವ ಭೂಮಿ

ದೇಶ	ಸಾಗುವಳಿಯಾಗುವ ಭೂಮಿ (ಎಕರೆಗಳಲ್ಲಿ)	ದೇಶ	ಸಾಗುವಳಿಯಾಗುವ ಭೂಮಿ (ಎಕರೆಗಳಲ್ಲಿ)
ಯುನೈಟೆಡ್ ಸ್ಟೇಟ್ಸ್ (ಅಮೇರಿಕಾ) ...	೪೩೫೦೦೦	ಪೋಲಂಡ	೪೭೨೧೯
ರಶಿಯಾ	೪೧೪೦೦೦	ಸ್ಪೇನ್	೪೪೫೫೬
ಭಾರತ	೩೮೨೬೧೦	ಇರಾಣ	೪೦೭೯೫
ಚೀನ (೨೨ ಪ್ರಾಂತ)	೧೭೭೭೧೮	ಮಂಚೂರಿಯಾ ಮತ್ತು ಜೆಹೋಲ	೩೪೩೪೬
ಆರ್ಜೆಂಟಾಯಿನಾ	೬೪೩೯೫	ಇಟಲಿ	೩೫೬೧೦
ಕ್ಯಾನಡಾ	೬೩೩೬೫	ಆಸ್ಟ್ರೇಲಿಯಾ	೩೪೪೬೫
ಜರ್ಮನಿ	೪೯೯೧೩		
ಫ್ರಾನ್ಸ	೪೯೩೩೮	ಒಟ್ಟು	೧೪,೭೭೯೫

—ಮಾಡರ್ನ ರಿವ್ಯೂ, (ಮಾರ್ಚ ೫೦)

ಭಾರತ ಪ್ರಜಾರಾಜ್ಯದಲ್ಲಿಯ

ವಿಮಾನ ಮಾರ್ಗಗಳು

ಲೇಖಕರು:

ಶ್ರೀ. ಕುಲಕರ್ಣಿ,
ಕೇಶವರಾಯರು. ಧಾರವಾಡ

ಭಾರತವು ಸ್ವತಂತ್ರವಾದೊಡನೆ ಸಮಗ್ರ ಭಾರತದ ಪರಿಚಯವನ್ನು ಮಾಡಿಕೊಳ್ಳುವ ಮನಸ್ಸಿನ ಪ್ರವೃತ್ತಿಯಾದರೂ ಇತ್ತೀಚೆಗೆ ಹೆಚ್ಚಾಗತೊಡಗಿದೆ. ಇದು ಸುದೈವದ ಸಂಗತಿಯು. ಅಜ್ಞಾನ ಸಂರಕ್ಷಣದಾರರಿರುವವರೆಗೆ ಮಗುವು ತನ್ನ ಅಸ್ತಿಯನ್ನು ನೋಡಿಕೊಳ್ಳದ ರೀತಿಯಲ್ಲಿದ್ದ ಹಿಂದೀಜನವು, ಇಂದು ಎಲ್ಲವನ್ನು ನೋಡಿಕೊಳ್ಳಬೇಕಾಗಿದೆ. ಇದಕ್ಕಾಗಿಯೇ ಕೆಲವು ವಿದ್ಯಾಪರಿಣತಮತಿಗಳಾದ ವಿದ್ವಾಂಸರುಗಳು, ದೇಶದ ವಿವಿಧ ವಿಷಯಗಳ ಮೇಲೆ ಬರಹಗಳನ್ನು ಬರೆಯುತ್ತಲಿದ್ದಾರೆ. ಅವುಗಳಲ್ಲಿ ದೇಶದ ಕ್ಷೇತ್ರ ಮಾನದಿಂದ ಜನಜೀವನವನ್ನು ಚಿತ್ರಿಸುವ ವರೆಗಿನ ಸಂಪೂರ್ಣ ಸಂಗತಿಗಳನ್ನು ಹೊರಹುಮ್ಮಿಸುವದು. ಅಗತ್ಯವಾದ ಮಾತಾಗಿದೆ. ತಜ್ಞರು, ಆ ರೀತಿಯಲ್ಲಿ ಅಭ್ಯಾಸಪೂರ್ವಕವಾಗಿ ಬರಹಗಳನ್ನು ಬರೆದು ಕನ್ನಡ ಜನತೆಗೆ ಕನ್ನಡದಲ್ಲಿ ಒದಗಿಸಿಕೊಟ್ಟರೆ, ಲೋಕಶಿಕ್ಷಣಕ್ಕೆ ಕೈ ಕೊಟ್ಟಂತಾಗುವದು ಈ ಕಾರ್ಯಕ್ಕಾಗಿ ಮಾಸಿಕ ಪತ್ರಿಕೆಗಳೂ, ದಿನಪತ್ರಿಕೆಗಳೂ, ಮೀಸಲು ಪುಟಗಳನ್ನು ಇಡುವದು ಒಳಿತು.

ಬಹು ಪ್ರಾಚೀನಕಾಲದಿಂದಲೂ, ತಲೆತಲೆಗಳ ಅರಸು ಮನೆತನಗಳಿಗೆ ರಾಜಧಾನಿಯಾಗಿ ಮೆರೆಯುತ್ತಿರುವ 'ದಿಲ್ಲಿ' ನಗರವು ವಿಮಾನ ಮಾರ್ಗಗಳ ರಾಜಧಾನಿ ಎಂದು ಹೇಳಲು ಸಂಕೋಚವು ಬಾರದು. ಅಲ್ಲಿಂದ ೧೧ ವಿಮಾನ ಮಾರ್ಗಗಳು ದಶದಿಕ್ಕುಗಳಿಗೂ ಹೋಗುತ್ತವೆ. ಅವುಗಳು ವಿವರವಾಗಿ ತಿಳಿಯಲೆಂದು ಇಲ್ಲಿ ಕ್ರಮವಾಗಿ ವಿವರಿಸುವೆ.

೧. ದಿಲ್ಲಿಯಿಂದ ವಾಯವ್ಯದ ಕಡೆಗೆ ಹೊರಟ ಎರಡು ಮಾರ್ಗಗಳಲ್ಲಿ, ಒಂದು ನೇರವಾಗಿ ಲಾಹೋರಕ್ಕೂ, ಮತ್ತೊಂದು ತುಸು ಉತ್ತರದ ಕಡೆಗೆ ಒಲೆದು ನೀಟಾಗಿ ಸಾಗಿ, ಅಮೃತಸರ, ಜಮ್ಮು, ಶ್ರೀನಗರಗಳಿಗೆ ಮುಟ್ಟಿಸುವದು.

೨. ದಿಲ್ಲಿಯಿಂದ ಆಗ್ನೇಯ ಮುಖವಾಗಿ ತುಸು ಪೂರ್ವಕ್ಕೆ ಸಾಗಿದ ಆಕಾಶಮಾರ್ಗವು ಪಾಟನಾ, ಡಾಕಾ, ಚಿತಗಾಂಗಗಳಿಗೆ ಸಾಗಲು ಅನುಕೂಲವಾಗಿದೆ.

೩. ದಿಲ್ಲಿಯಿಂದ ಲಖನೌ, ಬನಾರಸಗಳಿಗೆ ಪ್ರವಾಸಿಕರನ್ನು ಇಳಿಸಿ, ಅಲ್ಲಿಂದ ಪಾಟನಾಕ್ಕೆ ಹೋಗಲು ಬರುವದು.

೪. ದಿಲ್ಲಿಯಿಂದ ನೇರವಾಗಿ ಕಲಕತ್ತೆಗೆ ಹೋಗಿ ಅಲ್ಲಿಂದ ಹತ್ತು ಕಡೆಗೆ ವಿಮಾನದಲ್ಲಿಂದಲೇ ಸಾಗಲು ಬರುವದು ಹೇಗೆ ಎಂಬದನ್ನು ಅಭಾಗದಲ್ಲಿ ವಿವರಿಸುವೆ.

೫. ದಿಲ್ಲಿಯಿಂದ ಹೊರಟು, ಅಲಾಹಾಬಾದವನ್ನು ನೋಡಿಕೊಂಡು, ಪಾಟಣಾಕ್ಕೆ ಹೋಗಲು ಬರುವದು. ಪಾಟಣಾದಿಂದಲೂ ೫ ಮಾರ್ಗಗಳು ಹೊರಟಿವೆ.

೬. ದಿಲ್ಲಿಯಿಂದ ದಕ್ಷಿಣ ಮುಖವಾಗಿ ಹೊರಟರೆ, ಗ್ವಾಲೇರ, ಇಂದೂರಗಳ ಮೇಲಿಂದ ಮುಂಬಯಿಗೆ ಬರಲು ಬರುವದು.

೭. ದಿಲ್ಲಿಯಿಂದ ಭೋಪಾಲ, ನಾಗಪೂರ, ಹೈದರಾಬಾದ (ದಕ್ಷಿಣ) ಅಲ್ಲಿಂದ ಇಮ್ಮುಖವಾಗಿ, ಒಂದು ಮಾರ್ಗವು ಮದ್ರಾಸಕ್ಕೂ, ಅಲ್ಲಿಂದ ಕೋಲಂಬೋ ವರೆಗೂ ಹೋಗಿದೆ ಮತ್ತೊಂದು, ಬೆಂಗಳೂರ ಕೊಚೀನಗಳಿಗೂ ಮುಟ್ಟಿಸುವದು

೮. ದಿಲ್ಲಿಯಿಂದ ನೈಋತ್ಯ ಮುಖವಾಗಿ ಹೊರಟ ವಿಮಾನವಮಾರ್ಗವು, ಜೈಪೂರ, ಅಹಮದಾಬಾದಗಳ ಮೇಲಿಂದ ಮುಂಬಯಿಗೆ ಬರುವದು. ಅಹಮದಾಬಾದಿನಿಂದಲೂ ನಾಲ್ಕು ಕಡೆಗೆ ವಿಮಾನಮಾರ್ಗಗಳು ಹೊರಟಿವೆ.

೯ ದಿಲ್ಲಿಯಿಂದ ಜೋಧಪುರ, ಜೋಧಪುರದಿಂದ ನೇರವಾಗಿ ಕರಾಚಿಗೆ ತಲುಪಲು ಬರುವದು.

೧೦. ದಿಲ್ಲಿಯಿಂದ ಕರಾಚಿಗೆ ಎಲ್ಲಿಯೂ ನಿಲ್ಲದೆ ಹಾಗಲು ಬರುವದು.

ಕರಾಚಿಯಿಂದ ಭಾರತದಲ್ಲಿ ಬರುವದಾದರೆ, ಅಹಮದಾಬಾದ, ಬಡೋದೆಗಳ ಮೇಲಿಂದ ಬರಬಹುದು. ಅಥವಾ ಭೂಜ (ಕಚ್ಛದರಣ)ದ ಮೇಲೆ ಹಾಯ್ದು, ಜಾಮನಗರ (ಕಾಠೇವಾಡ), ರಾಜಕೋಟ, ಭಾವನಗರ ಗಳಲ್ಲಿಳಿಯುತ್ತ ಮುಂಬಯಿಗೆ ಬರಲು ಬರುತ್ತದೆ. ಇಲ್ಲವೆ ಕರಾಚಿಯಿಂದ ನೇರವಾಗಿ ಮುಂಬಯಿಗೆ ಬರಬಹುದು. ಅಥವಾ ರಾಜಕೋಟ, ಪೋರಬಂದರ ಕೇಳೋಡಗಳಲ್ಲಿ ಇಂತು ಅಲ್ಲಿಂದ ಮುಂಬಯಿಗೆ ಬರಲು ಬರುತ್ತದೆ.

ನಮ್ಮ ಮುಂಬಯಿ ರಾಜ್ಯದ ರಾಜಧಾನಿಯಾದ ಮುಂಬಯಿಯಿಂದ (೧೨) ವಿಮಾನಮಾರ್ಗಗಳು ಹೊರಟಿತ್ತಲಿವೆ. ಅವು:—

೧ ಮುಂಬಯಿಯಿಂದ ನೇರವಾಗಿ ಮದ್ರಾಸಕ್ಕೆ ಹೋಗಿ, ಅಲ್ಲಿಂದ ಕೋಲಂಬೋ ಪಟ್ಟಣಕ್ಕೆ ಇಳಿದು, ಇಂಹಲದ್ವೀಪದಲ್ಲಿ ಸಂಚರಿಸಬಹುದು.

೨ ಪುಣೆಗೆ ಬಂದು, ಬೆಂಗಳೂರ ಕೊಯಿಮತ್ತೂರ, ಕೊಚೀನ ತ್ರಿವೇಂದ್ರಂಗಳಿಗೆ ಹೋಗಬಹುದು.

೩. ಮುಂಬಯಿಯಿಂದ ಹೈದರಾಬಾದ (ದಕ್ಷಿಣ)ಕ್ಕೆ ಹೋಗಿ ಅಲ್ಲಿಂದ ಮದ್ರಾಸಕ್ಕೆ ಹೋಗಲು ಬರುವದು.

೪. ಮುಂಬಯಿಯಿಂದ ಹೊರಟು ಎಲ್ಲಿಯೂ ನಿಲ್ಲದೆ, ಕಲಕತ್ತೆಗೂ ಕರೆದೊಯ್ಯುವದು.

೫. ನಾಗಪುರಕ್ಕೆ ಇಳಿದು ಅಲ್ಲಿಂದಲೂ ಕಲಕತ್ತೆಗೆ ಹೊಟ.ಬಹುದು.

೬. ಇಂದೂರನ್ನು ನೋಡಿ, ಗ್ವಾಲ್ಹೇರದ ಮೇಲಿಂದ ದಿಲ್ಲಿಗೆ ಮುಟ್ಟಬಹುದು.

೭. ಬಡೋದೆ, ಅಹಮದಾಬಾದು ಗಳಲ್ಲಿಳಿದು, ನೇರವಾಗಿ ಕರಾಚಿಗೂ ಒಂದು ಮಾರ್ಗವಿದೆ. ವ.ತ್ತೊಂದು, ಜಯಪುರದ ಮೇಲಿಂದ ದಿಲ್ಲಿಗೆ ಮುಟ್ಟಿಸುವದು.

೮. ಮುಂಬಯಿಂದ ನೇರವಾಗಿ ಅಹಮ್ಮದಾಬಾದಕ್ಕೆ ಹೋಗಲು ಬರುವದು

೯. ಮುಂಬಯಿಂದ ಭಾವನಗರ, ರಾಜಕೋಟಗಳಲ್ಲಿಳಿದು, ಜಾಮನಗರಕ್ಕೆ ಹೋಗಲು ಬರುವದು.

೧೦. ಮುಂಬಯಿಯಿಂದ ಹೊರಟವರು, ಜುನಾಗಡ, ಜಾಮನಗರ, ಭೋಜ ನೋಡಿಕೊಂಡು, ಕರಾಚಿಗೆ ಮುಟ್ಟಲು ಬರುವದು.

೧೧. ನೇರವಾಗಿ ಕರಾಚಿಗೂ, ೧೨. ಕೇರೋಡಗಳ ಮೇಲಿಂದ ಪೋರಬಂದರ (ಗಾಂಧೀಜಿಯವರ ಜನ್ಮ ಗ್ರಾನು) ಕ್ಕೆ ಹೋಗಲು ಬರುವದು.

ಕಲಕತ್ತೆಯಿಂದ ಈ ಕೆಳಗಿನ ಪಟ್ಟಣಗಳಿಗೆ ಹೋಗಲು ವಿಮಾನಮಾರ್ಗದ ಸೌಕರ್ಯವಿದೆ.

೧. ನೇರವಾಗಿ ರಂಗೂನ(ಬ್ರಹ್ಮದೇಶ), ಚಿತಗಾಂಗ, ಆಗ್ರತಾಲ, ಡಾಕಾ.

೨ ಗೋಹತ್ತೀ, ದಿಬ್ರೂಗಡ.

೩. ಪಾಟನಾ, ಅಲ್ಲಿಂದ ದಿಲ್ಲಿ.

೪. ನೇರವಾಗಿ ದಿಲ್ಲಿ.

೫. ನಾಗಪುರ, ಮುಂಬಯಿ

೬. ನೇರವಾಗಿ ಮುಂಬಯಿ.

೭. ಕಲಕತ್ತೆಯಿಂದ ಭುವನೇಶ್ವರ, ವಿಶಾಖಾ ಪಟ್ಟಣ, ಅಲ್ಲಿಂದ ಮದ್ರಾಸ ಪಟ್ಟಣ ಸೇರಬಹುದು.

ಮದ್ರಾಸ ಪಟ್ಟಣದಿಂದಲೂ ೫ ನಿಟ್ಟು ವಿಮಾನ ಮಾರ್ಗಗಳು ಹೊರಟಿವೆ. ಅವು:—

೧. ನೇರವಾಗಿ ದಕ್ಷಿಣ ದಿಕ್ಕಿಗೆ ಹೊರಟು, ಕೋಲಂಬೋ ಪಟ್ಟಣಕ್ಕೆ ಮುಟ್ಟುವದು.

೨. ಮದ್ರಾಸದಿಂದ ಈಶಾನ್ಯ ಮುಖವಾಗಿ ಹೊರಟ ವಿಮಾನವು, ವಿಶಾಖಾಪಟ್ಟಣ ಭುವನೇಶ್ವರ, ಕಲಕತ್ತಾ, ಗೋಹತ್ತಿ, ದಿಬ್ರೂಗಡಗಳಿಗೆ ಹೋಗುವದು.

೩. ಹೈದರಾಬಾದ (ದಕ್ಷಿಣ) ಅಲ್ಲಿಂದ ಮುಂಬಯಿಗೂ, ಹೈದರಾಬಾದದ ಮೇಲಿಂದ ನಾಗಪೂರ, ಭೋಪಾಲ, ದಿಲ್ಲಿಗೂ ತಲುಪಲು ಬರುವದು.

೪. ಬೆಂಗಳೂರಿಗೂ ಅಲ್ಲಿಯಿಂದ ಪುಣ-ಮುಂಬಯಿಗ ಮುಟ್ಟುವದು.

೫. ಬೆಂಗಳೂರಿಗೆ ಬಂದು, ಅಲ್ಲಿಂದ ದಕ್ಷಿಣಕ್ಕೆ ಹೊರಟು, ಕೊಯಿಮತ್ತೂರ, ಕೋಚೀನ, ತ್ರಿವೇಂದ್ರಂ ಗಳಿಗೆ ಹೋಗಲು ಬರುವದು.

ವಿಮಾನದಲ್ಲಿ ಕುಳಿತುಕೊಂಡು ಭರತಖಂಡದ ದಕ್ಷಿಣದ ತುದಿಯಿಂದ ಉತ್ತರದ ತುದಿಯ ವರೆಗೆ ವೇಗವಾಗಿ ಪ್ರವಾಸಮಾಡಬೇಕೆಂಬ ಇಚ್ಛೆಯುಳ್ಳವರು, ದಕ್ಷಿಣ ದಿಕ್ಕಿನ ಪಶ್ಚಿಮದ ದಂಡೆಯ ಮೇಲಿರುವ ತ್ರಿವೇಂದ್ರಂ ಪಟ್ಟಣದಲ್ಲಿ ವಿಮಾನವನ್ನೇರಿ, ಹಿಂದೂದೇಶದ ಉತ್ತರದ ತುದಿಗಿರುವ ಶ್ರೀನಗರದಲ್ಲಿಳಿಯಬಹುದು.

ಪೂರ್ವದಿಶೆಯಿಂದ ಪಶ್ಚಿಮದಿಕ್ಕಿಗೆ ಪ್ರವಾಸಮಾಡ ಬಯಸುವವರು, ದಿಬ್ರೂಗಡದಿಂದ ಕರಾಚಿಯ ವರೆಗೆ ಹೋಗಬಹುದು.

ಸಮಗ್ರ ಭರತಖಂಡವನ್ನು ಪ್ರದಕ್ಷಿಣೆ ಹಾಕಬೇಕೆಂಬ ಉತ್ಸಾಹಶಾಲಿಗಳು, ಮುಂಬಯಿಯಲ್ಲಿ ವಿಮಾನಾರೋಹಣಮಾಡಿ, ಪುಣೆ, ಕೋಯಿಮತ್ತೂರ, ಕೋಚೀನ, ತ್ರಿವೇಂದ್ರಂ, ಬೆಂಗಳೂರ, ಮದ್ರಾಸ, ವಿಶಾಖಾಪಟ್ಟಣ, ಭುವನೇಶ್ವರ, ಕಲಕತ್ತಾ, ಪಾಟನಾ, ದಿಲ್ಲಿ, ಶ್ರೀನಗರ, ಕರಾಚಿಗೆ ಬಂದು ಕರಾಚಿಯಿಂದ ಮುಂಬಯಿಗೆ ಬರಬಹುದು.

ಈ ವಿಮಾನಮಾರ್ಗಗಳನ್ನು ವಿಹಂಗಮ ನೋಟದಿಂದ ನೋಡಿದರೆ, ಕಾಶೀವಾಡ, ಗುಜರಾಥ ಭಾಗಗಳಲ್ಲಿ ವಿಮಾನ ನಿಲ್ದಾಣಗಳಿದ್ದಷ್ಟು, ಸಂಖ್ಯೆ ಬೇರೆ ಎಲ್ಲಿಯೂ ಕಂಡುಬರುವದಿಲ್ಲ ಅಲ್ಲಿ ಸುಮಾರು ೧೦ ನಿಲ್ದಾಣಗಳಿವೆ ಸಂಯುಕ್ತ ಪ್ರಾಂತದಲ್ಲಿ ೫ ಪೂರ್ವ ಪಾಕಿಸ್ತಾದಲ್ಲಿ ೧ ಪಶ್ಚಿಮ ಪಾಕಿಸ್ತಾನದಲ್ಲಿ ೧. ಆಸಾಮದಲ್ಲಿ ೩ ಮಧ್ಯ ಪ್ರಾಂತದಲ್ಲಿ ೭ ಮದ್ರಾಸ ಪ್ರಾಂತದಲ್ಲಿ ೩. ಮುಂಬಯಿ ಪ್ರಾಂತದಲ್ಲಿ ಪುಣೆಯೊಂದನ್ನು ಬಿಟ್ಟರೆ ಗತಿಯೇ ಇಲ್ಲ ಕರ್ನಾಟಕಸ್ಥರಿಗೆ. ಲಗುಬಗೆಯಿಂದ ವಿಮಾನ ಪ್ರವಾಸ ಕೈಕೊಳ್ಳುವ ಪ್ರಸಂಗವು ಬಂದರೆ. ಪುಣೆ, ಬೆಂಗಳೂರ ಹೈದರಾಬಾದಗಳನ್ನು ಹಿಡಿಯಬೇಕು. ಈ ತ್ರಿಕೋನದ ಮಧ್ಯದಲ್ಲಿ ಬರುವ ಗದಗ-ಹುಬ್ಬಳ್ಳಿ, ಧಾರವಾಡ ಪಟ್ಟಣಗಳೊಂದರಲ್ಲಿ ವಿಮಾನ ನಿಲ್ದಾಣವಾದರೆ, ಸಂಪೂರ್ಣ ಕರ್ನಾಟಕಕ್ಕೆ ತುಂಬಾ ಉಪಯೋಗವಾಗುವದು ನಿಲ್ದಾಣಗಳ ದೃಷ್ಟಿಯಿಂದ ಸ್ಥಳವನ್ನು ಆಯ್ದುಕೊಂಡು ಸರಕಾರದವರು, ವಿಮಾನ ನಿಲ್ದಾಣವನ್ನು ಏರ್ಪಡಿಸಿದರೆ, ದೇಶಪರದೇಶಗಳೊಡನೆ ಸಂಪರ್ಕಬೆಳೆದು, ವಿಮಾನಗಳನುಕೂಲತೆ ಒದಗಿಸಿಕೊಟ್ಟ ಶ್ರೇಯಸ್ಸಿಗೆ, ಪಾತ್ರರಾಗುವರೆಂಬದನ್ನು ಬೇರೆ ಸೂಚಿಸಬೇಕೆ?

(೧೯೫೦ ಆಗಸ್ಟ ೧೯೪೯ರ ವಿಮಾನಮಾರ್ಗಗಳ ರೀತಿಯಿಂದ ಸಿದ್ಧಪಡಿಸಿದೆ).

ಹೊಸ ಪ್ರಕಟನೆಗಳು ೧೯೫೦—೫೧

ಕೆ. ಎಸ್. ಕುಲಕರ್ಣಿ ಬುಕ್ ಡಿಪೋ

ಸ್ಟೇಶನ್ ರೋಡ, ಹುಬ್ಬಳ್ಳಿ ಇವರಲ್ಲಿ ದೊರೆಯುವ ಪುಸ್ತಕಗಳು

ಶ್ರೀಯುತ ಚಿ. ಶ್ರೀ. ಕುಲಕರ್ಣಿಯವರ ಅತ್ಯುಪಯುಕ್ತವಾದ ಪುಸ್ತಕಗಳು

೧ನೆಯ ಇಯತ್ತೆಗಾಗಿ (ಸಚಿತ್ರ)

೧	ಸಾಮಾನ್ಯ ವಿಜ್ಞಾನ	೦	೩	೦
೨	ಪೌರನೀತಿ	೦	೩	೦
೩	ಭೂಗೋಲ	೦	೪	೦
೪	೧ನೆಯ ತರಗತಿಯ ಕಥೆ	೦	೩	೦

೨ನೆಯ ಇಯತ್ತೆಗಾಗಿ (ಸಚಿತ್ರ)

೧	ಸಾಮಾನ್ಯ ವಿಜ್ಞಾನ	೦	೪	೦
೨	ಪೌರನೀತಿ	೦	೪	೦
೩	ಭೂಗೋಲ (ಪ್ರಪಂಚ ಪರಿಚಯ)	೦	೪	೦
೪	೨ನೆಯ ತರಗತಿಯ ಕಥೆ	೦	೪	೦
೫	ಮಗ್ಗಿ, ಕೋಷ್ಟಕ, ಬಾಯಿಲೆಕ್ಕಗಳು	೦	೪	೦
೬	೨ನೆಯ ಪುಸ್ತಕದ ಅರ್ಥ	೦	೪	೦

ಬಹು ಜನರಿಂದ ಮನ್ನಣೆ ಪಡೆದ ಹಿಂದೀ
ಕಲಿಯಲು ಅತಿ ಸುಲಭವಾದ
ಒಂದೇ ಒಂದು ಪುಸ್ತಕ

ಹಿಂದುಸ್ತಾನಿ
ಕನ್ನಡ ಬಾಲಬೋಧೆ

ಬೆಲೆ: ೦-೬—೦

ಲೇಖಕ: **ಎಸ್. ವ್ಹಿ. ಭಟ್ಟ**
ಬಿ. ಎ., ಎಸ್. ಟಿ. ಸಿ. ವಿಶಾಖಪಟ್ಟಣ, ಸನದ

ಅಲ್ಲದೆ ನಮ್ಮಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರ ಭಾಷಾ ಮೊದಲಾದ ಪರೀಕ್ಷೆಯ ಎಲ್ಲ ಬುಕ್ಕುಗಳೂ ಹಿಂದೀ ಕಥೆ ಕಾದಂಬರಿಗಳೂ ಸಿಕ್ಕುತ್ತವೆ.

ಆಕಳವಾಡಿ ಬುಕ್ ಡಿಪೋ,
ವಿಜಯರೋಡ, ಧಾರವಾಡ

ವಿದ್ಯಾರ್ಥಿಗಳಿಗೆ ಹೊಸ ವರ್ಷದ ಕಾಣಿಕೆ

ಇದೀಗ ಪ್ರಕಟವಾಗಿದೆ! ತ್ವರೆ ಮಾಡಿರಿ!!

★ ಪ್ರಶ್ನೋತ್ತರ ಇತಿಹಾಸ ★

ಶ್ರೀ. ಗಲಗಲಿ ಬರೆದುದು

[ಮುಲ್ಕೀ, ಮ್ಯಾಟ್ರಿಕ್ ಸ್ಕಾಲರಶಿಪ್ ಪರೀಕ್ಷೆಗಳ ವಿದ್ಯಾರ್ಥಿಗಳಿಗಾಗಿ]

ಭಾರತದಲ್ಲಿ ಆರ್ಯರ ಆಗಮನದಿಂದ ಇಂದಿನವರೆಗೆ ನಡೆದ ಪ್ರತಿಯೊಂದು ಐತಿಹಾಸಿಕ ಘಟನೆಗಳನ್ನು ಪರೀಕ್ಷೆಯ ದೃಷ್ಟಿಯಿಂದ ಆಯ್ದು ಬರೆಯಲಾಗಿದೆ.

೧೭೦ ಪುಟಗಳು ಆದರೂ ಬೆಲೆ ೧ ರೂ. ಮಾತ್ರ

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್

ಆಕಳವಾಡಿ ಬುಕ್ ಡಿಪೋ,
ವಿಜಯರೋಡ, ಧಾರವಾಡ

ಆದರ್ಶ ಚಿತ್ರಕಲಾ
(IDEAL DRAWIG)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು
ಕಡೆಗಣಿಸಲ್ಪಟ್ಟ ೧೦೦ ಗುಣಗಳ ವಿಷಯ.
ಲೇಖಕರು: **ಶ್ರೀ. ಎಸ್. ಕೆ. ಜೋಶಿ**
ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧುಳಿಯಾ.

- ಈ ಪುಸ್ತಕದಲ್ಲಿ ಅಬ್ಜೆಕ್ಟ, ಮೆಮರಿ, ಡಿಜೈನು, ನೇಚರ ಮತ್ತು ದೃಷ್ಟಾಂತ ಲೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಳನ್ನು ಚಿತ್ರಿಸುವ ದಾರಿಯನ್ನು ವರ್ಣಿಸುವ ಪದ್ಧಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಸೂಡಲ್ಪಟ್ಟಿವೆ.
- ಬೆಲೆ: ೦-೧೨-೦ ಅಂಚೆವೆಚ್ಚ ೦-೪-೦ ಅಂಚೆಯಿಂದ, ವ್ಹಿ ಪಿ. ಯಿಂದ ೨-೪-೦. ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾಪೇಟೆ, ಪುಣೆ ೨.

Regd. No. B. 5375

ಸನ್ ೧೯೪೭—೪೮ ನೆಯ ಸಾಲಿನಲ್ಲಿ ಹೊರಟ ಹೊಸ ಅಭ್ಯಾಸಪತ್ರಿಕೆಗೆ
ಅನುಸರಿಸಿ ಬರೆದ ನಮ್ಮ ಪ್ರಕಟನೆಗಳು.

೪ನೆ ಇಯತ್ತೆಗಾಗಿ

ಭೂಮಂಡಲ ಪರಿಚಯ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮುಂಬಯಿಕರ್ನಾಟಕ, ಮಹಾರಾಷ್ಟ್ರ, ಗುಜರಾತ, ಕೊಂಕಣ ಮೊದಲಾದವುಗಳಲ್ಲಿಯ ಜನರ ಜೀವನ ಕ್ರಮವನ್ನು ಹವೆ, ಮಳೆ, ಬೆಳೆ ಮೊದಲಾದವುಗಳನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ; ಅಲ್ಲದೆ ವಿಶಾಲಕರ್ನಾಟಕದ ಸಂಕ್ಷಿಪ್ತ ಮಾಹಿತಿಯನ್ನು ಕೊಟ್ಟಿರುತ್ತದೆ. ವಿಲೀನೀಕೃತ ವಿಜಾಪುರ ಬೆಳಗಾಂವ ಜಿಲ್ಲೆಯ ನಕಾಶ ಹಾಗು ವಿಶಾಲ ಕರ್ನಾಟಕದ ನಕಾಶವನ್ನು ಸೇರಿಸಲಾಗಿದೆ. ಸುಮಾರು ೬೦ ಚಿತ್ರ ನಕಾಶಗಳು ಇರುತ್ತವೆ.

ಕನ್ನಡ ನಾಡಿನ ಚರಿತ್ರೆ

ಬೆಲೆ ೦—೧೪—೦

ಇದರಲ್ಲಿ ಕರ್ನಾಟಕದಲ್ಲಿ ಆಗಿಹೋದ ಶೂರ ಅರಸರ, ಕವಿಗಳ, ಧರ್ಮಗುರುಗಳ, ವೀರ ರಮಣಿಯಯರ ಜೀವನ ಚರಿತ್ರವನ್ನು ಸುಲಭ ಭಾಷೆಯಲ್ಲಿ ಕಥಾರೂಪವಾಗಿ ವಿವರಿಸಲಾಗಿದೆ.

ಸಾಮಾನ್ಯ ಜ್ಞಾನ

ಬೆಲೆ ೦—೮—೦

ಇದರಲ್ಲಿ ಮನೆಯಲ್ಲಿ ಸಾಕುವ ಪ್ರಾಣಿಗಳು, ಮುಖ್ಯ ಬೆಳೆಗಳು, ಬೇನೆಗಳು, ಹಳ್ಳಿಯ ಹಾಗೂ ನಗರದ ಆಡಳಿತೆ, ಪಂಚಾಗ ಮೊದಲಾದವುಗಳ ವಿಷಯವಾಗಿ ಸವಿಸ್ತಾರ ವರ್ಣನೆ, ಅದೆ. ಅನೇಕ ಚಿತ್ರಗಳು.

೫ನೆಯತ್ತೆಗಾಗಿ ಸಂಯುಕ್ತ ಅಭ್ಯಾಸಪತ್ರಿಕೆ ಗನುಸರಿಸಿ,

ಸಾಮಾನ್ಯ ವಿಜ್ಞಾನ ಭಾಗ೧

ಬೆಲೆ ೦—೧೨—೦

ಇದರಲ್ಲಿ ಮಾನವನ ಹಾಗೂ ಪ್ರಾಣಿಗಳ ಶ್ವಾಸೋಚ್ಛ್ವಾಸ, ಮೇಷಣ, ಚಲನೆ, ಜ್ಞಾನ ಗ್ರಹಣ, ನೀರು ಹಾಗು ಪಂಚಾಂಗಗಳ ವಿಷಯ ಸವಿಸ್ತರವಾಗಿ ವರ್ಣಿಸಲಾಗಿದೆ.

ಭೂಮಂಡಲ ಪರಿಚಯ ಭಾಗ೨

ಬೆಲೆ ೧—೨—೦

ಇದರಲ್ಲಿ ಪೃಥ್ವಿಯ ಆಕಾರ, ಪ್ರಾಯೋಗಿಕ ಹಾಗು ನಿರೀಕ್ಷಣೆಯ ಕೆಲಸ ಹಿಂದುಸ್ತಾನದ ಹವಾಮಾನ ಹಾಗು ಜಗತ್ತಿನ ಹವಾಮಾನದ ಮುಖ್ಯ ಪ್ರಕಾರಗಳ ವಿಷಯಕ್ಕೆ ವಿಶದವಾಗಿ ವರ್ಣಿಸಲ್ಪಟ್ಟಿದೆ.

ಇದೇ ಪ್ರಕಾರ **೬ ನೆಯತ್ತೆಯ ಸಾಮಾನ್ಯ ವಿಜ್ಞಾನ ೦—೧೨—೦ ಭೂಮಂಡಲ ಪರಿಚಯ ಭಾಗ ೩ ಬೆಲೆ ೧—೮—೦**

ಅಲ್ಲದೆ ಪ್ರಾಥಮಿಕ ಪ್ರಮಾಣಪತ್ರ ಅಭ್ಯಾಸ ಪತ್ರಿಕೆಯಂತೆ **ಸಾಮಾನ್ಯ ವಿಜ್ಞಾನ ಬೆಲೆ ರೂ ೧—೪—೦ ಭೂಮಂಡಲ ಪರಿಚಯ ಭಾಗಗಳ ಬೆಲೆ ರೂ ೨—೦—೦**

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳು ಎಲ್ಲ ವ್ಯಾಪಾರಸ್ಥರಲ್ಲಿ ದೊರೆಯುತ್ತವೆ.

ಇಲ್ಲವಾದರೆ

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪೊ ಧಾರವಾಡ

ಇವರಿಗೆ ಇಂದೇ ಪತ್ರ ಬರೆಯಿರಿ.

Printed by M. A. Kamat B. Sc. at Jai Hind Art Press, Javlipeth, Dharwar. Edited and Published by R. V. Desai, Principal T. C. M., Y. D. Nadakarni, Lady Superintendent T. C. W. Dharwar jointly at the Kannada Prathamik Shikshan Office Govt. Training College for Men, Dharwar.

ಕನ್ನಡ ಪ್ರಾಥಮಿಕ ಶಿಕ್ಷಣ

ಸೌರಭ



ಶ್ರೀ. ಮಿಣಜಿಗಿಯವರ ಕಲಾಕೃತಿ

ಗ ಸಂಪಾದಕರು :

ವಿ. ದೇಸಾಯಿ

★

ಗಸ್ಟ-ಸಪ್ಟಂಬರ

೧೯೫೦

★

ವಾರ್ಷಿಕ ಚಂದಾ

೪—೦—೦

★

ಬೆಲೆ

೦—೧೨—೦

ಕನ್ನಡ ಒನೆಯ ಇಯತ್ತೆಗಾಗಿ

ಆರೋಗ್ಯ ವಿಜ್ಞಾನದಲ್ಲಿ ಪೂರಕ ವಾಚನದ
ಸಲುವಾಗಿ ಮುಂಜೂರಾದದ್ದು —

ಹಳ್ಳಿಯ ಆರೋಗ್ಯ

ಬರೆದವರು: ಶ್ರೀ. ಎನ್. ಬಿ. ನಾಡಗೀರ
ನಿವೃತ್ತ ಏ.ಓ.ಡಿ.ಎಸ್.ಬಿ., ಧಾರವಾಡ

ಬೆಲೆ—೮ ಆಣೆ

ಗ್ರಾಮಗಳ ಸ್ವಚ್ಛತೆ ಹಾಗು ಆರೋಗ್ಯಜೀವನದ
ಬಗ್ಗೆ ಹೊಸ ವಿಚಾರಗಳನ್ನು ಬೀರುವ ಪುಸ್ತಕ.
ಸಮಾಜ ಶಿಕ್ಷಣಕ್ಕಾಗಿಯೂ ತುಂಬಾ ಉಪಯುಕ್ತ
ಪುಸ್ತಕ.

ಪ್ರಾ. ಶಿ. ಟ್ರೇನಿಂಗ ಕಾಲೇಜಿಗಾಗಿ
ಹಾಗೂ
ಮಾಧ್ಯಮಿಕ ಶಾಲೆಗಳಿಗಾಗಿ
ಆರೋಗ್ಯವಿಜ್ಞಾನದಲ್ಲಿ ಪೂರಕ ವಾಚನ
ವೆಂದು ಮುಂಜೂರಾಗಿದೆ

ಆಹಾರ ವಿಜ್ಞಾನ

ಬರೆದವರು:- ಶ್ರೀ. ಎನ್. ಬಿ. ನಾಡಗೀರ
ನಿವೃತ್ತ ಏ.ಓ.ಡಿ.ಎಸ್.ಬಿ.
ಪ್ರಕಾಶಕರು:- 'ಮಿಂಚಿನ ಬಳ್ಳಿ', ಧಾರವಾ
ಬೆಲೆ: ೧ ರೂ. ೪ ಆ.

ಆಹಾರಗಳ ಗುಣಾಂಶಗಳನ್ನೂ ಉಳಿತಾಯ
ವನ್ನು ಸಮತೋಲ ಆಹಾರವನ್ನೊದಗಿ
ಸುವ ವಿವಿಧ ಉಪಾಯಗಳನ್ನು ಚನ್ನಾಗಿ
ವಿಷದ ಪಡಿಸುವ ಪುಸ್ತಕ. ಸಮಾಜ
ಶಿಕ್ಷಣಕ್ಕೂ ತುಂಬಾ ಉಪಯುಕ್ತವಾಗಿದೆ.

ಬಿ. ಶ್ರೀ ಕುಲಕರ್ಣಿಯವರ ಕಥೆಯ ಪುಸ್ತಕಗಳು

೧.	ಭಕ್ತ ಧ್ರುವ	೦	೨	೦	೧೪.	ಭಕ್ತ ಪ್ರಲ್ಹಾದ	೦	೨	೦
೨.	ರನಿ ಮಹಾತ್ಮೆ	೦	೨	೦	೧೫.	ಗಜೇಂದ್ರ ಮೋಕ್ಷ	೦	೨	೦
೩.	ಮೊದಲನೇ ತರಗತಿಯ ಕಥೆ	೦	೩	೦	೧೬.	ಎರಡನೇ ತರಗತಿಯ ಕಥೆ	೦	೪	೦
೪.	ಸುದಾಮ ಚರಿತ್ರೆ	೦	೪	೦	೧೭,	ಮೂರನೇ ತರಗತಿಯ ಕಥೆ	೦	೫	೦
೫.	ಮಹಾತ್ಮಾ ಗಾಂಧಿ	೦	೪	೦	೧೮.	ಜವಾಹರಲಾಲ ನೆಹರು	೦	೪	೬
೬.	ಸುಭಾಸಚಂದ್ರ ಭೋಸ	೦	೪	೯	೧೯.	ಶ್ರೀ ರಾಮಕೃಷ್ಣ	೦	೫	೦
೭.	ಕುಮಾರ ರಾಮಣ್ಣ	೦	೬	೦	೨೦.	ಕುಮಾರ ಕಿಟ್ಟಣ್ಣ	೦	೪	೦
೮.	ಭಕ್ತ ಹನುಮಾನ	೦	೬	೦	೨೧.	ರಾಮಕೃಷ್ಣ ನೀತಿಯ ಕಥೆ	೦	೬	೦
೯.	ಶ್ರೀ ಕೃಷ್ಣ ಚರಿತ್ರೆ	೦	೮	೦	೨೨.	ಪುರಂದರ ಪದಗಳು	೦	೮	೦
೧೦.	ಬದರೀ ಚರಿತ್ರೆ	೦	೮	೦	೨೩.	ಸತ್ಯವಾಸ ನಾಟಿಕೆ	೦	೮	೦
೧೧.	೪ನೇ ತರಗತಿಯ ಕಥೆ	೦	೬	೦	೨೪.	ರಾಷ್ಟ್ರೀಯ ಮಹಾಪುರುಷರು	೦	೧೦	೦
೧೨.	ಸಂಧ್ಯಾವಂದನೆ	೦	೩	೦	೨೫.	ಶಂಕರಾಚಾರ್ಯ	೦	೬	೦
೧೩.	ಚಿತ್ತೂರ ಪದ್ಮಿನಿ	೦	೪	೦					

(೧ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾಗುವುದಿಲ್ಲ.)

— ಕೆ. ಎಸ್. ಕುಲಕರ್ಣಿ ಬುಕ್ ಡಿಪೊ, ಹುಬ್ಬಳ್ಳಿ —

ಸಂಪಾದಕ ಮಂಡಲ

ಸಂಚಾಲಕರು. **ಶ್ರೀ ಬಿ. ಎಮ್. ಮೀಮಾಂಸಿ**, ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಭಾಗ, ಧಾರವಾಡ
ಪ್ರಧಾನ ಸಂಪಾದಕರು: **ಶ್ರೀ. ರಾ. ವಿ. ದೇಸಾಯಿ**, ಪ್ರಿನ್ಸಿಪಾಲ್, ಗಂಡುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಎಜ್ಯುಕೇಶನಲ್ ಇನಸ್ಪೆಕ್ಟರ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ

ಸಂಪುಟ ೯೦	ಆಗಸ್ಟ–ಸಪ್ಟೆಂಬರ ೧೯೫೦	ಸಂಚಿಕೆ ೩–೪

— ಪರಿವಿಡಿ —

ಸಂಪಾದಕೀಯ		೫
ವಿಶಿಯಾಖಂಡವ ಹೊಸ ಆಚಾರಣಾವು	ಶ್ರೀ. ಶಿಂತ್ರಿ ಬಸಪ್ಪನವರು	೫
ನಕಾಶಗಳು	,, ...	೧೦
ಅಭ್ಯಾಸಪತ್ರಿಕೆ (ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ)	ಶ್ರೀ ಎಸ್. ಆರ್. ತಟ್ಟಿ	೧೩
ಶಾರೀರಿಕ ಶಿಕ್ಷಣ ಅಭ್ಯಾಸಪತ್ರಿಕೆ (ಜಿಲಿಂಪ ಪಿಸೆಯ ಇಯತ್ತೆ)	....	೨೫
ಸಾರ್ವಜನಿಕ ವಿಕ್ಷಣ (ಕೃಬರೆಹ ಸುಧಾರಣೆ)	ಹೆಣ್ಣುಮಕ್ಕಳ ಟ್ರೇ ಕಾ. ದಿಂದ	೩೪
ಮೂಲೋದ್ಯೋಗ ಅಲ್ಪಾವಧಿ ತರಬೇತಿ ವರ್ಗದ ವರದಿಯು	ಶ್ರೀ. ಪರ್ಕೀಕರ	೩೫
ಸುದ್ದಿಗಳು .... ಸ್ವಾತಂತ್ರ್ಯದ ತತೀಯ ವರ್ಧಂತಿ ಉತ್ಸವ	.. ..	೨
.... ಕಾವ್ಯಗಾಯನ ಕಾರ್ಯಕ್ರಮ	....	೪೦

ಕನ್ನಡ ಒನೆಯ ಇಯತ್ತೆಗಾಗಿ

ಆರೋಗ್ಯ ವಿಜ್ಞಾನದಲ್ಲಿ ಪೂರಕ ವಾಚನದ

- ಸಲುವಾಗಿ ಮಂಜೂರಾದದ್ದು —

ಹಳ್ಳಿಯ ಆರೋಗ್ಯ

ಬರೆದವರು: ಶ್ರೀ. ಎನ್. ಬಿ. ನಾಡಗೀರ

ನಿವೃತ್ತ ಏ.ಓ.ಡಿ.ಎಸ್.ಬಿ., ಧಾರವಾಡ

ಬೆಲೆ—೮ ಆಣೆ

ಗ್ರಾಮಗಳ ಸ್ವಚ್ಛತೆ ಹಾಗು ಆರೋಗ್ಯಜೀವನದ ಬಗ್ಗೆ ಹೊಸ ವಿಚಾರಗಳನ್ನು ಬೀರುವ ಪುಸ್ತಕ. ಸಮಾಜ ಶಿಕ್ಷಣಕ್ಕಾಗಿಯೂ ತಂಬಾ ಉಪಯುಕ್ತ ಪುಸ್ತಕ.

ಪ್ರಾ. ಶಿ. ಟ್ರೇನಿಂಗ ಕಾಲೇಜಿಗಾಗಿ

ಹಾಗೂ

ಮಾಧ್ಯಮಿಕ ಶಾಲೆಗಳಿಗಾಗಿ

ಆರೋಗ್ಯವಿಜ್ಞಾನದಲ್ಲಿ ಪೂರಕ ವಾಚನ

ವೆಂದು ಮಂಜೂರಾಗಿದೆ

ಆಹಾರ ವಿಜ್ಞಾನ

ಬರೆದವರು:— ಶ್ರೀ. ಎಸ್. ಬಿ. ನಾಡಗೀರ

ನಿವೃತ್ತ ಏ.ಓ.ಡಿ.ಎಸ್.ಬಿ.

ಪ್ರಕಾಶಕರು:— 'ಮಿಂಚಿನ ಬಳ್ಳಿ', ಧಾರವಾಡ

ಬೆಲೆ: ೧ ರೂ. ೪ ಆ.

ಆಹಾರಗಳ ಗುಣಾಂಶಗಳನ್ನೂ ಉಳಿತಾಯವನ್ನು ಸಮತೋಲ ಆಹಾರವನ್ನೊದಗಿಸುವ ವಿವಿಧ ಉಪಾಯಗಳನ್ನು ಜನತ್ನಾಗಿ ವಿಷದ ಪಡಿಸುವ ಪುಸ್ತಕ. ಸಮಾಜ ಸಿಕ್ಷಣಕ್ಕೂ ತುಂಬಾ ಉಪಯುಕ್ತವಾಗಿದೆ.

ಜಿ. ಶ್ರೀ ಕುಲಕರ್ಣಿಯವರ ಕಥೆಯ ಪುಸ್ತಕಗಳು

೧.	ಭಕ್ತ ಧ್ರುವ	೦	೨	೦	೧೪.	ಭಕ್ತ ಪ್ರಲ್ಹಾದ	೦	೨	೦
೨.	ಶನಿ ಮಹಾತ್ಮೆ	೦	೨	೦	೧೫.	ಗಜೇಂದ್ರ ಮೋಕ್ಷ	೦	೨	೦
೩.	ಮೊದಲನೇ ತರಗತಿಯ ಕಥೆ	೦	೩	೦	೧೬.	ಎರಡನೇ ತರಗತಿಯ ಕಥೆ	೦	೪	೦
೪.	ಸುದಾಮ ಚರಿತ್ರೆ	೦	೪	೦	೧೭.	ಮೂರನೇ ತರಗತಿಯ ಕಥೆ	೦	೫	೦
೫.	ಮಹಾತ್ಮಾ ಗಾಂಧಿ	೦	೪	೦	೧೮.	ಜವಾಹರಲಾಲ ನೆಹರು	೦	೪	೬
೬.	ಸುಭಾಸಚಂದ್ರ ಭೋಸ	೦	೪	೯	೧೯.	ಶ್ರೀ ರಾಮರಕ್ಷೆ	೦	೫	೦
೭.	ಕುವರ ರಾಮಣ್ಣ	೦	೬	೦	೨೦.	ಕುಮಾರ ಕೆಟ್ಟಣ್ಣ	೦	೪	೦
೮.	ಭಕ್ತ ಹನುಮಾನ	೦	೬	೦	೨೧.	ರಾಮಕೃಷ್ಣ ನೀತಿಯ ಕಥೆ	೦	೬	೦
೯.	ಶ್ರೀ ಕೃಷ್ಣ ಚರಿತ್ರೆ	೦	೮	೦	೨೨.	ಪುರಂದರ ಪದಗಳು	೦	೮	೦
೧೦.	ಬದರೀ ಚರಿತ್ರೆ	೦	೮	೦	೨೩.	ಸತ್ಯವಾನ ಸಾವಿತ್ರಿ	೦	೮	೦
೧೧.	೪ನೇ ತರಗತಿಯ ಕಥೆ	೦	೬	೦	೨೪.	ರಾಷ್ಟ್ರೀಯ ಮಹಾಪುರುಷರು	೦	೧೦	೦
೧೨.	ಸಂಧ್ಯಾವಂದನೆ	೦	೩	೦	೨೫.	ಶಂಕರಾಚಾರ್ಯ	೦	೬	೦
೧೩.	ಚಿತ್ತೂರ ಪದ್ಮಿನಿ	೦	೪	೦					

(೧ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾ[illegible])

— ಕೆ. ಎಸ್. ಕುಲಕರ್ಣಿ ಬುಕ್ ಡಿಪೊ, ಹುಬ್ಬಳ್ಳಿ —

ಸಂಪಾದಕ ಮಂಡಲ

ಸಂಚಾಲಕರು. **ಶ್ರೀ ಬಿ. ಎಮ್. ಮೀಮಾಂಸಿ**, ಎಜ್ಯುಕೇಶನಲ್ ಇನಸ್ಪೆಕ್ಟರ್, ಧಾರವಾಡ ಭಾಗ. ಧಾರವಾಡ
ಪ್ರಧಾನ ಸಂಪಾದಕರು: **ಶ್ರೀ. ರಾ. ವಿ. ದೇಸಾಯಿ**, ಪ್ರಿನ್ಸಿಪಾಲ್, ಗಂಡುಮಕ್ಕಳ ಟ್ರೇನಿಂಗ ಕಾಲೇಜ. ಧಾರವಾಡ

ಸಹಸಂಪಾದಕರು :

ಶ್ರೀ. ಯಮುನಾಬಾಯಿ ನಾಡಕರ್ಣಿ, ಲೇಡಿ ಸುಪರಿಂಟೆಂಡೆಂಟ್, ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ. ಧಾರವಾಡ
ಶ್ರೀ. ಬಿ. ಎಂ. ಶಿಂತ್ರಿ, ರಿಟಾಯರ್ಡ ಎಜ್ಯುಕೇಶನಲ್ ಇನಸ್ಪೆಕ್ಟರ. ಧಾರವಾಡ.
ಶ್ರೀ. ಎಸ್. ಆರ್. ತಟ್ಟಿ, ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ. ಸಹಲ್ಗಾಂವ

ಸಂಪುಟ ೯೦	ಆಗಸ್ಟ-ಸಪ್ಟೆಂಬರ ೧೯೫೦	ಸಂಚಿಕೆ ೩-೪

— ಪರಿವಿಡಿ —

ಸಂಪಾದಕೀಯ	....	...	೨
ವಿಶಿಯಾಖಂಡವ ಹೊಸ ಆಜ್ಞಾಕಿರಣವು	ಶ್ರೀ. ಶಿಂತ್ರಿ ಬಸವಪ್ಪನವರು	..	೯
ನಕಾಶಗಳು	,,	...	೧೦
ಅಭ್ಯಾಸಪತ್ರಿಕೆ (ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ)	ಶ್ರೀ ಎಸ್. ಆರ್. ತಟ್ಟಿ	....	೧೩
ಶಾರೀರಿಕ ಶಿಕ್ಷಣ ಅಭ್ಯಾಸಪತ್ರಿಕೆ (ಐದಿಂದ ಒನೆಯ ಇಯತ್ತೆ)		....	೩೫
ಸಾರ್ವಜನಿಕ ಶಿಕ್ಷಣ (ಕೈಬರೆಹ ಸುಧಾರಣೆ)	ಹೆಣ್ಣುಮಕ್ಕಳ ಟ್ರೇ ಕಾ. ವಿಂದ	....	೩೪
ಮೂಲೋದ್ಯೋಗ ಅಲ್ಪಾವಧಿ ತರಬೇತಿ ವರ್ಗದ ವರದಿಯು	ಶ್ರೀ. ಹೆಬ್ಬೇಕರ	....	೩೫
ಸುದ್ದಿಗಳು .... ಸ್ವಾತಂತ್ರ್ಯದ ತತೀಯ ವರ್ಧಂತಿ ಉತ್ಸವ	....	....	೨
.... ಕಾವ್ಯಗಾಯನ ಕಾರ್ಯಕ್ರಮ	....	....	೪೦

ಭಾರತ ಸ್ವಾತಂತ್ರ್ಯದ ತೃತೀಯ ವರ್ಧಂತಿ ಉತ್ಸವ

ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನಲ್ಲಿ

ಧಾರವಾಡದ ಸರಕಾರಿ ಗಂಡುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ, ಮಾನ್ಯ ಅತಿಥಿಗಳಾದ ಪ್ರೊ. ಆರ್. ವಾಯ್. ಧಾರವಾಡಕರ, ಕೆ. ಇ. ಬೋರ್ಡ ಆರ್ಟ್ಸ ಕಾಲೇಜ, ಇವರ ಹಸ್ತದಿಂದ ರಾಷ್ಟ್ರಾಧ್ಯಕ್ಷರಾದ ಮಾನ್ಯ ರಾಜೇಂದ್ರಪ್ರಸಾದ ಮತ್ತು ಮುಖ್ಯಮಂತ್ರಿ ಪಂಡಿತ ಜವಾಹರಲಾಲ ನೆಹರು ಅವರ ಸ್ಫೋಟೋದ ಅನಾವರಣ ಸಮಾರಂಭವು ನೆರವೇರಿಸಲ್ಪಟ್ಟಿತು. ಈ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ. ಆರ್. ಪ್ಹಿ. ದೇಸಾಯಿಯವರು ಅಧ್ಯಕ್ಷತೆ ವಹಿಸಿದ್ದರು.

ಸಭೆಯ ಕಾರ್ಯಕ್ರಮ ಅಗಸ್ಟ ೧೫ರ ಮಧ್ಯಾಹ್ನ ೧೧ ಘಂಟೆಗೆ ರಾಷ್ಟ್ರಗೀತೆಯೊಂದಿಗೆ ಆರಂಭವಾಯಿತು. ಶ್ರೀ. ಪ್ಹಿ. ಆರ್. ಹಿರೇಮಠರು ಅತಿಥಿಗಳ ಪರಿಚಯ ಮಾಡಿಕೊಟ್ಟ ನಂತರ ಅಧ್ಯಕ್ಷರು ಸಮಯೋಚಿತ ನಾಲ್ಕು ಮಾತು ಹೇಳಲು ವಿನಂತಿ ಮಾಡಿದ ನಂತರ, ಅತಿಥಿಗಳ ಭಾಷಣ ಆರಂಭವಾಯಿತು—

ವರ್ಧಾ ಶಿಕ್ಷಣದ ಸಂಸ್ಕಾರವನ್ನು ಪಡೆದ ಜನರ ಮಧ್ಯದಲ್ಲಿ, ನಾನು ಮಾತಾಡುವದು ಅತ್ಯಲ್ಪ. ನನ್ನ ವೇಷ-ಭೂಷ, ಸಂಸ್ಕಾರ ಬೇರೆ ತರದ್ದು. ವರ್ಧಾ ಶಿಕ್ಷಣದ ತತ್ವದ ಒಂದಂಶವಾದರೂ ನನ್ನ ಕೃತಿಯಲ್ಲಿಲ್ಲ ಎಂದು ಮುಂತಾಗಿ ಭಾಷಣವನ್ನು ಆರಂಭಿಸಿದರು.

ವರ್ಧಾ ಶಿಕ್ಷಣದ ತತ್ವ ಕೃತಿಯಲ್ಲ ಎಷ್ಟರ ಮಟ್ಟಿಗೆ ಇಳಿಯುತ್ತದೆ? ಉದಾತ್ತ ಧ್ಯೇಯ, ಆದರ್ಶಮಯ ಜೀವನ ಎಷ್ಟರ ಮಟ್ಟಿಗೆ ಕೃತಿಯಲ್ಲಿಳಿಸಲು ಸಾಧ್ಯ? ಸಾಮಾನ್ಯ ಜನಜೀವನದ ಕುಂದು-ಕೊರತೆಗಳು, ಯಾವವು? ಎಂಬ ವಿಷಯಗಳ ಬಗ್ಗೆ ಒಳ್ಳೇ ರಸವತ್ತಾಗಿ, ವ್ಯಾವಹಾರಿಕವಾಗಿ ದೃಷ್ಟಾಂತಗಳನ್ನು ಕೊಡುತ್ತ, ವಾಸ್ತವಿಕ ಜೀವನವನ್ನು ಸಭಿಕರೆದುರಿಗಿಟ್ಟರು.

ನಂತರ ಸಂಸ್ಕೃತಿಯ ಬಗ್ಗೆ ವಿಚಾರಪರಿಪ್ಲುತ ಮಾತುಗಳನ್ನಾಡಿದರು. ನಿಜವಾದ ಸಂಸ್ಕೃತಿಯು, ಧರ್ಮದಲ್ಲಿ ನಿಷ್ಣಾತನಾಗುವದರಲ್ಲಿಲ್ಲ; ಒಳ್ಳೇ ಜಾಣನೆನಿಸಿಕೊಳ್ಳುವದರಲ್ಲಿಲ್ಲ; ಅದು ಶೀಲಸಂವರ್ಧನೆಯ ಗುಣಗಳನ್ನು ಬೆಳಿಸಿಕೊಂಡು ಆದರ್ಶಮಯ ಜೀವನವನ್ನು ಸಾಗಿಸುವದರಲ್ಲಿದೆ ಎಂಬ ವಿಷಯವನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಸ್ಪಷ್ಟೀಕರಿಸಿದರು.

ಒಟ್ಟಿನ ಮೇಲೆ ಮಾನವ ನೋದು ಸೈರಿಸುವದರಲ್ಲಿಯೆ ಜೀವನದ ಸಾರವಿದೆ. ನಾವು ಈ ಗುಣವನ್ನು ನಿತ್ಯ ಜೀವನದ ವ್ಯವಹಾರಗಳಲ್ಲಿ ಉಪಯೋಗಿಸಿಕೊಳ್ಳುತ್ತ ಹೋಗಬೇಕು ಎಂದು ಹೇಳಿದರು. ಒಂದೇ-ಮಾತರಂ ಗೀತೆಯೊಡನೆ ಸಭೆಯ ಕಾರ್ಯಕ್ರಮ ಕೊನೆಗಂಡಿತು.

ಪುಟ ೨೭೫] ಕೈನೇಯಿಗೆಯ ಮಾರ್ಗದರ್ಶಿಕೆ [ಬೆಲೆ: ೨ ರೂ. ೧೨ ಆ.

ಲೇಖಕರು: ಎಂ. ಡಿ. ಮೇಲಗಿರಿ

ಮೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ್, ಧಾರವಾಡ ಭಾಗ, ಧಾರವಾಡ ಅವರ ಪತ್ರ ನಂ. ೧೧೯೭೭/೩೦-೮-೫೦ ಅನ್ವಯ ಪ್ರೀ. ಕಾ. ದ ೧ನೆಯ ಹಾಗು ೨ನೆಯ ವರ್ಷದ ವಿದ್ಯಾರ್ಥಿಗಳಿಗೆ "ಪೂರಕ ಓದು" ಎಂದು ಸರಕಾರದಿಂದ ಮಂಜೂರಾಗಿದೆ. ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಎಮ್. ಕೆ. ಮೇಲಗಿರಿ

ಕಮಲಾಪುರ ಭಾಗ, (ಈಶ್ವರದೇವರ ಗುಡಿ ಓಣಿ) ಧಾರವಾಡ

ಪ್ರಧಾನ ಸಂಪಾದಕರು:– ಶ್ರೀ. ರಾ. ವಿ. ದೇಸಾಯಿ

ಸಂಪಾದಕೀಯ

★

ಭಾರತ ಸ್ವಾತಂತ್ರ್ಯದ ತೃತೀಯ ವರ್ಧಂತ್ಯುತ್ಸವ:

೧೯೫೦ ಆಗಸ್ಟ ೧೫ಕ್ಕೆ ಸಮಗ್ರ ಭಾರತದಲ್ಲಿಯೂ ಭಾರತೀಯರು ಇರುವ ಪ್ರತಿಯೊಂದು ದೇಶದಲ್ಲಿಯೂ ಭಾರತ ಸ್ವಾತಂತ್ರ್ಯದ ತೃತೀಯ ವರ್ಧಂತಿಯ ಉತ್ಸವವು ಎಲ್ಲ ಕಡೆಗೂ ಆಚರಿಸಲ್ಪಟ್ಟಿತು. ಅನೇಕ ಎಡರು ತೊಡರುಗಳನ್ನು ಎದುರಿಸಿ ಭಾರತವು ಮುನ್ನಡೆದಿದೆ ಮತ್ತು ಜಗತ್ತಿನ ರಾಜಕೀಯ ರಂಗದಲ್ಲಿಯೂ ಶೈಕ್ಷಣಿಕ ಸಾಮಾಜಿಕ ಸಾಂಸ್ಕೃತಿಕ ರಂಗದಲ್ಲಿಯೂ ಮಹತ್ಪಾತ್ರವನ್ನು ವಹಿಸಿ ತನ್ನ ಮೇಲ್ಮೈಯನ್ನು ಕಾಪಾಡಿಕೊಂಡು ಬಂದಿದೆ. ಭಾರತದ ಹಿರಿಮೆಯ ನೊಲ್ಲು ಎಲ್ಲೆಡೆಯಲ್ಲಿಯೂ ಕೇಳಿ ಬರುತ್ತಲಿದೆ. ಇಷ್ಟಾದಾಗ್ಯೂ ಭಾರತದ ಎದುರಿಗೆ ಇನ್ನೂ ಅನೇಕ ದೊಡ್ಡ ಸಮಸ್ಯೆಗಳು ಇವೆ. ಅವುಗಳಲ್ಲಿ ಅತ್ಯಂತ ಮುಖ್ಯವಾದುವು ಆಹಾರ,ಆಚ್ಛಾದನ ಹಾಗು ಆಶ್ರಯ. ಇವುಗಳನ್ನೂ ಭಾರತ ಸರಕಾರವು ಬಿಡಿಸಲು ಕಂಕಣಬದ್ಧವಾಗಿದೆ. ಈ ಮೂರೂ ಸಮಸ್ಯೆಗಳಲ್ಲಿ ಅತ್ಯಂತ ಮುಖ್ಯವಾದುದು ಆಹಾರದ ಪ್ರಶ್ನೆ. ಈ ಪ್ರಶ್ನೆಯನ್ನು ಬಿಡಿಸುವ ಯೋಜನೆಗಳಿಗೆ ಶಿಕ್ಷಕರು ನೆರವಾಗಬೇಕೆಂದು ಒತ್ತಿ ಹೇಳಬಯಸುತ್ತೇವೆ. ಜೀವನ ಶಿಕ್ಷಣದ ಪ್ರಚಾರಕಾರ್ಯವನ್ನು ಕೈಕೊಂಡು ಅದನ್ನು ಕಾರ್ಯರಂಗಕ್ಕೆ ಇಳಿಸಿದರೆ ನಮ್ಮ ನಾಡು ಬೇಗ ಅನ್ನ–ವಸ್ತ್ರಸ್ವಾವಲಂಬಿಯಾಗುವದು, ಮತ್ತು ಆಹಾರ ಆಚ್ಛಾದನದ ಸಮಸ್ಯೆಗಳು ಬಗೆಹರಿಯುವವು. ಇನ್ನು ಆಶ್ರಯದ ಸಮಸ್ಯೆ. ಇದು ಬೇಗ ಬಿಡುವಂತಹದಲ್ಲ. ಇದೂ ಕ್ರಮೇಣವಾಗಿ ಬಗೆಹರಿಯಬಲ್ಲದು. ಆದರೆ ಇವಕ್ಕೆ ದೊಡ್ಡ ಮನಸ್ಸು ಬೇಕು. ದೊಡ್ಡ ಮನೆಗಳಿದ್ದವರೂ ಧನಿಕರೂ ಶ್ರೀಮಂತರೂ ಅನೇಕರಿಗೆ ಸ್ಥಳವನ್ನು ಒದಗಿಸಿಕೊಟ್ಟಲ್ಲಿ ಈ ಸಮಸ್ಯೆಯೂ ಕಠಿನವಾಗಲಾರದು.

ಈ ಮೂರೂ ಸಮಸ್ಯೆಗಳನ್ನು ಬಿಡಿಸವದು ಸಾಧ್ಯವಾಗಬೇಕಾದರೆ ಸ್ವಾತಂತ್ರ್ಯದ ರಕ್ಷಣೆ ಅತ್ಯವಶ್ಯ. ನಮಗೆ ದೊರೆತ ಸ್ವಾತಂತ್ರ್ಯವನ್ನು ಭದ್ರವಾಗಿ ಉಳಿಯುವಂತೆ ನಮ್ಮ ಶಿಕ್ಷಕ ಬಂಧುಗಳು ಯತ್ನಿಸವಲ್ಲಿ ನಮ್ಮ ದೇಶವು ಇಡಿ ಜಗತ್ತಿಗೆ ಸುಖದ ಧಾರಿಯನ್ನು ತೋರಬಲ್ಲದು. ಇತ್ತ ಶಿಕ್ಷಕರು ತಮ್ಮ ಕಿಂಚಿತ್ ಶಕ್ತಿಯನ್ನಾದರೂ ಉಪಯೋಗಿಸಬೇಕೆಂದು ಸೂಚಿಸ ಬಯಸುತ್ತೇವೆ.

ಚಂದಾದಾರರಲ್ಲಿ ವಿನ್ನಹ :

ಪ್ರಾಥಮಿಕ ಶಿಕ್ಷಣದ ಹೊಸವರುಷವು ಪ್ರಾರಂಭವಾಗಿ ಈ ಸಂಚಿಕೆಗೆ ನಾಲ್ಕು ತಿಂಗಳುಗಳಾದವು. ಇದಕ್ಕೆ ಚಂದಾದಾರರಾಗಿರುವವರು ತಮ್ಮ ಚಂದಾಹಣವನ್ನು ಕೂಡಲೇ ಕಳಿಸಬೇಕಾಗಿ ವಿನ್ನಹ. ಇದು ವರೆಗೆ ನಮಗೆ ಬಿಡಿ ಚಂದಾದಾರರಿಂದ ಬಂದ ಹಣದಿಂದಲೇ ಪತ್ರಿಕೆಯನ್ನು ಹೊರಡಿಸುತ್ತ ಬಂದಿದ್ದೇವೆ. ಹಣದ ಅನಾನುಕೂಲತೆಯಿಂದಾಗಿ ಸಂಯುಕ್ತ ಸಂಚಿಕೆಗಳನ್ನು ಕೂಡ ಹೊರಡಿಸುವ ಪ್ರಸಂಗ ಬಂದಿದೆ. ಪ್ರತಿತಿಂಗಳೂ ತಪ್ಪದೇ ಹೊರಡಿಸದಿದ್ದಲ್ಲಿ 'ಪ್ರಾಥಮಿಕ ಶಿಕ್ಷಣ'ಕ್ಕೆ ದೊರೆತ ಅಂಚೆಯ ರಿಯಾಯತಿ ಸಹ ಸಿಗಲಾರದು. ಇದರಿಂದಾಗಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ವೆಚ್ಚ ಬರುವದು. ಇತ್ತ ಗಮನವಿತ್ತು ಈ ವರೆಗೆ ಚಂದಾ ಕೊಡದಿದ್ದ ಚಂದಾದಾರರು ತಮ್ಮ ಚಂದಾ ಹಣವನ್ನು ಬೇಗನೇ ಕಳುಹಿಸಿ ನಮ್ಮ ಈ ಕಾರ್ಯದಲ್ಲಿ ಸಹಕರಿಸಬೇಕೆಂದು ಕೋರುತ್ತೇವೆ.

ಪುಸ್ತಕ ವಿಮರ್ಶೆ

ಆಹಾರವಿಜ್ಞಾನ ಸಾರ

ಲೇಖಕರು : **ಶ್ರೀ. ಎನ್. ಬಿ. ನಾಡಗೇರ** ಬಿ.ಎ.(ಆನರ್ಸ), ನಿವೃತ್ತ ಶಿಕ್ಷಣಾಧಿಕಾರಿಗಳು, ಧಾರವಾಡ.

ಪ್ರಕಾಶಕರು: **ಮಿಂಚಿನ ಬಳ್ಳಿ, ಧಾರವಾಡ.** ಕ್ರೌನ್ ೪ರ ೧೧೦ ಪುಟಗಳು, ಬೆಲೆ: ೯—೪—೦

ಭಾರತದ ಆಹಾರ ಸಮಸ್ಯೆಯು ಇಂದು ಬಹು ಜಟಿಲವಾಗಿದೆಯೆಂಬ ಮಾತು ಸರ್ವರಿಗೂ ತಿಳಿಮದೇ ಆಗಿದೆ. ಈ ಸಮಸ್ಯೆಯು ಕೇವಲ ಸರಕಾರದಿಂದ ಬಿಡಿಸಲ್ಪಡಲಾರದು, ಜನತೆಯ ಸಹಕಾರವೂ ಅದಕ್ಕೆ ಅವಶ್ಯವಾಗಿ ಬೇಕಾದುದು. ಆಹಾರದ ಸಮಸ್ಯೆಯನ್ನು ಬಿಡಿಸುವ ಕಾರ್ಯಕ್ಕೆ ಜನತೆಯು ಹೇಗೆ ನೆರವಾಗಬಹುದೆಂಬುದನ್ನು ಕುರಿತು ಲೇಖಕರು ಈ ಸಮಸ್ಯೆಯನ್ನು ಅಳವಾಗಿ ಅಭ್ಯಸಿಸಿ ಬರೆದಿದ್ದಾರೆ. ಇದು ಶಿಕ್ಷಕರಿಗಷ್ಟೇ ಅಲ್ಲದೆ ಸಾಮಾನ್ಯ ಜನತೆಗೂ ಉಪಯುಕ್ತವಾದುದಾಗಿದೆ. ಸರಳ ಶೈಲಿ ಇದೆ. ಸರ್ವರಿಗೂ ತಿಳಿಯುವಂತಹ ತಿಳಿಯಾದ ಶೈಲಿಯಿಂದ ಗಡುಸು ವಿಷಯವು ಹಗುರಾಗಿದೆ.

ಶ್ರೀ. ಶಿ. ಶಿ. ಬಸವನಾಳ, ಶ್ರೀ. ವ್ಹಿ. ಬಿ. ನಾಯಿಕ, ಡಾ. ಹರ್ಡೀಕರ, ಡಾ. ಮ. ಗೋಪಾಲಕೃಷ್ಣರಾಯರು ಮುಂತಾದವರ ಒಳ್ಳೆಯ ಅಭಿಪ್ರಾಯಗಳಿಂದಲೂ, ಡಾ. ಕಾಂತೇಶ ಕಮಲಾಪುರ ಅವರ ಮುನ್ನುಡಿಯಿಂದಲೂ ಯುಕ್ತವಾದ ಈ ಪುಸ್ತಕದ ಲಾಭವನ್ನು ಸರ್ವರೂ ಪಡೆಯಲೆಂದು ಹಾರೈಸುತ್ತೇವೆ. ಸಕಾಲದಲ್ಲಿ ಈ ಪುಸ್ತಕ ಬರೆದವರಿಗೂ ಪ್ರಸಿದ್ಧಿಸಿದ ಮಿಂಚಿನ ಬಳ್ಳಿಯವರಿಗೂ ಧನ್ಯವಾದಗಳು.

—ಪ್ರಧಾನ ಸಂಪಾದಕರು

ಏಶಿಯಾಖಂಡದ ಹೊಸ ಆಶಾಕಿರಣವು

ಕನ್ನಡಿಸಿದವರು :—

ಶ್ರೀಯುತ ಶಿಂತ್ರಿ ಬಸಪ್ಪನವರು. ಬಿ. ಎ., ಬಿ. ಟಿ.

ರಿಟಾಯರ್ಡ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೇಕ್ಟರ ಧಾರವಾಡ ಭಾಗ, ಧಾರವಾಡ

ಸಂಯುಕ್ತರಾಷ್ಟ್ರಗಳ ವೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘದ ಸಮ್ಮೇಲನವು ಏಶಿಯಾಖಂಡದ ಜನಾಂಗಗಳಿಗೆ ತೋರಿದ ಹೊಸ ಆಶಾಕಿರಣವು.

ಕಳೆದ ಎರಡನೆಯ ಜಾಗತಿಕ ಯುದ್ಧದಲ್ಲಿ ವಿಶ್ವ ಮೇಘದ ಕೋಲಾಹಲವು ಭರದಿಂದ ವಿಶ್ವವನ್ನೇ ಆವರಿಸಿಕೊಂಡಾಗ್ಗೆ ಹಿಂದುಸ್ತಾನದ ಸುಪ್ರಸಿದ್ಧ ಕವಿ ಯಾದ ರವೀಂದ್ರನಾಥ ಟಾಗೋರವರು ತಮ್ಮದೇ ಆದ ಶಾಂತ ಶೈಲಿಯಿಂದಲೂ ಸ್ವರದಿಂದಲೂ ಒಂದು ಭವಿಷ್ಯವನ್ನು ನುಡಿದು ಮಾನವ ಕುಟುಂಬಕ್ಕೆ ಒಂದು ಆಶ್ವಾಸನವನ್ನು ಕೊಟ್ಟದ್ದುಂಟು. ಅದೆಂದರೆ ಕೋಲಾ ಹಲದ ಮುಕ್ತಾಯದ ನಂತರ ಎಲ್ಲ ರಾಷ್ಟ್ರಗಳು ಒಂದೆಡೆ ಸೇರಿ ಒಂದು ಸಂಘವನ್ನು ಸ್ಥಾಪಿಸಿಕೊಳ್ಳುವವು ಮತ್ತು ಅವುಗಳಲ್ಲಿ ಪರಸ್ಪರರ ಬಗೆಗೆ ತಿಳುವಳಿಕೆಯು ದಿನ ದಿನಕ್ಕೆ ಬೆಳೆಯುತ್ತ ಹೋಗುವದು. ಯುನೆಸ್ಕೋ (ಯಕ್ತ ರಾಷ್ಟ್ರಗಳ ವೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘ)ದ ಸಮ್ಮೇಲನವು ೧೯೪೬ನೆಯ ಇಸವಿಯ ನವಂಬರ ಡಿಶಂಬರ ತಿಂಗಳುಗಳಲ್ಲಿ ಟಾಗೋರವರ ದೇಶ(ಹಿಂದುಸ್ತಾನ)ದಲ್ಲಿಯೇ ಜರುಗಿದ ಸಂಗತಿಯು ವಾಚಕರ ನೆನಪಿನಲ್ಲಿರಲು ಸಾಕು. ರವೀಂದ್ರ-ರವರ ಅಮರ ಭವಿಷ್ಯವಾಣಿಯು ಪುಟಗೊಟ್ಟ ಸ್ಫೂರ್ತಿ ಯಿಂದ ತುಂಬಿದವರಾಗಿ ಆಮಂತ್ರಿತ ಪ್ರತಿನಿಧಿಗಳೆಲ್ಲ ಹಳ್ಳಿಗಾಡಿನ ಪ್ರೌಢಶಿಕ್ಷಣವನ್ನು ಸಾಮುದಾಯಿಕ ಕಾರ್ಯವನ್ನಾಗಿ ಹೇಗೆ ಪರಿವರ್ತಿಸಬೇಕೆಂಬುದನ್ನು ಚರ್ಚಿಸುವದಾಗಿತ್ತು. ಈ ಅಧಿವೇಶನವು ಮೈಸೂರು ಸಟ್ಟಣದ ಬಳಿ ವೃಂದಾವನದ ತೋಟದಲ್ಲಿ ಜರುಗಿತು. ಸುಮಾರು ಎಪ್ಪತ್ತು ಶಿಕ್ಷಣತಜ್ಞರು ಒಂದು ತಿಂಗಳ ಮೇಲೆ ಅರ್ಧ ವಾರದ ವರೆಗೆ ಒಂದೆಡೆ ಸೇರಿ ಬಿಟ್ಟು ಬಿಡದೆ ತಮ್ಮ ತಮ್ಮ ವಿಚಾರಗಳ, ಜ್ಞಾನದ ಮತ್ತು ಅನುಭವಗಳ ಮಂಥನ ಮಾಡಿ ಗೊತ್ತುವಳಿಗಳನ್ನು ತಯಾರಿಸಿ ಯುನೆಸ್ಕೋಕ್ಕೆ ಕಾರ್ಯರೂಪಕ್ಕೆ ತಿಳಿಸಲು ಕಳುಹಿಸಿಕೊಟ್ಟರು. ಯುನೆಸ್ಕೋವು ಅವುಗಳನ್ನೆಲ್ಲ ಕ್ರೋಢೀಕರಿಸಿ ಸಭಾಸದ ರಾಷ್ಟ್ರಗಳಿಗೆಲ್ಲ ಅಮಲಿನಲ್ಲಿ ತರಲು ಕಳಿಸಿಕೊಡುವದು. ಗೊತ್ತುವಳಿಗಳು ಬಹಳಷ್ಟು ಇರುವದರಿಂದ ಅವುಗಳನ್ನೆಲ್ಲ. ಇಲ್ಲಿ ಬರೆಯಲು ಶಕ್ಯ ವಿಲ್ಲದ್ದರಿಂದ ಸಾರಾಂಶವನ್ನಷ್ಟೇ ಕೊಡಲು ಪ್ರಯತ್ನಿಸ ಲಾಗಿದೆ. ಅಧಿವೇಶನವು ಪ್ರಕಟಿಸಿದ ವರದಿಯಲ್ಲಿ ನಾಲ್ಕು ಭಾಗಗಳು ಇಂತಿವೆ :— (೧) ಸಾಕ್ಷರತಾ ಪ್ರಸಾರ. (೨) ಆರೋಗ್ಯ ಮತ್ತು ಗೃಹಜೀವನ. (೩) ಆರ್ಥಿಕ ಸಮಸ್ಯೆಗಳು. (೪) ನಾಮಾಜಿಕ ಜೀವನ ಮತ್ತು ನಾಗರಿಕತೆ. ಈ ಭಾಗಗಳಿಗೆ ಅನುಸರಿಸಿ ಅಧಿವೇಶನದ ಪ್ರತಿನಿಧಿಗಳಲ್ಲಿಯೂ ನಾಲ್ಕು ಸಮಿತಿ ಗಳನ್ನು ಮಾಡಲಾಗಿತ್ತು. ಒಂದೊಂದು ಸಮಿತಿಯವರು ಒಂದೊಂದು ವಿಷಯವನ್ನು ಕೂಲಂಕಷವಾಗಿ ವಿಚಾ ರಿಸಿ ಅವರು ಹೊರಡಿಸಿದ ನಿರ್ಣಯಗಳು ಕೆಳಗೆ ಕೊಟ್ಟಂತೆ ಇವೆ.

ಸಾಕ್ಷರತಾ ಪ್ರಸಾರದ ಬಗೆಗೆ ಕೈಕೊಳ್ಳತಕ್ಕ ವ್ಯಾವಹಾರಿಕ ಯೋಜನೆಗಳು :—

ಪ್ರೌಢರಿಗೆ ಕಲಿಸುವ ಕಲೆಯನ್ನು ಶ್ರಮವಹಿಸಿ ಕಲಿತುಕೊಳ್ಳಬೇಕಾಗುತ್ತದೆಯ ದ್ದರಿಂದ ಈ ಕೆಲಸ-

ದಲ್ಲಿ ತೊಡಗುವ ಶಿಕ್ಷಕ-ಶಿಕ್ಷಕಿಯರಿಗೆ ತರಬೇತಿಯು ಅವಶ್ಯವಾದದ್ದು. ಏಶಿಯಾಖಂಡದಲ್ಲಿ ನಿರಕ್ಷರತೆಯು ಇನ್ನೂ ದೊಡ್ಡ ಪ್ರಮಾಣದಲ್ಲಿರುವದರಿಂದ ಅಲ್ಲಿಯಂತೂ ಶಿಕ್ಷಕ-ಶಿಕ್ಷಕಿಯರಿಗೆ ತರಬೇತಿಯು ಅತ್ಯವಶ್ಯವು. ಬೇಗನೆ ಮತ್ತು ಸುಲಭವಾಗಿ ಕಲಿಸುವ ತಂತ್ರಗಳೆಲ್ಲ ದೋಷಯುಕ್ತವಾದವುಗಳು. ಈಗ ಎಷ್ಟೋ ದೇಶಗಳಲ್ಲಿ ರೂಢಿಯಲ್ಲಿರುವ ಇಂಥ ತಂತ್ರಗಳನ್ನೆಲ್ಲ ಇನ್ನುಮುಂದೆ ಉಪಯೋಗಿಸಕೂಡದು. ಯಾಕಂದರೆ, ಅವುಗಳಿಂದ ಹುರುಳಿಲ್ಲದ ಆಡಂಬರದ ಪರಿಣಾಮಗಳುಂಟಾದದ್ದೇ ಕಂಡುಬರುತ್ತದೆ.

ಪದ್ಧತಿಗಳು ಸುತ್ತಲಿನ ಪರಿಸ್ಥಿತಿಗೆ ಅನುಗುಣವಾಗುವಂತೆ ಇತ್ತೀಚೆಗಿನ ಶಾಸ್ತ್ರಬದ್ಧವಾದ ತತ್ವಗಳಿಗೆ ಚನ್ನಾಗಿ ಹೊಂದಿಕೊಂಡಿರಬೇಕು. ಅವುಗಳಲ್ಲಿ ಎಲ್ಲಕ್ಕೂ ಹೆಚ್ಚು ಮಹತ್ವದ್ದೆಂದರೆ ವಾಕ್ಯಪದ್ಧತಿಯಿಂದ ಓದುವದನ್ನು ಕಲಿಸುವದಾಗಿದೆ; ಅಕ್ಷರಪದ್ಧತಿ, ಶಬ್ದಪದ್ಧತಿಗಳು ನಿರುಪಯುಕ್ತವಾದವುಗಳು. ವಾಕ್ಯಪದ್ಧತಿಯಿಂದ ಕಲಿಸುವಾಗ ಶಿಕ್ಷಕನು ನೆನಪಿನಲ್ಲಿಡತಕ್ಕ ಮಾತೆಂದರೆ ವಾಕ್ಯದ ಅರ್ಥವು ಪ್ರೌಢರಿಗೆ ಕೂಡಲೇ ಹೊಳೆಯುವಂತಹದಿರಬೇಕು ಮತ್ತು ಉಪಯುಕ್ತ ವಿಷಯದ ಬಗೆಗೆ ಇರಬೇಕು. ಚಿಕ್ಕಮಕ್ಕಳಿಗೆ ಕಲಿಸುವ ಪದ್ಧತಿಗಳು ಇಲ್ಲಿ ಸರಿಹೋಗಲಾರವು.

ಪ್ರೌಢರು ಸಾಕ್ಷರರಾದ ಮೇಲೆ ಅವರ ಸಾಕ್ಷರತೆಯನ್ನು ವೃದ್ಧೀಕರಿಸಲು ಅವರಿಗೆ ಒದಗಿಸಿಕೊಡತಕ್ಕ ಸಾಹಿತ್ಯದ ಬಗೆಗೆ ಚನ್ನಾಗಿ ಒತ್ತಿ ಹೇಳಿದ್ದಾರೆ. ಅಂಥ ಸಾಹಿತ್ಯವನ್ನು ತಯಾರಿಸುವಲ್ಲಿ ಮತ್ತು ತಯಾರಾದ ಸಾಹಿತ್ಯವನ್ನು ನಾಲ್ಕೂ ದಿಕ್ಕಿನ ಹಳ್ಳಿಗಳಿಗೆಲ್ಲ ಹಂಚಿ ಕಳಿಸಿಕೊಡುವಲ್ಲಿ ವಿಶೇಷ ದಕ್ಷತೆಯನ್ನು ವಹಿಸಬೇಕೆಂಬ ಬಗೆಗೂ ಒತ್ತಿ ಹೇಳಿದ್ದಾರೆ. ಸಾಹಿತ್ಯವು ಪ್ರೌಢರ ನಿತ್ಯಜೀವನಕ್ಕೆ ಸಂಬಂಧಿಸಿದ ವಿಷಯಗಳ ಬಗೆಗೆ ಬರೆಯಲ್ಪಟ್ಟಿದ್ದರೆ, ಅದು ಅವರ ಮನಾನುರಾಗವನ್ನೂ ಆಸ್ಥೆಯನ್ನೂ ತನ್ನ ಕಡೆಗೆ ಸೆಳೆಯದೆ ಬಿಡುವದಿಲ್ಲ.

ಹಳ್ಳಿಗಳಲ್ಲೆಲ್ಲ ಪುಸ್ತಕಾಲಯಗಳನ್ನು ಇಲ್ಲವೆ ಓದುವ ಮನೆಗಳನ್ನು ಸ್ಥಾಪಿಸುವದರಿಂದ ಸಾಹಿತ್ಯವನ್ನು ಹಂಚುವ ಕೆಲಸವು ಹಗುರಾಗುತ್ತದೆ. ಸಾಹಿತ್ಯವು ಸಾಕ್ಷರರಾದ ಪ್ರೌಢರ ಮನವನ್ನೂ ಆಸ್ಥೆಯನ್ನೂ ಆಕರ್ಷಿಸುವಂತಹದಿದ್ದರೆ ಪುಸ್ತಕಾಲಯಗಳು ಭರಭರಾ ಓಡಿಯಿಂದ ನಡೆಯುವವು; ಇಲ್ಲವಾದರೆ ಪುಸ್ತಕಗಳೆಲ್ಲ ಹುಳಗಳ ಪಾಲಾಗುವವೆಂಬ ಮಾತನ್ನು ಹೇಳುವದೇ ಬೇಡ. ಪ್ರೌಢ ಶಿಕ್ಷಣಕಾರ್ಯದಲ್ಲಿ ಕಾರ್ಯಕರ್ತರ ಅಭಾವವು ಒಂದುವೇಳೆ ಅನಿಸುತ್ತಿದ್ದರೆ, ವಿಶ್ವವಿದ್ಯಾಲಯಗಳ ಕಾಲೇಜುಗಳಲ್ಲಿಯ ವಿದ್ಯಾರ್ಥಿಗಳಿಂದ ಇಲ್ಲವೆ ಸ್ವದೇಶಾಭಿಮಾನದ ಭಾವನೆಗಳಿಂದ ತುಂಬಿತುಳುಕುವ ಅಥವಾ ಸಾಮಾಜಿಕ ಕಾರ್ಯಗಳನ್ನು ಮಾಡಬೇಕೆಂಬ ಲವಲವಿಕೆಯುಳ್ಳ ತರುಣರಿಂದ ಈ ಕಾರ್ಯವನ್ನು ಬೇಕಾದಷ್ಟು ವಸಾಡಿಕೊಳ್ಳಲು ಶಕ್ಯವಿದೆಯೆಂಬ ಸಂಗತಿಯನ್ನು ಎಲ್ಲ ಸಭಾಸದ ರಾಷ್ಟ್ರಗಳ ಸರಕಾರಗಳ ದೃಷ್ಟಿಗೆ ತರಲಾಯಿತು.

ಆರೋಗ್ಯ ಮತ್ತು ಗೃಹ ಜೀವನ :—

ಪ್ರತಿ ಐದುಸಾವಿರ ಜನವಸತಿಗೆ ಒಬ್ಬ ಸೂಲಗಿತ್ತಿಯು (ಮಿಡ್‌ವಾಯಿಫ್), ಪ್ರತಿ ಹತ್ತುಸಾವಿರ ಜನವಸತಿಗೆ ಒಬ್ಬ ಸಾಮಾಜಿಕ ಕಾರ್ಯಕರ್ತನು, ಒಬ್ಬ ಆರೋಗ್ಯ ಖಾತೆಯ ಚಿಕ್ಕ ಅಧಿಕಾರಿ (ಸ್ಯಾನಿಟರಿ ಇನಸ್ಪೆಕ್ಟರ), ಒಬ್ಬಳು ಇಲ್ಲವೆ ಇಬ್ಬರು ಸೂಲಗಿತ್ತಿಯರು, ಒಬ್ಬಳು ರೋಗಿಗಳ ಆರೈಕೆಯಲ್ಲಿ ತರಬೇತಿ ಹೊಂದಿದ ಪರಿಚಾರಿಕೆಯು (ನರ್ಸಳು) ಇವರನ್ನೊಳಗೊಂಡ ಒಂದು ಆರೋಗ್ಯಧಾಮವು; ಪ್ರತಿ ಮೂವತ್ತು ಸಾವಿರ ಜನವಸತಿಗೆ ಒಬ್ಬ ಡಾಕ್ಟರರ ನೇತೃತ್ವದಲ್ಲಿ ನಡೆಯುವ ಒಂದು ದವಾಖಾನೆ ಮತ್ತು ಕೆಲವು ಆರೋಗ್ಯಧಾಮಗಳನ್ನೊಳಗೊಂಡ ಒಂದು ದೊಡ್ಡ ಆರೋಗ್ಯ ಕೇಂದ್ರವು. ಜನತೆಯ ಆರೋಗ್ಯದ ಕಡೆಗೆ ನಿಜವಾಗಿ ಲಕ್ಷ್ಯ ಪೂರೈಸಲು ಬಯಸುವದಾದರೆ ಮೇಲೆ ಹೇಳಿದ ಪ್ರಮಾಣವು ಅತಿ ಕಡಿಮೆಯದಾಗಿದೆಂದು ಈ ಸಮಿತಿಯಲ್ಲಿದ್ದ ತಜ್ಞರ ಅಭಿಮತವಾಗಿದೆ.

ಪ್ರತಿಯೊಂದು ಹಳ್ಳಿಗೆ, ಅದು ಎಷ್ಟೇ ಸಣ್ಣ ಮತ್ತು ಬಡವ ಇದ್ದರೂ ಸಹ, ಒಂದು ಸ್ಥಳಿಕ ಔಷಧೋಪಚಾರದ ನಿಲಯವಿರಬೇಕು ಮತ್ತು ಅವರ ಆಡಳಿತೆಯನ್ನ ಖರ್ಚನ್ನೂ ತಾನೇ ವಹಿಸಬೇಕು. ಏಶಿಯಾ ಖಂಡದೊಳಗಿನ ಹಳ್ಳಿಗಾಡುಗಳ ಜೀವನವನ್ನೂ ಆರೋಗ್ಯದ ಸ್ಥಿತಿಗತಿಗಳನ್ನೂ ಚನ್ನಾಗಿ ಅಭ್ಯಾಸಮಾಡಿ ಈ ಸಮಿತಿಯ ತಜ್ಞರು ಮೇಲಿನ ಗೊತ್ತುವಳಿಗಳನ್ನು

ವಾಸಮಾಡಿದ್ದಾರೆ. ಅವರು ತಿರುಗಾಡಿ ನೋಡಿದಲ್ಲೆಲ್ಲ ರೋಗಗಳನ್ನು ಹುಟ್ಟಿಸುವ ಹೊಲಸು ಇಲ್ಲವೆ ಕೊಳೆಯು ಅವರು ಎದುರಿಸುವ ಮುಖ್ಯ ಸಮಸ್ಯೆಯಾಗಿತ್ತು. ಮಲಗುವ ಮತ್ತು ಕೂಡ್ರುವ ಕೋಣೆಗಳಲ್ಲಿಯ ಹೊಲಸು, ಅಡಿಗೆ ಮಾಡುವದರಲ್ಲಿಯ ಅಸ್ವಚ್ಛತೆ, ಶಾರೀರಿಕ ಅಸ್ವಚ್ಛತೆ, ಶೌಚಕೂಪಗಳ ಮತ್ತು ಗಟಾರುಗಳ ಅಭಾವ, ಇನ್ನೆಲ್ಲ ಮೇಲಿನ ಸಮಸ್ಯೆಯ ಜೀರೆಜೀರೆ ಅಂಗಗಳು.

ಆರೋಗ್ಯರಕ್ಷಣೆಯಲ್ಲಿ ಸ್ತ್ರೀಯಳು ವಹಿಸಬೇಕಾದ ಪಾತ್ರವು :—

ಮೇಲ್ಕಾಣಿಸಿದ ಕುಂದುಕೊರತೆಗಳನ್ನೆಲ್ಲ ನಿವಾರಿಸುವದು ಶಿಕ್ಷಣದ ಮುಖಾಂತರವೇ ಶಕ್ಯವು; ಮಲೇರಿಯಾ, ಕ್ಷಯ ಮೊದಲಾದ ರೋಗಗಳ ನುಗ್ಗಾಟವನ್ನು ನಿಯಂತ್ರಿಸಲು ಅವರ ಮುಖಾಂತರವೇ ನ ಧ್ಯನೆಂಬ ಮಾತನ್ನು ಹೇಳುವದೇ ಬೇಡ. ನಿವಾರಣೋಪಾಯಗಳಷ್ಟೆ ಮಹತ್ವವು ಪ್ರತಿಬಂಧಕೋಪಾಯಗಳಿಗೂ ಇದೆಯೆಂಬ ನಂಗತಿಯನ್ನು ಸಮ್ಮೇಲನದಲ್ಲಿ ಒತ್ತಿ ಹೇಳಲಾಯಿತು. ಪ್ರತಿಬಂಧಕೋಪಾಯಗಳ ಮಹತ್ವವನ್ನು ಹಳ್ಳಿಗಾಡದಲ್ಲಿ ತಿಳಿಹೇಳುವದರಲ್ಲಿ ಸಾಮಾಜಿಕ ಕಾರ್ಯಕರ್ತನು ಮುಖ್ಯ ಭಾಗವನ್ನು ವಹಿಸಲು ಶಕ್ಯವಿದೆ; ಅವನಿಗೆ ಔಷಧಗಳ ಬಗೆಗೆ ತರಬೇತಿಯಿದ್ದರಂತೂ ಕಬ್ಬಿನ ಮೇಲೆ ಜೇನಿಟ್ಟಂತೆ. ಒಂದು ವೇಳೆ ತರಬೇತಿಯು ಇಲ್ಲದಿದ್ದರೂ ಚಿಂತೆಯಿಲ್ಲ; ಈ ಸಂದರ್ಭದಲ್ಲಿ ಸೇವೆ ಸಲ್ಲಿಸಲು ಅವನಿಗೆ ಬಂಗಾರದಂಥ ಪ್ರಸಂಗವು ಕಾಯ್ದು ಕುಳಿತಿರುತ್ತದೆ. ಮನೆತನದಲ್ಲಿ ಸ್ತ್ರೀಯಳ ಸ್ಥಾನಮಾನಗಳನ್ನು ಜನ್ಮಾಗಿ ಲೆಕ್ಕಿಸಿ ಅವಳ ದರ್ಜೆಯನ್ನು ಹಚ್ಚಿಸುವಮೊಳಿತು. ಅವಳಿಗೆ ಸಾಕಷ್ಟು ಈ ದಿಶೆಯಲ್ಲಿ ತರಬೇತಿ ಇಲ್ಲವೆ ಶಿಕ್ಷಣವನ್ನು ಕೊಟ್ಟು ಅವಳಿಂದ ಮನೆತನದ ಎಲ್ಲ ಜನರಿಗೂ ಆರೋಗ್ಯದಿಂದಿರುವ ಬಗೆಗಳನ್ನೆಲ್ಲ ಕಲಿಸಲು ಹಚ್ಚಬೇಕು. ಮನೆತನದಲ್ಲಿ ಈ ತರಹದ ಅವಳ ಸೇವೆಯ ಮಹತ್ವವು ಅಷ್ಟಿಷ್ಟಲ್ಲ. ಇದನ್ನಲ್ಲದೇ ಇಂಥ ವಿಷಯಗಳನ್ನು ಚರ್ಚಿಸುವ ಅಂತರರಾಷ್ಟ್ರೀಯ ಸಮ್ಮೇಲನಗಳಲ್ಲಿ, ರಾಷ್ಟ್ರೀಯ ಪರಿಷತ್ತುಗಳಲ್ಲಿ ಮತ್ತು ಲೋಕಲ್ ಬೋರ್ಡ ಸಮಿತಿಗಳಲ್ಲಿ ಸ್ತ್ರೀಯರಿಗೆ ಹೆಚ್ಚು ಹೆಚ್ಚು ಪ್ರಾತಿನಿಧ್ಯವನ್ನು ಕೊಡಲು ಸಭಾಸದ ರಾಷ್ಟ್ರಗಳನ್ನು ಎಚ್ಚರಿಸಬೇಕೆಂದು ಯುನೆಸ್ಕೋಕ್ಕೆ ಕೇಳಿಕೊಳ್ಳಲಾಯಿತು.

ಭೂಮಿತಾಯಿಯ ಅಮೂಲ್ಯ ಬೇಡಿಕೆ —

ಏಶಿಯಾ ಖಂಡದೊಳಗಿನ ಜೀವನ ಮಟ್ಟವು ಕೆಳತರಗತಿಯದಾಗಿರಲು ಬಲವಾದ ಕಾರಣವು ಕೃಷಿಕರ್ಮದಲ್ಲಿ ತೊಡಗಿದ ಜನರಿಗೆ ಸಾಕಷ್ಟು ಕೆಲಸವಿಲ್ಲದಿರುವದೇ ಆಗಿವೆಯೆಂದು ಆರ್ಥಿಕ ಸಮಸ್ಯೆಗಳ ಬಗೆಗೆ ನಿರ್ಮಿತವಾದ ತಜ್ಞರ ಸಮಿತಿಯ ಅಭಿಪ್ರಾಯವಾಗಿದೆ. ಅವರಿಗೆ ಸಾಕಷ್ಟು ಕೆಲಸವನ್ನು ಕಲ್ಪಿಸಿ ಕೊಡಲು ಸೂಚನೆಗಳನ್ನು ಕೆಳಗೆ ಕೊಡಲಾಗಿದೆ :—

ಹಳ್ಳಿಗಾಡ ಜನರ ಜೀವನಕ್ಕೆ ಅವಶ್ಯವಾದ ಮೂಲಭೂತ ಬೇಡಿಕೆಗಳಾವವೆಂಬದನ್ನು ತಜ್ಞರು ಎಲ್ಲಕ್ಕಿಂತ ಮುತ್ತಾಡಿ ಕಂಡು ಹಿಡಿಯಬೇಕು. ಈ ಬೇಡಿಕೆಗಳನ್ನು ಪೂರೈಸಲು ಹಳ್ಳಿಗಾಡ ಕೈಗಾರಿಕೆಗಳನ್ನು ಇಲ್ಲವ ಗೃಹಕೈಗಾರಿಕೆಗಳನ್ನು ಸ್ಥಾಪಿಸತಕ್ಕದ್ದು. ಕೈಗಾರಿಕಗಳನ್ನು ಆರಿಸುವಾಗ್ಗೆ ತಮ್ಮ ಹಳ್ಳಿಗೆ ಬೇಕಾಗುವಷ್ಟು ಮಾಲನ್ನು ಹುಟ್ಟಿಸುವದಷ್ಟೇ ಹಳ್ಳಿಗರ ಗುರಿಯಾಗಿರಬೇಕು; ಶಹರಗಳಲ್ಲಿ ದೊಡ್ಡ ಪ್ರಮಾಣದ ಮೇಲೆ ತಯಾರಾಗುವ ಮಾಲಿನಗೂಡ ಏರಾಟ ಮಾಡುವ ನೋಡವೆಗೆ ಅವರು ಸರ್ವಥಾ ಹೋಗಕೂಡದು. ತಮ್ಮ ಜೀವನದ ಮೂಲಭೂತ ಬೇಡಿಕೆಗಳನ್ನು ಪರಿಹರಿಸಿಕೊಳ್ಳಲು ತಾವು ಸರುಡ್ಯೋಗಿಯಾಗಿ ಕೂಡ್ರುವ ಸಮಯಗಳಲ್ಲಿ (ಸುಗ್ಗಿಯು ಮುಗಿದಂದಿನಿಂದ ಪುನಃ ಹೂಲದಲ್ಲಿ ಕೆಲಸವು ಪ್ರಾರಂಭವಾಗುವ ವರೆಗೆ) ಬೇರೆ ಉದ್ಯೋಗಗಳನ್ನು ಮಾಡಲು ಹವಣಿಸಬೇಕು. ಅವರು ಆರಿಸುವ ಕೈಗಾರಿಕೆಗಳಲ್ಲಿಯೂ ಧಂದೆಗಳಲ್ಲಿಯೂ ಕೌಶಲ್ಯವನ್ನು ಪಡೆಯಲು ಅಲ್ಲಲ್ಲಿಗೆ ತರಬೇತಿಯ ಕೇಂದ್ರಗಳನ್ನು ತೆರೆಯಬೇಕು. ಇಂಥ ಕೇಂದ್ರಗಳು ನಾಮಧಾಯಿಕ ಕಾರ್ಯಗಳ ಬೀಡಾಗಿಯೂ ಸುತ್ತಲ. ತಯಾರಾದ ಮಾಲುಗಳ ಮಾರಾಟದ ಅಂಗಡಿಯಾಗಿಯೂ ಪರಿಣಮಿಸಬೇಕು. ಇವುಗಳ ಜೊತೆಗೆ ಕೆಲಸ ಮಾಡಲು ಸಹಕಾರಿ ಸಂಘಗಳನ್ನೂ ಹಾಸುಹೊಕ್ಕಾಗಿ ಹೆಣೆದಿಟ್ಟಿರಬೇಕು. ಯಾಕಂದರೆ ಮೇಲೆ ಹೇಳಿದ ಎಲ್ಲ ಚಟುವಟಿಕೆಗಳಿಗೆ ದುಡ್ಡಿನ ನೆರವು ಬೇಕಲ್ಲವೇ? ಹಳ್ಳಿ-

ಗಾಡದಲ್ಲಿ ಸಹಕಾರಿ ಸಂಘಗಳ ಸಹಾಯವು ಅಷ್ಟಿ-ಷ್ಟೆಂದು ಹೇಳಲಾಸಲ್ಲ.

ಈ ಚಟುವಟಿಕೆಗಳಲ್ಲಿ ಹೆಚ್ಚು ಲಾಭಪಡೆಯಬೇಕೆಂಬ ವ್ಯಾಪಾರೀ ಧೋರಣೆಯನ್ನಿಟ್ಟುಕೊಂಡು ಕೆಲಸ ಮಾಡಬಾರದೆಂಬ ಎಚ್ಚರಿಕೆಯನ್ನು ವಹಿಸುವದೊಳ್ಳೆ-ಯದು. ಇಡೀ ವರ್ಷ ತಾಳ್ಮೆಯಿಂದ ದುಡಿದು ವರ್ಷದ ಕೊನೆಗೆ ಭೂಮಿತಾಯಿಯು ಕೊಟ್ಟಷ್ಟರಲ್ಲಿಯೇ ಸಂತುಷ್ಟನಾಗಿರುವ ಒಕ್ಕಲಿಗನ ಮನೋವೃತ್ತಿಯೇ ಇಲ್ಲಿಯೂ ಒಡಮೂಡಬೇಕು. ಇದುವೇ ಹಳ್ಳಿಗಾಡಿನ ಆರ್ಥಿಕ ಸಮಸ್ಯೆಗಳ ಪರಿಹಾರದ ಬೀಜಮಂತ್ರವೆಂಬುದು ಸಮಿತಿಯವರ ಅಭಿಮತವು. ಹಳ್ಳಿಗರ ನಿಜವಾದ ಆರ್ಥಿಕ ಸ್ಥಿತಿಗತಿಗಳನ್ನು ಗೊತ್ತುಹಚ್ಚಿ ಅವುಗಳಿಗನು-ಗುಣವಾಗುವಂತೆಯೇ ಸುಧಾರಿಸಲು ಕಾರ್ಯಪ್ರವೃತ್ತ ರಾಗುವದು ಲೇಸು. ಅತಿ ಬಡವನಿರುವನೆಂದು ಯಾರಿಗೂ ಕಡೆಗಣಿಸಲಾಗದು.

ಸಾಮಾಜಿಕ ಜೀವನ ಮತ್ತು ನಾಗರಿಕತೆ :—

ಬಹುತರ ಏಶಿಯಾಖಂಡದ ಹದಿನೈದು ಹಳ್ಳಿಗಳ ಸಾಮುದಾಯಿಕ ಜೀವನಕ್ರಮದ ಸವಿಸ್ತಾರದಿಂದ ವರದಿಗಳು ಸಮಿತಿಯವರ ಕೈಸೇರಿದ್ದು ಅವುಗಳನ್ನೇ ಆಧಾರವಾಗಿಟ್ಟುಕೋಡು ಅವರು ತಮ್ಮ ಕೆಲಸವನ್ನು ಸಾಗಿಸಿದರು. ಸಮಿತಿಯವರಿಗೆ ಕಂಡುಬಂದ ಒಂದು ಮಹತ್ವದ ಸಂಗತಿಯಂದರೆ ಏಶಿಯಾ ಖಂಡದ ಹಳ್ಳಿ ಯಲ್ಲಿ ಎದ್ದುಕಾಣುವ ಕೂಪಮಂಡೂಕವೃತ್ತಿಯು. ಅಲ್ಲಿಯ ಜನರಿಗೆ ತಮ್ಮ ಹಳ್ಳಿಯೇ ಒಂದು ಜಗತ್ತಾಗಿ ಬಿಟ್ಟಿದೆ; ಅವರಿಗೆ ಹೊರಗಿನ ಜಗತ್ತಿನ ಸ್ಪರ್ಶವೇ ಇಲ್ಲ; ಸ್ಪರ್ಶವಿಲ್ಲದ ಮೇಲೆ ಜ್ಞಾನಕಲ್ಪನೆಗಳಿರುವದಂತೂ ಶಕ್ಯವೇ ಇಲ್ಲ. ಸುಧಾರಣೆಯ ಮಾರ್ಗದಲ್ಲಿ ಇದೊಂದು ಸಿಂಡ್ಡ ಬಂಡೆಗಲ್ಲಾಗಿ ಕುಳಿತುಬಿಟ್ಟಿದೆ.

ಈ ಸಮಿತಿಯವರು ನಾಗರಿಕತೆಯ ತರಬೇತಿಯ ಸಲುವಾಗಿ ಏಳು ಮುದ್ದೆಗಳ ಒಂದು ಅಭ್ಯಾಸಪತ್ರಿಕೆ ಯನ್ನೇ ರಚಿಸಿದ್ದಾರೆ :— (೧) ವೈಯಕ್ತಿಕ ಗೌರವ ನುತ್ತು ಯೋಗ್ಯತೆ (೨) ಜಾತಿ-ಮತ, ಪಂಥ-ಪಂಗಡ, ಮೇಲು-ಕೀಳು, ಹಿರಿ-ಕಿರಿ, ಸ್ಪೃಶ್ಯಾಸ್ಪೃಶ್ಯ, ಬಡವ-ಶ್ರೀಮಂತ ಮೊದಲಾದವುಗಳನ್ನು ಲೆಕ್ಕಿಸದೆ ಎಲ್ಲ ಮಾನವರಿಗೂ ಸಲ್ಲಿಸತಕ್ಕ ಮರ್ಯಾದೆ ಮತ್ತು ಆದರ ಭಾವನೆ. (೩) ಎಲ್ಲರಗೂಡ ಸಂಪರ್ಕ ಮತ್ತು ಸಾಮು-ದಾಯಿಕ ಚಟುವಟಿಕೆಗಳಲ್ಲಿ ಭಾಗ ವಹಿಸುವದು. (೪) ರಾಷ್ಟ್ರದ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನಗಳ ಪರಸ್ಪರ ಸಂಬಂಧ. (೫) ವಿಶ್ವಕುಟುಂಬ ಮತ್ತು ವಿಶ್ವನಾಗರಿಕತೆಯ ಭಾವನೆ. (೬) ಸಾಂಸ್ಕೃ-ತಿಕ ಮತ್ತು ರಾಷ್ಟ್ರೀಯ ಪರಂಪರೆಗಳು ಮತ್ತು ವಿವಿಧ-ತೆಯಲ್ಲಿ ಏಕರೂಪತೆ. (೭) ರಾಜಕೀಯ ಹಕ್ಕು-ಬಾಧ್ಯತೆಗಳು.

ಯಾವ ಯಾವ ವಿಷಯಗಳನ್ನು ಕಲಿಸಬೇಕೆಂಬು ದನ್ನು ಅಷ್ಟೇ ಹೇಳಿದರೆ ಅಭ್ಯಾಸ ಪತ್ರಿಕೆಯು ಪೂರ್ತಿಪಾ-ಠವಾದಂತಾಗಲಿಲ್ಲ; ಯಾವ ಯಾವ ಚಟುವಟಿಕೆಗಳನ್ನು ಮಾಡಿಸಿದರೆ ಯಾವ ಯಾವ ಭಾವನೆಗಳು ತಲೆದೋರು ವವೆಂಬದನ್ನೂ ಮತ್ತು ಹೀಗೆ ಮಾಡುವದರಿಂದುಂಟಾದ ಅನುಭವಗಳನ್ನೂ ಹೇಳಿದರೆ ಅಭ್ಯಾಸಪತ್ರಿಕೆಯು ಪೂರ್ಣವಾದಂತಾಯಿತೆಂದು ಸಮಿತಿಯವರ ಅಭಿಪ್ರಾ ಯವು. ಆದ್ದರಿಂದ ಅಂಥ ಕೆಲವು ಚಟುವಟಿಕೆಗಳನ್ನೂ ಅನುಭವಗಳನ್ನೂ ಇಲ್ಲಿ ಕೊಡಲಾಗಿದೆ.

ಹೊಸ ಪದ್ಧತಿಗಳಲ್ಲಿ ಅಂಧ ಶ್ರದ್ಧೆ ಬೇಡ :—

ಅಭ್ಯಾಸಪತ್ರಿಕೆಯಲ್ಲಿ ವಿವರಿಸಿದಂತೆ ನಾಗರಿಕತೆಯ ತರಬೇತಿಯಲ್ಲಿ ಯಾವ ಯಾವ ಪದ್ಧತಿಗಳನ್ನು ಮತ್ತು ಯಾವ ಯಾವ ಮಾಧ್ಯಮಗಳನ್ನು ಉಪಯೋಗಿಸಬೇ ಕೆಂಬ ಬಗೆಗೆ ಅಭ್ಯಸಿಸುವದರಲ್ಲಿಯೇ ಸಮಿತಿಯವರ ಬಹಳಷ್ಟು ವೇಳೆಯು ವ್ಯಯವಾಯಿತು. ತಲೆತಲಾಂತ ರಗಳಿಂದ ನಡೆದು ಬಂದ ಮಾಧ್ಯಮಗಳಲ್ಲಿ ಕೆಳಗೆ ಹೇಳಿ ದವುಗಳನ್ನು ಮಾತ್ರ ಚರ್ಚಿಸಲಾಯಿತು :— ಹಬ್ಬ-ಹುಣ್ಣಿವೆಗಳು, ಜಾತ್ರೆ-ಉರುಸುಗಳು, ಬೈಲಾಟಗಳು, ಹಳ್ಳಿಗರ ಹಾಡು-ಕುಣಿತಗಳು ಮತ್ತು ಪಂದ್ಯಾಟ-ಏರಾ ಟಗಳು. ಆಧುನಿಕ ಕೃತ್ರಿಮ ಮಾಧ್ಯಮಗಳಾದಂಥ ರೇಡಿಯೋ, ಸಿನೇಮಾ, ಮ್ಯಾಜಿಕ್‌ಲ್ಯಾಂಟರ್ನ ಮೊದ ಲಾದವುಗಳ ಮೇಲ್ಮೈಯಲ್ಲಿ ಅಂಧ ಶ್ರದ್ಧೆಯನ್ನಿಡದೆ ಎಂದಿನಿಂದಲೋ ನಡೆದು ಬಂದ ಮಾಧ್ಯಮಗಳ ನಿರ್ಣಾಯಕ ಮಹತಿಯನ್ನು ಸಮಿತಿಯವರು ಒಪ್ಪಿ ಕೊಂಡು ಅವುಗಳನ್ನು ಸರ್ವಥಾ ತ್ಯಜಿಸಕೂಡದೆಂದು

ತರ ಮತ. ಹಳ್ಳಿಗಾಡಿನ ಸಾಮುದಾಯಿಕ ಶಿಕ್ಷಣದಲ್ಲಿ ಪ್ರಚಲಿತ ಮಾಧ್ಯಮಗಳ ಹಿರಿಮೆಯನ್ನು ಸಮಿತಿಯವರು ಅಲ್ಲಗಳೆದಿಲ್ಲವಾದರೂ ಅವುಗಳ ಉಪಯೋಗದಲ್ಲಿ ಸಾಕಷ್ಟು ಜಾಗ್ರತಿ, ಜ್ಞಾನ ಮತ್ತು ಕುಶಲತೆ ಇವು ಅವಶ್ಯವಾಗಿರಬೇಕು.

ಸಮಿತಿಯವರ ಉಳಿದ ಸಿಫಾರಸುಗಳು :—

ಪ್ರಜಾಸ್ವಾಮಿತ್ವಕ್ಕನುಸರಿಸಿ ಮತದಾನ ಪದ್ಧತಿಯನ್ನು ಇನ್ನೂ ಪರಿಣಾಮಕಾರಿಯಲ್ಲಿ ತರದಂತಹ ಪ್ರದೇಶಗಳಲ್ಲಿ ಪಂಚಾಯತಿಯಂತಹ ಸ್ಥಳಿಕ ಪ್ರಜಾಪಕ್ಷಿತ ಸಂಸ್ಥೆಗಳನ್ನು ಸ್ಥಾಪಿಸುವದು ಲೇಸು. ಪ್ರತಿಯೊಂದು ದೇಶದ ಹಳ್ಳಿಗರಿಗೆ ಪೌರನೀತಿ ಮತ್ತು ಸಮಾಜದಲ್ಲಿ ಆಚರಿಸಬೇಕಾದ ಅವಶ್ಯಕ ನಡೆನುಡಿಗಳ ಬಗೆಗೆ ತಿಳಿದೇಳುವಂಥ ಜನರ ತಂಡಗಳನ್ನು ತರಬೇತುಗೊಳಿಸಲು ಮತ್ತು ತತ್ಸಂಬಂಧದ ಸಾಹಿತ್ಯವನ್ನು ಹುಟ್ಟಿಸಲು ಹಳ್ಳಿಗಾಡಿನಲ್ಲಿ ಅಲ್ಲಲ್ಲಿಗೆ ಕೇಂದ್ರಗಳನ್ನು ಹೊರಡಿಸುವದೊಳಿತು. ಏಶಿಯಾ ಖಂಡದೊಳಗಿನ ಹಳ್ಳಿಗಾಡಿನ ಸ್ಥಿತಿಗತಿಗಳಿಗನುವರ್ತಿಯಾಗುವಂತೆ ಪ್ರೌಢಶಿಕ್ಷಣ ಸಾಹಿತ್ಯವನ್ನು ಮತ್ತು ಚಾಕ್ಷುಷ ಸಾಧನ(ಮ್ಯಾಜಿಕ್‌ಲ್ಯಾಂಟರ್ನ ಸಿನೇಮಾ ಮೊದಲಾದವು)ಗಳನ್ನು ನಿರ್ಮಿಸಲು ಯುನೆಸ್ಕೋವು ತಾನೇ ಮುಂದಾಗಬೇಕು. ಈ ದಿಶೆಯಲ್ಲಿ ಪ್ರಗತಿಯು ಎಷ್ಟರಮಟ್ಟಿಗೆ ಆಯಿತೆಂಬುದನ್ನು ಕಂಡುಕೊಳ್ಳಲು ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಮ್ಮೇಲನಗಳು ಆಗಾಗ್ಗೆ ಜರುಗುತ್ತಿರಬೇಕು.

(ಇದನ್ನು "ಯುನೆಸ್ಕೋ ಕೊರಿಯರ" ಎಂಬ ಮಾಸಿಕ ಪತ್ರಿಕೆಯ ೧೯೫೦ನೆಯ ಇಸವಿಯ ಫೇಬ್ರುವರಿ ಅಂಕಿಸಂಖ್ಯೆಯಿಂದ ತೆಗೆದುಕೊಳ್ಳಲಾಗಿದೆ.)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೫೧

೧೯೫೧ ನೆಯ ಇಸವಿಯ ಪ್ರಾಥಮಿಕ ಶಾಲಾ ಪ್ರಮಾಣ
ಪತ್ರ ಪರೀಕ್ಷೆಯು
೧೯೫೧ ಜನೇವರಿ ೨೭ನೆಯ ತಾರೀಖಿನಿಂದ ಪ್ರಾರಂಭ
ವಾಗುವುದೆಂದು ತಿಳಿದು ಬಂದಿದೆ. ಅವರ
ಕಾರ್ಯಕ್ರಮವನ್ನು ಯಥಾವಕಾಶವಾಗಿ
ಕೊಡಲಾಗುವದು.

ರಾ. ವಿ. ದೇಸಾಯಿ
ಪ್ರಿನ್ಸಿಪಾಲ್
ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ,
ಧಾರವಾಡ.

ನಕಾಶಗಳು...

ಯುಗಯುಗಾಂತರಗಳ ಜನಾಂಗಗಳ ಪರಿಶ್ರಮದ ಫಲಗಳು

ಕನ್ನಡಿಸಿದವರು :—**ಶ್ರೀಯುತ-ಶಿಂತ್ರಿ ಬಸಪ್ಪನವರು.** ಬಿ. ಎ. ಬಿ. ಟಿ.
ರಿಟಾಯರ್ಡ್ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ, ಧಾರವಾಡ

(ಇಂದು ನಾವು ಒಂದು ಅತಿ ಸಾದಾ ನಕಾಶೆಯನ್ನು ಕೈಯಲ್ಲಿ ತಕ್ಕೊಂಡು ಅದರ ವಿಷಯಕ್ಕೆ ಶಾಂತ ಮನದಿಂದ ವಿಚಾರ ಮಾಡಿ ನೋಡಿದರೆ, ಅದರ ಮರೆಯಲ್ಲಿ ಒಂದು ಸುದೀರ್ಘವಾದ ಇತಿಹಾಸವಿದ್ದ ಸಂಗತಿಯು ನಮಗೆ ಹೊಳೆಯದೆ ಹೋಗುವದಿಲ್ಲ. ತಲೆತಲಾಂತರಗಳಿಂದ ನಡೆದು ಬಂದ ಅದೆಷ್ಟೋ ಹೆಮ್ಮೆಪಡತಕ್ಕ ಶೋಧಗಳಲ್ಲಿ, ಶೋಧಗಳ ಕಾಲಕ್ಕೆ ಘಟಿಸಿರಬಹುದಾದ ಅದೆಷ್ಟೋ ಇಕ್ಕಟ್ಟು-ಬಿಕ್ಕಟ್ಟು ತಪ್ಪು-ತಡೆಗಳಲ್ಲಿ ಸಿಲುಕಿ ನುಗ್ಗಾಗಿ ಎಡವುತ್ತ ಏಳುತ್ತ ಪಾರಾಗಿ ಪರಿಷ್ಕರಣ ಹೊಂದಿ, ಅದು ಈಗಿನ ಪರಿಪೂರ್ಣತೆಗೆ ಹೇಗೆ ಮುಟ್ಟಿತೆಂಬ ಬಗೆಗೆ ಇದು ಒಂದು ಚಿಕ್ಕ ಉಪನ್ಯಾಸವಿದೆ.)

ಪೃಥ್ವಿಯ ನಿಶ್ಚಿತ ಆಕಾರದ ಬಗೆಗೆ ನಿಮಗೆ ಏನನ್ನೂ ಕಲಿಸುವದನ್ನೂ ಬಿಟ್ಟಿದ್ದರೆ, ಅದರ ಆಕಾರವು ಹೇಗಿರಬೇಕೆಂದು ನೀವು ಊಹಿಸಬಹುದಾಗಿತ್ತು ? ಕೆತ್ತಳೆ ಹಣ್ಣಿನಂತೆಯೋ ? ತತ್ತಿಯಂತೆಯೋ ? ಚಚ್ಚೌಕದ ಹಾಳಿಯಂತೆಯೋ ? ಇಲ್ಲವೆ ನಾಣ್ಯದಂತೆಯೋ ? ಅದೇ ಈಗ ನೀವು ಆಕಾಶದೊಳಗಿನ ಒಂದು ಗೋಲಾಕಾರದ ವಸ್ತುವೆಂದು ತಟ್ಟನೆ ಹೇಳಿಬಿಡುವಿರಿ. ನಿಮ್ಮ ನಡುವೆ ಮತ್ತು ಎಲ್ಲಕ್ಕೂ ಮೊದಲು ಪೃಥ್ವಿಯ ಆಕಾರವನ್ನು ಗೊತ್ತುಹಚ್ಚಲು ಮತ್ತು ಗೊತ್ತಿದ್ದ ದೇಶಗಳ ನಕಾಶೆಗಳನ್ನು ತೆಗೆಯಲು ಪ್ರಯತ್ನಪಟ್ಟ ಪೂರ್ವಜರ ನಡುವೆ ನಾಲ್ಕು ನಾವಿರ ವರ್ಷಗಳು ಗತಿಸಿ ಹೋಗಿವೆ! ಈ ಸುದೀರ್ಘ ಕಾಲಾವಧಿಯಲ್ಲಿ ಅವರ ಮನಸ್ಸಿನಲ್ಲಿ ಅದೆಷ್ಟೋ ಸಂಶಯಗಳು ಉದ್ಭವಿಸಿದವು; ಎಷ್ಟೋ ಸಮಸ್ಯೆಗಳನ್ನು ಎದುರಿಸಬೇಕಾಯಿತು; ಅವುಗಳ ವಿಷಯಕ್ಕೆ ಚನ್ನಾಗಿ ಅಭ್ಯಾಸಮಾಡಬೇಕಾಯಿತು ಮತ್ತು ಶೋಧ ಸಂಶೋಧನಗಳನ್ನು ಕೈಕೊಳ್ಳಬೇಕಾಯಿತು. ಇಂಥ ನಾಲ್ಕುನಾವಿರ ವರ್ಷಗಳು ಗತಿಸಿದೆ ಬಿಟ್ಟಿದ್ದರೆ, ಪೂರ್ವಜರು ಮಾಡಿದ ತಪ್ಪುತಡೆಗಳನ್ನೆಲ್ಲ ನೀವೂ ಮಾಡಬಹುದಿತ್ತಲ್ಲವೇ ?

ನಕಾಶೆಗಳ ಉಪಯುಕ್ತತೆಯು ಪ್ರವಾಸಮಾಡಬೇಕೆಂದಿರುವವರಿಗೆ ಮತ್ತು ಪ್ರವಾಸ ಮಾಡುವ ಅಗತ್ಯವಿದ್ದವರಿಗಷ್ಟೇ ಇರುವದರಿಂದ ಕೆಲವೇ ಸುಧಾರಿಸಿದ ರಾಷ್ಟ್ರಗಳಲ್ಲಿ ನಕಾಶೆಗಳಿಲ್ಲವೆಂದು ಇತಿಹಾಸದಿಂದ ತಿಳಿದು ಬರುತ್ತದೆ. ನಾಲ್ವತ್ತುಮೂರು ನೂರು ವರುಷಗಳ ಹಿಂದೆ ಬೇಬಿಲೋನ (ಟೈಗ್ರಿಸ ಮತ್ತು ಯುಫ್ರೇತೀಸ ನದಿಗಳ ಕೊಳ್ಳಪ್ರದೇಶದಲ್ಲಿ ಪುರಾತನಕಾಲದಲ್ಲಿ ಹೆಸರಾದ ಪಟ್ಟಣ)ದವರು ಹಸ್ತಿದಂತಹ ಇಲ್ಲವೇ ಕಟ್ಟಿಗೆಯ ತೆಳುವಾದ ಹಲಿಗೆಯ ಮೇಲೆ ನಕಾಶೆಗಳನ್ನು ತೆಗೆದಿಟ್ಟಿದ್ದರು; ಚೀನದೇಶದವರು ಕಂಚುಕಲ್ಲುಗಳ ಮೇಲೆ ಕೊರೆದಿದ್ದರು. ಐದನೆಯ ಶತಮಾನದಲ್ಲಿ ಒಬ್ಬ ಚೀನೀಯನಿಂದ ಎಲ್ಲಕ್ಕೂ ಮೊದಲು ಗೋಳ್ಳು ರಚಿತವಾಯಿತೆಂದು ನಂಬಲಾಗಿದೆ. ಎಂಟುನೂರು ವರ್ಷಗಳ ಪೂರ್ವದಲ್ಲಿ ಎಲ್ಲಕ್ಕೂ ಮೊದಲು ಪ್ರಾಕೃತಿಕ ನಕಾಶವು ಪೇರೂ ದೇಶದಲ್ಲಿ ಮಾಡಲ್ಪಟ್ಟಿತು. ಸ್ವಲ್ಪೇ ಸ್ಥಳಗಳನ್ನು ಮಾತ್ರ ಇಂಥ ನಕಾಶೆಗಳಲ್ಲಿ ತೋರಿಸಿರುತ್ತಿದ್ದರು. ಯಾಕೆಂದರೆ, ನಾವಿಕರ ಮತ್ತು ದೂರ ದೂರ ದೇಶಗಳನ್ನು ಸಂದರ್ಶಿಸಿ ಬಂದ ಪ್ರವಾಸಿಕರ ವರದಿಗಳ ಮೇಲಿಂದ ಇವುಗಳನ್ನು ತಯಾರ ಮಾಡುವ ವಿಧಾನವಿತ್ತು.

ಗ್ರೀಸ ಮತ್ತು ಇಜಿಪ್ತ ದೇಶಗಳ ಭೂಗೋಲಜ್ಞನಾದ ಟಾಲೆಮಿಯು ನಿರ್ಮಿಸಿದ ಜಗತ್ತಿನ ನಕಾಶೆಯನ್ನು ನಾವೆಲ್ಲರೂ ಗುರುತಿಸಬಲ್ಲೆವು; ಆದರೂ ಅದರೊಳಗಿನ

ಎಷ್ಟೋ ವಿವರಗಳು ನಮಗೆ ಗೊತ್ತಿದ್ದ ಸಂಗತಿಗಳಿಂದ ಭಿನ್ನವಾಗಿವೆ. ಅದು ಕ್ರಿಸ್ತೀ ಶಕ ೧೫ನೆಯ ಇಸವಿಯಲ್ಲಿ ಪ್ರಕಟಿಸಲ್ಪಟ್ಟಿತು ಮತ್ತು ಅದರಲ್ಲಿ ಅಟ್ಲಾಂಟಿಕ ಮಹಾಸಾಗರದ ಪ್ರದೇಶಗಳಿಂದ ಪೂರ್ವ ಏಶಿಯದ ಪ್ರದೇಶಗಳ ವರೆಗೆ ತೋರಿಸಲ್ಪಟ್ಟಿತ್ತು. ಟಾಲೀನಿಯು ಜಗತ್ತನ್ನು ಮೂರುನೂರಾ ಅರವತ್ತು ಅಂಶಗಳಲ್ಲಿ ವಿಭಾಗಿಸಿ ನಕ್ಷತ್ರಗಳ ನಿರೀಕ್ಷಣೆಯ ಆಧಾರದಿಂದಲೂ ರೇಖಾಂಶದ ಗೆರೆಗಳ ಸಹಾಯದಿಂದಲೂ ನಕಾಶದಲ್ಲಿ ಸ್ಥಳಗಳನ್ನು ಗುರುತಿಸಿ ಇಟ್ಟಿದ್ದನು.

ಮಧ್ಯಯುಗದಲ್ಲಿ ಅವನ ಶೋಧವನ್ನೇ ಜನರು ಮರೆತುಬಿಟ್ಟರು; ಅದರ ಪರಿಣಾಮದಿಂದ ಒಂದು ಸಾವಿರ ವರ್ಷಗಳ ಹಿಂದಿನ ಕಾಲದ ಯುರೋಪದವರ ನಕಾಶಗಳು ಅತಿ ವಿಲಕ್ಷಣವಾಗಿ ನಮಗೆ ತೋರುವದರಲ್ಲಿ ಆಶ್ಚರ್ಯವಿಲ್ಲ. ಕೆಲವು ಜಗತ್ತನ್ನು ದುಂಡಗೆ, ಕೆಲವು ಚಚ್ಚೌಕು, ಕೆಲವು ಅಧೀಕ ಚಿಹ್ನದ ಆಕಾರದಂತೆ ತೋರಿಸಿವೆ. ಪಾಲಿಸ್ತಾಯಿನವನ್ನು ದೊಡ್ಡ ದೇಶವನ್ನಾಗಿ ಮಧ್ಯದಲ್ಲಿ ಕೆಲವು ತೋರಿಸಿವೆ. ಯಾಕಂದರೆ, ಅದು ಯಾತ್ರಿಕರಿಗೆ ಪವಿತ್ರ ಸ್ಥಳವೂ ಮತ್ತು ಧರ್ಮಯುದ್ಧಗಳ ಕೇಂದ್ರವೂ ಆಗಿತ್ತು. ಕೆಲವುಗಳಲ್ಲಿಯಂತೂ ಅತಿ ಪೂರ್ವದಲ್ಲಿ ಕೈಲಾಸವನ್ನೇ ತೋರಿಸಿಬಿಟ್ಟಿದ್ದರು! ಹದಿನೈದನೆಯ ಶತಮಾನದಷ್ಟೊತ್ತಿಗೆ ಅರಬರ ಸಂಪರ್ಕವಾಗಿ ಅವರ ನಕ್ಷತ್ರವಿಜ್ಞಾನದ ಅನುಭವಗಳ ಪರಿಣಾಮದಿಂದ ಯುರೋಪದವರು ಮರೆತು ಹೋದ ಟಾಲೆಮಿಯ ಸಿದ್ಧಾಂತವನ್ನೇ ಪುನಃ ಶೋಧಿಸಿ ತೆಗೆದರೆಯಲು ಅಡ್ಡಿ ಇಲ್ಲ. ಕೋಲಂಬಸನು ಹೊಸ ಜಗತ್ತನ್ನು ಕುಡುಕಿ ತೆಗೆದಮೇಲೆ ಅಮೇರಿಕಕ್ಕೆ ನಕಾಶಗಳಲ್ಲಿ ಪ್ರವೇಶವು ದೊರೆಯಿತು.

ಮುಂದಿನ ಶತಮಾನಗಳಲ್ಲಿ ನಕಾಶವನ್ನು ತಯಾರಿಸುವ ಕೇಂದ್ರಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಅಲೆದಾಡಹತ್ತಿದವು. ಹದಿನಾರನೆಯ ಶತಮಾನದಲ್ಲಿ ಫಾಲಂಡ ದೇಶದ ಮೆಕ್ಕಾರ್ಟರನೆಂಬವನು ಇನ್ನು ಅಮೌಲ್ಯವಾದ "ಮ್ಕೆಟರ ಪ್ರೊಜೆಕ್ಷನ್" ಎಂಬ ಸಿದ್ಧಾಂತವನ್ನು ಹೊರಗೆಡವಿದನು "ಮ್ಕೆಟರ ಪ್ರೊಜೆಕ್ಶನ್" ಅಂದರೆ ಗೋಲಾಕಾರದ ಜಗತ್ತಿನ ನಕಾಶವನ್ನು ಒಂದು ನಿಶ್ಚಿತ ಪ್ರಮಾಣಕ್ಕನುಸರಿಸಿ ಹರವಾದ ಹಾಳೆಯ ಮೇಲೆ ತೆಗೆದು ತೋರಿಸುವದು. ಕೆಲ ಕಾಲ ಗತಿಸಿದ ನಂತರ ಫ್ರಾನ್ಸ ದೇಶದ ತಜ್ಞರು ಕಾಲ್ಪನಿಕ ದೃಷ್ಟಿಯನ್ನಿಟ್ಟುಕೊಂಡು ರಚಿಸಿದ ನಕಾಶಗಳನ್ನೆಲ್ಲ ಕಿತ್ತೊಗೆದು ಶಾಸ್ತ್ರಶುದ್ಧವಾದ ನಕಾಶಗಳನ್ನು ತಯಾರಿಸುವ ಕೇಂದ್ರವನ್ನು ತೆರೆದರು. ಆ ನಕಾಶಗಳು ಇನ್ನೂ ವರೆಗೂ ಹೆಸರಾಗಿವೆ. ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಬಹಳಷ್ಟು ದೇಶಗಳು ತಮ್ಮಿಷ್ಟಕ್ಕೆತಾವೇ ಸ್ವತಂತ್ರರೀತಿಯಿಂದ ಜಗತ್ತಿನ ತುಂಬೆಲ್ಲ ಹರಿದಾಡಿ ಅದರ ಮೋಜಣಿಯನ್ನು ಮಾಡಿಟ್ಟುಕೊಂಡವು. ಮುಂದೆ ೧೯೦೦ನೆಯ ಇಸವಿಯ ಸುಮಾರಿಗೆ ಆ ದೇಶಗಳೆಲ್ಲ ಒಂದು ಅಂತರ್‌ರಾಷ್ಟ್ರೀಯ ಪರಿಷತ್ತನ್ನು ಜರುಗಿಸಿ ಎಲ್ಲ ರಾಷ್ಟ್ರಗಳಿಗೂ ಸಮ್ಮತವಾಗುವ ಒಂದು ಸ್ಟ್ಯಾಂಡರ್ಡ ನಕಾಶವನ್ನು ನಿರ್ಧರಿಸಿದವು.

ವೈಮಾನಿಕ ಯುಗವು ಪ್ರವೇಶವಾದ ನಂತರ ಇದಕ್ಕೂ ಹೆಚ್ಚು ಪರಿಶುದ್ಧವಾದ ನಕಾಶಗಳ ಜೋಡಿಕೆಯು ದಿನದಿನಕ್ಕೆ ಬೆಳೆಯತೊಡಗಿತು. ಯಾಕಂದರೆ, "ಮೆಕ್ಯಾಟರ ಪ್ರೊಜೆಕ್ಶನ್" ಪದ್ಧತಿಯ ಮೇಲೆ ತೆಗೆದ ನಕಾಶಗಳು ವೈಮಾನಿಕರಿಗೆ ಅಷ್ಟೊಂದು ಉಪಯುಕ್ತವಿದ್ದದ್ದು ಕಂಡು ಬರಲಿಲ್ಲ. ಅವರ ಸಲುವಾಗಿ ಪ್ರತ್ಯೇಕ ನಕಾಶಗಳು ಹೊರಟವು. ಅವು ಅರಿಯದವರಿಗೆ ವಿಲಕ್ಷಣವಾಗಿ ತೋರುವದರಲ್ಲಿ ಆಶ್ಚರ್ಯವೇನಿಲ್ಲ. ವಿಮಾನುಗಳ ಮೇಲಿಂದ ತಕ್ಕೊಂಡ ಫೋಟೋಗಳ ಸಹಾಯದಿಂದ ಈಗ ಎಷ್ಟೋ ನಕಾಶಗಳು ತಯಾರಾಗಲಿಕ್ಕೆ ಹತ್ತಿವೆ. ಅತಿ ಎತ್ತರ ಹಾರುವ ರಾಕೆಟ್ಸು ಎಂಬ ವಿಮಾನುಗಳ ಮೇಲಿಂದ ತಕ್ಕೊಂಡ ಫೋಟೋಗಳಲ್ಲಿ ನೂರಾರು ಮೈಲು ವಿಸ್ತಾರವಾದ ಪ್ರದೇಶಗಳನ್ನೂ ಪೃಥ್ವಿಯ ಗೋಲಾಕಾರದ ಬಗೆಯನ್ನೂ ನೀವು ಮನಗಾಣುವಿರಿ.

ಇಷ್ಟಕ್ಕೇ ತೃಪ್ತಿಹೊಂದದೆ ಇನ್ನೂ ಹೊಸ ಹೊಸ ಜಗತ್ತುಗಳನ್ನು ಶೋಧಿಸುವ ಹಂಬಲದಿಂದ ಇಡೀ ವಿಶ್ವದ ಆಕಾರವನ್ನೂ ಮೇರೆಗಳನ್ನೂ ನಿರ್ಧರಿಸಲು ಮಾನವನ ಯುಕ್ತಿಪ್ರಯುಕ್ತಿಗಳು ಅವ್ಯಾಹತವಾಗಿ ಸಾಗಿಬಿಟ್ಟಿವೆ. ಇಪ್ಪತ್ತು ಸಾವಿರ ಮೈಲುಗಳಾಚೆಗೆ ಉರಿಯುವ ಒಂದು ಸಣ್ಣ ಸೋಣಬತ್ತಿಯ ಬೆಳಕನ್ನು ಕಂಡು

ಂಡಿಯಲು ಶಕ್ತವಾದಂಥ ದುರ್ಬೀನುಗಳನ್ನು ಜ್ಯೋತಿ-ಶಾಸ್ತ್ರಜ್ಞರು ನಿರ್ಮಿಸಿಕೊಂಡಿದ್ದಾರೆ. ಅವುಗಳ ಸಹಾಯದಿಂದ ಆಕಾಶದಲ್ಲಿ ಇಲ್ಲಿಯ ವರೆಗೆ ಗೊತ್ತು ಕಿಚ್ಚಲ್ಪಟ್ಟ ಪ್ರದೇಶಗಳ ಒಂದು ಸಾವಿರ ಪಟ್ಟು ಹೆಚ್ಚು ವಿಶಾಲವಾದ ಪ್ರದೇಶಗಳ ಫೋಟೋಗಳನ್ನು ತಕ್ಕೊಂಡು ಅವುಗಳನ್ನೆಲ್ಲ ಕಲೆಹಾಕುವದರಲ್ಲಿ ತೊಡಗಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಕೆಲಸ ಮಾಡುತ್ತಿರುವ ಜ್ಯೋತಿಷ್ಯ ಶಾಸ್ತ್ರಜ್ಞರ ಭಗೀರಥ ಪ್ರಯತ್ನಗಳ ಫಲವಾಗಿ ನಮ್ಮ ಪೃಥ್ವಿಯ ನಕಾಶೆಗಳಂತೆ ನಕ್ಷತ್ರಗಳ ನಕಾಶೆಗಳೂ ತಯಾರಾಗಲಿವೆ. ಈ ನಕಾಶೆಗಳು ಒಂದಿಲ್ಲೊಂದು ದಿನ ವಿಶ್ವದೊಳಗಿನ ಬೇರೆ ಬೇರೆ ಜಗತ್ತುಗಳ ದೇಶಗಳನ್ನು ಸಂದರ್ಶಿಸಬೇಕೆಂಬ ಹಂಬಲವುಳ್ಳ ಪ್ರವಾಸಿಕರಿಗೆ ಮಾರ್ಗದರ್ಶಕಗಳಾಗುವವೆಂದು ಹಾರೈಸೋಣ.

(ಇದನ್ನು "ಯುನೆಸ್ಕೋ ವರ್ಲ್ಡ್ ರಿವ್ಯೂ" ಎಂಬ ಪತ್ರಿಕೆಯ ೧೯೫೦ನೆಯ ಇಸವಿಯ ಜುಲಾಯಿ ತಿಂಗಳ ಸಂಪಾದಲನೆಯ ತಾರೀಖಿನ ದಿವಸ ಹೊರಡಿಸಿದ ೭೭ನೆಯ ನಂಬರಿನ ಅಂಕಿಸಿಂದ ಎತ್ತಿ ತಕ್ಕೊಂಡಿದ್ದಾಗಿದೆ.)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ

೧೯೫೧

ಪ್ರಾಥಮಿಕ, ಮಾಧ್ಯಮಿಕ ಹಾಗೂ ಬೇಸಿಕ್ ಬೋರ್ಡುಗಳ ಸಂಯುಕ್ತ ಸಭೆಯಿಂದ ಪರಿಷ್ಕರಿಸಲ್ಪಟ್ಟು ಸ್ವೀಕೃತವಾದ ಶರಿಂದ ೭ನೆಯ ಇಯತ್ತೆಯ ವರೆಗಿನ ಅಭ್ಯಾಸಪತ್ರಿಕೆಯಲ್ಲಿ 'ಸೂಜಿಗೆಲಸವು ಮೂಲೋದ್ಯೋಗದಲ್ಲಿ ಒಂದು ವಿಷಯವೆಂದು ಸೇರಿಸಲ್ಪಟ್ಟಿದೆ. ಯಾವುದಾದರೂ ಒಂದು ಹೆಣ್ಣುಮಕ್ಕಳ ಶಾಲೆಯಲ್ಲಿ ಸೂಜಿಗೆಲಸವನ್ನು ಒಂದು ಮೂಲೋದ್ಯೋಗವೆಂದು ಕಲಿಸುವ ವ್ಯವಸ್ಥೆಯನ್ನು ಮಾಡಲಾಗಿದ್ದರೆ ಆ ಶಾಲೆಯ ವಿದ್ಯಾರ್ಥಿನಿಯರು ಐದನೆಯ ಸಪರಿನ ಕೆಳಗೆ ಪ್ರಾಥಮಿಕ ಶಾಲಾ ಪ್ರಮಾಣಪತ್ರಪರೀಕ್ಷೆಗೆ 'ಸೂಜಿಗೆಲಸ'ವನ್ನು **ತೆಗೆದು**ಕೊಳ್ಳಬಹುದು. ಡ್ರಾಯಿಂಗು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಐದನೆಯ ಸವರಿನ ಕೆಳಗೆ ಒಂದು ವಿಷಯವೆಂದು ಸೇರಿಸಲ್ಪಟ್ಟಿದ್ದರೂ ಯಾವುದಾದರೂ ಶಾಲೆಯಲ್ಲಿ 'ಒಕ್ಕಲತನ'ವಾಗಲಿ, 'ಕಟ್ಟಿಗೆಯ ಕೆಲಸ'ವಾಗಲಿ, 'ಅಥವಾ ನೂಲುವದು ಮತ್ತು ನೆಯುವದು' ಆಗಲಿ ಒಂದು ಮೂಲೋದ್ಯೋಗವೆಂದು ಕಲಿಸಲ್ಪಡುತ್ತಿದ್ದರೆ ಆ ಶಾಲೆಯ ವಿದ್ಯಾರ್ಥಿಗಳು ತಮ್ಮ ಶಾಲೆಯಲ್ಲಿ ಕಲಿಸಲ್ಪಡುತ್ತಿದ್ದ ಮೂಲೋದ್ಯೋಗವನ್ನು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ತೆಗೆದು ಕೊಳ್ಳಲೇಬೇಕು, **ಡ್ರಾಯಿಂಗನ್ನಲ್ಲ.**

ಪುಣೆ
೯—೮—೧೯೫೦

—ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್.

ಪರಿಶಿಷ್ಟ ಬ

ಪ್ರಾಥಮಿಕ ಪ್ರಮಾಣಪತ್ರ ಪರೀಕ್ಷೆಯ

ಅಭ್ಯಾಸ ಪತ್ರಿಕೆ

(ಪರೀಕ್ಷೆಯ ನಿಯಮಗಳಲ್ಲಿಯ ೬ನೆಯ ನಿಯಮವನ್ನು ನೋಡಿರಿ.)

ಪರೀಕ್ಷೆಯ ಮಾಧ್ಯಮವು ಆರಿಸಿಕೊಂಡ ಪ್ರಾದೇಶಿಕ ಭಾಷೆ (ಎಂದರೆ ಮರಾಠಿ, ಗುಜರಾತಿ ಅಥವಾ ಕನ್ನಡ) ಅಥವಾ ಉರ್ದು ಇಲ್ಲವೆ ಹಿಂದೀ ಇರುವದು. ಆರನೆಯ ಸದರಿನ ಭಾಷೆಗಳಲ್ಲಿ ಒಂದು ವಿಷಯವಿದ್ದಲ್ಲಿ ಮಾತ್ರ ಪರೀಕ್ಷೆಗಾಗಿ ತೆಗೆದುಕೊಂಡ ಭಾಷೆಯೇ ಮಾಧ್ಯಮವಾಗುವದು.

ಗುಣಗಳು: ೨೦೦

ಮೊದಲನೆಯ ಸದರು: ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ

(ನೂರು ಗುಣಗಳ ಎರಡು ಪ್ರಶ್ನೆ ಕಾಗದಗಳು)

೧೦೦—**ಮೊದಲನೆಯ ಕಾಗದ.**

೭೫ (ಅ)—**ಹಚ್ಚಿದ ವಿಷಯದ ಹೊರಗಿನ ಗದ್ಯಾಂಶಗಳ ಇಲ್ಲವೆ ಪದ್ಯಾಂಶಗಳ ಅರ್ಥವಿವರಣೆ—** ಓದಿದ್ದನ್ನು ಇದ್ದಕ್ಕಿದ್ದಂತೆ ಅವತರಿಸುವದು, ವಿಸ್ತರಿಸುವದು, ಸಾರ ಸಂಗ್ರಹಿಸುವದು,

೭೫ (ಬ)—**ವ್ಯಾಕರಣ** (ಪಠ್ಯವಿಷಯದಲ್ಲಿ ಬಂದದ್ದು ಮತ್ತು ಸಾಮಾನ್ಯವಾದದ್ದು) ಸಮಾಸಗಳು ಮತ್ತು ಅಲಂಕಾರಗಳು. ಭಾಷಾ ಸಂಪ್ರದಾಯಗಳು (ಪಡೆನುಡಿಗಳು) ಮತ್ತು ಹಲವಾರು ಶಬ್ದಗಳು ಕೂಡಿ ಉಂಟಾದ ನುಡಿಯ ಕಟ್ಟುಗಳು—ಇಂಥ ವುಗಳ ಉಪಯೋಗ.

೧೦೦—**ಎರಡನೆಯ ಕಾಗದ.**

ನಿಬಂಧಬರೆಹ ಹಾಗು ಸುವಾಚ್ಯ ಅಕ್ಷರ ಬರಹ.

ವರ್ಣನಪರ ಪ್ರಬಂಧ ಇಲ್ಲವೆ ಕೊಟ್ಟ ವಿಷಯದ ಮೇಲೆ ವರದಿ, ಪತ್ರಲೇಖನ, ಕಥೆ, ಸಂಭಾಷಣೆ ಇತ್ಯಾದಿ (ಈ ಪರೀಕ್ಷೆಯಲ್ಲಿ ಮರಾಠಿಯಿಂದ ಬರೆಯುವ ವಿದ್ಯಾರ್ಥಿಗಳಿಗೆ ಉತ್ತರಗಳ ಕೆಲವೊಂದು ಭಾಗವನ್ನು ಮೋಡಿಯಿಂದ ಬೇಕಾವರೆ ಬರೆಯುವ ಸವಲತ್ತು ಇರುವದು.)

೫೦—**ಮೂರನೆಯ ಕಾಗದ.**

ಸ್ಥಳೀಯ ಪ್ರಾದೇಶಿಕ ಭಾಷೆ

(ಉರ್ದು ಪ್ರಾಥಮಿಕ ಶಾಲೆಗಳಿಂದ ಬಂದ ಉಮೇದವಾರರಿಗೆ ಮತ್ತು ಸ್ಥಳೀಯ ಪ್ರಾದೇಶಿಕ ಭಾಷೆಯಲ್ಲದ ಬೇರೊಂದು ಭಾಷೆಯ ಮಾಧ್ಯಮದಿಂದ ಶಿಕ್ಷಣವನ್ನು ಪಡೆಯುತ್ತಿರವ ವರೆಗೆ ಇದು ಕಡ್ಡಾಯದ್ದು. ಮುಂಬಯಿಯಿಂದ ಇಲ್ಲವೆ ಮುಂಬಯಿಯ ಸಬರ್ಬನ್ ಜಿಲ್ಲೆಯಿಂದ ಹಾಗು ಭಾಷಾಪ್ರದೇಶಗಳ ಗಡಿಯ ಸೀಮೆಗಳಿಂದ ಕೂತ ಉಮೇದವಾರರಿಗೆ ಇದು ಐಚ್ಛಿಕವಾದದ್ದು.

೨೫— ಸಾಧಾರಣ ಗಡಚಾಗಿರುವ ಪಠ್ಯೇತರ ಅವತರಣಿಕೆಯ ಅರ್ಥವಿವರಣೆ.

೨೫— ನಿಬಂಧ ಬರೆಹ— ಕಥೆಯ ಸಾರಾಂಶ, ಲಘು-ವೃತ್ತಾಂತ ಕಥನ, ಸಣ್ಣ ಪತ್ರವನ್ನು ಬರೆಯುವದು ೨.

ಟಿಪ್ಪಣಿ : ೧. ಈ ಮೂರನೆಯ ಕಾಗದದ ಪರೀಕ್ಷೆಯವರು ಪಡೆದ ಜ್ಞಾನದ ಮಟ್ಟವು ಆನೆಯ ಇಯತ್ತೆಗಳ ವಿದ್ಯಾರ್ಥಿಗಳ ಮಟ್ಟದಷ್ಟು ಇರಬೇಕು.

೨. ಈನೆಯ ಕಾಗದವನ್ನು ಕಡ್ಡಾಯದ ವಿಷಯವಾಗಿ ತೆಗೆದುಕೊಂಡ ಉಮೇದವಾರರು ಒಟ್ಟು ೪೦%, ಎಂದರೆ ಮೂರೂ ಕಾಗದಗಳಲ್ಲಿ ಕೂಡಿ ೧೦೦ಕ್ಕೆ ೪೦ ಗುಣಗಳನ್ನು ದೊರಕಿಸಬೇಕು.

೨೦೦—ಎರಡನೆಯ ಸದರು : ಗಣಿತ

(ನೂರು ನೂರು ಗುಣಗಳ ೨ ಕಾಗದಗಳು)

೧೦೦—ಮೊದಲನೆಯ ಕಾಗದ. ಅಂಕಗಣಿತ.

ಸುಲಭ ಅಪೂರ್ಣಾಂಕಗಳು (ವ್ಯವಹಾರಿ ಹಾಗು ದಶಾಂಶ), ಗುಣೋತ್ತರ ಹಾಗು ಪ್ರಮಾಣ, ಸರಳಬಡ್ಡಿ, ಮೂರು ವರುಷ ಮಿಕ್ಕಿದ ಅವಧಿಯ ಚಕ್ರಬಡ್ಡಿ ಆಕರಣೆ ಮಾಡುವದು. ಲಾಭ ಹಾನಿಯ ಸುಲಭ ಉದಾಹರಣೆಗಳು, ಕಮೀಶನ್, ಮುರುಕೊಳ್ಳುವ ಬಡ್ಡಿ. ಸಾವಾನುಗಳ ಕೋಖ ಹಾಗು ಉದ್ದರಿ ಬೆಲೆಗಳು. ವೇಳೆ, ಕೆಲಸ, ವೇಗದ ಸುಲಭ ಪ್ರಶ್ನೆಗಳು. ಸರಾಸರಿ ಮತ್ತು ಶತಮಾನ. ಪಾಲುಗಾರಿಕೆಯ ಸುಲಭ ಪ್ರಶ್ನೆಗಳು. ಸಾದಾ ಕೋಕತ್ತಾಳೆ. ಚೌಕದ ಹಾಗು ಘನಅಳತೆಗಳ ವ್ಯವಹಾರದ ಪ್ರಶ್ನೆಗಳು. ವರ್ತುಲದ ಕ್ಷೇತ್ರಫಲ, ಚಿತಿಯ (ಸಿಲಿಂಡರದ) ಮೇಲ್ಮೈಯ ಕ್ಷೇತ್ರಫಲ ಹಾಗು ಚಿತಿಯ ಘನಫಲ. ಸುಲಭ ರೇಖೆಯ ಹಾಗು ಕಂಬದ ರೇಖಾ ಪತ್ರಗಳು.

(ಟಿಪ್ಪಣಿ: ಪ್ರಶ್ನೆಗಳು ಅವಶ್ಯವಾಗಿ ಉಮೇದವಾರರ ಜ್ಞಾನ ಹಾಗು ಅನುಭವದ ವಿಷಯಗಳಾಗಿರುವ ವಸ್ತುಗಳು ಮತ್ತು ಸಂಗತಿಗಳನ್ನು ಒಳಗೊಂಡಿರಬೇಬೇಕು.)

೧೦೦—ಎರಡನೆಯ ಕಾಗದ.
ಭೂಮಿತಿ ಮತ್ತು ಸುಲಭ ಜಮಾಖರ್ಚು

೪೦ (ಅ) **ಭೂಮಿತಿ.**

ಕೋನಗಳನ್ನು ರೇಖೆಗಳನ್ನು ಅಳೆಯುವದು. ಕೋನಗಳ ಪ್ರಕಾರಗಳು, ಒಂದು ಬಿಂದುವಿನಲ್ಲಿ ಕೂಡಿರುವ ಕೋನಗಳ (ಬಗ್ಗೆಗೊತ್ತಾದ ಸಂಗತಿಗಳು) ಗುಣಧರ್ಮಗಳು, ಲಂಬ.

ತ್ರಿಕೋಣಗಳು—ಪ್ರಕಾರಗಳು ಹಾಗು ಗುಣಧರ್ಮಗಳು. ಸಮಾಂತರ ರೇಖೆಗಳು-ಗುಣಧರ್ಮಗಳು.ಕ್ಷೇತ್ರವನ್ನು ತ್ರಿಕೋಣಗಳಾಗುವಂತೆ ವಿಭಾಗಿಸಿಕೊಂಡು ಹೊಲಗಳ ನಕ್ಷೆಯನ್ನು ತೆಗೆಯುವದು.

ಕೋನಗಳ ಹಾಗು ತ್ರಿಕೋನಗಳ ರಚನೆ— ಮೂರು ಭುಜಗಳು, ಎರಡು ಭುಜಗಳು ಅವುಗಳ ನಡುವಿನ ಕೋನ, ಎರಡು ಕೋನಗಳು ಮತ್ತು ಒಂದು ಭುಜ ಕೊಟ್ಟಾಗ ತ್ರಿಕೋನದ ರಚನೆ — ಕೊಟ್ಟ ಸರಳರೇಖೆಯ ಮೇಲೆ ಅದರಲ್ಲಿಯ ಒಂದು ಬಿಂದುವಿನಲ್ಲಿ ಲಂಬವನ್ನು ಅಥವಾ

ಹೊರಗಿನ ಒಂದು ಬಿಂದುವಿನಿಂದ ರೇಖೆಗೆ ಲಂಬವನ್ನು ತೆಗೆಯುವದು. ಕೊಟ್ಟ ರೇಖೆಗೆ ಸಮಾಂತರ ರೇಖೆಯನ್ನು ರಚಿಸುವದು. ಕೊಟ್ಟ ಪ್ರವಾಸದ ಸಂಗತಿಗಳ ಮೇಲಿಂದ ಪ್ರಮಾಣಕ್ಕೆ ಸರಿಯಾಗಿ ಪ್ರವಾಸದ ನಕ್ಷೆಯನ್ನು ತಯಾರಿಸುವದು.

ತ್ರಿಕೋನಾಕೃತಿ ಕ್ಷೇತ್ರಗಳ ಕ್ಷೇತ್ರಫಲವನ್ನು ತೆಗೆಯುವದು. ಅಂಕಡೊಂಕಾಗಿ ಅನೇಕ ಭುಜಗಳಿಂದ ಕೂಡಿದ ಆಕೃತಿಯ ಕ್ಷೇತ್ರಫಲವನ್ನು ಅದರಲ್ಲಿ ತ್ರಿಕೋನಗಳಾಗುವಂತೆ ವಿಭಾಗಿಸಿಕೊಂಡು ತೆಗೆಯುವದು.

೨೦ (ಬ) **ಸುಲಭ ಜಮಾಖರ್ಚು.**

ಲೆಕ್ಕಪತ್ರ ಇಡುವದು, ಶಾಲೆಯ ವಾರ್ಷಿಕ ಸಮ್ಮೇಲನಗಳ, ಕೋಠಿಗಳ ಅಥವಾ ವಖಾರಗಳ, ಕಮತದ, ಮನೆಯ, ದೈನಂದಿನ ಮನೆಯ ಖರೀದಿಗಳ ಸುಲಭ ಲೆಕ್ಕವನ್ನಿಡುವದು-ರೇಖಾ ಚಿತ್ರಾಂಕಗಳನ್ನು ಬರೆಯುವ ಪದ್ಧತಿ.

೧೦೦—**ಮೂರನೆಯ ಪದರು-ಇತಿಹಾಸ, ಪೌರನೀತಿ, ಹಾಗು ಭೂಗೋಲ.**

(ಮೂರು ಭಾಗಗಳನ್ನೊಳಗೊಂಡ ಒಂದು ಕಾಗದ)

೪೦ (ಅ) **ಇತಿಹಾಸ.**

ಪ್ರಾಥಮಿಕ ಶಾಲೆಗಳ ಅಭ್ಯಾಸಪತ್ರಿಕೆಯಲ್ಲಿ ಕಾಣಿಸಿದಂತೆ ಗೌತಮನ ಜನ್ಮದಿಂದ ಇಂದಿನ ವರೆಗಿನ ಭಾರತದ ಇತಿಹಾಸ.

೨೦ (ಬ) **ಪೌರನೀತಿ.**

ಭಾರತದ ರಾಜ್ಯದ ಪಳಿತದ ರೂಪರೇಷೆ—(i) ಜಿಲ್ಲಾ ಲೋಕಲ್ ಬೋರ್ಡುಗಳು, ಮುನಸಿಪಾಲಿಟಿಗಳು, ಗ್ರಾಮಪಂಚಾಯತಿಗಳು, ಹಾಗು ಅವುಗಳ ಕಾರ್ಯಗಳು.

(ii) ಪ್ರಾಂತೀಯ ಹಾಗೂ ಕೇಂದ್ರ ಸರಕಾರಗಳು ಮಾಡತಕ್ಕ ಕಾರ್ಯಗಳು. ಜಲ್ಲಿಯಲ್ಲಿಯ ಹಾಗು ಪ್ರಾಂತೀಯ ರಾಜ್ಯದ ಪಡಳಿತದ ಸಾಧಾರಣ ರೂಪರೇಷೆ. (iii) ಭಾರತದ ಹೊಸ ರಾಜ್ಯ ಘಟನೆ. (೧. ಭಾರತದ ಯೂನಿಯನ್ ಹಾಗು ಅದರ ಸೀಮೆ. ೨. ಮೂಲಭೂತವಾದ ಹಕ್ಕು ಬಾಧ್ಯತೆಗಳು. ೩. ಯೂನಿಯನ್ನಿನ ಕಾರ್ಯವಾಹಿ ೪. ಪಾರ್ಲಿಮೆಂಟು ಹಾಗು ಅದರ ಕಾರ್ಯ ೫. ಘಟಕ ರಾಜ್ಯದ ಕಾರ್ಯವಾಹಿ. ೬. ಘಟಕ ರಾಜ್ಯದ ಶಾಸನ ಸಭೆ. ೭. ಯೂನಿಯನ್ ಹಾಗು ಘಟಕ ರಾಜ್ಯಗಳ ಪರಸ್ಪರ ಸಂಬಂಧ. ೮. ಯೂನಿಯನ್ನಿನ ನ್ಯಾಯಾಂಗ ರಚನೆ. ೯. ಘಟಕ ರಾಜ್ಯದ ನ್ಯಾಯಾಂಗ. ೧೦. ಚುನಾವಣೆಗಳು. ೧೧. ಕೆಲವು ವರ್ಗಗಳಿಗೆ ಸಂಬಂಧಿಸಿ ಮಾಡಿದ ವಿಶಿಷ್ಟ ವ್ಯವಸ್ಥೆ. ೧೨. ಸರಕಾರಿ ಭಾಷೆ.)

೪೦ (ಕ) **ಭೂಗೋಲ**

೧) ಅಕ್ಷಾಂಶ, ರೇಖಾಂಶ. ರಾತ್ರಿ ಹಗಲು, ಹವಾಮಾನಗಳು, ಮಳೆ, ಸಸ್ಯಸಂಪತ್ತು, ಸೂರ್ಯಮಾಲೆ, ಮಹಾಸಾಗರಗಳಲ್ಲಿನ ನೀರಿನ ಪ್ರವಾಹಗಳು ಹಾಗೂ ಗಾಳಿಗಳ ಸ್ಥಿರವಾದ ಪದ್ಧತಿ.

೨) ಉಷ್ಣಮಾಪಕ, ವೃಷ್ಟಿಮಾಪಕ ಹಾಗು ವಾಯುಮಾಪಕಗಳು.

೩) ಪ್ರಪಂಚದ ಸಾಮಾನ್ಯ ಪ್ರಾದೇಶಿಕ ಅಭ್ಯಾಸ. ಜಗತ್ತಿನಲ್ಲಿಯ ಮುಖ್ಯ ದೇಶಗಳ ಸ್ಥೂಲ ಅಭ್ಯಾಸ.

೪) ಭಾರತದ ವಿವರವಾದ ಅಭ್ಯಾಸ.

೫) ಜೀವನ ನಿರ್ವಾಹಕ್ಕು ಬೇಕಾಗುವ ವಸ್ತುಗಳ ಭೂಗೋಲ-ಜಗತ್ತಿನ ಉತ್ಪಾದನೆ ಹಾಗು ಅದರಲ್ಲಿ ಭಾಗ ಹಾಗು ಅದರ ಆರ್ಥಿಕ ಸ್ಥಿತಿ.

ಬ) ನೀರಿನ ಶಕ್ತ್ಯುತ್ಪಾದನೆಯಲ್ಲಿ ಭಾರತದ ಸಂಪತ್ತು, ಅರಣ್ಯ ಸಂಪತ್ತು, ಸಮುದ್ರ ಸಂಪತ್ತು, ಖನಿಜ ಸಂಪತ್ತು, ಒಕ್ಕಲತನ ಹಾಗು ಉದ್ದಿಮೆಗಳು.

ಜ) ಪರದೇಶಗಳೊಡನೆ ಭಾರತದ ವ್ಯಾಪಾರ, ಜಗತ್ತಿನ ಬೇರೆಬೇರೆ ಭಾಗಗಳ ಭೌಗೋಲಿಕ ಪರಸ್ಪರಾವಲಂಬನ-ಭಾರತಕ್ಕೆ ಮುಖ್ಯವಾಗಿ ಸಂಬಂಧಿಸಿರುವ ಜಲ ಹಾಗು ವಾಯುಮಾರ್ಗಗಳು.

ಟಿಪ್ಪಣಿ: ಭಾರತದ ಬಾಹ್ಯರೇಖೆಯ ಸಕಾಶವನ್ನು ತೆಗೆದು ಅದರಲ್ಲಿ ಮುಖ್ಯ ಮುಖ್ಯ ವಿವರಗಳನ್ನು ತುಂಬಲು ಉಪಯೋದವಾರರಿಗೆ ಬರಬೇಕು.

೧೦೦ ನಾಲ್ಕನೆಯ ಸದರು–ಸಾಮಾನ್ಯ ವಿಜ್ಞಾನ–ಒಂದು ಕಾಗದ

೧. (ಸಾದಾ ಶಾಲೆಗಳಿಂದ ಬಂದ ಹುಡುಗರಿಗಾಗಿ)

೩೦ (ಅ)—ಶರೀರಶಾಸ್ತ್ರ ಹಾಗು ಆರೋಗ್ಯಶಾಸ್ತ್ರ

i) ಶರೀರಶಾಸ್ತ್ರ.
ದೇಹವ್ಯಾಪಾರದ ಮುಖ್ಯ ವ್ಯವಸ್ಥೆಗಳು. ನಮ್ಮ ಆಯುಷ್ಯದ ನಾಲ್ಕು ಜೀವನ ಚಟುವಟಿಕೆಗಳು— ಶ್ವಾಸೋಚ್ಛ್ವಾಸ, ಆಹಾರಸೇವನೆ, ಜಲನೆ, ಇಂದ್ರಿಯಗಳ ವ್ಯಾಪಾರ. ಇಂದ್ರಿಯಗಳು.

ii) ಹವೆ, ನೀರು, ಆಹಾರ-- ಅದರ ಘಟಕಗಳು, ಹಾಗು ಶರೀರ ಪೋಷಕ ಪ್ರಯೋಜನ. ಎಲ್ಲ ಘಟಕಗಳೂ ಸರಿಯಾದ ಪ್ರಮಾಣದಲ್ಲಿರುವ, ಆಹಾರ ಪೇಯಗಳು. ವೈಯಕ್ತಿಕ ಆರೋಗ್ಯ— ಕಣ್ಣು, ಮೂಗು, ಹಲ್ಲು, ಕೂದಲು, ತ್ವಚ ಇವುಗಳ ಯೋಗ್ಯ ಉಪಚಾರ ಹಾಗು ರಕ್ಷಣೆ-ಸ್ವಚ್ಛತೆಯ ಅಭ್ಯಾಸಗಳು, ಗ್ರಾಮದ ಆರೋಗ್ಯ-ಕೊಳಚೆಯನ್ನು ತೆಗೆದುಹಾಕುವದು. ಸಾಮಾನ್ಯವಾಗಿ ಬರುವ ರೋಗಗಳ ಸಾಧಾರಣ ಜ್ಞಾನ, ಅವುಗಳ ಪ್ರತಿಬಂಧ ಹಾಗು ನಿವಾರಣೆ. ಚಳಿಜ್ವರ, ವಿಷಮಜ್ವರ, ಪ್ಲೇಗು, ಮಾರಿಕಾ, ಕ್ಷಯ, ಮೈಲೀಜೀನೆ ನಾರುಹುಣ್ಣು.

೩೦ (ಬ) ಸಸ್ಯಗಳ ಹಾಗೂ ಪ್ರಾಣಿಗಳ ಅಭ್ಯಾಸ

ವನಸ್ಪತಿಗಳ ಬೇರೆ ಬೇರೆ ಭಾಗಗಳ ರಚನೆ ಹಾಗು ಕಾರ್ಯ- ಬೇರುಗಳು, ಕಾಂಡಗಳು, ಎಲೆಗಳು, ಹೂಗಳು, ಬೀಜಗಳು, ಸಸ್ಯಾಭಿವೃದ್ಧಿ ಪ್ರಮಾಣ ಬೀಜಪ್ರಸಾರ, ಕಾಂಡವನ್ನು ಕತ್ತರಿಸಿ ಅಗಿ ಮಾಡುವದು, ಕಲಮು ಮಾಡುವದು, ಮೇಲಿನ ಥರ ಹಾಕುವದು. (ಲೇಅರಿಂಗ) ಟೊಂಗೆಯನ್ನು ಬಗ್ಗಿಸಿ ಕಟ್ಟಿ ಹೊಸ ಬೇರು ಬಿಡುವಂತೆ ಮಾಡುವದು. ವನಸ್ಪತಿಗಳಲ್ಲಿ, ಪ್ರಾಣಿಗಳಲ್ಲಿ, ಹಾಗೂ ಮನುಷ್ಯರಲ್ಲಿ ಕಂಡುಬರುವ ಪ್ರಜನನ ಕ್ರಿಯಾ. ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ಕಂಡುಬರುವ ಜೀವಿತದ ನಾಲ್ಕು ಮುಖ್ಯ ವ್ಯಾಪಾರಗಳು.

೪೦ (ಕ) ಸಾಮಾನ್ಯ ಪ್ರಾಥಮಿಕ ವಿಜ್ಞಾನ

ಹವೆ, ಅದರ ಘಟನೆ ಹಾಗೂ ಗುಣಧರ್ಮಗಳು, ಒತ್ತಡ, ನೀರು ಅದರ ಘಟಕಗಳು, ಹಾಗು ಗುಣಧರ್ಮಗಳು, ಘನೀಭವನ ಹಾಗು ಊರ್ಧ್ವಪಾತನ. ಯಂತ್ರಶಾಸ್ತ್ರ—ಸೊನ್ನಿಗಳು, ಗಡಗಡಿ ಹಾಗು ಜೇಬಿನ ತಿರುಪಣಿಯ ಉಪಯೋಗ, ಗಾಲಿಯ ಉಪಯೋಗ, ಘರ್ಷಣ ಹಾಗು ಎಣ್ಣೆಹಾಕುವದು, ಆಕಾಶದ ನಿರೀಕ್ಷಣೆ ಹಾಗು ಅಭ್ಯಾಸ.

ಸೂರ್ಯಮಾಲೆ—ಎಲ್ಲಕ್ಕೂ ಮುಖ್ಯವಾದ ನಕ್ಷತ್ರ ಪುಂಜಗಳು, ನಕ್ಷತ್ರಗಳು, ಗ್ರಹಗಳು ಹಾಗು ಧೂಮ, ಕೇತುಗಳು. ಚಂದ್ರನೂ ಅವನ ಕಲೆಗಳೂ—ಸೂರ್ಯ-ಗ್ರಹಣ ಚಂದ್ರಗ್ರಹಣಗಳು-ಅವು ಉಂಟಾಗುವ ರೀತಿ

೩೦ (ಅ)— ಶರೀರಶಾಸ್ತ್ರ ಹಾಗು ಆರೋಗ್ಯಶಾಸ್ತ್ರ.

೨೦ (ಬ)—ಗೃಹ-ವಿಜ್ಞಾನ.

ಆಹಾರ ಸಂಗ್ರಹ, ಮನೆಯಲ್ಲಿಯ ಸ್ವಚ್ಛತೆ— ಕಸ-ಕಡ್ಡಿಗಳನ್ನು ಹೊರಗೆ ಚಲ್ಲುವದು,ಪಾತ್ರೆ-ಪಡಗಗಳನ್ನು ತೊಳೆದ, ಬಟ್ಟೆ-ಬರೆಗಳನ್ನು ಒಗೆದ ನೀರು, ಬಚ್ಚಲ ಹರಿ. ಪಾಯಖಾನೆಯ ನೀರು. ಇವು ಹರಿದು ಹೋಗು ಏರ್ಪಾಡು ಮಾಡುವದು. ಶುದ್ಧ ಹವೆ, ಬೆಳಕು ಹಾಗು ಮನೆಯ ಸ್ವಚ್ಛತೆಯನ್ನು ಕಾಯುವ ಇತರ ವಿಧಾನಗಳು. ಮನೆಯ ಕಸವನ್ನು. ನೀರನ್ನು ಶುದ್ಧಗೊಳಿಸುವ ಸಾಧನಗಳ ಉಪಯೋಗ. ಮನೆಯೊಳಗಿನ ಹುಳ ಹುಪ್ಪಡಿಗಳ ತಗಣಿ, ಹೇನು. ಸೀರು, ಗೆದ್ದಲಿ, ಜಿಳ್ಳು, ಜಿನ ಕೀಟಗಳಂತಹ ಹುಳಗಳು (ಸಿಲ್ವರ್ ಸಿರ), ಜೊಂಡಿಂಗ, ದೀಪದ ಹುಳಗಳು, ಇಲಿ ಹೆಗ್ಗಣಗಳು ಇವುಗಳನ್ನು ನಾಶಮಾಡುವ ರೀತಿಗಳು ಅಡಿಗೆಮಾಡುವದು— ಅನ್ನಜಿವಾತಿಗಳನ್ನು ಮಾಡುವದು, ಶಾಕಾಹಾರ, ಮಾಂಸಾಹಾರದ ಜೀನಸುಗಳನ್ನು ತಯಾರಿಸುವದು, ಸಿಹಿ ಪಕ್ವಾನ್ನಗಳು, ಗುಳಂಬಗಳು ಹಾಗು ಉಪ್ಪಿನಕಾಯಿಗಳು. ಜೀನಿಯವರಿಗಾಗಿ ಅಡಿಗೆ ಮಾಡುವದು— ಬಾರ್ಲಿ (ಜವೆಗೋದಿಯ) ನೀರು, ಸಾಬೂ ಉಪ್ಪಿಯ ಹಾಗು ಸಾದಾ ಅಕ್ಕಿಯ ಗಂಜಿ, ಕಟ್ಟು, ಸಾರು.

ವಸ್ತ್ರಧಾವನ-ನೂಲಿನ, ರೇಶ್ಮಿಯ ಹಾಗು ಉಣ್ಣೆಯ ಬಟ್ಟೆಗಳನ್ನು ಒಗೆಯುವದು ಹಾಗು ಇಸ್ತರಿ ಮಾಡುವದು. ಬಟ್ಟೆಗಳ ಮೇಲಿನ ಕಲೆಗಳನ್ನು ತೆಗೆದು ಹಾಕುವದು. ಕುಡತಾ ಹಾಗು ಸೀರೆಗಳಿಗೆ ಬಣ್ಣಕೊಡುವದು.

ಮನೆಯಲ್ಲಿ ಹಾಗು ಹೊರಯಲ್ಲಿ ಅಪಾಯಗಳಿಂದ ಸಂರಕ್ಷಣೆ, ಮನೆಯೊಳಗಿನ ಅನೇಕ ಹಾನಿಕರವಾದ ಅಭ್ಯಾಸಗಳ ಜರ್ಜೆ, ಪ್ರಾಣಿಜನ್ಯ ಸ್ಫೋಟಗಳನ್ನು ಹೊತ್ತಿಸುವದು. ಕಂದೀಲುಗಳನ್ನು ದೀಪಗಳನ್ನು ಒರಿಸಿ ಇಡುವ ಹಾಗು ಬತ್ತಿಯನ್ನು ಕತ್ತರಿಸುವ ರೀತಿಗಳು.

ಗೃಹ ಶುಶ್ರೂಷೆ—ಜೀನೆಯವರು ಮಲಗಿದ ಕೋಣೆ, ಅದು ಇರತಕ್ಕ ಸ್ಥಳ, ಹಾಸಿಗೆಯಲ್ಲಿಯ ಸಲಕರಣೆಗಳು, ಹಾಸಿಗೆ ಸಂಚಾರ, ಸ್ವಚ್ಛತೆ, ದೂಷಿತ ಆವರಣವನ್ನು ಶುದ್ಧಗೊಳಿಸುವದು.

ದಾಯಿಯ ಕರ್ತವ್ಯಗಳು—ಅವಳ ವೇಷ ಹಾಗು ವ್ಯವಹರಿಸುವ ರೀತಿ, ಪ್ರತಿನಿತ್ಯದಲ್ಲಿ ತಪ್ಪದೆ ಮಾಡುವ ನಣ್ಣಪ್ಪಟ್ಟ ಕೆಲಸಗಳು ಹಾಗು ನಮಯನಿಷ್ಠತೆ—ಇವುಗಳನ್ನನುಲಕ್ಷಿಸಿ ಚಿಕಿತ್ಸೆಯ ಉಷ್ಣಮಾಪಕ ಯಂತ್ರವನ್ನು ಹೇಗೆ ಉಪಯೋಗಿಸಬೇಕು. ಥರ್ಮಾಮೀಟ್ರಿನ ಹಾಗು ನುಡಿಯ ರೀತಿಯನ್ನು ಹೇಗೆ ತಿಳಿದುಕೊಳ್ಳಬೇಕು. ಎದೆ, ಬೆನ್ನು ಮುಂತಾದ್ದನ್ನು ಕಾಸುವ ರೀತಿ, ಪೋಲ್ಟಿಸುಗಳನ್ನು ತಯಾರು ಮಾಡುವ ಹಾಗು ಹಾಕುವ ರೀತಿ. ಎನಿಮಾ ಕೊಡುವ ರೀತಿ.

ಸಾಂಸರ್ಗಿಕ ಬೇನೆಯ ಸಂದರ್ಭದಲ್ಲಿ ಏನು ಮಾಡಬೇಕು ಬೇನೆಯವರಿಗೆ ವಧ್ಯದ ಆಹಾರವನ್ನು ತಯಾರಿಸುವದು ರೋಗಿಯ ಮೈಯನ್ನು ಹೇಗೆ ತೊಳೆದು ಒರಿಸಬೇಕು.

ತಾಯಿಯಾದವಳಿಗೆ ಬರಬೇಕಾದ ವಿದ್ಯೆ— ಶಿರುಸಂಗೋಪನ ಶಿಶುಜನನದ ಪೂರ್ವದಲ್ಲಿ ಮತ್ತು ನಂತರ ಮಾಡಬೇಕಾದ ತಾಯಿಯ

ಆರೈಕೆ, ದೇಹಸ್ವಚ್ಛತೆ, ಕೂಸಿನ ಆರೈಕೆ— ಬಟ್ಟೆ, ನಿದ್ರೆ (ಶಿಶುಗಳಿಗೆ ಬೇಕಾಗುವ ಅವಧಿ); ಸ್ವಚ್ಛತೆ.

ಮೊಲೆಹಾಲನ್ನು ಕುಡಿಯುತ್ತಿಲ್ಲವಾದರೆ ಕೂಸಿಗೆ ಹಾಕುವ ಹಾಲನ್ನು ತಯಾರಿಸುವ ವಿಧಾನ.

೧) ಆಕಳ ಇಲ್ಲವೆ ಆಡಿನ ಹಾಲು.

೨) ಫಾರ್ಮಸಿಗಳಲ್ಲಿ ಸಿಗುವ ತಯಾರಿಸಿದ ಆಹಾರಗಳು.

೩) ಹಾಲು ಕುಡಿಯುವ ಬಾಟ್ಲಿಯ ಸ್ವಚ್ಛತೆ ಮುಂತಾದ್ದು.

ಕೃಷಿ ಶಾಸ್ತ್ರ

iii **ಒಕ್ಕಲತನದ ಶಾಲೆಗಳಿಂದ ಬಂದ ಉಮೇದವಾರರಿಗಾಗಿ.**

(ಅ) ಕೆರೆ ಕಾಲುವೆಗಳಿಂದ ಕೃಷಿ, ಅದರ ತತ್ವಗಳು ಹಾಗು ಆಚರಣೆ, ಬೀಜಗಳ ಆಯ್ಕೆ, ಗೊಬ್ಬರಗಳು, ಬೆಳೆಗಳು, ಭೂಮಿಯ ಸಾಮಾನ್ಯ ಸುಧಾರಣೆ. ಒಣ ಮತ್ತು ಮಿಶ್ರ ಬೆಳೆಗಳು. ಸರತಿಯಿಂದ ಬೆಳೆಗಳನ್ನು ತೆಗೆದು ಕೊಳ್ಳುವದು. ಹೊಲಗಳಲ್ಲಿ ಸುಧಾರಣವಾಗಿ ಬೆಳೆಯುವ ಕಳೆ, ಅವುಗಳನ್ನು ಹತೋಟಿಯಲ್ಲಿ ತರುವದು. ನೀರಾವರಿ ಹಾಗು ನೀರಿನ ಇಂಗುವಿಕೆ (ಸೋರುವಿಕೆ). ಹೊಲಗಳಲ್ಲಿ ಸಾಮಾನ್ಯವಾಗಿ ಇರುವ ಕ್ರಿಮಿಕೀಟಗಳ ಉಪದ್ರವ ಹಾಗೂ ವನಸ್ಪತಿ ರೋಗಗಳು—ಅವುಗಳ ಪರಿಹಾರೋಪಾಯಗಳು.

(ಬ) ವನಸ್ಪತಿಗಳ ಜೀವನಕಥೆ, ರಜೋದರ್ಶನ, ಗರ್ಭಧಾರಣೆ, ಉತ್ಪತ್ತಿ, ಬೀಜಪ್ರಸಾರ, ಅಪುಷ್ಟ ವನಸ್ಪತಿಗಳು, ಸೃಷ್ಟಿಯಲ್ಲಿ ಅವುಗಳ ಉಪಯೋಗ.

ವನಸ್ಪತಿಗಳ ವರ್ಗೀಕರಣದ ತತ್ವಗಳು–ಕೆಳಗಿನ ಬೆಳೆಗಳಿಗೆ ಬೇಕಾಗುವ ಸಂಗತಿಗಳ ಅಭ್ಯಾಸ–ಭತ್ತ, ಗೋದಿ, ಕಬ್ಬು, ತಂಬಾಕ, ಬಟಾಟೆ, ಹತ್ತಿ, ಜೋಳ, ಸೆಜ್ಜೆ, ಮೇಪು ಮತ್ತು ಹಣ್ಣುಹಂಪಲ.

iv **(ನೂಲುವ ನೇಯುವ ಶಾಲೆಗಳಿಂದ ಬಂದ ವಿದ್ಯಾರ್ಥಿಗಳಿಗಾಗಿ)**

ನೂಲುವ ನೇಯುವವರಲ್ಲಿಯ ಯಾಂತ್ರಿಕ ತತ್ವಗಳನ್ನು ಹಾಗು ಆರೋಗ್ಯವಿಜ್ಞೆಯನ್ನು ಒಳಗೊಂಡ **ಸಾಮಾನ್ಯ**

ವಿಜ್ಞಾನ

೩೦ (ಅ) (ಸಾದಾ) ಹುಡುಗರಿಗೆ (i)ರಲ್ಲಿ ಹೇಳಿದಂತೆ.

೩೦ (ಬ) ,, ,, ,, ,,

೪೦ (ಕ) (ಅ) ಹವೆಯ ಘಟನೆ ಹಾಗು ಗುಣಧರ್ಮಗಳು. ಹವೆಯ ಒತ್ತಡ, ನೀರಿನ ಘಟಕಗಳು ಹಾಗು ಗುಣಧರ್ಮಗಳು. ಬಾಷ್ಪೀಭವನ ಮತ್ತು ಘನೀಭವನ. ನೂಲುವ ಹಾಗು ನೇಯುವ ಕ್ರಿಯೆಗಳ ಮೇಲೆ ಹವೆಯಲ್ಲಿಯ ಆರ್ದ್ರತೆಯ ಪರಿಣಾಮ. ಯಂತ್ರಶಾಸ್ತ್ರ,—ನೂಲುವ ನೇಯುವ ಕ್ರಿಯೆಗಳಿಗೆ ಸಂಬಂಧಿಸಿ ಸೊನ್ನೆಗಳ, ಗಡಗಡೆಗಳ ಹಾಗು ತಿರುಪೆಗಳ ಉಪಯೋಗ. ಘರ್ಷಣೆ—ಅದನ್ನು ಹೆಚ್ಚು ಕಡಿಮೆ ಮಾಡುವದು.

(ಬ) ನೂಲಲಿಕ್ಕೆ ನೇಯಲಿಕ್ಕೆ ಉಪಯೋಗಿಸುವ ಕಚ್ಚಾ ಸರಕು. ಹತ್ತಿಯ ಪ್ರಕಾರಗಳು, ಅದರ ಬೆಳೆಗೆ ಅವಶ್ಯವಿರುವ ಭೂಮಿ ಮತ್ತು ಹವೆ. ಪ್ರಾಂತದಲ್ಲಿಯ ಹಾಗು ಪ್ರಪಂಚದಲ್ಲಿಯ ಹತ್ತಿಯ ಹುಟ್ಟುವಳಿ. ಹತ್ತಿಯ ಗಿಡಕ್ಕೆ ಬರುವ ರೋಗಗಳು. ಹತ್ತಿಯ ಜಾತಿಯನ್ನು ಸುಧಾರಿಸಲಿಕ್ಕೆ ಸರಕಾರವು ಕೈಕೊಂಡ ಉಪಾಯಗಳು. ಗಂಜಿ ಹಾಕಲಿಕ್ಕೆ ಉಪಯೋಗಿಸುವ ಸಾಮಾನುಗಳು, ನೂಲಿನ ಮೇಲೆ ಅವುಗಳ ಪರಿಣಾಮ. ಗಂಜಿಯನ್ನು ತಯಾರಿ

ಸುವದು. ನೂಲುವಾಗ ನೇಯುವಾಗ ಉಪಯೋಗಿಸುವ ಬೇರೆ ಬೇರೆ ನಲಕರಣೆಗಳ ಜ್ಞಾನ. ನೂಲುವ ರಾಟೆ ಹಾಗು ಕೈಮಗ್ಗಗಳಲ್ಲಿ ಕ್ರಮೇಣ ಆದ ಉತ್ಕ್ರಾಂತಿ.

v (**ಕಟ್ಟಗೆಯ ಕೆಲಸದ ಉಮೇದವಾರರಿಗೆ**)

೩೦ (ಅ) ಸಾದಾ ಹುಡುಗರಿಗೆ (i)ರಲ್ಲಿಯಂತ

೩೦ (ಬ) ,, (i) ,,

೪೦ (ಕ) ಹವೆಯ ಘಟಕಗಳು, ಗುಣಧರ್ಮಗಳು, ಹವೆಯ ಒತ್ತಡ. ನೀರು—ಘಟಕಗಳು, ಗುಣಧರ್ಮಗಳು, ಬಾಷ್ಪೀಭವನ ಹಾಗು ಘನೀಭವನ. ಯಂತ್ರಶಾಸ್ತ್ರ–ಸೊನ್ನೆಗಳು, ಗಡಗಡೆಗಳು ಮತ್ತು ತಿರುವಣಿಗಳ (ಸ್ಕ್ರೂಗಳ) ಉಪಯೋಗ, ಕಟ್ಟಿಗೆಯ ಕೆಲಸದಲ್ಲಿ ಉಪಯೋಗಿಸುವ ಪಿಂಜಿಸ್ಸು, ಬೆಲ್ಟುಗಳು ಮೊದಲಾದ ಇತರ ಸಾಮಾನ್ಯ ಸಾಧನಗಳು.

(ಬ) ಗಿಡಗಳ ಸಾಮಾನ್ಯ ಅಭ್ಯಾಸ—ಅವುಗಳ ಆಕಾರಮಾನ, ತಿರ್ಯಕ್‌ಛೇದದ ಅಭ್ಯಾಸ, ಮಳೆಯಿಂದ ಭೂಪೃಷ್ಠವು ಸವೆದು ಮಣ್ಣು ಹರಿದುಹೋಗುವದನ್ನು ತಡೆಯುವದು, ಬೇರುಗಳ, ಎಲೆಗಳ ಹಾಗು ಗಿಡಗಳ ಬೊಡ್ಡೆಗಳ ಉಪಯೋಗ.

ಅರಣ್ಯಸಂವರ್ಧನ— ಅದರ ಅಗತ್ಯ ಮತ್ತು ಸಾಮಾನ್ಯ ಪದ್ಧತಿಗಳು. ಇಮಾರತಿನ ಕಟ್ಟಿಗೆ, ಮುಂಬೆ ಆಕುಂಚನ ಪ್ರಸಾರಗಳನ್ನು ಹೊಂದದಂತೆ ಅದಕ್ಕೆ ಉಗಿಯ ಕಾವು ಕೊಡುವದು. ಅದರ ಅಗತ್ಯ, ಉದ್ದೇಶ ಮತ್ತು ರೀತಿಗಳು.

ಇಮಾರತಿಯ ಕಟ್ಟಿಗೆಯ ವೈರಿಗಳು–ಅವುಗಳ ವರ್ಣನೆ ಮತ್ತು ಕಟ್ಟಿಗೆಯು ಕೆಡದಂತೆ ಇಡುವ ರೀತಿಗಳು.

ಪದರುಕಟ್ಟಿಗೆ (ವ್ಲಾಇಉಡ್)—ತಯಾರಿಸುವ ವಿಧಾನಗಳು, ಉಪಯೋಗ. ಹೊಳಪು ತರುವದು (ಪಾಲಿಷ್), ವಾರ್ನಿಶ್ ಹಚ್ಚುವದು, ಮತ್ತು ಕಲೆಗಳು. ಪ್ರತಿಯೊಂದರಲ್ಲಿ ಹಾಕಬೇಕಾಗುವ ಪದಾರ್ಥಗಳು, ಅವುಗಳನ್ನು ತಯಾರಿಸುವದು.

೧೦೦ ಐದನೆಯ ಸದರು—ಕೆಳಗಿನ ವಿಷಯಗಳಲ್ಲೊಂದು :

(ಅ) **ಹೊಲಿಗೆ:—**

(೧) ಕೊಟ್ಟ ಅಳತೆಗಳ ಮೇಲಿಂದ ಕೆಳಗಿನ ಪೋಷಾಕುಗಳಿಗಾಗಿ ಬಟ್ಟೆಯನ್ನು ಕತ್ತರಿಸಿಕೊಂಡು ಹೊಲಿಯಲಿಕ್ಕೆ ಪ್ರತಿಯೊಬ್ಬ ಹುಡಿಗೆಗೆ ಬರಬೇಕು: ಚಡ್ಡಿ, ಕೂಸಿನ ಸಾದಾ ಫ್ರಾಕು, ಬಾಡಿಸ್, ಒಳಗೆ ನಟ್ಟ ತೋಳುಗಳುಳ್ಳ ಬ್ಲೌಜು ಇಲ್ಲವೆ ಮಾಗ್ಯಾರ್ ಸಮೂನೆಯದು, ಜಬ್ಲಾ, ಪೆಟಿಕೋಟ್, ನಿಕರ್ಸ್, ಕುರ್ತಾ, ಪಾಇಜಾಮಾ, ಪರಕರ.

(೨) **ಕಸೂತಿ:—**

ಸುಮಾರು ಆರು ನಮೂನೆಯ ಕಸೂತಿಯ ವ್ಯಕಾರಗಳು.

(೩) ಕಾಜುಗಳನ್ನುಮಾಡುವದು ರಫುಮಾಡುವದು ಇತ್ಯಾದಿ

(೪) ಹೊಲಿಗೆಯ ಶಾಸ್ತ್ರ : (i) ಖಾದಿ, ವಾಯಿಲ್, ಲಾಂಗ್ ಕ್ಲಾಥ್ ಪ್ರಿಂಟ್, ಮುಂತಾದ ನೂಲಿನ ಹಾಗು ಉಣ್ಣೆಯ ನಾನಾಬಗೆಯ ಬಟ್ಟೆಗಳ ಸಾದಾ ಜ್ಞಾನ, ಅವುಗಳ ಕ್ರಯ, ತಾಳಿಕೆ ಹಾಗು ಹೊಲಿಯಲಿರುವ ಬೇರೆ ಬೇರೆ ಬಟ್ಟೆಗಳಿಗೆ ಅನುಕೂಲತೆ ಮೇಲೆ (i) ರಲ್ಲಿ ಕಾಣಿಸಿದ ಬಟ್ಟೆಗಳಿಗೆ ಬೇಕಾಗುವ ಅಗಲಳತೆ ಹಾಗು ಅರಿವೆಯ ಪ್ರಯಾಣ (ii) ಎಳೆಹಿಡಿಯುವದು. ದುಂಡು, ಲೋಡೀ ಕಟ್ಟುವದು ಮುಂತಾದ ಬೇರೆ

ಬೇರೆ ಪ್ರಕಾರಗಳ ಹಾಗು ಅವುಗಳನ್ನು ಎಲ್ಲಿ ಉಪಯೋಗಿಸಬೇಕೆಂಬುದರ ಜ್ಞಾನ.

(ಬ) **ಚಿತ್ರಕಲೆ:—**

(ಡ್ರಾಇಂಗ್)—(೪೦ ಗುಣಗಳ ಎರಡು ಭಾಗಗಳು ಹಾಗು ಕೊನೆಯದೊಂದು ೨೦ ಗುಣಗಳ ಭಾಗ–ಹೀಗೆ ಮೂರುಭಾಗಗಳುಳ್ಳ ಒಂದು ಕಾಗದ)

(೧) ವಸ್ತುಚಿತ್ರ ಲೇಖನ (ಆಬ್‌ಜೆಕ್ಟ್) ಒಂದರ ಮೇಲೊಂದು ಅಥವಾ ಒಂದರ ಮಗ್ಗಲಿಗೊಂದು ಇಟ್ಟಂಥ ನಾಲ್ಕಕ್ಕೆ ಮೀರದಷ್ಟು ವಸ್ತುಗಳದೊಂದು ಸಾದಾ ಗುಂಪನ್ನು ಪೆನ್ಸಿಲಿನಿಂದ ತೆಗೆಯುವದು.

(೨) ನಕ್ಷೆ (ಡಿಜಾಇನ್) ಸೃಷ್ಟಿಯೊಳಗಿನ ನಮೂನೆಯ ಸಾಂಕೇತಿಕ ಆಕೃತಿಗಳ ಮೇಲೆ ರಚಿಸಿದ ಸಾದಾ ನಕ್ಷೆ-ಕೊಟ್ಟ ಆಕಾರದಲ್ಲಿ ಇಲ್ಲವೆ ಆಕಾರಗಳಲ್ಲಿ ಅದನ್ನು ತುಂಬುವದು. ಯಾವದಾದರೊಂದು ಉದ್ದೇಶಕ್ಕಾಗಿ ಇಲ್ಲವೆ ಉಪಯೋಗಕ್ಕಾಗಿ ತೆಗೆದ ಈ ನಕ್ಷೆಯನ್ನು ಬಣ್ಣಕೊಟ್ಟು ಪೂರ್ಣವಾಡಿಕೊಡುವದು.

(೩) ಸ್ಮೃತಿಚಿತ್ರಲೇಖನ (ಮೆಮರಿ) ಸಾದಾ ಬಳಕೆಯೊಳ (ಸಜೀವ ಇಲ್ಲವೆ ನಿರ್ಜೀವ) ಗಿನ ವಸ್ತುಗಳನ್ನು ಪೆನ್ಸಿಲಿನಿಂದ ತೆಗೆಯುವದು. ಜಲನೆಯಲ್ಲಿದ್ದಂತೆ ಕಾಣುವ ಆಕೃತಿಗಳನ್ನು ತೆಗೆಯುವದು, ಕಥೆಗಳನ್ನು ಉದಾಹರಿಸುವದು.

(ಕ) ಒಕ್ಕಲತನದ ಪ್ರತ್ಯಕ್ಷ ಕಾರ್ಯ.

(೧) ಗೋದಿ, ಹತ್ತಿ, ಜೋಳ, ತಂಬಾಕು, ಕಬ್ಬು ಮುಂತಾದ ಮುಖ್ಯ ಬೆಳೆಗಳನ್ನು ಬೆಳೆಯಲಿಕ್ಕೆ ಕೈಕೊಳ್ಳಬೇಕಾದ ಹೊಲದ ಕೆಲಸಗಳನ್ನು ನಿರ್ವಹಿಸಲಿಕ್ಕೆ ಬರಬೇಕು.

(೨) ತೋಟದಲ್ಲಿ ಕಾಯಿಪಲ್ಯ ಬೆಳೆಯಿಲಿಕ್ಕೆ ಬೇಕಾಗುವ ವಿಧಾನಗಳನ್ನು ನಡೆಯಿಸಲಿಕ್ಕೆ ಬರಬೇಕು.

(ವಿಶೇಷ ವಿವರಗಳಿದ್ದ ಅಭ್ಯಾಸಪತ್ರಿಕೆಯನ್ನು ನೋಡು.)

(೩) ಕಲಮು ಮಾಡಿಯಾಗಲಿ ಒಂದರ ಮೇಲೊಂದು ಹಚ್ಚಿಯಾಗಲಿ ವನಸ್ಪತಿಗಳನ್ನು ಬೆಳಿಸಲಿಕ್ಕೆ ಬರಬೇಕು.

(ಡ) ಬಡಗಿತನದ (ಕಟ್ಟಿಗೆಯ) ಕೆಲಸ.

(೧) ಸ್ಥಳೀಯ ಮತ್ತು ಇತರ ಇಮಾರತಿ ಕಟ್ಟಿಗೆಯ ಜಾತಿಗಳ ಜ್ಞಾನ—ಗಿಡಮರಗಳ ಆಯುರ್ಮಾನ–ಅವುಗಳನ್ನು ಕಡಿಯುವ ಕಾಲ- ಕಟ್ಟಿಗೆಯಲ್ಲಿನ ದೋಷಗಳು–ಕಟ್ಟಿಗೆಯನ್ನು ಕಡಿದ ಮೇಲೆ ಕೆಲಕಾಲ ಹಾಗೆಯೆ ಬಿಸಿಲು–ಗಾಳಿಗಳಿಗೆ ಬಿಟ್ಟು ಹಳಿಯದೂ ಗಟ್ಟಿಯೂ ಆಗುವಂತೆ ಕಾಯ್ದಿಡುವ ವಿಧಾನಗಳು.

(೨) ಪದರುಕಟ್ಟಿಗೆ (ವ್ಹಾಇವುಡ್)—ಮಾಡುವ ವಿಧಾನ.

(೩) ಹೊಳಪುಹುಟ್ಟಿಸುವದು (ಪಾಲಿಷ್)–ಉಜ್ಜಿ ಹೊಳಪು ಬರುವಂತೆ ಮಾಡುವ ಸಾಧನಗಳು ಮತ್ತು ಅವುಗಳ ತಯಾರಿಕೆ.

(೪) ಅರಗು ಮುಂತಾದ ಸಾಧನಗಳಿಂದ ಬಣ್ಣಕೊಡುವದು–ಬಣ್ಣಕ್ಕೆ ಬೇಕಾಗುವ ಬೇರೆ ಬೇರೆ ಪದಾರ್ಥಗಳು–ಬಣ್ಣವನ್ನು ತಯಾರಿಸುವದು ಮತ್ತು ಬಣ್ಣ ಕೊಡುವದು.

(೫) ಅಭ್ಯಾಸಪತ್ರಿಕೆಯಲ್ಲಿ ಕಾಣಿಸಲಾದ ಬೇರೆ ಬೇರೆ ಪ್ರಕಾರದ ಕೀಲುಗಳು, ಸಂದುಗಳು ಮತ್ತು ಎಲ್ಲಿ ಅವುಗಳನ್ನು ಉಪಯೋಗಿಸಬೇಕೆನ್ನುವದರ ಜ್ಞಾನ. ಕಟ್ಟಿಗೆಯಿಂದ ಸುಲಭವಾಗಿಮಾಡಲು ಬರುವ ಸಾಮಾನುಗಳನ್ನು ಮಾಡುವದು, ಕುಸುರಿನಿಂದ (ಫ್ರೆಟ್ ವರ್ಕ್) ಕಟ್ಟಿಗೆಯಲ್ಲಿ ಆಕೃತಿಗಳನ್ನು ಮಾಡುವದು,

ಈ ಸಾಮಾನುಗಳು ಚಂದಕಾಣುವಂತೆ ಮಾಡುವ ವಿಧಾನಗಳು (ವಿವರಗಳಿದ್ದ ಅಭ್ಯಾಸಪತ್ರಿಕೆಯನ್ನು ನೋಡು.)

ಮಾಡಿದ ಸಾಮಾನುಗಳ ಪೂರ್ವಯೋಜನೆಯನ್ನು (ಡಿಜಾಇನ್) ತಯಾರಿಸುವದು ಹಾಗು ಅವುಗಳನ್ನು ಪ್ರಮಾಣಹಿಡಿದು ಚಿತ್ರಿಸುವದು. ನೆಲದಿಂದ ಸ್ವಲ್ಪ ಬಿಟ್ಟು ಕಟ್ಟಿಗೆಯನ್ನು ಗಾತಕ್ಕೆ ಹಿಡಿಯುವದು. ಕಾಣುವ ಮತ್ತು ಹೆಚ್ಚು ಎದ್ದು ಕಾಣುವ ಕಟ್ಟಿಗೆಯ ಕೆತ್ತನೆಯ ಕೆಲಸ.

(ಇ) ನೂಲುವದು ಹಾಗು ನೇಯುವದು.

(೧) ಅರಳಿ ಅಥವಾ ಉಣ್ಣೆಯಿಂದ ತಕಲಿಯ ಮೇಲೆ ೧೨ ನಂಬರಿನ ಮತ್ತು ರಾಟೆಯ ಮೇಲೆ ೨೦ ನಂಬರಿನ ನೂಲು ತೆಗೆಯುವದು.

ತಕಲಿಯ ಮೇಲೆ (ತಾಸಿಗೆ ?) ೮೦ ಸುತ್ತಿಗಿಂತ ಕಡಿಮೆಯಾಗದಷ್ಟು, ವೇಗವಿರಬೇಕು.

(೨) ಸಾದಾ ಮತ್ತು ಪಟ್ಟಿಪಟ್ಟಿಯ ಬಟ್ಟಿ, ಉರುಟು (ಹಕ ಬಕ್) ಟುವಾಲುಗಳು ಟ್ವಿಲ್, ಡ್ರಿಲ್ ಮುಂತಾದ ಅರಿವೆಯನ್ನು ದುಬಟ್ಟಾ ನೂಲಿನಿಂದ ಹಾಗು ಅವಶ್ಯ ವಿದ್ದಲ್ಲಿ ನಾಲ್ಕುಕಾಲು ಪಾವಡಿಗಳ ಮಗ್ಗದ ವ್ಯವಸ್ಥೆ ಯಿಂದ ನೇಯುವದು.

(೩) ನೆಯ್ದ ಬೇರೆ ಬೇರೆ ನಮೂನೆಯ ಬಟ್ಟೆಗೆ ಸರಿಯಾಗು ವಂತಹ ಉಂಕೆಯನ್ನು ತಯಾರಿಸುವದು. ನೆಯ್ಗೆಯಲ್ಲಿ ಬರುವ ಜೇಬಿಜೇಬಿ ಕ್ರಿಯೆಗಳ ಜ್ಞಾನ : ಹಾಸು ಹೊಯ್ಯುವದು, ಎಳೆಗಳನ್ನು ಒಂದಕ್ಕೊಂದು ಕೂಡಿಸು

ವದು (ಕೆಚ್ಚುವದು) ಟೆಂಡಿಂಗ್, ಚುಂಗಿಗಡ್ಡಿಗೆ ಸುತ್ತುವದು. ಖಂಡಿಕೆ ಸುತ್ತುವದು, ಉಂಕೆಮಾಡುವದು ಇತ್ಯಾದಿ.

(ವಿವರವಾದ ಅಭ್ಯಾಸಪತ್ರಿಕೆಯನ್ನು ನೋಡು)

(೪) ರಾಟೆಯ ಹಾಗು ಮಗ್ಗದ ಬೇರೆ ಬೇರೆ ಭಾಗಗಳ ಜ್ಞಾನ; ಇವುಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿಕೊಳ್ಳಲಿಕ್ಕೂ ಅವಶ್ಯವಿದ್ದಾಗ ಸಣ್ಣ ಪುಟ್ಟ ದುರಸ್ತಿಯನ್ನು ಮಾಡಿ ಕೊಳ್ಳಲಿಕ್ಕೂ ಬರುತ್ತಿರಬೇಕು.

೧೦೦ (ಆರನೆಯ ಸದರು) ಐಚ್ಛಿಕ:—

ಉಮೇದವಾರರು ಕೆಳಗೆ ಕೊಟ್ಟವುಗಳಲ್ಲಿ ಒಂದು ಅಥವಾ ಹೆಚ್ಚು ವಿಷಯಗಳನ್ನು ತೆಗೆದುಕೊಳ್ಳ-ಬಹುದು :—

(ಅ) ಹಿಂದೀ :—

(ಮರಾಠಿ, ಗುಜರಾತಿ ಅಥವಾ ಕನ್ನಡ ಮಾಧ್ಯಮದಿಂದ ಪರೀಕ್ಷೆಗೆ ಕೊಡುವ ಉಮೇದವಾರರಿಗೆ) ಪ್ರಾಥಮಿಕ ಸಾಲೆಗಳ ೫—೭ ಇಯತ್ತೆಗಳ ಅಭ್ಯಾಸಪತ್ರಿಕೆಯಲ್ಲಿ ಕೊಟ್ಟಂತೆ

(ಬ) ಸಂಗೀತ:—

ಕೆಳಗೆ ಕೊಟ್ಟ ವಿಷಯಗಳು.

ವಿದ್ಯಾರ್ಥಿಗೆ ಕೊಟ್ಟ ಸ್ವರಗಳಲ್ಲಿಯ ಭೇದವು ತಿಳಿಯಬೇಕು; ಅವುಗಳನ್ನು ಅಂದುತೋರಿಸಲಿಕ್ಕೆ ಬರಬೇಕು; ೫ ಸ್ವರಗಳ ಅಭ್ಯಾಸ ಗಳನ್ನು (ಸರಳೆ ವರಸೆಗಳನ್ನು) ಹಾಡಲಿಕ್ಕೆ ಬರಬೇಕು:—

ಸ್ವರದ ಹೆಸರು	ಆಂದೋಲನ ಸಂಖ್ಯೆ	ಸ್ವರದ ಹೆಸರು	ಆಂದೋಲನ ಸಂಖ್ಯೆ
ಷಡ್ಜ	೨೪೦	ಪಂಚಮ	೩೬೦
ಕೋ. ಋಷಭ	೨೫೬	ಕೋ. ಧೈವತ	೩೨೪
ಋಷಭ	೨೭೦	ಧೈವತ	೪೦೫
ಕೋ. ಗಾಂಧಾರ	೨೮೪	ಕೋ. ನಿಷಾದ	೪೩೨
ಗಾಂಧಾರ	೩೦೦	ನಿಷಾದ	೪೫೦
ಕೋ. ಮಧ್ಯಮ	೩೨೦	ಷಡ್ಜ	೪೮೦
ತೀವ್ರ ಮಧ್ಯಮ	೩೩೭½		

ಯಮನ ಮತ್ತು ಭೈರವಿಯೊಳಗಿನ ಹಾಡು ಗಳನ್ನು ಹಾಡ ಲಿಕ್ಕೂ ಅವುಗಳ ಸಹಾಯದಿಂದ ತೀವ್ರ ಕೋಮಲ ಸ್ವರಗಳನ್ನು ವಿಂಗಡಿಸಲಿಕ್ಕೂ ವಿದ್ಯಾರ್ಥಿಗೆ ಬರಬೇಕು.

II. **ತಾಳಗಳು—**

(i) ತಾಳದ ಸ್ಥಾನಗಳಿಗಾಗಿ ಕೈಯಿಂದ ಪೆಟ್ಟು ಹಾಕುತ್ತಲೂ ಹುಸಿಯ ಸ್ಥಾನಗಳಿಗೆ ಪೆಟ್ಟು ಹಾಕುವದನ್ನು ಬಿಟ್ಟುಬಿಡುತ್ತಲೂ ತಾಳದ ಮಾತ್ರೆಗಳನ್ನು ಬಾಯಿಂದ ಎಣಿಸುತ್ತಲೂ ಕೆಳಗಿನ ತಾಳಗ ಳನ್ನು ಹಾಕಿ ಅವುಗಳೊಳಗಿನ ಭೇದವನ್ನು ತೋರಿಸಲಿಕ್ಕೆ ಬರಬೇಕು.

ತ್ರಿತಾಳ, ದಾದರಾ, ಝಂಪೆತಾಳ, ಚವತಾಲ, ರೂಪಕ, ಕೇರವಾ, ವಿಲಂಬಿತ ಕೇರವಾ.

(ii) ವಿಲಂಬಿತ, ಮಧ್ಯ ಇಲ್ಲವೆ ದ್ರುತ-ಈ ಮೂರರಲ್ಲಿ ಯಾವದೇ ಲಯದಲ್ಲಿ ಒಂದು ಚೀಜನ್ನು ಹಾಡುವಾಗ ಮೇಲಿನ ತಾಳಗಳಲ್ಲಿ ಯಾವದಾದರೂ ಎರಡನ್ನು ಉದಾಹರಿಸಬೇಕು.

III ರಾಗಗಳು (ಹಾಡುಗಳನ್ನು ಹಾಡಲಿಕ್ಕೆ ಎರಕಹೊಯ್ದ ನಮೂನೆಗಳು)

(i) ಎರಡು 'ಜಿಲ್ಲಾ ಹಿಡಿದು ಯಾವಾದರೂ ಏಳು ರಾಗ ಗಳ ಲಕ್ಷಣಗಳನ್ನು' ರಾಗಗಳನ್ನು ಅವುಗಳ ಆರೋಹಿ ಅವರೋಹಿ ಸ್ವರಗಳಿಂದಲೂ ಅವುಗಳ ವಾದಿ, ಸಂವಾದಿ ಅನುವಾದಿ ಸರಗ್ಯ ಳಿಂದಲೂ ಹೇಳಬೇಕು.

(ii) ತಾಳಕ್ಕೆ ಸರಿಯಾಗಿ ಯಾವಾದರೂ ಮೂರು ರಾಗಗ ಳೊಳಗಿನ ಸ್ವರಾವರ್ತಗಳನ್ನು ಅಂದು ತೋರಿಸಬೇಕು.

(iii) ವರ್ಗದಲ್ಲಿ ಕಲಿಸಿದ ಕವಿತೆಗಳನ್ನು ಹಾಗು ರಾಗ ತಾಳಗಳಿಗನುಸರಿಸಿ ರಾಷ್ಟ್ರಗೀತೆಯನ್ನು ಹಾಡಲಿಕ್ಕೆ ಬರಬೇಕು.

(iv) ತಾಳದ ಮೇಲೆ ಲಕ್ಷವಿಟ್ಟು ಯಾವದಾದರೂ ಒಂದು ರಾಗವನ್ನು ಹಾಡುವದು.

(v) ಸತಾರ, ದಿಲರುಬಾ, ವ್ಹಾಯಲಿನ್ ಅಥವಾ ಇಂಡಿ ಯನ್ ಹಾರ್ಮೋನಿಯಮ್ಮಿದ ಮೇಲೆ (ಸ್ವರಗಳು 'ಟಿಪರ್ಡ್' ಸ್ಟೇಲಿನವಾಗದಂತಹ) ಕೆಳಗೆ ಹೇಳಿದವುಗಳನ್ನು ಬಾರಿಸಲಿಕ್ಕೆ ಬರಬೇಕು.:—

(ಅ) ಸ್ವರಪಾಠ
(ಬ) ಪದ
(ಕ) ಪ್ರಾರ್ಥನೆಯಪದ

(ಕ) ಕಾಗದ ಹಾಗು ಕಾರ್ಡಬೋರ್ಡ್ ಮಾಡೆಲಿಂಗ್

೧. ಬೇರೆ ಬೇರೆ ಜಾತಿಯ ಕಾಗದಗಳ ಮತ್ತು ಕಾರ್ಡು ಬೋರ್ಡುಗಳ ಹಾಗು ಬೇರೆ ಬೇರೆ ತರದ ಕೆಲಸಕ್ಕೆ ಅವುಗಳ ಉಪಯೋಗದ ಜ್ಞಾನ. ಕಾಗದ, ಕಾರ್ಡು ಬೋರ್ಡಿನಲ್ಲಿ ಮಾದರಿಗಳನ್ನು ಮಾಡಲು ಮತ್ತು ಅವಶ್ಯವಿದ್ದಾಗ ಅವುಗಳನ್ನು ಶೃಂಗರಿಸಲು ಬರಬೇಕು. ವಿವರವಾದ ಅಭ್ಯಾಸಪತ್ರಿಕೆಯನ್ನು ನೋಡಿರಿ. ಇದರಂತೆ ಕೆಲಸಕ್ಕೆ ಉಪಯೋಗ ಬೀಳುವ ಅಂಟು, ಸರಿಸು ಮುಂತಾದ್ದನ್ನು ತಯಾರಿಸಲು ಬರಬೇಕು.

೨; (ಅ) 'ಪಾಪಿಯರ್ ಮಾಶೆ' ಎಂಬ ಪ್ರಕಾರದ ಕಾಗದ ವನ್ನು ಮತ್ತು ಕಾಗದದ ನುಣ್ಣಗಿನ ಮುದ್ದೆಯನ್ನು (ಪೇಪರ ಪಲ್ಪ್) ಮಾಡಲಿಕ್ಕೆ ಕಲಿಯುವದು.

(ಬ) 'ಪಾಪಿಯರ್ ಮಾಶೆ'ದಲ್ಲಿ ಹಾಗು ಪೇಪರ್ ಪಲ್ಪಿನಲ್ಲಿ ಮಾದರಿಗಳನ್ನು ಮಾಡಲಿಕ್ಕೆ ಬರಬೇಕು. ಮಾಡಿದ ಸಾಮಾನುಗಳು ಅಂದಚಂದವಾಗುವಂತೆ ಮಾಡುವದು. ಮಾಡುವ ಸಾಮಾನುಗಳ ನಕ್ಷೆಯನ್ನು ತೆಗೆಯಲಿಕ್ಕೆ ಗೆರೆಗಳಿಂದ ಕೇವಲ ಅವುಗಳ ಆಕೃತಿಯನ್ನು ತೋರಿಸ ಲಿಕ್ಕೆ ಬರಬೇಕು.

೩. ನಾದಾ ಪುಸ್ತಕಗಳ ಬಾಇಂಡಿಂಗ.

೪. ಹಿಂದೆ ೧, ೨, ೩ರಲ್ಲಿ ಹೇಳಿದಂತೆ ಮಾಡಿದ ಸಾಮಾನು ಗಳನ್ನು ಮಾಡಲಿಕ್ಕೆ ಹಿಡಿಯುವ ಖರ್ಚು ಹಾಗು ಅವು ಗಳ ಪೇಟೆಯ ಧಾರಣೆಯನ್ನು ಅಂದಾಜು ಮಾಡಲಿಕ್ಕೆ ಬರಬೇಕು.

ಡ. ಬೆತ್ತದ ಕೆಲಸ

೧. ಸುತ್ತು ಹಾಕುವ ಕೆಲಸದಲ್ಲ (ಕಾಇಲ್‌ವರ್ಕ್) ಬೇಕಾ ಗುವ ನಾರು ಮತ್ತು ಬಿದುರುಗಳ ಬೇರೆ ಬೇರೆ ಪ್ರಕಾರ ಗಳ ಜ್ಞಾನ. ಉಪಯೋಗಿಸಬಹುದಾದ ಸ್ಥಳೀಯ ಒಣ್ಣದ ಪದಾರ್ಥಗಳ ಜ್ಞಾನ. ಬೆತ್ತದ ಜಾತಿಗಳು, ಅವುಗಳ ಗುಣಧರ್ಮಗಳು ಹಾಗು ಉಪಯೋಗ. ಗಡದಿಂದ ತೆಗೆದು ಬೆತ್ತವನ್ನು ತಯಾರಿಸುವ ವಿಧಾನ. ಭಾರತದಲ್ಲಿ ಬೆತ್ತವು ಬೆಳೆಯುವ ಕ್ಷೇತ್ರಗಳ ಜ್ಞಾನ. ಸುರುಳಿಯ ನೆಯ್ಗೆ ಮತ್ತು ಬೆತ್ತದ ನೆಯ್ಗೆಯಲ್ಲ ಸಾದಾ ವಸ್ತುಗಳನ್ನು ತಯಾರಿಸುವದು. ಅವಶ್ಯ ವಿದ್ದಾಗ ಅವು ಅಂದಚಂದ ಕಾಣುವಂತೆ ಮಾಡುವದು (ವಿವರವಾದ ಅಭ್ಯಾಸ ಪತ್ರಿಕೆಯನ್ನು ನೋಡು). ಬುಟ್ಟಿ ಗಳನ್ನು ಮಾಡುವದು.— ರಾಂಡಿಂಗ್, ವೇರಿಂಗ್, ಪೇಲಿಂಗ ಮತ್ತು ಸ್ಲೂಇಂಗ ಹೀಗೆ ಬೇರೆ ಬೇರೆ ಜಾತಿಯ ನೆಯ್ಗೆಗಳನ್ನು ಉಪಯೋಗಿಸಲು ಬರಬೇಕು. ಮಾಡಿದ ಸಾಮಾನುಗಳನ್ನು ಮಾಡಲಿಕ್ಕೆ ಹಿಡಿಯುವ ಖರ್ಚು ಹಾಗು ಅವುಗಳಿಗೆ ಪೇಟೆಯಲ್ಲಿ ಬರಬಹುದಾದ ಬೆಲೆಗಳ ಅಂದಾಜು ಮಾಡಲು ಬರಬೇಕು.

ಇ. ಹೊಲಿಗೆಯ ಕೆಲಸ

ಕಾಲರ್ ಉಳ್ಳ ಹಾಗು ಕಾಲರ್ ಇಲ್ಲದ ಹುಡುಗನ ಷರ್ಟು, ಸ್ಪೋರ್ಟ್ (ಬಯಲಲ್ಲಿ ಆಡುವ ಸಂಘಟಿತ ಆಟಗಳು) ಷರ್ಟು, ಗಿಡ್ಡ ಹಾಗು ಉದ್ದ ಜೊಣ್ಣ, ಇವುಗಳಲ್ಲಿ ಸಂಣ ಪ್ರಮಾಣದ (ಬ್ಲಾಕ್) ಮಾದರಿಗಳನ್ನು ಮಾಡಲಿಕ್ಕೆ ಬರಬೇಕು. ಕೊಟ್ಟ ಅಳತೆಗಳಿಗೆ ಇವು ಗಳಲ್ಲಿ ಹೆಚ್ಚುಕಡಿಮೆ ಮಾಡಿ ಉಪಯೋಗಿಸಿಕೊಳ್ಳಲಿಕ್ಕೆ ಬರಬೇಕು.

ಅಳತೆಗಳನ್ನು ತೆಗೆದುಕೊಳ್ಳಲಿಕ್ಕೆ ಬರಬೇಕು. ಹೊಲಿಯುವ ಯಂತ್ರದಿಂದ ಹೊಲಿದು ಹಾಗು ಅವಶ್ಯವಿದ್ದಾಗ ಕೈಗಳಿಂದ ಎಳೆ ಹಾಕಿ, ಮೇಲೆ ನಿರ್ದಿಷ್ಟಪಡಿಸಿದ ಉಡಿಗೆತೊಡಿಗೆಗಳನ್ನು ಮಾಡಲಿಕ್ಕೆ ಬರಬೇಕು, ಮೇಲಿನ ಬಟ್ಟೆ ಬರೆಗಳಿಗೆ ಒಪ್ಪುವ ಬೇರೆ ಬೇರೆ ಪ್ರಕಾರದ ಅಂಚೆಯ ನಮೂನೆಯ ಜ್ಞಾನ—ಎಷ್ಟು ಅರಿವೆ ಬೇಕಾಗುವದು ಎಂಬುದರ ಜ್ಞಾನ. ಪನ್ನಾವನ್ನು ನೋಡಿಕೊಂಡು ಬಟ್ಟೆಯನ್ನು ಬೇಕಾಗುವಷ್ಟೇ ತಕ್ಕೊಂಡು ಮಿತವ್ಯಯದಿಂದ ಕೆಲಸ ಮಾಡುವದು

ಹೊಲಿಯುವ ಯಂತ್ರದ ಬೇರೆ ಬೇರೆ ಭಾಗಗಳನ್ನು ಹೊಂದಿಸಿ ಕೊಳ್ಳುವದಕ್ಕೂ, ಯಂತ್ರವನ್ನು ಕಸರು ಮುಂತಾದ್ದರಿಂದ ಸ್ವಚ್ಛ ಮಾಡಿ ಅದಕ್ಕೆ ಎಣ್ಣೆ ಹಾಕುವದಕ್ಕೆ ಬರಬೇಕು.

ಫ. ಚರ್ಮದ ಕೆಲಸ

ಬೇರೆ ಬೇರೆ ಪ್ರಕಾರದ ಚರ್ಮಗಳ ಮಾಹಿತಿ ಹಾಗು ಅದನ್ನು ಯಾವ ಯಾವ ಕೆಲಸಕ್ಕೆ ಉಪಯೋಗಿಸಬಹುದೆಂಬುದರ ಜ್ಞಾನ. ಕೆಲಸಕ್ಕೆ ಬೇಕಾಗುವ ಬೇರೆ ಬೇರೆ ಆಯುಧಗಳ ಜ್ಞಾನ ಹಾಗು ಅವು

ಸ್ವರದ ಹೆಸರು	ಆಂದೋಲನ ಸಂಖ್ಯೆ	ಸ್ವರದ ಹೆಸರು	ಆಂದೋಲನ ಸಂಖ್ಯೆ
ಷಡ್ಜ	೨೪೦	ಪಂಚಮ	೩೬೦
ಕೋ. ಋಷಭ	೨೫೬	ಕೋ. ಧೈವತ	೩೮೪
ಋಷಭ	೨೭೦	ಧೈವತ	೪೦೫
ಕೋ. ಗಾಂಧಾರ	೨೮೪	ಕೋ. ನಿಷಾದ	೪೨೬
ಗಾಂಧಾರ	೩೦೦	ನಿಷಾದ	೪೫೦
ಕೋ. ಮಧ್ಯಮ	೩೨೦	ಷಡ್ಜ	೪೮೦
ತೀವ್ರ ಮಧ್ಯಮ	೩೪೨		

ಯಮನ ಮತ್ತು ಭೈರವಿಯೊಳಗಿನ ಹಾಡು ಗಳನ್ನು ಹಾಡ ಲಿಕ್ಕೂ ಅವುಗಳ ಸಹಾಯದಿಂದ ತೀವ್ರ ಕೋಮಲ ಸ್ವರಗಳನ್ನು ಏಂಗಡಿಸಲಿಕ್ಕೂ ವಿದ್ಯಾರ್ಥಿಗೆ ಬರಬೇಕು.

II. **ತಾಳಗಳು—**

(i) ತಾಳದ ಸ್ಥಾನಗಳಿಗಾಗಿ ಕೈಯಿಂದ ಪೆಟ್ಟುಹಾಕುತ್ತಲೂ ಶೂನ್ಯ ಸ್ಥಾನಗಳಿಗೆ ಪೆಟ್ಟುಹಾಕುವದನ್ನು ಬಿಟ್ಟುಬಿಡುತ್ತಲೂ ತಾಳದ ಮಾತ್ರೆಗಳನ್ನು ಬಾಯಿಂದ ಎಣಿಸುತ್ತಲೂ ಕೆಳಗಿನ ತಾಳಗ ಳನ್ನು ಹಾಕಿ ಅವುಗಳೊಳಗಿನ ಭೇದವನ್ನು ತೋರಿಸಲಿಕ್ಕೆ ಬರಬೇಕು.

ತ್ರಿತಾಳ, ದಾದರಾ, ಝಂಪೆತಾಳ, ಚವತಾಲ, ರೂಪಕ, ಕೇರವಾ, ವಿಲಂಬಿತ ಕೇರವಾ.

(ii) ವಿಲಂಬಿತ, ಮಧ್ಯ ಇಲ್ಲವೆ ದ್ರುತ-ಈ ಮೂರರಲ್ಲಿ ಯಾವದೇ ಲಯದಲ್ಲಿ ಒಂದು ಚೀಜನ್ನು ಹಾಡುವಾಗ ಮೇಲಿನ ತಾಳಗಳಲ್ಲಿ ಯಾವದಾದರೂ ಎರಡನ್ನು ಉದಾಹರಿಸಬೇಕು.

III ರಾಗಗಳು (ಹಾಡುಗಳನ್ನು ಹಾಡಲಿಕ್ಕೆ ಎರಕಹೊಯ್ದ ನಮೂನೆಗಳು)

(i) ಎರಡು 'ಜಿಲ್ಲಾ ಹಿಡಿದು ಯಾವಾವರೂ ಏಳು ರಾಗ ಗಳ ಲಕ್ಷಣಗಳನ್ನು' ರಾಗಗಳನ್ನು ಅವುಗಳ ಆರೋಹಿ ಅವರೋಹಿ ಸ್ವರಗಳಿಂದಲೂ ಅವುಗಳ ವಾದಿ, ಸಂವಾದಿ ಅನುವಾದಿ ಸರಗ್ಮ ಳಿಂದಲೂ ಹೇಳಬೇಕು.

(ii) ತಾಳಕ್ಕೆ ಸರಿಯಾಗಿ ಯಾವಾದರೂ ಮೂರು ರಾಗಗ ಳೊಳಗಿನ ಸ್ವರಾವರ್ತಗಳನ್ನು ಅಂದು ತೋರಿಸಬೇಕು.

(iii) ವರ್ಗದಲ್ಲಿ ಕಲಿಸಿದ ಕವಿತೆಗಳನ್ನು ಹಾಗು ರಾಗ ತಾಳಗಳಿಗನುಸರಿಸಿ ರಾಷ್ಟ್ರಗೀತೆಯನ್ನು ಹಾಡಲಿಕ್ಕೆ ಬರಬೇಕು.

(iv) ತಾಳದ ಮೇಲೆ ಲಕ್ಷವಿಟ್ಟು ಯಾವದಾದರೂ ಒಂದು ರಾಗವನ್ನು ಹಾಡುವದು.

(v) ಸತಾರ, ದಿಲರುಬಾ, ವ್ಹಾಯಲಿನ್ ಅಥವಾ ಇಂಡಿ ಯನ್ ಹಾರ್ಮೋನಿಯಮ್ಮಿನ ಮೇಲೆ (ಸ್ವರಗಳು 'ಟಿಂಪರ್ಡ್' ಸ್ಕೇಲಿನವಾಗದಂತಹ) ಕೆಳಗೆ ಹೇಳಿದವುಗಳನ್ನು ಬಾರಿಸಲಿಕ್ಕೆ ಬರಬೇಕು.:—

(ಅ) ಸ್ವರಪಾತ
(ಬ) ಪದ
(ಕ) ವ್ಯಾರ್ಥನೆಯಪದ

(ಕ) ಕಾಗದ ಹಾಗು ಕಾರ್ಡಬೋರ್ಡ್ ಮಾಡೆಲಿಂಗ್

೧. ಬೇರೆ ಬೇರೆ ಜಾತಿಯ ಕಾಗದಗಳ ಮತ್ತು ಕಾರ್ಡು ಬೋರ್ಡುಗಳ ಹಾಗು ಬೇರೆ ಬೇರೆ ತರದ ಕೆಲಸಕ್ಕೆ ಅವುಗಳ ಉಪಯೋಗದ ಜ್ಞಾನ. ಕಾಗದ, ಕಾರ್ಡು ಬೋರ್ಡಿನಲ್ಲಿ ಮಾದರಿಗಳನ್ನು ಮಾಡಲು ಮತ್ತು ಅವಶ್ಯವಿದ್ದಾಗ ಅವುಗಳನ್ನು ಶೃಂಗರಿಸಲು ಬರಬೇಕು. ವಿವರವಾದ ಅಭ್ಯಾಸಪತ್ರಿಕೆಯನ್ನು ನೋಡಿರಿ. ಇದರಂತೆ ಕೆಲಸಕ್ಕೆ ಉಪಯೋಗ ಬೀಳುವ ಅಂಟು, ಸರಿಸು ಮುಂತಾದ್ದನ್ನು ತಯಾರಿಸಲು ಬರಬೇಕು.

೨; (ಅ) 'ಪಾಪಿಯರ್ ಮಾಶೆ' ಎಂಬ ಪ್ರಕಾರದ ಕಾಗದವನ್ನು ಮತ್ತು ಕಾಗದದ ನುಣ್ಣಗಿನ ಮುದ್ದೆಯನ್ನು (ಪೇಪರ ಪಲ್ಪ್) ಮಾಡಲಿಕ್ಕೆ ಕಲಿಯುವದು.

(ಬ) 'ಪಾಪಿಯರ್ ಮಾಶೆ'ದಲ್ಲಿ ಹಾಗು ಪೇಪರ್ ಪಲ್ಪಿನಲ್ಲಿ ಮಾದರಿಗಳನ್ನು ಮಾಡಲಿಕ್ಕೆ ಬರಬೇಕು. ಮಾಡಿದ ಸಾಮಾನುಗಳು ಅಂದಚಂದವಾಗುವಂತೆ ಮಾಡುವದು. ಮಾಡುವ ಸಾಮಾನುಗಳ ನಕ್ಷೆಯನ್ನು ತೆಗೆಯಲಿಕ್ಕೆ ಗೆರೆಗಳಿಂದ ಕೇವಲ ಜವುಗಳ ಆಕೃತಿಯನ್ನು ತೋರಿಸಲಿಕ್ಕೆ ಬರಬೇಕು.

೩. ಸಾದಾ ಪುಸ್ತಕಗಳ ಬಾಇಂಡಿಂಗ.

೪. ಹಿಂದೆ ೧, ೨, ೩ರಲ್ಲಿ ಹೇಳಿದಂತೆ ಮಾಡಿದ ಸಾಮಾನುಗಳನ್ನು ಮಾಡಲಿಕ್ಕೆ ಹಿಡಿಯುವ ಖರ್ಚು ಹಾಗು ಅವುಗಳ ಸೇಟಿಯ ಧಾರಣೆಯನ್ನು ಅಂದಾಜು ಮಾಡಲಿಕ್ಕೆ ಬರಬೇಕು.

ಡ. ಬೆತ್ತದ ಕೆಲಸ

೧. ಸುತ್ತು ಹಾಕುವ ಕೆಲಸದಲ್ಲಿ (ಕೌಇಲ್‌ವರ್ಕ್) ಬೇಕಾಗುವ ನಾರು ಮತ್ತು ಬಿದುರುಗಳ ಬೇರೆ ಬೇರೆ ಪ್ರಕಾರಗಳ ಜ್ಞಾನ. ಉಪಯೋಗಿಸಬಹುದಾದ ಸ್ಥಳೀಯ ಒಣ್ಣದ ಪದಾರ್ಥಗಳ ಜ್ಞಾನ. ಬೆತ್ತದ ಜಾತಿಗಳು. ಅವುಗಳ ಗುಣಧರ್ಮಗಳು ಹಾಗು ಉಪಯೋಗ. ಗಡದಿಂದ ತೆಗೆದು ಬೆತ್ತವನ್ನು ತಯಾರಿಸುವ ವಿಧಾನ. ಭಾರತದಲ್ಲಿ ಬೆತ್ತ ಬೆಳೆಯುವ ಕ್ಷೇತ್ರಗಳ ಜ್ಞಾನ. ಸುರುಳಿಯ ನೆಯ್ಗೆ ಮತ್ತು ಬೆತ್ತದ ನೆಯ್ಗೆಯಲ್ಲಿ ಸಾದಾ ವಸ್ತುಗಳನ್ನು ತಯಾರಿಸುವದು. ಅವಶ್ಯವಿದ್ದಾಗ ಅವು ಅಂದಚಂದ ಕಾಣುವಂತೆ ಮಾಡುವದು (ವಿವರವಾದ ಅಭ್ಯಾಸಪತ್ರಿಕೆಯನ್ನು ನೋಡು) ಬುಟ್ಟಿಗಳನ್ನು ಮಾಡುವದು.— ರಾಂಡಿಂಗ್, ಪೇರಿಂಗ್, ಪೇಲಿಂಗ ಮತ್ತು ಸ್ಲೂಇಂಗ ಹೀಗೆ ಬೇರೆ ಬೇರೆ ಜಾತಿಯ ನೆಯ್ಗೆಗಳನ್ನು ಉಪಯೋಗಿಸಲು ಬರಬೇಕು. ಮಾಡಿದ ಸಾಮಾನುಗಳನ್ನು ಮಾಡಲಿಕ್ಕೆ ಹಿಡಿಯುವ ಖರ್ಚು ಹಾಗು ಅವುಗಳಿಗೆ ಸೇಟಿಯಲ್ಲಿ ಬರಬಹುದಾದ ಬೆಲೆಗಳ ಅಂದಾಜು ಮಾಡಲು ಬರಬೇಕು.

ಇ. ಹೊಲಿಗೆಯ ಕೆಲಸ

ಕಾಲರ್ ಉಳ್ಳ ಹಾಗು ಕಾಲರ್ ಇಲ್ಲದ ಹುಡುಗನ ಷರ್ಟು, ಸ್ಪೋರ್ಟ್ಸ (ಬಯಲಲ್ಲಿ ಆಡುವ ಸಂಘಟಿತ ಆಟಗಳು) ಷರ್ಟು, ಗಿಡ್ಡ ಹಾಗು ಉದ್ದ ಜೊಣ್ಣ, ಇವುಗಳಲ್ಲಿ ಸಂಣ ಪ್ರಮಾಣದ (ಬ್ಲಾಕ್) ಮಾದರಿಗಳನ್ನು ಮಾಡಲಿಕ್ಕೆ ಬರಬೇಕು. ಕೊಟ್ಟ ಅಳತೆಗಳಿಗೆ ಇವುಗಳಲ್ಲಿ ಹೆಚ್ಚುಕಡಿಮೆ ಮಾಡಿ ಉಪಯೋಗಿಸಿಕೊಳ್ಳಲಿಕ್ಕೆ ಬರಬೇಕು.

ಅಳತೆಗಳನ್ನು ತೆಗೆದುಕೊಳ್ಳಲಿಕ್ಕೆ ಬರಬೇಕು. ಹೊಲಿಯುವ ಯಂತ್ರದಿಂದ ಹೊಲಿದು ಹಾಗು ಅವಶ್ಯವಿದ್ದಾಗ ಕೈಗಳಿಂದ ಎಳೆ ಹಾಕಿ, ಮೇಲೆ ನಿರ್ದಿಷ್ಟಪಡಿಸಿದ ಉಡಿಗೆತೊಡಿಗೆಗಳನ್ನು ಮಾಡಲಿಕ್ಕೆ ಬರಬೇಕು, ಮೇಲಿನ ಬಟ್ಟೆ ಬರೆಗಳಿಗೆ ಒಪ್ಪುವ ಬೇರೆ ಬೇರೆ ಪ್ರಕಾರದ ಅಂಚೆಯ ನಮೂನೆಯ ಜ್ಞಾನ—ಎಷ್ಟು ಅರಿವೆ ಬೇಕಾಗುವದು ಎಂಬುದರ ಜ್ಞಾನ. ಪನ್ನಾವನ್ನು ನೋಡಿಕೊಂಡು 'ಬಟ್ಟೆಯನ್ನ ಬೇಕಾಗುವಷ್ಟೇ ತಕ್ಕೊಂಡು ಮಿತವ್ಯಯದಿಂದ ಕೆಲಸ ಮಾಡುವದು

ಹೊಲಿಯುವ ಯಂತ್ರದ ಬೇರೆ ಬೇರೆ ಭಾಗಗಳನ್ನು ಹೊಂದಿಸಿಕೊಳ್ಳುವದಕ್ಕೂ, ಯಂತ್ರವನ್ನು ಕಸರು ಮುಂತಾವ್ದರಿಂದ ಸ್ವಚ್ಛ ಮಾಡಿ ಆದಕ್ಕೆ ಎಣ್ಣೆ ಹಾಕುವದಕ್ಕೆ ಬರಬೇಕು.

ಫ. ಚರ್ಮದ ಕೆಲಸ

ಬೇರೆ ಬೇರೆ ಪ್ರಕಾರದ ಚರ್ಮಗಳ ಮಾಹಿತಿ ಹಾಗು ಅವನ್ನು ಯಾವ ಯಾವ ಕೆಲಸಕ್ಕೆ ಉಪಯೋಗಿಸಬಹುದೆಂಬುದರ ಜ್ಞಾನ. ಕೆಲಸಕ್ಕೆ ಬೇಕಾಗುವ ಬೇರೆ ಬೇರೆ ಆಯುಧಗಳ ಜ್ಞಾನ ಹಾಗು ಅವು

ಗಳನ್ನು ಸುಸ್ಥಿತಿಯಲ್ಲಿ ಹೇಗೆ ಇಟ್ಟುಕೊಳ್ಳಬೇಕು. ಸುಲಭವಾಗಿ ಮಾಡ ಬರುವ ವಸ್ತುಗಳನ್ನು ಮಾಡಲಿಕ್ಕೆ ಕಲಿಯುವದು. ವಿವರವಾದ ಅಭ್ಯಾಸಪತ್ರಿಕೆಯನ್ನು ನೋಡು.

ಬೇರೆ ಬೇರೆ ತರದ ಮೇಲ್ಕೈಗಳು (ಸ್ಪ್ರೇನ್ಸ್) ಹಾಗು ಮೆರುಗು ಕೊಡುವ ಸಾಧನಗಳು—ಅವುಗಳನ್ನು ಉಪಯೋಗಿಸುವ ವಿಧಾನ. ಆಸ್ಲಿಕೆ ಮತ್ತು ಹಿನ್ನೆಲೆಯಿಂದ ಮುಂದೆ ಹಾಯ್ದಂತೆ ಕಾಣುವ ಕೆಲಸ ಇವುಗಳನ್ನು ಅಲಂಕಾರಿಕ ಕೆಲಸಕ್ಕೆ ಉಪಯೋಗಿಸಿಕೊಳ್ಳುವದು. ತಯಾರು ಮಾಡಿದ ಸಾಮಾನುಗಳ ಖರ್ಚು ಹಾಗು ಅವಕ್ಕೆ ಮಾರಿದರೆ ಬರುವ ಬೆಲೆ, ಇಪುಗಳನ್ನು ಅಂದಾಜು ಮಾಡಲಿಕ್ಕೆ ಬರಬೇಕು.

—ಎಸ್. ಆರ್. ತಟ್ಟಿ

ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆ ಅರ್ಜಿಯ ಅವಧಿ

ಪುಣೆ, ೧೧ ಮೇ ೧೯೫೦

ಮುಂಬಯಿ ರಾಜ್ಯದ ವಿದ್ಯಾಖಾತೆಯ ಡೈರೆಕ್ಟರರು ೧೪೯/೨೫೫–D ಪತ್ರದ ಮೂಲಕ ಹೀಗೆ ತಿಳಿಸುತ್ತಾರೆ—

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಗೆ ಪುನಃ ಕುಳಿತುಕೊಳ್ಳುವವರು ಪರೀಕ್ಷೆಯ ತಾರೀಖಿನ ವರೆಗೂ ಅರ್ಜಿಗಳನ್ನು ಕಳಿಸುತ್ತಿರುತ್ತಾರೆ. ಇದರಿಂದ ಎಜ್ಯುಕೇಶನಲ್ ಇನಸ್ಪೆಕ್ಟರರಿಗೂ ಹೆಣ್ಣುಮಕ್ಕಳ ಶಾಲೆಗಳ ಇನ್‌ಸ್ಪೆಕ್ಟ್ರೆಸ್ ಅವರಿಗೂ ಅಲ್ಲದೆ ಉಮೇದುವಾರರಿಗೂ ಬಹಳ ಅನಾನುಕೂಲತೆಯುಂಟಾಗುತ್ತದೆ. ಏಕಂದರೆ ಉಮೇದವಾರರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅಪ್ಪಣೆಯನ್ನು ಕಳಿಸಿಕೊಡಲು ಅತಿ ಕಡಿಮೆ ಸಮಯವು ಉಳಿದಿರುತ್ತದೆ. ಆದ್ದರಿಂದ ಪುನಃ ಪ್ರಾಥಮಿಕ ಶಿಕ್ಷಕರ ಪ್ರಮಾಣಪತ್ರ ಪರೀಕ್ಷೆಗೆ ಕುಳಿತುಕೊಳ್ಳಲು ಅಪ್ಪಣೆ ಪಡೆಯುವದಕ್ಕಾಗಿ ನಿಯಮಾನುಸಾರ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಅಥವಾ ಹೆಣ್ಣುಮಕ್ಕಳ ಶಾಲೆಗಳ ಇನ್‌ಸ್ಪೆಕ್ಟ್ರೆಸ್ ಅವರಿಗೆ **ಪ್ರತಿವರ್ಷ ನವ್ಹೆಂಬರ ೨೦ನೆಯ ತಾರೀಖಿನ ದಿನ ಅಥವಾ ಅದಕ್ಕೂ ಮುಂಚೆ** ಮುಟ್ಟುವಂತೆ ಅರ್ಜಿ ಕಳುಹಬೇಕು. ಕೊನೆಯ ತಾರೀಖಿನ ದಿನ ಸಾರ್ವಜನಿಕ ಬಿಡುವು ಇದ್ದಲ್ಲಿ ನವ್ಹೆಂಬರ ೨೧ನೆಯ ತಾರೀಖು ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ತಾರೀಖು ಎಂದು ನಿರ್ಧರಿಸಲಾಗಿದೆ. ಈ ತಾರೀಖಿನ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾರೆವು.

ಆದರೆ, ಈ ಪರೀಕ್ಷೆಯ ಶುಲ್ಕ (ಫೀ) ಯನ್ನು ಸ್ವೀಕರಿಸುವ ಕೊನೆಯ ತಾರೀಖು ಜನೇವರಿ ೨೦ ಎಂದು ನಿರ್ಧರಿಸಲಾಗಿದೆ. ಇದರಲ್ಲಿ ಯಾವ ಬದಲಾವಣೆಯೂ ಇಲ್ಲ.

ಪ್ರಾಥಮಿಕ ಶಾಲೆಗಳಲ್ಲಿಯ ಮೇಲಿನ ಇಯತ್ತೆಗಳಿಗಾಗಿ, ಮತ್ತು ಮಾಧ್ಯಮಿಕ ಶಾಲೆಗಳ ಕೆಳಗಿನ ಇಯತ್ತೆಗಳಿಗಾಗಿ

ಶಾರೀರಿಕ ಶಿಕ್ಷಣ ಅಭ್ಯಾಸಪತ್ರಿಕೆ

ಮಾಧ್ಯಮಿಕ ಶಾಲೆಗಳಲ್ಲಿಯ ೧, ೨ ಮತ್ತು ೩ನೆಯ ಇಯತ್ತೆಗಳು ಪ್ರಾಥಮಿಕ ಶಾಲೆಗಳಲ್ಲಿಯ ೫, ೬ ಮತ್ತು ೭ನೆಯ ಇಯತ್ತೆಗಳಿಗೆ ಪೊಂದಿಕೆಯಾಗುತ್ತವೆ.

ಸಂಕೇತಾಕ್ಷರಗಳನ್ನು ಕೆಳಗಿನಂತೆ ಉಪಯೋಗಿಸಿದೆ.—ಓ. ಪಿ. ಎಸ್.— ಆಪರ್ ಫಿಜಿಕಲ್ ಎಕ್ಟಿವಿಟೀಜ್.

ಪಿ. ಇ. ಸಿ. ೧೯೨೭ -- ೧೯೩೧ನೆಯ ಇಸ್ವಿಯ ಫಿಜಿಕಲ್ ಎಜ್ಯುಕೇಶನ್ ಕಮೀಟಿಯ ರಿಪೋರ್ಟ.

ಪಿ. ಇ. ಸಿ. ೧೯೩೫–೪೬—೧೯೩೫–೪೬ನೆಯ ಇಸ್ವಿಯ ಫಿಜಿಕಲ್ ಎಜ್ಯುಕೇಶನ್ ಕಮೀಟಿಯ ರಿಪೋರ್ಟ.

ಎಸ್. ಪಿ. ಇ. ಎ ಎಸ್. ಎಸ್.—ಮಾಧ್ಯಮಿಕ ಶಾಲೆಗಳ ಶಾರೀರಿಕ ಶಿಕ್ಷಣದ ಚಟುವಟಿಕೆಗಳ ಅಭ್ಯಾಸಪತ್ರಿಕೆಯು.

ಈ ಅಭ್ಯಾಸ ಪತ್ರಿಕೆಯಲ್ಲಿ ಬೇರೆ ಬೇರೆ ಸದರುಗಳಲ್ಲಿ ಕೂಟ್ಟ ಚಟುವಟಿಕೆಗಳಿಗೆ ಇದೇ ಮಾದರಿಯ ಸ್ಥಳಿಕ ಮತ್ತು ಪರಂಪರೆಯಿಂದ ಬಂದಂಥ ಚಟುವಟಿಕೆಗಳನ್ನೂ ಸೇರಿಸಬಹುದು.

೫ನೆಯ ಇಯತ್ತೆ

(ಅ) ಶಾರೀರಿಕ ಚಟುವಟಿಕೆಗಳು.

(i) ಮೊದಲಿನ ನಾಲ್ಕು ಇಯತ್ತೆಗಳ ಅಭ್ಯಾಸಪತ್ರಿಕೆಯಲ್ಲಿ "ಅ" ಸದರಿನಲ್ಲಿ ಕೊಟ್ಟ ಮೂಲಭೂತ ಮತ್ತು ಸ್ವಚ್ಛಂದ ಚಟುವಟಿಕೆಗಳು.

(ii) ಸಾಮಾನ್ಯ ಚಟುವಟಿಕೆಗಳು (೧) ಓಡುವದು, ಕುಂಟುವದು. ಜಿಗಿಯುವದು. ಹಗ್ಗದ ಸಹಾಯದಿಂದ ಜಿಗಿಯುವದು, ಕುದುರೆಯ ಜಿಗಿತ (ಸ್ವಚ್ಛಂದವಾಗಿ ಒಬ್ಬನೆ ಅಥವಾ ಜೊತೆಗಾರನೊಂದಿಗೆ). (೨) ಓಡುವದು, ಕುಂಟುವದು, ಜಿಗಿಯುವದು ಮುಂತಾದವುಗಳಲ್ಲಿ ಶಿಕ್ಷಕರನ್ನು ಹಿಂಬಾಲಿಸುವದು. (೩) ಜೊತೆಗಾರರನ್ನು ಬೆನ್ನಟ್ಟುವದು. (೪) ಗುರುಗಳನ್ನು ಬೆನ್ನಟ್ಟುವದು. (೫) ಮೊಣಕಾಲುಗಳನ್ನು ಮೇಲೆತ್ತಿ ನಿಂತಲ್ಲಿಯೇ ಓಡುವದು. (೬) ತಮ್ಮ ಚಲನವನ್ನು ಗಮನಿಸುವದು. (೭) ಕಪ್ಪೆಗಳು, ಮೊಲಗಳು, ಮಂಗಗಳು ಮುಂತಾದವುಗಳ ಚಲನವಲನಗಳ ಅನುಕರಣ. (೮) ಅಗಲ ಗಾಲಿಕ್ಕುತ್ತ, ಮೊಳಕಾಲು ಹರಡುಗಳನ್ನು ಹಿಡಿದು, ಅತ್ತಿತ್ತ ಸರಿದಾಡುವದು. (೯) "ಇಲ್ಲಿ, ಅಲ್ಲಿ ಎಲ್ಲೆಡೆಗೆ."

(iii) ಕೂಚು ಮಾಡುವದು.—(೧) ನಿಂತಲ್ಲಿಯೇ ಹೆಜ್ಜೆ ಇಕ್ಕುತ್ತ ಚಪ್ಪಾಳೆ ಹಾಕುವದು. (೨) ಚಪ್ಪಾಳೆಯೊಂದಿಗೆ ಹೆಜ್ಜೆ ಇಕ್ಕುತ್ತ ಗುಂಪಿನಲ್ಲಿ ಮುಂದಕ್ಕೆ ಕೂಚು ಮಾಡುವದು. (೩) ಸಾಲಾಗಿ ನಿಲ್ಲುವದು ಸಾಲು ಸರಿಪಡಿಸುವದು, ಎಣಿಕೆ ಕೊಡುವದು, ಹೆಜ್ಜೆ ಹಾಕುವದು, ಹೊರಳುವದು, ಇತ್ಯಾದಿ. (೪) ಒಂದೇ ಸಾಲಿನಲ್ಲಿ ಕೂಚು ಮಾಡುವದು. (೫) ಕೂಚು ಮಾಡುತ್ತಿರುವಾಗ ಎಡಕ್ಕೆ ಬಲಕ್ಕೆ ತಿರುಗುವದು. (೬) ಇಬ್ಬಿಬ್ಬರಂತೆ ಕೂಚು ಮಾಡುವದು ದಿಕ್ಕುಗಳನ್ನು ಬದಲಿಸುವದು, ಇತ್ಯಾದಿ. (೭) ಗುಂಪಾಗಿ ಓಡುವದು.

(ಬ) ಕಲೆಯ ಆಟಗಳು ಮತ್ತು ಸಾಭಿನಯ ಗೀತಗಳು.

'ಓ. ಪಿ. ಎಸ್.'ಪ ೩ನೆಯ ಪ್ರಕರಣದಲ್ಲಿ ಕೊಟ್ಟಂತೆ.

(ಕ) ಅಂಗಾಂಗ ವ್ಯಾಯಾಮ

(i) ಅನಿಯತ ಅಂಗಸಾಧನೆಗಳು— ಟೊಂಕ ತೋಲ ಹಿಡಿಯುವದು, ಜಿಗಿಯುವದು ಮತ್ತು ಇತರ ಅನಿಯತ ಅಂಗಸಾಧನೆಗಳು. (೧) ಅದಷ್ಟು ಎತ್ತರ, ಅದಷ್ಟು ಗಿಡ್ಡ. (೨) (ತುದಿ ಜೆರಳಿನ ಮೇಲೆ, ಇಲ್ಲವೆ ಹಿಮ್ಮಡಗಳ ಮೇಲೆ, ಸ್ವಚ್ಛಂದವಾಗಿ) ನಡೆಯುವದು, ಓಡುವದು, ಇತ್ಯಾದಿ. (೩) ನಿಂತ ಸ್ಥಳದಲ್ಲಿ ಜಿಗಿಯುವದು. ಜಿಗಿಯುವಾಗ ಹೊರಳುವದು. (೪) ಜಿಗಿದು ಹುಶ್ಯಾರ ಸ್ಥಿತಿಯಲ್ಲಿ ನಿಲ್ಲುವದು. ಆರಾಮು ನಿಲ್ಲುವದು, ಇತ್ಯಾದಿ, (೫) ಕತ್ತರಿಗಾಲು ಹಾಕಿಕೊಂಡು ಕೂಡ್ರುವದು ಮತ್ತು ಹಣೆಯನ್ನು ನೆಲಕ್ಕೆ ಹಚ್ಚುವದು ಹಾಗೂ ಒಮ್ಮೆ ಎಡಮೊಳಕಾಲಿಗೂ ಮತ್ತೊಮ್ಮೆ ಬಲ ಮೊಳಕಾಲಿಗೂ ಹಣೆಯನ್ನು ಹಚ್ಚುತ್ತ ಹೋಗುವದು. (೬) ಮುಂದೆ, ಬದಿಗೆ ಜಿಗಿಯುವದು. (೭) ಅಗಲಗಾಲಿಕ್ಕುತ್ತ ಜಿಗಿಯುವದು. (೮) ಒಂದು ಮೊಳಕಾಲು ಮೇಲಕ್ಕೆ ಮಣಿಸಿ ಅದಕ್ಕೆ ಹಣೆ ಹಚ್ಚುವದು. (೯) ಸ್ವಚ್ಛಂದವಾಗಿ ಓಡುವದು, ಕುಂಟುವದು ಇತ್ಯಾದಿ ಮತ್ತು ಸಂಜ್ಞೆಯಾವೊಡನೆ ತಡೆಯುವದು ಹಾಗೂ ವಿಶಿಷ್ಟ ಸಮತೋಲ ಸ್ಥಿತಿಯಲ್ಲಿ ನಿಲ್ಲುವದು. (೧೦) ಒಂದು ಕಾಲನ್ನು ಮಡಿಚಿ ಹಿಂಪೆ ಹಿಡಿದು ತನ್ನ ಸುತ್ತಲೂ ಜಿಗಿಯುವದು. (೧೧) ಪೆಟ್ಟಿಗೆಯಲ್ಲಿಯ ನರ [Jack in the box] (೧೨) ಜಿಗಿದು ಅಗಲಗಾಲಿಕ್ಕಿ ಎರಡೂ ಕಾಲುಗಳ ನಡುವೆ ನೆಲವನ್ನು ಕೈಗಳಿಂದ ಮುಟ್ಟುವದು. (೧೩) ಅಂತರವನ್ನು ಹೆಚ್ಚಿಸುತ್ತ ಮುಂದೆ, ಹಿಂದೆ ಜಿಗಿಯುವದು. (೧೪) ತುದಿ ಜೆರಳುಗಳ ಮೇಲೆ ನಡೆಯುತ್ತ ನಾಯಕನನ್ನು ಹಿಂಬಾಲಿಸುವದು ಮತ್ತು ನಾಯಕನು ಹಿಂತಿರುಗಿಬೊಡನೆ ಅವಚಿಕೊಂಡು ಕೂಡ್ರುವದು. (೧೫) ಸೊಟ್ಟಾಗಿ ಕೂಡ್ರುವದು. (೧೬) ದಾರ ಮತ್ತು ಸೂಜಿ.

(ii) ನಿಯತ ಅಂಗಸಾಧನೆಗಳು— ಎಸ್.ಪಿ.ಇ.ಎ.ಎಸ್. ಎಸ್.ದಲ್ಲಿಯ ೧೧, ೧೩, ೧೫, ೧೭ ಮತ್ತು ೧೯ನೆಯ ಪ್ರಕರಣಗಳಲ್ಲಿ ಹೇಳಿದಂತೆ ಮೊದಲಿನ ಎಂಟು ಕೈಗಳು.

(iii) ಸರ್ವಾಂಗಸುಂದರ ವ್ಯಾಯಾಮದ ಪ್ರಕಾರಗಳು—
(೧) ಕಲಾಯಿ-ಘುಮ್. (೨) ಕಲಾಯಿ-ಘುಮ್-ದೋ
(೩) ಮಿಶ್ರಹಾಫ್ (೪) ಕಮರ್-ಪವಿತ್ರಾ-ದೋ.
೩ ಮತ್ತು ೪ನೆಯ ಇಯತ್ತೆಗಳಲ್ಲಿ ಮಾಡಿದ ಕೈಗಳನ್ನು ರೂಢಿ ಮಾಡುವದು.

(ಡ) ಉಪಕರಣ ಸಹಿತ ಅಂಗಸಾಧನೆಗಳು—

(i) ಡಂಬೆಲ್ಸ— ಎಸ್.ಪಿ.ಇ.ಎ.ಎಸ್.ಎಸ್.ದಲ್ಲಿಯ ೧೨, ೧೪, ೧೬, ೧೮ ಮತ್ತು ೨೦ನೆಯ ಪ್ರಕರಣಗಳಲ್ಲಿ ಕೊಟ್ಟವುಗಳು.

(ii) ಕಾಠಿ, (ಬಡಿಗೆ) ಕವಾಯಿತ— (೧) ಕಮರ-ಝುಕ್. (೨) ಪೀಠ್-ಹಾಫ್ ಬೈಠ್ ಜಾವ್ (೩) ಕುಲ್-ಆನಿ (೪) ತಿರ್ಛೆ ಹೂಲ್, ಎಕ್ (೫) ತೀರ್ಛೆ ಹೂಲ್, ದೋ (೬) ಪಾವ್-ಪಟಕ್.

(iii) ಲೊಡುಗಳು—
(೧) ಝೋಲೆ (೨) ಬಗಲಿ (೩) ದುಹೇರಿ-ಬಗಲ್ (೪) ಬಗಲ್-ಲಟ್ಕೋಟ್ (೫) ಎಕೇರಿ-ಝೋಲೆದಾರ್ (೬) ಆಣಿದಾರ್-ಏಕ್ (೭) ಆಣಿದಾರ-ದೋ

(೮) ದುಹೇರಿ ಝೋಲೆದಾರ (೯) ಕದಮ್ ಖೋಲ್ (೧೦) ಏರೀ (೧೧) ರುಮಾಲಿ-ಏಕ್ (೧೨) ರುಮಾಲಿ-ದೋ.

(ಇ) ತಾಲಬದ್ಧ ಅಂಗ ಸಾಧನೆಗಳು.

ಲೇಝಿಮ್ – (೧) ಏಕ್-ಜಗಪ (೨) ಆಫಿ-ಲಗಾಮ್ (೩) ಪವಿತ್ರಾ (೪) ಗೋಲ್-ಚಾಲ್ (೫) ಗೋಲ್-ಚಾಲ್-ದೋ (೬) ಜಕ್ರ-ಗೋಲ್ (೭) ಗೋಲ್-ಬೈಠಕ್ (೮) ಮುಖ್-ಮಿಲಾವ್ (೯) ಮುಖ್-ಮಿಲಾಪ್-ದೋ (೧೦) ವಜೆದಾರ್-ಬೈಠಕ್.

ಹೆಣ್ಣುಮಕ್ಕಳಿಗೆ ಮಾತ್ರ

(i) ಝುಮ್ಮಾ:– (೧) ಜವ್ಹಾಕೆಯ ಝುಮ್ಮಾ (೨) ಪಂಖಿ ಝುಮ್ಮಾ (೩) ಫೇರ್ ಝುಮ್ಮಾ.

(ii) ಬಗಾಟ ಒಗಂ (ಪ್ರಗಡಿ):– (೧) ದೋನಾ-ತಾಚಿ (ಎರಡೂ ಕೈಗಳ) (೨) ದಂಡಾಚಿ (೩) ಚೌಫೇರಂಚಿ (ನಾಲ್ವರ) (೪) ನಖುಲ್ಯಾ.

(iii) ಗರ್ಬಾ:– (೧) ಟಾಳೀಚಾ (ಜವ್ಹಾಕೆಯ) (೨) ಚುಟಕಿಚಾ (ಚಿಟಕೆಯ).

(ಈ) ಮನರಂಜಕ ಚಟುವಟಿಕೆಗಳು.

(i) ಸುಲಭ ಆಟಗಳು:– (೧) "ಶೋಣ್ಣಾ, ಗಂಟಿ ಎಷ್ಟಾಯಿತು ?" (೨) "ಕಾಗೆ ಮತ್ತು ಬಕವಕ್ಷಿಗಳು" (೩) ಕ್ರಸ್ಟ ಎಂಡ್ ಕ್ರಮ್ಸ (Crust and Crums) (೪) ಹಿರಿ 'ಅ' ಕಿರಿ 'ಅ' (೫) ಬೋಗಿ ಬಾಲ್ (Boggy Ball) (೬) ಒಕ್ಕಲಿಗ ಮತ್ತು ಇಣಚಿ ಗಳು. (೭) ತಾಯಿ ಹಕ್ಕಿ (೮) ಮುದುಕ (೯) ಜಂಡನ್ನು ಒದೆಯುವದು, ಒಗೆಯುವದು, ಮತ್ತು ಹಿಡಿಯುವದು ಮುಂತಾದ ಸ್ವಚ್ಛಂದ ಆಟಗಳು. (೧೦) ಕಣ್ಣು ಮುಚ್ಚಾಣಿಕೆಯ ಆಟ (೧೧) ಬೆಕ್ಕು ಮತ್ತು ಇಲಿ (೧೨) ಗುದ್ದಪ ಮೇಲೆ ಬೆಂಕಿ (೧೩) ಸೈನಿಕರು ಮತ್ತು ದರೋಡೆಗಾರರು. (೧೪) ಚೆಂಡು ಕೆಳಗೆ ಬೀಳದಂತೆ ಮೇಲಕ್ಕೆ ಹಾರಿಸುತ್ತ ಆಡುವದು. (ಮೇಲಕ್ಕೇ ಚಂಡು ಇಡುವದ) (೧೫) ಮಾಯಾ ಲುಂಗುರ (೧೬) ಸ್ವಚ್ಛಂದ ಫುಟಬಾಲ್ (೧೭) ನುಟ್ಟಿ ಓಡುವದು. (೧೮) ಕಾಡು ಕುದುರೆಗಳು (೧೯) ಸಂಗಡಿಗನ ಬೆನ್ನಟ್ಟು (೨೦) ಕಾಲು ಜೋಡಿಸಿ ಜಿಗಿಯುತ್ತ ಆಟಿಗರನ್ನು ಗಂಟು ಹಾಕುವದು. (೨೧) ಬಾತಗೋಳಿ ಮತ್ತು ಮರಿಗಳು (೨೨) ಅನಿಯತ ಹುತುತು. (೨೩) ಕುಂಟಾಟ.

(ii) ಹಾಡಿನ ಆಟಗಳು— (೧) "ರಿಂಗ್ ಎ ರಿಂಗ್ ರೋಜೆಸ್" (Ring a Ring roses.) (೨) ಬೇಟೆಯ ಹಾಡಿನ ಆಟ (ಶಿಕಾರ ಕರೂ ಯಾ ಆಪಣ ವಾಘಾಚಿ). (೩) ಮಳೆಯ ಹಾಡಿನ ಆಟ (ಪಾನಿ ಆಯಾ ದೌಡೋನೌಡೋ). (೪) ಆಟದ ಅವಧಿಯ ಹಾಡು (ಆಯಿ ಜೇಂಡು ಫಾಳಿಚಾ ಖೇಳ್ ಮಜೇದಾರ್). (೫) ಕಟ್ಟಿಗೆ ಕಡಿಯುವವನ ಹಾಡು. (ಹಮ್ ಬನೆ ತಾಯಾ ಆಜಿ ಜಲೆ) (೬) ಗುಬ್ಬಿ ಹಾಡು (ಯಾ ಚಿಮಣ್ಯಾ ಹೋ ಯಾ ಗ ಯಾ. (೭) ನವಾಗಿ ಹುಡುಗ (ದಾದಾನೋ ಡಾಂಗೋರೊ ಲಿಧೋ) (೮) ಆಟದ ಹಾಡು (ಇಫ್ ಆಯ್ ಪೆಅರ್ ಎ ರೈಡರ್ ಇತ್ಯಾದಿ) (೯) ಆಟದ

ಹಾಡು (ಜೋಹನ್ ಹೋ ಪಂಖಿದು ನಾನು) (೧೦) ಆಟದ ಅವಧಿಯ ಹಾಡು (ಬಾ ಕೆಟ್ಟು ಬಾ)

(ಗ) ಮೇಲಾಟಗಳು:—

(೧) ೫೦ ಯಾರ್ಡ್ ಓಟ (೨) ೨೫ ಯಾರ್ಡ್ ಜೋಡುಗಾಲ ಜಿಗಿತದ ಓಟ (೩) ಉದ್ದ ಜಿಗಿತ (೪) ಹಗ್ಗ ಜಿಗಿಯುವದು (೫)ನಿಂತಲ್ಲಿಯೇ ಜಿಗಿಯುವದು (೬) ಹಗ್ಗ ಜಿಗಿಯುತ್ತ ಓಡುವದು (Skipping with a rope)

(ಹ) ಕಾದಾಟಗಳು:—

ಕುಸ್ತಿಯಲ್ಲಿಯ ಮುಖ್ಯ ಹಿಡಿತಗಳು.

(ಯ) ಬೀಡುಬಿಡುವದು (ಹೊರವಸತಿ):—

ಹುಡುಗರು ಮೂರು ಅಥವಾ ನಾಲ್ಕು ದಿನಗಳ ವರೆಗೆ ಒಂದೇಸವನೆ ಬೀಡುಬಿಡಜೀಕು.

೬ನೆಯ ಇಯತ್ತೆ

(ಅ) ಪ್ರಾರಂಭಿಕ ಚಟುವಟಿಕೆಗಳು:—

(೧) ನಡೆಯುವದು, ಓಡುವದು, ಕುಂಟುವದು, ಜಿಗಿಯುವದು (ಹಗ್ಗದ ಸಹಾಯದಿಂದ), ಉದ್ದಗಾಲಿ ಕ್ಕುತ್ತ (ಕುದುರೆಯಂತೆ) ಜಿಗಿಯುವದು, (ಸ್ವಚ್ಛಂದವಾಗಿ ಮತ್ತು ಇಬ್ಬಿಬ್ಬರಂತೆ ಇತ್ಯಾದಿ ಇತ್ಯಾದಿ) (೨) ಗುರುಗಳನ್ನು ಹಿಂಬಾಲಿಸು. (೩) ವಾಹನಗಳ ಚಲನಗಳನ್ನು ಅನುಕರಿಸುತ್ತ ನಿಮ್ಮ ದಾರಿಗುಂಟ ಹೊರಳುತ್ತ ಹೋಗುವದು.(೪)ಗುರುಗಳನ್ನು ಬೆನ್ನಟ್ಟುವದು. (೫) ಕಾಂಗರೂ,ನೊಲ, ಕರಡಿ, ಕಪ್ಪೆ ಮುಂತಾದವುಗಳ ಅನುಕರಣ ಮಾಡುವದು. (೬) ಹಿಮ್ಮಡ, ತುದಿಬೆರಳು ಮುಂತಾದವುಗಳ ಮೇಲೆ ನಡೆಯುವದು. (೭) ಕಾಗೆಯ ಜಿಗಿತ. (೮) ಹಾರು ಜಿಗಿತ (೯) ಗುಬ್ಬಿ ಜಿಗಿತ (೧೦) ಚಕ್ರವ್ಯೂಹ ಓಟ (೧೧) ರಾಕ್ಷಸ ನಂತೆ ಮಾರುಗಾಲು ಹಾಕುತ್ತ ಆಟದ ಬೈಲನ್ನು ದಾಟುವದು. (೧೨) ತಾಳಕ್ಕೆ ಸರಿಯಾಗಿ ಜಪ್ಪಾಳಿ ಹಾಕುತ್ತ ಓಡುವದು. (೧೩) ಮಗ್ಗಲಿಗೆ ಜಿಗಿಯುವದು. (೧೪) ಇಲ್ಲಿ, ಅಲ್ಲಿ, ಎಲ್ಲೆಡೆಗೆ

(ii) **ಕೂಚು ಮಾಡುವದು:**ಟ (ಹಿಂದೀ ಹುಕುಮುಗಳನ್ನು ಉಪಯೋಗಿಸಿರಿ.)

(೧) ಒಬ್ಬರ ಹಿಂದೊಬ್ಬರು ಸಾಲಿನಲ್ಲಿ ಕೂಚುಮಾಡುವದು (೨) ನಿಂತಲ್ಲಿ ಹೆಜ್ಜೆಇಕ್ಕುವಾಗ ಎಡಕ್ಕೆ, ಬಲಕ್ಕೆ ಮತ್ತು ಅರ್ಧ ವರ್ತುಳದಲ್ಲಿ ತಿರುಗುವದು (೩) ಒಬ್ಬರ ಹಿಂದೊಬ್ಬರ ಸಾಲಿನಲ್ಲಿ ಮಗ್ಗಲಿಗೆ ಕೂಚುಮಾಡುವದು. (ಬಾಯೆ ಯಾ ದಹಿನೆ ತಾಲ್) (೪) ಒಬ್ಬರ ಹಿಂದೊಬ್ಬರಂತಿದ್ದ ಸಾಲಿನಲ್ಲಿ ಕೂಚು ಮಾಡುವದು ಮತ್ತು ಎಡಕ್ಕೆ ಮತ್ತು ಬಲಕ್ಕೆ ದಿಕ್ಕು ಬದಲಿಸುವದು. (೫) ದಿಕ್ಕು ಬದಲಿಸುತ್ತ ಒಬ್ಬರ ಹಿಂದೊಬ್ಬರ ಸಾಲಿನಲ್ಲಿ ವೇಗದಿಂದ ಕೂಚು ಮಾಡುವದು ಹಾಗೂ ಓಡುವದು.

(ಬ) ಅಂಗಾಂಗ ವ್ಯಾಯಾಮ:—

(i) ಅನಿಯತ ಪ್ರಕಾರಗಳು:– (೧) ಟೊಂಕವನ್ನು ಮುಂದೆ, ಬದಿಗೆ, ಕೆಳಗೆ ಮಣಿಸುವದು. (೨) ಮೊಳಕೈಯನ್ನು ವರ್ತುಳಾಕಾರವಾಗಿ ತಿರುಗಿಸುವದು. (೩) ನಿಂತಲ್ಲಿಯೇ ಒಮ್ಮೆ ಎಡ-ಮೊಳಕಾಲು, ಒಮ್ಮೆ ಬಲ

ಮೊಳಕಾಲು ಮೇಲೆತ್ತುತ್ತ ಕುಂಟುವದು. (೪) ಅವಚಿ ಕೂಡ್ರುವದು ಮತ್ತು ಮೇಲೆ ಜಿಗಿಯುವದು. (೫) ಕತ್ತರಿಗಾಲು ಹಾಕಿಕೊಂಡು ಕೂಡ್ರುವದು ಮತ್ತು ಹಡಿಯನ್ನು ನೆಲ, ಮೊಳಕಾಲು ಮುಂತಾದವುಗಳಿಗೆ ಹಚ್ಚುವದು. (೬) ಟೊಂಕವನ್ನು ವರ್ತುಲಾಕಾರದಲ್ಲಿ ಹೊರಳಿಸುವದು. (೭) ಕೈಯಿಂದ ಹರಡುಗಳನ್ನು ಹಿಡಿದು ಅತ್ತಿತ್ತ ಅಡ್ಡಾಡುವದು. (೮) ಬಾಗಿನಿಂತು ಕಾಲುಗಳನ್ನು ಕ್ರಮವಾಗಿ ಬದಿಗಳಿಗೆ (ಎಡಕ್ಕೆ—ಬಲಕ್ಕೆ) ಚಾಚುವದು. (೯) ಬಾಗಿನಿಂತು ಕಾಲುಗಳನ್ನು ಕ್ರಮವಾಗಿ ಹಿಂಬದಿ ಚಾಚುವದು. (೧೦) ಓಡುವದು, ಕುಂಟುವದು ಇತ್ಯಾದಿ ಮತ್ತು ಸಂಕೇತದಂತೆ ಜೋಲಿ ಹಿಡಿಯುವದು. (೧೧) ಕ್ರಮವಾಗಿ (ಬಲ ಮತ್ತು ಎಡ) ಮೊಳಕಾಲುಗಳನ್ನು ಮೇಲೆತ್ತುತ್ತ ಜಿಗಿಯುವದು

(ii) ನಿಯತ ಪ್ರಕಾರಗಳು:—ಎನ್. ಪಿ. ಇ. ಎ. ಎನ್. ಎಸ್. ದ ೮, ೧೧ ಮತ್ತು ೧೪ ನೆಯ ಸಾಲಗಳಲ್ಲಿ ಕೊಟ್ಟ ಒಂಬತ್ತು ಪ್ರಕಾರಗಳು.

(iii) ಸ್ವರಾಂಗಸುಂದರ ವ್ಯಾಯ್ಯಾಮದ ಪ್ರಕಾರಗಳು:— (೧) ಮೇರು ತಾನ್-ಪೂ (೨) ಪೇಟ್-ಗುತನ್ (೩) ತರಾಯಿ-ಸೀಧಿ (೪) ಸೀಧಿ-ಫೇಕ್ (೫) ಕಮರ—ಕನ್.

೩, ೪ ಮತ್ತು ೫ನೆಯ ಇಯತ್ತೆಗಳಲ್ಲಿ ಮಾಡಿದ ಪ್ರಕಾರಗಳನ್ನು ರೂಢಿಮಾಡುವದು.

ಕ) ಉಪಕರಣ ಸಹಿತ ಅಂಗಸಾಧನೆಗಳು—

(i) ಡಂಬೆಲ್ಸ:—(೧) ಊಪರ್—ನೀಚೆ—ಪೋಕ್ (೨) ಕಮರರುಂಕ್—ಪೋಕ್ (೩) ಆಗೆ-ಸೀಧೆ-ಪೋಕ್ (೪) ಬಾಯೆ-ದಹಿನೆ-ಪೋಕ್ (೫) ಅಡ್ಡಂಗಾ-ಆಗೆ ಪೊಕ್ (೬) ಅಡ್ಡಂಗಾ—ಬಾಜು – ಪೋಕ್ (೭) ಚೌಫೇರ್-ಪೋಕ್ (೮) ಊಪರ್ ಗುರನ್ ಪೋಕ್ (೯) ಕುದನ್ ತಾಲ್—ಪೊಕ್ (ಉಪರ್-ನೀಚೆ)

(ii) ಕಾಠಿ ಕವಾಯತು—
(೧) ಪಾವ್-ಪಟಕ್ (೨) ಸಿರ್-ಘುಮ್-ಹಾಫ್ (೩) ಕಮರ್-ಕಸ್ (೪) ಕಮರ್‌ಕನ್ ಪೋ-ಮುಖ್ (೫) ಪಜ್‌ಫೇರ್-ಕುಖ್.

(iii) ಲೋಡುಗಳು:— ೫ನೆಯ ಇಯತ್ತೆಗಳಲ್ಲಿ ಮಾಡಿದ ಕೈಗಳನ್ನು ರೂಢಿಮಾಡುವದು (೧) ದುಹೇರಿ-ತಿರಿ. (೨) ಪೇಖನ್-ಸೀಧಿ. (೩) ಪೇಖನ್-ಉಲ್ಟಿ, (೪) ಸೀಧಿ-ತರಾಯಿ (೫) ಉಲ್ಟಿ-ತರಾಯಿ (೬) ಪವಿತ್ರ-ಪೋ ರುಖ್.

(iv) ಏಕಾಂಗ ಲಕಡಿ:—ಘುಮ್ಚಾ-ಹಾಫ್ (೨) ಫಲಾಂಗ-ಹಾಫ್ (೩) ಬಗಲ -ಹಾಫ್, (೪) ಲಾಗ-ಹಾಫ್ (೫) ಡುಬ್-ಲೇವ್.

(ಡ) ತಾಲಬದ್ಧ ಅಂಗಸಾಧನೆಗಳು:—

(i) ಲೇಝಿಮ್:—೫ನೆಯ ಇಯತ್ತೆಯಲ್ಲಿ ಮಾಡಿದ ಕೈಗಳನ್ನು ರೂಢಿ ಮಾಡುವದು.
(೧) ದೋರುಖ್. (೨) ಜೊ-ಹರ್ (೩) ಚಂಪ್ರು-ವಟ್ (೪) ಮೋ-ಮಿಯಾ (೫) ದೋ-ವಾಲ್,

(ii) ಇತರ ಚಟುವಟಿಕೆಗಳು:— (೧) ತಾಳಕ್ಕೆ ಸರಿಯಾಗಿ ಜಪ್ಪಾಳೆ ತಟ್ಟುವದು. (೨) ತಾಲಬದ್ಧವಾಗಿ ಒಂದು ಕಾಲಮೇಲೆ ಜಪ್ಪಾಳೆ ಒಮ್ಮೆ ಹಾಕುತ್ತ ಮತ್ತೊಮ್ಮೆ ಹಾಕದೆ ನಡೆಯುವದು, ಕುಂಟುವದು ಮತ್ತು ಜಿಗಿ

ಯುವದು. (೩) ತಾಲಬದ್ಧವಾಗಿ ಒಂದು ಕಾಲಮೇಲೆ ಚಪ್ಪಾಳೆ ಒಮ್ಮೆ, ಹಾಕುತ್ತ ಒಮ್ಮೆ ಹಾಕದೆ ನಿಂತ ಸ್ಥಳದಲ್ಲಿಯೇ ಜೋರಿನಿಂದ ಹೆಜ್ಜೆಗಳನ್ನು ಇಕ್ಕುವದು. ಮತ್ತೊಮ್ಮೆ ಕೂಡು ಮಾಡುವದು–ಹೀಗೆ ಮಾಡುತ್ತ ಸಾಗುವದು. (೪) ತಾಳಕ್ಕೆ ಸರಿಯಾಗಿ ಓಡುವದು–ಇಬ್ಬಿಬ್ಬರಂತೆ ಮೂ-ಮೂವರಂತೆ ನಾಲ್-ನಾಲ್ವರಂತೆ ಒಮ್ಮೆ ಇಕ್ಕುತ್ತ ಒಮ್ಮೆ ಇಕ್ಕದೆ. (೫) ತಾಳಬದ್ಧವಾಗಿ ಹಗ್ಗದ ಓಟ–ಜೊತೆಗಾರನೊಂದಿಗೆ ಮೂ-ಮೂವರಂತೆ ನಾಲ್ನಾಲ್ವರಂತೆ ಚಪ್ಪಾಳೆಯನ್ನು ಒಮ್ಮೆ ಇಕ್ಕುತ್ತ ಒಮ್ಮೆ ಇಕ್ಕದೆ.(೬) ಹಳ್ಳಿಯ ಎರಡು ಸುಲಭ ಜೂಜಿತಗಳು.

ಹೆಣ್ಣುಮಕ್ಕಳಿಗಾಗಿ ಮಾತ್ರ—

(i) ಝಿಮ್ಮಾ:—(೧) ಫೇರ ಝಿಮ್ಮಾ (೨) ಖಂಡಿ ಝಿಮ್ಮಾ

(ii) ಬಗಾಟ-ಬಗರಿ (ಪುಗಡಿ):–(೧) ಒಂದು ಕೈಯಿಂದ (ಏಕ-ಹಾತಾಜಿ) (೨) ಕುಳಿತ ಸ್ಥಿತಿಯಲ್ಲಿ (ಬಾಸ್-ಪುಗಡಿ)

(iii) ಕಿಚಿಪಾನ

(iv) ಲಾಟ್ಯಾ

(v) ಕೊಂಬಡಾ

(vi) ಕೋಲಾಟದ ಮುಖ್ಯ ಠೀವಿಗಳು ಮತ್ತು ನಾಲ್ಕು ಹೆಜ್ಜೆಗಳು.

(ಇ) ಮನರಂಜಕ ಚಟುವಟಿಕೆಗಳು:—

(i) ಸುಲಭ ಆಟಗಳು:—(೧) ಸಾದಾ ಜೋಡಣೆ Ordinary Tag) (೨) ಶಹಾ ಮೃಗ ಟ್ಯಾಗ್ (೩) ನೆರಳು ಟ್ಯಾಗ್ (೪) ಸವಾರಿ ಟ್ಯಾಗ್ (೫) ಬೆನ್ನಿಗೆ ಬೆನ್ನು ಟ್ಯಾಗ್ (೬) ಗಂಗಾಳ ಮುರಗಿ (೭) ಅಬಾಡಬಿ (೮) ಪಾಗಲ್‌ವಾಲಾ (೯) ಹೀಗೆ ಬಾ (೧೦) ನಂಬರ ಬದಲಿಸುವದು. (೧೧) ದರೋಡೆಗಾರ (೧೨) ಎರಡು ನಾಯಿಗಳು ಮತ್ತು ಎಲುವು (೧೩) ತಗ್ಗಿನಲ್ಲಿಯ ಕರಡಿ (೧೪) ಚಕ್ರವೀಣೆ (೧೫) ಬಿಡು ಮತ್ತು ಹಿಡಿ (೧೬) ಬಾಸ್ಕಿ ಖೇಲ್ (೧೭) ಪೋಲೀಸ ಮತ್ತು ಕಳ್ಳರು (೧೮) ಇಂಗೇ ಬಾ (೧೯) ಉಂಡಾಡಿ ಕುದುರ ಮತ್ತು ಕುದುರೆ ಸಾಕುವವ. (೨೦) ನಾಣ್ಯವೆಲ್ಲಿದೆ? (೨೧) ಬೇಟೆನಾಯಿ ಮತ್ತು ಇಣಜಿ (೨೨) ಗುಡ್ಡದ ಮೇಲೆ ಬೆಂಕಿ (೨೩) ನನ್ನೊಡನೆ ಬಾ (೨೪) ತಪ್ಪು ಚಂಡಾಟ (King or Queen of the Circle) (೨೫) ಎಣಿಕೆಯಂತೆ ಗುಂಪುಮಾಡುವದು. (೨೬) ತಪ್ಪು ಚಂಡಾಟ (ವೈಯಕ್ತಿಕ) (೨೭) ಏನು ನೋಡಿದಿ ?

(ii) ಮಜಲು ಓಟದ ಪಂಧ್ಯ:—(೧) ಒಂಟಕಾಲ ಮೇಲೆ ಎರಡೂ ಕಾಲಮೇಲೆ ಕುಂಟುವ ಶರ್ಯತ್ತು. (೨) ಜೋ ಜೋ ಶರ್ಯತ್ತು (೩) ಶಟ್ಲ ಓಟದ ಪಂಧ್ಯ (೪) ಬಟಾಟಿಯ ಶರ್ಯತ್ತು. (೫) ಚೆಂಡನ್ನು ನಾಗಿಸುವ ಶರ್ಯತ್ತು.

(iii) ತಯಾರೀ ಆಟಗಳು:— (೧) ಜಬಕದ (whip) ಹುತುತು (೨) ಕಾಲ್ಚಂಡನ್ನು ದೂರ ಇಡು (keep away football) (೩) ಎರಡೂ ಕಾಲಮೇಲೆ ಕುಂಟುವ ಟ್ಯಾಗ್ (೪) ಜೋ ಜೋ ಬೆನ್ನಿಟ್ಟುವದು.

(ಫ) ಮುಖ್ಯ ಆಟಗಳು:—

(೧) ಕುಂಟಾಟ (೨) ವರ್ತುಳ ಜೋ ಜೋ (೩) ಜೋ ಜೋ (೪) ಹುತುತು. (೫) ತಪ್ಪುಚೆಂಡಾಟ

(Dodge Ball) (೬) ಎ ಕ್ಯಾಪ್ಟನ್ ಬಾಲ ಎಂಡ ಡಾಜ್ ಬಾಲ್‌ಪ ಟೀರೆ ಪ್ರಕಾರಗಳು.

(ಗ) ಮೇಲಾಟಗಳು:—

(೧) ಜಂ ಯಾರ್ಡ್ಡು ಓಟ (೨) ಟಿಂ ಯಾರ್ಡ್ಡು ಎರಡು ಕಾಲಮೇಲೆ ಕುಂಟುವದು (೩) ನಿಂತಲ್ಲಿಯೇ ಅಗಲು ಜಿಗಿತ (೪) ನಿಂತಲ್ಲಿ ಜಿಗಿತ (೫) ಓಡುತ್ತ ಉದ್ದ ಜಿಗಿಯುವದು. (೬) ನಿಂತಲ್ಲಿಯೇ ಎತ್ತರ ಜಿಗಿಯುವದು. (೭) ಟೆನಿಸ್ ಜೆಂಡು, ಕ್ರಿಕೆಟಜೆಂಡು, ಫ್ಲೋಗ್ರೌಂಡ ಜೆಂಡು, ಇವುಗಳನ್ನು ಒಗೆಯುವದು. (೮) ತೊಡಕಿನ ಪರ್ಧ್ಯ (೯) ಮೂರುಕಾಲಿನ ಓಟ (೧೦) ಹಗ್ಗದ ಜಗತ (ಹೆಣ್ಣುಮಕ್ಕಳಿಗಾಗಿ) (೧೧) ಬಟಾಟೆಯ ಶರ್ಯತ್ತು.

(ಹ) ಮುಲಕಂಬ:—

ಮುಲಕಂಬದ ಸುಲಭ ಕೈಗಳು.

(ಯ) ಕಾದಾಟಗಳು:—

ಕುಸ್ತಿಯಲ್ಲಿಯ ಸುಲಭ ಹಿಡಿತಗಳು.

(ಜ) ಬೀಡು ಬಿಡುವದು:—

೩ರಿಂದ ೫ವಸಗಳವರೆಗೆ ಒಂದೇಸವನೆ ಬೀಡು ಬಿಡುವದು.

೭ ನೆಯ ಇಯತ್ತಿ

(ಅ) ಪ್ರಾರಂಭಿಕ ಚಟುವಟಿಕೆಗಳು:—

(i) ಸಾಮಾನ್ಯ ಚಟುವಟಿಕೆಗಳು:—(೧) ಜೊತೆಯವರ ಸಂಗಡ ಮತ್ತು ಸ್ವಚ್ಛಂದ ಗುಂಪಿನಲ್ಲಿ ನಡೆಯುವದು ಓಡುವದು, ಜಿಗಿಯುವದು ಕುಂಟುವದು, ಹಗ್ಗದಿಂದ ಜಿಗಿಯುವದು (ಸ್ಕಿಪಿಂಗ) ಇತ್ಯಾದಿ (೨) ಸ್ವಚ್ಛಂದ ಗುಂಪಿನಲ್ಲಿ ಮುಂದಕ್ಕೆ ಹಿಂದಕ್ಕೆ, ಬದಿಗೆ ಜಿಗಿಯುವದು. (೩) ಓಡುವದು ಕುಂಟುವದು ಇತ್ಯಾದಿ ಮತ್ತು ಸಂಕೇತದಂತೆ ಒಬ್ಬರ ಹಿಂದೊಬ್ಬರ ನಾಲು, ಒಬ್ಬರ ಬದಿಗೊಬ್ಬರ ನಾಲು ಇತ್ಯಾದಿಗಳನ್ನು ಮಾಡುತ್ತ ಗೊತ್ತು ಪಡಿಸಿದ ಮೂಲೆಗಳ ಕಡೆಗೆ ಓಡುವದು (೪) ಚಕ್ರವ್ಯೂಹ ಓಟ (೫) ನಾಯಕನನ್ನು ಹಿಂಬಾಲಿಸುವದು (೬) ಓಡುವದು, ಕುಂಟುವದು ಇತ್ಯಾದಿ ಮತ್ತು ಸಂಕೇತದಂತೆ ನಾಲ್ವರು, ಐವರು ಇತ್ಯಾದಿ ಜನರ ವರ್ತುಲ ಮಾಡುವದು. (೭) ರಾಕ್ಷಸನಂತೆ ಮಾರುಗಾಲು ಹಾಕುವದು (೮) ತರತರವ ವಸ್ತುಗಳನ್ನು ಮುಟ್ಟುವದು ಮತ್ತು ಗುರುಗಳ ಕಡೆಗೆ ತಿರುಗಿ ಬರುವದು (೯) ಜೀಕ ಮೂಕಾಟ (೧೦) ವಾಹನಗಳ ಚಲನವಲನಗಳನ್ನು ಅನುಕರಿಸುತ್ತ, ನಿಮ್ಮ ಓಟವಲ್ಲಿ ಮುಂದೆ ನಾಗುವದು (೧೧) ಎಲ್ಲ ದಿಕ್ಕುಗಳ ಕಡೆಗೆ ಮುಖ ಮಾಡುತ್ತ ಅಗಲಗಾಲಿಕ್ಕಿ ಜಿಗುವದು (೧೨) ಇಲ್ಲಿ, ಅಲ್ಲಿ, ಎಲ್ಲ ಕಡೆಗೆ (೧೩) ಕಾಗೆಯಂತೆ ಕುಂಟುವದು (೧೪) ಚಕ್ರದ ಹಲ್ಲುಗಳ ಆಕಾರದಲ್ಲಿ ಮಕ್ಕಳು ನಿಂತು, ತೊಡೆತಟ್ಟುವದು, ಮೇಲಕ್ಕೆ ಜಿಗಿಯುವದು. (೧೫) ಮುಂದೆ, ಹಿಂದೆ, ಬದಿಗೆ ಕಾಲು ಎತ್ತುವದು. (೧೬) ದೌಡ ವಜಾಬೈತಕ್.

(ii) ಕೂಚುಮಾಡುವದು:— (೧) ತೀವ್ರವಾಗಿ ಕೂಚು ಮಾಡುವದು ಮತ್ತು ಓಡುವದು ಮತ್ತು ಎಡಕ್ಕೆ ಬಲಕ್ಕೆ, ಅರ್ಧ ವರ್ತುಳದಲ್ಲಿ ಇತ್ಯಾದಿ, ತಿರುಗುವದು. (೨) ಸ್ವಚ್ಛಂದ ಗುಂಪಿನಲ್ಲಿ ಮುಂದೆ ಕೂಚು ಮಾಡು

ವದು ಮತ್ತು ಎಡಕ್ಕೆ, ಬಲಕ್ಕೆ ಇತ್ಯಾದಿ, ತಿರುಗುವದು (೩) ಇಬ್ಬಿಬ್ಬರ ಗುಂಪಿನಲ್ಲಿ ತೀವ್ರವಾಗಿ ಕೂಚು ಮಾಡುವದು. (೪) ಮೂರು ಮೂರರಂತೆ ಹಾಗೂ ನಾಲ್ಕು ನಾಲ್ಕರಂತೆ ಮೂರು ಅಥವಾ ನಾಲ್ಕು ಸಾಲು ಮಾಡಿ, ಎಡಕ್ಕೆ, ಬಲಕ್ಕೆ ತಿರುಗಿ ಕೂಚು ಮಾಡುವದು. (೫) ಮೂವರಂತೆ (ಸಾಲು ಮಾಡಿ) ಕೂಚುಮಾಡುವದು. ಮತ್ತು ಎಡಕ್ಕೆ ಬಲಕ್ಕೆ ದಿಕ್ಕು ಬದಲಿಸುವದು. (೬) ತೀವ್ರವಾಗಿ ಕೂಚು ಮಾಡುವದನ್ನು ಓಡುವದರಲ್ಲಿ ಮತ್ತು ಓಡುವದನ್ನು ತೀವ್ರವಾಗಿ ಕೂಚು ಮಾಡುವದರಲ್ಲಿ ಬದಲಿಸುವದು.

ಬ) ಅಂಗಾಂಗ ವ್ಯಾಯಾಮಗಳು:—

ನಿಯತ ಪ್ರಕಾರಗಳು— ಎಸ್. ಪಿ ಇ. ಎ. ಎಸ್ ಎಸ್.ದ ೧, ೩, ೫, ಮತ್ತು ೭ನೆಯ ಪ್ರಕಾರಗಳಲ್ಲಿ ಕೊಟ್ಟಂತೆ ಎಂಟು ಪ್ರಕಾರಗಳು.

ಸರ್ವಾಂಗ ಸುಂದರ ವ್ಯಾಯಾಮದ ಪ್ರಕಾರಗಳಲ್ಲಿಯ ಕೈಗಳನ್ನು ರೂಢಿ ಮಾಡುವದು.

ಕ) ಉಪಕರಣ ಸಹಿತ ಮಾಡುವ ಅಂಗಸಾಧನೆಗಳು—

(i) ಲೋಡುಗಳು:—(೧) ವಜೆದಾರ ಸೀಧಿ (೨) ವಜೆದಾರ—ಉಲ್ಟಿ (೩) ಸೀಧಿ-ಕಲಾಯಿ ಮೋಜ್ (೪) ವಜೆದಾರ—ಕಲಾಯಿ—ಮಾರೋರ್

(ii) ಡೋ ಅಂಗ ಲಕಡಿ:—(೧) ಸಲಾಮಿ (ವಂಡೇ) (೨) ಡೋ—ಡುಬ್ (೩) ಕಮರ-ವಸ್ತ (೪) ಕಮರ ಅಡಂಗಾ (೫) ಡೋ-ಜಂಟಿ (೬) ಕಮರ-ಡುಬ್-ಫೇರ (೭) ಕಮರ-ಫೇರ್, ೮. ಕಮರ-ಫೇರ್—ಅಡಂಗಾ (೯) ಡುಬ್-ಫೇರ್-ಡುಬ್.

ಹಿಂದೆ ಕಲಿತ ಡಂಬೆಲ್ಸ, ಲಕಡಿ, ಲೋಡು, ಬಡಿಗೆಯ ಕವಾಯತು ಇವುಗಳ ರೂಢಿ ಮಾಡುವದು.

(ಡ) ತಾಳಬದ್ಧ ಚಟುವಟಿಕೆಗಳು—

ಲೇಝಿಮ್— ಹಿಂದೆ ಕಲಿತ ಕೈಗಳನ್ನು ರೂಢಿಗೊಳಿಸುವದು.

(೧) ಡಗ—ನಾಮಿ (೨) ಗಜ—ಬೆಲ್ (೩) ಪುತಲಾ (೪) ಲೇರ-ಧಜ್ (೫) ದಸ್ತ—ಪಾವ್.

ಗಂಡು ಮತ್ತು ಹೆಣ್ಣುಮಕ್ಕಳಿಗಾಗಿ:—

(೧) **ಕಸರತ್ತಿನ ಕುಣಿತಗಳು** (ಮೂರು ಹೆಜ್ಜೆ ಓಡುವದು ಮತ್ತು ಸಾಲ್ಕನೆಯ ಎಣಿಕೆಗೆ ಚಪ್ಪಾಳಿ ಇಕ್ಕುತ್ತ ಬದಿಗೆ ಹೊರಳುವದು ಇತ್ಯಾದಿ. (೨) ಶಾಲೆಯ ಮಕ್ಕಳ ಕುಣಿತ—ಜಿಗಿದು ಚಪ್ಪಾಳೆ ಬಾರಿಸುವದು(Jumping Jack), ಕುಸ್ತಿ ಹಿಡಿಯುವದು, ಚಪ್ಪಾಳೆ ಇಕ್ಕುವದು, ತಲೆಯನ್ನು ಜಗ್ಗುವದು ಮತ್ತು ನುಗಿಸುವದು, ಕೋಲಾಟದ (ಹೆಣ್ಣುಮಕ್ಕಳ) ನಾಲ್ಕು ಹೆಜ್ಜೆಗಳು.

(ಇ) ವೈಯಕ್ತಿಕ ಅಂಗಸಾಧನೆಗಳು:—

(i) ಸಾಮು (೧) ನಮಸ್ಕಾರ ವಜೆ (೨) ಲೇರ – ದಂಡ್ (೩) ಅಷ್ಟಾಂಗ ದಂಡ.

(ii) ಬೈಠಕ್-(೧) ಸರಕ್ (೨) ಪುಟ್ಟಿ (೩) ಡಾಡ್ ವಜೆ.

(iii) ಆಸನಗಳು—(೧) ಭುಜಂಗಾಸನ (೨) ಶಲಭಾಸನ.

(ಫ) ಮನರಂಜಕ ಚಟುವಟಿಕೆಗಳು

(i) ಸುಲಭ ಆಟಗಳು— (೧) ಸವಾರಿ ಟ್ಯಾಗ (೨) ಶಪಾ

ಮೃಗ ಟ್ಯಾಗ (೩) ಕತ್ತರಿ ಟ್ಯಾಗ (೪) ಕೊಕ್ಕೆ ಕೈ ಟ್ಯಾಗ (೫) ಬೆಕ್ಕು ಮತ್ತು ಇಲಿ (೬) ಜಾತ್ಯಂಧ (ಫ್ಯಾನ್ಸಾಟಿಕ್) (೭) ಬಿಡು ಮತ್ತು ಓಡಿ (೮) ನೆರಳು ಬಿಸಿಲು (೯) ನಂಬರ ಬದಲಿಸುವದು (೧೦) ವಿಷಜಕ್ರ (೧೧) ನರಿಗಳ ಬಾಲ (೧೨) ಪರ್ತುಳ ವೀರ (೧೩) ಪರ್ತುಳ ನುಗ್ಗಾಟ (೧೪) ತಗ್ಗಿನಕ್ಷೆಯ ಕರಡಿ (೧೫) ಬಾದಶಾಹೀ ಕುಸ್ತಿ (೧೬) ಕುದುರೆ ಗಳು ಮತ್ತು ಸವಾರರು (೧೭) ಪರ್ತುಳದಲ್ಲಿ ಚಂಡು ನಾಗಾಟದ ಪಂದ್ಯ (೧೮) ತಪ್ಪಿಸುವವನನ್ನು ತಟ್ಟು (೧೯) ನಾಗಲ್‌ವಾಲಾ (೨೦) ಸ್ಪಡ್ ಬಾಲ್ (೨೧) ಡಾಜ್ ಬಾಲ್ (೨೨) ಇಂಗೆ ವಾ (೨೩) ಬೆಳ ದಿಂಗಳು ಮತ್ತು ನಕ್ಷತ್ರ ಬೆಳಕು (೨೪) ಫಪು-ವಾಣಿ (೨೫) ಸುರಕಾಶಿ (೨೬) ನಾಮಾನ ಗಾಡಿ (೨೭) ಜಪಾನಿ ಜೋ (೨೮) ಪೋಲೀಸ ಮತ್ತು ಕಳ್ಳರು.

(ii) ಮಜಲು ಓಟದ ಪಂದ್ಯ—
(೧) ಶಟಲ್ ಓಟದ ಪಂದ್ಯ (೨) ಶಟಲ್ ಸ್ಕಿಪಿಂಗ ಪಂದ್ಯ (೩) ಬಟಾಟೆ ಓಟದ ಪಂದ್ಯ (೪) ನಿಂತಲ್ಲಿಂದ ಉದ್ದ ಜಿಗಿಯುವ ಶರ್ಯತ್ (೫) ಜೋ ಜೋ ಪಂದ್ಯ (೬) ಕುಂಟಾಟ ಪಂದ್ಯ.

(iii) ತಯಾರಿ ಆಟಗಳು— (೧) ಗಂಗಾಳ ಮುರಗಿ (೨) ಕೈದಿಯನ್ನು ಬಿಡಿಸುವದು (ಹುತುತು) (೩) ನಂಬರ ಫುಟ್‌ಬಾಲ್ (ಎಫ್.ಬಿ (೪) ದೂರ ಸರಿಯಿರಿ (ಎಫ್. ಬಿ.) (೫) ಪಟ್ಟಿಗಳನ್ನು ದಾಟುವದು (ತಿಳ್ಳಿ) (೬) ಪತ್ತು ನಾಗಾಟಗಳು (ಬಿ. ಬಿ. ಎಂಡ್ ನೆಟ್‌ಬಾಲ್)

(ಹ) ಮುಖ್ಯ ಆಟಗಳು— (೧) ಚಿಣಿಫಣಿ (೨) ಲಗೋರಿಯಾ (೩) ಕುಂಟಾಟ (೪) ಜೋ ಜೋ (೫) ಹುತುತು (೬) ತಿಳ್ಳಿ (೭) ಅನಿಯತ ಫುಟ್‌ಬಾಲ್ (೮) ಟೆನಿ ಕಾಯಿಟ್ (ಹೆಣ್ಣುಮಕ್ಕಳಿಗಾಗಿ.)

(ಯ) ಮೇಲಾಟಗಳು— ಒಬ್ಬನೇ ೫೦-೭೫ ಯಾರ್ಡು ಅಂತರ ಓಡುವದು ಮತ್ತು ಸ್ಪರ್ಧೆಯಲ್ಲಿ ಓಡುವದು. (೨) ೫೫ ೩೫ ಯಾರ್ಡು, ಎರಡೂ ಕಾಲು ಜೋಡಿಸಿ ಕುಂಟುವದು (೩) ಹಗ್ಗ ಜಿಗಿಯುವದು. (ಹೆಣ್ಣುಮಕ್ಕಳಿಗಾಗಿ) (೪) ನಿಂತಲ್ಲಿಯೇ ಉದ್ದ ಜಿಗಿಯುವದು. (೫) ಓಡುತ್ತ ಬಂದು ಉದ್ದ ಜಿಗಿಯುವದು (ಹುಡುಗರಿಗಾಗಿ) (೬) ತೊಡಕಿನ ಪಂದ್ಯ (೭) ಕ್ರಿಕೇಟ ಚಂಡನ್ನು ಮತ್ತು ಫ್ಲೇಗ್ರೌಂಡ ಜಿಂಡನ್ನು ಒಗೆಯುವದು. (೮) ಮೂರು ಕಾಲಿನ ಓಟ. (೯) ೮ ಪೌಂಡಿನ ಗುಂಡು ಒಗೆಯು ವದು. (ಹುಡುಗರಿಗಾಗಿ) (೧೦) ಬಟಾಟೆಯ ಓಟದ ಕಡ್ಡಾತ್ತು (೧೧) ನಿಂತಲ್ಲಿಯೇ ನೆಗೆಯುವದು.

(ಜ) ಕುಸ್ತಿಯಾಡುವದು (೧) ಎರಡೂ ಪವಿತ್ರಾ (ದೊನೊ ಬಾಜೂಕಾ)(೨) ಸಲಾಮಿ (ವಂಜೀ) (೩) ದಂಡಿ ಫಕೇಲ್ (೪) ಪೊಂಫೇಕಿ ಫಕೇಲ್.

(ಕ) ಮುಷ್ಟಿಯುದ್ಧ ಮತ್ತು ಈಸುವದು.
ಅನುಕೂಲತೆ ಇದ್ದಲ್ಲಿ ಈ ಚಟುವಟಿಕೆಗಳನ್ನು ಐಚ್ಛಿಕವಾಗಿ ಇಡಬಹುದು.

(ಲ) ಬೀಡು ಬಿಡುವದು.
೪ರಿಂದ ೬ ದಿವಸಗಳ ವರೆಗೆ ಒಂದೇ ಸವನೆ ಬೀಡು ಬಿಡುವದು.

ಸಾರ್ವಜನಿಕ ಶಿಕ್ಷಣ

[ಅಂತರ ರಾಷ್ಟ್ರೀಯ ಸಮ್ಮೇಲನದಲ್ಲಿ ಪಾಸಾದ ಗೊತ್ತುವಳಿಗಳು.]

ಕೈಬರಹದ ಕೆಲಸವು ಶಿಕ್ಷಣ ಕಾರ್ಯಕ್ರಮದ ಕೇವಲ ಒಂದು ಅಂಗವೆಂದು ಎಣಿಸಬಾರದು. ಅದೊಂದು ಮನೋಭಾವಗಳನ್ನು ವ್ಯಕ್ತಪಡಿಸುವ ಸಾಧನವಾಗಿದೆ. ಸುಂದರವಾಗಿಯೂ ವೇಗದಿಂದಲೂ ಬರೆಯುವದೊಂದು ವಿಶಿಷ್ಟ ಕಲೆಯೇ ಆಗಿದೆ. ಶೈಕ್ಷಣಿಕ ಮಾನಸಶಾಸ್ತ್ರ ಹಾಗು ಶೈಕ್ಷಣಿಕ ಪ್ರಯೋಗಗಳಲ್ಲಿ ಆಗಿರುವ ಪ್ರಗತಿಯನ್ನನು ಲಕ್ಷಿಸಿ, ಮಗುವಿನ ಬುದ್ಧಿ ಶಕ್ತಿಗನುಗುಣವಾದ ಕೈಬರಹವನ್ನು ಕಲಿಸುವ ಪದ್ಧತಿಗಳನ್ನು ಯೋಜಿಸುವದು ಅವಶ್ಯವೆನಿಸುವದು. ಬೇರೆ ಬೇರೆ ಭಾಷೆಗಳಲ್ಲಿನ ಬರೆಹದ ಪದ್ಧತಿ ಪಗಳನ್ನನುಲಕ್ಷಿಸಿ ಸಮ್ಮೇಲನವು ಕೆಳಗಿನ ಗೊತ್ತುವಳಿಗಳನ್ನು ಮಾನ್ಯಮಾಡಿದೆ.

(೧) ಶಾಲಾಧಿಕಾರಿಗಳು ಹಾಗು ಶಿಕ್ಷಣತಜ್ಞರು ಯಾವಾಗಲೂ ಕೈಬರಹವನ್ನು ಕಲಿಸುವವರಲ್ಲಿ ಕಂಡುಬರುವ ಪ್ರಗತಿಯ ಕಡೆಗೆ ವಿಶೇಷ ಲಕ್ಷ್ಯ ಕೊಡತಕ್ಕದ್ದು.

(೨) ಶಿಕ್ಷಕನು ಕಲಿಸುವ ಪದ್ಧತಿಗಳು ಅತ್ಯಾಧುನಿಕ ಶೈಕ್ಷಣಿಕ ಸಂಶೋಧನೆಗಳ ಮೇಲೆ ಅವಲಂಬಿಸಿರಬೇಕು.

(೩) ಅಕ್ಷರಗಳ ಆಕೃತಿಗಳನ್ನೂ ಬರಹದ ಪದ್ಧತಿಯನ್ನೂ ಕಲಿಸುವುದಕ್ಕಿಂತ ಮೊದಲು ಸಾಕಷ್ಟು ಹೆಚ್ಚು ಅವಧಿಯ ವರೆಗೆ ತಮ್ಮ ಕ್ರಿಯಾಶಕ್ತಿಯನ್ನು ಪ್ರಯೋಗಮಾಡಿಕೊಳ್ಳಲು ಅನುಕೂಲವಾಗುವಂತೆ ಮಕ್ಕಳನ್ನು ಜ್ಞಾನೇಂದ್ರಿಯ ಹಾಗು ಕರ್ಮೇಂದ್ರಿಯಗಳಿಗೆ ಸಂಬಂಧಿಸಿದ ಅನುಭವಗಳಲ್ಲಿ ತೊಡಗಿಸಬೇಕು.

(೪) ಆದುದರಿಂದ ಬರಹ ಕಲಿಸುವ ಕ್ರಮಬದ್ಧವಾದ ಪದ್ಧತಿಯನ್ನು ತೀರ ಎಳೆಯ ಮಕ್ಕಳಿಗೆ ಕಲಿಸಬಾರದು.

(೫) ಬರಹವು ಉತ್ಸುಕತೆಯಿಂದ ಕೂಡಿದ್ದೂ ಉಪಯುಕ್ತವೂ ಆಗಬೇಕಾದರೆ ಅದನ್ನು ವಾಚನದ ಸಂಗಡವೇ ಕಲಿಸಬೇಕು.

(೬) ಮಗುವಿನ ಗ್ರಹಣಶಕ್ತಿಗನುಸರಿಸಿ ಸಾದಾ ಅಕ್ಷರಾಕೃತಿಗಳಿಂದ ಕೂಡಿದ ಸ್ಪಷ್ಟವಾದ ಬರಹದ ಯೋಜನೆಯು ವಿಕಾಸವಾಗಬೇಕು.

(೭) ಅಕ್ಷರಾಕೃತಿಗಳು ಸುಂದರವಾಗಿರಬೇಕು.

(೮) ಮಕ್ಕಳ ಕೈಗಳು ಮೃದುವಾಗಿಸುವದರಿಂದ ಮೆತ್ತನ್ನ ಕುಂಚ, ಮೃದುವಾದ ಸೀಸುಗಳು, ಬಾಕಿನ ಮೊಂಡ ತುದಿ ಇವುಗಳನ್ನುಪಯೋಗಿಸಿಬೇಕು.

(೯) ಬರಹದ ಮೂಲ ಕಲ್ಪನೆಯು ಮಕ್ಕಳಿಗೆ ಆದ ನಂತರ ವೇಗದಿಂದ ಬರೆಯುವ ಪದ್ಧತಿಯನ್ನು ಕಲಿಸಬೇಕು. ಹೀಗೆ ಕಲಿಸುವಾಗ ಪ್ರತಿಯೊಂದು ಮಗುವು ತನ್ನ ವೈಯಕ್ತಿಕ ಬರವಣಿಗೆಯ ವೈಶಿಷ್ಟ್ಯವನ್ನು ವಿಕಾಸ ಪಡಿಸಿಕೊಳ್ಳಲು ಅವಕಾಶ ಕೊಡಬೇಕು.

(೧೦) ಕೈಬರಹವೇ ಅಂತಿಮ ಗುರಿಯಲ್ಲ. ಅದೊಂದು ಸಾಧನ ಮಾತ್ರ ಆವಾಗಿದೆಯೆಂದೂ ಬರಹದ ಕೆಲಸವನ್ನು ಮಾಡುವಾಗ ತಿಳಿಸಿಕೊಡಬೇಕು.

(೧೧) ಕೌಮಾರಾವಸ್ಥೆಯಲ್ಲಿ ೧೨ರಿಂದ ೧೫ ವರ್ಷಗಳ ಅವಧಿಯಲ್ಲಿ ಕೈಬರಹವು ಬದಲಾಗುವದು. ಆಗ ಮಕ್ಕಳ ವೈಯಕ್ತಿಕ ಅವಶ್ಯಕತೆಗಳಿಗೆ ಹೊಂದಿಕೆಯಾಗುವಂತೆ ತಜ್ಞರು ಬರಹವನ್ನು ತಿದ್ದಿ ಕಲಿಸಬೇಕು.

(೧೨) ಬರಹಕ್ಕಾಗಿ ಗುಣಗಳನ್ನು ಕೊಡುವ ರೂಢಿಯನ್ನಿಡಬೇಕು.

ಮೇಲೆ ಹೇಳಿರುವ ಗೊತ್ತುವಳಿಗಳ ಉದ್ದೇಶಗಳನ್ನು ಪ್ರಾಥಮಿಕ ಶಿಕ್ಷಕರು ಲಕ್ಷ್ಯದಲ್ಲಿಟ್ಟು ಮಕ್ಕಳ ಬರಹವನ್ನು ಲಕ್ಷ್ಯಪೂರ್ವಕವಾಗಿ ತಿದ್ದಿ ಮಾರ್ಗದರ್ಶನ ಮಾಡುವರೆಂದು ಆಶಿಸಲಾಗಿದೆ.

—ಹೆಣ್ಣು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜ, ಧಾರವಾಡ ಇವರಿಂದ

ನೂಲೋದ್ಯೋಗ ಅಲ್ಪಾವಧಿ ತರಬೇತಿ ವರ್ಗದ ವರದಿಯು.

ಅಟೆಂಡನ್ಸ ಆಫೀಸರ ಮತ್ತು ಅಸಿ. ಡಿ. ಎ. ಇ. ಅವರಿಗಾಗಿ.

ಈ ವರ್ಗವು ದಿನಾಂಕ ೧೫—೫—೧೯೫೦ ರಂದು ಮೈ. ಎ. ಇನಸ್ಪೆಕ್ಟರ ಸಾಹೇಬರವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟು ಆರಂಭವಾಯಿತು. ಕರ್ನಾಟಕದ ನಾಲ್ಕೂ ಜಿಲ್ಲೆಗಳಿಂದ ಆರಿಸಲ್ಪಟ್ಟ ಶಿಕ್ಷಣಾರ್ಥಿಗಳೆಲ್ಲರು ಹಾಜರ ಇದ್ದರು. ವರ್ಗದಲ್ಲಿ ೩೮ ಜನರಿದ್ದರು. ವಿವರ ಕೆಳಗಿನಂತಿದೆ.

	ಅಟೆ. ಆಫೀಸರ	ಅಸಿ. ಡಿ. ಎ. ಇ.	ಅಂತು
ಧಾರವಾಡ ಜಿಲ್ಲೆಯಿಂದ	೨೦	೫	೨೫
ಬೆಳಗಾಂವ ,,	—	೪	೪
ವಿಜಾಪುರ ,,	—	೪	೪
ಉತ್ತರ ಕನ್ನಡ ,,	೩	೨	೫
ಒಟ್ಟು	೨೩	೧೫	೩೮

ಈ ವರ್ಗದಲ್ಲಿ ಮುಖ್ಯವಾಗಿ ನೂಲುವದು, ನೇಯುವದು, ರಿಟ್ಟನಕೆಲಸ, ಕೈತೋಟ, ಶಾಲೆಯ ಬಗ್ಗೆಯಲ್ಲಿ ಹೊಸ ದೃಷ್ಟಿ ಮತ್ತು ಜೀವನ ಶಿಕ್ಷಣದ ತತ್ವಗಳು ಮುಂತಾದ ವಿಷಯಗಳ ಪರಿಚಯ ಮಾಡಿಸಲಾಯಿತು.

ವರ್ಗದ ಕೆಲಸವು ಸುಗಮವಾಗಿ ನಾಗಲು ಮಂತ್ರಿಮಂಡಳ ರಚಿಸಿ ಅವರ ಮುಖಾಂತರ ವರ್ಗದ ಕಾರ್ಯಕಲಾಪಗಳನ್ನು ನಾಗಿಸಲಾಯಿತು.

ಜೀವನ ಶಿಕ್ಷಣ ತತ್ವಾನುಸಾರವಾಗಿ ನಮ್ಮ ದೈನಂದಿನ ಕಾರ್ಯಕ್ರಮವು ವಸತಿಯ ಕೋಣೆಯ ವರ್ಗದ ಸ್ವಚ್ಛತೆಯಿಂದ ಪ್ರಾರಂಭವಾಗುತ್ತಿತ್ತು. ನಂತರ ಪ್ರಾರ್ಥನೆಯು ಪ್ರಾರಂಭವಾಗುತ್ತಿತ್ತು. ಯಾವ ಭೇದಭಾವವಿಲ್ಲದೆ ಎಲ್ಲರೂ ಒಂದಾಗಿ ಭಾಗವಹಿಸುತ್ತಿದ್ದರು. ಪ್ರಾರ್ಥನೆಯಲ್ಲಿ ಉಪನಿಷತ್ ಶ್ಲೋಕವಲ್ಲದೆ ಕುರಾನ ಬೈಬಲ್ ಬಾಯಬಲ್ಲುಗಳಲ್ಲಿಯ ಮಹಾವಾಕ್ಯಗಳ ಪಾಠನವಾಗುತ್ತಿತ್ತು. ಪ್ರತಿದಿನ ಮೂಲೋದ್ಯೋಗಕ್ಕೆ ಲಭ್ಯವಿರುವ ಇಡಲಾಗಿದ್ದು ಸುಮಾರು ೧ತಾಸು ಜೀವನ ಶಿಕ್ಷಣದ ತಾತ್ವಿಕ ವಿಚಾರಕ್ಕಾಗಿ ಇಡಲ್ಪಟ್ಟಿತ್ತು. ಇದರಲ್ಲಿ ಎಸ್. ಕಾ.ದ ಅಧ್ಯಾಪಕರು ಭಾಗವಹಿಸಿದರು. ಜೀವನ ಶಿಕ್ಷಣದ ಬಗೆಗೆ ಸರಾಸರಿ ೩೦ ಚರ್ಚೆಗಳಾದವು. ಯಾವ ತಪಾಸಣೆಯ ಬಗೆಗೆ ೧೫ಉಪನ್ಯಾಸಗಳಾಗಿ ಅದರಲ್ಲಿ ೨. ಪ್ರಾಯೋಗಿಕವಾದವು. ಈ ವಿಷಯವನ್ನು ತಜ್ಞರೂ ಅನುಭವಿಕರೂ ಆದ ಡಾ. ಚಿಕ್ಕಮನಿ, ಶ್ರೀ. ರಾ. ರಾ. ಕುಪ್ಪಸದ (ಎ. ಓ. ಡಿ. ಎಸ್. ಬಿ. ಧಾರವಾಡ) ಮತ್ತು ಶ್ರೀ. ಥಿಟೆಬಾಯಿಯವರು ಬೋಧಿಸಿದರು. ನೂಲುವದು, ನೇಯುವದು ಹಾಗೂ ಇತರ ಕೆಲಸಗಳಲ್ಲಿ ಪ್ರಾಯೋಗಿಕ ಕೃತಿಗಳೇ ಹೆಚ್ಚಾಗಿ ತಾತ್ವಿಕ ಜ್ಞಾನವು ೬೦ ತಾಸುಗಳಲ್ಲಿ ವಿವರಿಸಲ್ಪಟ್ಟಿತು. ಹೊರಗಿನ ೧೫ ವಾಖ್ಯಾನಗಳು ಜರುಗಿದವು. ವರ್ಗದಲ್ಲಿ ಕೈಕೊಂಡ ಇತರ ಚಟುವಟಿಕೆಗಳು:—

ಪ್ರವಾಸ ಸ್ಥಳ

೧) ಆಕಾಶವಾಣಿ ಕೇಂದ್ರ, ಧಾರವಾಡ
೨) ಕ್ಯಾರಕೊಪ್ಪ

ನಿರೀಕ್ಷಿಸಿದ ಸಂಗತಿ

ಧ್ವನಿಮುದ್ರಣ ಹಾಗು ವಿತರಣ ಇತ್ಯಾದಿ ಕಾರ್ಯಗಳು.
೧. ಒಬ್ಬ ಶಿಕ್ಷಕನಿದ್ದ ಶಾಲೆಯ ನಿರೀಕ್ಷಣೆ
೨. ಹಳ್ಳಿಯ ಆರೋಗ್ಯ.
೩. ಕುಡಿಯುವ ನೀರಿನ ಸ್ವಚ್ಛತೆ.

		೪. ಸಫಾಯಿ ಕೆಲಸ.
		೫. ಹಳ್ಳಿಯ ಪೋಜಣೆ.
		೬ ಹಳ್ಳಿಗರೊಡನೆ ಮಾತುಕಥೆ.
೩)	ಮುಗಪ	೧. ಸಾಂಘಿಕ ಜೀವನದ ಕಾರ್ಯಕ್ರಮ.
		೨. ಮುಗಪ ಗ. ಘಾರ್ಮಿನ ನಿರೀಕ್ಷಣೆ ಅಲ್ಲಿ ನಡೆದ ಸಂಶೋಧನ.
		೩. ಶಾಲೆಯ ನಂದರ್ಶನ.
		೪. ಗ್ರಾಮೋದ್ಯೋಗಗಳು.
೪)	ಹುಬ್ಬಳ್ಳಿ	೧. ವರ್ಕ್‌ಶಾಪ್ ಕೆಲಸದ ನಿರೀಕ್ಷಣೆ.
		೨. ಭಾರತಮಿಲ್ಸ್. ಹತ್ತಿಯಿಂದ ಅರಿವೆ ತಯಾರಿಕೆ ವರೆಗೆ.
೫)	ಗೋಪನಕೊಪ್ಪ	ಅಲ್ಪಾವಧಿ ತರಬೇತಿ ಕೇಂದ್ರಕ್ಕೆ ಭೆಟ್ಟಿ.
೬)	ಕನ್ನಡ ಸಂಶೋಧನ ಕಾರ್ಯಾಲಯ	ಕರ್ನಾಟಕ ಶಿಲ್ಪಕಲೆಯ ಹಾಗು ಐತಿಹಾಸಿಕ ವಸ್ತು ಸಂಗ್ರಾಲಯ.
೭)	ಧಾರವಾಡ ಗ. ಅ. ಘಾರ್ಮ.	(i) ಕೋಳೀ ಸಂಗೋಪನ ಕೇಂದ್ರ
		(ii) ಹತ್ತಿ ಸಂಶೋಧನ ಕೇಂದ್ರ
		(iii) ನರ್ಸರಿ.
		(iv) ಸುಧಾರಿಸಿದ ಬೆಳೆಗಳು.
		(v) ಗಳೇಸಾಮಾನುಗಳು.
೮)	ಶೇತಕಿ ಕಾಲೇಜ, ಯತ್ತಿನಗುಡ್ಡ	(i) ಡೇರಿ
		(ii) ಮುಂಬೈ ರಾಜ್ಯದಲ್ಲಿ ಪ್ರಚಲಿತವಿರುವ ಸುಧಾರಿಸಿದ ಗಳೇಸಾಮಾನುಗಳು.
		(iii) ವನಸ್ಪತಿಗಳ ಕ್ರಿಮಿಕೀಟಕಗಳು ಹಾಗು ರೋಗಾದಿಗಳು ಮತ್ತು ಪ್ರತಿಬಂಧಕೋಪಾಯ. ಗಳು.
		(iv) ವಸ್ತು ಸಂಗ್ರಹಾಲಯ
		(v) ಹಣ್ಣು ಹಂಪಲಗಳನ್ನು ಸಂಗ್ರಹಿಸುವ ರೀತಿ
		(vi) ರೇಶಿಮೆ ಹುಳಗಳ ಸಂಗೋಪನ.

ನಾವು ಆಚರಿಸಿದ ಹಬ್ಬ, ಜಯಂತಿ ಮತ್ತು ಪುಣ್ಯತಿಥಿ ಇತ್ಯಾದಿಗಳು:—

ದಿನ	ಅತಿಥಿಗಳು.	ವಿಷಯ.
೧ ರಮಜಾನ	ಶ್ರೀ. ಎ. ಎಸ್. ಡಿ. ಪಠಾಣ.	ರಮಜಾನ ಮಹತ್ವ.
೨. ಆಷಾಢ ಏಕಾದಶಿ	ಶ್ರೀ. ಹ. ಗ. ಜೋಶಿ	ಏಕಾದಶಿ ಮಹತ್ವ
೩. ಲೋಕಮಾನ್ಯ ಟಿಳಕ ಪುಣ್ಯತಿಥಿ	ಶ್ರೀ. ಶಂ. ಬಾ. ಜೋಶಿ	ಟಿಳಕರು ಭಾರತಕ್ಕೆ ಕೊಟ್ಟ ಸಂದೇಶ
	ಶ್ರೀ. ವ್ಹಿ. ಬಿ. ನಾಯಕ	ಸ್ವಾತಂತ್ರ್ಯ ರಕ್ಷಣೆ ದಿನದ ಮಹತ್ವ
೪.	ಕವಿವರ್ಯ ರವೀಂದ್ರರ ಜಯಂತಿ.	

ಮೂಲೋದ್ಯೋಗ ಅಲ್ಪಾವಧಿ ತರಬೇತಿ ವರ್ಗದ ವರದಿಯು

೧. ಶ್ರೀ. ನಾರಾಯಣ ಸಂಗಮ. ಶಾಂತಿನಿಕೇತನ
೨. ,, ಬಡಿಗೇರ ರವೀಂದ್ರರ ಕಲಾಕೌಶಲ್ಯ
೩. ,, ನರೇಗಲ್ಲ ಪ್ರಲ್ಹಾದರಾಯರು ರವೀಂದ್ರರ ಕವನಸ್ಫೂರ್ತಿ.

೫. ನಾಗಜ್ಯೋತಿ ಶ್ರೀ. ಎಮ್. ಜಿ. ಕಟ್ಟಿ ಶಿಕ್ಷಣದಲ್ಲಿ ಹೆಬ್ಬಗಳ ಸ್ಥಾನ, ನಾಗಜ್ಯೋತಿಯ ಮಹತ್ವ.

೬. ಸ್ವಾತಂತ್ರ್ಯ ದಿನಾಚರಣೆ. ಸ್ಪೆ. ಧಾರವಾಡಕರ ಸ್ವತಂತ್ರಭಾರತ ನಾಗರಿಕನ ಹೊಣೆ.
ವಾನ್ಯ. ಮುಖ್ಯಮಂತ್ರಿ ಪಂ. ಜವಾಹಿರಲಾಲನೆಹರು
ಅಧ್ಯಕ್ಷ. ಶ್ರೀ. ಬಾಬುರಾಜೇಂದ್ರ ಪ್ರಸಾದ ಇವರ ಭಾವ ಚಿತ್ರ ಅನಾವರಣ ಸಮಾರಂಭ.

ಈ ಪ್ರಸಂಗಗಳಲ್ಲಿ ತರಬೇತಿಹೊಂದಲು ಬಂದ ಶಿಕ್ಷಣಾಧಿಕಾರಿಗಳಿಗೆ ಭಾಗವಹಿಸಲು ಅನುವು ಮಾಡಿಕೊಟ್ಟಿತ್ತು.

ಭಾರತದ ಸಂಸ್ಕೃತಿಯು ಹೊಲಸಾಗಿ ಬೆಳೆಯಲು ಜೀವನ ಶಿಕ್ಷಣವು ಸಹಾಯಕವೋ ? ಬೌದ್ಧಿಕ ಶಿಕ್ಷಣವು ಸಹಾಯಕವೋ ? ಎಂಬ ವಿಷಯದ ಚರ್ಚಾಕೂಟವನ್ನೇರ್ಪಡಿಸಲಾಗಿತ್ತು. ವರ್ಗದಲ್ಲಿಯ ಬಹು ಜನರು ಭಾಗವಹಿಸಿ ತಮ್ಮ ತಮ್ಮ ವಿಚಾರಗಳನ್ನು ಸುಂದರವಾಗಿ ಉತ್ಸಾಹದಿಂದ ಸಮರ್ಥಿಸಿದರು.

ಇವರ ಹೊರತಾಗಿ ಶಿಕ್ಷಣತಜ್ಞರ ಹಾಗು ಅನುಭವಿಕರ ಕೆಲವು ವ್ಯಾಖ್ಯಾನಗಳನ್ನೂ ಏರ್ಪಡಿಸಲಾಗಿತ್ತು.

೧. ಶ್ರೀ. ಕ. ಬಿ. ತೆರಗಾವಕರ ಪ್ರಿನ್ಸಿಪಾಲ ಜಿ. ಬಿ. ಟಿ. ಸಿ. ಧಾರವಾಡ ಶಾಲೆಯ ಹವಾಸಗೆಯಲ್ಲಿ ಬಾಲಾಧಿಕಾರಿಯ ದೃಷ್ಟಿ.
೨. ಶ್ರೀ. ಎನ್. ಬಿ ನಾಡಿಗೇರ ರಿ. ಎ. ಓ. ಹಳ್ಳಿಯ ಆರೋಗ್ಯ ಹಾಗು ಶಿಕ್ಷಣಾಧಿಕಾರಿಗಳ ಹೊಣೆ
೩. ಡಾ. ಶಾಮರಾವ ಚಿತ್ರಗಾರ ಸಿಸರ್ಗ ಚಿಕಿತ್ಸೆ
೪ ಶ್ರೀ. ಪಂಡಿತ. ಚ. ಎ. ಕವಲಿ ಶಿಕ್ಷಕರ ಹಕ್ಕು-ಹೊಣೆಗಾರಿಕೆಗಳು
೫. ಶ್ರೀ. ಎಸ್. ಎಚ್. ವಾಟೇಲ ಮಹರ್ಷಿ ಅರವಿಂದಾಶ್ರಮದ ಕಾರ್ಯಕಲಾಪಗಳು.

ಶ್ರೀ. ಹೋತ್ಸೆ ಕಾರ್ಯದರ್ಶಿ ಅಖಿಲ ಭಾರತ ಚರಕಾ ಸಂಘ
ಶ್ರೀ. ಬಿ. ಮ್. ಮಿಮೋಂಸೆ ಎ. ಇ. ಧಾರವಾಡ
ಮಿ. ಡಿ. ಸಿ. ವಾಲಜಿ ಡಿ. ಓ. ಆಯ್.

ಮಾನ್ಯ ಜೆ. ಎಚ್. ವಾಟೇಲ ಪ್ರಾನ್ಸಿಸೆಂಟರ ಸೆಕ್ರೆಟರಿ ಮುಂಬಯಿ ಸಂಸ್ಥಾನ.

ಈ ಮಹನೀಯರು ನಮ್ಮ ಶಿಕ್ಷಣ ಕ್ರಮಂಪ್ರತಿ ಸಂದರ್ಶನವನ್ನಿತ್ತು ಇಡೀ ಕಾರ್ಯದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು.

ಜೀವನ ಶಿಕ್ಷಣದ ವೈವಿಧ್ಯಪೂರ್ಣವಾದ ಸನ್ನಿವೇಶವನ್ನು ಸೃಷ್ಟಿಸಿ ನಾಲ್ಕು ಮೂರಾರಿಯ ನಾಟಕಗಳನ್ನು ಏರ್ಪಡಿಸಲಾಗಿತ್ತು.

ರಂಗಿನ ಕೆಲಸವನ್ನು ಒಟ್ಟು ೩೦ ಜನ ಮಾಡಿದ್ದಾರೆ. ಪ್ರತಿಯೊಂದು ನಾಟಕಕ್ಕೆ ಬೇಕಾದಷ್ಟು ವಸ್ತುಗಳನ್ನು ತಯಾರಿಸಿದ್ದರು. ಸರಾಸರಿ ಬೆಲೆ

೧. ವಾಕೇಟು ಸಣ್ಣದು } ರೂ. ೫. ೦
೨. ವಾಕೇಟು ದೊಡ್ಡದು } ೧೦-೦-೦

೩.	ಎಳ್ಳಿನ ಬುಟ್ಟಿ	೦—೦—೩
೪.	ಬ್ಲಾಟಿಂಗ ಪ್ಯಾಡ್	೦—೯—೦
೫.	ಫೋಟೋ-ಫ್ರೇಮು	೦—೯—೬
೬.	ವಿದ್ಯಾರ್ಥಿಗಳ ಫೈಲ್	೦—೯—೦
೭.	ಬೀಸಣಿಕೆ	೦—೫—೦
೮.	ತಕಲಿ ವೆಟ್ಟಿಗೆ	೦—೭—೦
೯.	ಅಂಜು ಹೊರಗೆ ಹಾಯ್ದ ಪೆಟ್ಟಿಗೆ	೦—೬—೬
೧೦.	ಪುಸ್ತಕದ ಆಕಾರದ ಪೆಟ್ಟಿಗೆ	೦—೭—೫
	ಅಂತು	೫—೪—೦

ನೂಲುವದು:—ಕೆಲಸ ನಡೆದ ವೇಳೆ ೧೪೪ ತಾಸು.

ಉಪಯೋಗಿಸಿದ ಹತ್ತಿ	೧೪೭೬ಪೌಂಡು	ರೂ. ಆ. ಪೈ.
ಹಂಜಿ	೧೩ಪೌಂಡು ೧೭ತೊಲೆ	೭೦—೦—೦ ಬೆಲೆ.

ನೂಲಿನ ಹುಟ್ಟುವಳಿ ವಿವರ:—

ಸಾಧನ	ತೂಕ ಪೌ.	ತೊಲೆ	ಅಳತೆ ಗುಂಡಿ	ನಂಬರು	ವೇಗ (೧ತಾಸು)
ತಕಲಿ	೭	೩೬	೧೦೧೪	೧೪	೧೦೦
ರಾಟೆ	೨೫	೩೪	೪೪೧೪	೧೪	೭೪೦
ಧನುಷ್ ತಕಲಿ	೬	೦	೪೨೪	೧೪	೨೨೦
ಒಟ್ಟು	೩೯	೩೧	೫೨೫೪	೧೪	೨೦೦

	ರೂ. ಆ. ಪೈ.	ತೂಕ ಪೌ. ತೊ.
ನೂಲಿನಒಟ್ಟು ಬೆಲೆ	೧೧೫—೦—೦	೩೯—೩೧
ಕಾಳು	೧೬—೫—೦	೧೩೦—೨೨
ಹಾಳು	೦—೧೦—೦	೧೪—೨೨½
ಒಟ್ಟು	೧೩೧—೧೫—೦	

ನೇಯ್ಗೆಯ ಕೆಲಸವು ೧೫೦ತಾಸು ನಡೆದಿದೆ. ಪ್ರತಿಯೊಬ್ಬರು ಒಂದು ಆಸನ ಒಂದು ಟುವೆಲ್, ನವಾರಪಟ್ಟಿ ಹಾಗು ಕೆಲವು ಶರಟಿಂಗ ಅರಿವೆ ನೇಯ್ದಿರುವರು.

		ಸಂಖ್ಯೆ	ಅಳತೆ	ಪೇಟೆಯ ಬೆಲೆ ರೂ. ಆ. ಪೈ.
೧.	ಆಸನ (ಬಣ್ಣದ್ದು)	೩೯	೧೪"×೧೪"	೫೧—೦ - ೦
೨.	ಟೂವೆಲ್	೨೪	೨೭"×೪೫" ೩೮"×೨೨"	೩೦—೦— ೦
೩.	ಶರಟಿಂಗ ಅರಿವೆ		೬ಯಾರ್ಡು	೯—೧೦ —೮
೪.	ನವಾರ ಪಟ್ಟಿ		೧೦ಯಾರ್ಡು	೧—೪—೦
			ಒಟ್ಟು	೧೧—೧೪—೦

ನೇಯ್ಗೆಯ ಪೂರ್ವ ಚಟುವಟಿಕೆಗಳಾದ ೧) ತೋಡುವದು. ೨) ಹುರಿಹಾಕುವದು. ೩) ಹಲಸು ಹೊಯ್ಯುವದು. ೪) ಉಂಕಿ ಮಾಡುವದು. ೫) ಭರಣಾಮಾಡುವದು. ೬) ಕೆಚ್ಚುವದು ಮುಂತಾದವುಗಳಲ್ಲಿ ಸಾಕಷ್ಟು ತರಬೇತಿ ಆಗುವಂತೆ ಪ್ರತಿಯೊಬ್ಬರಿಂದ ಮಾಡಿಸಿದೆ.

ಕೊನೆಯದಾಗಿ ಪ್ರೊ. ಬಸವನಾಳರವರ ಹಿರಿಯತನದಲ್ಲಿ ಮುಕ್ತಾಯ ಸಮಾರಂಭವು ಜರುಗಿ ಯಶಸ್ವಿಯಾಗಿ ಈ ತರಬೇತಿ ವರ್ಗದ ಕಾರ್ಯವು ಪೂರ್ಣವಾಯಿತು.

ತರಬೇತಿ ಹೊಂದಲು ಬಂದವರು ವಯಸ್ಸಾದವರಿದ್ದರೂ ಶ್ರಮದ ಕೆಲಸವನ್ನು ಅತ್ಯಂತ ಉತ್ಸುಕತೆಯಿಂದಲೂ ಆಸ್ಥೆಯಿಂದಲೂ ಮಾಡಿ ಶಿಕ್ಷಣಕ್ರಮವನ್ನು ಸಮಾಧಾನಕರವಾಗಿ ಪೂರ್ತಿಗೊಳಿಸಿದರೆಂದು ಹೇಳಲು ನನಗೆ ತುಂಬಾ ಆನಂದವಾಗುತ್ತದೆ. ಮತ್ತು ನಾನು ಅವರನ್ನು ಪೃತ್ಯೂರ್ಕಿ ಅಭಿನಂದಿಸುತ್ತೇನೆ.

ನನ್ನ ಈ ಎಲ್ಲ ಕೆಲಸಗಳಲ್ಲಿ ಸಕಾಲಕ್ಕೆ ಸಲಹೆ ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನಮಾಡಿ ಈ ತರಬೇತಿವರ್ಗದ ಶಿಕ್ಷಣವನ್ನು ಪೂರ್ಣಮಾಡಿದ್ದಕ್ಕೆ ನಾನು ಶ್ರೀ. ಆರ್. ವ್ಹಿ. ದೇಸಾಯಿ ಪ್ರಿನ್ಸಿಪಾಲ ಟ್ರೈ. ಕಾ. ಧಾರವಾಡ) ಅವರಿಗೆ ತುಂಬಾ ಋಣಿಯಾಗಿದ್ದೇನೆ.

ಸಮಯಕ್ಕೆ ತಕ್ಕಂತೆ ಮೇಲಿಂದ ಮೇಲೆ ಸಹಾಯ ಸಲಹೆಗಳನ್ನೀಡಿದ ಟ್ರೈ. ಕಾ. ಕಾಲೇಜದ ಅಧ್ಯಾಪಕವರ್ಗಕ್ಕೂ ಮಾದರಿಯ ಪಾಠಗಳನ್ನು ಕೊಟ್ಟ ಪ್ರಾಕ್ಟಿಸಿಂಗ ಸ್ಕೂಲ ಶಿಕ್ಷಕ ಬಳಗಕ್ಕೂ ಸಹಾಯ ನನ್ನಿತ್ತ ಇತರರಿಗೂ ಹಾಗು ಮುಕ್ತಾಯ ಸಮಾರಂಭದ ಅಧ್ಯಕ್ಷತೆಯ ವಹಿಸಿದ ಪ್ರೊ. ಬಸವನಾಳರಿಗೂ ನನ್ನ ಧನ್ಯವಾದಗಳನ್ನರ್ಪಿಸಿ ಈವರದಿಯನ್ನು ಮುಗಿಯಿಸುತ್ತೇನೆ.

— ಜೈ-ಹಿಂದ — —ಹೆಲ್ಗೇಕರ

ಗಾಂವಠಿ ಶಾಲಾ ಮೆನೇಜರರಿಗೆ.

ಕಾರವಾರ: ೨೩—೮—೫೦. ಸರಕಾರೀ ಠರಾವು ನಂ. G. R. E. D. No. 669 ತಾರೀಖು 16-3-1950ನೇದರ ಪ್ರಕಾರ ಗಾಂವಠಿ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿರುವ ಪ್ರಾಥಮಿಕ ಶಾಲಾ ಪ್ರಮಾಣಪತ್ರ (ಮುಲ್ಕೀ) ಪರೀಕ್ಷೆಯಲ್ಲಿ ಪಾಸಾಗದೇ ಇರುವ ಶಿಕ್ಷಕರಿಗೆ ಸದರೀ ಪರೀಕ್ಷೆಯಲ್ಲಿ ಪಾಸಾಗುವ ಬಗ್ಗೆ ಜೂನ ೧೯೫೨ನೇ ಇಸ್ವಿಯ ವರೆಗೆ ಮುದ್ದತ್ತು ಕೊಡಲಾಗಿದೆ. ಇಂತಹ ಶಿಕ್ಷಕರಿಗೆ ಪರೀಕ್ಷೆಗೆ ಕೂಡ್ರಲು ವಯೋನಿರ್ಬಂಧವಿರುವದಿಲ್ಲ. ಕಾರಣ, ಸದರೀ ಪರೀಕ್ಷೆಯಲ್ಲಿ ಪಾಸಾಗದೇ ಇರುವ ಶಿಕ್ಷಕರಿಗೆ ಮಾಫೀ ಸರ್ಟಿಫಿಕೇಟನ್ನು ಮಂಜೂರ ಮಾಡುವದನ್ನು ರದ್ದುಮಾಡಲಾಗಿದೆ.

ಈ ಸಂಗತಿಯನ್ನು ನಿಮ್ಮ ಶಾಲೆಯಲ್ಲಿ ಸದರಿ ಪರೀಕ್ಷೆಯಲ್ಲಿ ತೇರ್ಗಡೆ ಆಗದೇ ಶಿಕ್ಷಕರಾಗಿ ಮುಂದುವರಿಯುತ್ತಿರುವ ಎಲ್ಲ ಶಿಕ್ಷಕರಿಗೆ ತಿಳಿಸತಕ್ಕದ್ದು.

(ಸಹಿ) **ಪಿ. ಎ. ಗುಡಿಸಾಗರ**
ಎ. ಓ. ಡಿ. ಎಸ್. ಪಿ. ಕಾರವಾರ.

ಯೂನಿವರ್ಸಲ್ ಗಾಂವಠಿ ಶಾಲಾ ಮೆನೇಜರರಿಗೆ

ಎಡ್ಮಿನಿಸ್ಟ್ರೇಟಿವ್ ಆಫೀಸರ್ ಡಿ. ಸ್ಕೂಲ ಬೋರ್ಡ ಕಾನಡಾ ಅವರು ಹೀಗೆ ತಿಳಿಸುತ್ತಾರೆ:—

ಕಾರವಾರ ೨೩—೮—೧೯೫೦ ಹೊಸದಾಗಿ ತೆರೆದ ಗಾಂವಠಿ ಶಾಲೆಗಳಿಗೆ ಆದೇವರ್ಷ ಬೋರ್ಡಿನ ಕಾಗೂ ಸರಕಾರದ ಮಾನ್ಯತೆ ಸಿಗಬೇಕಾಗಿದ್ದಲ್ಲಿ ಅವನ್ನು ಸಪ್ಟಂಬರ ೧೯೫೦ ತಾರೀಖಿನ ಮೊದಲು ಕನಿಷ್ಟ ಪಕ್ಷ ತಿಂಗಳು ಸರಿಯಾಗಿ ಶಾಲೆ ನಡೆದದ್ದು ಇರಬೇಕು. ಶಾಲಾ ವರ್ಷವು ಮಾರ್ಚ ೧೯೫೦ ತಾರೀಖಿನಿಂದ ಪ್ರಾರಂಭವಾಗುವದರಿಂದ ಜೂನ ೧೯೫೦ ತಾರೀಖಿಗೆ ಅಥವಾ ಅವರ ನಂತರ ತೆರೆದ ಹೊಸ ಶಾಲೆಗಳಿಗೆ ಆ ವರ್ಷ ಸರಕಾರದ ಮಾನ್ಯತೆ ಮೊರೆಯಲಾರದು. ಸರಕಾರದ ಮಾನ್ಯತೆ ಬಗ್ಗೆ ಅರ್ಜಿ ಮಾಡುವವರು ಸಪ್ಟಂಬರ ೧೯೫೦ ತಾರೀಖಿ ಒಳಗಾಗಿ ಮೆ|| ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಕಾನಡಾರವರಿಗೆ ನಿರ್ದಿಷ್ಟ ಪಡಿಸಿದ ಅರ್ಜಿಯ ನಮೂನೆಯಲ್ಲಿ ಅರ್ಜಿ ಮುಟ್ಟುವಂತೆ ಕಳಿಸಬೇಕು. ಈ ಹುಕುಮ್ ೧೯೫೦ನೇ ಇಸ್ವಿಯಿಂದ ಅಮಲಿನಲ್ಲಿ ಬರುವದು.

ಕಾವ್ಯಗಾಯನ ಕಾರ್ಯಕ್ರಮ

ಧಾರವಾಡ ದಿನಾಂಕ ೨೭–೭ ೫೦. ಇಂದು ಉತ್ತರಾಹ್ನ ೪ ಘಂಟೆಗೆ ಸರಕಾರಿ ಟ್ರೇನಿಂಗ ಕಾಲೇ ಜದ ಜನರಲ್ ಹಾಲಿನಲ್ಲಿ ಶ್ರೀ. ಆ. ನೀ. ಹುಲೆಪ್ಪನವರ ಅಧ್ಯಕ್ಷತೆಯಲ್ಲಿ ಕಾವ್ಯಗಾಯನದ ಸಭೆ ಸೇರಿದ್ದಿತ ಕಾಲೇಜದ ಅಧ್ಯಾಪಕ ವರ್ಗವೂ ಶಿಕ್ಷಕ-ವಿದ್ಯಾರ್ಥಿಗಳೂ ಭಾಗಿಗಳಾಗಿದ್ದರು. ' ಎನಗಿಂತ ಕಿರಿಯರಿಲ್ಲ', ಎಂದ ಅಧ್ಯಕ್ಷರು ವಚನವನ್ನು ಹಾಡಿದ ಮೇಲೆ ಗಾಯನ ಶಿಕ್ಷಕರಾದ ಶ್ರೀ. ಜಹಗೀರದಾರ ಅವರು, ' ಭೃಂಗ', ' ಕವನವನ್ನು ಉತ್ತಮವಾಗಿ ಹಾಡಿದರು. ಶ್ರೀ. ವೀರೇಶ ಹಿರೇಮಠ ಅವರು ಬೇಂದ್ರೆ ಅವರ ಕವನವನ್ನೂ ಶ್ರೀ ಹ. ಗ. ಜೋಶಿ ಅವರು ಮೇಘದೂತದ ಕವನವನ್ನು ಹೇಳಿದರು. ಶ್ರೀ. ಗುರುನಾಥ ಜೋಶಿ ಅವರು. ಕಿ ಯೊಬ್ಬ ಸರದಾರ ಮಾರುವವ; ಅವನ ಸರದಾರಿಯೆಂದರೆ ಕಲ್ಪನೆ. ನಾವೆಲ್ಲ ಅದನ್ನು ಕೊಳ್ಳುವವರು. ಎಂಬ ಭಾ ವುಳ್ಳ ಹಿಂದೀಯಲ್ಲಿಯ ಒಂದು ಪದ್ಯ ರಸಭರಿತವಾಗಿ ಅಂದು ತೋರಿಸಿದರು. ಶ್ರೀ. ಪಾಟೀಲ, ಶ್ರೀ. ಕುಲಕರ್ ಗುರೂಜಿಗಳೂ ಪದ್ಯ ಹೇಳಿದರು. ಒಟ್ಟಿನಲ್ಲಿ ಸಭೆಯು ಸೌಂದರ್ಯ ಗಾಂಭೀರ್ಯಗಳ ಸೂಚಕವಾಗಿತ್ತು. ಕೊನೆ ' ಯಶವನ್ನು ದಯಪಾಲಿಸು', ಎಂದು ಪರಮಾತ್ಮನನ್ನು ಪ್ರಾರ್ಥಿಸಿದ ಒಂದು ಪದವನ್ನು ಅಧ್ಯಕ್ಷರು ಹೇಳಿದರ ಸಭೆಯು ವಿಸರ್ಜಿಸಿತು.

ಧಾರವಾಡ ದಿನಾಂಕ ೨೮ ೭–೩೦. ಇಂದು ಸಂಜೆಯ ೬–೩೦ರಿಂದ ಸರಕಾರಿ ಟ್ರೇನಿಂಗ ಕಾಲೇ ಜದ ಜನರಲ್ ಹಾಲಿನಲ್ಲಿ ಶ್ರೀಮಾನ್ ಪ್ರಿನ್ಸಿಪಾಲ್ ರಾ. ವಿ. ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ಜೀವನ ಶಿಕ್ಷಣ, ಬೌದ್ಧಿಕ ಶಿಕ್ಷಣ. ಇವರ ಬಗ್ಗೆ ಚರ್ಚಾಕೂಟವನ್ನೇರ್ಪಡಿಸಲಾಗಿತ್ತು ಶಿಕ್ಷಕ-ವಿದ್ಯಾರ್ಥಿಗಳು, ಪ್ರಾಧ್ಯಾ ಕರೂ, ಆ. ಡೆ. ಗಳವರೂ, ಭಾಗವಹಿಸಿದ್ದರು. ಉಭಯಪಕ್ಷೀಯರು, ಒಳ್ಳೆಯ ತುರಸಿನಿಂದ ಸ್ಪರ್ಧಿಸಿದರು ಕೊನೆಗೆ ತಮ್ಮ ಅರ್ಧಶತಸಂವತ್ಸರಗಳ ಅನುಭವದ ಅಮೋಘವಾದ ವಾಣಿಯಿಂದ ಶ್ರೀ. ಪ್ರಿನ್ಸಿಪಾಲ ಅವರು ಬುದ್ಧಿ–ಜೀವನ ಶಿಕ್ಷಣಗಳ ಸಮನ್ವಯತೆಯನ್ನು ಬೋಧಿಸಿದನಂತರ ಪಂದೇ ಮಾತರಂ ಗೀತೆಯಾಗಿ ಸ ಮುಕ್ತಾಯಗೊಂಡಿತು.

ಪುಟಗಳು ೨೨೫] ನೈನೂಲು [ಬೆಲೆ ರೂ. ೨—೪—೦

ಲೇಖಕರು : ಎಮ್. ಡಿ. ಮೋಲಗಿರಿ

(ಮೂಲೋದ್ಯೋಗ ಶಿಕ್ಷಕ, ಕ. ಗಂ. ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ)

ಈ ಪುಸ್ತಕದಲ್ಲಿ ಪ್ರೌ. ಶಾಲೆಗಳ ಎಲ್ಲ ವರ್ಗಗಳ ಹಾಗೂ ಟ್ರೇ. ಕಾ. ಗಳ ೧ನೆಯ ವರ್ಷದ ಹೊಸ ಅಭ್ಯಾಸ ಪತ್ರಿಕೆಗಳಂತೆ ನೂಲು ಗಾರಿಕೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಂಗ್ರಹಿಸಿದೆ. ಹತ್ತಿಯ ಬಿತ್ತನೆಯನ್ನು ಮೊದಲುಗೊಂಡು ನೂಲು ಸಿದ್ಧವಾಗುವವರೆಗಿನ ಎಲ್ಲ ಸಂಗತಿಗಳನ್ನು ಸಮಯೋಚಿತ ಚಿತ್ರಗಳಿಂದಲೂ ಉದಾಹರಣೆಗಳಿಂದಲೂ ತಾಂತ್ರಿಕ ವಿವರಣೆಗೆ ನೂಲುಗಾರಿಕೆಗೆ ಸಂಬಂಧಿಸಿದ ಗಣಿತ ಹಾಗೂ ಲೆಕ್ಕಪತ್ರಿಕೆಗಳನ್ನು ಸೇರಿಸಿದೆ.ನೂಲುವ ವರ್ಗಗಳನ್ನು ಸ್ವಂತತ್ರವಾಗಿ ನಡೆಯಿಸುವ ಬಗ್ಗೆ ಶಿಕ್ಷಕ ಶಿಕ್ಷಕೆಯರಿಗೂ ಜಾವೀ ಕಾರ್ಯಕರ್ತರಿಗೂ ತುಂಬಾ ಉಪಯುಕ್ತವಾಗಿದೆ.

ಬಹು ಜನರಿಂದ ಮನ್ನಣೆ ಪಡೆದ ಹಿಂದೀ ಕಲಿಯಲು ಅತಿ ಸುಲಭವಾದ ಒಂದೇ ಒಂದು ಪುಸ್ತಕ

ಹಿಂದುಸ್ತಾನಿ ಕನ್ನಡ ಬಾಲಬೋಧೆ

ಬೆಲೆ: ೦—೬—೦

ಲೇಖಕ: ಎಸ್. ವ್ಹಿ. ಭಟ್ಟ
ಬಿ. ಎ., ಎಸ್. ಟಿ. ಸಿ. ವಿಶಾರದ, ಸನದ

ಅಲ್ಲದೆ ನಮ್ಮಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಾಧ್ಯಮಿಕ, ರಾಷ್ಟ್ರ ಭಾಷಾ ಮೊದಲಾದ ಪರೀಕ್ಷೆಯ ಎಲ್ಲ ಬುಕ್ಕುಗಳೂ ಹಿಂದೀ ಕಥೆ ಕಾದಂಬರಿಗಳೂ ಸಿಕ್ಕುತ್ತವೆ.

ಆಕಳವಾಡಿ ಬುಕ್ ಡಿಪೋ,
ವಿಜಯರೋಡ, ಧಾರವಾಡ

ವಿದ್ಯಾರ್ಥಿಗಳಿಗೆ ಹೊಸ ವರ್ಷದ ಕಾಣಿಕೆ

ಇದೀಗ ಪ್ರಕಟವಾಗಿದೆ! ತ್ವರೆ ಮಾಡಿರಿ!!

❋ ಪ್ರಶ್ನೋತ್ತರ ಇತಿಹಾಸ ❋

ಶ್ರೀ. ಗಲಗಲಿ ಬರೆದುದು

[ಮುಲ್ಕೀ, ಮ್ಯಾಟ್ರಿಕ್ ಸ್ಕಾಲರಶಿಪ್ ಪರೀಕ್ಷೆಗಳ ವಿದ್ಯಾರ್ಥಿಗಳಿಗಾಗಿ]

ಭಾರತದಲ್ಲಿ ಆರ್ಯರ ಆಗಮನದಿಂದ ಇಂದಿನವರೆಗೆ ಘಡೆದ ಪ್ರತಿಯೊಂದು ಐತಿಹಾಸಿಕ ಘಟನೆಗಳನ್ನು ಪರೀಕ್ಷೆಯ ದೃಷ್ಟಿಯಿಂದ ಆಯ್ದು ಬರೆಯಲಾಗಿದೆ.

೧೭೦ ಪುಟಗಳು ಆದರೂ ಬೆಲೆ ೧ ರೂ. ಮಾತ್ರ

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್

ಆಕಳವಾಡಿ ಬುಕ್ ಡಿಪೋ,
ವಿಜಯರೋಡ, ಧಾರವಾಡ

ಆದರ್ಶ ಚಿತ್ರಕಲಾ

(IDEAL DRAWING)

ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಗೆ ಅತ್ಯುತ್ತಮವಾದ ಪುಸ್ತಕವು
ಕಡೆಗಣಿಸಲ್ಪಟ್ಟ ೧೦೦ ಗುಣಗಳ ವಿಷಯ.

ಲೇಖಕರು: ಶ್ರೀ. ಎಸ್. ಕೆ. ಜೋಶಿ
ಡ್ರಾಯಿಂಗ ಶಿಕ್ಷಕರು, ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

- ಈ ಪುಸ್ತಕದಲ್ಲಿ ಅಬ್ಜೆಕ್ಟ, ಮೆಮರಿ, ಡಿಜೈನು, ನೇಚರ ಮತ್ತು ದೃಷ್ಟಾಂತ ಲೇಖನಕಲೆಯ ಒಂದು ಸಾವಿರಕ್ಕಿಂತ ಹೆಚ್ಚು ಚಿತ್ರಗಳಿವೆ. ಬಣ್ಣಗಳ ಮಿಶ್ರಣವನ್ನು ತೋರಿಸುವದಕ್ಕಾಗಿ ಮೂರು ಬಣ್ಣದ ನಾಲ್ಕು ಚಿತ್ರಗಳು. ನಾನಾಬಗೆಯ ಚಿತ್ರಗಳನ್ನು ಚಿತ್ರಿಸುವ ದಾರಿಯನ್ನು ವರ್ಣಿಸುವ ಪದ್ಧಗಳು.
- ಈ ಪುಸ್ತಕವು ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳ, ಹೈಸ್ಕೂಲುಗಳ ಮತ್ತು ಟ್ರೇನಿಂಗ ಕಾಲೇಜುಗಳ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಅತ್ಯುಪಯುಕ್ತವಾಗಿದೆ ಎಲಿಮೆಂಟರಿ ಮತ್ತು ಇಂಟರಮಿಜಿಯೆಟ್ ಡ್ರಾಯಿಂಗ ಪರೀಕ್ಷೆಗಳ ವಿದ್ಯಾರ್ಥಿಗಳಿಗಂತೂ ಇದು ವಿಶೇಷ ಉಪಯುಕ್ತವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಡ್ರಾಯಿಂಗ ಪರೀಕ್ಷೆಗಳ ಪ್ರಶ್ನಪತ್ರಿಕೆಗಳೂ ಇದರಲ್ಲಿ ಸೂಡಲ್ಪಟ್ಟಿವೆ.
- ಬೆಲೆ: ೦-೧೨-೦ ಅಂಚೆವೆಚ್ಚ ೦-೪-೦ ಅಂಚೆಯಿಂದ, ವ್ಹಿ ಪಿ. ಯಿಂದ ೨-೪-೦. ನಿಮ್ಮ ಸಮೀಪದ ಪುಸ್ತಕ ವ್ಯಾಪಾರಿಗಳಿಂದ ತರಿಸಿಕೊಳ್ಳಿರಿ; ಅಥವಾ ಕೆಳಗಿನವರಿಗೆ ಬರೆದು ತರಿಸಿ ಕೊಳ್ಳಿರಿ.

ಜಿ. ವಾಯ್. ರಾಣೆ
ಪ್ರಕಾಶಕರು, ಕಳಸ, ಕಸಬಾಪೇಟೆ, ಪುಣೆ ೨.

Regd. No. B. 5375

ಸನ್ ೧೯೪೭—೪೮ ನೆಯ ಸಾಲಿನಲ್ಲಿ ಹೊರಟ ಹೊಸ ಅಭ್ಯಾಸಪತ್ರಿಕೆಗೆ ಅನುಸರಿಸಿ ಬರೆದ ನಮ್ಮ ಪ್ರಕಟನೆಗಳು.

೪ನೆ ಇಯತ್ತೆಗಾಗಿ

ಭೂಮಂಡಲ ಪರಿಚಯ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮುಂಬಯಿಕರ್ನಾಟಕ, ಮಹಾ-ರಾಷ್ಟ್ರ, ಗುಜರಾತ, ಕೊಂಕಣ ಮೊದಲಾದವುಗಳಲ್ಲಿಯ ಜನರ ಜೀವನ ಕ್ರಮವನ್ನು ಹವೆ, ಮಳೆ, ಬೆಳೆ ಮೊದಲಾದವುಗಳನ್ನು ವಿವರವಾಗಿ ವರ್ಣಿಸಲ್ಪಟ್ಟಿದೆ; ಅಲ್ಲದೆ ವಿಶಾಲಕರ್ನಾಟಕದ ಸಂಕ್ಷಿಪ್ತ ಮಾಹಿತಿಯನ್ನು ಕೊಟ್ಟಿರುತ್ತದೆ. ವಿಲೀನೀಕೃತ ವಿಜಾಪುರ ಬೆಳಗಾಂವ ಜಿಲ್ಲೆಯ ನಕಾಶ ಹಾಗು ವಿಶಾಲ ಕರ್ನಾಟಕದ ನಕಾಶನನ್ನು ಸೇರಿಸಲಾಗಿದೆ. ಸುಮಾರು ೬೦ ಚಿತ್ರ ನಕಾಶಗಳು ಇರುತ್ತವೆ.

ಕನ್ನಡ ನಾಡಿನ ಚರಿತ್ರೆ

ಬೆಲೆ ೦—೧೪—೦

ಇದರಲ್ಲಿ ಕರ್ನಾಟಕದಲ್ಲಿ ಆಗಿಹೋದ ಶೂರ ಅರಸರ, ಕವಿಗಳ, ಧರ್ಮಗುರುಗಳ, ವೀರ ರಮಣಿಯರ ಜೀವನ ಚರಿತ್ರವನ್ನು ಸುಲಭ ಭಾಷೆಯಲ್ಲಿ ಕಥಾರೂಪವಾಗಿ ವಿವರಿಸಲಾಗಿದೆ.

ಸಾಮಾನ್ಯ ಜ್ಞಾನ

ಬೆಲೆ ೦—೮—೦

ಇದರಲ್ಲಿ ಮನೆಯಲ್ಲಿ ಸಾಕುವ ಪ್ರಾಣಿಗಳು, ಮುಖ್ಯ ಬೆಳೆಗಳು, ಬೇನೆಗಳು, ಹಳ್ಳಿಯ ಹಾಗೂ ನಗರದ ಆಡಳಿತೆ, ಪಂಚಾಗ ಮೊದಲಾದವುಗಳ ವಿಷಯವಾಗಿ ಸವಿಸ್ತಾರ ವರ್ಣನೆ ಅದೆ. ಅನೇಕ ಚಿತ್ರಗಳು.

೫ನೆ ಇಯತ್ತೆಗಾಗಿ ಸಂಯುಕ್ತ ಅಭ್ಯಾಸ ಪತ್ರಿಕೆಗನುಸರಿಸಿ,

ಸಾಮಾನ್ಯ ವಿಜ್ಞಾನ ಭಾಗ ೧

ಬೆಲೆ ೦—೧೨—೦

ಇದರಲ್ಲಿ ಮಾನವನ ಹಾಗೂ ಪ್ರಾಣಿಗಳ ಶ್ವಾಸೋಚ್ಛ್ವಾಸ, ಮೇಷಣ, ಚಲನೆ, ಜ್ಞಾನ ಗ್ರಹಣ, ನೀರು ಹಾಗು ಪಂಚಾಂಗಗಳ ವಿಷಯ ಸವಿಸ್ತರವಾಗಿ ವರ್ಣಿಸಲಾಗಿದೆ.

ಭೂಮಂಡಲ ಪರಿಚಯ ಭಾಗ ೨

ಬೆಲೆ ೦ - ೨—೦

ಇದರಲ್ಲಿ ಪೃಥ್ವಿ ಆಕಾರ, ಪ್ರಾಯೋಗಿಕ ಹಾಗು ನಿರೀಕ್ಷಣೆಯ ಕೆಲಸ ಹಿಂದುಸ್ತಾನದ ಹವಾಮಾನ ಹಾಗು ಜಗತ್ತಿನ ಹವಾಮಾನದ ಮುಖ್ಯ ಪ್ರಕಾರಗಳ ವಿಷಯಕ್ಕೆ ವಿಶದವಾಗಿ ವರ್ಣಿಸಲ್ಪಟ್ಟಿದೆ.

ಇದೇ ಪ್ರಕಾರ **೬ ನೆಯತ್ತೆಯ ಸಾಮಾನ್ಯ ವಿಜ್ಞಾನ ೦—೧೨—೦ ಭೂಮಂಡಲ ಪರಿಚಯ ಭಾಗ ೩ ಬೆಲೆ ೧—೮—೦**

ಅಲ್ಲದೆ ಪ್ರಾಥಮಿಕ ಪ್ರಮಾಣಪತ್ರ ಅಭ್ಯಾಸ ಪತ್ರಿಕೆಯಂತೆ **ಸಾಮಾನ್ಯ ವಿಜ್ಞಾನ ಬೆಲೆ ರೂ ೧—೪—೦ ಭೂಮಂಡಲ ಪರಿಚಯ ಭಾಗಗಳ ಬೆಲೆ ರೂ ೨—೦—೦**

ಮೇಲೆ ಕಾಣಿಸಿದ ಎಲ್ಲ ಪುಸ್ತಕಗಳು ಎಲ್ಲ ವ್ಯಾಪಾರಸ್ಥರಲ್ಲಿ ದೊರೆಯುತ್ತವೆ.

ಇಲ್ಲವಾದರೆ

ಪ್ರಕಾಶಕರು:

ರಾಮಾಶ್ರಯ ಬುಕ್ ಡಿಪೊ ಧಾರವಾಡ

ಇವರಿಗೆ ಇಂದೇ ಪತ್ರ ಬರೆಯಿರಿ.

Printed by M. A. Kamat B. Sc. at Jai Hind Art Press, Javlipeth, Dharwar. Edited and Published by R. V. Desai, Principal T. C. M., Y. D. Nadakarni, Lady Superintenden T. C. W. Dharwar jointly at the Kannada Prathamik Shikshan Office Govt. Training College for Men, Dharwar.

ಕನ್ನಡ ಪ್ರಭ ಪ್ರಭ ಪ್ರಭ

ಪ್ರಧಾನ ಸಂಪಾದಕರು :

ಕೆ. ಜಿ. ಕುರ್ತಕೋಟಿ



ರಾಷ್ಟ್ರಪತಿ ಟಿಂಜಸಜೀ

ವಾರ್ಷಿಕ ಚಂದಾ	ಅಕ್ಟೋಬರ	ಬೆಲೆ
೪—೦—೦	೧೯೫೦	೦—೫—೦

ಕನ್ನಡ ಒನೆಯ ಇಯತ್ತೆಗಾಗಿ

ಆರೋಗ್ಯ ವಿಜ್ಞಾನದಲ್ಲಿ ಪೂರಕ ವಾಚನದ

— ಸಲುವಾಗಿ ಮಂಜೂರಾದದ್ದು —

ಹಳ್ಳಿಯ ಆರೋಗ್ಯ

ಬರೆದವರು: ಶ್ರೀ. ಎನ್. ಬಿ. ನಾಡಗೀರ

ನಿವೃತ್ತ ಏ.ಓ.ಡಿ.ಎಸ್.ಬಿ., ಧಾರವಾಡ

ಬೆಲೆ—೮ ಆಣೆ

ಗ್ರಾಮಗಳ ಸ್ವಚ್ಛತೆ ಹಾಗು ಆರೋಗ್ಯಜೀವನದ ಬಗ್ಗೆ ಹೊಸ ವಿಚಾರಗಳನ್ನು ಬೀರುವ ಪುಸ್ತಕ. ಸಮಾಜ ಶಿಕ್ಷಣಕ್ಕಾಗಿಯೂತಂಬಾ ಉಪಯುಕ್ತ ಪುಸ್ತಕ.

ಪಾ. ಶಿ. ಟ್ರೇನಿಂಗ ಕಾಲೇಜಿಗಾಗಿ

ಹಾಗೂ

ಮಾಧ್ಯಮಿಕ ಶಾಲೆಗಳಿಗಾಗಿ

ಆರೋಗ್ಯವಿಜ್ಞಾನದಲ್ಲಿ ಪೂರಕ ವಾಚನ ವೆಂದು ಮಂಜೂರಾಗಿದೆ

ಆಹಾರ ವಿಜ್ಞಾನ

ಬರೆದವರು:— ಶ್ರೀ. ಎನ್. ಬಿ. ನಾಡಗೀರ

ನಿವೃತ್ತ ಏ.ಓ.ಡಿ.ಎಸ್.ಬಿ.

ಪ್ರಕಾಶಕರು:— 'ಮಿಂಚಿನ ಬಳ್ಳಿ', ಧಾರವಾಡ

ಬೆಲೆ: ೧ ರೂ. ೪ ಆ.

ಆಹಾರಗಳ ಗುಣಾಂಶಗಳನ್ನೂ ಉಳಿತಾಯವನ್ನು ಸಮತೋಲ ಆಹಾರವನ್ನೊದಗಿಸುವ ವಿವಿಧ ಉಪಾಯಗಳನ್ನು ಚನ್ನಾಗಿ ವಿಷದ ಪಡಿಸುವ ಪುಸ್ತಕ. ಸಮಾಜ ಸಿಕ್ಷಣಕ್ಕೂ ತುಂಬಾ ಉಪಯುಕ್ತವಾಗಿದೆ.

ಚಿ. ಶ್ರೀ ಕುಲಕರ್ಣಿಯವರ ಕಥೆಯ ಪುಸ್ತಕಗಳು

೧.	ಭಕ್ತ ಧ್ರುವ	೦	೨	೦	೧೪.	ಭಕ್ತ ಪ್ರಲ್ಹಾದ	೦	೨	೦
೨	ಶನಿ ಮಹಾತ್ಮೆ	೦	೨	೦	೧೫.	ಗಜೇಂದ್ರ ಮೋಕ್ಷ	೦	೨	೦
೩.	ಮೊದಲನೇ ತರಗತಿಯ ಕಥೆ	೦	೩	೦	೧೬.	ಎರಡನೇ ತರಗತಿಯ ಕಥೆ	೦	೪	೦
೪.	ಸುದಾಮ ಚರಿತ್ರೆ	೦	೪	೦	೧೭,	ಮೂರನೇ ತರಗತಿಯ ಕಥೆ	೦	೫	೦
೫.	ಮಹಾತ್ಮಾ ಗಾಂಧಿ	೦	೪	೦	೧೮.	ಜವಾಹರಲಾಲ ನೆಹರು	೦	೪	೬
೬.	ಸುಭಾಸಚಂದ್ರ ಭೋಸ	೦	೪	೯	೧೯.	ಶ್ರೀ ರಾಮರಕ್ಷೆ	೦	೫	೦
೭.	ಕುಮಾರ ರಾಮಣ್ಣ	೦	೬	೦	೨೦.	ಕುಮಾರ ಕಿಟ್ಟಣ್ಣ	೦	೪	೦
೮.	ಭಕ್ತ ಹನುಮಾನ	೦	೬	೦	೨೧.	ರಾಮಕೃಷ್ಣ ನೀತಿಯ ಕಥೆ	೦	೬	೦
೯.	ಶ್ರೀ ಕೃಷ್ಣ ಚರಿತ್ರೆ	೦	೮	೦	೨೨.	ಪುರಂದರ ಪದಗಳು	೦	೮	೦
೧೦.	ಬದರೀ ಚರಿತ್ರೆ	೦	೮	೦	೨೩.	ಸತ್ಯವಾನ ಸಾವಿತ್ರಿ	೦	೮	೦
೧೧.	೪ನೇ ತರಗತಿಯ ಕಥೆ	೦	೬	೦	೨೪.	ರಾಷ್ಟ್ರೀಯ ಮಹಾಪುರುಷರು	೦	೧೨	೦
೧೨.	ಸಂಧ್ಯಾವಂದನೆ	೦	೩	೦	೨೫.	ಶಂಕರಾಚಾರ್ಯ	೦	೬	೦
೧೩.	ಚಿತ್ತೂರ ಪದ್ಮಿನಿ	೦	೩	೦					

(೧ ರೂಪಾಯಿಗಿಂತ ಕಡಿಮೆ ಕಿಮ್ಮತ್ತಿನ ಪುಸ್ತಕಗಳನ್ನು ವ್ಹಿ. ಪಿ. ಮಾಡಲಾಗುವುದಿಲ್ಲ.)

— ಜೆ. ಎಸ್. ಕುಲಕರ್ಣಿ ಬುಕ್ ಡಿಪೊ, ಹುಬ್ಬಳ್ಳಿ —